॥ 'ಶ್ರೀಪತಿರ್ಜ್ಞಾನದೋ ನಃ' ॥

ಶ್ರೀಕೃಷ್ಣಾರ್ಜುನಸಂವಾದ

[ಶ್ರೀರಾಘವೇಂದ್ರತೀರ್ಥರಿಂದ ವಿರಚಿತವಾದ
ಗೀತಾವಿವೃತಿಯ ಆಧಾರದಮೇಲೆ ಬರೆದುದು.]

ಬಿ. ಭೀಮರಾವ್
ದಾವಣಗೆರೆ

ಶ್ರೀಹರಿದಾಸಭಾರತೀಗ್ರಂಥರತ್ನಮಾಲೆ—ವಿಜಯಾಂಕರತ್ನ-೨
ಮೇ ೧೯೫೬

ಮುದ್ರಣ: ಪ್ರಭಾ ಮುದ್ರಣಾಲಯ, ಬೆಂಗಳೂರು-೪.

ಪ್ರಕಾಶಕರು:
ಹರಿದಾಸರತ್ನಂ ಗೋಪಾಲದಾಸರು

ಬೆಲೆ: ನೂರು ರೂಪಾಯಿಗಳು.
ಟಪ್ಪಾಲು ಖರ್ಚು ಪ್ರತ್ಯೇಕ

ಪ್ರತಿಗಳು ದೊರೆಯುವ ಸ್ಥಳ:
ಹರಿದಾಸರತ್ನಂ ಗೋಪಾಲದಾಸರು
ಶ್ರೀರಾಘವೇಂದ್ರ ಕಾಲೊನಿ
ಚಾಮರಾಜಪೇಟೆ, ಬೆಂಗಳೂರು-೨.

ಶ್ರೀಸರ್ವಜ್ಞಾಚಾರ್ಯಸೇವಾಸಂಘ, ದಾವಣಗೆರೆ

ಸಂಘದ ಬಿನ್ನಹ

ಸಂಘವು ಜ್ಞಾನಪ್ರಚಾರಕಾರ್ಯವನ್ನೇ ಪ್ರಧಾನವಾಗಿಟ್ಟುಕೊಂಡು ಯಥಾಯೋಗ್ಯವಾಗಿ ಮಾಧ್ವಸಮಾಜದ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ; ಈವರೆಗೆ ಅನೇಕ ಉಪಯುಕ್ತವಾದ ಗ್ರಂಥಗಳನ್ನು ಪ್ರಕಟಿಸಿರುತ್ತದೆ. ಮೋಕ್ಷಸಾಧನಗ್ರಂಥವೆಂದು ಸರ್ವಮಾನ್ಯವಾದ ಶ್ರೀಮದ್ಭಗವದ್ಗೀತೆಯನ್ನು ಪ್ರಶ್ನೋತ್ತರರೂಪದಿಂದ ಕನ್ನಡಭಾಷೆಯಲ್ಲಿ ವಾಚಕರಿಗೆ ಒದಗಿಸುವ ಪ್ರಯತ್ನವನ್ನು ಕೈಗೊಂಡು, ಈ ಚಿಕ್ಕ ಗ್ರಂಥವನ್ನು ಮುಂದಿಡಲಾಗಿದೆ. **ಶ್ರೀಕೃಷ್ಣಾರ್ಜುನಸಂವಾದ**ರೂಪದಿಂದಿರುವ ಈ ಗ್ರಂಥದಲ್ಲಿ, ಶ್ರೀಶ್ರೀಮದ್ರಾಘವೇಂದ್ರತೀರ್ಥಶ್ರೀಪಾದಂಗಳವರ ಗೀತಾ-ವಿವೃತಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪ್ರಮೇಯಗಳು ನಿರೂಪಿಸಲಾಗಿವೆ. ಪ್ರತಿ ಅಧ್ಯಾಯದಲ್ಲಿ ಶ್ಲೋಕಸಂಖ್ಯೆಗಳನ್ನು ಕೊಡಲಾಗಿದೆ. ಇದರಿಂದ ಆಯಾ ಶ್ಲೋಕಭಾಗದ ಮೂಲವಿವೃತಿಗ್ರಂಥವನ್ನು ಅನುಸರಿಸಲು ಸಹಾಯವಾಗುವುದೆಂದು ನಂಬಿದ್ದೇವೆ. ಸಕಲಸಜ್ಜನರೂ ಗ್ರಂಥವನ್ನು ಆದರದಿಂದ ಕೊಂಡು ಸಂಘವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ. ಶ್ರೀ ಶಿರೂರು ಮಠಾಧೀಶರವರ ಮುನ್ನುಡಿಯು ಈ **ಹೊಸಮಾದರಿಯಗ್ರಂಥದ** ಉಪಯುಕ್ತತೆಯನ್ನು ಯಥೋಚಿತವಾಗಿ ಸೂಚಿಸುತ್ತದೆ.

ಶ್ರೀಹರಿದಾಸಭಾರತಿಯ ಸಂಪಾದಕರಾದ ಹರಿದಾಸರತ್ನಂ ಶ್ರೀ ಗೋಪಾಲದಾಸರವರು ತಮ್ಮ ಮಾಸಪತ್ರಿಕೆಯಲ್ಲಿ ಕ್ರಮವಾಗಿ ಪ್ರತಿ ತಿಂಗಳಲ್ಲಿ ಕೆಲವುಪುಟಗಳನ್ನು ಪ್ರಕಟಿಸುತ್ತಾ ಪೂರಾಗ್ರಂಥವನ್ನು ತಮ್ಮ ಚಂದಾದಾರರಿಗೆ ಒದಗಿಸಿಕೊಟ್ಟಿರುವರಲ್ಲದೇ, ಪ್ರತ್ಯೇಕವಾಗಿ ಇಡೀಗ್ರಂಥವನ್ನು ಮುದ್ರಿಸಿ, ತಮ್ಮ '**ಶ್ರೀಹರಿದಾಸಭಾರತೀ ಗ್ರಂಥರತ್ನಮಾಲೆ**'ಯಲ್ಲಿ ಈ ಗ್ರಂಥಕ್ಕೆ ಒಂದು ಸ್ಥಾನವನ್ನೂ ಕೊಟ್ಟು, ನಮ್ಮ ಸಂಘವನ್ನು ಗೌರವಿಸಿರುತ್ತಾರೆ. ಇದಕ್ಕಾಗಿ ಸಂಘದವರು ಅವರಿಗೆ ಈ ಮೂಲಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರೆ. ನಮ್ಮ ಸಂಘದ ಇತರ ಗ್ರಂಥಗಳಿಗೂ ಸಹ ಹೀಗೆಯೇ ಪ್ರೋತ್ಸಾಹವಿತ್ತು, ನಮ್ಮೊಂದಿಗೆ ಶ್ರೀಹರಿವಾಯುಗಳ ಸೇವೆಯಲ್ಲಿ ಸಹಕರಿಸಬೇಕೆಂದು ಅವರನ್ನು ಪ್ರಾರ್ಥಿಸುತ್ತೇವೆ.

ಎಲ್. ನರಸಿಂಹಮೂರ್ತಿ
ಅಧ್ಯಕ್ಷರು.

ಮುನ್ನುಡಿ

ನಮ್ಮ ಮಠದಮೇಲೆ ಹೆಚ್ಚು ಅಭಿಮಾನವುಳ್ಳ ದಾವಣಗೆರೆ ಭೀಮ ರಾಯರು, ಅಡ್ವೊಕೇಟ್, ಇವರು ತಾನು ಬರೆದ ಈ **ಕೃಷ್ಣಾರ್ಜುನ ಸಂವಾದರೂಪ**ವಾದ ಭಾಷಾತ್ಮಕ ಗೀತಾವಿವರಣಕ್ಕೆ, ತನಗೆ ಅನುಗ್ರಹ ರೂಪವಾಗಿ ನಮ್ಮ ಅಭಿಪ್ರಾಯಸೂಚಕವಾದ ಎರಡು ಮಾತನ್ನು ದಯ-ಪಾಲಿಸಬೇಕಾಗಿ ಪ್ರಾರ್ಥನೆಮಾಡಿಕೊಂಡಪ್ರಕಾರ ನಾವು ಇಲ್ಲಿ ಪ್ರವೃತ್ತ ರಾಗಿದ್ದೇವೆ.

ಕಾಲಬಲದಿಂದ ಸಜ್ಜನರು ತತ್ವಜ್ಞಾನವಿರಹಿತರಾಗಿ ಸನ್ಮಾರ್ಗದಿಂದ ಭ್ರಷ್ಟರಾಗುತ್ತಿರಲು, ಕರುಣಾಳುಗಳಾದ ದೇವತೆಗಳು ಚತುರ್ಮುಖ ಬ್ರಹ್ಮನಲ್ಲಿ ಮೊರೆಯಿಡಲು ಆ ದೇವನು, ಜಗಜ್ಜನಕನಾದ ಶ್ರೀ ಪರಮಾತ್ಮ ನಲ್ಲಿ ಮೊರೆಯಿಡಲು ಆ ಶ್ರೀಹರಿಯು ಶ್ರೀವೇದವ್ಯಾಸರೂಪದಿಂದ ಅವತರಿಸಿ "ಸ್ತ್ರೀಶೂದ್ರಬ್ರಹ್ಮಬಂಧೂನಾಂ ತ್ರಯೀ ನ ಶ್ರುತಿಗೋಚರಾ" ಎಂದಿರುವು ದರಿಂದ, ಆಗಮಾದಿಗಳನ್ನು ಪಠಿಸಲು ಅಧಿಕಾರವಿಲ್ಲದ ಸ್ತ್ರೀಶೂದ್ರಾದಿ ಗಳಿಗೂ ಮೋಕ್ಷವಾಗಲೋಸುಗ ಶ್ರೀಮಹಾಭಾರತವನ್ನು ವಿರಚಿಸಿರುವನು.

ಶ್ರೀಮಹಾಭಾರತವು ಋಗ್ವೇದಾದಿ ಎಲ್ಲ ವೇದಗಳು, ೧೮ ಪುರಾಣ, ೧೮ ಉಪಪುರಾಣಗಳು, ಸ್ಮೃತಿ ಗ ಳು ಹೀಗೆ ಸರ್ವಶಾಸ್ತ್ರಾರ್ಥಗಳಿಂದ ಗುಂಫಿತವಾದುದು. ೧೮ ಪರ್ವವಿರುವ ಈ ಮಹಾಭಾರತವು "ವೇದಾ-ದಪಿ ಪರಂ ಚಕ್ರೇ ಪಂಚಮಂ ವೇದಮುತ್ತಮಂ" ಎಂಬ ಪ್ರಮಾಣದಿಂದ ಕೇವಲ ಭಗವನ್ಮಾಹಾತ್ಮ್ಯ ಪ್ರತಿಪಾದಕವಾದುದರಿಂದ ವೇದರಾಶಿಗಿಂತಲೂ ಶ್ರೇಷ್ಠವಾದುದು. ಆ ಮಹಾಭಾರತದಲ್ಲಿಯೇ ಶ್ರೀ ಭಗವದ್ಗೀತೆಯು ಸಾರ-ಸರ್ವಸ್ವರೂಪವಾದುದು. ವೇದಾಂತದ ತಳಹದಿಗಳಾದ ಮೂರು ಪ್ರಸ್ಥಾನ ಗಳಲ್ಲಿ ಗೀತೆಯೊಂದು. ಆ ಪ್ರಸ್ಥಾನತ್ರಯದಲ್ಲಿಯೂ ಭಗವದ್ಗೀತೆಯು ಇಡೀ ಪ್ರಪಂಚದಲ್ಲಿಯೇ ಬಹು ಶ್ಲಾಘ್ಯವಾಗಿದೆ. ಇದಕ್ಕೆ ನೂರಾರು ವ್ಯಾಖ್ಯಾನಗಳಿವೆ.

"ಪ್ರತಿದೃಶಮಿವ ನೈಕಧಾರ್ಕಮೇಕಂ ಸಮಧಿಗತೋsಸ್ಮಿ ವಿಧೂತ-ಭೇದ ಮೋಹಃ" ಎಂಬುವ ಒಂದು ಉಕ್ತಿಯಿಂದ ಭಾಗವತಾಚಾರ್ಯರು ಅಂಬರವಾಸಿಯಾದ ಸೂರ್ಯನು ದ್ರಷ್ಟೃಗಳಾದ ಪ್ರತಿಯೊಬ್ಬರಿಗೂ ತನಗೆ ಸಮ್ಮುಖನಾಗಿದ್ದ ಹಾಗೆ ತೋರಿದರೂ ಹೇಗೆ ಸೂರ್ಯನಲ್ಲಿ ಭೇದವಿಲ್ಲವೋ ಹಾಗೆಯೇ ಶ್ರೀ ದೇವರಲ್ಲಿ ಭೇದವಿಲ್ಲವೆಂತ ಭೀಷ್ಮಾಚಾರ್ಯರು ತಿಳಿದು ಕೊಂಡರು ಎಂತ ಹೇಳಿದ ದೃಷ್ಟಾಂತದಲ್ಲಿ ದೇವರ ಮಹಾಮಹಿಮೆಯನ್ನು ವ್ಯಕ್ತಪಡಿಸಿದಂತೆ **ಗೀತಾ** ಎಂಬುವ ಒಂದು ಮಿತವಾದ ಗ್ರಂಥದಲ್ಲಿ ಅಮಿ--ತಾರ್ಥವನ್ನು ತುಂಬಿಸಿ ಎಲ್ಲಾ ಮತೀಯರಿಗೂ ತಮಗೆ ತಮಗೆ ಸಮ್ಮತ ವಾದ ಅರ್ಥವೇ ಉಂಟು ಎಂತ ತೋರಿಸಿಕೊಟ್ಟದ್ದರಿಂದ ಸರ್ವಮತೀಯ ರಿಗೂ, ಹೆಚ್ಚೇನು ಸರ್ವಜಾತಿಯವರಿಗೂ ಈ ಗೀತೆಯು ಗ್ರಾಹ್ಯವಾಗಿದೆ. ಇದರಿಂದ ಶ್ರೀಕೃಷ್ಣನ ಮಹಾಮಹಿಮೆಯನ್ನು ತಿಳಿದುಕೊಳ್ಳಬಹುದು. ಹೀಗೆ ಗೀತೆಯ ಒಂದೊಂದು ಅಧ್ಯಾಯ, ಒಂದೊಂದು ಶ್ಲೋಕ, ಒಂದೊಂದು ಪದವನ್ನಾದರೂ ವಿಚಾರಮಾಡಲು ಹೊರಟರೆ ಇದೇ ರೀತಿಯ ಶ್ರೀಕೃಷ್ಣನ ಮಹಿಮೆಯು ಸರ್ವರಿಗೂ ವ್ಯಕ್ತವಾಗುತ್ತದೆ. ಸರ್ವವನ್ನು ತಿಳಿಸುವ ಸಮಯವಲ್ಲವಾದಪ್ರಯುಕ್ತ ನಾವು ಹಿಂದೆ ಹೇಳಿದ ಒಂದು ದೃಷ್ಟಾಂತ ದಿಂದ ಶ್ರೀಕೃಷ್ಣನ ಮಹಿಮೆಯು ತಿಳಿದೀತು, ಎಂತ ನಾವು ಇಷ್ಟರಲ್ಲೇ ಉಪರಮಿಸುತ್ತೇವೆ.

ಶ್ರೀ ಭಗವದ್ಗೀತೆಯಂತಹ ಅಮೋಘವಾದ ಗ್ರಂಥವನ್ನು ಜಗತ್ತಿನಲ್ಲಿ ಈವರೆಗೆ ಯಾರೂ ಕಂಡಿರಲಾರರು. ಆದುದರಿಂದಲೇ ಇದಕ್ಕೆ ಅತ್ಯಂತ ಗೌರವಾದರಗಳಿಂದ ಪೂರ್ಣವಾದ ಸ್ಥಾನವು ಸಲ್ಲಿಸಲ್ಪಟ್ಟಿದೆ.

ಈ ಗೀತಾಮೃತವು ಶ್ರೀಕೃಷ್ಣನ ಮುಖಾರವಿಂದದಿಂದ ನಿಸ್ಸೃತವಾದುದು. ಆತನು ತನ್ನ ಮುಖಾರವಿಂದದಲ್ಲಿ ಇಡೀಬ್ರಹ್ಮಾಂಡವನ್ನು ತೋರಿಸಿ ದಂತೆ ಈ ಗ್ರಂಥದಲ್ಲಿ ಪರಾಪರತತ್ವ ಸರ್ವಶಾಸ್ತ್ರಾರ್ಥಗಳನ್ನು ತೋರಿಸಿರು ತ್ತಾನೆ. ಗೀತೆಯ ಒಂದು ಪದವನ್ನು ಸಹ ಅಧ್ಯಯನಮಾಡಿದರೂ ಮಹಾ ಫಲವಿದೆಯೆಂದು ಪದ್ಮಪುರಾಣದಲ್ಲಿ ಗೀತಾಮಹಾತ್ಮ್ಯವನ್ನು ಹೇಳಿದೆ.

ಅದರಲ್ಲಿ ಅರ್ಥಶಾಸ್ತ್ರ ಮೊದಲಾದುವುಗಳೆಲ್ಲವೂ ಅಡಗಿವೆ. ಮಹಾಕಾವ್ಯಗಳಲ್ಲಿದ್ದಂತೆ ಅಲಂಕಾರಶಾಸ್ತ್ರಸಮ್ಮತಗಳಾದ ಉಕ್ತಿಗಳು ತುಂಬಿವೆ. ಇಂತಹ ಗೀತೆಯಲ್ಲಿ, ಭಗವದ್ವೇಷಿಗಳು ಮತ್ತು ಅವರ ಅನುಬಂಧಿಗಳು ಯಾರೋ ಅವರ ನಿಗ್ರಹವು ಕ್ಷತ್ರಿಯರಿಗೆ ಪರಮಧರ್ಮವು; ತದ್ವಿರುದ್ಧವಾದುದು ಸಂಪೂರ್ಣ ಅಧರ್ಮವು ಎಂದು ಉತ್ತಮಾಧಿಕಾರಿಯೂ, ತನಗೆ ಅತ್ಯಂತ ಪ್ರೀತಿಪಾತ್ರನೂ ಆದ ಅರ್ಜುನನಿಗೆ ಶ್ರೀಕೃಷ್ಣಪರಮಾತ್ಮನು ಉಪದೇಶಿಸುತ್ತಾನೆ.

ಇಂತಹ ಗೀತೆಗೆ, ಶ್ರೀಮದಾಚಾರ್ಯರ ಭಾಷ್ಯ ತಾತ್ಪರ್ಯಗಳಿಗನುಗುಣಗಳಾಗಿ ಅತಿಸರಳ ತಿಳಿಗನ್ನಡಭಾಷೆಯಲ್ಲಿ ಉಕ್ತಿಪ್ರತ್ಯುಕ್ತಿರೂಪವಾಗಿ ವಿವರಣವನ್ನು ದಾವಣಗೆರೆಯ ಪ್ರಸಿದ್ಧ ವಕೀಲರೂ ಭಗವದ್ಭಕ್ತರೂ ಆದ ಶ್ರೀಭೀಮರಾಯರು ಮಾಡಿದ್ದು ತುಂಬಾ ಸಂತೋಷದ ಸಂಗತಿ. ಲೌಕಿಕಮಾರ್ಗದರ್ಶಿಗಳಾಗಿದ್ದ ಇವರು ಇಂತಹ ಶ್ರೇಷ್ಠಕಾರ್ಯವನ್ನು ಮಾಡಿದ್ದು ನೋಡಿದರೆ ಯಾರುತಾನೆ ಆನಂದಪಡಲಿಕ್ಕಿಲ್ಲ? ಅಲ್ಲದೆ ಇವರು ಈ ಹಿಂದೆ ಬ್ರಹ್ಮಸೂತ್ರಗಳ ಅರ್ಥಕ್ಕೆ ಸರಿಯಾಗಿ ಭಾಗವತಮಹಾಪುರಾಣದ ಶ್ಲೋಕಗಳನ್ನು ಜೋಡಿಸಿ ಬರೆದ ವಿವರಣದಂತೆ, ಇದೂ ಎಲ್ಲರ ಮನಸ್ಸನ್ನು ಆಕರ್ಷಿಸಲಿ ಎಂದು ನಾವು ದೇವರನ್ನು ಪ್ರಾರ್ಥಿಸುವೆವು.

ಹೀಗೆ ನವೀನಶೈಲಿಯಿಂದ ಜನರಿಗೆ ಮಹೋಪಕಾರಮಾಡಿದ ಇವರಿಗೆ ಶ್ರೀಕೃಷ್ಣವಿಠ್ಠಲದೇವರು ದೀರ್ಘ ಆಯುಷ್ಯ ಆಯುರಾರೋಗ್ಯೈಶ್ವರ್ಯಗಳನ್ನು ಕೊಟ್ಟು, ಸತ್ಕೀರ್ತಿಪಾತ್ರರನ್ನಾಗಿಮಾಡಿ, ಅನುಗ್ರಹಿಸಲಿ ಎಂದು ಭೈಷ್ಮೀಭಾಮಾಪತಿಶ್ರೀಕೃಷ್ಣವಿಠ್ಠಲದೇವರನ್ನು ಪ್ರಾರ್ಥಿಸುತ್ತೇವೆ.

ಶ್ರೀ ೧೦೮ ಶ್ರೀ ಮಲ್ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು

ಜಗದ್ಗುರುಶ್ರೀಮಧ್ವಾಚಾರ್ಯರ ಸಂಸ್ಥಾನ.

ಶ್ರೀ ಶೀರೂರುಮಠ, ಉಡುಪಿ.

ವಿಷಯಾನುಕ್ರಮಣಿಕೆ

ತಪ್ಪು ಒಪ್ಪುಗಳು

ಪುಟ ಸಂಖ್ಯೆ	ಪಂಕ್ತಿ	ತಪ್ಪು	ಸರಿ
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	೨೦	[illegible]	[illegible]
[illegible]	೩	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	೨೦	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	೨೦	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	ಕೆಳ: [illegible]	[illegible]	[illegible]
[illegible]	[illegible]	[illegible]	[illegible]
[illegible]	೨೦	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]

ಪುಟ ಸಂಖ್ಯೆ	ಪಂಙ್ತಿ	ತಪ್ಪು	ಸರಿ
೨೧೬		ಅಧ್ಯಾಯ ೧೩ ಎಂಬುದರಬದಲು 'ಶ್ರೀಕೃಷ್ಣಾರ್ಜುನ ಸಂವಾದದಲ್ಲಿ ತೃತೀಯ ಪಟ್ಟವು' ಎಂದು ಓದಿಕೊಳ್ಳಬೇಕು.	
೨೨೦	೬	ಸದಸಚ್ಛಾಸ್ತ್ರ	ಸದಾ ಸಚ್ಛಾಸ್ತ್ರ
೨೨೨	೨೩	ಜ್ಞಾನೇಂದ್ರಿಯಗಳು, ಪಂಚತತ್ತ್ವ	ಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳು, ಪಂಚತತ್ತ್ವ
೨೩೨	೧೧	ಸೃಷ್ಟಿಯಲ್ಲಿರಲು	ಸೃಷ್ಟಿಯಲ್ಲಿ ಬರಲು
೨೩೭	೨೪	ಅಜ್ಞಾನಗಳು	ಅಜ್ಞಾನ ಅನ್ಯಥಾ ಜ್ಞಾನಗಳು
೨೪೬	೨೩	ಅಪರೆಂಬ	ಅಪಾನರೆಂಬ
೨೪೭	೨೦	ಸ್ವಪ:	ಸ್ವಃ
೨೫೯	೨೦	ವಿವೋಚನೆ	ವಿವೇಚನೆ
೨೫೯	೨೧	ತಿಳಿಯಬೇಕೆಂದು	ತಿಳಿಯಬೇಕೆಂಬುದು
೨೬೩	೯	ಸ್ವಾಭಾವಿಕತ್ವವು	ಸ್ವಾಭಾವಿಕತ್ವ
೨೬೪	೧೦	ವ್ಯಾಪ್ಯನೂ	ವ್ಯಾಪ್ತನೂ
೨೬೪	೨೧	ದಾನದಿಂದ	ದಾನಾದಿ

'श्रीपतिर्मानदो नः'

ಪ್ರಕಾಶಕರ ಎರಡು ಮಾತುಗಳು

"ಸತ್ಸಂಗಮಾನಸಸರೋವರಮಧ್ಯವರ್ತೀ
ಕೃಷ್ಣಾಂಘ್ರಿಚಾರುಕಮಲಾರ್ಪಿತಚಿತ್ತವೃತ್ತಿಃ ।
ಶಾಸ್ತ್ರಾತಿಮಂಜುಪದರಂಜಿತರಮ್ಯಸಂಸ-
ದಾಸ್ಮಾಕಹೃತ್ಸರಸಿಜೇಽಸ್ತು ಸ ಮಧ್ವಹಂಸಃ" ॥

ಪುರಂದರಾಬ್ಧಿಸಂಭೂತೋ ವಿಜಯಾರ್ಯಸುಚಂದ್ರಮಾಃ
ಅಲಂ ಲಸತು ಮತ್ಸ್ವಾಂತಖೇ ನಿತ್ಯಂ ತಾಪಹಾರಕಃ ।
ಪೂರ್ಣಪ್ರೇಕ್ಷೋದಿತಂ ಶಾಸ್ತ್ರಮಾಂಗಲ್ಯಂ ಯೈರದಾಯಿ ಮೇ
ದೀಕ್ಷಾ ಚ ಪ್ರೇಕ್ಷಣೇ ವಂದೇ ಪ್ರೇಕ್ಷಾನಿಧಿಗುರೂನ್ವರಾನ್ ॥

ನಮ್ಮ **"ಶ್ರೀಹರಿದಾಸಭಾರತೀ"** ಎಂಬ ಮಾಸಪತ್ರಿಕೆಯು ಆರು ವರ್ಷಗಳಿಂದ ನಡೆಯುತ್ತಿದ್ದು ಶ್ರೀಮನ್ಮಧ್ವಸಿದ್ಧಾಂತಕ್ಕೆ ಹೊಂದಿಕೊಂಡಿರುವ ವಿಷಯಗಳನ್ನು ಬೀರುತ್ತ ಅನೇಕರನ್ನು ಸಂತೋಷಪಡಿಸುತ್ತಿರುವುದು ಬಹು ಜನರಿಗೆ ತಿಳಿದ ವಿಷಯ.

ಈ ಮಾಸಪತ್ರಿಕೆಯ ಜೊತೆಯಲ್ಲಿಯೇ **"ಶ್ರೀಹರಿದಾಸಭಾರತೀ ಗ್ರಂಥರತ್ನಮಾಲಾ"** ಎಂಬ ಹೆಸರಿನಿಂದ ಮಧ್ವಸಿದ್ಧಾಂತಾವಬೋಧಕ ಗ್ರಂಥಗಳನ್ನು ಪ್ರಚಾರಮಾಡಬೇಕೆಂಬ ಆಸೆಯೂ ನಮಗೆ ಮೂಡಿತು. ಅದಕ್ಕಾಗಿ ನಮ್ಮ ಪತ್ರಿಕೆಯಲ್ಲಿ ಕೆಲವು ಪುಟಗಳನ್ನು ಮೀಸಲುಮಾಡಿ ಶ್ರೀದಾಸರಾಯರ, ಶ್ರೀವ್ಯಾಸದೇವರ ಗ್ರಂಥಗಳನ್ನೂ ಮತ್ತು ಆ ಗ್ರಂಥಗಳ ಆಶಯಗಳನ್ನೂ ಪ್ರಕಟಿಸುತ್ತಿರುವೆವು. ಬೇರೆಬೇರೆ ಬಿಡಿಸಿಕೊಳ್ಳುವಂತೆ ಪುಟಸಂಖ್ಯೆಯನ್ನು ಕೊಡುತ್ತಿರುವುದರಿಂದ ಒಂದೊಂದು ಗ್ರಂಥವೇ ನಮ್ಮ ಪತ್ರಿಕೆಯ ಗ್ರಾಹಕರಿಗೆ ದೊರೆತು ಅನುಕೂಲ ಉಂಟಾಗಿದೆ.

ಪ್ರಕೃತ, ಈ ಸಂದರ್ಭದಲ್ಲಿ ನಮ್ಮ ಮಿತ್ರವರರಾದ ಶ್ರೀ ಬಿ. ಭೀಮರಾವ್ ವಕೀಲ್, ದಾವಣಗೆರೆ, ಇವರು ಶ್ರೀಮದ್ಭಗವದ್ಗೀತೆಯನ್ನು ಪ್ರಶ್ನೋತ್ತರ ರೂಪದಿಂದ ಕನ್ನಡದಲ್ಲಿ ಬರೆದು **"ಶ್ರೀಕೃಷ್ಣಾರ್ಜುನಸಂವಾದ"**ವೆಂದು

ಕರೆದು, ನಮ್ಮ **ಶ್ರೀಹರಿದಾಸಭಾರತೀ ಗ್ರಂಥರತ್ನಮಾಲಿಗೆ ಪೋಣಿಸಲು ಅವಶ್ಯಕವಾದ** ಒಂದು **ವಿಜಯಾಂಕರತ್ನ**ವನ್ನು ಒದಗಿಸಿ ಉಪಕಾರ ಮಾಡಿದ್ದಾರೆ. ಅಲ್ಲದೆ ಶ್ರೀ ಹ ರಿ ದಾ ಸ ಭಾ ರ ತಿ ಯ ಗ್ರಾಹಕರಿಗೆಲ್ಲ ಒದಗಲೆಂದು ಅದರಲ್ಲಿಯೂ ಪ್ರಕಟಿಸಲು ಅವಕಾಶಕೊಟ್ಟು ಸಹಕರಿಸಿದ್ದಾರೆ. ಸಾತ್ವಿಕ ಜನರಿಗೆ ಉಪಯೋಗವಾಗಲೆಂದು ಮಾಡುವ ಕಾರ್ಯಗಳಿಗೆ ಸಹಕರಿಸುವ ಜನಸಂಖ್ಯೆ ಅತ್ಯಲ್ಪವಿರುವ ಈ ಕಾಲದಲ್ಲಿ ನಮಗೆ ಸಹಾಯಮಾಡಿದ ಇವರಿಗೆ ನಾವು ಆದರದಿಂದ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ದಾವಣಗೆರೆಯಲ್ಲಿ **ಶ್ರೀ ಸ ರ್ವ ಜ್ಞಾ ಚಾ ರ್ಯ ಸೇ ವಾ ಸಂ ಘ ದ** ಸಂಸ್ಥಾಪಕರಾದ ಇವರು, ಆ ಸಂಘದ ಅಧ್ಯಕ್ಷರ ಮೂಲಕ ನಮಗೆ ಪ್ರೇರಿಸಿ ನಮ್ಮ ಪತ್ರಿಕೆಯ ಗ್ರಾಹಕರಲ್ಲದ ಜನಗಳಿಗೆ ಸಹ ಉಪಯೋಗವಾಗಲೆಂದು ಹೆಚ್ಚಿಗೆ ಪ್ರತಿಗಳನ್ನೂ ನಮ್ಮಿಂದ ತಯಾರುಮಾಡಿಸಿದ್ದಕ್ಕಾಗಿ ಅನೇಕ ಜನ ಭಕ್ತರೊಂದಿಗೆ ನಾವು ಮತ್ತೊಮ್ಮೆ ಶ್ರೀ ಬಿ. ಭೀಮರಾಯರನ್ನೂ ಆ ಸಂಘದ ಅಧ್ಯಕ್ಷರನ್ನೂ ಅಭಿನಂದಿಸುತ್ತೇವೆ.

ನಮ್ಮ ಪತ್ರಿಕೆಯ ಮತ್ತು ಗ್ರಂಥಮಾಲೆಯ ಮುದ್ರಣ ಕಾರ್ಯವನ್ನು ಉತ್ತಮರೀತಿಯಿಂದ ಮಾಡಿಕೊಡುತ್ತ ನಮ್ಮೊಂದಿಗೆ ಸಹಕರಿಸುತ್ತಿರುವ ಪ್ರಭಾ ಮುದ್ರಣಾಲಯದ ಮಾಲೀಕರಾದ ಶ್ರೀ ಡಿ. ಎಸ್. ಕೃಷ್ಣಾಚಾರ್ಯ, ಎಂ.ಎಸ್‌ಸಿ. ಇವರಿಗೆ ಅನೇಕ ಧನ್ಯವಾದಗಳನ್ನು ಅರ್ಪಿಸುವೆವು.





ಓಂ

ಶ್ರೀ ವೇದವ್ಯಾಸಾಯ ನಮಃ

ಶ್ರೀ ಕೃಷ್ಣಾರ್ಜುನಸಂವಾದ

ಅಧ್ಯಾಯ ೧

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ |
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಽಪಶಾಂತಯೇ ||
ಲಕ್ಷ್ಮೀನಾರಾಯಣಂ ವಂದೇ ತದ್ಭಕ್ತಪ್ರವರೋ ಹಿ ಯಃ |
ಶ್ರೀಮದಾನಂದತೀರ್ಥಾಖ್ಯೋ ಗುರುಸ್ತಂ ಚ ನಮಾಮ್ಯಹಂ ||
ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ |
ಆದಾವಂತೇ ಚ ಮಧ್ಯೇ ಚ ವಿಷ್ಣುಸ್ಸರ್ವತ್ರ ಗೀಯತೇ ||

ವೇದಾನಧಿಕಾರಿಗಳಾದ ಸ್ತ್ರೀಶೂದ್ರಬ್ರಹ್ಮಬಂಧುಗಳ ಮುಖ್ಯ ಪ್ರಯೋಜನವನ್ನುದ್ದೇಶಿಸಿ, ಭಗವಾನ್ ವೇದವ್ಯಾಸರು, ಕೃಪೆಯಿಂದ ಶ್ರೀಮನ್ಮಹಾಭಾರತವನ್ನು ರಚಿಸಿದರು. ಧರ್ಮಜ್ಞಾನದ್ವಾರಾ ಮೋಕ್ಷವನ್ನು ಪಡೆಯಲೆಂಬ ಅನುಕಂಪವೇ ಈ ಗ್ರಂಥರಚನೆಗೆ ಮುಖ್ಯ ಕಾರಣವು. ಮಹಾಭಾಗತವು, ಸಂಭವ, ಸಭಾ, ಅರಣ್ಯ, ವಿರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾ, ಸೌಪ್ತಿಕ, ಶಾಂತಿ, ಆನುಶಾಸನಿಕ, ಆಶ್ವಮೇಧಿಕ, ಮೌಸಲ, ಮಹಾಪ್ರಸ್ಥಾನ, ಸ್ವರ್ಗಾರೋಹಣ ಮತ್ತು ಭವಿಷ್ಯತ್ ಎಂಬ ೧೮ ಪರ್ವಗಳುಳ್ಳದ್ದು. ಭಾರತಪಾರಿಜಾತಮಧುಭೂತವಾದ, ಸರ್ವಭಾರತಾರ್ಥಸಂಗ್ರಹ ರೂಪವಾದ, ಭಗವದ್ಗೀತೆಯನ್ನು ಶ್ರೀಕೃಷ್ಣಾರ್ಜುನಸಂವಾದರೂಪದಿಂದ, ಶ್ರೀ ವೇದವ್ಯಾಸರು ಭೀಷ್ಮಪರ್ವದಲ್ಲಿ ಅಡಕಮಾಡಿದ್ದಾರೆ. ಭಗವದ್ಗೀತೆಯಲ್ಲಿ ೧೮ ಅಧ್ಯಾಯಗಳಿವೆ. ಅವುಗಳಲ್ಲಿ ಮೊದಲನೆಯ ೬ ಅಧ್ಯಾಯಗಳಿಂದ

ಬ್ರಹ್ಮಜ್ಞಾನೋಪಾಯವೂ, ಎರಡನೆಯ ೬ ಅಧ್ಯಾಯಗಳಿಂದ ಆ ಜ್ಞಾ
ಮಹಿಮೆಯೂ, ಮೂರನೆಯ ೬ ಅಧ್ಯಾಯಗಳಿಂದ ಪೂರ್ವೋಕ್ತ ವಿಷಯ
ವಿಸ್ತಾರವೂ, ಹೇಳಲ್ಪಡುತ್ತದೆ. ಮೊದಲನೇ ಅಧ್ಯಾಯ ಮತ್ತು ಎರಡ
ಅಧ್ಯಾಯದ ಕೆಲವು ಶ್ಲೋಕಗಳಿಂದ, ಶ್ರೀ ಕೃಷ್ಣನು ಅರ್ಜುನನಿಗೆ ಮಾಡ
ಉಪದೇಶಕ್ಕೆ ಪ್ರಸಕ್ತಿಯು ನಿರೂಪಿಸಲ್ಪಡುತ್ತದೆ.

ವೈಶಂಪಾಯನರು ಜನಮೇಜಯಚಕ್ರವರ್ತಿಯನ್ನುದ್ದೇಶಿಸಿ ಹೇ
ಧೃತರಾಷ್ಟ್ರನ ಪ್ರಶ್ನೆ ಮತ್ತು ಸಂಜಯನ ಉತ್ತರವನ್ನು, ಉಪೋದ್ಘಾ
ರೂಪದಿಂದ ಭಗವದ್ಗೀತೆಯು ಪ್ರಾರಂಭದಲ್ಲಿ ನಿರೂಪಿಸುತ್ತದೆ.

ಧೃತರಾಷ್ಟ್ರ—ಧರ್ಮಸಾಧನ ಭೂಮಿಯಾದ ಕುರುಕ್ಷೇತ್ರದ
ಯುದ್ಧಾಪೇಕ್ಷಿಗಳಾಗಿ ಮಿಳಿತರಾದ ನನ್ನವರೂ (ಕೌರವರೂ) ಮತ್ತು
ಪಾಂಡವರೂ, ಮುಂದೇನು ಮಾಡಿದರೆಂಬುದನ್ನು, ಹೇ ಸಂಜಯ
ಮೊದಲಿನಿಂದ ಸವಿಸ್ತರವಾಗಿ ನಿರೂಪಿಸು.

ಸಂಜಯ—ಎಲೈ ಧೃತರಾಷ್ಟ್ರ, ಪಾಂಡವರು ಭಗವತ್ಪ್ರಿಯರೆಂಬುದ
ಸರ್ವಸಾಕ್ಷಿಕವು. ಆದ್ದರಿಂದ ಅವರಿಗೆ ಜಯವು ಸಿದ್ಧವೇ. ಸ್ವಪುತ್ರ
ಜಯವಾರ್ತೆಯನ್ನು ಕೇಳಬೇಕೆಂಬ ನಿನ್ನ ಹಂಬಲವು ಪುತ್ರವ್ಯಾಮೋ
ಜನ್ಯವಾದುದು. ಅಂತ್ಯದಲ್ಲಿ ಪರಾಜಯವು ನಿನ್ನ ಮಕ್ಕಳಿಗೆ ಕಟ್ಟಿಟ್ಟದ್ದೇ
ಆದರೂ ನಿನ್ನ ಇಚ್ಛೆಯಂತೆ ಹೇಳುವೆನು, ಕೇಳು. ಇದಕ್ಕಾಗಿ ಅಲ್ಲವೆ
ಭಗವಾನ್ ವೇದವ್ಯಾಸರು ಇಲ್ಲಿಯೇ ಕುಳಿತು ಯುದ್ಧದ ವಿವರಗಳೆ
ವನ್ನೂ ಅರಿಯುವ ದಿವ್ಯಶಕ್ತಿಯನ್ನು ನನಗೆ ಅನುಗ್ರಹಿಸಿರುವರು? (೧)

ಧೃತರಾಷ್ಟ್ರ—ಹೇಳು, ಸಂಜಯ, ಕೇಳಲು ಮನಸ್ಸು
ಹಾತೊರೆಯುತ್ತಿದೆ.

ಸಂಜಯ—ಯುದ್ಧಕ್ಕಾಗಿ ಉಭಯಸೈನ್ಯಗಳು ಕುರುಕ್ಷೇತ್ರದ
ಸೇರಿದವು. ವ್ಯೂಹಗಳನ್ನು ರಚಿಸಿಕೊಂಡು ಸಮ್ಮುಖರಾಗಿ ನಿಂತರು

ಇನ್ನೇನು ಯುದ್ಧವು ಪ್ರಾರಂಭವಾಗಬೇಕು. ಅಷ್ಟರಲ್ಲಿ ದುರ್ಯೋಧನನು ಪಾಂಡವಸೈನ್ಯದ ವ್ಯೂಹರಚನೆಯನ್ನು ಕಂಡು ದ್ರೋಣಾಚಾರ್ಯನ ಬಳಿಗೈದು ಮಾತನಾಡಲುಪಕ್ರಮಿಸಿದನು. (೨)

ದುರ್ಯೋಧನ—ಹೇ ಆಚಾರ್ಯ, ನಿಮ್ಮ ಶಿಷ್ಯನಾದ ಧೀಮಂತ ಧೃಷ್ಟದ್ಯುಮ್ನನಿಂದ ರಚಿತವಾದ ವ್ಯೂಹವನ್ನು ನೋಡಿರಿ, ಎಷ್ಟು ಬಲಾಢ್ಯವಿದೆ! (೩) ಭೀಮಾರ್ಜುನ ಸಮರಾದ ಅನೇಕ ಧನುರ್ಧಾರಿಗಳು ಅಲ್ಲಿರುವರು.

ದ್ರೋಣರು—ಅವರಾರು, ರಾಜನೇ?

ದುರ್ಯೋಧನ—ಯುಯುಧಾನ, ವಿರಾಟ, ದ್ರುಪದ, ಇವರೇನು ಸಾಮಾನ್ಯರೇ? ಹತ್ತು ಸಾವಿರ ಧನುರ್ಧಾರಿಗಳನ್ನು ಒಬ್ಬೊಬ್ಬರೇ ಎದುರಿಸಿ ಸಂಹರಿಸಲು ಶಕ್ತರಾದ ಧನುರ್ವಿದ್ಯಾಪ್ರವೀಣರು; ಮಹಾ ರಥಿಕರು. (೪) ಇವರಂತೆಯೇ, ಧೃಷ್ಟಕೇತು, ಚೇಕಿತಾನ, ಪರಾಕ್ರಮಿ ಯಾದ ಕಾಶೀರಾಜ, ಪುರುಜಿತ್, ಕುಂತಿಭೋಜ, ಪುರುಷಶ್ರೇಷ್ಠನಾದ ಶೈಬ್ಯ (೫) ಶೂರನಾದ ಯುಧಾಮನ್ಯು, ವೀರ್ಯಶಾಲಿ ಉತ್ತಮೌಜ, ಅಭಿಮನ್ಯು, ದ್ರೌಪದೀಪುತ್ರರು, ಇವರೆಲ್ಲರೂ ಮಹಾರಥಿಕರು. (೬) ನಮ್ಮ ಸೈನ್ಯದಲ್ಲಿಯೂ ಬಲಿಷ್ಠರಾದ ಸೇನಾನಾಯಕರಿರುವರು. ಹೇ ಆಚಾರ್ಯ, ಅವರ ನಾಮಧೇಯಗಳನ್ನು ತಮ್ಮ ಸ್ಮರಣೆಗೆ ತರಲಿಚ್ಛಿಸು ತ್ತೇನೆ. (೭) ತಾವು, ಭೀಷ್ಮರು, ಕರ್ಣ, ಕೃಪ, ಅಶ್ವತ್ಥಾಮ, ವಿಕರ್ಣ, (ಸೋಮದತ್ತನ ಮಗ) ಭೂರಿಶ್ರವಸ್ಸು (೮) ಮತ್ತು ಇನ್ನೂ ಅನೇಕರು. ಇವರೆಲ್ಲರೂ ಶೂರರು, ನನಗಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗಿರು ವರು, ಮತ್ತು ಬಹುವಿಧ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾದ ಯುದ್ಧ ವಿಶಾರದರು. (೯) ಹೀಗಿದ್ದರೂ ಸೇನಾಧಿಪತಿಗಳಾದ ಭೀಷ್ಮಾಚಾರ್ಯ ರಿಂದ ಪರಿರಕ್ಷಿತವಾದ ನಮ್ಮ ಈ ಸೈನ್ಯವು ಪಾಂಡವರನ್ನು ಜಯಿಸಲು ಅಸಮರ್ಥವೆಂದು ತೋರುತ್ತದೆ. ಭೀಮಸೇನನಿಂದ ರಕ್ಷಿತವಾದ ಪಾಂಡವ ಸೈನ್ಯವು ನಮ್ಮನ್ನು ಜಯಿಸಲು ಶಕ್ತವಾದುದೆಂದು ನನಗೆ ಭಾಸವಾಗುತ್ತದೆ.

(೧೦) ಆದ್ದರಿಂದ ನೀವೆಲ್ಲರೂ, ಎಲ್ಲಾ ವ್ಯೂಹ ಪ್ರವೇಶಮಾರ್ಗಗಳ ನಿಮ್ಮ ಸ್ಥಾನಗಳಲ್ಲಿ ದೃಢವಾಗಿ ನಿಂತು, ಯುದ್ಧಮಾಡುವ ಭೀಷ್ಮ ಹಿಂಬದಿಯಿಂದ, ಶತ್ರುಗಳಿಂದ ಘಾತವಾಗದಂತೆ ರಕ್ಷಿಸಿರೆಂದು ವಿಜ್ಞಾಪಿ ಕೊಳ್ಳುತ್ತೇನೆ. (೧೧)

ಸಂಜಯ—ಹೇ ಧೃತರಾಷ್ಟ್ರ, ದುರ್ಯೋಧನನು ಹೀಗೆ ನುಡಿ ವಿಷಣ್ಣವದನನಾಗಿ ಸುಮ್ಮನಾದನು. ದುರ್ಯೋಧನನಿಗೆ ಹರ್ಷವನ್ನುಂಟು ಮಾಡುವ ಇಚ್ಛೆಯಿಂದ, ಪ್ರತಾಪಶಾಲಿಯಾದ ಕುರುವೃದ್ಧಪಿತಾಮಹ (ಭೀಷ್ಮನು), ಉಚ್ಚಧ್ವನಿಯಿಂದ ಸಿಂಹನಾದವನ್ನು ಮಾಡಿ, ಶಂಖವನ್ನು ದಿದನು. (೧೨). ನಂತರ ಪಣವ, ಆನಕ, ಶಂಖ, ಭೇರಿ ಮೊದಲಾ ವಾದ್ಯಗಳು ಏಕಕಾಲದಲ್ಲಿ ಘೋರ್ಗರೆಯಲು, ಆ ಶಬ್ದವು ಸರ್ವತ್ರ ತುಂಬಿತು. (೧೩) ಅತ್ತ ಶ್ವೇತಾಶ್ವಯುಕ್ತವಾದ ದಿವ್ಯ ರಥದಲ್ಲಿ ಆರೂಢರಾದ ಕೃಷ್ಣಾರ್ಜುನರು ತಮ್ಮ ಶಂಖಗಳನ್ನು ಧ್ವನಿಗೈದರು. (೧೪) (ಸಕಲೇಂದ್ರಿಯ ನಿಯಾಮಕನಾದ್ದರಿಂದ ಹೃಷೀಕೇಶನಾಮಕನಾದ) ಶ್ರೀ ಕೃಷ್ಣನು ಪಾಂಚಜನ್ಯವೆಂಬ ಶಂಖವನ್ನೂ, ಅರ್ಜುನನು ದೇವದತ್ತ ವೆಂಬ ತನ್ನ ಶಂಖವನ್ನೂ ಧ್ವನಿಗೊಳಿಸಿದರು. (ಬಹು ದಾಹಕಶಕ್ತಿಯುಳ್ಳ ಅತಿತೀಕ್ಷ್ಣವಾದ 'ವೃಕ' ವೆಂಬ ಜಠರಾಗ್ನಿಯನ್ನು ಉದರದಲ್ಲಿ ಧರಿಸಿರು ವುದರಿಂದ ವೃಕೋದರನಾಮಕನಾದ) ಅದ್ಭುತ ಬಲಶಾಲಿಯೂ ಭಯಂಕರ ಯುದ್ಧವುಳ್ಳವನೂ ಆದ ಭೀಮಸೇನನು, ಪೌಂಡ್ರವೆಂಬ ತನ್ನ ಶಂಖವನ್ನು ನಾದಗೈದನು. (೧೫) ಕುಂತೀಪುತ್ರ ಯುಧಿಷ್ಠಿರನು ಅನಂತವಿಜಯವೆಂಬ ಶಂಖವನ್ನೂ, ನಕುಲಸಹದೇವರು ಸುಘೋಷ ಮತ್ತು ಮಣಿಪುಷ್ಪಕ ವೆಂಬ ತಮ್ಮ ಶಂಖಗಳನ್ನೂ ಧ್ವನಿಮಾಡಿದರು. (೧೬) ಮಹಾಧನು ರ್ಧಾರಿಯಾದ ಕಾಶ್ಯ, ಮಹಾರಥಿಕನಾದ ಶಿಖಂಡೀ, ಧೃಷ್ಟದ್ಯುಮ್ನ, ವಿರಾಟ, ಪರಾಜಯವನ್ನರಿಯದ ಸಾತ್ಯಕಿ, (೧೭) ಮಹಾಬಾಹು ಅಭಿಮನ್ಯು, ದ್ರೌಪದೀ ಪುತ್ರರು, ಇವರೆಲ್ಲರೂ, ಪ್ರತ್ಯೇಕವಾಗಿ ತಮ್ಮತಮ್ಮ ಶಂಖಗಳನ್ನು ಧ್ವನಿಗೊಳಿಸಿದರು. (೧೮) ಈ ಮಹಾಶಂಖಗಳ ಧ್ವನಿಯು, ಸರ್ವತ್ರ ವ್ಯಾಪಿಸಿ, ಭೂವ್ಯಾಕಾಶಗಳಲ್ಲಿ ಪ್ರತಿಧ್ವನಿತವಾಯಿತು. ಈ

ಮಹಾಶಬ್ದವು, ಧೃತರಾಷ್ಟ್ರ, ನಿನ್ನ ಪುತ್ರರ ಹೃದಯಗಳನ್ನೇ ಸೀಳಿತು. ಅವರೆಲ್ಲರೂ ತಮ್ಮ ಕುಲವೇ ನಾಶವಾಯಿತೆಂದು ತಿಳಿದರು. (೧೯) ಆದರೂ, ನಿನ್ನ ಪುತ್ರರು ಸಾಮಾನ್ಯರೇ? ಭಯವನ್ನು ಕಳೆದು, ಧೈರ್ಯದಿಂದ ಯುದ್ಧಕ್ಕೆ ಸಿದ್ಧರಾದರು. ಹನುಮತ್ಸಮೇತವಾದ ಜಯ ಪತಾಕೆಯಿಂದ ವಿರಾಜಿಸುವ ದಿವ್ಯರಥದಲ್ಲಿದ್ದ ಅರ್ಜುನನು ಧನುಸ್ಸನ್ನು ಕೈಗೆತ್ತಿಕೊಂಡು, ಸನ್ನದ್ಧರಾದ ಈ ನಿನ್ನ ಮಕ್ಕಳನ್ನು ಒಮ್ಮೆ ದಿಟ್ಟಿಸಿ ನೋಡಿದನು. (೨೦) ಶಸ್ತ್ರಪ್ರಹಾರ ಸಮಯದಲ್ಲಿ ಬೀರಿದ ಈ ನೋಟ, ಅದೇನು ವಿಲಕ್ಷಣ ಪರಿಣಾಮವನ್ನುಂಟುಮಾಡಿತು! ಧೃತರಾಷ್ಟ್ರ, ಅಂತಃಪ್ರೇರಕನಾದ ಶ್ರೀಕೃಷ್ಣನ ಅಚಿಂತ್ಯವ್ಯಾಪಾರವನ್ನು ತಿಳಿಯುವರಾರು? ಹೀಗೆ ನೋಡಿದವನೇ ಅರ್ಜುನನು ಶ್ರೀಕೃಷ್ಣನನ್ನು ಕುರಿತು ಹೇಳಿದನು.

ಅರ್ಜುನ—ಹೇ ಅಚ್ಯುತ, ನಾಶರಹಿತನಾದ ನೀನು ಸಾರಥಿಯಾಗಿರಲು ಭೀತಿಗೆಡೆಯಿಲ್ಲವಷ್ಟೆ. ನನ್ನ ರಥವನ್ನು ಉಭಯಸೈನ್ಯಗಳ ಮಧ್ಯದಲ್ಲಿ ನಿಲ್ಲಿಸು. (೨೧) ಈ ರಣೋದ್ಯೋಗದಲ್ಲಿ ನಾನು ಯಾರೊಡನೆ ಹೋರಾಡಬೇಕು? ದುರ್ಬುದ್ಧಿಯಾದ ದುರ್ಯೋಧನನಿಗೆ ಪ್ರಿಯವನ್ನುಂಟುಮಾಡಲು, ನಮ್ಮೊಡನೆ ಯುದ್ಧಕ್ಕೆ ಸಿದ್ಧರಾಗಿ ಬಂದು ನಿಂತಿರುವ, ಎಲ್ಲರನ್ನೂ ಇನ್ನೊಮ್ಮೆ ನೋಡುವೆನು. ಆ ವರೆಗೆ ರಥವು ಅಲ್ಲಿಯೇ ನಿಲ್ಲಲಿ. (೨೨-೨೩)

ಸಂಜಯ—ಹೇ, ಧೃತರಾಷ್ಟ್ರ, (ಜಿತನಿದ್ರನಾದ್ದರಿಂದ ಗುಡಾಕೇಶನೆಂದು ಪ್ರಸಿದ್ಧನಾದ) ಪಾರ್ಥನ ಈ ಮಾತನ್ನು ಕೇಳಿ ಹೃಷೀಕೇಶನು ಶ್ರೇಷ್ಠವಾದ ತನ್ನ ರಥವನ್ನು ಭೀಷ್ಮದ್ರೋಣಾದಿಗಳ ಮತ್ತು ಎಲ್ಲ ರಾಜರ ಅಭಿಮುಖವಾಗಿ, ಉಭಯಸೈನ್ಯಗಳ ಮಧ್ಯದಲ್ಲಿ ತಂದು ನಿಲ್ಲಿಸಿ, "ಹೇ ಪಾರ್ಥ, ಯುದ್ಧಕ್ಕಾಗಿ ಮಿಳಿತರಾಗಿರುವ ಕೌರವರನ್ನು ಚೆನ್ನಾಗಿ ನೋಡು" ಎಂದನು. (೨೪-೨೫) ಅರ್ಜುನನು ಒಂದು ಕಡೆಯಿಂದ ಎಲ್ಲರನ್ನೂ ನೋಡಿದನು. ಏನು ಚಮತ್ಕಾರವೋ ಧೃತರಾಷ್ಟ್ರ!

ಅವರನ್ನು ವಧಾರ್ಹರಾದ ಕೌರವರನ್ನಾಗಿ ಕಾಣಲಿಲ್ಲ. ಆದರೆ ಆ ಉಭಯ ಸೈನ್ಯಗಳಲ್ಲಿ, ಭೂರಿಶ್ರವಾದಿಪಿತೃಸ್ಥಾನೀಯರನ್ನೂ, ಭೀಷ್ಮಾದಿಪಿತಾಮಹರನ್ನೂ, ದ್ರೋಣಾದಿ ಆಚಾರ್ಯರನ್ನೂ, ಶಲ್ಯಾದಿ ಸೋದರ ಮಾವಂದಿರನ್ನೂ, ದುರ್ಯೋಧನಾದಿ ಭ್ರಾತೃಗಳನ್ನೂ, ಅವರ ಮಕ್ಕಳು ಮೊಮ್ಮಕ್ಕಳನ್ನೂ, ಸ್ನೇಹಿತರನ್ನೂ, ಮಾವಂದಿರನ್ನೂ, ಸುಹೃಜ್ಜನರನ್ನೂ ಮತ್ತು ಅನೇಕ ಬಂಧುವರ್ಗದವರನ್ನೂ ಕಂಡನು. (೨೬-೨೭) ನೋಡಿದೆಯಾ ಧೃತರಾಷ್ಟ್ರ, ಶ್ರೀಕೃಷ್ಣನಿಂದ ನೋಡೆಂದಾಜ್ಞಾಪಿಸಲ್ಪಟ್ಟ ಅರ್ಜುನನ ನೋಟದಿಂದ ಪ್ರಾಪ್ತವಾದ ಪರಿಣಾಮವನ್ನು? ಅರ್ಜುನನ ಮನದಲ್ಲಿ ಅತಿಯಾದ ಕೃಪೆಯು ತಲೆದೋರಿತು; ವಿಷಾದಪಟ್ಟನು. ಬಂಧುಸ್ನೇಹನಿಮಿತ್ತವಾದ ಶೋಕವು ಆತನನ್ನಾವರಿಸಿತು. ಮನೋದೌರ್ಬಲ್ಯದಿಂದ ಏನುಮಾಡಲಿಕ್ಕೂ ಅಸಮರ್ಥನಾದನು.

ಅರ್ಜುನ—ಹೇ ಕೃಷ್ಣ, ಸಕಲಲೋಕಕರ್ಷಕ! ಯುದ್ಧೇಚ್ಛೆಯಿಂದ ಸಮ್ಮುಖದಲ್ಲಿ ನಿಂತಿರುವ ಈ ಬಂಧುಜನರನ್ನು ನೋಡಿ, ನನ್ನ ಕೈಕಾಲುಗಳು ಚಲಿಸದಾದವು; ಮುಖವು ಒಣಗುತ್ತಿದೆ; ದೇಹದಲ್ಲಿ ಕಂಪವೂ ರೋಮಾಂಚವೂ ಹುಟ್ಟುತ್ತಿದೆ. (೨೮-೨೯) ಗಾಂಡೀವಧನುಸ್ಸು ಕೈಯಿಂದ ಜಾರುತ್ತಿದೆ. ದೇಹದ ಚರ್ಮವು ಸುಡುತ್ತಲಿದೆ. ಮನಸ್ಸು ಚಂಚಲಿಸುತ್ತಿದೆ. ನಿಲ್ಲಲು ಸಹ ಅಸಮರ್ಥನಾಗಿರುವೆನು (೩೦). ಹೇ ಕೇಶವ! ದುಶ್ಶಕುನಗಳನ್ನು ಸಹ ನೋಡುತ್ತಿರುವೆನು; ಸ್ವಜನರನ್ನು ಯುದ್ಧದಲ್ಲಿ ಕೊಲ್ಲುವುದರಿಂದ ಯಾವ ಶ್ರೇಯಸ್ಸನ್ನೂ ಕಾಣೆನು (೩೧). ಹೇ ಗೋವಿಂದ, ನನಗೆ ವಿಜಯಬೇಡ, ರಾಜ್ಯಬೇಡ, ಸುಖಬೇಡ; ರಾಜ್ಯದಿಂದೇನು; ಭೋಗಗಳಿಂದೇನು, ಜೀವಿಸುವುದರಿಂದ ತಾನೆ ಏನು ಪ್ರಯೋಜನ? (೩೨). ಯಾರಿಗೋಸ್ಕರವಾಗಿ, ರಾಜ್ಯ, ಭೋಗ, ಮತ್ತು ಸುಖಗಳು ನಮ್ಮಿಂದ ಅಪೇಕ್ಷಿಸಲ್ಪಡುವುವೋ, ಆ ನಮ್ಮ ಬಂಧು ಬಾಂಧವರೇ ಸಕಲೈಶ್ವರ್ಯವನ್ನೂ ಪ್ರಾಣಗಳನ್ನೂ ಪರಿತ್ಯಾಗಮಾಡಲು. ಸಿದ್ಧರಾಗಿ ನಮ್ಮೆದುರು ನಿಂತಿರುವರು (೩೩). ಆಚಾರ್ಯರು, ತಂದೆಗಳು, ಮಕ್ಕಳು, ಪಿತಾಮಹರು, ಸೋದರಮಾವಂದಿರು, ಮಾವಂದಿರು,

ಮೊಮ್ಮಕ್ಕಳು, ಮೈದುನರು ಮತ್ತಿತರ ಸಂಬಂಧಿಗಳೇ ಯುದ್ಧಕ್ಕಾಗಿ ನೆರೆದಿರುವರು. ಆದ್ದರಿಂದ ಜಯಭೋಗಾದಿಗಳನ್ನು ನಾನು ಸರ್ವಥಾ ಇಚ್ಛಿಸುವುದಿಲ್ಲ (೩೪). ಯುದ್ಧದಿಂದ ನಿವೃತ್ತನಾದ ನನ್ನನ್ನು, ಇವರು ಕೊಂದರೂ ಸರಿ; ನಾನು ಮಾತ್ರ ಇವರನ್ನು ಕೊಲ್ಲಲಿಚ್ಛಿಸುವುದಿಲ್ಲ. ಹೇ ಮಧುವೈರಿ! ಮೂರು ಲೋಕಗಳ ಆಧಿಪತ್ಯವೇ ದೊರೆಯಬಹುದಾದರೂ ನಾನವರನ್ನು ಕೊಲ್ಲೆನು. ಈ ಭೂರಾಜ್ಯಮಾತ್ರಕ್ಕಾಗಿ ಕೊಲ್ಲೆನೆಂದು ಬೇರೆ ಹೇಳಬೇಕೇ? (೩೫). ಹೇ ಜನಾರ್ದನ! ಈ ಧೃತರಾಷ್ಟ್ರ ಪುತ್ರರನ್ನು ಕೊಲ್ಲುವುದರಿಂದ ನಮಗೆ ದೊರೆಯುವ ಐಹಿಕಸುಖವಾದರೂ ಏನು? ಪಾರತ್ರಿಕಸುಖವೂ ಇಲ್ಲ. ಪ್ರತ್ಯುತ, ದುಃಖಕಾರಣವಾದ ಪಾಪವೇ ನಮ್ಮ ಬೆನ್ನಿಕ್ಕುವುದು. ಬೆಂಕಿಯಿಂದ, ವಿಷಪ್ರಯೋಗದಿಂದ, ಆಯುಧ ಗಳಿಂದ, ಸ್ತ್ರೀ, ಭೂ, ಧನಗಳ ಅಪಹಾರದಿಂದ ಪೂರ್ವದಲ್ಲಿ ದುರ್ಯೋಧ ನಾದಿಗಳು ನಮ್ಮ ನಾಶಕ್ಕಾಗಿ ಯತ್ನಿಸಿ, 'ಆತತಾಯಿ'ಗಳಾಗಿ ವಧಾರ್ಹ ರಾಗಿರುವರೆಂಬುದು ನಿಜ. ಭೀಷ್ಮಾದಿಗಳು ಆತತಾಯಿಗಳೇ? ಆದರೂ ಈ ಎಲ್ಲ ಸ್ವಜನರ ಉದ್ದೇಶವಾಗಿಯೇ ರಾಜ್ಯೈಶ್ವರ್ಯಾದಿಗಳು. ಇವರನ್ನು ಕೊಲ್ಲುವುದರಿಂದ ಬಂಧುಜನರ ದರ್ಶನ, ಸ್ಪರ್ಶನ, ಸಂಭಾಷಣ, ಸಹವಾಸಾದಿಗಳ ಅಭಾವವೇ ಲಭಿಸುವುದಲ್ಲವೇ? ಈ ಕಾರಣದಿಂದ ದುರ್ಯೋಧನಾದಿ ಸ್ವಜನರನ್ನೂ ಕೊಲ್ಲತಕ್ಕದ್ದಲ್ಲ. ಹೇ ಮಾಧವ! ಸ್ವಜನರನ್ನು ಕೊಂದು ಹೇಗೆ ಸುಖಿಗಳಾದೇವು? ಜನನಾದಿದೋಷ ದೂರನಾಗಿ ಭಕ್ತರ ಸಂಸಾರಬಂಧವನ್ನು ಪರಿಹರಿಸುವುದರಿಂದ ಜನಾರ್ದನ ನೆಂದೂ, ಸಕಲ ರಾಜ್ಯೈಶ್ವರ್ಯಾಧಿಪತಿಯಾದ್ದರಿಂದ ಮಾಧವನೆಂದೂ ಪ್ರಸಿದ್ಧನಾದ ನೀನಿರಲು, ಇದಕ್ಕಾಗಿ ಇವರನ್ನು ನಾನು ಕೊಲ್ಲಬೇಕೇ? (೩೬-೩೭). ಇವರೇಕೆ ನನ್ನಂತೆ ತಿಳಿದು ಯುದ್ಧದಿಂದ ನಿವೃತ್ತರಾಗಲೊಲ್ಲ ರೆಂದು ಕೇಳುವೆಯಾ? ಹೇಳುವೆನು, ಕೇಳು. ಈ ದುರ್ಯೋಧನಾದಿಗಳು ರಾಜ್ಯಲೋಭದಿಂದ ನಷ್ಟವಾದ ಧರ್ಮಜ್ಞಾನವುಳ್ಳವರಾಗಿದ್ದಾರೆ. ಮಿತ್ರ ದ್ರೋಹದಿಂದಲೂ ಕುಲನಾಶದಿಂದಲೂ ಪ್ರಾಪ್ತವಾಗುವ ಪಾತಕವನ್ನು ತಿಳಿಯರು. (೩೮) ಈ ಕುಲನಾಶಕರವಾದ ಯುದ್ಧದಿಂದ ಉಂಟಾಗುವ

ದೋಷವನ್ನು ತಿಳಿದವರಾದ ನಾವಾದರೂ ಈ ಪಾಪಕರ್ಮದಿಂದ ನಿವೃ
ರಾಗಬೇಕೆಂದು ಮನಗಾಣಬೇಡವೇ (೩೯). ಕುಲಕ್ಷಯದಿಂದ ಪರಂಪ
ಪ್ರಾಪ್ತವಾದ ಕ್ಷತ್ರಿಯಾದಿಕುಲಧರ್ಮಗಳು ನಷ್ಟವಾಗುತ್ತವೆ. ಧರ್ಮ
ಕರ್ತೃಗಳಾದ ಕುಲಪ್ರಮುಖರು ಇಲ್ಲಿ ಮಿಳಿತರಾಗಿರುವರು. ಇವ
ನಾಶದಿಂದ ಕರ್ತೃಗಳಿಲ್ಲದೇ ಧರ್ಮವು ನಷ್ಟ ಹೊಂದುವುದು. ಧರ್ಮ
ನಾಶದಿಂದ ಉಳಿದ ಸರ್ವಕುಲವೂ ಅಧರ್ಮದಿಂದ ಆಕ್ರಾಂತವಾಗುತ್ತ
(೪೦). ಇದರಿಂದ ಕುಲಸ್ತ್ರೀಯರು ಕೆಡುವರು. ಹೇ ವೃಷ್ಣಿಕುಲೋದ್ಭ
ಕೃಷ್ಣ! ಸ್ತ್ರೀಯರು ದುಷ್ಟರಾದರೆ ವರ್ಣಸಂಕರವು ತಪ್ಪಿದ್ದಲ್ಲ (೪೧)
ವರ್ಣಸಾಂಕರ್ಯದಿಂದ ಕುಲನಾಶಕರಿಗೂ, ಅವರ ಸಂತಾನರೂಪವಾ
ಕುಲಕ್ಕೂ ನರಕಪ್ರಾಪ್ತಿಯೇ ಸರಿ. ಹಾಗೂ ಕುಲನಾಶಕರ ಪಿತೃಗಳ
ಸಹ ಪಿಂಡೋದಕಗಳಿಂದ ರಹಿತರಾಗಿ ನರಕದಲ್ಲಿ ಬೀಳುವರು (೪೨)
ಈ ವಿಧವಾದ ಈ ಕುಲನಾಶಕರ ವರ್ಣಸಾಂಕರ್ಯಪ್ರಾಪಕದೋಷಗಳಿಂದ
ವರ್ಣಧರ್ಮಗಳೂ ಸನಾತನವಾದ ಕುಲಧರ್ಮಗಳೂ ನಾಶಹೊಂದುತ್ತ
(೪೩). ಹೇ ಜನಾರ್ದನ! ಹೀಗೆ ನಷ್ಟವಾದ ಕುಲಧರ್ಮಗಳುಳ್ಳ
ಮನುಷ್ಯರಿಗೆ ನಿರಂತರ ನರಕವಾಸವೆಂಬ ಜ್ಞಾನವೃದ್ಧರ ನಿಶ್ಚಯವನ್ನು
ಕೇಳಿರುವೆವು (೪೪). ಅಹೋ! ಮಹಾ ಕಷ್ಟವು. ರಾಜ್ಯಸುಖಲೋಭದಿಂದ
ಸ್ವಜನರನ್ನು ಕೊಲ್ಲುವ ಮಹಾಪಾಪವನ್ನಾಚರಿಸಲು ನಿಶ್ಚಯಿಸಿ ಅದಕ್ಕಾಗಿ
ಈ ಉದ್ಯಮವನ್ನು ಕೈಗೊಂಡೆವಲ್ಲಾ! (೪೫) ಆದ್ದರಿಂದ, ಪ್ರತಿಭಟಿಸ
ದಿರುವ ನಿರಾಯುಧನಾದ ನನ್ನನ್ನು ಶಸ್ತ್ರಪಾಣಿಗಳಾದ ದುರ್ಯೋಧ
ನಾದಿಗಳು ರಣದಲ್ಲಿ ಕೊಲ್ಲಲಿ. ಈ ಮರಣವು ನನ್ನ ಸದ್ಗತಿಗೆ ಕಾರಣ
ವಾದುದರಿಂದ ನನಗೆ ಹಿತಕರವೇ ಆಗುವುದು (೪೬).

ಸಂಜಯ—ಹೇ ಧೃತರಾಷ್ಟ್ರ, ಅರ್ಜುನನು ಹೀಗೆ ಮಾತನಾಡಿ
ಧನುರ್ಬಾಣಗಳನ್ನು ಪರಿತ್ಯಾಗಮಾಡಿ, ರಣರಂಗದಲ್ಲಿ ಶೋಕಸಂತಪ್ತವಾ
ಮನಸ್ಸಿನಿಂದ, ರಥಮಧ್ಯದಲ್ಲಿ ಸುಮ್ಮನೆ ಕುಳಿತುಕೊಂಡನು.

ಅಧ್ಯಾಯ ೨

ಧೃತರಾಷ್ಟ್ರ—ಸಂಜಯ! ಅರ್ಜುನನು ಯುದ್ಧಮಾಡದೇ ಕುಳಿತೇ ಬಿಟ್ಟನೇ ? ಮುಂದೇನಾಯಿತು ?

ಸಂಜಯ—ಅರ್ಜುನನು ಹಾಗೆ ಕುಳಿತರೆ, ಶ್ರೀಕೃಷ್ಣನು ಸುಮ್ಮನಿರುವನೇ ? ಕೃಪಾಯುಕ್ತನಾಗಿ ದುಃಖದಿಂದ ಕಣ್ಣೀರು ಸುರಿಸುತ್ತ ಕುಳಿತ ಅರ್ಜುನನನ್ನು ಕುರಿತು ಹೀಗೆ ಮಾತನಾಡಿದನು. (೧)

ಶ್ರೀಕೃಷ್ಣ—ಹೇ ಅರ್ಜುನ! ಈ ಸಂಕಟ ಸಮಯದಲ್ಲಿ ನಿನಗೇಕೆ ಈಪರಿ ಮೋಹವುಂಟಾಯಿತು? ನಿನ್ನ ಈ ವರ್ತನೆಯು ಅಪಕೀರ್ತಿಕರವು; ಸ್ವರ್ಗಸಾಧಕವೂ ಅಲ್ಲ ಮತ್ತು ಜ್ಞಾನಿಗಳಿಗೆ ಸಮ್ಮತವಲ್ಲ. (೨) ಆದ್ದರಿಂದ, ಹೇ ಪಾರ್ಥ, ದೈನ್ಯವನ್ನು ಬಿಡು, ಇದು ನಿನಗೆ ಯೋಗ್ಯವಲ್ಲ. ಈ ಮನೋದೌರ್ಬಲ್ಯವು ನಿನಗೆ ಲಾಘವಕರವು. ಹೇ ಶತ್ರುಸಂತಾಪಕ! ಎದ್ದುನಿಲ್ಲು, ಯುದ್ಧಕ್ಕೆ ಸಿದ್ಧನಾಗು. (೩)

ಅರ್ಜುನ—ಹೇ ಮಧುಸೂದನ! ಯುದ್ಧದಿಂದ ನನಗೆ ಹಿತವಾಗುವುದೆಂಬುದನ್ನು ಮನಗಾಣೆನು. ಪೂಜ್ಯರಾದ ಭೀಷ್ಮದ್ರೋಣರನ್ನು ಯುದ್ಧದಲ್ಲಿ ಬಾಣಗಳಿಂದ ಹೇಗೆ ಹೊಡೆಯಲಿ ? (೪)

ಶ್ರೀಕೃಷ್ಣ—ಇವರನ್ನು ಸಂಹರಿಸದಿದ್ದರೆ ನಿಮಗೆ ರಾಜ್ಯ ಹೇಗೆ ದೊರೆಯಬೇಕು ? ರಾಜ್ಯ ದೊರೆಯದಿದ್ದರೆ ನೀವು ಜೀವಿಸುವುದಾದರೂ ಹೇಗೆ ?

ಅರ್ಜುನ—ಭಗವದ್ಭಕ್ತಿ ಮೊದಲಾದ ಸದ್ಗುಣಸಂಪನ್ನರಾದ ದ್ರೋಣಾದಿಗುರುಗಳನ್ನು ಸಂಹಾರ ಮಾಡದೇ ಈ ಲೋಕದಲ್ಲಿ ಭಿಕ್ಷಾನ್ನವನ್ನುಣ್ಣುವುದೇ ಶ್ರೇಯಸ್ಕರವು; ಪರಲೋಕದ ದುಃಖವಾದರೂ ತಪ್ಪುವುದು. ಅಲ್ಲದೇ ಅವರನ್ನು ಕೊಲ್ಲುವುದರಿಂದ ಈ ಲೋಕದ ದುಃಖವೂ ತಪ್ಪುವುದಿಲ್ಲ. ಸುಖಸಾಧನ ವಸ್ತುಗಳನ್ನು ಕೋರುವವರಾದ ಈ ಗುರುಗಳನ್ನು ಕೊಂದು ಅವರಿಂದ ಅನುಭವಿಸಲ್ಪಡುವ, ಅವರ ರಕ್ತ

ದಿಂದ ಲಿಪ್ತವಾದ ಭೋಗಗಳನ್ನು, ಅವರ ಆಸನಾದಿಗಳಲ್ಲಿ ಕುಳಿತು ಹೇ
ಅನುಭವಿಸಲಿ? ಪರಲೋಕದ ದುಃಖಕ್ಕಿಂತ ಇದು ಹೆಚ್ಚಿನ ದುಃಖವಲ್ಲವೇ
(೫) ಇರಲಿ, ಕೃಷ್ಣ! ಯುದ್ಧದಿಂದ ಪಾಪ ಬಂದರೂ ಬರಲಿ. ನಮಗೆ
ಜಯವೆಂಬ ನಿಶ್ಚಯವಾದರೂ ಇದೆಯೇ? ನಾವು ಅವರನ್ನು ಗೆಲ್ಲುವೆವೋ
ಅವರೇ ನಮ್ಮನ್ನು ಗೆಲ್ಲುವರೋ ತಿಳಿಯೆವು. ಒಂದುವೇಳೆ ನಮಗೇ ಜಯ
ವಾದರೂ, ಅದನ್ನು ಪರಾಜಯಸಮವೆಂದೇ ಭಾವಿಸುವೆನು. ಯಾರನ್ನು
ಕೊಂದು ನಾವು ಜೀವಿಸಲು ಇಚ್ಛಿಸಲಾರೆವೋ, ಅಂಥ ಧೃತರಾಷ್ಟ್ರ
ಪುತ್ರರೇ ಯುದ್ಧದಲ್ಲಿ ಎದುರಾಗಿರುವರು. ಅವರನ್ನು ಕೊಂದು ಜೀವಿಸು
ವುದೆಂತು? (೬) ಹೇ ಕೃಷ್ಣ! ಕೃಪಣತ್ವದೋಷವು ನನ್ನ ಸಹಜ ಶೌರ್ಯ
ವನ್ನು ಉಡುಗಿಸಿದೆ. ಮನಸ್ಸು ಧರ್ಮನಿರ್ಣಯವನ್ನು ಕಾಣದಾಗಿ
ಭಿಕ್ಷಾಟನ ಮತ್ತು ಯುದ್ಧಗಳಲ್ಲಿ ಯಾವುದು ಶ್ರೇಯಸ್ಕರವೆಂದು ತಿ
ಯೆನು. ನಾನು ನಿನ್ನ ಶಿಷ್ಯನು; ನಿನ್ನ ಶಾಸನಕ್ಕೆ ಅರ್ಹನು. ಶರ
ಬಂದಿರುವ ನನ್ನನ್ನು ಶಿಕ್ಷಿಸಿ ಮಾರ್ಗತೋರು. (೭)

ಶ್ರೀಕೃಷ್ಣ—ಅರ್ಜುನ! ನೀನೇ ವಿಚಾರಮಾಡಿ ಯುಕ್ತವೆ
ತೋರಿದುದನ್ನು ಮಾಡು.

ಅರ್ಜುನ—ಹೀಗೆ ಕೈ ಬಿಡುವುದೆ, ದೇವ! ನನ್ನ ಸರ್ವೇಂದ್ರಿ
ಗಳನ್ನು ಶೋಷಿಸುತ್ತಿರುವ ಈ ನನ್ನ ದುಃಖವನ್ನು ಯಾವ ಕರ್ಮ
ಪರಿಹರಿಸುವುದೋ ಕಾಣೆ. ಏನು ಮಾಡಿದರೆ ಈ ದುಃಖ ಪರಿಹಾರವ
ವುದು ಹೇಳು.

ಶ್ರೀಕೃಷ್ಣ—ರಾಜ್ಯಲಾಭಕ್ಕೆ ಕಾರಣವಾದ ಯುದ್ಧಕರ್ಮವೇ
ಈ ದುಃಖವನ್ನು ಪರಿಹರಿಸಬಲ್ಲದು.

ಅರ್ಜುನ—ನಿಷ್ಕಂಟಕವಾದ ಇಹರಾಜ್ಯವನ್ನೂ ದೇವಲೋ
ಆಧಿಪತ್ಯವನ್ನೂ ಪಡೆದರೂ ಸಹ, ಬಂಧುನಾಶದಿಂದ ಪ್ರಾಪ್ತವ
ದುಃಖವನ್ನು ನೀಗಲಾರೆನು. ಇದು ಅಪರಿಹಾರ್ಯವೆಂದೇ ತೋ
ವುದು. (೮)

ಸಂಜಯ—ಹೇ ಧೃತರಾಷ್ಟ್ರ! ಜಿತನಿದ್ರನಾದ ಅರ್ಜುನನು, ಸಕಲೇಂದ್ರಿಯಪ್ರೇರಕನಾದ ಶ್ರೀಕೃಷ್ಣನನ್ನು ಕುರಿತು ಯುದ್ಧಮಾಡೆನೆಂದು ಮತ್ತೆ ನುಡಿದು ಸುಮ್ಮನಾದನು. ಮಹಾಧೈರ್ಯಶಾಲಿಯೂ, ಶತ್ರುಸಂತಾಪಕನೂ ಆದ ಅರ್ಜುನನಿಗೆ ಈ ಬುದ್ಧಿಯುಂಟಾದುದು ಮಹದಾಶ್ಚರ್ಯವು! (೯) ಉಭಯಸೈನ್ಯಗಳ ಮಧ್ಯದಲ್ಲಿ ಹೀಗೆ ದುಃಖಿಸುತ್ತಿದ್ದ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಪರಿಹಾಸದಿಂದ ಈ ಪ್ರಕಾರವಾಗಿ ಮಾತನಾಡಲಾರಂಭಿಸಿದನು.

[**ಸೂಚನೆ**—ಜಗಜ್ಜನ್ಮಾದಿಕಾರಣನಾದ ಪರಮಾತ್ಮನು ಸ್ವತಂತ್ರನು, ಸರ್ವಜ್ಞನು, ಸಕಲಸದ್ಗುಣಪೂರ್ಣನು, ದೋಷದೂರನು, ದಯಾಸಾಗರನು ಎಂಬೀ ಮೊದಲಾದ ಆತನ ಮಹಾಮಹಿಮೆಗಳ ನಿಶ್ಚಯಜ್ಞಾನದಿಂದ ಆತನಲ್ಲಿ, ಮುಕ್ತಿಸಾಧನವಾದ ಆತನ ಪರಮಪ್ರಸಾದವನ್ನು ದೊರಕಿಸುವ, ಶ್ರೇಷ್ಠಭಕ್ತಿಯು ಉದಯಿಸುತ್ತದೆ. ಸರ್ವರೂ ಸ್ವವಿಹಿತಸತ್ಕರ್ಮಗಳನ್ನು ಭಕ್ತಿಪೂರ್ವಕವಾಗಿ ಆಚರಿಸಿ, ಪರಮಾತ್ಮನ ಪ್ರೀತ್ಯರ್ಥವಾಗಿ, ಆತನಲ್ಲಿ ಅರ್ಪಿಸಬೇಕು. ಇದೇ ಪರಮಧರ್ಮವು. ಕ್ಷತ್ರಿಯನಿಗೆ ಪ್ರಜಾಪಾಲನೆಯೂ, ದುಷ್ಟಜನನಿಗ್ರಹವೂ ವಿಹಿತಕರ್ಮಗಳು. ಇವುಗಳನ್ನು ಭಗವದಾರಾಧನೆಯೆಂಬ ಭಾವನೆಯಿಂದ ಆಚರಿಸುವುದೇ ಕ್ಷತ್ರಿಯನಿಗೆ ಪರಮಧರ್ಮವು. ಇದರ ವಿರುದ್ಧವಾದುದೆಲ್ಲ ಅಧರ್ಮವು. ಬಂಧುಸ್ನೇಹದಿಂದ ಮೋಹಗೊಂಡು ಪರಮಧರ್ಮರೂಪವಾದ ಯುದ್ಧವನ್ನು ಅಧರ್ಮವೆಂದು ಶಂಕಿಸಿ, ದುಃಖಿಸುತ್ತಿರುವ ಅರ್ಜುನನಿಗೆ ದುಷ್ಟನಿಗ್ರಹರೂಪವಾದ ಯುದ್ಧವೇ ಪರಮಧರ್ಮವೆಂದೂ, ಯುದ್ಧಮಾಡದಿರುವುದೇ ಅಧರ್ಮವೆಂದೂ ಉಪದೇಶಿಸುತ್ತಾ, ಇಲ್ಲಿಂದ ಮುಂದೆ, ಸಂವಾದರೂಪದ ಇಡೀ ಗೀತಾಗ್ರಂಥದಿಂದ ಅರ್ಜುನನನ್ನು ನಿಮಿತ್ತೀಕರಿಸಿ ಸಜ್ಜನಲೋಕಕ್ಕೆ, ಶ್ರೀಕೃಷ್ಣನು ಧರ್ಮವನ್ನೂ ತತ್ವಜ್ಞಾನವನ್ನೂ ಬೋಧಿಸುತ್ತಾನೆ.]

ಶ್ರೀಕೃಷ್ಣ—ಅರ್ಜುನ! ನೀನು ಯಾರನ್ನು ಕುರಿತು ಶೋಕಿಸುತ್ತಿರುವೆಯೋ ಅವರು ಶೋಕಾರ್ಹರಲ್ಲ. ನೀನಾಡುವ ಮಾತುಗಳು ಕೇವಲ ನಿನ್ನ ಬುದ್ಧಿ ಪರಿಕಲ್ಪಿತವಾದವುಗಳು; ಜ್ಞಾನಿಗಳಿಗೆ ಸಮ್ಮತವಲ್ಲ.

ಅರ್ಜುನ—ಸನ್ನಿಹಿತ ಮೃತ್ಯುವುಳ್ಳವರಾದರೂ ಇವರು ಶೋಕಾ ರಲ್ಲವೇ ? ಅದು ಹೇಗೆ, ಕೃಷ್ಣ ! ಬಂಧುಜನರು ಸಾಯುವುದನ್ನು ಕಂ ದುಃಖಿಸದವರಾರು ?

ಶ್ರೀಕೃಷ್ಣ—ಅರ್ಜುನ ! ಜ್ಞಾನಿಗಳು ದುಃಖಿಸುವುದಿಲ್ಲ. ವೃಥೆ ಪ್ರಾಣಶಕ್ತಿ ಸಂಪನ್ನರನ್ನು ಕಂಡು ಯಾರೂ ಅಳುವುದಿಲ್ಲವಷ್ಟೆ. ಹಾಗೆ ಮೃತ್ಯುಶಯ್ಯೆಯಲ್ಲಿರುವವರನ್ನು ಕಂಡೂ ಅಳದವರು ಜ್ಞಾನಿಗಳು. (೧೧)

ಅರ್ಜುನ— ಮರಣ ದೆಶೆಯಲ್ಲಿರುವ ಬಂಧುಜನರಿಗಾಗಿ ಅದೇ ಜ್ಞಾನಿಗಳು ಶೋಕಪಡುವುದಿಲ್ಲ ? ಯುಕ್ತಿಯುಕ್ತವಾದ ನನ್ನ ಮಾತುಗ ಅವರಿಗೇಕೆ ಸಮ್ಮತವಲ್ಲ ?

ಶ್ರೀಕೃಷ್ಣ—ಅರ್ಜುನ ಸ್ವಲ್ಪ ವಿಚಾರಮಾಡು. ಬಂಧುಜನರಿಗ ದುಃಖಿಸುತ್ತಿರುವೆಯಲ್ಲವೇ ? ನಿನ್ನ ದುಃಖಕ್ಕೆ ಕಾರಣವೇನು ? ಜೀ ಸ್ವರೂಪವೇ ನಾಶವಾಗುವುದೆಂದೋ ; ದೇಹನಾಶವಾಗುವುದೆಂದೋ ಅಥವಾ ದೇಹಭಿನ್ನವಾದ ಜೀವನೇ ಇಲ್ಲದ್ದರಿಂದ ದೇಹನಾಶವೇ ಜೀ (ಆತ್ಮ) ನಾಶವೆಂದೋ ? ಜೀವಸ್ವರೂಪಕ್ಕೆ ಎಂದಿಗೂ ನಾಶವಿಲ್ಲ. ಎ ಅರ್ಜುನ ! ನಾನು, ನೀನು ಮತ್ತು ಇಲ್ಲಿ ಸೇರಿರುವ ಇತರರೆಲ್ಲರೂ ಹಿ ಯಾವಾಗಲೂ ಇರದೇ ಇದ್ದವರಲ್ಲ ; ಇದ್ದೇ ಇದ್ದೆವು. ಮುಂದೆ ಯಾ ಕಾಲಕ್ಕೂ ಇರದೇ ಹೋಗುವುದಿಲ್ಲ, ಇದ್ದೇ ಇರುವೆವು. ಈಗಂತೂ ಇ ಇದ್ದೇವೆ, ಇದು ಪ್ರತ್ಯಕ್ಷಸಿದ್ಧವು. ನಮಗಾರಿಗೂ ಮೊದಲಿಲ್ಲ, ಕೊನೆಯಿ ನಾವೆಲ್ಲರೂ ಕಾಲತ್ರಯಸಂಬಂಧವುಳ್ಳ ಅನಾದಿನಿತ್ಯರಾದ ಚೇತನರು.

ಅರ್ಜುನ—ಕೃಷ್ಣ ! ಹಾಗಾದರೆ ಜನನಮರಣಗಳೆಂಬುದೇನು ಇವು ಎಲ್ಲರಿಗೂ ಉಂಟಲ್ಲವೇ ?

ಶ್ರೀಕೃಷ್ಣ—ನಿತ್ಯನಾದ ಆತ್ಮನಿಗೆ ಈ ಸ್ಥೂಲದೇಹಸಂಬಂಧವ ಜನನವು ; ಅದರ ವಿಯೋಗವೇ ಮರಣವು. ನನಗೆ ಈ ದೇಹಯೋಗ ವಿಯೋಗಗಳಿಲ್ಲ. ನಾನು, ನೀನೇ ಮೊದಲಾದ ಇತರ ಆತ್ಮರಿಂ ವಿಲಕ್ಷಣನು, ನಿತ್ಯಮುಕ್ತನು. ಪರಮಾತ್ಮನೆಂದು ಕರೆಯಲ್ಪಡುವೆನ

ರಾಮಕೃಷ್ಣಾದಿ ರೂಪಗಳನ್ನು ನನ್ನ ಇಚ್ಛಾನುಸಾರವಾಗಿ ಪ್ರಕಟಗೊಳಿಸುವೆನು. ನಾನು ಸರ್ವಸಮರ್ಥನು. ಜ್ಞಾನಿಗಳು ನನ್ನನ್ನು ಈಶ್ವರನೆಂದೂ ಕರೆಯುವರು. ನನ್ನಂತೆ, ನೀನು ಮೊದಲಾದವರು ಸ್ವರೂಪದಿಂದ ಅನಾದಿ ನಿತ್ಯರೇ ಇರುವಿರಿ, ಆದರೆ ಸ್ಥೂಲಭೌತಿಕದೇಹಸಂಬಂಧವುಳ್ಳವರು. ಆದ್ದರಿಂದ ನಿತ್ಯರಾದ ಜೀವಾತ್ಮರಿಗೆ ನಾಶವುಂಟೆಂದು ಶೋಕಿಸುವುದು, ಜೀವಸ್ವರೂಪದ ಅನಾದಿ ನಿತ್ಯತ್ವವನ್ನು ತಿಳಿದ ಜ್ಞಾನಿಗಳಿಗೆ ಸಮ್ಮತವಾಗಲಾರದಷ್ಟೆ. (೧೨) ನಶ್ವರವಾದ ಸ್ಥೂಲದೇಹ ನಾಶಕ್ಕಾಗಿ ದುಃಖಿಸುವುದೂ ಉಚಿತವಲ್ಲ. ಯಾವನೊಬ್ಬ ಶರೀರಿಯು, ಈಗಿರುವ ಸ್ಥೂಲದೇಹದಲ್ಲಿ ಬಾಲ್ಯ, ತಾರುಣ್ಯ ಮತ್ತು ಮುಪ್ಪುಗಳೆಂಬ ಅವಸ್ಥಾವಿಶಿಷ್ಟದೇಹಗಳನ್ನು ಒಂದಾದಮೇಲೊಂದನ್ನು ಹೇಗೆ ಹೊಂದುವನೋ, ಹಾಗೆ ಬೇರೊಂದು ದೇಹವನ್ನೂ ಹೊಂದುವನು. ಆದ್ದರಿಂದ ವಿವೇಕಿಯು ದೇಹನಾಶಕ್ಕಾಗಿ ದುಃಖಿಸುವುದಿಲ್ಲ.

ಅರ್ಜುನ—ಒಂದು ದೇಹದ ಬಾಲ್ಯಾದಿ ಅವಸ್ಥೆಗಳು ಕಳೆದುಹೋಗುವುದಕ್ಕೂ, ದೇಹವೇ ನಷ್ಟವಾಗುವುದಕ್ಕೂ ಅದೆಲ್ಲಿಯ ಸಾಮ್ಯ? ಈ ಯುಕ್ತಿಯಿಂದ ಏನು ತಿಳಿಯಲಿ? ವಿವರಿಸು, ದೇವ!

ಶ್ರೀಕೃಷ್ಣ—ಕೋಮಲವಾದ ಚಿಕ್ಕ ಚಿಕ್ಕ ಅವಯವಗಳುಳ್ಳದ್ದೆಂಬ ಮೊದಲಾದ ಲಕ್ಷಣಸಹಿತವಾದ ಬಾಲ್ಯವೆಂಬ ಅವಸ್ಥೆಯಿಂದ ಸಹಿತವಾದ ದೇಹವು ಹೋಗಿ, ಯೌವನವಿಶಿಷ್ಟವಾದ (ಈ ಅವಸ್ಥೆಗೆ ಸಹಜವಾದ ಲಕ್ಷಣಗಳಿಂದ ಕೂಡಿದ) ದೇಹವು ಬರುವುದು. ಅದು ಹೋಗಿ ಜರಾ (ಮುಪ್ಪು) ವಿಶಿಷ್ಟದೇಹವೂ ಬರುವುದು. ಇದಕ್ಕಾಗಿ ಯಾರೂ ದುಃಖಿಸುವುದಿಲ್ಲವಷ್ಟೆ. ಅದೇಕೆ ದುಃಖಿಸುವುದಿಲ್ಲ, ಗೊತ್ತೇ? ಬೇರೊಂದು ಅವಸ್ಥಾವಿಶಿಷ್ಟದೇಹಲಾಭವಿರುವುದರಿಂದ!

ಅರ್ಜುನ—ಸಮಾನವಾದ ಅನ್ಯದೇಹಲಾಭವಿದ್ದ ಪ್ರಯುಕ್ತ ದುಃಖಿಸುವ ಕಾರಣವಿಲ್ಲ. ದೇಹವೇ ನಷ್ಟವಾದರೆ ದುಃಖಕ್ಕೆ ಕಾರಣವಿಲ್ಲವೇ?

ಶ್ರೀಕೃಷ್ಣ—ಮರಣದಿಂದ ಸಹ ದೇಹಾಂತರಲಾಭವಿದ್ದೇ ಇದೆ.

ಯೌವನ ದೇಹವು ಹೋಗಿ, ಜೀರ್ಣದೇಹವು ಲಭಿಸಿದಾಗ, ಜೀರ್ಣ
ವನ್ನು ಯೌವನ ದೇಹದ ಪ್ರತಿನಿಧಿಯೆಂದು ಭಾವಿಸಿ, ಸಮಾಧಾನ
ಕೊಂಡರೆ, ಸುತರಾಂ ಹೊಸದೇಹವೇ ದೊರೆತಾಗ ದುಃಖಿಸಲು ಕಾರ
ವಿಲ್ಲವಷ್ಟೆ!

ಅರ್ಜುನ—ಬಾಲ್ಯದೇಹಾದಿಗಳ ವಿಷಯದಲ್ಲಿ ಅವಸ್ಥಾ
ನಾಶವು. ಮರಣದಲ್ಲಿಯಾದರೋ ಅವಸ್ಥಾವಿಶಿಷ್ಟ ವಸ್ತುವಿಗೇ (ದೇಹ
ನಾಶವು.

ಶ್ರೀಕೃಷ್ಣ—ಈ ವೈಷಮ್ಯವು ಇಲ್ಲಿ ಅನುಪಯುಕ್ತವು. ಭಂಗಾರ
ಕೊಟ್ಟು ಬಟ್ಟೆಯನ್ನು ಪ್ರತಿಯಾಗಿ ಪಡೆದು ಸಂತೋಷಿಸುವುದಿಲ್ಲ
ವಸ್ತುವೇ ಕಳೆದು, ಅದಕ್ಕೆ ಪ್ರತಿಯಾಗಿ ಅನ್ಯವಸ್ತು ಲಾಭವಾದರೆ ಮ
ವಿಲ್ಲವಷ್ಟೆ? ಇನ್ನು, ದೇಹನಾಶವೇ ಆತ್ಮನಾಶವೆಂದು ತಿಳಿದು ದುಃ
ವುದೂ ಯೋಗ್ಯವಲ್ಲ. 'ಬಾಲ್ಯದೇಹವುಳ್ಳವನಾಗಿದ್ದ ನಾನು
ಯೌವನದೇಹವುಳ್ಳವನಾಗಿದ್ದೇನೆ. ಯೌವನದೇಹವುಳ್ಳವನಾಗಿದ್ದ ನಾ
ಈಗ ಜೀರ್ಣದೇಹವುಳ್ಳವನಾಗಿದ್ದೇನೆ' ಎಂಬ ಅನುಭವವು, ಈ ದೇ
ಪ್ರತಿಯೊಬ್ಬನಿಗೂ ಉಂಟಾಗುವುದಷ್ಟೆ. ಈ ಅನುಭವವು ದೇಹಿಗ
ಜಡದೇಹಕ್ಕಲ್ಲ. ಜಡವಸ್ತುವಿಗೆ ಅನುಭವವು ಶಕ್ಯವಿಲ್ಲ. ಇದ
ದೇಹಭಿನ್ನನಾದ ಚೇತನನಿರುವನೆಂದು ಸಿದ್ಧವಾಗುತ್ತದೆ. ಅನು
ಅಂತಃಕರಣಕ್ಕೂ ಅಲ್ಲ. ದೇಹಶಬ್ದದಿಂದ, ದೇಹ, ಇಂದ್ರಿಯ, ಅಂತಃ
ಗಳ ಸಮೂಹವೇ ವಿವಕ್ಷಿತವೆಂದು ತಿಳಿ. ಬಾಲ್ಯಾದಿ ಅನೇಕ ದೇ
ಸಂಧಾನವು ಹೇಗೆ ಒಬ್ಬ ಜೀವನಿಗೇ ಬರುವುದೋ, ಹಾಗೆ ಅನೇಕ
ಗಳು ಸಹ ಒಬ್ಬ ಜೀವನಿಗೇ ಬರುವುವು. ಆದ್ದರಿಂದ ದೇಹನಾಶವು,
ನಾಶವಲ್ಲ. ಅದಕ್ಕಾಗಿ ದುಃಖಿಸುವುದೂ ಸರಿಯಲ್ಲ.

ಅರ್ಜುನ—ಒಬ್ಬ ಜೀವನಿಗೆ ಅನೇಕ ದೇಹಗಳು ಬರುವು
ಪೂರ್ವದೇಹಗಳ ಅನುಭವವೇಕೆ ಇರುವುದಿಲ್ಲ?

ಶ್ರೀಕೃಷ್ಣ—ಪೂರ್ವಾನುಭವವಿಲ್ಲೆಂದು ತಿಳಿಯಬೇಡ. ಬಾ
ಯಲ್ಲಾದ ಎಲ್ಲ ಅನುಭವಗಳೂ, ಮುಂದೆ ವೃದ್ಧಾಪ್ಯದಲ್ಲಿ

ಬರುವುವೇನು ? ಒಂದೇ ದೇಹದಿಂದಾದ ಎಷ್ಟೋ ಅನುಭವಗಳು ಮಾಸಿ ಹೋಗುತ್ತವೆ. ಆದರೆ ಸಂಸ್ಕಾರರೂಪದಿಂದ ಉಳಿದಿದ್ದು, ಸಮಯದಲ್ಲಿ, ಭಗವದಿಚ್ಛಾದಿಪ್ರಬಲಕಾರಣಗಳಿಂದ ಉದ್ಬೋಧಿತವಾಗುವುದುಂಟು. ಆದರೆ ನಾನೇ ಬಾಲ್ಯಾವಸ್ಥೆಯುಳ್ಳವನಾಗಿದ್ದೇನೆಂಬ ಸಾಮಾನ್ಯಾಕಾರದ ಅನುಸಂಧಾನವು ವೃದ್ಧಾಪ್ಯದಲ್ಲಿಯೂ ಇರುವುದು. ಆಗತಾನೆ ಹುಟ್ಟಿದ ಶಿಶುವಿಗೆ ತಾಯಿಯ ಮೊಲೆಯುಣ್ಣುವುದರಿಂದ ಹಸಿವಡಗಿ ಸುಖವಾಗುವುದೆಂಬ ಜ್ಞಾನವು ಹಿಂದಿನ ದೇಹಗಳಲ್ಲಾದ ಅನುಭವಮೂಲಕವಾದುದು. ಈ ಜೀವನಿಗೆ ಈ ದೇಹವಲ್ಲವೇ ಬೇರೆ ದೇಹಗಳು ಯಾವ ಕಾಲಕ್ಕೂ ಇಲ್ಲವೆಂದು ಸರ್ವಥಾ ಶಂಕಿಸಬೇಡ. ಚಾರ್ವಾಕನ ಕುತರ್ಕಗಳನ್ನು ವಿಚಾರಿಸುವನು ಧೀರನು. ಅವನೆಂದಿಗೂ ಹೀಗೆ ಮೋಹಪಡುವುದಿಲ್ಲ. (೧೩)

ಅರ್ಜುನ—ಕೃಷ್ಣ ! ನೀನು ಹೇಳಿದುದೆಲ್ಲ ಸತ್ಯವೆಂದು ಒಪ್ಪಿದರೂ ನನ್ನ ಶೋಕಕ್ಕೆ ಕಾರಣವಿದ್ದೇ ಇದೆ. ಜೀವಸ್ವರೂಪವು ಅನಾದಿನಿತ್ಯವಾದ್ದರಿಂದ ಜೀವನಾಶಕ್ಕಾಗಿ ದುಃಖಿಸುವುದಿಲ್ಲ. ದೇಹನಾಶವೇ ಆತ್ಮನಾಶವೆಂದು ತಿಳಿದೂ ದುಃಖಿಸುವುದಿಲ್ಲ. ಪ್ರತಿನಿಧಿರೂಪವಾದ ನವೀನ ದೇಹಾಂತರವು ದೊರೆಯುವುದರಿಂದ, ಎಂದಾದರೊಂದು ದಿನ ನಾಶವಾಗತಕ್ಕ ಈ ದೇಹವು ನಾಶಹೊಂದುವುದೆಂದೂ ದುಃಖಿಸುವುದಿಲ್ಲ. ಬಂಧುಜನರ ಮರಣದಿಂದ, ಸುಖಹಾನಿಯೂ, ದುಃಖಪ್ರಾಪ್ತಿಯೂ ಆಗುತ್ತವೆ. ಅವರ ದರ್ಶನ, ಸಂಭಾಷಣ, ಆಲಿಂಗನಾದಿಗಳಿಂದ ದೊರೆಯುವ ಸುಖವು ತಪ್ಪುವುದು. ಶಸ್ತ್ರಾಸ್ತ್ರಗಳ ಘಾತದಿಂದ ತುಂಡರಿಸಿದ ಅವರ ದೇಹದರ್ಶನಾದಿಗಳಿಂದ ದುಃಖಕ್ಕೆ ಎಡೆಯಾಗುತ್ತದೆ. ಏನು ಹೇಳುವಿ ?

ಶ್ರೀಕೃಷ್ಣ—ಹೇಳುವೆನು ಕೇಳು, ಅರ್ಜುನ! ಬಂಧುಮಿತ್ರರ ದರ್ಶನಾದಿಗಳಿಂದ ಸುಖವೂ, ಕತ್ತರಿಸಲ್ಪಟ್ಟ ಅವಯವಗಳುಳ್ಳ ದೇಹದರ್ಶನ, ರೋದನ, ಶ್ರವಣ ಮೊದಲಾದವುಗಳಿಂದ ದುಃಖವೂ ಉಂಟಾಗುವುದೆಂದು ತಿಳಿದಿರುವೆಯಲ್ಲವೇ ? ಸುಖದುಃಖಗಳಿಗೆ ಇವು ಕಾರಣವಲ್ಲ. ಸುಖದುಃಖಗಳ ಮುಖ್ಯ ಕಾರಣವನ್ನು ತೀಕ್ಷ್ಣವಾದ ವಿಮರ್ಶೆಯಿಂದ

ತಿಳಿಯಬೇಕು. ಚಕ್ಷುರಾದಿ ಇಂದ್ರಿಯಗಳಿಗೂ, ರೂಪ ಮೊದಲ
ವಿಷಯಗಳಿಗೂ ಸಂಬಂಧವಾಗುವಮಾತ್ರದಿಂದ ಸುಖದುಃಖಗಳಾಗು
ದಿಲ್ಲ. ವಿಷಯೇಂದ್ರಿಯಗಳ ಸಂಬಂಧದಿಂದ ಹುಟ್ಟುವ ಜ್ಞಾನವೇ ಸು
ದುಃಖಗಳಿಗೆ ಕಾರಣವಲ್ಲ. ವಿಷಯಗಳಲ್ಲಿ ಇದು ನನಗೆ ಇಷ್ಟ ವ
ರಾಗವೂ (ಸ್ನೇಹವೂ) ಇದು ಅನಿಷ್ಟವೆಂಬ ದ್ವೇಷವೂ ಸುಖದುಃಖಗ
ಕಾರಣವು. ರಾಗದ್ವೇಷ ಉಭಯಾತ್ಮಕವಾದುದು ಅಭಿಮಾನವು. ನಾ
ಉದಾಸೀನರಾದರೆ ವಿಷಯಗಳು ಸುಖವನ್ನಾಗಲಿ, ದುಃಖವನ್ನಾ
ಉಂಟುಮಾಡುವುದಿಲ್ಲ. ಉರಿಯುತ್ತಿರುವ ಮನೆಯನ್ನು ಕಂಡು ಮನೆ
ಯಜಮಾನನ ಮಿತ್ರನು ದುಃಖಿಸುವನು ; ದ್ವೇಷಿಯು ಹರ್ಷಿಸುವ
ಉದಾಸೀನನು ಸುಮ್ಮನೆ ಮುಂದೆ ಸಾಗುವನು. ಬಹು ಜನರ ಚ
ರಿಂದ್ರಿಯಕ್ಕೆ ಗೋಚರಿಸುವ ಈ ದೃಶ್ಯವು ವಿವಿಧವಾದ ಭಾವಗಳ
ಹುಟ್ಟಿಸುವುದಕ್ಕೆ ಅವರವರ ಅಭಿಮಾನವೇ ಕಾರಣವಲ್ಲವೇ? ಆದ್ದ
ಸುಖದುಃಖಗಳಿಗೆ ಮುಖ್ಯ ಕಾರಣವು ರಾಗದ್ವೇಷಗಳು. ಮಲಗಿ ನಿ
ವಾಗ ಎಲ್ಲ ಇಂದ್ರಿಯಗಳು ಉಪರಮಹೊಂದಿದ್ದರೂ ತ್ವಗಿಂದ್ರಿ
ಜಾಗ್ರತವಿರುವುದು. ಆದ್ದರಿಂದ ಮುಟ್ಟಿದೊಡನೆ ಮಲಗಿದವನು ಎ
ಗೊಳ್ಳುವನು. ಆದರೂ ನಿದ್ರೆಯಲ್ಲಿ ಹಂಸತೂಲಿಕದ ಸುಖವೂ, ಕ
ಕಾಠಿಣ್ಯದ ದುಃಖವೂ ಇಲ್ಲ. ಎಚ್ಚೆತ್ತಾಗ, ಅಭಿಮಾನವಿರುವುದ
ಶೀತೋಷ್ಣಗಳದ್ವಾರಾ ಸುಖದುಃಖಾನುಭವಗಳಾಗುತ್ತವೆ. ವಿಷಯೇಂ
ಗಳ ಸಂಬಂಧಗಳು ಬಂದು ಹೋಗತಕ್ಕವುಗಳು. ಏಕಪ್ರಕಾರವ
ಪ್ರವಾಹದಂತೆ ನಿತ್ಯವಾದವುಗಳೂ ಅಲ್ಲ. ಅಭಿಮಾನಪರಿತ್ಯಾಗದ
ವಿಷಯೇಂದ್ರಿಯಸನ್ನಿಕರ್ಷದಿಂದಾದ ಜ್ಞಾನವನ್ನು ಸುಖದುಃಖ
ಕಾರಣವಾಗದಂತೆ ಮಾಡಿಕೊಳ್ಳುವುದೇ ನಿನ್ನ ದುಃಖನಿವಾರ
ಪರಿಹಾರವು (೧೪)

ಅರ್ಜುನ—ಯುದ್ಧಮಾಡದಿದ್ದರೆ ದುಃಖಕ್ಕೆ ಅವಕಾಶವೇ
ದಿರಲು, ಯುದ್ಧದಲ್ಲಿ ತೊಡಗಿ, ಅಭಿಮಾನಪರಿತ್ಯಾಗದಿಂದ ದುಃಖ
ರಣೆಗಾಗಿ ಯತ್ನಿಸಲೇಕೆ?

ಶ್ರೀಕೃಷ್ಣ—ಅಭಿಮಾನತ್ಯಾಗಕ್ಕೆ ದುಃಖಾಭಾವವು ಸ್ವಯಂ ಫಲ ರೂಪವಾದರೂ, ಅದು ಪರಮಪುರುಷಾರ್ಥವಾದ ಮೋಕ್ಷಕ್ಕೇ ಕಾರಣ ವಾಗುವುದು. ಹೇ ಪುರುಷಶ್ರೇಷ್ಠ ! ಪಾರ್ಥ, ವಿಷಯೇಂದ್ರಿಯಸಂಬಂಧ ಗಳು ಯಾವ ಶರೀರಿಯನ್ನು ಬಾಧಿಸುವುದಿಲ್ಲವೊ ಆತನೇ ಸಮದುಃಖ ಸುಖಿಯು, ಆತನೇ ಧೀರನು, ಮೋಕ್ಷವನ್ನು ಪಡೆಯಲರ್ಹನು.

ಅರ್ಜುನ—ಸುಖವನ್ನೂ ದುಃಖವನ್ನೂ ಸಮಾನವಾಗಿ ತಿಳಿಯುವು ದೆಂದರೇನು ? ಅವೆರಡನ್ನೂ ಏಕಪ್ರಕಾರವಾಗಿ ತಿಳಿದರೆ ಭ್ರಮಿಷ್ಠನೆನಿಸ ಲಾರನೇ ?

ಶ್ರೀಕೃಷ್ಣ—ಸುಖವನ್ನು ದುಃಖವೆಂದಾಗಲಿ, ದುಃಖವನ್ನು ಸುಖ ವೆಂದಾಗಲಿ ಆ ಸಮದುಃಖಸುಖಿಯು ತಿಳಿಯುವುದಿಲ್ಲ. ದುಃಖವು ಹೇಗೆ ಅನಿತ್ಯವೋ, ತನ್ನ ಇಚ್ಛಾಪ್ರಯತ್ನಗಳಿಂದ ಬಂದುದಲ್ಲವೋ ಮತ್ತು ಶ್ರೇಯಸ್ಸಾಧನವಲ್ಲವೋ ಹಾಗೆಯೇ ಸುಖವೂ ಸಹ ಅನಿತ್ಯವೆಂದೂ, ತನ್ನ ಅಧೀನವಲ್ಲವೆಂದೂ ಮತ್ತು ಮೋಕ್ಷಸಾಧಕವಲ್ಲವೆಂದೂ ತಿಳಿಯುತ್ತಾನೆ. ಸುಖದುಃಖಗಳ ಕಾರ್ಯವಾದ ಹಿಗ್ಗುಕುಗ್ಗುಗಳೆಂಬ ಚಿತ್ತವಿಕಾರವುಂಟಾಗ ದಂತೆ ಯತ್ನಿಸುತ್ತಾನೆ. ವಿಷಯಸುಖವನ್ನು ದುಃಖದಂತೆ ಹೇಯವೆಂದೂ ತಿಳಿಯುತ್ತಾನೆ.

ಅರ್ಜುನ—ಗಾಢನಿದ್ರೆಯಲ್ಲಿರುವವನಿಗೆ ದೇಹಾಭಿಮಾನವಿಲ್ಲವಷ್ಟೆ ! ಅವನೂ ಸಮದುಃಖಸುಖಿಯೇ ? ಅಹುದಾದರೆ ಅವನಿಗೂ ಮೋಕ್ಷವು ಲಭಿಸಬೇಕು.

ಶ್ರೀಕೃಷ್ಣ—ನಿದ್ರೆಯಲ್ಲಿರುವವನಿಗೆ ಯತ್ನಪೂರ್ವಕವಾಗಿ ಸಾಧಿಸಲ್ಪಟ್ಟ ಅಭಿಮಾನತ್ಯಾಗವಿಲ್ಲ. ಜಾಗ್ರದವಸ್ಥೆಯಲ್ಲಿ ಸುಖದುಃಖಗಳ ಸಮತ್ವವನ್ನು ಸಾಧಿಸಿದವನು ಸಮದುಃಖಸುಖಿಯು; ಅವನೇ ಮುಕ್ತಿಗೆ ಅರ್ಹನಾಗು ವನು, ನಿದ್ರೆಮಾಡುವವನಲ್ಲ.

ಅರ್ಜುನ—ಸುಖದುಃಖಗಳಿಂದ ವ್ಯಥಿತನಾಗದ ಸ್ಥಿತಿಯನ್ನು ಪಡೆ ಯುವ ಮಾತ್ರದಿಂದ ಮೋಕ್ಷವು ಲಭಿಸುವುದೇ ?

ಶ್ರೀಕೃಷ್ಣ— ಸಮದುಃಖಸುಖಿತ್ವವು ಪರಂಪರೆಯಿಂದ ಮುಕ್ತಿ ಕಾರಣವಾಗುವ ಸಾಧನಗಳಲ್ಲಿ ಮುಖ್ಯವಾದುದು. ಅದರಿಂದ ಮ್ಯಾ ಮುಕ್ತಿಯು ದೊರೆಯದು. ಆದರೆ ಯಾವ ಅಧಿಕಾರಿ ಪುರುಷನು (ಗಂ ಗಲಿ, ಹೆಣ್ಣಾಗಲಿ) ಈ ಸಾಧನವನ್ನು ಗಳಿಸುವನೋ, ಆತನು ಕ್ರಮವಾ ತತ್ವಜ್ಞಾನ ನಿಶ್ಚಯವನ್ನು ಹೊಂದಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆ ವನು. ಆಗ ಅವನಿಗೆ ಮುಕ್ತಿಯು ಕಟ್ಟಿಟ್ಟ ಗಂಟಾಗುವುದು. (೧೫)

ಅರ್ಜುನ—ಬಂಧುನಾಶರೂಪವಾದ ಈ ಯುದ್ಧವು ಪರಲೋ ದುಃಖಕ್ಕೆ ಕಾರಣವಾದ ಪಾಪವನ್ನು ತಂದುಕೊಡುವುದಿಲ್ಲವೇ? ಪಾರತ್ರಿಕದುಃಖದ ಪರಿಹಾರ ಹೇಗೆ? ಅಂತೂ ನನ್ನ ಶೋಕಕ್ಕೆ ಕಾ ವಿದ್ದೇ ಇದೆ!

ಶ್ರೀಕೃಷ್ಣ—ಅರ್ಜುನ! ದುಷ್ಕರ್ಮದಿಂದ ಸುಖವು ಎಂದೂ ಲ ಸದು. ಅದರಂತೆ ಸತ್ಕರ್ಮದಿಂದ ಎಂದೂ ದುಃಖವು ದೊರೆಯುವುದಿ ಈ ಯುದ್ಧವಾದರೋ ನಾರಾಯಣದ್ವೇಷಿಗಳ ಹಾಗೂ ಅವರ ಅನುಬ ಗಳ ನಿಗ್ರಹರೂಪವಾದುದು; ಭಗವತ್ಪ್ರೀತಿಕರವಾದ ಸತ್ಕರ್ಮವು. ರಿಂದ ಪಾಪವಾಗಲಿ ತನ್ನಿಮಿತ್ತವಾದ ಪಾರತ್ರಿಕದುಃಖವಾಗಲಿ ಸರ್ವ ಇಲ್ಲ. ಸತ್ಕರ್ಮದಿಂದ ದುಃಖವಾಗಲಿ, ದುಷ್ಕರ್ಮದಿಂದ ಸುಖವಾ ಇಲ್ಲವೆಂಬ ನಿರ್ಣಾಯಕಪರಂಪರೋಪದೇಶರೂಪಸಂಪ್ರದಾಯವು ತತ್ವಜ್ಞ ಗಳಿಗೆ ಸಹ ಮಾನ್ಯವಿದೆ.

ಅರ್ಜುನ—ಹೇ ಸ್ವಾಮಿ! ಜೀವರು ಅನಾದಿನಿತ್ಯರೆಂದು ಮೊದಲು ಹೇಳಿದೆಯಲ್ಲವೇ? ಹಾಗೆ ಒಪ್ಪಿದರೂ ನನ್ನ ಶೋಕಕಾರ ತೊಲಗದೆಂದು ವಿಜ್ಞಾಪಿಸಿಕೊಂಡು, ಆ ಮುಂದಿನ ಶಂಕೆಗಳಿಗೆ ಉ ಗಳನ್ನು ಪಡೆದೆನು. ಆದರೆ ಜೀವಸ್ವರೂಪ ನಿತ್ಯತ್ವ ವಿಷಯದಲ್ಲಿ ಇ ಕೆಲವು ಸಂಶಯಗಳು ಬಾಧಿಸುತ್ತಿವೆ. ವಿಜ್ಞಾಪಿಸಿಕೊಳ್ಳಲೇ?

ಶ್ರೀಕೃಷ್ಣ—ಅವಶ್ಯವಾಗಿ ಕೇಳು, ಅರ್ಜುನ! ಸಂಶಯಗ ಎಂದೂ ಮುಚ್ಚಿಡಬಾರದು.

ಅರ್ಜುನ—ಜೀವರು ಅನಾದಿನಿತ್ಯರೆಂದು ಸಿದ್ಧಮಾಡಲು, ಅನಾದಿ ನಿತ್ಯವಾದ ಬೇರೊಂದು ವಸ್ತುವನ್ನು ದೃಷ್ಟಾಂತವಾಗಿ ಉದಹರಿಸಲು ಬರುವುದೇ? ಸದೃಶವಸ್ತುವಿನ ಉದಾಹರಣೆಯೇ ದೊರೆಯುದಿರಲು ನಿತ್ಯತ್ವವು ಸಿದ್ಧವಾಗಲಾರದಷ್ಟೆ?

ಶ್ರೀಕೃಷ್ಣ—ಅನಾದಿನಿತ್ಯನಾದ ನನ್ನಂತೆಯೇ ನೀನು ಮೊದಲಾದ ಎಲ್ಲ ಜೀವರು ನಿತ್ಯರೆಂದು ಹೇಳಿದೆನಲ್ಲವೇ? ಈ ವಿಷಯದಲ್ಲಿ ನಾನೇ ದೃಷ್ಟಾಂತನು.

ಅರ್ಜುನ—ಹೇ ದೇವ! ಯದ್ಯಪಿ, ದೇಹಯೋಗವಿಯೋಗರಹಿತವಾದ, ಪ್ರಾಕೃತಸಂಬಂಧವಿಲ್ಲದ ನಿತ್ಯಮುಕ್ತಸ್ವರೂಪನೆಂದು ನಿನ್ನ ಸ್ವರೂಪವನ್ನು ನಿರೂಪಿಸಿರುವಿ. ಇದನ್ನೊಪ್ಪದವರಿಗೆ ದೃಷ್ಟಾಂತವಿಲ್ಲವಷ್ಟೆ!

ಶ್ರೀಕೃಷ್ಣ—ಅದೇಕೆ, ಅರ್ಜುನ! ದೃಷ್ಟಾಂತಗಳಿವೆ. ಜಗತ್ಕಾರಣವಾದ ಪ್ರಕೃತಿಯೂ ಈ ವಿಚಾರದಲ್ಲಿ ದೃಷ್ಟಾಂತವಾಗುತ್ತದೆ. ಕೃಷ್ಣರೂಪದ ನನ್ನನ್ನು ಪರಬ್ರಹ್ಮನೆಂದು ಅಂಗೀಕರಿಸದವರು, ಶಾಸ್ತ್ರಸಿದ್ಧನಾದ ಪರಬ್ರಹ್ಮನನ್ನೂ ದೃಷ್ಟಾಂತವಾಗಿಟ್ಟುಕೊಳ್ಳಬಹುದು. ಇದನ್ನು ಸ್ವಲ್ಪ ವಿವರಿಸುವೆನು, ಕೇಳು. ಹುಟ್ಟುವ ಒಂದು ವಸ್ತುವನ್ನು ಭಾವಿಸಿಕೊಂಡರೆ, ಅದು ಹುಟ್ಟುವ ಮೊದಲು, 'ಅದು ಇರಲಿಲ್ಲ'ವೆಂಬ ಅದರ ಅಭಾವವಿತ್ತಷ್ಟೆ. ಆ ವಸ್ತು ನಾಶವಾದಮೇಲೆ, 'ಅದು ಇಲ್ಲ'ವೆಂಬ ಅದರ ಅಭಾವವು ಇರುವುದಷ್ಟೆ. ಈ ಎರಡುವಿಧ ಅಭಾವಗಳು ಪ್ರಾಗಭಾವ, ಪ್ರಧ್ವಂಸಾಭಾವಗಳೆಂದು ಕರೆಯಲ್ಪಡುತ್ತವೆ. ಜಗತ್ಕಾರಣವಾದ ಪ್ರಕೃತಿಗೆ ಈ ಅಭಾವಗಳಿಲ್ಲ. ಪ್ರಕೃತಿಯು ಜಗತ್ತಿಗೆ ಪರಿಣಾಮಕಾರಣವು, ಎಂದರೆ ಗಡಿಗೆಗೆ ಮಣ್ಣಿನಂತೆ ಉಪಾದಾನಕಾರಣವು. ಪ್ರಕೃತಿಯು 'ಅಸತ್' ಎಂದೂ ಕರೆಯಲ್ಪಡುತ್ತದೆ. 'ಸತ್' ಎಂದು ಕರೆಯಲ್ಪಡುವ ಪರಬ್ರಹ್ಮನಿಗೂ ಪ್ರಾಗಭಾವಪ್ರಧ್ವಂಸಾಭಾವಗಳಿಲ್ಲ. ಪರಬ್ರಹ್ಮನು, ಕುಂಬಾರನಂತೆ ಜಗತ್ತಿಗೆ ನಿಮಿತ್ತಕಾರಣನು. ಪ್ರಕೃತಿಯು, ಪ್ರಳಯಕಾಲದಲ್ಲಿ ಸೂಕ್ಷ್ಮರೂಪದಿಂದ ಇದ್ದು ಸೃಷ್ಟಿಕಾಲ ಬರಲು, ವಿಕಾರಗೊಳಿಸಲ್ಪಟ್ಟು, ಈ ಜಗತ್ತಿನ ನಿರ್ಮಾಣದಲ್ಲಿ ಉಪಾದಾನಕಾರಣವಾಗುತ್ತದೆ. ಸಾಂಖ್ಯರೇ

ಮೊದಲಾದವರೂ ಪ್ರಕೃತಿಪರಬ್ರಹ್ಮರನ್ನು ಅನಾದಿನಿತ್ಯರೆಂದು ಒ...
ವರು. ಅಲ್ಲದೇ ಈ ವಿಷಯದಲ್ಲಿ ತತ್ವಜ್ಞಾನಿಗಳ ಪರಂಪರೋಪದೇ...
ರೂಪವಾದ ಶ್ರೀಪ್ಮಪ್ರಮಾಣವೂ ಇದೆ. (೧೬)

ಅರ್ಜುನ— ಇವೆರಡೇ ಅನಾದಿನಿತ್ಯವಸ್ತುಗಳೋ ಹೇಗೆ?

ಶ್ರೀಕೃಷ್ಣ—ಅಲ್ಲ; ಅನೇಕ ವಸ್ತುಗಳಿವೆ. ಅನಾದಿ ನಿತ್ಯವಸ್ತುಗ...
ಇಲ್ಲವೆಂಬ ಭ್ರಮೆಯು ನಿನಗಿಲ್ಲವಷ್ಟೆ! ಚೇತನಭಿನ್ನವಾದ ಅನೇಕ ವ...
ಗಳನ್ನು ಚೇತನನಿತ್ಯತ್ವಸಾಧನೆಗಾಗಿ ದೃಷ್ಟಾಂತವಾಗಿ ಉದಹರಿಸಬಹು...
ಇದು ನಿತ್ಯ, ಅದು ನಿತ್ಯವೆಂದು ಪ್ರತ್ಯೇಕವಾಗಿ ಹೇಳುವುದರಿಂದೇನ...
ಅರ್ಜುನ! ಯಾವುದು ಎಲ್ಲೆಡೆಯಲ್ಲಿರುವುದೋ (ಸರ್ವದೇಶವ್ಯಾಪ್ತವೋ...
ಅದು ನಿತ್ಯವೆಂದು ತಿಳಿ. ಪ್ರತ್ಯಕ್ಷಾದಿಪ್ರಮಾಣದಿಂದ ಸಿದ್ಧವಾದ ...
ಪ್ರಪಂಚವು ನಿರ್ವಿಕಾರವಾದ ಆಕಾಶದಿಂದ ವ್ಯಾಪ್ತವಾಗಿದೆ. ಹಾಗ...
ಅಕಾರಾದಿ ಸರ್ವವರ್ಣಗಳೂ ಸರ್ವತ್ರ ವ್ಯಾಪ್ತವಾಗಿವೆ. ಆಕಾಶವ...
ಗಳೂ ಅನಾದಿನಿತ್ಯವಸ್ತುಗಳೇ. ಸ್ವಭಾವದಿಂದ ನಿತ್ಯವಾದರೂ ಪ್ರ...
ವಾದ ಕಾರಣಾಂತರಗಳಿಂದ ನಾಶಹೊಂದಬಹುದೆಂದು ಶಂಕಿಸಬೆ...
ವ್ಯಾಪ್ತವಾದ ಈ ನಿತ್ಯವಸ್ತುಗಳನ್ನು ನಾಶಗೊಳಿಸಲು ಯಾ...
ಸಮರ್ಥರಲ್ಲ. (೧೭)

ಅರ್ಜುನ—ಜೀವನು ಪರಮಾತ್ಮನ ಪ್ರತಿಬಿಂಬನೆಂದು ವೇದ...
ಹೇಳಲ್ಪಟ್ಟಿದೆ. ಪ್ರತಿಬಿಂಬವೆಂಬುದು ಕನ್ನಡಿಯಲ್ಲಿ ತೋರುವ
ಮುಖದಂತೆ, ಉಪಾಧಿಯಿಂದಾದುದು. (ಕನ್ನಡಿಯಂತೆ ವಸ್ತು
ಪ್ರತಿಬಿಂಬಿಸುವ ಪದಾರ್ಥವು ಉಪಾಧಿಯು). ಜೀವನೆಂಬ ಪ್ರತಿಬಿ...
ಈ ದೇಹವೇ ಉಪಾಧಿಯು. ಬೇರೆ ಯಾವುದೂ ಇಲ್ಲ. ದೇಹವಾ...
ನಾಶವುಳ್ಳದ್ದು. ದೇಹನಾಶವೇ ಉಪಾಧಿನಾಶವೆಂದು ಪ್ರಾಪ್ತವಾ...
ಉಪಾಧಿನಾಶದಿಂದ ಪ್ರತಿಬಿಂಬವೂ ನಷ್ಟವಾಗುವುದು. ಅಲ್ಲದೇ
ವೆಂಬ ಬಿಂಬವು ಕನ್ನಡಿಯ ಮುಂದಿಲ್ಲದಿದ್ದರೆ, ಪ್ರತಿಮುಖವೇ ಇರು...
ಆದ್ದರಿಂದ ಬಿಂಬ ಮತ್ತು ಉಪಾಧಿಗಳ ಸನ್ನಿಧಿಯು ...

ಮುಂದೊಂದು ಇರುವಿಕೆ) ತಪ್ಪಿದರೂ ಪ್ರತಿಬಿಂಬವು ನಷ್ಟವಾಗುವುದು. ಪ್ರತಿಬಿಂಬನೆಂಬ ಜೀವನು ನಿತ್ಯನಾಗಲು ಹೇಗೆ ಸಾಧ್ಯ ?

ಶ್ರೀಕೃಷ್ಣ—ಭರತಕುಲದೀಪ! ಪಾರ್ಥ! ಕಣ್ಣಿಗೆ ಕಾಣುವ ಈ ಸ್ಥೂಲ ಭೌತಿಕದೇಹವೇ ಉಪಾಧಿಯಲ್ಲ. ಈ ಜೀವನಿಗೆ ಇಂತಹ ಅನೇಕ ದೇಹಗಳು ಮೇಲಿಂದಮೇಲೆ ಬಂದು ಹೋಗುತ್ತವೆ. ಜೀವನಿಗೆ ನಿತ್ಯವಾದ ಸ್ವರೂಪದೇಹವಿದೆ. ಅದು ಅವನ ಸ್ವರೂಪವೇ. ಸ್ವರೂಪ ಬೇರೆ, ಆ ದೇಹ ಬೇರೆ ಎಂದು ತಿಳಿಯಬೇಡ. ಜೀವಸ್ವರೂಪವೇ ಉಪಾಧಿಯು. ಆದ್ದರಿಂದ ಉಪಾಧಿಗೆ ನಾಶವಿಲ್ಲ. ಬಿಂಬನಾದ ಪರಮಾತ್ಮನೂ ನಿತ್ಯನು, ಸರ್ವದಾ ಸರ್ವಗತನು. ಹೀಗಿರಲು ಬಿಂಬ ಮತ್ತು ಉಪಾಧಿಗಳ ಸಂಬಂಧವು ತಪ್ಪುವುದು ಹೇಗೆ? ಆದ್ದರಿಂದ ಸ್ವರೂಪದೇಹವೆಂಬ ನಿತ್ಯೋಪಾಧಿಯಲ್ಲಿ ಪ್ರತಿಬಿಂಬಿತನಾದ ಜೀವನು ನಿತ್ಯನೇ. ಸ್ವರೂಪಕ್ಕೂ ನಾಶವನ್ನು ಹೇಳಿದರೆ, ದೇಹನಾಶದಿಂದ ಆತ್ಮನಾಶವೆಂದೇ ಪ್ರಾಪ್ತವಾಗಿ, ದೇಹಾಂತರಗಳನ್ನು ಹೊಂದುವುದಾಗಲಿ ಮುಕ್ತ್ಯರ್ಥವಾಗಿ ಸಾಧನಗಳನ್ನು ಕೈಗೊಳ್ಳುವುದಾಗಲಿ ಅರ್ಥವಿಲ್ಲದ ವ್ಯರ್ಥಮಾತುಗಳಾಗುವುವು. ಅರ್ಜುನ! ನಿನ್ನ ಸಂಶಯಗಳು ದೂರಾದವೇ? ಜೀವರು ಅನಾದಿನಿತ್ಯರೆಂದು ತಿಳಿ. ಎದ್ದು ನಿಲ್ಲು, ಸತ್ಕರ್ಮರೂಪವಾದ ಯುದ್ಧದಲ್ಲಿ ತೊಡಗು, ಈಶ್ವರನ ಸಂಪ್ರೀತಿಯನ್ನು ಗಳಿಸು. (೧೮)

ಅರ್ಜುನ—ಪ್ರತಿಬಿಂಬವಾದ ಜೀವಸ್ವರೂಪವೇ ಉಪಾಧಿಯೆಂಬುದನ್ನು ಗ್ರಹಿಸುವುದು ಹೇಗೆ? ಪ್ರತಿಬಿಂಬವು ಉಪಾಧಿಜನ್ಯವಲ್ಲವೇ? ಉಪಾಧಿಯಿಲ್ಲದೇ ಪ್ರತಿಬಿಂಬವುಂಟೇ?

ಶ್ರೀಕೃಷ್ಣ—ಮಳೆಬರುವ ಮುನ್ನ ಮೂಡುವ ಇಂದ್ರಚಾಪವನ್ನು (ಕಾಮನಬಿಲ್ಲು) ನೋಡಿರುವೆಯಲ್ಲವೇ? ಅದು ಸೂರ್ಯತೇಜಸ್ಸಿನ ಪ್ರತಿಬಿಂಬವು. ಸೂರ್ಯತೇಜಸ್ಸೇ ಬಿಂಬವಾದರೂ, ಬಿಂಬದಿಂದ ಭಿನ್ನವಾದ ಉಪಾಧಿ ಇಲ್ಲದೇ ಪ್ರತಿಬಿಂಬವಿರಬಹುದೆಂಬಲ್ಲಿ ದೃಷ್ಟಾಂತವಾಗುವುದು. ಹೀಗೆಯೇ ಪ್ರತಿಬಿಂಬದಿಂದ ಭಿನ್ನವಾದ ಉಪಾಧಿಯಿಲ್ಲದೇ ಪ್ರತಿಬಿಂಬ ಇರುವುದು ಶಕ್ಯವೆಂದು ತಿಳಿ. ಸೋಪಾಧಿಕವೆಂದೂ, ನಿರುಪಾಧಿಕವೆಂದೂ

ಪ್ರತಿಬಿಂಬಗಳು ಎರಡು ವಿಧ. ದೇಹದ ನೆರಳು ಸಿರುಪಾಧಿಕ ಪ್ರತಿಬಿಂ
ದೃಷ್ಟಾಂತವು. ಭಿನ್ನವಾದ ಉಪಾಧಿಯಲ್ಲದ ಪ್ರತಿಬಿಂಬವು ನಿರುಪಾ
ಪ್ರತಿಬಿಂಬವು. ಪ್ರಕೃತ, ಜೀವಸ್ವರೂಪವೇ ಪ್ರತಿಬಿಂಬವು;
ಉಪಾಧಿಯು. ಪರಮಾತ್ಮನು ಸರ್ವತ್ರ ವ್ಯಾಪ್ತನು, ಜೀವರು ಅಣು
ಹೀಗಿರಲು ಪರಮಾತ್ಮನ ನಿತ್ಯಸನ್ನಿಧಿಗೆ ಅಪೋಹವಿಲ್ಲ. ಆ
ಜೀವರು ಪರಮಾತ್ಮನ ನಿತ್ಯಪ್ರತಿಬಿಂಬರು.

ಅರ್ಜುನ—ಜೀವ ಪರಮಾತ್ಮರಿಬ್ಬರೂ ನಿತ್ಯರಾದರೆ, ಈಶ್ವ
ಪೂಜ್ಯನು ಮತ್ತು ಜೀವರೇಕೆ ಪೂಜಕರು?

ಶ್ರೀಕೃಷ್ಣ—ಇದೇನು ಅರ್ಜುನ! ಹೀಗೆ ಶಂಕಿಸುವಿ. ಉಭಯ
ನಿತ್ಯರಾದಮಾತ್ರಕ್ಕೆ ಪೂಜ್ಯ ಪೂಜಕ ಭಾವವಿರುವುದು ಅಸಂಭಾವಿತ
ಜೀವರು ನಿತ್ಯರೆಂಬುದರಿಂದ ಅವರಿಗೆ ಕಾಲತಃ ವ್ಯಾಪ್ತಿಯನ್ನು ಮಾ
ಹೇಳಿದಂತಾಯಿತು. ದೇಶತಃ ಮತ್ತು ಗುಣತಃ ವ್ಯಾಪ್ತಿಯು ಈಶ್ವರನಿ
ಜೀವರಿಗಿಲ್ಲ. ಜೀವರು ಅಣುಸ್ವರೂಪರು ಮತ್ತು ಜ್ಞಾನಾನಂದಾದಿ
ಗಳಿಂದ ಅಲ್ಪರು. ಪ್ರತಿಬಿಂಬವು ಬಿಂಬಸದೃಶ ಮಾತ್ರ ; ಮತ್ತು ಬಿಂ
ಧೀನವು. ಬಿಂಬವು ಚೇಷ್ಟಿಸಿದರೆ ಪ್ರತಿಬಿಂಬವು ಚೇಷ್ಟಿಸುವುದು.
ಬಿಂಬವು ಸರ್ವದಾ ಅಸ್ವತಂತ್ರವಲ್ಲವೇ! ಉಭಯರೂ ನಿತ್ಯರೆಂಬುದು
ಆದರೆ ಅವರ ನಿತ್ಯತ್ವದಲ್ಲಿ ವಿಶೇಷವಿದೆ. ಜೀವರ ನಿತ್ಯತ್ವವೂ ಈ
ಧೀನವು. ಅನಿತ್ಯತ್ವವು ಉಭಯರಲ್ಲಿಲ್ಲ. ಆದರೂ ಜೀವರು ನಾಶವುಳ್ಳ
ಈಶ್ವರನು ಸರ್ವಥಾ ಅವಿನಾಶಿಯು.

ಅರ್ಜುನ—ನಿತ್ಯರಾದ ಜೀವರಲ್ಲಿ ಅನಿತ್ಯತ್ವವಿಲ್ಲದಿದ್ದರೂ, ಜ
ನಾಶವುಳ್ಳವರೆಂದರೇನು ?

ಶ್ರೀಕೃಷ್ಣ—ಅನಿತ್ಯತ್ವ, ದೇಹಹಾನಿ, ದುಃಖಪ್ರಾಪ್ತಿ
ಅಪೂರ್ಣತೆಗಳೆಂದು ನಾಶವು ನಾಲ್ಕು ಪ್ರಕಾರವಾದುದು. ಇ
ಯಾವುದೊಂದು ಬಗೆಯ ನಾಶವೂ ಇಲ್ಲದವನು ಈಶ್ವರನು.
ಅನಿತ್ಯತ್ವರೂಪನಾಶಮಾತ್ರವಿಲ್ಲದವನು, ದೇಹನಾಶಾದಿ ಇತರ
ವಿಧ ನಾಶಗಳುಳ್ಳವನು. ಹೀಗೆ ಜೀವೇಶ್ವರರು ಅವಿನಾಶಿಗಳಾದರೂ

ವಿಶೇಷವಿದೆ. ಬಿಂಬನಾದ ಈಶ್ವರನು ಗುಣಪೂರ್ಣನು, ಸ್ವತಂತ್ರನು ಮತ್ತು ಅವಿನಾಶಿಯು. ಪ್ರತಿಬಿಂಬನಾದ ಜೀವನು, ನಿತ್ಯನಾದರೂ ಅಲ್ಪನು ಮತ್ತು ಅಸ್ವತಂತ್ರನು. ಆದ್ದರಿಂದ ಬಿಂಬನು ಪೂಜ್ಯನು, ಪ್ರತಿಬಿಂಬನು ಪೂಜಕನು, ಇದರಲ್ಲೇನು ಸಂಶಯ!

ಅರ್ಜುನ—ಜೀವನು ನಿತ್ಯನಾದರೂ ಪರತಂತ್ರನೆಂಬ ಮೊದಲಾದ ಈ ನಿನ್ನ ಉಪದೇಶವು ಲೋಕರೂಢಿಯನ್ನು ವಿರೋಧಿಸುವುದು. 'ಇವನು ಕೊಂದನು', 'ಇವನು ಕೊಲ್ಲಲ್ಪಟ್ಟನು' ಇತ್ಯಾದಿ ವ್ಯವಹಾರವು ಜೀವನಿಗೆ ಸ್ವಾತಂತ್ರ್ಯವನ್ನೂ, ಅನಿತ್ಯತ್ವವನ್ನೂ ಸೂಚಿಸುವುದಿಲ್ಲವೇ?

ಶ್ರೀಕೃಷ್ಣ—ಈ ಲೋಕರೂಢಿಯು ಭ್ರಾಂತಿಮೂಲಕವಾದುದು. ಯಾರು, ಒಬ್ಬನು ಇನ್ನೊಬ್ಬನನ್ನು ಸ್ವತಂತ್ರವಾಗಿ ಕೊಲ್ಲುವನೆಂದು ತಿಳಿಯುವನೋ, ಮತ್ತು ಯಾರು, ಒಬ್ಬ ಜೀವನು ಮತ್ತೊಬ್ಬನಿಂದ ಕೊಲ್ಲಲ್ಪಡುವನೆಂದು ತಿಳಿಯುವನೋ, ಈ ಉಭಯರೂ ಅಜ್ಞಾನಿಗಳು. ಕೊಲ್ಲುವುದೆಂಬ ಮೊದಲಾದ ಕ್ರಿಯೆಗಳಲ್ಲಿ ಜೀವನು ಸ್ವತಂತ್ರನೆಂದು ತಿಳಿಯುವುದೂ ಮತ್ತು ಜೀವನಿಗೆ ಅನಿತ್ಯತ್ವವನ್ನು ತಿಳಿಯುವುದೂ ಭ್ರಾಂತಿಯೇ ಸರಿ. ಅನಾದಿನಿತ್ಯನಾದ ಜೀವನಿಗೆ ಸ್ವರೂಪನಾಶವೆಲ್ಲಿದೆ? ಬಿಂಬಾಧೀನವಾದ ಚೇಷ್ಟೆಯುಳ್ಳ ಪ್ರತಿಬಿಂಬನಾದ ಜೀವನು ಸ್ವತಂತ್ರ ವ್ಯಾಪಾರವುಳ್ಳವನಾಗುವುದು ಹೇಗೆ?

ಅರ್ಜುನ—ಸ್ವತಂತ್ರನಾದ ಈಶ್ವರನು ಜೀವನನ್ನು ಕೊಲ್ಲುವನೆಂದು ತಿಳಿಯಬಹುದೇ?

ಶ್ರೀಕೃಷ್ಣ—ಅರ್ಜುನ! ಈಶ್ವರನು ಸರ್ವಶಕ್ತನಾದರೂ ಜೀವಸ್ವರೂಪವನ್ನು ನಾಶಗೊಳಿಸುವ ಸಂಕಲ್ಪವನ್ನು ಎಂದೂ ಮಾಡನು. ಜೀವರನ್ನು ನಾಶಗೊಳಿಸುವುದರಿಂದ ಪರಮಾತ್ಮನಿಗೆ ಯಾವ ಪ್ರಯೋಜನವೂ ಇಲ್ಲ; ನಿತ್ಯರಾಗಿ ಬಾಳಿಕೊಂಡಿರಲು ಬಿಡುವುದರಿಂದ ಯಾವ ಕೊರತೆಯೂ ಇಲ್ಲ. ಆತನು ಎಲ್ಲ ನಿತ್ಯವಸ್ತುಗಳ ನಿತ್ಯತ್ವರಕ್ಷಕನು. ಕೊಲ್ಲುವದೆಂದರೆ ಜೀವ-ಚೇತನನ್ನು ದೇಹದಿಂದ ಹೊರಗೆ ಹಾಕುವುದೆಂದರ್ಥ. ಈ ಅರ್ಥದಲ್ಲಿ ಸಹ ಒಬ್ಬನು ಮತ್ತೊಬ್ಬನನ್ನು ಕೊಲ್ಲುವುದಿಲ್ಲ. ಸ್ವತಂತ್ರನಾದ ಈಶ್ವರನೇ

ಕೊಳ್ಳುವನು. (೧೯) ಜೀವೇಶ್ವರರ ಸ್ವರೂಪಗಳಿಗೆ ಉತ್ಪತ್ತಿವಿನಾಶ
ಈಶ್ವರನು ದೇಹದಿಂದಲೂ ಉತ್ಪತ್ತಿರಹಿತನು; ಆದ್ದರಿಂದ ಸ್ವತಂತ್ರ
ಜೀವನು ದೇಹದಿಂದ ಹುಟ್ಟುಸಾವುಗಳುಳ್ಳವನು; ಆದ್ದರಿಂದ ಅಸ್ವತಂತ್ರ
ಜೀವನು ಸ್ವರೂಪದಿಂದ (ಜೀವಸ್ವರೂಪವು) ಹುಟ್ಟುವುದಿಲ್ಲ,
ಹೊಂದುವುದಿಲ್ಲ. ಸ್ವರೂಪದಿಂದಲೇ ಇದ್ದು ಯಾವುದಾದರೊಂದು
ಯಿಂದ ಹುಟ್ಟಿದನೆಂಬ ವ್ಯವಹಾರಕ್ಕೆ ಒಳಗಾಗುವನೂ ಅಲ್ಲ. ಅಜ
(ಜನ್ಮರಹಿತನೂ), ನಿತ್ಯನೂ ಆದ ಪರಮಾತ್ಮನ ಪ್ರತಿಬಿಂಬನಾದ್ದ
ನಿತ್ಯವಾದ ಬಿಂಬ ಸನ್ನಿಧಾನದಿಂದ ಶಾಶ್ವತನೆನಿಸುವನು. ದೇಹ
ದೇಹಾಂತರಗಳನ್ನು ಹೊಂದುತ್ತಿದ್ದರೂ ದೇಹನಾಶದಿಂದ ನಾಶವಾಗತಕ್ಕ
ನಲ್ಲ. ಈಶ್ವರನಾದರೋ ದೇಹಯೋಗ ವಿಯೋಗಗಳಿಂದ ಸರ್ವ
ರಹಿತನು; ನಿತ್ಯದೇಹವುಳ್ಳವನು. ಆದರೂ ರಾಮ, ಕೃಷ್ಣಾದಿರೂಪಗಳಿ
ಹುಟ್ಟಿದನೆಂಬ ವ್ಯವಹಾರಕ್ಕೊಳಗಾಗುವನು.

ಅರ್ಜುನ— ನಿತ್ಯದೇಹವುಳ್ಳವನಾದ ಸ್ವತಂತ್ರ ಈಶ್ವರನು ಮನುಷ
ಹುಟ್ಟುವುದು ಹೇಗೆ? ದಶರಥಕೌಸಲ್ಯೆಯರಿಂದ ರಾಮನಾಗಿ ಹುಟ್ಟಿ
ವಸುದೇವದೇವಕಿಯರಿಂದ ಹುಟ್ಟಿರುವ ಪರಮಾತ್ಮನೇ ನೀ
ಹೇಳುವರು. ನಿನ್ನ ಹುಟ್ಟು ಸಾವುಗಳನ್ನು ಹೇಗೆಂದು ತಿಳಿಯಲಿ?

ಶ್ರೀಕೃಷ್ಣ—ಅರ್ಜುನ! ನನ್ನ ಹುಟ್ಟು ಸಾವುಗಳು ವಿಲಕ್ಷಣವಾ
ಈ ನನ್ನ ದೇಹವು ಸ್ತ್ರೀ ಪುರುಷರ ಮಲದಿಂದ ಹುಟ್ಟಿದ್ದೆಂದು ತಿಳಿಯ
ರಾಮ, ಮತ್ಸ್ಯ, ಕೂರ್ಮಾದಿ ನನ್ನ ಎಲ್ಲ ರೂಪಗಳೂ ಹೀ
ಈ ರೂಪಗಳು ನನ್ನ ಸ್ವರೂಪದಿಂದ ಭಿನ್ನವಾದವುಗಳಲ್ಲ.
ಜ್ಞಾನಾನಂದಾತ್ಮಕವಾದವುಗಳೇ. ಇತರ ಭೌತಿಕಶರೀರಗಳಂತೆ ತೋ
ಮಾತ್ರದಿಂದ ಜಡಶರೀರಗಳೆಂದು ಭ್ರಮಿಸಬೇಡ. ನನಗೆ ಜಡಸಂ
ಇಲ್ಲ, ನಾನು ನಿತ್ಯವಾದ ಅನಂತರೂಪಗಳುಳ್ಳವನು. ನನ್ನ ಇಚ್ಛಾ
ವಾಗಿ ರಾಮ, ಕೃಷ್ಣಾದಿ ರೂಪಗಳನ್ನು ದಶರ ವಸ
ದೇವಕಿ ಮೊದಲಾದವರನ್ನು ನಿಮಿತ್ತಮಾಡಿಕೊ.

ಇದೇ ನನ್ನ ಜನನವು. ಪಾಮರದೃಷ್ಟಿಗೆ ಗೋಚರವಾಗದಂತೆ ಮಾಡುವುದೇ ಮರಣವು. ನನಗೆಲ್ಲಿಯ ಜಡದೇಹಯೋಗ ವಿಯೋಗಗಳು! (೨೦)

ಅರ್ಜುನ—'ನಾನು ಕೊಲ್ಲುತ್ತೇನೆ' ಎಂಬ ಮುಂತಾದ ಕ್ರಿಯೆಗಳಲ್ಲಿ ತೋರುವ ಸ್ವಾತಂತ್ರ್ಯಭ್ರಮಕ್ಕೂ, 'ಅವನು ಕೊಲ್ಲಲ್ಪಡುತ್ತಾನೆ' ಎಂಬ ಮೊದಲಾದ ಜ್ಞಾನದಲ್ಲಿ ತೋರುವ ಅನಿತ್ಯತ್ವಭ್ರಮಕ್ಕೂ ಪರಿಹಾರವುಂಟೇ?

ಶ್ರೀಕೃಷ್ಣ-ಜೀವನಿತ್ಯತ್ವ ಮತ್ತು ಪರಮಾತ್ಮನ ಸರ್ವಸ್ವಾತಂತ್ರ್ಯ ವಿಷಯಕವಾದ ಜ್ಞಾನನಿಶ್ಚಯವನ್ನು ದೊರಕಿಸಿಕೊಳ್ಳುವುದೇ ಮುಖ್ಯ ಪರಿಹಾರೋಪಾಯವು. ಈ ವಿಧಜ್ಞಾನವುಳ್ಳವನು, 'ನಾನು ಹೊಡೆಯುತ್ತೇನೆ, ನಾನು ಕೊಲ್ಲುತ್ತೇನೆ' ಇತ್ಯಾದಿ ಅನುಸಂಧಾನವನ್ನು ಎಂದೂ ಹೊಂದುವುದಿಲ್ಲ. ತನ್ನಲ್ಲಿಲ್ಲದ ಸ್ವಾತಂತ್ರ್ಯವನ್ನು ಆರೋಪಿಸಿಕೊಳುವುದಿಲ್ಲ. (೨೧)

ಅರ್ಜುನ—ಜೀವನು ದೇಹದಿಂದ ದೇಹಾಂತರಗಳನ್ನು ಹೊಂದುವನೆಂದು ಹೇಳಿದೆಯಲ್ಲವೇ? ಕೌಮಾರಾದಿ ವಿವಿಧಅವಸ್ಥೆಗಳಲ್ಲಿ ದೇಹ ಮತ್ತು ಆತ್ಮವೆಂಬ ವಿವೇಕವು ಯದ್ಯಪಿ ಅನುಭವಕ್ಕೆ ಬರುವದಾದರೂ, ದೇಹವು ನಾಶವುಳ್ಳದ್ದು, ಆತ್ಮನು ಅವಿನಾಶಿಯು ಎಂಬ ಅವಿವೇಕವು ಕೌಮಾರಾದಿ ದೇಹ ದೃಷ್ಟಾಂತದಿಂದ ಸ್ಫುಟವಾಗಿ ಅನುಭವಾರೂಢವಾಗುವುದಿಲ್ಲ. ಮತ್ತು ಈಶ್ವರನು ದೇಹದಿಂದಲೂ ನಿತ್ಯನಾದ್ದರಿಂದ, ಈಶ್ವರನ ವಿಷಯದಲ್ಲಿ ಶೋಕಕ್ಕೆ ಕಾರಣವಿಲ್ಲದಿರಬಹುದು. ಜೀವನಾದರೋ ಕೌಮಾರಾದಿ ದೇಹಗಳಂತೆ ಪ್ರತಿನಿಧಿರೂಪವಾಗಿ ಅನ್ಯದೇಹಗಳನ್ನು ಹೊಂದಿದರೂ, ಲೋಕಪ್ರಸಿದ್ಧವಾದ ಜನನಮರಣಗಳುಳ್ಳವನು. ಆದ್ದರಿಂದ ಜೀವವಿಷಯದಲ್ಲಿ ಶೋಕಕ್ಕೆ ಕಾರಣವಿದ್ದೇ ಇದೆ. ಈ ಸಂಶಯಗಳಿಗೆ ಪರಿಹಾರವೇನು, ಪ್ರಭೋ!

ಶ್ರೀಕೃಷ್ಣ—ಕೌಮಾರಾದಿ ಅವಸ್ಥಾವಿಶಿಷ್ಟ ದೇಹಗಳು ಬಂದು ಹೋಗುವುದು ದುಃಖಕ್ಕೆ ಕಾರಣವಲ್ಲವೆಂದು ಅಂಗೀಕರಿಸಿದರೆ, ದೇಹಯೋಗ, ವಿಯೋಗರೂಪವಾದ ಜನನಮರಣಗಳೂ ದುಃಖಕಾರಣಗಳಲ್ಲವೆಂದು ಸಿದ್ಧವಾಗುತ್ತದೆ. ಅನ್ಯದೃಷ್ಟಾಂತದಿಂದಲೂ ಸುಸ್ಪಷ್ಟವಾಗಿ

ಇದನ್ನೇ ಗ್ರಹಿಸಬಹುದು. ಜೀರ್ಣವಾದ ಬಟ್ಟೆಗಳನ್ನು ಬಿಟ್ಟು ಮನುಷ್ಯ ಹೊಸಬಟ್ಟೆಗಳನ್ನು ಪಡೆದಾಗ ದುಃಖಿಸುವನೇ? ಹೀಗೆಯೇ ಜೀರ್ಣ ಗಳನ್ನು ತೊರೆದು ಹೊಸದೇಹಗಳನ್ನು ಜೀವನು ಹೊಂದುತ್ತಾ ಅದಕ್ಕಾಗಿ ದುಃಖಿಸಲೇಕೆ? ಹೊಸಬಟ್ಟೆಗಳು ಸದಾ ಹೊಸದಾಗಿ ಇರಬೇಕೆಂದು ಎಲ್ಲರೂ ಇಚ್ಛಿಸುವರು. ಆದರೂ ಅವು ತಮ್ಮ ಸ್ವಭಾವಾ ಸಾರವಾಗಿ, ನಮ್ಮ ಇಚ್ಛೆಯಿಲ್ಲದೇ ಜೀರ್ಣವಾಗುತ್ತವೆ. ಹಾಗೆ ದೇಹಗಳೂ ಜೀರ್ಣವಾಗುತ್ತವೆ. ಮುಪ್ಪು ಬರಬೇಡವೆಂದರೆ ಬಿಡುವು ಈ ವಿಷಯದಲ್ಲಿ ಜೀವನು ಹೇಗೆ ಅಸ್ವತಂತ್ರನೋ ಹಾಗೆ ಸರ್ವವಿಷ ದಲ್ಲಿ ಅಸ್ವತಂತ್ರನೆಂದು ತಿಳಿ. ಸ್ವತಂತ್ರನಾದ ಈಶ್ವರನ ನಿಯಮಾನುಸಾ ವಾಗಿ, ಜೀವನಿಗೆ ದೇಹಯೋಗ ವಿಯೋಗಗಳು ಉಂಟಾಗುತ್ತವೆಂದು ಅಸ್ವತಂತ್ರನಾದ ಜೀವನು ಇವುಗಳಿಗೆ ಎಷ್ಟು ಮಾತ್ರವೂ ಕಾರಣನಲ್ಲೆಂ ತಿಳಿದರೆ, ಶೋಕಕ್ಕೆ ಕಾರಣವೇ ಉಳಿಯುವುದಿಲ್ಲ. (೨೨)

ಅರ್ಜುನ—ಜೀವನಿತ್ಯತ್ವವು ನೀನು ಹೇಳಿದಂತೆ ಸ್ವಾಭಾವಿಕವಾದ ದಕ್ಷಪ್ರಜಾಪತಿಗೆ ಪ್ರಾಪ್ತವಾದ ಶಿರಚ್ಛೇದದಂತೆ ಶಸ್ತ್ರಾಸ್ತ್ರಗಳೇ ಮೊದಲಾ ಪ್ರಬಲ ಕಾರಣಗಳಿಂದ ನಾಶವುಂಟಾಗಬಹುದೇ?

ಶ್ರೀಕೃಷ್ಣ—ಅರ್ಜುನ! ಜೀವಸ್ವರೂಪವನ್ನು ಯಾವ ಶಸ್ತ್ರಾಸ್ತ್ರಗ ಕತ್ತರಿಸುವುದಿಲ್ಲ; ಅಗ್ನಿಯು ಸುಡುವುದಿಲ್ಲ; ನೀರು ಮೃದುಗೊ ಶಿಥಿಲಪಡಿಸುವುದಿಲ್ಲ; ವಾಯು ಒಣಗಿಸುವುದಿಲ್ಲ. (೨೩) ಕಾಲಾಂತರ ಕಾರಣಾಂತರಗಳಿಂದ ನಾಶವು ಸಂಭವಿಸಬಹುದೆಂದೂ ಶಂಕಿಸಬೇ ಭೇದಾದಿಗಳಿಂದ ನಾಶಹೊಂದುವ ಯೋಗ್ಯತೆಯೇ (ಅರ್ಹತೆಯೆ ಜೀವಸ್ವರೂಪಕ್ಕಿಲ್ಲ. ಜೀವಸ್ವರೂಪವು ಸ್ವಭಾವವಾಗಿಯೇ ಅಚ್ಛೇದ್ಯ ಅದಾಹ್ಯವು, ಅಕ್ಲೇದ್ಯವು (ತೋದು ಶಿಥಿಲವಾಗದ್ದು), ಅಶೋಷ್ಯ ಆದುದೆಂದು ತಿಳಿ.

ಅರ್ಜುನ—ಜೀವಸ್ವರೂಪಕ್ಕೆ ನಾಶಾನರ್ಹವಾದ ಈ ಸ್ವಭಾವವಿ ಕಾರಣವೇನು?

ಶ್ರೀಕೃಷ್ಣ—ಈಶ್ವರನು ದೇಹದಿಂದಲೂ ನಿತ್ಯನೆಂದು ಹೇಳಿದೆನಲ್ಲವೇ? ಈಶ್ವರನ ದೇಹ ಮತ್ತು ಸ್ವರೂಪಗಳಿಗೆ ಭೇದವಿಲ್ಲ; ದೇಹಸ್ವರೂಪಗಳಿಗೆ ಅತ್ಯಂತ ಅಭೇದವನ್ನು ತಿಳಿ. ಈಶ್ವರಸ್ವರೂಪವೂ ಅಚ್ಛೇದ್ಯ, ಅದಾಹ್ಯ, ಅಕ್ಲೇದ್ಯ, ಅಶೋಷ್ಯವಾದುದು. ಸರ್ವತ್ರ ವ್ಯಾಪ್ತನಾದ ಈಶ್ವರನು ಜಗದ್ವಸ್ತುಗಳಂತೆ ಚಲನವುಳ್ಳವನಲ್ಲ ಮತ್ತು ವಿಕಾರ ಹೊಂದತಕ್ಕವನಲ್ಲ. ಆತನು ವಿಚಿತ್ರ ಶಕ್ತಿಯುತನೆಂದು ವೇದಗಳೂ ಹೊಗಳುತ್ತವೆ. ಹೀಗೆ ಅನಂತ ಮಹಿಮೋಪೇತನಾದ ಈಶ್ವರನನ್ನು ಸದಾ ಹೊಂದಿಕೊಂಡಿರುವ ಪ್ರತಿಬಿಂಬನಾದ್ದರಿಂದ, ಜೀವನು ನಾಶಕ್ಕೆ ಅನರ್ಹವಾದ ಸ್ವಭಾವವುಳ್ಳವನಾಗಿರುವನು.

ಅರ್ಜುನ—ಜೀವಸ್ವರೂಪವೂ, ಈಶ್ವರಸ್ವರೂಪದಂತೆ, ನಿತ್ಯ-ನಿರ್ವಿಕಾರವಾದುದೇ!

ಶ್ರೀಕೃಷ್ಣ—ಅಹುದು, ಅರ್ಜುನ! ಜೀವಸ್ವರೂಪವೂ ನಿರ್ವಿಕಾರವಾದುದೇ! ಆದ್ದರಿಂದಲೇ ಜೀವಸ್ವರೂಪಧರ್ಮಗಳು ಎಂದೂ ವ್ಯತ್ಯಾಸ ಹೊಂದುವುದಿಲ್ಲ. ಈಶ್ವರಾಧೀನತ್ವವೂ ನಿತ್ಯವಾದುದು. ವರಾದಿನಿಮಿತ್ತಗಳಿಂದ ಸಹ ಜೀವನ ಅಸ್ವಾತಂತ್ರ್ಯಕ್ಕೆ ಹಾನಿಯಿಲ್ಲ. ಈ ಕಾರಣದಿಂದಲೇ ವೇದಾದಿ ಶಾಸ್ತ್ರೋಕ್ತವಿಧಿನಿಷೇಧಗಳಿಗೆ ಜೀವನು ಪಾತ್ರನು, ಶ್ರೀಹರಿಯ ಪೂಜಕನು. (೨೪)

ಅರ್ಜುನ—ಅಣುರೂಪದ ಜೀವನಿಗೆ ಹೀಗೆ ಆಧಾರನೆಂದು ಹೇಳಲ್ಪಡುವ ಈಶ್ವರನು ಸರ್ವತ್ರ ಇರುವನಾದರೆ, ಅದೇಕೆ ಕಾಣನು?

ಶ್ರೀಕೃಷ್ಣ—ಈಶ್ವರನು ಯಾರಿಗೂ ಕಾಣದಂತೆ ಅವ್ಯಕ್ತನಾಗಿರುವನು; ಅದು ಅವನ ಇಚ್ಛೆಯು. ಆದರೂ ಪ್ರಸನ್ನನಾದರೆ ಭಕ್ತನಿಗೆ ಪ್ರತ್ಯಕ್ಷನಾಗುವನು. ನಾಶರಹಿತನಾದ ಸರ್ವತ್ರ ವ್ಯಾಪ್ತನಾದ ದೇಹವುಳ್ಳವನಾದರೂ ಸ್ವತಂತ್ರನಾದ ಈಶ್ವರನು ಅಚಿಂತ್ಯವಾದ ಅಪರಿಮಿತ ಶಕ್ತಿಯುಳ್ಳವನಾದ್ದರಿಂದ ಕಾಣಿಸದಂತಿರುವನು. ಈತನ ಶಕ್ತಿಯು ಯಾವಕಾರಣದಿಂದಲೂ ಎಂದೂ ನಷ್ಟವಾಗತಕ್ಕದ್ದಲ್ಲ ಮತ್ತು ಈ ಶಕ್ತಿಗೆ ಯಾವ ಪ್ರತಿಬಂಧಕವೂ ಇಲ್ಲ. ಶ್ರುತಿಪ್ರಮಾಣಬಲದಿಂದ ಪರಮಾತ್ಮನ ಸ್ವರೂಪವು ಹೀಗೆಂದೇ

ಸಿದ್ಧವಾಗುತ್ತದೆ. ಅರ್ಜುನ! ಮೂಲರೂಪವೋ ಅಥವಾ ಯಾವು ದೊಂದು ಅದ್ಭುತಅವತಾರರೂಪವೋ ಈವಿಧ ಶಕ್ತಿಯುಳ್ಳ ತಿಳಿಯಬೇಡ. ಅನಂತರೂಪಗಳುಳ್ಳ ಪರಮಾತ್ಮನ ಪ್ರತಿಯೊಂ ರೂಪವೂ ಇಂತಹುದೇ ಸರಿ. ಹೀಗೆ ಸ್ವತಂತ್ರನೂ, ಅಚಿಂತ್ಯಶಕ್ತಿಯುಳ್ಳ ನಿತ್ಯಜ್ಞಾನಾನಂದಸ್ವರೂಪನೂ ಆದ ಪರಮಾತ್ಮನು ತನ್ನ ಪ್ರತಿಬಿಂಬ ನಿತ್ಯಾಧೀನನೂ ಆದ ಜೀವಾತ್ಮನ ದುಃಖವನ್ನು ಪರಿಹರಿಸಿ ನಿತ್ಯಾನ ಸ್ಥಿತಿಯನ್ನು ಹೊಂದಿಸುವನು. ಆದ್ದರಿಂದ ದುಃಖಿಸಬೇಡ. ಯುದ್ಧರೂ ವಾದ ಸ್ವಧರ್ಮವನ್ನಾಚರಿಸಿ ಆತನಿಗರ್ಪಿಸು. ಪರಿಶುದ್ಧಚಿತ್ತನಾ ಬ್ರಹ್ಮಜ್ಞಾನಲಾಭದಿಂದ ನಿತ್ಯಾನಂದವನ್ನು ಹೊಂದು. (೨೫)

ಅರ್ಜುನ—ಹೇ ಸ್ವಾಮಿ! ಜೀವಾತ್ಮರು ನಿತ್ಯರಾದರೂ ಜನನಮ ಗಳುಳ್ಳವರಲ್ಲವೇ! ಯುದ್ಧದಿಂದ ಮರಣವು ತಪ್ಪದೇ ಸಂಭವಿಸುವು ನಮ್ಮ ಜನರು ಅದರಿಂದ ದುಃಖಿಸುವರು ; ಆಕಾರಣದಿಂದ ನನಗೂ ದುಃ ವಾಗುವುದು. ಅಲ್ಲದೇ ನಮ್ಮವರ ದುಃಖವನ್ನು ಪರಿಹರಿಸುವುದು ನ ಕರ್ತವ್ಯವಲ್ಲವೇ?

ಶ್ರೀಕೃಷ್ಣ—ಜೀವೇಶ್ವರ ಸ್ವರೂಪ ವಿಷಯಕ ಅಜ್ಞಾನವೇ ದುಃಖ ಕಾರಣವು. ಅಜ್ಞಾನಿಗಳು ದುಃಖಿಸುವರೆಂಬುದು ಜ್ಞಾನಿಗಳ ದುಃಖ ಕಾರಣವಾಗಬಹುದೇ? ಅಜ್ಞಾನಿಗಳು ದುಃಖಿಸುವರೆಂಬ ಕಾರಣದಿಂ ಸ್ವಧರ್ಮಾಚರಣೆಯಿಂದ ಹಿಮ್ಮೆಟ್ಟುವುದು ಸರಿಯೇ? ಯೋಚಿಸು ಸ್ವತಂತ್ರನಾದ ಪರಮಾತ್ಮನನ್ನುಳಿದು ಅನ್ಯರು ಅನ್ಯರಿಗೆ ದುಃಖವನ್ನ ತಂದುಕೊಡುವುದಾಗಲಿ, ಬರಲಿರುವ ಅಥವಾ ಪ್ರಾಪ್ತವಾದ ದುಃಖವನ್ನ ಪರಿಹರಿಸುವುದಾಗಲಿ ಶಕ್ಯವೇ? ಈ ನಿನ್ನ ವಾದವು, ಇಲ್ಲದ ಸ್ವಾತಂತ್ರ್ಯ ವನ್ನು ಜೀವರಲ್ಲಿ ಆರೋಪಿಸಿ, ಪ್ರವೃತ್ತವಾದುದಲ್ಲವೇ! ಜೀವನು ನಿಯ ವಾದ ಜನನಮರಣಗಳುಳ್ಳವನೆಂದು ತಿಳಿದರೂ, ನೀನು ದುಃಖಿಸಬಾರದು (೨೬)

ಅರ್ಜುನ—ಜನನಮರಣಗಳು ತಪ್ಪದೇ ಸಂಭವಿಸುತ್ತಿದ್ದರೂ ದುಃಖಿ ಲಾಗದೇ? ಅದೇಕೆ, ಕೃಷ್ಣ!

ಶ್ರೀಕೃಷ್ಣ—ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಹಾಗೆಯೇ ಸತ್ತವನಿಗೆ ಹುಟ್ಟೂ ತಪ್ಪಿದ್ದಲ್ಲ. ಮುಕ್ತಿಯವರೆಗೆ ತಪ್ಪದೇ ಜನನ ಮರಣಗಳು ಸಂಭವಿಸುತ್ತಲೇ ಇರುವುವು. ಹೇಗೂ ತಪ್ಪಿಸಲಾಗದ ಈ ವಿಷಯದಲ್ಲಿ ದುಃಖಿಸುವುದು ವ್ಯರ್ಥವು (೨೭).

ಅರ್ಜುನ—ಹೇ ಮುಕುಂದ! ನಿಯತವಾಗಿ ಪ್ರಾಪ್ತವಾಗುವ ಈ ಜನನ ಮರಣಗಳ ಸ್ವರೂಪವನ್ನು ವಿವರಿಸು.

ಶ್ರೀಕೃಷ್ಣ—ಪರಿದೃಶ್ಯಮಾನವಾದ ದೇಹಾದಿ ಸಕಲ ಜಡವಸ್ತುಗಳ ಉತ್ಪತ್ತಿಗೆ ಪ್ರಕೃತಿಯೇ ಮೂಲಕಾರಣವು. ಪ್ರಕೃತಿಯು ಅತಿಸೂಕ್ಷ್ಮವು ಮತ್ತು ಅವ್ಯಕ್ತವು. ಅದು ಅವ್ಯಕ್ತ ತತ್ವವೆಂದೂ ಕರೆಯಲ್ಪಡುವುದು. ಈ ಪ್ರಕೃತಿಯು ತ್ರಿಗುಣಾತ್ಮಕವಾದುದು. ಸತ್ವ, ರಜಸ್ಸು, ತಮಸ್ಸುಗಳೆಂಬುವೇ ಈ ಮೂರು ಗುಣಗಳು. ತ್ರಿಗುಣಾತ್ಮಕ ಪ್ರಕೃತಿಯು ಈಶ್ವರೇಚ್ಛೆಯಿಂದ ವಿಕಾರಗೊಳ್ಳಲು ಮಹತ್, ಅಹಂಕಾರ, ಮನಸ್ಸು, ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳು, ಹಸ್ತಾದಿ ಪಂಚ ಕರ್ಮೇಂದ್ರಿಯಗಳು, ಶಬ್ದಾದಿ ಪಂಚ ವಿಷಯಗಳು, ಆಕಾಶಾದಿ ಪಂಚಮಹಾಭೂತಗಳು ಉದ್ಭವಿಸುತ್ತವೆ. ಇವುಗಳಿಂದಾದುದು ಜೀವಾತ್ಮರ ಸ್ಥೂಲದೇಹ. ಜನನಮರಣಗಳ ಮಧ್ಯಕಾಲದಲ್ಲಿ, ಪ್ರಕೃತಿವಿಕಾರಗಳಾದ ಸ್ಥೂಲದೇಹಗಳು, ಸರ್ವರ ದೃಷ್ಟಿಗೆ ಸ್ಪಷ್ಟವಾಗಿ ತೋರುವ ದೆಶೆಯಲ್ಲಿರುವುವು. ಮಣ್ಣಿನ ಮಡಕೆಯು ನಾಶ ಹೊಂದಲು ತನಗೆ ಕಾರಣವಾದ ಮಣ್ಣಿನ ಸ್ವಭಾವವನ್ನು ಹೊಂದುವಂತೆ, ಪ್ರಾಣಿದೇಹಗಳು ಮರಣದಿಂದ ತಮಗೆ ಕಾರಣವಾದ ಮೂಲಪ್ರಕೃತಿಯಲ್ಲಿ ಲಯಹೊಂದುತ್ತವೆ. ದೇಹಗ್ಗತಪಂಚಮಹಾಭೂತಗಳು ಹೊರಗಿನ ಮಹಾಭೂತಗಳಲ್ಲಿಯೂ, ಇಂದ್ರಿಯಾದಿಗಳ ಅಹಂಕಾರ ತತ್ವದ ದ್ವಾರಾ, ಮೂಲಪ್ರಕೃತಿ (ಅವ್ಯಕ್ತ) ತತ್ವದಲ್ಲಿಯೂ ಲಯಹೊಂದುತ್ತವೆ. ಈ ಅವ್ಯಕ್ತತತ್ವವು ಕಾರ್ಯರೂಪದಿಂದ ವ್ಯಕ್ತವಾಗುವುದೇ ಉತ್ಪತ್ತಿಯು. ಪುನಃ ಅವ್ಯಕ್ತದಲ್ಲಿ ಕಾರ್ಯಗಳು (ದೇಹಗಳು) ಲಯಹೊಂದುವುದೇ ವಿನಾಶವು. ಜೀವಾತ್ಮನಿಗೆ ಸ್ಥೂಲದೇಹದ ಸಂಬಂಧವಾಗುವುದೇ ಜನನವು; ಅದರ ವಿಯೋಗವೇ (ಸಂಬಂಧತಪ್ಪುವುದೇ) ಮರಣವು. ಈ ದೇಹ

ಯೋಗ ವಿಯೋಗಗಳು ಜೀವಾತ್ಮರ ವಶವಲ್ಲ. ಅಸ್ವತಂತ್ರರಾದ ಜೀವ
ರಿಗೆ ಮುಕ್ತಿಪರ್ಯಂತವೂ ಜನನಮರಣಗಳು ತಪ್ಪಿದ್ದಲ್ಲ. ಇದಕ್ಕೆ
ದುಃಖಿಸಬಾರದು ಮತ್ತು ಜೀವರು ಸ್ವತಂತ್ರರೆಂಬ ಬುದ್ಧಿಯನ್ನು ಸಹ
ಹೊಂದಬಾರದು. ತಿಳಿಯಿತೇ ? (೨೮)

ಅರ್ಜುನ—ಪರಮಾತ್ಮನೊಬ್ಬನೇ ಸ್ವತಂತ್ರನೇ ? ಪರಮಾತ್ಮನಲ್ಲ
ಬೇರೆ ಯಾರಲ್ಲಿಯೂ ಸ್ವಾತಂತ್ರ್ಯ ಬುದ್ಧಿಯನ್ನು ತಾಳಲಾಗದೇ ?

ಶ್ರೀಕೃಷ್ಣ—ಜ್ಞಾನೇಚ್ಛಾಕ್ರಿಯಾಶಕ್ತಿಗಳು ಜೀವಸ್ವರೂಪದ ಸ್ವಭಾವ
ಗಳು. ಜೀವರು ಜಡವಿಲಕ್ಷಣರು. ಆದರೂ ಜಡದಂತೆ ಅಸ್ವತಂತ್ರರ
ಈಶ್ವರಶಕ್ತಿ ಸಹಾಯದಿಂದಲೇ ಕಾರ್ಯಸಮರ್ಥರಾಗಿರುವರು. ಸ್ವತಂತ್ರನ
ಅಚಿಂತ್ಯಶಕ್ತಿಯುತನೂ ಆದ ಈಶ್ವರನು ಸರ್ವಗತನಾಗಿರಲು ಬೇರೊಂದು
ವಸ್ತುವು ಸ್ವತಂತ್ರವೆಂದು ತಿಳಿಯುವುದು ಕೇವಲ ಭ್ರಮೆಯೇ ಸರಿ
ಈಶ್ವರಸ್ವರೂಪವನ್ನು ವಿಪರೀತವಾಗಿ ಗ್ರಹಿಸುವ ಸ್ವಭಾವದ ಅಜ್ಞಾನಿಗಳು
ಬಹಳವಾಗಿರುವರು. ಸಾಧು ಸ್ವಭಾವದ ಜೀವರು, ಪರಮಾತ್ಮನನ್ನು
ಹೇಗೆ ತಿಳಿಯುವರು, ಹೇಳುವರು, ಮತ್ತು ಕೇಳುವರೆಂಬುದನ್ನು ವಿವರಿ
ವೆನು, ಕೇಳು. ಯಾವನೊಬ್ಬ ಸುಜ್ಞಾನಿಯು, ಸ್ವತಂತ್ರನು ಹೇಗಿರುವನೋ
ಹಾಗೆ ಇರುವವನನ್ನಾಗಿ, ಈಶ್ವರನನ್ನು ಕಾಣುತ್ತಾನೆ. ಗಗನವು (ಆಕಾಶವು
ಗಗನಾಕಾರವೇ ಎಂಬಂತೆ ಸ್ವತಂತ್ರನನ್ನಾಗಿಯೇ ಕಾಣುತ್ತಾನೆ. ಈಶ್ವರ
ಸದೃಶವಾದ ಅನ್ಯ ಸ್ವತಂತ್ರ ವಸ್ತುವಿಲ್ಲೆಂದು ಹೇಳುತ್ತಾನೆ. ಸಾಗರ
ಸಾಗರವೇ ಉಪಮಾನವು ; ಅನ್ಯ ದೃಷ್ಟಾಂತವನ್ನು ಹೇಳಲಿಕ್ಕಿಲ್ಲ. ನೋ
ದವನಂತೆ ಹೇಳುವವನೂ ಸಹ ಈಶ್ವರನೇ ಸ್ವತಂತ್ರನೆಂದು ಶಾಸ್ತ್ರಜ್ಞಾನ
ಬಲದಿಂದ ಯಥಾರ್ಥವಾಗಿ ತಿಳಿದು ಹೇಳುತ್ತಾನೆ. ಈಶ್ವರಸ್ವರೂಪವನ್ನು
ಕೇಳುವ ಸಾಧುಜೀವಿಯೂ ಈಶ್ವರನೇ ಸ್ವತಂತ್ರನೆಂದು ಕೇಳುತ್ತಾ
ರಾಮರಾವಣರ ಯುದ್ಧವು ಈಗ ನೋಡಲಿಕ್ಕಿಲ್ಲ. ಆದರೆ ಆ ಯುದ್ಧವನ್ನು
ಶ್ರವಣಮಾಡುವವನು, ಅದನ್ನು ರಾಮರಾವಣರ ಯುದ್ಧದಂ
ಅನುಪಮವೆಂದೇ ಕೇಳುತ್ತಾನೆ. ಸ್ವಾತಂತ್ರ್ಯಾದಿ ಗುಣಗಳಿಂದ ಅತ್ಯದ್ಭು
ನಾದ ಈಶ್ವರನನ್ನು, ನೋಡಿದವನೂ, ಹೇಳುವವನೂ, ಕೇಳುವವನ

ಪೂರ್ಣವಾಗಿ ನೋಡಲಿಲ್ಲ, ಹೇಳಲಿಲ್ಲ ಮತ್ತು ಕೇಳಲಿಲ್ಲವೆಂದೇ ತಿಳಿ. ಅರ್ಜುನ! ಹೀಗಿರುವ ಈಶ್ವರನ ಆಶ್ಚರ್ಯ ಸ್ವರೂಪವನ್ನು ತಿಳಿದಮೇಲೂ ಅನ್ಯರು ಸ್ವತಂತ್ರರೆಂದು ಶಂಕಿಸಲು ಅವಕಾಶವೆಲ್ಲಿದೆ! (೨೯).

ಈಶ್ವರನ ಪ್ರತಿಬಿಂಬನಾದ ಜೀವನೂ ಒಂದು ದೃಷ್ಟಿಯಿಂದ ಹೀಗೆಯೇ ಆಶ್ಚರ್ಯನು. ಈಶ್ವರಸದೃಶಲಕ್ಷಣಗಳುಳ್ಳವನು; ಈಶ್ವರನಂತೆ ಜನನಾದಿ ದೋಷರಹಿತ ಸ್ವರೂಪವುಳ್ಳವನು; ಈಶ್ವರಾಧೀನನು. ಜೀವಸ್ವರೂಪವನ್ನು ಹೀಗೆಂದು ನೋಡುವ, ಹೇಳುವ ಮತ್ತು ಕೇಳುವವನೂ ದುರ್ಲಭನು. 'ನಾನು' ಎಂಬ ಅನುಭವರೂಪವಾದ ಸಾಮಾನ್ಯ ಜೀವಜ್ಞಾನವು ಪ್ರತಿಯೊಬ್ಬನಿಗೂ ಇರುವುದು. ಆದರೂ, ಜೀವಸ್ವರೂಪವನ್ನು ಚೆನ್ನಾಗಿ ಕಂಡು ತಿಳಿದ ಜ್ಞಾನಿಯೂ ದುರ್ಲಭನೇ! ಹೀಗಿರಲು ಈಶ್ವರನ ಸಾಮರ್ಥ್ಯಾತಿಶಯಗಳನ್ನು ತಿಳಿದವನು ದುರ್ಲಭನೆಂದು ಹೇಳಬೇಕೇ?

ಅರ್ಜುನ—ಜೀವರೆಲ್ಲರೂ ಅನಾದಿನಿತ್ಯ ಸ್ವರೂಪವುಳ್ಳವರೆಂದು ಮೊಟ್ಟಮೊದಲಿಗೆ ನೀನೇ ಉಪದೇಶಿಸಿರುವಿ. ಈ ನಿತ್ಯತ್ವವು ಸ್ವಾಭಾವಿಕವಾದ್ದರಿಂದ ಈಶಾಧೀನವಲ್ಲ. ಹೀಗಿರಲು ಸರ್ವವೂ ಈಶಾಧೀನವೆಂದೂ ಆದ್ದರಿಂದ ಪರಮಾತ್ಮನು ಸರ್ವಸ್ವತಂತ್ರನೆಂದೂ ಹೇಳುವುದು ಅಯುಕ್ತವಲ್ಲವೇ?

ಶ್ರೀಕೃಷ್ಣ—ಅರ್ಜುನ! ಸ್ವಾಭಾವಿಕವಾದ ಜೀವನಿತ್ಯತ್ವವೂ ಈಶಾಧೀನವೇ. ಎಲ್ಲ ಜೀವರ ಬಿಂಬನು ಪರಮಾತ್ಮನೆಂದು ಹೇಳಿರುವೆನಲ್ಲವೇ? ಮತ್ತು ವಸ್ತುಸ್ವಭಾವವನ್ನು ರಕ್ಷಿಸುವುದೇ ಪರಮಾತ್ಮನ ಸಂಕಲ್ಪವು. ಪರಮಾತ್ಮನು ಜೀವರ ನಿತ್ಯತ್ವರಕ್ಷಕನಾಗಿರುವುದರಿಂದ ಜೀವರು ನಿತ್ಯರು. ಮತ್ತು ಆಕಾರಣದಿಂದಲೇ ಅವಧ್ಯರು. ಇಷ್ಟುಮಾತ್ರವಲ್ಲ; ಜೀವರಿಗೆ ಪ್ರಾಪ್ತವಾಗುವ ಸ್ವರೂಪಭಿನ್ನವಾದ ಸ್ಥೂಲ, ಸೂಕ್ಷ್ಮ ದೇಹಗಳಲ್ಲಿ ಸಹ ಪರಮಾತ್ಮನೇ ರಕ್ಷಕನಾಗಿರುವನು. ಅವುಗಳನ್ನು ಸಹ ಯಾರೂ ಸ್ವತಂತ್ರವಾಗಿ ನಾಶಗೊಳಿಸಲಾರರು. ಹೀಗೆ ಸರ್ವಜೀವರ ಸ್ಥೂಲ, ಸೂಕ್ಷ್ಮದೇಹಗಳಲ್ಲಿಯೂ ಮತ್ತು ಲಿಂಗದೇಹಗಳಲ್ಲಿಯೂ ಪರಮಾತ್ಮನು

ರಕ್ಷಕನಾಗಿ ನೆಲೆಸಿರುವುದರಿಂದಲೇ ಎಲ್ಲ ಜೀವರೂ ನಿತ್ಯರು ಮತ್ತು ಅವಧ್ಯರು. ಹೇ ಪಾರ್ಥ! ಹೀಗೆ ಪರಮಾತ್ಮನ ಸ್ವಾತಂತ್ರ್ಯವನ್ನೂ ಸಾಮರ್ಥ್ಯವನ್ನೂ ತಿಳಿದರೆ ಯಾರನ್ನೂ ಕುರಿತು ದುಃಖಿಸಲು ಕಾರಣವೇ ಇಲ್ಲ. (೩೦)

ಅರ್ಜುನ—ಜೀವಾತ್ಮರು ನಾಶರಹಿತವಾದ ನಿತ್ಯಸ್ವರೂಪವುಳ್ಳವರೆಂಬ ಮಾತ್ರದಿಂದ ದುಃಖಿಸಬೇಡವೆಂದು ಹೇಳುವೆಯಾ? ಈ ಘೋರವಾದ ಯುದ್ಧಕರ್ಮದಿಂದ ಪರಲೋಕ ಸುಖಹೇತುವಾದ ಧರ್ಮವು (ಪುಣ್ಯವು) ಸಾಧಿಸಲ್ಪಡಬಹುದೇ? ಈಶ್ವರಾಧೀನನಾದ ಜೀವನು, ಸ್ವತಂತ್ರನಾದ ಪರಮಾತ್ಮನ ಪ್ರೇರಣೆಯಿಂದಲೇ ಸಕಲ ಕರ್ಮಗಳಲ್ಲಿ ಪ್ರವೃತ್ತನಾಗುವನೆಂದು ಅಂಗೀಕರಿಸುವ ಮಾತ್ರದಿಂದ, ಯುದ್ಧಕರ್ಮದಿಂದ ಅಧರ್ಮವು (ಪಾಪವು) ಅವನಿಗೆ ಘಟಿಸದಿರಬಹುದೇ?

ಶ್ರೀಕೃಷ್ಣ—ಅರ್ಜುನ! ಭಯಪಡದಿರು. ಯದ್ಯಪಿ ಜೀವೇಶ್ವರ ಸ್ವರೂಪ ಮತ್ತು ಸಂಬಂಧಗಳನ್ನು ಉಕ್ತಪ್ರಕಾರವಾಗಿ ತಿಳಿದ ಜ್ಞಾನಿಗೆ ಶೋಕಕ್ಕೆ ಕಾರಣವೇ ಇಲ್ಲ. ಜೀವಾತ್ಮರು ನಿತ್ಯರಾದಮಾತ್ರದಿಂದ ಶೋಕಪಡದಿರೆಂದು ನಾನು ಹೇಳಲಿಲ್ಲ. ಧರ್ಮದ ದೃಷ್ಟಿಯಿಂದ ಸಹ ಯುದ್ಧವು ಶೋಕಕಾರಣವಲ್ಲ. ಕ್ಷತ್ರಿಯನಾದ ನಿನಗೆ ಈ ಯುದ್ಧವು ಸ್ವಧರ್ಮವು. ಶ್ರೀಹರಿಪೂಜಾರೂಪವಾದ ಸ್ವಧರ್ಮಾಚರಣೆಗಿಂತ ಹೆಚ್ಚಿನ ಶ್ರೇಯಸ್ಸಾಧಕವಾದ ಕರ್ಮವು ಕ್ಷತ್ರಿಯನಿಗೆ ಬೇರಾವುದಿದೆ? ಇದರಿಂದ ಪಾಪ ಸಂಘಟನೆಯಾಗುವುದೆಂದು ಸರ್ವಥಾ ಶಂಕಿಸಬೇಡ. ಸ್ವಧರ್ಮವನ್ನನುಲಕ್ಷಿಸಿದರೂ ನೀನು ನಿರ್ದುಃಖದಿಂದ ಯುದ್ಧಮಾಡಲೇಬೇಕು. (೩೧)

ಅರ್ಜುನ—ಈ ಯುದ್ಧವು ರಾಜ್ಯಲೋಭದಿಂದ ನಮ್ಮಿಂದಲೇ ಆರಂಭಿಸಲ್ಪಟ್ಟದ್ದಲ್ಲವೇ? ಇದು ಸ್ವಧರ್ಮರೂಪವಾದುದೇ?

ಶ್ರೀಕೃಷ್ಣ—ಈ ಯುದ್ಧವು ಯತ್ನಪೂರ್ವಕವಾಗಿ ದೊರಕಿಸಲ್ಪಟ್ಟದ್ದಲ್ಲ. ಯುದ್ಧವನ್ನು ತಪ್ಪಿಸುವುದಕ್ಕಾಗಿ ಎಲ್ಲ ಪ್ರಯತ್ನಗಳೂ ನಡೆಯಲಿಲ್ಲವೇ?

ಸಂಧಾನಕ್ಕಾಗಿ ಹೋಗಿ ಯುದ್ಧವು ಕೈಗಟ್ಟದಂತೆ ಯತ್ನಿಸಿದೆನು. ಆದ್ದರಿಂದ ನಿಮ್ಮ ಪ್ರಯತ್ನವಿಲ್ಲದೇ ಕೇವಲ ಈಶ್ವರೇಚ್ಛೆಯಿಂದ ಪ್ರಾಪ್ತವಾದುದೆಂದು ತಿಳಿ. ಹೇ ಪಾರ್ಥ! ಸ್ವರ್ಗದ್ವಾರವು ತೆರೆದಿದೆ. ಪುಣ್ಯವಂತರಾದ ಕ್ಷತ್ರಿಯರಿಗೆ ಮಾತ್ರ ಈ ವಿಧವಾದ ಧರ್ಮಯುದ್ಧವು ಲಭಿಸುವುದು. ಸ್ವಜನರನ್ನು ಕೊಂದು ಹೇಗೆ ಸ್ವರ್ಗವನ್ನು ಸಾಧಿಸಲೆಂದು ಶಂಕಿಸಬೇಡ. ಪುಣ್ಯಪ್ರಾಪ್ತವಾದ ಈ ಭಗವತ್ಪೂಜೆಯನ್ನು ಬಿಡದಿರು. (೩೨)

ಅರ್ಜುನ—ಇಹದಲ್ಲಿ ರಾಜ್ಯಭೋಗವನ್ನೂ ಪರದಲ್ಲಿ ಸ್ವರ್ಗವನ್ನೂ ದೊರಕಿಸುವ ಈ ಯುದ್ಧವನ್ನು ಪರಿತ್ಯಾಗಮಾಡುವುದರಿಂದ ಆಗುವುದೇನು? ಇಹ ಪರ ಸುಖಭೋಗಗಳು ತಪ್ಪುವುವಲ್ಲವೇ? ಅವು ನನಗೆ ಬೇಡವೆಂದು ಮೊದಲೇ ವಿಜ್ಞಾಪಿಸಿಕೊಂಡಿರುವೆನು.

ಶ್ರೀಕೃಷ್ಣ—ಈ ಯುದ್ಧರೂಪದ ಭಗವತ್ಪೂಜೆಯು ನಿನ್ನ ಸ್ವಧರ್ಮವು. ಭಗವದಿಚ್ಛೆಯಿಂದಲೇ ಪ್ರಾಪ್ತವಾಗಿದೆ. ಯುದ್ಧ ಮಾಡದಿದ್ದರೆ ಸ್ವಧರ್ಮ, ಕೀರ್ತಿಗಳ ಹಾನಿಯಾಗುವುದು ಮಾತ್ರವಲ್ಲ; ಸ್ವಧರ್ಮತ್ಯಾಗದಿಂದ ಪಾಪವನ್ನೇ ಹೊಂದುವಿ. ಪಾಪದ ಫಲವು ನರಕಾದ್ಯನರ್ಥವೆಂಬುದನ್ನು ಮರೆಯಬೇಡ. (೩೩)

ಅರ್ಜುನ—ಕೃಷ್ಣ! ಕೀರ್ತಿಯನ್ನೂ ಕಳೆದುಕೊಳ್ಳುವಿಯೆಂದು ಹೇಳುವಿ. ಕೀರ್ತಿಯನ್ನು ಪಡೆಯಬೇಕೆಂಬ ಅಭಿಲಾಷೆಯೇ ನನಗಿಲ್ಲವಲ್ಲ!

ಶ್ರೀಕೃಷ್ಣ—ಹೊಸದಾಗಿ ಯುದ್ಧ ಮಾಡುವುದರಿಂದ ಬರುವ ಕೀರ್ತಿಯನ್ನು ಬೇಡೆನ್ನುವಿ. ಈಗಿರುವ ಕೀರ್ತಿಯನ್ನೂ ಬಿಡಲು ಸಿದ್ಧನಿರಬಹುದು. ಆದರೆ ಯುದ್ಧಪರಿತ್ಯಾಗದಿಂದ ಕೀರ್ತಿಹಾನಿ ಮಾತ್ರವಲ್ಲ, ಪ್ರತ್ಯುತ, ಶಾಶ್ವತವಾದ ಅಪಕೀರ್ತಿಯೇ ನಿನಗೆ ಕಟ್ಟುವುದು. ಮಾನವಂತ ಪುರುಷನಿಗೆ ಅಪಕೀರ್ತಿಯು ಮರಣಕ್ಕಿಂತ ಹೆಚ್ಚು ದುಃಖಕರವಲ್ಲವೇ? (೩೪)

ಅರ್ಜುನ—ಹಾಗೇಕೆ! ಈ ಘೋರ ಯುದ್ಧದಿಂದ ನಿವೃತ್ತನಾದ ಪಾರ್ಥನು ಮಹಾಕೃಪಾಳುವೆಂಬ ಕೀರ್ತಿಯೇ ನನಗುಂಟಾಗಬಹುದಲ್ಲವೇ?

ಶ್ರೀಕೃಷ್ಣ—ಮಹಾರಥಿಕರಿಂದಲೂ ಈ ವರೆಗೆ ಗೌರವಿಸಲ್ಪಟ್ಟ ನೀನು ಲಾಘವವನ್ನೇ ಹೊಂದುವಿಯಲ್ಲದೇ ಕೀರ್ತಿಯನ್ನಲ್ಲ. ನೀನು ಭಯದಿಂದ ಯುದ್ಧಮಾಡದೇ ಹಿಂತಿರುಗಿದೆಯೆಂದೇ ಅವರೆಲ್ಲರೂ ತಿಳಿಯುವರು. ಇದರಲ್ಲಿ ಯಾವ ಸಂಶಯವೂ ಇಲ್ಲ. (೩೫)

ಅರ್ಜುನ—ಅವರಿಗೆ ನನ್ನ ವಿಷಯದಲ್ಲಿ ಲಾಘವಬುದ್ಧಿಯುಂಟಾದರೆ ನನಗಾಗುವ ಹಾನಿಯೇನು?

ಶ್ರೀಕೃಷ್ಣ—ಲಾಘವಬುದ್ಧಿಯನ್ನು ಹೊಂದಿ ಸುಮ್ಮನಿರುವರೆಂದು ತಿಳಿಯುವೆಯಾ? ನಿನ್ನ ಶತ್ರುಗಳೂ ಸಹ ಅವಾಚ್ಯ ಶಬ್ದಗಳಿಂದ ನಿನ್ನನ್ನು ನಿಂದಿಸುವರು. ನಿನ್ನ ಪರಾಕ್ರಮವನ್ನು ಹಳಿಯುವರು. ಶತ್ರುನಿಂದೆಗಿಂತ ಹೆಚ್ಚಿನ ದುಃಖವುಂಟೇ? (೩೬)

ಅರ್ಜುನ—ಜಯಾಪಜಯಗಳು ಸಂದಿಗ್ಧವೆಂದು ವಿಜ್ಞಾಪಿಸಿಕೊಂಡಿರುವೆನು. ಜಯ ದೊರೆತರೆ ರಾಜ್ಯೈಶ್ವರ್ಯವೂ, ಅಪಜಯವಾದರೆ ಯುದ್ಧದಲ್ಲಿ ಮರಣದಿಂದ ಸ್ವರ್ಗವೂ ಲಭಿಸುವುವೆಂದು ತಿಳಿಯಲೇ? ಅಪಜಯವು ಕೀರ್ತಿನಾಶಕರವಲ್ಲವೇ?

ಶ್ರೀಕೃಷ್ಣ—ಜಯದಿಂದಲೇ ಕೀರ್ತಿಯೆಂಬುದು ಸರಿಯಲ್ಲ. ಯುದ್ಧದಲ್ಲಿ ಮಡಿದವರೂ ಮಹಾಶೂರರೆಂಬ ಕೀರ್ತಿಯನ್ನು ಪಡೆಯುವರು. ಅಪಜಯದಿಂದ ಅಕೀರ್ತಿಯಿಲ್ಲ. ಅಲ್ಲದೇ ಯುದ್ಧದಲ್ಲಿ ಸತ್ತರೇ ಸ್ವರ್ಗವೆಂದು ಯಾರು ಹೇಳಿದರು? ಜಯ ಹೊಂದಿದವರೂ, ಇಹ ರಾಜ್ಯವನ್ನು ಭೋಗಿಸಿ, ನಂತರ ಮೃತರಾಗಲು ಸ್ವರ್ಗವನ್ನೇ ಹೊಂದುವರು. ಮಡಿದರೆ ಸ್ವರ್ಗ, ಗೆದ್ದರೆ ರಾಜ್ಯವೆಂಬುದು ತತ್ಕಾಲದಲ್ಲಿ ಸಿದ್ಧವಾಗುವ ಫಲಗಳು. ಆದ್ದರಿಂದ ಹೇ ಕೌಂತೇಯ! ಯುದ್ಧವನ್ನೇ ನಿಶ್ಚಯಿಸಿ ಎದ್ದುನಿಲ್ಲು. (೩೭)

ಅರ್ಜುನ—ಜಯಾಪಜಯಗಳೆಂಬ ಉಭಯಪಕ್ಷಗಳಲ್ಲಿ ಫಲವುಂಟೆಂದು ತಿಳಿದು ಯುದ್ಧದಲ್ಲಿ ತೊಡಗಿದರೆ, ಅದು ಭಗವತ್ಪೂಜಾತ್ಮಕವಾಗುವುದೇ?

ಶ್ರೀಕೃಷ್ಣ—ಉಭಯಪಕ್ಷಗಳಲ್ಲಿ ಫಲವಿರುವುದೆಂದು ಹೇಳಿದೆನಲ್ಲದೇ

ಆ ಫಲಗಳನ್ನು ಕೋರಿ, ಅವುಗಳನ್ನು ಹೊಂದಲಿಕ್ಕಾಗಿ ಯುದ್ಧಮಾಡೆಂದು ನಾನು ಹೇಳಲಿಲ್ಲ. ದುಃಖವನ್ನು ಯಾರೂ ಕೋರುವುದಿಲ್ಲ; ಅದು ಅನುಪಾದೇಯವು. ಹಾಗೆಯೇ (ಇಹ ಪರ ವೈಷಯಿಕ) ಸುಖವೂ ಅನುಪಾದೇಯವೆಂದು ತಿಳಿ. ಹೀಗೆ, ಸುಖದುಃಖಗಳನ್ನೂ, ಲಾಭಾಲಾಭಗಳನ್ನೂ ಜಯಾಪಜಯುಗಳನ್ನೂ ಸಮವೆಂದು ತಿಳಿದು ಸ್ವಧರ್ಮವಾದ ಯುದ್ಧವನ್ನು ಈಶ್ವರಾರಾಧನೆಯೆಂಬ ಬುದ್ಧಿಯಿಂದ ಮಾಡು. ಪಾಪಲೇಶವೂ ನಿನ್ನನ್ನು ತಗಲದು; ಮಹಾಪುಣ್ಯವೇ ಲಭಿಸುವುದು. ಆ ಪುಣ್ಯ ಫಲವಾದರೋ ಅಲಭ್ಯವಾದ ಭಗತ್ಪ್ರಸನ್ನತೆಯೇ ಆಗಿರುವುದು. (೩೮) ಪಾರ್ಥ! ಈ ವರೆಗೆ ಜೀವೇಶ್ವರರ ಸ್ವರೂಪಜ್ಞಾನಾರ್ಥವಾಗಿ ಮಾಡಿದ ಉಪದೇಶವು ನಿನ್ನ ಮನಮುಟ್ಟಿತಷ್ಟೆ! ನಿನ್ನ ಸಂಶಯುಗಳು ತೊಲಗಿದವೇ? ನೋಡು! ಕೇವಲ ಬೌದ್ಧಿಕವಾಗಿ ವಿಷಯವನ್ನು ಗ್ರಹಿಸಿದರೆ ಸಾಲದು; ಸ್ವಾನುಭವದಿಂದ ಆ ಜ್ಞಾನವು ಸ್ಥಿರಗೊಳ್ಳಬೇಕು. ಹೀಗಾಗಲು ಭಗವತ್ಸ್ವರೂಪದ ಸಾಕ್ಷಾತ್ಕಾರವಾಗಬೇಕು. ಅದಕ್ಕಾಗಿ ಪ್ರತಿಯೊಬ್ಬ ಸಾಧಕನೂ ಕೈಗೊಳ್ಳಬೇಕಾದ ಉಪಾಯವನ್ನು ವಿಸ್ತಾರವಾಗಿ ನಿರೂಪಿಸುವೆನು. ಸಾವಧಾನದಿಂದ ಕೇಳು; ಅವರಲ್ಲಿ ನಿಷ್ಠೆಯನ್ನು ಹೊಂದು. ಜೀವೇಶ್ವರ ಸ್ವರೂಪವಿಷಯಕ ಜ್ಞಾನವು ಸಾಂಖ್ಯವೆಂದೂ, ಪರಮಾತ್ಮನ ಸಾಕ್ಷಾತ್ಕಾರದಿಂದಲೇ ಲಭ್ಯವಾಗುವ ಆ ಜ್ಞಾನನಿಶ್ಚಯಕ್ಕಾಗಿ ಅನುಸರಿಸಬೇಕಾದ ಮಾರ್ಗವು ಯೋಗವೆಂದೂ ಕರೆಯಲ್ಪಡುತ್ತವೆ. ಫಲಾಶೆಯನ್ನು ಬಿಟ್ಟು ಸ್ವವಿಹಿತ ಕರ್ಮವನ್ನು ಭಗವದಾರಾಧನಬುದ್ಧಿಯಿಂದ ಆಚರಿಸುವುದೇ ಆ ಮಾರ್ಗವು. ಅಂತೂ ಯೋಗವೆಂದರೆ ಜ್ಞಾನೋಪಾಯವೆಂದು ತಿಳಿ. ಯೋಗಾನುಷ್ಠಾನದಿಂದ ಬ್ರಹ್ಮದರ್ಶನವನ್ನು ಹೊಂದಿ ಕರ್ಮಬಂಧರೂಪವಾದ ಈ ಸಂಸಾರದಿಂದ ಮುಕ್ತನಾಗುವಿ. (೩೯). ಯೋಗರೂಪವಾದ ಈ ಧರ್ಮಾನುಷ್ಠಾನದ ಪ್ರಾರಂಭಮಾತ್ರವೂ ನಿಷ್ಫಲವಾಗುವುದಿಲ್ಲ. ಆರಂಭಿಸಲ್ಪಟ್ಟ ಧರ್ಮಕ್ಕೆ ವಿಚ್ಛೇದ ಬಂದರೂ ಪ್ರತ್ಯವಾಯವಿಲ್ಲ. ಈ ವಿಷ್ಣುಪೂಜಾತ್ಮಕ ನಿಷ್ಕಾಮಕರ್ಮದ ಏಕಾಂಶವೂ ಸಹ ಸಂಸಾರಭಯದಿಂದ ರಕ್ಷಿಸುತ್ತದೆ. (೪೦).

ಅರ್ಜುನ—ಹೇ ಪ್ರಭೋ! ಜ್ಞಾನೋಪಾಯಗಳನ್ನು ನಿರೂಪಿಸು ವಾಕ್ಯಗಳು, ಲೋಕದಲ್ಲಿ ಮತಭೇದದಿಂದ ಅನೇಕ ಪ್ರಕಾರವಾಗಿ ಮತ್ತು ಪರಸ್ಪರ ವಿರುದ್ಧವಾಗಿವೆ. ಹೀಗಿರಲು ಈ ನಿನ್ನ ಉಪದೇಶ ಪ್ರಾಮಾಣಿಕವೆಂದು ಹೇಗೆ ವಿಶ್ವಾಸಹೊಂದಲಿ?

ಶ್ರೀ ಕೃಷ್ಣ—ಹೇ ಕುರುನಂದನ! ಪ್ರಮಾಣಗಳಿಂದ ನಿರ್ಣಯಿಸಲ್ಪ ಅರ್ಥನಿಶ್ಚಯವನ್ನು ತಿಳಿಸಿಕೊಡುವ ಉಪದೇಶವು, ಮೋಕ್ಷ ಸಾಧನೋ ಪಾಯವನ್ನು ಒಂದೇ ಪ್ರಕಾರವಾಗಿ ನಿರೂಪಿಸುತ್ತದೆ. ಅದೇ ಶ್ರುತಿ ಸ್ಮೃತಿಗಳಿಂದ ಸಿದ್ಧವಾದುದು. ಪ್ರಮಾಣನಿರ್ಣೀತಾರ್ಥನಿಶ್ಚಯವಿಲ್ಲ ದವರು ವಿರುದ್ಧವಾದ ನಾನಾ ಪ್ರಕಾರದ ಅನಂತಸಾಧನೋಪಾಯಗಳಿರು ವುವೆಂದು ಹೇಳುವರು. ಅವೆಲ್ಲವೂ ಪ್ರಾಮಾಣಿಕವಾದುವುಗಳಲ್ಲ ಅಪ್ರಾಮಾಣಿಕವಾದ ಅನೇಕಮತಗಳ ವಿವಾದವು ಪ್ರಾಮಾಣಿಕವಾದ ನನ್ನ ಉಪದೇಶದಲ್ಲಿ ನಿನಗೆ ಅವಿಶ್ವಾಸವನ್ನುಂಟುಮಾಡದಿರಲಿ. ನಾನು ಹೇಳುವುದನ್ನು ಕೇಳು. ನನ್ನ ಉಪದೇಶವು ಪ್ರಾಮಾಣಿಕವೆಂದು ಅಲ್ಲಲ್ಲಿ ಸ್ಪಷ್ಟಪಡುತ್ತದೆ. (೪೧).

ಅರ್ಜುನ—ವೇದಪ್ರಾಮಾಣ್ಯವನ್ನೊಪ್ಪದ ಅವೈದಿಕಮತಗಳಲ್ಲಿ ವಿಶ್ವಾಸಮಾಡದಿದ್ದರೂ, ವೈದಿಕಮತಗಳಲ್ಲಿ ಸಹ ಈ ವಿಚಾರದಲ್ಲಿ ಏಕ ವಾಕ್ಯತೆಯಿಲ್ಲದಿರುವುದು ದೊಡ್ಡ ಕೊರತೆಯು. ಸ್ವರ್ಗಾದಿಫಲಗಳೇ ಪುರುಷಾರ್ಥಗಳೆಂದೂ, ಅವುಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ ಯಾಗಾದಿಕರ್ಮಗಳನ್ನಾಚರಿಸುವುದೇ ಕರ್ತವ್ಯವೆಂದೂ ಕೆಲವರು ವೇದ-ಜ್ಞಾನಿಗಳು ಹೇಳುವರು. ಹೀಗಿರಲು ನಿನ್ನ ಮಾತುಗಳೇ ಹೇಗೆ ವಿಶ್ವಾಸಾರ್ಹ ವಾಗುವುವು?

ಶ್ರೀಕೃಷ್ಣ—ಹಾಗೆ ಹೇಳುವವರು ವೇದತಾತ್ಪರ್ಯವನ್ನು ತಿಳಿದವ ರಲ್ಲ, ಅವರು ವೇದಜ್ಞಾನಿಗಳಲ್ಲ, ವೈದಿಕರಲ್ಲ-ವೈದಿಕಾಭಾಸರು. ವೇದಗಳಲ್ಲಿ ಆಪಾತತಃ ತೋರುವ ಅರ್ಥವನ್ನೇ ಗ್ರಹಿಸಿ, ವೇದಗಳು ಯಜ್ಞಾದಿ ಕರ್ಮಗಳನ್ನೂ ಅವುಗಳಿಂದ ಲಭ್ಯವಾಗುವ ಸ್ವರ್ಗಾದಿಫಲಗಳನ್ನಷ್ಟೇ ಹೇಳುವುವೆಂದು ನಂಬಿಕೊಳ್ಳುತ್ತಾರೆ. ಶ್ರುತಿ, ಲಿಂಗ, ವಾಕ್ಯ, ಪ್ರಕರಣ,

ಸಮಾಖ್ಯಾದಿಗಳ ಪ್ರಾಬಲ್ಯದೌರ್ಬಲ್ಯ ವಿಮರ್ಶೆಯಿಂದ ವೇದಗಳ ಮುಖ್ಯಾರ್ಥಜ್ಞಾನವನ್ನು ಹೊಂದುವ ಉಪಾಯವನ್ನು ತಿಳಿಯರು. ಆದ್ದರಿಂದ ಸ್ವರ್ಗಾದಿಫಲಗಳೇ ಪರಮಪುರುಷಾರ್ಥವೆಂದು ಭ್ರಮಿಸುವರು. ವೃಕ್ಷಗಳಲ್ಲಿ ಫಲಕ್ಕಿಂತ ಮೊದಲು ಪುಷ್ಪದ ಉದಯವಾಗುವುದಷ್ಟೆ. ಫಲಜ್ಞಾನಶೂನ್ಯರು ಪುಷ್ಪದಿಂದಲೇ ಸಂತುಷ್ಟರಾಗುವಂತೆ ಇವರಾದರೂ ವೇದಗಳು ಪರಬ್ರಹ್ಮಸ್ವರೂಪವನ್ನು ಪ್ರತಿಪಾದಿಸುತ್ತವೆಂಬುದನ್ನೂ, ಪರಬ್ರಹ್ಮಪ್ರಾಪ್ತಿರೂಪಮೋಕ್ಷವೆಂಬ ಮುಖ್ಯಫಲವಿರುವುವೆಂಬುದನ್ನೂ ತಿಳಿಯದೇ, ಭೋಗ್ಯವಸ್ತುಗಳನ್ನು ಕಾಮಿಸಿ, ಸ್ವರ್ಗಪ್ರಾಪ್ತಿಯೇ ಮುಖ್ಯಫಲವೆಂದು ನಂಬಿ ಕೇವಲ ಕಾಮ್ಯಕರ್ಮಗಳಲ್ಲಿ ತೊಡಗುವರು. ಜನ್ಮಕರ್ಮಫಲಪ್ರಾಪಕಗಳಾದ ಬಹು ಕ್ರಿಯಾವಿಶೇಷಗಳನ್ನು ಮಾತ್ರ ವೇದಗಳು ಪ್ರತಿಪಾದಿಸುವುವೆಂದು ಹೇಳುವರು. ಅಪೇಕ್ಷಿತವಾದ ಭೋಗೈಶ್ವರ್ಯಗಳನ್ನು ಹೊಂದಲು ವೇದೋಕ್ತವಾದ ಯಜ್ಞಾದಿಕರ್ಮಗಳನ್ನು ಆಶ್ರಯಿಸಲು ಉಪದೇಶಿಸುವರು. ಭೋಗೈಶ್ವರ್ಯಗಳಲ್ಲಿಯೇ ಆಸಕ್ತರಾದ, ಮೇಲೆತೋರುವ ಅರ್ಥಗಳಿಂದ ಅಪಹೃತವಾದ ಮನಸ್ಸುಳ್ಳ, ಈ ವೈದಿಕಾ-ಭಾಸಕರಿಗೆ, ಪರಮಾತ್ಮನ ಧ್ಯಾನಕ್ಕೆ ಅವಶ್ಯಕವಾದ ಪ್ರಮಾಣನಿರ್ಣೀತವಾದ ಅರ್ಥನಿಶ್ಚಯವು ಹೇಗೆ ಹುಟ್ಟುವುದು? ಆದ್ದರಿಂದ ಇವರ ವಾದವು ಅವೈದಿಕರ ಅಭಿಪ್ರಾಯಗಳಂತೆ ಅಪ್ರಾಮಾಣಿಕವೆಂದು ತಿಳಿದು ನನ್ನ ಮಾತುಗಳಲ್ಲಿ ಆದರವನ್ನು ಹೊಂದು. (೪೨-೪೩-೪೪)

ಅರ್ಜುನ—ಹೇ ದೇವ! ವೇದಗಳ ಮುಖ್ಯ ತಾತ್ಪರ್ಯಾರ್ಥವೇನು ಮತ್ತು ವೇದ ಸಮ್ಮತವಾದ ಮೋಕ್ಷಸಾಧನೋಪಾಯವಾವುದೆಂಬುದನ್ನು ಕರುಣಿಸು.

ಶ್ರೀಕೃಷ್ಣ—ಸತ್ವ, ರಜಸ್ಸು ಮತ್ತು ತಮಸ್ಸುಗಳೆಂದು ಪ್ರಕೃತಿಯ ಮೂರು ಗುಣಗಳು. ಇವುಗಳಿಂದ ಜನ್ಯವಾದವುಗಳು ಸ್ವರ್ಗಾದಿಸಕಲ-ಭೋಗ್ಯವಸ್ತುಗಳು. ಇವುಗಳ ಪ್ರಾಪ್ತಿಯೇ ಪುರುಷಾರ್ಥವೆಂದೂ, ತದರ್ಥವಾಗಿ ಯಾಗಾದಿಕರ್ಮಗಳನ್ನು ವಿಧಿಸುವಂತೆಯೂ, ವೇದಗಳು ಹೇಳುವುವೆಂದು ತೋರುತ್ತದೆ. ದೇಹಯೋಗವಿಯೋಗರೂಪವಾದ ಈ ಸಂಸಾರವೂ

ಜೀವನಿಗೆ ತ್ರಿಗುಣಗಳಿಂದಲೇ ಆದುದು. ಈ ಸಂಸಾರರೂಪ ವಿಷವನ್ನು ಪರಿಹರಿಸಲಿಕ್ಕಾಗಿಯೇ ನಿಜವಾಗಿಯೂ ವೇದಗಳು ಪ್ರವೃತ್ತವಾಗಿವೆ ಯೆಂದು ತಿಳಿ. ಮೇಲೆತೋರುವ ಅರ್ಥವೇ ವೇದಗಳ ಮುಖ್ಯಾರ್ಥವೆಂದು ಭ್ರಮಿಸಬೇಡ. ಶಾಶ್ವತಪುರುಷಾರ್ಥವಾದ ಮೋಕ್ಷವನ್ನು ದೊರಕಿಸುವ ಪರಮಾತ್ಮನ ಸ್ವರೂಪವನ್ನು ತಿಳಿಸುವುದೇ ಎಲ್ಲ ವೇದವಾಕ್ಯಗಳ ಮಹಾ ತಾತ್ಪರ್ಯಾರ್ಥವು. ಸ್ವರ್ಗಾದಿಫಲಗಳು ನಶ್ವರವಾದವುಗಳು ಮತ್ತು ಕ್ಷುದ್ರವಾದವು. ಆದ್ದರಿಂದ ಕಾಮ್ಯಕರ್ಮಗಳಲ್ಲಿ ಆಸಕ್ತನಾಗದೇ, ಫಲ ಗಳಿಂದ ಹಿಗ್ಗುಕುಗ್ಗುಗಳೆಂಬ ಚಿತ್ತವಿಕಾರವನ್ನು ಹೊಂದದೇ ನಿತ್ಯಸದ್ಗುಣ ಪೂರ್ಣನಾದ ಶ್ರೀಹರಿಯೇ ನಿನ್ನ ಸ್ವಾಮಿಯೆಂಬ ಸಂತತ ಸ್ಮರಣೆಯುಳ್ಳವ ನಾಗಿ, ಇಲ್ಲದ್ದನ್ನು ಹೊಂದುವ ಮತ್ತು ಹೊಂದಿದ್ದನ್ನು ರಕ್ಷಿಸಿಕೊಳ್ಳು ವುದೆಂಬ ಶಾಸ್ತ್ರವಿರುದ್ಧವಿಷಯಕವಾದ ಯೋಗಕ್ಷೇಮಗಳನ್ನು ಪರಿತ್ಯಾಗ ಮಾಡು. ಇದೇ ಪ್ರಧಾನಜ್ಞಾನೋಪಾಯವು—ಯೋಗವು; ಇದ ರಿಂದಲೇ ಮೋಕ್ಷವು. (೪೫)

ಅರ್ಜುನ—ಕರ್ಮಿಗಳಿಗೆ ಜ್ಞಾನಫಲವಿಲ್ಲದಿರುವಂತೆ, ಕರ್ಮಿಗಳಿಗೆ ದೊರೆಯುವ ಸ್ವರ್ಗಾದಿಫಲಗಳು ಜ್ಞಾನಿಗಳಿಗೂ ಇಲ್ಲ; ಕರ್ಮಗಳಿಂದ ಲಭ್ಯವಾಗುವ ಫಲಗಳನ್ನು ದೂರೀಕರಿಸಿ, ಅಂತ್ಯದಲ್ಲಿ ದೊರೆಯುವುದೆಂಬ ಮೋಕ್ಷಕ್ಕಾಗಿಯೇ ಯತ್ನಿಸಬೇಕೆ? ಅಲ್ಲದೇ ಒಬ್ಬರ ಫಲ ಮತ್ತೊಬ್ಬರಿಗೆ ಇಲ್ಲದಿರುವಾಗ, ನೀನು ಹೇಳುವ ಯೋಗವೇ ಅನುಷ್ಠೇಯವೆಂದು ಹೇಗೆ ಸಿದ್ಧವಾಗುವುದು?

ಶ್ರೀಕೃಷ್ಣ—ಕರ್ಮಿಗಳ ಸ್ವರ್ಗಾದಿಭೋಗರೂಪಫಲಗಳು ಜ್ಞಾನಿ ಗಳಿಗಿಲ್ಲವೆಂದು ತಿಳಿಯಬೇಡ. ಕೂಪದಿಂದಾಗುವ (ಸಣ್ಣ ಭಾವಿ) ಸ್ನಾನ ಪಾನಾದಿ ಅಲ್ಪಪ್ರಯೋಜನವು ವ್ಯಾಪ್ತವಾದ ಸರೋವರಾದಿ ಜಲಾಶಯ ಗಳಿಂದ ಆಗುವುದಿಲ್ಲವೇ? ಆಗಿಯೇ ಆಗುವುದು; ಅಷ್ಟುಮಾತ್ರವಲ್ಲ, ಹೆಚ್ಚಿನ ಇತರ ಪ್ರಯೋಜನಗಳೂ ಆಗುವುವು. ದೊಡ್ಡ ಜಲಾಶಯ ದಿಂದಾಗುವ ಪ್ರಯೋಜನದಲ್ಲಿ ಕೂಪದಿಂದಾಗುವ ಪ್ರಯೋಜನವು ಅಂತ- ರ್ಭಾವವನ್ನು ಹೊಂದಿರುತ್ತದೆ. ಅಲ್ಲದೇ ಜ್ಞಾನಿಗೆ (ಬ್ರಹ್ಮದರ್ಶನ ಪಡೆದ

ವನಿಗೆ) ಮಾತ್ರ ಈ ವಿಧ ಮಹತ್ಫಲವೆಂದು ತಿಳಿಯಬೇಡ. ವೇದಾದಿಶಾಸ್ತ್ರಗಳಿಂದ ದೊರೆಯುವ ಪರೋಕ್ಷಜ್ಞಾನವು ಪರಮಾತ್ಮಸ್ವರೂಪದ ಅಪರೋಕ್ಷಜ್ಞಾನಕ್ಕೆ (ಸಾಕ್ಷಾತ್ಕಾರಕ್ಕೆ) ಕಾರಣವಾಗುತ್ತದೆ. ಪರೋಕ್ಷಜ್ಞಾನಿಗೆ ಸಹ ಕರ್ಮಗಳ ಸ್ವರ್ಗಾದಿಫಲಗಳು ಅಪ್ರಯತ್ನವಾಗಿ ಲಭಿಸುತ್ತವೆ. ಅಪರೋಕ್ಷಜ್ಞಾನಿಗೆ ಲಭ್ಯವೆಂದು ಹೇಳಲೇನು? ಪ್ರಳಯೋದಕಸ್ಥಿತನೂ, ಅನ್ಯಪಾಲಕರಹಿತನೂ, ಕಾಲಾದಿಚೇಷ್ಟಕನೂ, ಪೂರ್ಣಾನಂದಾದಿ ಉತ್ಕೃಷ್ಟಗುಣಭರಿತನೂ ಆದ ಪರಮಾತ್ಮನು ಪ್ರಸನ್ನನಾದರೆ ಸಕಲಪುರುಷಾರ್ಥಗಳೂ ಸಿದ್ಧಿಸುವುವು. 'ಎಲ್ಲ ಕರ್ಮಗಳೂ ಪರಮಾತ್ಮಜ್ಞಾನಾರ್ಥವಾಗಿಯೇ; ಪರಮಾತ್ಮನೇ ವೇದಮುಖ್ಯಾರ್ಥನು; ಭಗವತ್ಪರವಾದ ಕರ್ಮಗಳಲ್ಲಿ ಆಸಕ್ತಿಯನ್ನು ಹುಟ್ಟಿಸಲುಮಾತ್ರ ವೇದಗಳು ಸ್ವರ್ಗಾದಿಫಲಗಳನ್ನು ತೋರಿಸುತ್ತವೆ' ಎಂದು ಮುಂತಾದ ಅರ್ಥವಿಶೇಷಗಳನ್ನು ತಿಳಿದು ಜ್ಞಾನೋಪಾಯವಾದ ನಿಷ್ಕಾಮಕರ್ಮರೂಪಯೋಗದಲ್ಲಿ ತೊಡಗಿದವನಿಗೆ ಯಾವ ಪುರುಷಾರ್ಥಗಳು ದೊರೆಯುವುದಿಲ್ಲ? ಎಲ್ಲವೂ ದೊರೆಯುವುವು. ಆದ್ದರಿಂದ ಫಲಾಪೇಕ್ಷೆಯನ್ನು ಬಿಟ್ಟು ಶ್ರೀವಿಷ್ಣುವಿನ ಆರಾಧನೆಯೆಂಬ ಭಾವನೆಯಿಂದ ವಿಹಿತಕರ್ಮಗಳನ್ನಾಚರಿಸುವುದೇ ಉತ್ತಮೋತ್ತಮ ಮಾರ್ಗವು. ಇದೇ ನಿವೃತ್ತಕರ್ಮವು—ಯೋಗವು. ಮಹಾಫಲಪ್ರದವಾದ ಯೋಗದ ಅನುಷ್ಠಾನವು ಅಯುಕ್ತವೆಂದು ಸರ್ವಥಾ ಶಂಕಿಸದಿರು. (೪೬)

ಅರ್ಜುನ—'ಸ್ವರ್ಗಕಾಮೋ ಯಜೇತ' ಎಂಬ ಶ್ರುತಿಯೇ, ಕಾಮನಾವಿಶಿಷ್ಟಯಾಗವನ್ನು ವಿಧಿಸುತ್ತದೆ. ಫಲಕಾಮನೆಯೂ ವಿಧ್ಯುಕ್ತವಾಯಿತು. ವಿಹಿತವನ್ನಾಚರಿಸುವುದೂ ತಪ್ಪೇ? ಫಲೇಚ್ಛೆಯಿಂದ ಕರ್ಮಮಾಡುವವರ ನಿಂದೆಯು ಹೇಗೆ ಸಮಂಜಸವು?

ಶ್ರೀಕೃಷ್ಣ—ಅರ್ಜುನ! ಶ್ರುತಿಯು ಕರ್ಮವನ್ನು ವಿಧಿಸುತ್ತದೆ; ಫಲಕಾಮನೆಯನ್ನಲ್ಲ. ಕಾಮವನ್ನು ಅನುವಾದಮಾಡಿ ಯಾಗವನ್ನು ವಿಧಿಸುತ್ತದೆ. 'ಕುರ್ವನ್ನೇವೇಹ....' ಎಂಬ ಶ್ರುತಿಯನ್ನು ಗಮನಿಸು. ಕರ್ಮವನ್ನು ವಿಧಿಸಿ, 'ಏವಂ ತ್ವಯಿ' ಇತ್ಯಾದಿ ಉತ್ತರಾರ್ಧವಾಕ್ಯದಿಂದ,

ಕರ್ಮ ಬಿಟ್ಟರೆ, ಪ್ರತ್ಯವಾಯ (ದೋಷ-ಪಾಪ) ವುಂಟೆಂದು ಹೇಳುತ್ತವೆ. ಫಲವನ್ನು ಕಾಮಿಸದಿದ್ದರೆ ಪ್ರತ್ಯವಾಯವುಂಟೆಂದು ಹೇಳುವುದಿಲ್ಲ. ಆದ್ದರಿಂದ ಫಲೇಚ್ಛೆಯನ್ನು ತೊರೆದು ವಿಹಿತ ಕರ್ಮವನ್ನಾಚರಿಸಬೇಕು. ಜೀವರು ಕರ್ಮಮಾಡುವುದರಲ್ಲಿಮಾತ್ರ ಶಕ್ತರು (ಕ್ರಿಯಾಶಕ್ತಿಯುತರು). ಫಲಸಂಪಾದನೆಯಲ್ಲಿ ಸಮರ್ಥರಲ್ಲ. ಜೀವರ ಯೋಗ್ಯತೆಯೇ ಅಷ್ಟು. ಫಲದಾತನು ಈಶ್ವರನು. ಈ ಕರ್ಮದಿಂದ ಈ ಫಲವನ್ನು ಸಾಧಿಸುವೆನೆಂಬ ಭಾವನೆಯೇ ಸಾಧುವಲ್ಲ—ಅಯೋಗ್ಯವು. ಜೀವಾತ್ಮನು ತನ್ನಲ್ಲಿ ಈಶ್ವರತ್ವವನ್ನು ಆರೋಪಿಸಿಕೊಳ್ಳುವುದು ಮಹಾ ಅನರ್ಥಕರವು. ಆದ್ದರಿಂದ ಕರ್ಮ ಮಾಡುವುದರಲ್ಲಿ ಫಲವು ಎಷ್ಟು ಮಾತ್ರವೂ ಕಾರಣವಾಗಬಾರದು. ಅಲ್ಲದೇ ಸ್ವಯಂ ಕ್ಲೇಶರೂಪವಾದುದೆಂದು ಕರ್ಮವನ್ನೇ ಬಿಡುವುದೂ ಸರಿಯಲ್ಲ. ಕರ್ಮತ್ಯಾಗಕ್ಕೆ ಮನಗೊಡದಿರು. ಹೇ ಪಾರ್ಥ! ನೀನಾದರೋ ಜ್ಞಾನಿಯು, ನೀನು ಮತ್ತು ನಿನ್ನ ಸದೃಶರಾದ ಜ್ಞಾನಿಗಳು ಕರ್ಮಕ್ಕಾಗಿಯೇ ಬಂದವರು; ಸ್ವರ್ಗಾದಿ ಫಲಗಳು ನಿನಗೆ ಯೋಗ್ಯವಲ್ಲ. ಜ್ಞಾನಭಕ್ತಿಗಳ ಅತಿಶಯವನ್ನೂ, ಭಗವತ್ಪ್ರಸನ್ನತೆಯನ್ನೂ ಕೋರಿ ಯುದ್ಧಮಾಡು. ಇವುಗಳನ್ನು ಕಾಮಿಸುವುದು ಯಾವ ದೃಷ್ಟಿಯಿಂದಲೂ ನಿಂದಿತವಲ್ಲ. (೪೭)

ಅರ್ಜುನ—ಕರ್ಮವನ್ನು ಮಾಡಲೇಬೇಕೆಂದಮೇಲೆ ನನ್ನ ಕಾರ್ಯವನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಇನ್ನಷ್ಟು ವಿವರಿಸು, ಸ್ವಾಮಿಾ.

ಶ್ರೀಕೃಷ್ಣ—ಹೇ ಧನಂಜಯ! ಜ್ಞಾನೋಪಾಯವಾದ ಯೋಗವನ್ನೇ ಆಶ್ರಯಿಸು; ಫಲಾಪೇಕ್ಷೆಯನ್ನು ಪರಿತ್ಯಾಗ ಮಾಡು. ಫಲವು ಸಿದ್ಧಿಸಲಿ, ಸಿದ್ಧಿಸದಿರಲಿ, ಅದರಿಂದ ನಿನ್ನ ಚಿತ್ತವು ವಿಕಾರವನ್ನು ಹೊಂದದಿರಲಿ. ಭಗವತ್ಪ್ರಸನ್ನತೆಗಾಗಿ ಸಕಲ ಕರ್ಮಗಳನ್ನು ಸಮಚಿತ್ತನಾಗಿ ಮಾಡು. ಸಮತ್ವವೇ ಯೋಗವೆನಿಸುವುದು.

ಅರ್ಜುನ—ಫಲಾಪೇಕ್ಷೆಯನ್ನು ಬಿಡುವುದೂ ಯೋಗವೆಂದು ಹೇಳುವಿ. ಸಮತ್ವವನ್ನೂ ಯೋಗವೆಂದು ಹೇಳುವಿ. ಇವೆ... ಯೋಗತ್ವವುಂಟೇ?

ಶ್ರೀಕೃಷ್ಣ—ಫಲಾಶೆಯನ್ನು ಬಿಡುವುದಷ್ಟೇ ಯೋಗವಲ್ಲ. ಫಲಸ್ನೇಹವಿಲ್ಲದೇ ಆಚರಿಸುವ ಕರ್ಮದಿಂದ ಸಹ, ಫಲವು ಸಿದ್ಧಿಸಬಹುದು ಅಥವಾ ಸಿದ್ಧಿಸದಿರಬಹುದು. ಸಿದ್ಧಿಸುವ ಫಲವು ಇಷ್ಟವಾದುದಿರಬಹುದು ಅಥವಾ ಅನಿಷ್ಟವಿರಬಹುದು. ಸಿದ್ಧಿಅಸಿದ್ಧಿಗಳಿಂದಲೂ, ಇಷ್ಟಾನಿಷ್ಟಫಲಗಳಿಂದಲೂ ಹಿಗ್ಗುಕುಗ್ಗುಗಳೆಂಬ ಚಿತ್ತವಿಕಾರವಾಗಬಹುದು. ಈ ಮನೋವಿಕಾರಕ್ಕೂ ಎಡೆಗೊಡದಿರಬೇಕು. ಆದ್ದರಿಂದ, ಹೇ ಪಾರ್ಥ! ಫಲತ್ಯಾಗಪೂರ್ವಕವಾದ ಸಮತ್ವವೇ ಯೋಗವೆಂದು ತಿಳಿ. (೪೮) ಕಾಮಿಸಿದರೆ ದೊರೆಯುವ ಫಲವು ಅಲ್ಪವು; ಜ್ಞಾನೋಪಾಯವಾದ ಯೋಗದಿಂದ ದೊರೆಯುವ ಫಲಕ್ಕಿಂತ ಅತ್ಯಂತ ಅಧಮವು. ಅಲ್ಲದೇ ಜ್ಞಾನಲಬ್ಧವಾದ ಮಹಾಫಲದೊಂದಿಗೆ ಈ ಅಲ್ಪಫಲವು ಅನಪೇಕ್ಷಿತವಾಗಿ ದೊರೆಯುತ್ತಿರಲು ಅದಕ್ಕಾಗಿಯೇ ಕರ್ಮದಲ್ಲಿ ತೊಳಲುವವರು ದೀನರು. ಹೇ ಧನಂಜಯ! ಯೋಗಲಬ್ಧವಾದ ಜ್ಞಾನವನ್ನೇ ಆಶ್ರಯಿಸು. ಕಾಮ್ಯಕರ್ಮವು ಪ್ರವೃತ್ತಕರ್ಮವೆಂದೂ, ಸಮತ್ವಸಹಿತನಿಷ್ಕಾಮಕರ್ಮವು ನಿವೃತ್ತಕರ್ಮವೆಂದೂ ಕರೆಯಲ್ಪಡುತ್ತವೆ. ಪ್ರವೃತ್ತಕರ್ಮದಿಂದ ಲಭ್ಯವಾದ ಸ್ವರ್ಗಾದಿಗಳನ್ನು ಭೋಗಿಸಿದ ನಂತರ ಇಹ ಲೋಕವನ್ನೋ, ಹೀನತರವಾದ ಇತರ ಅಧೋಲೋಕಗಳನ್ನೋ ಹೊಂದಬೇಕಾಗುವುದು. ನಿವೃತ್ತಕರ್ಮದಿಂದ ಈ ವಿಧವಾದ ನಶ್ವರಫಲಗಳಿಲ್ಲ ನೋಡು! ಜ್ಞಾನವೇ ಅದರ ಫಲವು.

ಅರ್ಜುನ—ಕರ್ಮಕ್ಕಿಂತ ಜ್ಞಾನವೇ ಉತ್ತಮವಾದರೆ, ಉತ್ತಮ ಜ್ಞಾನಾವಸ್ಥೆಯಲ್ಲಿ ಶಕ್ಯವೆಂದು ಹೇಳಲಾಗುವ ಈಶ್ವರೈಕ್ಯಭಾವವನ್ನು ಹೊಂದುವುದು ಯುಕ್ತವಾಗಬಹುದೇ?

ಶ್ರೀಕೃಷ್ಣ—ಇದೇನು ಪಾರ್ಥ! ಈಶ್ವರೈಕ್ಯವೆಂಬ ಈ ಅಸಂಗತ ಕಲ್ಪನೆಯು ನಿನ್ನ ಮನಸ್ಸಿಗೆ ಯುಕ್ತವೆಂದು ತೋರಿಲ್ಲವಷ್ಟೆ? ಅಜ್ಞಾನಿಗಳ ಸಂಶಯ ಪರಿಹಾರಕ್ಕಾಗಿ ಕೇಳುತ್ತಿರುವೆಯೆಂದು ನಾನು ಬಲ್ಲೆನು. ಅಣುಸ್ವರೂಪದ ಜೀವನು, ಸ್ವತಂತ್ರನೂ, ಸರ್ವಗತನೂ, ಅನಂತಗುಣನಿಧಿಯೂ ಆದ ಈಶ್ವರನ ನಿತ್ಯಾಧೀನಪ್ರತಿಬಿಂಬನೆಂದು ಹೇಳಿದುದನ್ನು

ಮರೆತಿಲ್ಲವಷ್ಟೆ. ಹೀಗಿರಲು ಜೀವನು ಈಶ್ವರತ್ವವನ್ನು ಎಂದೂ ಹೊಂದಲಾರನು. ನಿವೃತ್ತಿಕರ್ಮಲಭ್ಯವಾದ ಜ್ಞಾನವು, ಈಶ್ವರಸಾಕ್ಷಾತ್ಕಾರವನ್ನೂ, ಸ್ವಸ್ವರೂಪ ಜ್ಞಾನವನ್ನೂ ದೊರಕಿಸುವುದಲ್ಲದೇ ಈಶ್ವರೈಕ್ಯವನ್ನಲ್ಲ, ಬಹುಜಾಗ್ರತ! ಈ ಐಕ್ಯಭಾವನೆಯು ಮಹಾಅನರ್ಥಪ್ರಾಪಕವು. ಈ ಭಾವನೆಯುಳ್ಳವರು ಕೃಪಾವಿಷಯರು; ಅವರಿಗಾಗುವುದು ತಮಃಪ್ರಾಪ್ತಿ. ಆದ್ದರಿಂದ ಯೋಗಲಭ್ಯವಾದ ಜ್ಞಾನವು ಸಿದ್ಧಿಸಿದರೂ ಈಶ್ವರಶರಣಾಗತಿಯನ್ನೇ ಇಚ್ಛಿಸು. (೪೯)

ಅರ್ಜುನ—ಪ್ರಭೋ! ಕರ್ಮಫಲಕ್ಕಿಂತ ಜ್ಞಾನಫಲವು ಹೇಗೆ ವಿಲಕ್ಷಣವೆಂಬುದನ್ನು ಇನ್ನೂ ವಿಶದಗೊಳಿಸು.

ಶ್ರೀಕೃಷ್ಣ—ಯೋಗಲಭ್ಯವಾದ ಜ್ಞಾನವು ಭಗವಂತನ ಸಾಕ್ಷಾತ್ಕಾರರೂಪವಾದುದೇ. ಇದನ್ನು ಪಡೆದವನು, ಪುಣ್ಯಪಾಪಗಳೆರಡರಿಂದಲೂ ಮುಕ್ತನಾಗುವನು. ಕರ್ಮಬಂಧದಿಂದ ನಿರ್ಮುಕ್ತನಾಗಿ ನಿತ್ಯಾನಂದ ಸ್ಥಿತಿಯನ್ನು ಪಡೆಯುವನು.

ಅರ್ಜುನ—ಸುಖಸಾಧನವಾದ ಪುಣ್ಯವೂ ಜ್ಞಾನದಿಂದ ನಷ್ಟ ಹೊಂದುವುದಾದರೆ, ಜ್ಞಾನಿಗೆ ಸುಖಾಭಾವವನ್ನೇ ಹೇಳಬೇಕಾಗುವುದಲ್ಲವೇ?

ಶ್ರೀಕೃಷ್ಣ—ಹಾಗೆ ಶಂಕಿಸಬೇಡ, ಅರ್ಜುನ! ಜ್ಞಾನಿಯ ಸುಖವು ಸಾಧನವಸ್ತುಗಳನ್ನು ಅವಲಂಬಿಸಿದ್ದಲ್ಲ; ಸಾಧನ ಜನ್ಯವಾದುದೂ ಅಲ್ಲ; ಸ್ವಸ್ವರೂಪಸ್ಥಿತವಾದ ಆನಂದದ ಆವಿರ್ಭಾವವು. ಅನಿಷ್ಟಪುಣ್ಯವೆಂದೂ, ಇಷ್ಟಪುಣ್ಯವೆಂದೂ ಪುಣ್ಯವು ಎರಡು ವಿಧ. ಮಾನುಷ್ಯದೇಹಾದಿಗಳಿಗೂ, ಮದಜನಕವಾದ ಐಶ್ವರ್ಯಾದಿ ಫಲಗಳಿಗೂ ಕಾರಣವಾದುದು ಅನಿಷ್ಟ ಪುಣ್ಯವು. ಭಗವದುಪಾಸನಾದಿಗಳಿಂದ ಪ್ರಾಪ್ತವಾದ ಪುಣ್ಯವು ಇಷ್ಟ ಪುಣ್ಯವು. ಅದು, ಜ್ಞಾನಾಭಿವೃದ್ಧಿಗೂ, ಮುಕ್ತಿಯಲ್ಲಿ ಆನಂದದ ಉನ್ನಾಹಕ್ಕೂ ಕಾರಣವಾಗುತ್ತದೆ. ಜ್ಞಾನದಿಂದ, ಅನಿಷ್ಟಪುಣ್ಯವನ್ನೂ, ಸರ್ವಪಾಪಗಳನ್ನೂ, ಜ್ಞಾನಿಯು ಕಳೆದುಕೊಳ್ಳುತ್ತಾನೆ; ಇಷ್ಟಪುಣ್ಯ

ವನ್ನಳಿ. ಹೀಗೆ ಸರ್ವಾನಿಷ್ಟನಿವೃತ್ತಿಪೂರ್ವಕವಾದ ಮೋಕ್ಷಾನಂದಾಭಿವೃದ್ಧಿಯೇ ಜ್ಞಾನಲಭ್ಯವಾದ ಮಹಾಫಲವು. ಆದ್ದರಿಂದ ಜ್ಞಾನೋಪಾಯರೂಪವಾದ ನಿವೃತ್ತಕರ್ಮವೇ ಕರ್ಮಗಳಲ್ಲಿ ಶ್ರೇಷ್ಠವು. ಸಾರಾಂಶ, ಫಲಾಶೆಯನ್ನು ನೀಗಿ ಈಶ್ವರಪ್ರೀತ್ಯರ್ಥವಾಗಿ ವಿಹಿತಕರ್ಮಗಳನ್ನು ಮಾಡುವುದೆಂಬುದೇ ಕರ್ಮಾಚರಣೆಯಲ್ಲಿರಬೇಕಾದ ಕೌಶಲ್ಯವು. ಕರ್ಮಕುಶಲತೆಯೇ ಯೋಗವು. (೫೦) ಯೋಗವನ್ನಾಶ್ರಯಿಸಿ, ವೇದಾದಿ ಸಚ್ಛಾಸ್ತ್ರಶ್ರವಣ, ಮನನಗಳಿಂದ ಪರಮಾತ್ಮನ ಮಹಾಮಹಿಮೆಗಳ ಜ್ಞಾನವನ್ನು ಪಡೆಯಬೇಕು. ಈ ವಿಧವಾದ ಶಾಸ್ತ್ರಜನ್ಯಪರೋಕ್ಷಜ್ಞಾನವು ಪರಿಪಕ್ವವಾದರೆ, ಧ್ಯಾನವು ಸಿದ್ಧಿಸುವುದು. ಧ್ಯಾನಗಮ್ಯನಾದ ಪರಮಾತ್ಮನನ್ನು ಸ್ವಹೃದಯದಲ್ಲಿ ಕಂಡವರು ಅಪರೋಕ್ಷಜ್ಞಾನಿಗಳೆನಿಸುವರು. ಅವರೇ ಬ್ರಹ್ಮಜ್ಞಾನಿಗಳು; ಜನನಮರಣರೂಪ ಸಂಸಾರದಿಂದ ಬಿಡುಗಡೆಹೊಂದಿ ದುಃಖಸ್ಪರ್ಶವಿಲ್ಲದ ನಿತ್ಯಾನಂದವನ್ನು ಹೊಂದಲರ್ಹರು. (೫೧)

ಅರ್ಜುನ—ಜ್ಞಾನಾರ್ಥಿಯು ಈಶ್ವರಾರಾಧನರೂಪನಿಷ್ಕಾಮಕರ್ಮಗಳನ್ನು ಎಲ್ಲಿಯವರೆಗೆ ಆಚರಿಸುತ್ತಿರಬೇಕು?

ಶ್ರೀಕೃಷ್ಣ—ಅನ್ಯಥಾಜ್ಞಾನಲಕ್ಷಣದೋಷವು ಅಂತಃಕರಣವನ್ನು ಬಿಟ್ಟು ತೊಲಗುವವರೆಗೂ ಆಚರಿಸಬೇಕು. ಜ್ಞಾನಕ್ಕೆ ಸಾಕ್ಷಾತ್ ಸಾಧನಗಳಾದ ಶ್ರವಣ, ಮನನ, ಧ್ಯಾನಗಳಿಗೆ ಯೋಗಾನುಷ್ಠಾನವು ಉಪಕಾರಕವು. ನಿವೃತ್ತಕರ್ಮಾನುಷ್ಠಾನದಿಂದ ಹುಟ್ಟುವ ಪುಣ್ಯರೂಪವಾದ ಅದೃಷ್ಟವು (ಶಕ್ತಿವಿಶೇಷವು), ಮಿಥ್ಯಾಜ್ಞಾನರೂಪವಾದ (ಅಯಥಾರ್ಥವನ್ನು ಗ್ರಹಿಸುವುದೆಂಬ) ಮನೋದೋಷವನ್ನು ಕ್ರಮವಾಗಿ ಪರಿಹರಿಸುತ್ತಾ ಮನಸ್ಸನ್ನು ಶುದ್ಧಿಗೊಳಿಸಿ, ಧ್ಯಾನಯೋಗ್ಯವಾದುದನ್ನಾಗಿ ಮಾಡುವುದು. ಆದ್ದರಿಂದ, ದೋಷಪರಿಹಾರವಾಗಿ ಅಂತಃಕರಣವು ಶುದ್ಧವಾಗುವ ಪರ್ಯಂತವೂ ಯೋಗಾನುಷ್ಠಾನವು ಅತ್ಯವಶ್ಯಕ. ಚಿತ್ತಶುದ್ಧಿಯುಳ್ಳವನು, ಶ್ರೇಷ್ಠರಿಂದ ತಿಳಿದು ಆಚರಿಸಲ್ಪಟ್ಟ ಮತ್ತು ತಿಳಿದು ಆಚರಿಸಲರ್ಹವಾದ ಸಕಲಕರ್ಮಗಳ ಅತ್ಯಂತಲಾಭವನ್ನು ಹೊಂದುತ್ತಾನೆ.

ಕರ್ಮಾನುಷ್ಠಾನದ ಮುಖ್ಯಫಲಕ್ಕೆ ಅರ್ಹನಾಗುತ್ತಾನೆ. (೫೨)

ಅರ್ಜುನ—ಮಿಥ್ಯಾಜ್ಞಾನವೆಂಬ ದೋಷದ ಸ್ವರೂಪವೆಂತಹುದು? ಅದನ್ನು ದಾಟಿರುವೆವೆಂದು ಹೇಗೆ ತಿಳಿಯಬೇಕು?

ಶ್ರೀಕೃಷ್ಣ—ವೇದಾದಿಶಾಸ್ತ್ರಗಳ ಮಹಾತಾತ್ಪರ್ಯಾರ್ಥಗಳನ್ನು ಗ್ರಹಿಸದೇ ತದ್ವಿರುದ್ಧಾರ್ಥಗಳನ್ನೇ ಗ್ರಹಿಸುವ ಬುದ್ಧಿದೋಷವು ಮಿಥ್ಯಾಜ್ಞಾನವೆನಿಸುವುದು; ಅದೇ ಮೋಹಕಲಿಲವು. ವೇದಾರ್ಥಾನುಸಾರಿಯಾದ ತತ್ತ್ವನಿಶ್ಚಯವನ್ನು ಪಡೆದರೆ, ಮಿಥ್ಯಾಜ್ಞಾನವನ್ನು ಕಳೆದುಕೊಂಡಂತೆಯೇ. ಇದೇ ಅದರ ದಾಟುವಿಕೆಯು. ದೋಷಯುಕ್ತವಾದ ನಿನ್ನ ಬುದ್ಧಿಯು ಯಾವಾಗ ವೇದಾರ್ಥಾನುಸಾರಿಯಾದ ತತ್ತ್ವಗಳನ್ನು ಗ್ರಹಿಸಿ, ಅವುಗಳ ನಿಶ್ಚಯವನ್ನು ಪಡೆಯುವುದೋ, ಮತ್ತು ವಿವಿಧ ದುರ್ಮತಗಳ ಅನೇಕ ಪ್ರಕಾರಕ ಬೋಧೆಗಳಿಂದ ಸಂಶಯಗೊಳ್ಳದೇ ಸ್ಥಿರವಾಗಿ ನಿಲ್ಲುವುದೋ ಆಗ ಮಾತ್ರ ಧ್ಯಾನವು ಸಾಧಿಸುವುದು, ಧ್ಯಾನದ ಸಿದ್ಧಿಯೇ ಸಮಾಧಿಯು. ಭೇರಿತಾಡನಾದಿಗಳಿಂದ ಸಹ ಬಹಿರ್ಮುಖವಾಗಲಾರದ (ಬಾಹ್ಯವಸ್ತುಗಳಲ್ಲಿ ಇಂದ್ರಿಯಗಳ ದ್ವಾರಾ ಹರಿಯದ) ಮನಃಸ್ಥಿತಿಯು ಅಸಂಪ್ರಜ್ಞಾತ-ಸಮಾಧಿಯೆನಿಸುವುದು. ಆಗ ಯೋಗಫಲವಾದ ಜ್ಞಾನವನ್ನು (ಭಗವದ್ದರ್ಶನವನ್ನು) ಹೊಂದುವಿ. ತಿಳಿಯಿತೇ, ಅರ್ಜುನ! ಇದನ್ನೇ ಸ್ಪಷ್ಟಗೊಳಿಸುವೆನು, ಕೇಳು. ಭಗವತ್ತತ್ವದ ಪರೋಕ್ಷನಿಶ್ಚಯವು ದೊರಕುವ ಮೊದಲು ಆಚರಿಸಲ್ಪಡುವ ಯೋಗವು (ನಿವೃತ್ತಕರ್ಮಾನುಷ್ಠಾನವು), ಪರೋಕ್ಷತತ್ತ್ವನಿಶ್ಚಯಕ್ಕೆ ಕಾರಣವಾಗುವುದು ಮತ್ತು ಅದಕ್ಕೆ ಪರೋಕ್ಷ-ತತ್ತ್ವನಿಶ್ಚಯವೇ ಅವಧಿಯು. ನಂತರ ಆಚರಿಸಲ್ಪಡುವ ಯೋಗವು, ದುರ್ಮತಗಳ ಆಘಾತದಿಂದ ಪರೋಕ್ಷತತ್ತ್ವನಿಶ್ಚಯದಲ್ಲಿ ಅಪ್ರಾಮಾಣ್ಯ-ಶಂಕೆಯುಂಟಾಗದಂತೆ ಮಾಡುವುದು. ಈ ವಿಧತತ್ತ್ವನಿಶ್ಚಯದಾರ್ಢ್ಯವಿದ್ದಾಗ ಆಚರಿಸಲ್ಪಡುವ ಯೋಗಕ್ಕೆ ಭಗವದಪರೋಕ್ಷವೇ ಫಲವು ಮತ್ತು ಅವಧಿಯು. ಜ್ಞಾನೋತ್ತರಕಾಲೀನವಾದ ನಿವೃತ್ತಕರ್ಮಾನುಷ್ಠಾನಕ್ಕೆ ಜ್ಞಾನವೈಶದ್ಯವೂ ಮುಕ್ತಿಯಲ್ಲಿ ಆನಂದಾತಿಶಯವೂ ಫಲವು. ಸಾಧ್ಯಾ-ನಂದಸ್ವರೂಪರಾದ ಮುಕ್ತರಿಗೆ ಯಾವಕರ್ಮದಿಂದ ಏನೂ ಆಗಬೇಕಾದುದಿಲ್ಲ. (೫೩)

ಅರ್ಜುನ—ಹೇ ಕೇಶವ! ಅಪರೋಕ್ಷಜ್ಞಾನಿಯ ಲಕ್ಷಣಗಳೇನು? ಅಸಂಪ್ರಜ್ಞಾತಸಮಾಧಿಯಲ್ಲಿ ಬ್ರಹ್ಮದರ್ಶನವನ್ನು ಪಡೆದವನ ಲಕ್ಷಣಗಳನ್ನು ಹೇಳಿರುವಿ. ಆದರೆ, ಶುಕಾಚಾರ್ಯರೇ ಮೊದಲಾದ ಶ್ರೇಷ್ಠ ಬ್ರಹ್ಮಜ್ಞಾನಿಗಳೂ ಸಹ ಬಾಹ್ಯಪ್ರವೃತ್ತಿಯುಳ್ಳವರೆಂದು ಕಂಡುಬರುತ್ತದೆ. ಧ್ಯಾನದಿಂದ ಅಚಂಚಲವಾದ ಮನಸ್ಸು ಅನ್ಯವಿಷಯಗಳಲ್ಲೇಕೆ ಪ್ರವೃತ್ತವಾಗುವುದು? ಸಮಾಧಿಯಲ್ಲಿ ಬ್ರಹ್ಮದರ್ಶನವನ್ನು ಪಡೆದು ಆನಂದಿಸುವನೆಂಬ ಲಕ್ಷಣವನ್ನುಳಿದು, ಅಪರೋಕ್ಷಜ್ಞಾನಿಯ ಇತರ ವ್ಯವಹಾರಯೋಗ್ಯ ಲಕ್ಷಣಗಳನ್ನು ವಿವರಿಸು. ಯಾವ ಲಕ್ಷಣಗಳಿಂದ ಯಾವನೊಬ್ಬನು ಬ್ರಹ್ಮದರ್ಶನವನ್ನು ಪಡೆದ ಜ್ಞಾನಿಯೆಂದು ತಿಳಿಯಬಹುದು? ಅಂಥ ಜ್ಞಾನಿಯು ಯಾವ ಉದ್ದೇಶದಿಂದ ಬಾಹ್ಯವ್ಯಾಪಾರಗಳಲ್ಲಿ ಪ್ರವೃತ್ತನಾಗುವನು? ಬ್ರಹ್ಮದರ್ಶನಲಭ್ಯವಾದ ಪರಮಾನಂದದಲ್ಲಿ ಮಗ್ನನಾದವನು ಮಾತನಾಡುವುದು, ಕೂಡುವುದು, ನಿಲ್ಲುವುದು, ನಡೆವುದು ಮುಂತಾದ ಕ್ರಿಯೆಗಳಲ್ಲಿ ಏತಕ್ಕಾಗಿ ತೊಡಗುವನು? (೫೪)

ಶ್ರೀ ಕೃಷ್ಣ— ಸಿದ್ಧವಾದ ಬ್ರಹ್ಮದರ್ಶನವುಳ್ಳವನಾದ್ದರಿಂದ ಜ್ಞಾನಿಯು ಸ್ಥಿತಪ್ರಜ್ಞನೆಂದು ಕರೆಯಲ್ಪಡುವನು. ಸ್ಥಿತಪ್ರಜ್ಞನು ಬಾಹ್ಯವ್ಯಾಪಾರಗಳಲ್ಲಿ ಏಕೆ ಪ್ರವೃತ್ತನಾಗುವನೆಂಬ ನಿನ್ನ ಪ್ರಶ್ನೆಯನ್ನು ನಂತರ ಉತ್ತರಿಸುವೆನು. ಆತನ ವ್ಯವಹಾರೋಪಯೋಗಿಯಾದ ಇತರ ಲಕ್ಷಣಗಳನ್ನು ಮೊದಲು ನಿರೂಪಿಸುವೆನು. ಜ್ಞಾನಾರ್ಥಿಯು ಈ ಲಕ್ಷಣಗಳನ್ನು ತಾನು ದೊರಕಿಸಿಕೊಳ್ಳಲು ಯತ್ನಿಸಬೇಕು. ಸ್ಥಿತಪ್ರಜ್ಞನು ಮನೋಗತವಾದ ಸರ್ವಕಾಮಗಳನ್ನು ಪರಿತ್ಯಾಗಮಾಡಿ, ಪರಮಾತ್ಮನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗಿ ಆತನ ಪ್ರಸನ್ನತೆಯಿಂದಲೇ ಸಂತುಷ್ಟನಾಗಿರುವನು.

ಅರ್ಜುನ—ಮನೋಗತವಾದ ಕಾಮಗಳನ್ನು ಬಿಟ್ಟವನೆಂದು ಹೇಳುವುದರಲ್ಲಿ ವಿಶೇಷವೇನು? ಮನೋಗತವಾಗದ ಕಾಮವಿದೆಯೇ? ಮತ್ತು ಸರ್ವಕಾಮಗಳನ್ನು ಬಿಡುವುದೆಂದರೇನು? ಭಗವತ್ಸಂಬಂಧಿಯಾದ ಕಾಮಗಳನ್ನೂ ಬಿಡುವುದೇ?

ಶ್ರೀ ಕೃಷ್ಣ—ಅರ್ಜುನ! ಯೋಗ್ಯವಾದ ಪ್ರಶ್ನೆಯನ್ನು ಮಾಡಿರುವೆ; ಹೇಳುವೆನು ಕೇಳು. ಕಾಮುಪರಿತ್ಯಾಗವೆಂಬುದರಿಂದ ಕ್ರೋಧವೇ ಮೊದಲಾದ ಇತರ ದೋಷಗಳನ್ನೂ ಗ್ರಹಿಸಬೇಕು. ಕಾಮವೆಂದರೆ ನಿಷಿದ್ಧವಿಷಯಭೋಗಲಾಲಸೆಯು. ಅಪರೋಕ್ಷಜ್ಞಾನಿಯು ನಿಷಿದ್ಧ ಸರ್ವಕಾಮಾದಿಗಳನ್ನು ಬಿಟ್ಟಿರುವನು. ಜ್ಞಾನ ಮತ್ತು ನಿಷಿದ್ಧ ಕಾಮಾದಿಗಳು ಪರಸ್ಪರ ವಿರುದ್ಧವಾದವುಗಳು ಮತ್ತು ಎರಡೂ ಮನೋಗತವಾದವುಗಳು. ಪರಮಾತ್ಮವಿಷಯಕಜ್ಞಾನವು ಮನಸ್ಸಿನಲ್ಲಿ ಉದಯಿಸಲು, ತದ್ವಿರುದ್ಧವಾದ ಕಾಮಾದಿಗಳು ತಾವಾಗಿಯೇ ತೊಲಗುವುವು. ಅವರೆಗೆ ಮನಸ್ಸನ್ನು ಆಕ್ರಮಿಸಿದ್ದ ನಿಷಿದ್ಧ (ಅತ ಏವ ವಿರುದ್ಧ) ಕಾಮಗಳನ್ನು ಹೇಳಲಿಕ್ಕಾಗಿಯೇ 'ಮನೋಗತ' ವಾದ ಕಾಮುಗಳೆಂದು ಹೇಳಿದುದು. ಭಗವತ್ಸಂಬಂಧವಾದ ಸತ್ಕಾಮುಗಳು (ಅನಿಷಿದ್ಧಕಾಮಗಳು) ಜ್ಞಾನದೊಂದಿಗೆ ಸಹಜವಾಗಿರತಕ್ಕವುಗಳು. ಆದ್ದರಿಂದ ಸಕಲ ವಿರುದ್ಧಕಾಮಾದಿ ಪರಿತ್ಯಾಗಪೂರ್ವಕವಾದ ಭಗವದೇಕಚಿತ್ತತ್ವದಿಂದ ಲಭಿಸುವ ಸಂತೋಷವೇ ಸ್ಥಿತಪ್ರಜ್ಞನ ಲಕ್ಷಣವೆಂದು ತಿಳಿ. ಜ್ಞಾನಾರ್ಥಿಗಳು ಈ ಮೊದಲಾದ ನಾನು ಹೇಳುವ ಲಕ್ಷಣಗಳನ್ನು ಯತ್ನಪೂರ್ವಕವಾಗಿ ದೊರಕಿಸಿಕೊಳ್ಳಬೇಕು. ಜ್ಞಾನಿಗಾದರೋ ಅವು ಸ್ವಭಾವಸಿದ್ಧವಾಗಿರುವುವು. (೫೫)

ಅರ್ಜುನ—ಕಾಮಶಬ್ದದಿಂದ ಸೂಚಿತವಾದ (ಉಪಲಕ್ಷಿತವಾದ) ಇತರ ದೋಷಪರಿತ್ಯಾಗವೆಂಬ ಜ್ಞಾನಿಲಕ್ಷಣಗಳಾವುವು?

ಶ್ರೀ ಕೃಷ್ಣ—ದುಃಖಗಳಿಂದ ಮನಸ್ಸು ಉದ್ವೇಗಹೊಂದದಿರುವುದು; ವಿಷಯಸುಖಗಳನ್ನು ಇಚ್ಛಿಸದಿರುವುದು; ರಾಗ, ಭಯ, ಕ್ರೋಧಗಳಿಂದ ರಹಿತನಾಗಿರುವುದು; ಭಗವದ್ಗುಣಗಳನ್ನು ಮರೆಯದಿರುವುದು. ಇವೆಲ್ಲವೂ ಸ್ಥಿತಪ್ರಜ್ಞನ ಲಕ್ಷಣಗಳು. ಅಶುಭವಾದುದನ್ನು ಶುಭಕರವೆಂದು ಮೋಹಿಸುವುದು ರಾಗವು. ಜ್ಞಾನಿಯು ಇದರಿಂದ ರಹಿತನು. ಶುಭಗುಣಪೂರ್ಣನಾದ ಶ್ರೀ ಹರಿಯಲ್ಲಿ ಜ್ಞಾನಿಯು ಸದಾ ರತನಾಗಿಯೇ ಇರುವನು. (೫೬)

ಅರ್ಜುನ—ಜ್ಞಾನಿಗೆ, ರಾಗ, ಭಯ ಕ್ರೋಧಗಳಿಲ್ಲದಿರಲು ಕಾರಣ ವೇನು?

ಶ್ರೀ ಕೃಷ್ಣ— ಜ್ಞಾನಿಯು ಸರ್ವವಿಷಯಕಸ್ನೇಹವನ್ನು ಬಿಟ್ಟಿರುವನು. ಅದ್ದರಿಂದಲೇ ಶುಭಾಶುಭಗಳನ್ನು ಹೊಂದಿದರೂ, ಅವುಗಳಲ್ಲಿ ಪ್ರೀತಿ ಮತ್ತು ದ್ವೇಷಭಾವಗಳನ್ನು ಹೊಂದುವುದಿಲ್ಲ. ಪ್ರೀತಿ ದ್ವೇಷಭಾವಗಳೇ ರಾಗ, ಭಯ, ಕ್ರೋಧಗಳಿಗೆ ಕಾರಣವು. (೫೭)

ಜ್ಞಾನಿಯು, ಶ್ರೋತ್ರಾದಿ ಎಲ್ಲ ಇಂದ್ರಿಯಗಳನ್ನೂ ಶಬ್ದಾದಿ ವಿಷಯಗಳಿಂದ ಉಪಸಂಹರಿಸಿಕೊಳ್ಳುವ ಸ್ವಾಭಾವಿಕ ಶಕ್ತಿಯುಳ್ಳವನಾಗಿರುವನು. ಅಶುಭ ವಿಷಯುಗಳಿಂದ, ಇಂದ್ರಿಯಗಳನ್ನು ಸೆಳೆದು ಹಿಂದಿಟ್ಟುಕೊಳ್ಳುವನು. ಶುಭವಿಷಯಗಳಲ್ಲಿ ಮಾತ್ರ ಪ್ರವೃತ್ತಿಗೊಳಿಸುವನು. ಈ ವಿಧವಾದಶಕ್ತಿಯು ಜ್ಞಾನಿಗೆ ಮಾತ್ರ; ಸಾಧಕನಿಗಿಲ್ಲ. (ಸಾಧಕ=ಜಿಜ್ಞಾಸು-ಜ್ಞಾನಕ್ಕಾಗಿ ಯತ್ನಿಸುವವನು). ಆಮೆಯು (ಕೂರ್ಮ) ತನ್ನ ಬೆನ್ನುಚಿಪ್ಪಿನೊಳಗೆ, ಕೈಕಾಲುಗಳನ್ನು **ಅನಾಯಾಸವಾಗಿ** ಸೆಳೆದುಕೊಂಡು **ನಿರ್ಭಯದಿಂದ ಅಪಾಯರಹಿತವಾಗಿ** ಸಂಚರಿಸುವಂತೆ, ಜ್ಞಾನಿಗೆ ಇಂದ್ರಿಯಗಳ ಉಪಸಂಹಾರವು (ಹಿಂದಕ್ಕೆ ಸೆಳೆದುಕೊಳ್ಳೋಣವು) ಸಹಜವಾಗಿ ಸಿದ್ಧಿಸುವುದು ಮತ್ತು ನಿರ್ಭಯದಿಂದ ಭಗವಧ್ಯಾನದಲ್ಲಿ ತೊಡಗಿ ದೋಷಲೇಪವಿಲ್ಲದವನಾಗಿರುವನು. (೫೮)

ಅರ್ಜನ—ವಿಷಯ ಭೋಗಪರಿತ್ಯಾಗದಿಂದ ಕಾಮಾದಿಗಳ ಜಯವೂ ಅದರಿಂದ ಜ್ಞಾನವೂ ಲಭಿಸುವುದಾದರೆ, ಎಲ್ಲರೂ ಏಕೆ ಅದನ್ನು ಸಾಧಿಸುವುದಿಲ್ಲ?

ಶ್ರೀಕೃಷ್ಣ—ಪಾರ್ಥ! ಕಾಮಾದ್ಯುಪದ್ರವಗಳ ಪರಿಹಾರವು ಅಷ್ಟು ಸುಲಭವಲ್ಲ. ತಮ್ಮಿಂದ ಭೋಗಯೋಗ್ಯವಾದ ಶಬ್ದರೂಪರಸಾದಿ ಪಿಷಯಗಳು ಸಮೀಪದಲ್ಲಿದ್ದರೂ ಬಾಹ್ಯೇಂದ್ರಿಯಗಳು ಅವುಗಳೊಂದಿಗೆ ಸಂಬಂಧವನ್ನು ಹೊಂದಬಾರದು. ಸಂಬಂಧ ಹೊಂದಿದರೂ ಅವುಗಳ

ಎದುರಾಗುವಂತೆ ಮನಸ್ಸನ್ನು ಅಪಹರಿಸಬಾರದು. ಮನಸ್ಸನ್ನು ಅಪಹ ಸಿದರೂ, ಮನಸ್ಸಿನಲ್ಲಿ ವಿಷಯರಾಗವು ಹುಟ್ಟಬಾರದು. ಹೀಗಾದ ಮಾತ್ರ ಜೀವಾತ್ಮನು ಕ್ಷೋಭೆಗೊಳ್ಳುವುದಿಲ್ಲ. ಇದೇ ಇಂದ್ರಿಯಜಯವು. ಈ ವಿಧವಾದ ಇಂದ್ರಿಯಜಯವು, ಬಾಹ್ಯೇಂದ್ರಿಯಗಳ ಭೋಗಶಕ್ತಿಯನ್ನು ಗೆಲ್ಲುವುದು ಮತ್ತು ಮನಸ್ಸಿನ ವಿಷಯರಾಗವನ್ನು ಪರಿತ್ಯಾಗ ಮಾಡುವುದು, ಎಂಬ ಎರಡು ಪ್ರಕಾರದ ಸಾಧನಗಳಿಂದ ಲಭಿಸುವುದೆಂದು ಸಂಗ್ರಹವಾಗಿ ನಿರೂಪಿಸಬಹುದು. ಇವೆರಡು, ಜಿಜ್ಞಾಸುವಿಗೆ ನಿರಾಹಾರ ದಿಂದಲೂ, ಜ್ಞಾನಿಗೆ ಬ್ರಹ್ಮದರ್ಶನದಿಂದಲೂ ದೊರೆಯುವುದು. ಹೀಗೆ ಹೇ ಪಾರ್ಥ! ಇಂದ್ರಿಯಜಯವು ಮಹಾಪ್ರಯತ್ನಸಾಧ್ಯವಾದುದು. ನಿರಾಹಾರವೆಂದರೆ ಚಕ್ಷುರಾದಿ ಇಂದ್ರಿಯಗಳಿಗೆ ಅವುಗಳಿಂದ ಭೋಗ್ಯವಾದ ವಿಷಯಗಳನ್ನು ದೊರಕಿಸದಿರುವುದು. ನಿರಾಹಾರದಿಂದ ಇಂದ್ರಿಯಗಳ ಭೋಗಶಕ್ತಿಯು ನಿವೃತ್ತವಾಗುವುದಲ್ಲದೇ ಮನಸ್ಸಿನ ವಿಷಯಾಭಿಲಾಷೆಯು ನಿಶ್ಶೇಷವಾಗಿ ಹೋಗುವುದಿಲ್ಲ. ಪರಮಾತ್ಮನ ದರ್ಶನದಿಂದಲೇ ವಿಷಯ ರಾಗವೆಂಬ ಈ ರಸವು ದೇಹಿಯನ್ನು ಬಿಟ್ಟು ತೊಲಗುವುದು. ಅಲ್ಲದೇ ಪಂಚಜ್ಞಾನೇಂದ್ರಿಯಗಳ ಮಧ್ಯೆ ರಸನೇಂದ್ರಿಯವು ಬಹು ಪ್ರಬಲ ವಾದುದು. ಇತರ ಇಂದ್ರಿಯಗಳ ಭೋಗಶಕ್ತಿಯೂ, ಮಾನಸಿಕ ಭೋಗೇಚ್ಛೆಯೂ ನಿರಾಹಾರದಿಂದ ಬಹುಮಟ್ಟಿಗೆ ನಿವೃತ್ತಿ ಹೊಂದಿದರೂ ರಸನೇಂದ್ರಿಯದ ಭೋಗಶಕ್ತಿಯೂ ಮಾನಸಿಕ ಭೋಗೇಚ್ಛೆಯೂ ಭಗವದ್ದರ್ಶನದಿಂದ ಮಾತ್ರ ನಿಶ್ಶೇಷವಾಗಿ ನಾಶಹೊಂದಬಲ್ಲದು. (೫೯)

ಅರ್ಜುನ— ಇಂದ್ರಿಯಜಯಸಂಪಾದನೆಗೆ ನಿರಾಹಾರರೂಪ ಮಹಾಪ್ರಯತ್ನವೇಕೆ ಅವಶ್ಯಕ? ಇಂದ್ರಿಯಗಳನ್ನು ದುರ್ವಿಷಯಗಳಿಂದ ಹಿಂತಿರುಗಿಸಿ ಸದ್ವಿಷಯಗಳಲ್ಲಿ ಸ್ಥಾಪಿಸುವುದೆಂಬ 'ಪ್ರತ್ಯಾಹಾರ' ವೇ ಮೊದಲಾದ ಸಾಮಾನ್ಯ ಯತ್ನಗಳಿಂದಲೂ ಸಾಧ್ಯವಾಗುವುದು. ಬ್ರಹ್ಮಾ ಪರೋಕ್ಷವಾದರೂ ಏತಕ್ಕೆ? ನಿತ್ಯಾನಿತ್ಯ ವಿವೇಕಜ್ಞಾನದಿಂದಲೇ ಮನಸ್ಸಿನ ವಿಷಯಲಾಲಸೆಯನ್ನು ಹೋಗಲಾಡಿಸಿಕೊಳ್ಳಬಹುದು.

ಶ್ರೀ ಕೃಷ್ಣ—ಪ್ರತ್ಯಾಹಾರಾದಿ ಸಾಧಾರಣಯತ್ನಗಳುಳ್ಳ ವಿದ್ವಾಂಸನ (ಬ್ರಹ್ಮದರ್ಶನವಿಲ್ಲದ ಪರೋಕ್ಷಜ್ಞಾನಿಯ) ಇಂದ್ರಿಯಗಳು ಸಹ, ಆತನ ಮನಸ್ಸನ್ನು ಅಪಹರಿಸುತ್ತವೆ. ವಿಷಯಸಂಬಂಧವುಳ್ಳ ಇಂದ್ರಿಯಗಳು ಮನಸ್ಸನ್ನು ವಿಷಯಾಭಿಮುಖಗೊಳಿಸಿ, ವಿಷಯರಾಗಯುಕ್ತವಾದುದನ್ನಾಗಿ ಮಾಡುತ್ತವೆ. ರಾಗಯುಕ್ತವಾದ ಮನಸ್ಸು ದೇಹಾಭಿಮಾನಿಯಾದ ಜೀವನನ್ನು ವ್ಯಾಕುಲಗೊಳಿಸುತ್ತದೆ. ಇಂಥವನು ಇಂದ್ರಿಯಗಳಿಂದ ವಿಜಿತನಲ್ಲದೇ, ಇಂದ್ರಿಯಜಯವುಳ್ಳವನಲ್ಲ. ಇಂದ್ರಿಯಜಯವೇ ಇಲ್ಲದಿರಲು ವಿವೇಕಜ್ಞಾನವಾಗಲಿ, ಅದರಿಂದ ಮನಸ್ಸಿನ ಭೋಗಲಾಲಸೆಯು ತಪ್ಪುವುದಾಗಲಿ, ದುಸ್ಸಾಧ್ಯವೇ ಸರಿ. ಆದ್ದರಿಂದ ಇಂದ್ರಿಯಜಯವು ನಿರಾಹಾರಾದಿ ಮಹಾಪ್ರಯತ್ನದಿಂದಲೇ ಲಭ್ಯವು ಮತ್ತು ಬ್ರಹ್ಮದರ್ಶನದಿಂದಲೇ ವಿಷಯಲಾಲಸೆಯ ನಿಶ್ಶೇಷ ನಾಶವು. (೬೦)

ಅರ್ಜುನ—ಸಾಮಾನ್ಯ ಯತ್ನಗಳಿಂದ ಮತ್ತು ವಿವೇಕ ಜ್ಞಾನದಿಂದ ಇಂದ್ರಿಯಜಯವು ದೊರೆಯದಿದ್ದರೆ, ನೀನು ಹೇಳುವ ಮಹಾಪ್ರಯತ್ನದಿಂದಲೂ ಅಶಕ್ಯವೆಂದೇ ತೋರುವುದು. ಈ ಜಯವು ನಿರಾಹಾರದಿಂದ ಲಭಿಸುವುದೆಂಬುದೂ ಯುಕ್ತವಲ್ಲ; ನಿರಾಹಾರದಿಂದ ದೇಹವೇ ಕ್ಷಯಿಸುವುದು. ಬ್ರಹ್ಮದರ್ಶನದಿಂದ ಸಾಧ್ಯವೆಂದರೆ, ಇಂದ್ರಿಯಜಯವಿಲ್ಲದೇ ಬ್ರಹ್ಮದರ್ಶನವಿಲ್ಲ—ಬ್ರಹ್ಮದರ್ಶನವಿಲ್ಲದೇ ಇಂದ್ರಿಯಜಯವಿಲ್ಲವೆಂಬ ಅನ್ಯೋನ್ಯಾಶ್ರಯದೋಷದಿಂದ, ಅದೂ ಅನುಪಪನ್ನವಾಗುವುದು.

ಶ್ರೀಕೃಷ್ಣ—ಇಂದ್ರಿಯಗಳ ಜಯವು ನಿರಾಹಾರಾದಿ ಮಹಾಪ್ರಯತ್ನದಿಂದಲೇ ಸಾಧ್ಯವಾದುದು. ನಿರಾಹಾರಾದಿ ಯತ್ನಗಳೇ ದುಸ್ಸಾಧ್ಯವೆಂದು ತಿಳಿಯುವುದು ಸರಿಯಲ್ಲ. ದೇಹನಾಶಪರ್ಯಂತವಾದ ನಿರಾಹಾರವನ್ನು ಹೇಳಿದೆನೆಂದು ಭಾವಿಸಬೇಡ. ಅಶಕ್ತರು ಯಥಾಯೋಗ್ಯವಾಗಿ ಈ ಸಾಧನವನ್ನು ಕೈಗೊಳ್ಳಬೇಕು. ಇಂದ್ರಿಯಗಳೆಲ್ಲವನ್ನೂ ವಿಷಯಗಳಿಂದ ಉಪಸಂಹರಿಸಿಕೊಂಡು, ಪರಮಾತ್ಮನೇ ಸರ್ವೋತ್ತಮನೆಂಬ ಜ್ಞಾನವುಳ್ಳವನಾಗಿ, ಆತನಲ್ಲಿ ಮನಸ್ಸನ್ನು ಸ್ಥಾಪಿಸಬೇಕು. ಇದೇ ಮುಖ್ಯ

ಸಾಧನವು. ನಿರಾಹಾರಾದಿಗಳು ಯತ್ನದ ವಸ್ತುಸ್ಥಿತಿಪ್ರದರ್ಶನಾರ್ಥವಾಗಿ ಹೇಳಲ್ಪಡುತ್ತವೆ. ಹೀಗೆ ಇಂದ್ರಿಯಗಳನ್ನು ವಶಪಡಿಸಿಕೊಳ್ಳುವವನು ಶೀಘ್ರವಾಗಿ ಬ್ರಹ್ಮದರ್ಶನವನ್ನು ಪಡೆಯುವನು. ಆಗ ಮನಸ್ಸಿನ ವಿಷಯರಾಗವು ನಿಶ್ಶೇಷವಾಗಿ ನಾಶಹೊಂದುವುದು; ಇಂದ್ರಿಯಜಯವು ಆತನಿಗೆ ಸ್ವಾಭಾವಿಕವಾಗಿ, ಅನಾಯಾಸವಾಗಿ ಆತನ ವಶದಲ್ಲಿ ನಿಲ್ಲುವುದು. ಬ್ರಹ್ಮಾಪರೋಕ್ಷದಿಂದ ದೊರೆಯುವ ಸ್ಥಿತಿಯನ್ನು ಹೀಗೆ ತಿಳಿದರೆ ಅನ್ಯೋನ್ಯಾಶ್ರಯದೋಷವೆಲ್ಲಿರುವುದು? ಇಂದ್ರಿಯಜಯವು ಶಾಸ್ತ್ರಜನ್ಯ ನಿಶ್ಚಯಜ್ಞಾನವುಳ್ಳ ಯತ್ನಶೀಲನಿಗಲ್ಲದೇ ಆಯಾಸಭೀರುಗಳಿಗಲ್ಲ, ತಿಳಿಯಿತೇ, ಪಾರ್ಥ! (೬೧)

ಅರ್ಜುನ—ಸರ್ವೋತ್ತಮತ್ವಜ್ಞಾನಪೂರ್ವಕವಾಗಿ ಪರಮಾತ್ಮನಲ್ಲಿ ಮನಸ್ಸನ್ನು ಯೋಜಿಸುವುದೇ ಇಂದ್ರಿಯಜಯಕ್ಕೆ ಮುಖ್ಯ ಸಾಧನವೆಂದು ಹೇಳಿದಮೇಲೆ, ಅದೊಂದೇ ಸಾಧನವನ್ನು ಕೈಗೊಂಡರಾಯಿತು. ನಿರಾಹಾರಾದಿ ಮಹಾಪ್ರಯತ್ನ ಸಾಧ್ಯವಾದ ವಿಷಯರಾಗಾದಿ ಪರಿಹಾರೋಪಾಯಗಳೇಕೆ?

ಶ್ರೀಕೃಷ್ಣ—ರಾಗಾದಿಗಳ ಪರಿಹಾರವೂ ಇಂದ್ರಿಯಜಯಕ್ಕೆ ಅವಶ್ಯಕವಾದ ಅನ್ಯಸಾಧನವು. ಸರ್ವೋತ್ತಮತ್ವಜ್ಞಾನಪೂರ್ವಕ ಮನೋಯೋಗವು ಇತರ ಸಾಧನಗಳಿಗೆ ಸಾಧನತ್ವವನ್ನು ತಂದುಕೊಟ್ಟು, ಫಲಕಾರಿಗಳನ್ನಾಗಿ ಮಾಡುವ ಮುಖ್ಯಸಾಧನವು. ಅನ್ಯಸಾಧನಗಳಿಂದ ಇಂದ್ರಿಯಜಯವು ಕ್ರಮೇಣ ಸಾಧಿಸುತ್ತ ಬಂದಂತೆ, ಸರ್ವೋತ್ತಮತ್ವಜ್ಞಾನವಾದರೂ ದೃಢವಾಗುತ್ತ, ಆ ಇತರ ಸಾಧನಗಳಿಗೆ ವಿಶೇಷ ಫಲಪ್ರದವಾಗುವ ಶಕ್ತಿಯನ್ನು ದೊರಕಿಸುತ್ತದೆ; ಮನಸ್ಸಿನ ರಾಗದ್ವೇಷಗಳನ್ನು ಕಳೆದು ಪರಿಶುದ್ಧಗೊಳಿಸುತ್ತದೆ. ರಾಗಾದಿಗಳ ಕಾರಣವನ್ನೂ ಅವುಗಳ ಪರಿಣಾಮವನ್ನೂ (ಫಲವನ್ನೂ) ಹೇಳುವೆನು, ಕೇಳು. ಇದರಿಂದ, ರಾಗಾದಿ ಪರಿತ್ಯಾಗಯತ್ನವು ಸಂಭವಿಸುವುದು, ಮತ್ತು ಉಕ್ತವಾದ ಅನ್ಯಸಾಧನೆಗಳ ಅವಶ್ಯಕತೆಯನ್ನೂ ಮನಗಾಣುವಿ. ರಾಗ, ಭಯ, ಕ್ರೋಧಾದಿರಾಹಿತ್ಯವು

ಜ್ಞಾನಿಗೆ ಸಿದ್ಧವು; ಜಿಜ್ಞಾಸುವಿಗೆ ಸಾಧ್ಯವು (ಸಾಧಿಸಲ್ಪಡಬೇಕಾದುದು). ಈ ಕಾರಣದಿಂದ ಸಹ ರಾಗಾದಿಗಳ ಕಾರಣ ಮತ್ತು ಫಲಗಳನ್ನು ಇಲ್ಲಿ ನಿರೂಪಿಸುವುದು ಅಯುಕ್ತವೆನಿಸುವುದಿಲ್ಲ. ಚಕ್ಷುರಾದಿ ಇಂದ್ರಿಯಗಳಿಂದ ಭೋಗ್ಯವಾದ ರೂಪಾದಿ ವಿಷಯಗಳನ್ನು ತನ್ನ ಹಿತಸಾಧಕವೆಂಬ ಬುದ್ಧಿಯಿಂದ ಚಿಂತಿಸಹತ್ತಿದರೆ, ಆ ವಿಷಯಗಳಲ್ಲಿ ಆಸಕ್ತಿಯುಂಟಾಗುತ್ತದೆ. ಅದರಿಂದ ಅವುಗಳನ್ನು ದೊರಕಿಸಿಕೊಳ್ಳಬೇಕೆಂಬ ಕಾಮವು ಹೆಚ್ಚುತ್ತದೆ. ಪ್ರತಿಬಂಧಕದಿಂದ ಕಾಮವು ಈಡೇರದಿದ್ದರೆ ಕ್ರೋಧವು ಹುಟ್ಟುತ್ತದೆ. (೬೨) ಕ್ರೋಧದಿಂದ ಅಕಾರ್ಯದಲ್ಲಿ ಇಚ್ಛೆಯುಂಟಾಗುವುದು. ಮಾಡಬಾರದುದನ್ನು ಮಾಡಿಯಾದರೂ ಇಚ್ಛಿತವನ್ನು ಪೂರೈಸಿಕೊಳ್ಳುವ ಈ ಪ್ರವೃತ್ತಿಯು ಸಂಮೋಹವೆನಿಸುವುದು. ಪರದ್ರವ್ಯಾಪಹಾರವೇ ಮೊದಲಾದ ಅಧರ್ಮವು ಧರ್ಮವೆಂದೇ ತೋರಲಿಕ್ಕಾರಂಭವಾಗುವುದು; ಈ ಮಿಥ್ಯಾಜ್ಞಾನವು ಬೆಳೆಯುವುದು. ಸಂಮೋಹ, ಮಿಥ್ಯಾಜ್ಞಾನಗಳಿಂದ ಕ್ರಮವಾಗಿ ಇದು ಅಕಾರ್ಯವೆಂಬ ಸ್ಮರಣೆಯೂ ನಷ್ಟವಾಗುತ್ತದೆ. ಇದರಿಂದ ಮೊದಲಿಗಿದ್ದ ಧರ್ಮಾಧರ್ಮವಿವೇಕಬುದ್ಧಿಯೂ ನಷ್ಟಹೊಂದಿ, ಅಧರ್ಮಾಚರಣೆಯು ಪ್ರಬಲಗೊಳ್ಳುತ್ತದೆ. ಅಧರ್ಮದ ಫಲವು ನರಕಾದ್ಯನರ್ಥಗಳು. ಹೀಗೆ ರಾಗದ್ವೇಷಗಳಿಗೆ ವಿಷಯಧ್ಯಾನವೇ ಕಾರಣವು; ಪರಂಪರೆಯಿಂದ ನರಕಾದ್ಯನರ್ಥಗಳೇ ಫಲವು. (೬೩)

ಅರ್ಜುನ—ರಾಗದ್ವೇಷಗಳು ಪರಿಹಾರವಾದನಂತರ ಮುಂದೇನಾಗುವುದು?

ಶ್ರೀಕೃಷ್ಣ—ಇಂದ್ರಿಯಗಳು ಪುರುಷನ ವಶವಾಗುವುವು. ವಶವಾದ ಇಂದ್ರಿಯಗಳಿಂದ, ಕೇವಲ ದೇಹಧಾರಣೆಗಾಗಿ ವಿಷಯಗಳನ್ನು ಭೋಗಿಸಿದರೂ, ಮನಸ್ಸು ಸ್ವಾಧೀನದಲ್ಲಿರುವುದು; ಇಂದ್ರಿಯಗಳಿಂದ ಸೆಳೆಯಲ್ಪಡುವುದಿಲ್ಲ ಮತ್ತು ನಿರ್ವ್ಯಾಕುಲವಾಗಿ ಸದಾ ಪ್ರಸನ್ನವಾಗಿರುವುದು. ಮನೋಜಯ ಮತ್ತು ಮನಃಪ್ರಸನ್ನತೆಗಳೇ ಇಂದ್ರಿಯಜಯದ ಸಾಕ್ಷಾತ್ಫಲವು. ಪರಂಪರೆಯಿಂದ ದೊರೆಯುವ ಫಲವಾದರೋ ಅಪರೋಕ್ಷ ಜ್ಞಾನವೇ! (೬೪)

ಅರ್ಜುನ—ಮನಃಪ್ರಸನ್ನತೆಯಿಂದ ಮುಂದೇನು? ಅಪರೋಕ್ಷ ಜ್ಞಾನಕ್ಕೆ ಅದು ಹೇಗೆ ಕಾರಣವಾಗುವುದು?

ಶ್ರೀಕೃಷ್ಣ—ಯಾವ ಪ್ರಯತ್ನವೂ ಇಲ್ಲದೇ ಮನಸ್ಸು ವಿಷಯಗಳನ್ನು ಕುರಿತು ಧಾವಿಸದಿರುವುದೇ ಮನಃಪ್ರಸಾದವು; ಈ ಸ್ಥಿತಿಯ ಮನಸ್ಸುಳ್ಳ ಪುರುಷನಿಗೆ ಶೀಘ್ರವಾಗಿ ಬ್ರಹ್ಮದರ್ಶನವಾಗುತ್ತದೆ. ಆದರಿಂದ ಸಕಲ ದುಃಖಗಳ ಪರಿಹಾರವೆಂಬುದು ಪ್ರಸಿದ್ಧವು. (೬೫)

ಅರ್ಜುನ—ಶ್ರವಣ, ಮನನಗಳಿಂದ ಸಹಕೃತವಾದ ಧ್ಯಾನವೇ ಬ್ರಹ್ಮ ದರ್ಶನಕ್ಕೆ ಸಾಕ್ಷಾತ್ಸಾಧನವೆಂದು ಈ ಮೊದಲು ಹೇಳಿರುವಿ. ಈಗ ಮನಃ ಪ್ರಸಾದದಿಂದ ಬ್ರಹ್ಮದರ್ಶನವೆಂದು ಹೇಳುವಿ. ಈ ವಿರೋಧದ ಪರಿಹಾರ ವೆಂತು?

ಶ್ರೀಕೃಷ್ಣ—ಪಾರ್ಥ! ವಿರೋಧವೆಲ್ಲಿದೆ? ಧ್ಯಾನದಿಂದಲೇ ಬ್ರಹ್ಮ-ದರ್ಶನವೆಂಬುದು ನಿಜ. ಮನಃಪ್ರಸನ್ನತೆಯಿಲ್ಲದೇ ಧ್ಯಾನವು ಕೂಡು ವುದೇ? ವ್ಯಗ್ರಚಿತ್ತನಿಗೆ ಏಕಾಗ್ರತೆಯುಂಟೇ? ಮನಃಪ್ರಸಾದರಹಿತನಿಗೆ ಚಿತ್ತನಿರೋಧವಾಗುವುದಿಲ್ಲ; ಚಿತ್ತನಿರೋಧವಿಲ್ಲದೇ ಧ್ಯಾನವಿಲ್ಲ. ಧ್ಯಾನ ವಿಲ್ಲದವನಿಗೆ ಬ್ರಹ್ಮದರ್ಶನವಿಲ್ಲ; ಅದಿಲ್ಲದವನಿಗೆ ಮೋಕ್ಷವಿಲ್ಲ. ಅಮುಕ್ತ ನಿಗೆ ಸುಖವೆಲ್ಲಿದೆ! ಮುಕ್ತನಾದರೋ ಸಂಸಾರಿಗಳಿಂದ ಅಲಭ್ಯವಾದ ಪರಮಾನಂದವನ್ನು ಸದಾ ಅನುಭವಿಸುವನು. (೬೬)

ಅರ್ಜುನ—ಶ್ರವಣ, ಮನನಗಳಿಂದ ಧ್ಯಾನವು ಉಪಪನ್ನವಾಗು ತ್ತಿರಲು ಮನಃಪ್ರಸಾದವೇಕೆ?

ಶ್ರೀಕೃಷ್ಣ—ಚಕ್ಷುರಾದಿ ಇಂದ್ರಿಯಗಳು ವಿಷಯಗಳನ್ನು ಬೆನ್ನಟ್ಟಿದರೆ ಈಶ್ವರಪ್ರೇರಣೆಯಿಂದ ಮನಸ್ಸೂ ಹಿಂಬಾಲಿಸುವುದು. ಮನಸ್ಸು ವಿಷಯಾರೂಢವಾದರೆ ಪರೋಕ್ಷಜ್ಞಾನನಿಶ್ಚಯವೂ ದೊರೆಯುವುದಿಲ್ಲ. ಶ್ರವಣಮನನಗಳು ನಿರಂತರವಾಗಿ ನಡೆಯುವುದಿಲ್ಲ; ದೊರೆಯಬಹುದಾದ

ಅಲ್ಪಜ್ಞಾನವೂ, ಗಾಳಿಗೆ ಸಿಕ್ಕ ನೀರಿನಲ್ಲಿ ನಷ್ಟವಾಗುವ ನಾವೆಯಂತೆ, ನಷ್ಟವಾಗುತ್ತದೆ. ಚಿತ್ತನಿರೋಧವಿಲ್ಲದ ಪರೋಕ್ಷಜ್ಞಾನವು ಧ್ಯಾನೋಪಯೋಗಿಯೂ ಅಲ್ಲ. (೬೭) ಇಂದ್ರಿಯಜಯವುಳ್ಳವನಿಗೇ ಮನಃಪ್ರಸಾದವು. ಮನಃಪ್ರಸಾದವುಳ್ಳವನಿಗೇ ಚಿತ್ತನಿರೋಧರೂಪವಾದ ಯೋಗವು; ಅದರಿಂದಲೇ ಶ್ರವಣಮನನಗಳು ಸಂಭವಿಸುವುವು. ಶ್ರವಣಮನನಗಳಿಂದ ತತ್ವನಿಶ್ಚಯವೂ, ಅದರಿಂದ ಧ್ಯಾನವೂ, ಧ್ಯಾನದಿಂದ ಅಪರೋಕ್ಷಜ್ಞಾನವೂ (ಬ್ರಹ್ಮದರ್ಶನವೂ) ಲಭಿಸುವುವು: ಆದ್ದರಿಂದ ಹೇ, ಮಹಾಬಾಹೋ! ಇಂದ್ರಿಯನಿಗ್ರಹವುಳ್ಳವನಿಗೇ ಬ್ರಹ್ಮಾಪರೋಕ್ಷಜ್ಞಾನವೆಂಬುದು ಸಿದ್ಧವು. (೬೮) ಈ ಮುಖ್ಯನಿರ್ಣಯಗಳ ಯುಕ್ತಿಯುಕ್ತತೆಯನ್ನು ಗ್ರಹಿಸಿರುವೆಯಷ್ಟೆ.

ಅರ್ಜುನ—ತಿಳಿದೆನು, ದೇವ! ಬ್ರಹ್ಮದರ್ಶನಲಭ್ಯವಾದ ಪರಮಾನಂದದಿಂದ ತೃಪ್ತನಾದ ಜ್ಞಾನಿಯು, ಭಾಷಣ, ಗಮನಾಸನಾದಿ ಲೌಕಿಕ ಪ್ರವೃತ್ತಿಗಳಲ್ಲಿ ಯಾವ ಪ್ರಯೋಜನಕ್ಕಾಗಿ ತೊಡಗುವನೆಂಬ ನನ್ನ ಮೊದಲಿನ ಪ್ರಶ್ನೆಗೆ ಉತ್ತರವನ್ನು ನಿರೂಪಿಸು.

ಶ್ರೀಕೃಷ್ಣ—ಪಾರ್ಥ! ಕೇಳು, ಈಗ ಅದನ್ನು ಗ್ರಹಿಸಲು ಕಷ್ಟವಾಗುವುದಿಲ್ಲ. ಕಗ್ಗತ್ತಲೆಯ ರಾತ್ರಿಯಲ್ಲಿ ಯಾವ ವಸ್ತುವನ್ನೂ ತಿಳಿಯದಿರುವಂತೆ, ಅಜ್ಞಾನಿಗಳು ಪರಮಾತ್ಮನ ಸ್ವರೂಪವನ್ನು ಅರಿಯರು. ಇಂದ್ರಿಯನಿಗ್ರಹವುಳ್ಳ ಜ್ಞಾನಿಗಾದರೋ ಭಗವತ್ಸ್ವರೂಪವು ಹಗಲಿನಂತಿರುವುದು. ಎಂದರೆ, ಹಗಲಿನಲ್ಲಾಗುವ ವಸ್ತುಜ್ಞಾನದಂತೆ ಸುಸ್ಪಷ್ಟವಾಗಿ ತೋರುವುದು. ಹಾಗೆಯೇ ಪ್ರಾಣಿಗಳು ಆಸಕ್ತರಾಗಿ ಅನುಭವಿಸುವ ರೂಪಾದಿ ವಿಷಯಗಳನ್ನು ಜ್ಞಾನಿಯು ಅರಿಯದಂತಿರುವನು. ವಿಷಯಾನುಭವದಲ್ಲಿ ಜ್ಞಾನಿಯು ಜಾಗ್ರತನಾಗಿರುವುದಿಲ್ಲ. ಜ್ಞಾನಿಗೆ ಅಜ್ಞಾನಿಗಳ ಹಗಲೇ ರಾತ್ರಿಯು; ರಾತ್ರಿಯೇ ಹಗಲು. ಅವರ ಎಚ್ಚರದಲ್ಲಿ ಇವನ ನಿದ್ರೆ; ನಿದ್ರೆಯಲ್ಲಿ ಎಚ್ಚರ.

ಅರ್ಜುನ—ಜ್ಞಾನಿಯು ಭಗವದಿತರವಸ್ತುಗಳನ್ನೇ ತಿಳಿಯನೆಂದರೆ ಭಾಷಣ, ಭಿಕ್ಷಾಟನ ಮೊದಲಾದ ಆತನ ವ್ಯಾಪಾರಗಳು ಅಸಂಭಾವಿತ ವಾಗುವುದಿಲ್ಲವೇ ?

ಶ್ರೀಕೃಷ್ಣ—ಬ್ರಹ್ಮದರ್ಶನದಿಂದ ಬಂಧಕವಾದ ಸಕಲ ಪೂರ್ವಕರ್ಮ ಗಳೂ ನಾಶಹೊಂದುವುವು. ಮುಂದಿನ ಕರ್ಮಗಳು ಲೇಪಿಸುವುದಿಲ್ಲ. ಆದರೆ ದರ್ಶನ ಕಾಲದಲ್ಲಿ ಫಲೋನ್ಮುಖವಾದ 'ಪ್ರಾರಬ್ಧಕರ್ಮ'ವನ್ನು ಜ್ಞಾನಿಯೂ ಸಹ ಅವಶ್ಯ ಅನುಭವಿಸಿಯೇ ಮುಗಿಸಬೇಕು. ಪ್ರಾರಬ್ಧ ಕರ್ಮ ನಿಮಿತ್ತವಾಗಿ ಭಗವತ್ಸ್ವರೂಪವು ತಿರೋಧಾನ ಹೊಂದುವುದು. (ಮರೆಯಾಗುವುದು). ಆಗ ವಾಸನಾಬಲದಿಂದ ಜ್ಞಾನಿಯೂ ಇತರ ವಸ್ತುಗಳಲ್ಲಿ ಅಭಿಸಂಧಿಯುಳ್ಳವನಾಗುವನು. ಪ್ರಾಯಃ ಅತ್ಯಲ್ಪವಾದ ಈ ವಿಧ ಅಭಿಸಂಧಿಯಿಂದ ಆತನ ಪ್ರವೃತ್ತಿಗಳು ಉನ್ಮತ್ತನ ಪ್ರವೃತ್ತಿಯಂತೆ ಉಪಪನ್ನವಾಗುತ್ತವೆ. ಇದು ದೇವತೆಗಳಲ್ಲದ ಇತರ ಜ್ಞಾನಿಗಳ ವಿವಕ್ಷೆ ಯಿಂದ ಹೇಳಿದುದೆಂದು ತಿಳಿ. ಎಲ್ಲ ಪ್ರಾಣಿಗಳ ಇಂದ್ರಿಯಾದಿ ಪ್ರೇರಕ ರಾದ ಉತ್ತಮ ದೇವತೆಗಳು ಇತರ ಪ್ರವೃತ್ತಿರಹಿತರಾಗಿ ಬ್ರಹ್ಮಸ್ವರೂಪ ದಲ್ಲಿಯೇ ಸ್ಥಿರಚಿತ್ತರಾದರೆ, ಪ್ರಾಣಿಪ್ರೇರಕವ್ಯಾಪಾರವೇ ಇಲ್ಲದಂತಾಗಿ ಲೋಕಯಾತ್ರೆಯೇ ನಿಲ್ಲಬೇಕಾಗುವುದು. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಆದ್ದರಿಂದ ಉತ್ತಮ ಜ್ಞಾನಿಗಳು ಇತರತ್ರದಲ್ಲಿ ಅಭಿಸಂಧಿಯುಳ್ಳವರಾದರೂ ಭಗವತ್ಸ್ವರೂಪವು ಅವರಿಗೆ ಮರೆಯಾಗುವುದಿಲ್ಲವೆಂದು ತಿಳಿ. (೬೯)

ಅರ್ಜುನ—ಬಾಹ್ಯಾನುಸಂಧಾನವಿಲ್ಲದ ಜ್ಞಾನಿಗೆ ಪ್ರಮತ್ತನಂತೆ ಕೆಲವು ವೇಳೆ ನಡೆವುದು, ಕೂಡುವುದು, ಏಳುವುದು ಮೊದಲಾದ ವ್ಯಾಪಾರ ಗಳು ಸಂಭವಿಸಬಹುದಾದರೂ, ಪ್ರತ್ಯಕ್ಷಸಿದ್ಧವಾದ ಆತನ ವಿಷಯ ಭೋಗವು ಹೇಗೆ ಕೂಡುವುದು ? ನಿಯತವಾದ ಸಾಧನಸಾಧ್ಯಗಳ ಅನು ಸಂಧಾನವಿಲ್ಲದೇ ವಿಷಯಾನುಭವವೇ ಹುಟ್ಟಲಾರದು. ಆದ್ದರಿಂದ ಜ್ಞಾನಿಯ ವಿಷಯಾನುಭವ ಪ್ರಕಾರವನ್ನು ತಿಳಿಯಲಿಚ್ಛಿಸುವೆನು.

ಶ್ರೀಕೃಷ್ಣ—ನಾನಾ ನದೀಜಲಗಳು ಸಮುದ್ರವನ್ನು ಪ್ರವೇಶಿಸಿದರೂ, ಸಮುದ್ರವು ವೃದ್ಧಿವಿಶೇಷವನ್ನು ಹೊಂದದೇ ತನ್ನ ಸ್ವಭಾವವನ್ನು ಬಿಡದೇ

ಇದ್ದಂತೆ ಇರುವುದು. ಅದರಂತೆ ಸಕಲ ಕಾಮುಗಳು (ಭೋಗ್ಯ ವಿಷಯುಗಳು) ಜ್ಞಾನಿಯನ್ನು ಪ್ರವೇಶಿಸಿದರೂ, ಅವುಗಳಿಂದ ಜ್ಞಾನಿಯು ಯಾವ ವಿಕಾರ ವನ್ನೂ ಹೊಂದದೇ ಇದ್ದಂತೆ ಇರುವನು. ನದಿಗಳು ಪ್ರವೇಶಿಸದಿದ್ದರೆ ಸಮುದ್ರವು ಬತ್ತುವುದಿಲ್ಲ ಮತ್ತು ನದಿಗಳು ತನ್ನಲ್ಲಿ ಬಂದು ಸೇರಲು ಸಮುದ್ರವು ಯಾವ ಯತ್ನವನ್ನೂ ಮಾಡುವುದಿಲ್ಲ. ಹಾಗೆಯೇ ಜ್ಞಾನಿಯು ವಿಷಯುಗಳ ಅಭಾವದಿಂದ ಕೊರಗುವುದಿಲ್ಲ ಮತ್ತು ವಿಷಯ ಗಳನ್ನು ದೊರಕಿಸಿಕೊಳ್ಳಲು ಯಾವ ಯತ್ನವನ್ನೂ ಮಾಡುವುದಿಲ್ಲ. ವಿಷಯುಭೋಗದಿಂದ ಉತ್ಸಾಹಗೊಳ್ಳುವುದೂ ಇಲ್ಲ. ನಿರ್ಲಿಪ್ತನಾಗಿರು ವನು. ವಿಷಯುಗಳನ್ನು ಭೋಗಿಸಿದರೂ ಜ್ಞಾನಿಯು ಕಾಮುಕಾಮಿಯಲ್ಲ. ಅವನಿಗೇ ಪರಮಶಾಂತಿರೂಪವಾದ ಮೋಕ್ಷವು; ತುಚ್ಛವಾದ ವಿಷಯ ಭೋಗವನ್ನು ಇಚ್ಛಿಸುವವನಿಗಲ್ಲ. (೭೦) ನಿಷಿದ್ಧವಾದ ಸಕಲೇಚ್ಛೆಗಳನ್ನು ಪರಿತ್ಯಾಗಮಾಡಿ, ಯಾವುದರಲ್ಲಿಯೂ ತನ್ನ ಸ್ವಾಮಿತ್ವವನ್ನು ಆರೋಪಿ ಸದೇ, ನಾನು ಭೋಗಿಸುತ್ತೇನೆಂಬ ಕರ್ತೃತ್ವಾಭಿಮಾನವನ್ನೂ ಬಿಟ್ಟು, ಸರ್ವಕಾಮುಗಳನ್ನು ಭೋಗಿಸುವವನೇ ಜ್ಞಾನಿಯು; ಆತನೇ ನಿಜವಾಗಿ ಸರ್ವಕಾಮುಗಳನ್ನು ಬಿಟ್ಟವನು; ಅವನಿಗೇ ಮೋಕ್ಷವು. (೭೧) ಹೀಗೆ ಸರ್ವಕಾಮುಗಳನ್ನು ಪರಿತ್ಯಾಗಮಾಡಿ ನಿತ್ಯ ಪರಮಾತ್ಮನ ಅನುಸ್ಮರಣೆ ಯುಳ್ಳ ಜ್ಞಾನಿಯು, ನಿತ್ಯಬ್ರಹ್ಮ ಸಂಬಂಧವುಳ್ಳವನಾಗಿರುವನು. ಹೇ ಪಾರ್ಥ! ಈ ಸ್ಥಿತಿಯನ್ನು ಹೊಂದಿದವನು, ಸಂಸಾರಕ್ಲೇಶಗಳನ್ನು ಅನುಭವಿಸುವುದಿಲ್ಲ. ದೇಹವನ್ನು ಬಿಡುವಾಗಲೂ ಅದೇ ಸ್ಥಿತಿಯಲ್ಲಿದ್ದು ಅಪ್ರಾಕೃತಶರೀರಿಯಾದ ಬ್ರಹ್ಮನನ್ನು ಹೊಂದುವನು. ಪ್ರಾರಬ್ಧಕರ್ಮ ಶೇಷವಿದ್ದರೆ, ದೇಹಾಂತರವನ್ನು ಹೊಂದಿ, ಅದನ್ನು ಭೋಗಿಸಿ ಕಳೆದು ನಂತರ ಮುಕ್ತನಾಗುವನು. (೭೨)

ಎರಡನೇ ಅಧ್ಯಾಯವು ಮುಗಿದುದು.

ಅಧ್ಯಾಯ ೩

[ಜೀವೇಶ್ವರರ ಸ್ವರೂಪವಿಷಯಕಜ್ಞಾನವನ್ನು (ಸಾಂಖ್ಯ) ನಿರೂಪಿಸಿ, ಆ ಜ್ಞಾನದ ಸಾಕ್ಷಾತ್ಕಾರವಾಗಲು ಅತ್ಯವಶ್ಯಕವಾಗಿ ಅನುಷ್ಠಾನವಾಗಬೇಕಾದ ನಿವೃತ್ತಕರ್ಮರೂಪಜ್ಞಾನೋಪಾಯವನ್ನು (ಯೋಗ) ಸ್ವಲ್ಪಮಟ್ಟಿಗೆ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು. ಯೋಗವನ್ನು ವಿಸ್ತಾರದಿಂದ ತಿಳಿಯಲಪೇಕ್ಷಿಸಿದ ಅರ್ಜುನನು ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ.]

ಅರ್ಜುನ—ಪುರುಷಾರ್ಥಸಾಧನವಾದಜ್ಞಾನಕ್ಕಿಂತಲೂ ಅಲ್ಪಫಲಕವಾದ ಕರ್ಮವು ಅಧಮವೆಂದು ಹೇಳಿದೆಯಲ್ಲವೇ? ಹೇ ಜನಾರ್ದನ! ಜನನಾದಿದೋಷರಹಿತನಾದ ನೀನು, ಜೀವಾತ್ಮರ ಸಂಸಾರಬಂಧವನ್ನು ಪರಿಹರಿಸುವ ಮಹಾಪ್ರಭುವು. ಕರ್ಮವು ಅಧಮವೆಂದೇ ನಿನ್ನ ಅಭಿಪ್ರಾಯವಾಗಿರಲು, ನನ್ನನ್ನೇಕೆ ಈ ಘೋರವಾದ ಯುದ್ಧರೂಪ ಕರ್ಮದಲ್ಲಿ ಪ್ರೇರಿಸುತ್ತಿರುವಿ? ಹೇ ಕೇಶವ! ಫಲವನ್ನಿಚ್ಛಿಸಲಿ, ಅಥವಾ ಬಿಡಲಿ, ಸರ್ವಕರ್ಮಗಳಿಗೂ ಫಲೋತ್ಪತ್ತಿಯೆಂಬುದುಂಟಲ್ಲವೇ? ಯುದ್ಧ ಕರ್ಮವಾದರೂ ಫಲವುಳ್ಳದ್ದೇ ಸರಿ. ಗೆದ್ದರೆ ರಾಜ್ಯ, ಸೋತರೆ (ಮಡಿದರೆ) ಸ್ವರ್ಗವೆಂದು ನೀನೇ ಹೇಳುತ್ತಿರುವಿ. ಯತ್ಯಾಶ್ರಮಕ್ಕೆವಿಹಿತವಾದ ಶಮ, ದಮಾದಿಕರ್ಮಗಳಿಗೆ ಇಂತಹ ಫಲಗಳಿಲ್ಲ. ಕೇವಲ ಜ್ಞಾನವೇ ಫಲವೆಂದು ಹೇಳಲ್ಪಡುವುದರಿಂದ ಯತ್ಯಾಶ್ರಮವನ್ನು ಸ್ವೀಕರಿಸೆಂದು ನೀನು ನನಗೆ ಉಪದೇಶಿಸಬೇಕಿತ್ತು; ಯುದ್ಧಮಾಡೆಂದಲ್ಲ. (೧) 'ಫಲೇಚ್ಛೆಯಿಲ್ಲದೇ ಮಾಡುವ ಯುದ್ಧರೂಪಕರ್ಮಕ್ಕೂ ಜ್ಞಾನವೇ ಫಲವೆಂದು ಹೇಳಿರುವೆನಲ್ಲ!' ಎನ್ನಬೇಡ. ಯುದ್ಧಕರ್ಮವು, ಕೆಲವುವೇಳೆ, ಸ್ವರ್ಗ ಫಲವುಳ್ಳದ್ದೆಂದೂ, ಮತ್ತೆ ಕೆಲವು ಸಂದರ್ಭಗಳಲ್ಲಿ ಜ್ಞಾನಫಲವುಳ್ಳದ್ದೆಂದೂ ಹೇಳುವುದು ಸಂದೇಹವನ್ನು ಹುಟ್ಟಿಸುವ ಮಿಶ್ರಸ್ವಭಾವದ ಮಾತಾಗುವುದು. ಅಲ್ಲದೇ, ಯುದ್ಧದಿಂದ ಕಾಮಿಗಳಿಗೆ ಸ್ವರ್ಗವೂ, ನಿಷ್ಕಾಮಿಗಳಿಗೆ ಜ್ಞಾನವೂ ದೊರೆಯುವುದೆಂದು ಹೇಳಿದರೂ, ಈ ವಿಕಲ್ಪಕ್ಕೇ ಅವಕಾಶ

ವಿಲ್ಲದ ಯತಿಧರ್ಮದಲ್ಲಿಯೇ ನನ್ನನ್ನು ನಿಯೋಜಿಸಬೇಕಲ್ಲವೇ? ಒಮ್ಮೆ ಕರ್ಮವನ್ನೂ ಮತ್ತೊಮ್ಮೆ ಜ್ಞಾನವನ್ನೂ ಪ್ರಶಂಸಿಸುವ ಈ ಮಿಶ್ರೋಪದೇಶದಿಂದ ನನ್ನ ಬುದ್ಧಿಯನ್ನು ಮೋಹಗೊಳಿಸದಿರು. ಹೇ ಸ್ವಾಮಿ! ನನ್ನ ಶ್ರೇಯಸ್ಸನ್ನು ಸಾಧಿಸುವ ಒಂದು ಮಾರ್ಗವನ್ನು ನಿಶ್ಚಯಿಸಿ ಉಪದೇಶಿಸು. (೨)

ಶ್ರೀಕೃಷ್ಣ—ಹೇ ಪಾಪರಹಿತ! ಪಾರ್ಥ! ಬುದ್ಧಿಮೋಹಕ್ಕೆಡೆಯಿಲ್ಲ. ನಿನ್ನ ಸಂಶಯವು ನಿರಾಧಾರವಾದುದು. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸಗಳೆಂದು ಆಶ್ರಮಗಳು ನಾಲ್ಕು. ಮೊದಲಿನ ಮೂರು ಆಶ್ರಮಗಳಿಗೆ ವಿಹಿತವಾದ ಕರ್ಮಗಳೆಲ್ಲವೂ ವೈಕಲ್ಪಿಕವಾದವುಗಳೇ. ಕಾಮಿಸಿದರೆ ಫಲಕೊಡುವುವು; ನಿಷ್ಕಾಮಬುದ್ಧಿಯಿಂದ ಆಚರಿಸಿದರೆ ಜ್ಞಾನವನ್ನುಂಟುಮಾಡುತ್ತವೆ. ಯತಿಧರ್ಮಗಳಾದ ಶಮದಮಾದಿಗಳು ಕೇವಲ ಜ್ಞಾನಫಲವುಳ್ಳವುಗಳು. ನರಕಾದ್ಯನರ್ಥಗಳಿಗೆ ಕಾರಣವಾಗುವ ರಾಗದ್ವೇಷಾದಿಗಳಿಂದ ಕೂಡಿದವುಗಳಲ್ಲವೆಂಬುದು ನಿಜ. ಆದರೆ, ಜನಕ, ಪ್ರಿಯವ್ರತಾದಿಗಳಂತೆ ವಿಶೇಷಾಧಿಕಾರವುಳ್ಳ ನೀನು ಯತಿಧರ್ಮಗಳಲ್ಲಿ ತೊಡಗುವುದು ಯೋಗ್ಯವಲ್ಲ. ಸ್ವಧರ್ಮವಾದ ಯುದ್ಧವನ್ನು ಪಾಪತಗಲದಂತೆ ಶ್ರದ್ಧೆಯಿಂದ ಭಗವತ್ಪೂಜೆಯೆಂದಾಚರಿಸಲು ಶಕ್ತನಾದ ನೀನು ಯುದ್ಧಮಾಡುವುದೇ ಯೋಗ್ಯವಾದುದು; ಆದ್ದರಿಂದಲೇ ನಿನ್ನನ್ನು ಯುದ್ಧಕ್ಕಾಗಿ ಪ್ರೇರಿಸುತ್ತಿರುವೆನು. ಈ ಸಂಸಾರದಿಂದ ಆತ್ಯಂತಿಕ ನಿವೃತ್ತಿಯನ್ನು ಹೊಂದಿ, ಸ್ವರೂಪಸ್ಥಿತಿಯೆಂಬ ಮುಕ್ತಿಯನ್ನು ಪಡೆಯಲು, ಸಾಧಕವರ್ಗದ ಜೀವರಿಗೆ ಈ ಮೊದಲು ಹೇಳಿದಂತೆ ಎರಡು ಪ್ರಕಾರದ ಸಾಧನಗಳಿವೆ. ಜ್ಞಾನಪ್ರಧಾನರಾದ ದೇವತೆಗಳು ಮತ್ತು ಸನಕಾದಿ ಯತಿಗಳಿಗೆ ಜ್ಞಾನಯೋಗವು. ಜ್ಞಾನಯೋಗವೆಂದರೆ, ಅಪ್ರಚುರಕರ್ಮಸಹಿತವಾದ ಪ್ರಚುರಜ್ಞಾನೋಪಾಯಗಳಾದ, ಜಪ, ಧ್ಯಾನಾದಿಗಳು. ಇವುಗಳಿಂದ ಮುಕ್ತಿಯನ್ನು ಸಾಧಿಸುವವರು ಜ್ಞಾನಯೋಗಿಗಳು. ಕರ್ಮರೂಪದ ಉಪಾಯವುಳ್ಳವರಿಗೆ, ಅಪ್ರಚುರವಾದ ಜ್ಞಾನೋಪಾಯದಿಂದ ಕೂಡಿದ ಪ್ರಚುರಕರ್ಮೋಪಾಯವೆಂಬ ಕರ್ಮಯೋಗವು. ಇದರಿಂದ

ಮುಕ್ತಿಯನ್ನು ಸಾಧಿಸುವವರು ಕರ್ಮಯೋಗಿಗಳು. ಉಭಯರೂ ಜ್ಞಾನವನ್ನು ಪಡೆಯುವರು; ಅದರಿಂದಲೇ ಮುಕ್ತಿಯನ್ನು ಪಡೆಯುವರು. ಸ್ವಯೋಗ್ಯಾನಂದಾನುಭವರೂಪವಾದ ಸಂಪೂರ್ಣ ಮುಕ್ತಿಯು, ಕರ್ಮಾನುಷ್ಠಾನಸಹಿತವಾದ ಜ್ಞಾನದಿಂದಲೇ ಲಭ್ಯವು; ಕರ್ಮಸಹಕೃತವಲ್ಲದ ಜ್ಞಾನಮಾತ್ರದಿಂದಲ್ಲ. ಸನಕಾದಿಗಳು, ಸ್ವಗತಜ್ಞಾನ ಕರ್ಮಗಳವುಧ್ಯೆ, ಜ್ಞಾನಬಾಹುಳ್ಯವುಳ್ಳವರು. ಜನಕಾದಿ ಗೃಹಸ್ಥರು ಕರ್ಮಬಾಹುಳ್ಯವುಳ್ಳವರು. ಉಭಯರೂ ಅಪರೋಕ್ಷಜ್ಞಾನವನ್ನು ಹೊಂದಿಯೇ ಮುಕ್ತರಾಗುವರು. ಅವರವರ ಅಧಿಕಾರವನ್ನು (ಯೋಗ್ಯತೆಯನ್ನು) ಅನುಲಕ್ಷಿಸಿ ಭಗವಂತನು ಹಾಗೆ ಕ್ಲುಪ್ತಿಮಾಡಿರುವುದರಿಂದ, ಅವರು ಆಯಾ ಸಾಧನಾನುಷ್ಠಾನದಿಂದಲೇ ಮುಕ್ತರಾಗುವರು. ನೀರು ಮಿಶ್ರವಾದ ಕ್ಷೀರವನ್ನು ಕ್ಷೀರವೆಂದು ಕರೆಯುವಂತೆಯೂ, ಕ್ಷೀರಮಿಶ್ರವಾದ ನೀರನ್ನು ನೀರೆಂದು ಕರೆಯುವಂತೆಯೂ, ಪ್ರಾಚುರ್ಯ, ಅಪ್ರಾಚುರ್ಯ ವಿವಕ್ಷೆಯಿಂದ, ಸಾಧನಮಾರ್ಗಗಳು ಜ್ಞಾನಯೋಗ, ಕರ್ಮಯೋಗಗಳೆಂದು ಕರೆಯಲ್ಪಡುತ್ತವೆ. (೩)

ಅರ್ಜುನ— ಪ್ರಭೋ! ಮುಕ್ತಿಯನ್ನು 'ನೈಷ್ಕರ್ಮ್ಯ'ವೆಂದು ಕರೆಯುವರು. ಕರ್ಮರಹಿತವಾದ ಅವಸ್ಥಾವಿಶೇಷವೆಂದಷ್ಟೇ ಇದರ ತಾತ್ಪರ್ಯವು? ಕರ್ಮಗಳನ್ನು ಮಾಡುತ್ತಲೇ ಇದ್ದರೆ ಕರ್ಮಾಕರಣ (ಕರ್ಮರಹಿತ) ಸ್ಥಿತಿಯು ಎಂದಿಗೂ ಲಭಿಸಲಾರದು. ಆದ್ದರಿಂದ ಕರ್ಮಬಿಡುವುದನ್ನು ಯತ್ನಪೂರ್ವಕವಾಗಿ ಸಾಧಿಸಬೇಕೆಂದು ಪ್ರಾಪ್ತವಾಗುವುದಿಲ್ಲವೇ?

ಶ್ರೀಕೃಷ್ಣ—ಕರ್ಮಗಳನ್ನು ಆರಂಭಮಾಡದಿರುವುದರಿಂದ ನೈಷ್ಕರ್ಮ್ಯವೆಂಬ ಮುಕ್ತಿಯು ಲಭಿಸುವುದಿಲ್ಲ. ಪುರುಷನು ಮುಕ್ತಿಪರ್ಯಂತವಾಗಿ (ಸ್ಥೂಲ ಅಥವಾ ಸೂಕ್ಷ್ಮವಾದ) ಯಾವುದಾದರೊಂದು ದೇಹದಿಂದ ಬದ್ಧನಾಗಿಯೇ ಇರುವನು. ಸಂಸಾರಿ ಜೀವನನ್ನು 'ಪುರುಷ' ನೆಂದು ಕರೆಯುವುದೂ ಈ ಕಾರಣದಿಂದಲೇ. ಯಾವ ಕರ್ಮಕ್ಕೂ ಅಧಿಕಾರವಿಲ್ಲದ (ಯೋಗ್ಯವಲ್ಲದ) ದೇಹ ಬಂದಾಗ, ಕರ್ಮಮಾಡದಿರುವುದರಿಂದಲೇ

ಮೋಕ್ಷವೆಂದು ಹೇಳುವಪಕ್ಷದಲ್ಲಿ, ಆ ದೇಹದಿಂದ ಮೋಕ್ಷದೊರೆಯ ಬೇಕಾಗುವುದು. ಆದರೆ, ಹಾಗಿಲ್ಲ, ನೋಡು! ಶ್ರೇಷ್ಠವಾದ ಮನುಷ್ಯ ದೇಹವನ್ನು ಪಡೆದು ಯೋಗ್ಯಸಾಧನೆಗಳಿಂದ ಜ್ಞಾನವನ್ನು ಹೊಂದಿಯೇ ಮುಕ್ತನಾಗಬೇಕು. ಅರ್ಜುನ! ನೈಷ್ಕರ್ಮ್ಯ ಶಬ್ದಾರ್ಥವನ್ನು ನೀನು ವಿಪರೀತವಾಗಿ ತಿಳಿದಿರುವಿ. ಮುಕ್ತಿಯು ಕ್ರಿಯಾಶೂನ್ಯವಾದ ಅವಸ್ಥೆ ಯಲ್ಲ. ಕಾಮ್ಯಕರ್ಮಗಳಿಂದ ದೊರೆಯದ ಸ್ಥಿತಿಯೆಂಬುದು ನೈಷ್ಕರ್ಮ್ಯ ಶಬ್ದದ ಸರಿಯಾದ ಅರ್ಥವು. ನಾನಾದರೂ ನಿನ್ನನ್ನು ಅಂಥ 'ನಿಷ್ಕಾಮ' ಅಥವಾ ನಿವೃತ್ತಕರ್ಮದಲ್ಲಿಯೇ ನಿಯೋಜಿಸುತ್ತಿರುವೆನು.

ಅರ್ಜುನ—ಕರ್ಮವೇ ಸಂಸಾರ ಬೀಜವು. ಸಂಸಾರದ ನಿವೃತ್ತಿಯೇ ಮುಕ್ತಿಯು. ಆದ್ದರಿಂದ ಮುಕ್ತ್ಯರ್ಥವಾಗಿ ಕರ್ಮಪರಿತ್ಯಾಗವು ಅವಶ್ಯಕವಲ್ಲವೇ?

ಶ್ರೀಕೃಷ್ಣ—ಕರ್ಮದಿಂದ ಬಂದ ಈ ಸಂಸಾರ ಬಂಧವು ಜೀವನಿಗೆ ಅನಾದಿಯಾದುದು. ಅನಂತ ಜನ್ಮಗಳನ್ನು ಹೊಂದಿ, ಸದಾ ದೇಹ ಯುಕ್ತನಾಗಿ ಅನಂತಕರ್ಮಗಳನ್ನು ಮಾಡಿರುವ ಜೀವನು, ಈಗಿರುವ ದೇಹದಿಂದಮಾತ್ರ ಕರ್ಮಗಳನ್ನು ಬಿಟ್ಟರೆ ಮೋಕ್ಷವು ಲಭಿಸಬಹುದೇ! ಆದ್ದರಿಂದ ಕರ್ಮತ್ಯಾಗದಿಂದ ಮೋಕ್ಷವಿಲ್ಲ.

ಅರ್ಜುನ—ನಿಷ್ಕಾಮಕರ್ಮದಿಂದ ಮೋಕ್ಷವೆಂದು ಹೇಳಿದೆಯಲ್ಲವೇ? ನಿಷ್ಕಾಮಕರ್ಮಕ್ಕೆ ಅನ್ಯಫಲವಿಲ್ಲೆಂದು ಹೇಳಿದಂತಾಯಿತು. ಕರ್ಮ ತ್ಯಾಗಕ್ಕೂ ಅನ್ಯಫಲವಿಲ್ಲ. ಅನ್ಯಫಲರಾಹಿತ್ಯವು ಉಭಯಸಮಾನವಾಯಿತು. ಕರ್ಮತ್ಯಾಗದಲ್ಲಿ ಆಯಾಸವಿಲ್ಲವೆಂಬ ಗುಣವೂ ಇದೆ. ಕರ್ಮ ಪರಿತ್ಯಾಗದಿಂದಲೂ ಮೋಕ್ಷವು ಏಕೆ ದೊರೆಯಬಾರದು? ಕರ್ಮಪರಿ ತ್ಯಾಗದಿಂದ ದೋಷವುಂಟೆಂದು ಹೇಳುವ ಪ್ರಮಾಣಗಳು ಮೋಕ್ಷಾಪೇಕ್ಷಿ ಗಳಲ್ಲದ ಇತರರ ವಿಷಯವೆಂದು ಏಕೆ ತಿಳಿಯಬಾರದು?

ಶ್ರೀಕೃಷ್ಣ—ಕರ್ಮಪರಿತ್ಯಾಗದಿಂದ ಮೋಕ್ಷವು ಸರ್ವಥಾ ದೊರೆಯ ಲಾರದು. ಅಷ್ಟೇಕೆ; ಕಾಮ್ಯಕರ್ಮಪರಿತ್ಯಾಗ (ಸನ್ಯಾಸ) ದಿಂದಲೂ

(ಉಪಲಕ್ಷಣದಿಂದ ನಿಷ್ಕಾಮಕರ್ಮಾನುಷ್ಠಾನದಿಂದ ಸಹ) ಮೋಕ್ಷವು ಲಭಿಸುವುದಿಲ್ಲ. ಆದರೆ, ಅದರಿಂದ ಲಭ್ಯವಾಗುವ ಅಂತಃಕರಣಶುದ್ಧಿ, ವೈರಾಗ್ಯ, ಶ್ರವಣ, ಮನನ, ಧ್ಯಾನ ಮತ್ತು ಅಪರೋಕ್ಷಜ್ಞಾನದಿಂದ ಮೋಕ್ಷವು ದೊರೆಯುವುದು. ಹೀಗೆ ನಿಷ್ಕಾಮಕರ್ಮಾನುಷ್ಠಾನದಿಂದ, ಪರಂಪರೆಯಿಂದ ಮೋಕ್ಷಕ್ಕೆ ಕಾರಣವಾಗುವ ಮನಃಶುದ್ಧಿ ಮೊದಲಾದ ಫಲಗಳುಂಟು, ಸುಖದುಃಖಗಳಿಗೆ ಕಾರಣವಾಗುವ ಬಂಧಕ ಫಲಗಳಿಲ್ಲ. ಆದ್ದರಿಂದ ಮೋಕ್ಷಸಾಧನವಾದ ನಿಷ್ಕಾಮಕರ್ಮದಿಂದ ಅನ್ಯಫಲಗಳೇ ಇಲ್ಲವೆಂದು ತಿಳಿಯುವುದು ಸರಿಯಲ್ಲ. ಮೋಕ್ಷಹೇತುಗಳಾದ ಮನಃಶುದ್ಧಿ ಮೊದಲಾದವುಗಳು ಕರ್ಮಪರಿತ್ಯಾಗದಿಂದ ಲಭಿಸುವುದಿಲ್ಲ. ಆದ್ದರಿಂದ ಕರ್ಮತ್ಯಾಗದಿಂದ ಮೋಕ್ಷವಿಲ್ಲ. ಯತ್ಯಾಶ್ರಮಧರ್ಮಗಳಾದ ಶಮ, ದಮ, ಶ್ರವಣ, ಮನನ, ಧ್ಯಾನಾದಿಗಳೂ ಸಹ ಭಗವಂತನಲ್ಲಿ ಮನಸ್ಸನ್ನು ನಿಶ್ಚಲವಾಗಿ ಸ್ಥಾಪಿಸಿ, ಭಗವಂತನ ವಿಶೇಷಪ್ರಸನ್ನತೆಯನ್ನು ದೊರಕಿಸು ವುದರಮೂಲಕ ಮೋಕ್ಷಹೇತುಗಳಾಗುತ್ತವಲ್ಲದೇ ಸಾಕ್ಷಾತ್ತಾಗಿ ಅಲ್ಲ. ಆದ್ದರಿಂದ ಯತಿಧರ್ಮಗಳಿಗೂ ಅನ್ಯಫಲರಾಹಿತ್ಯವಿಲ್ಲ. ಕರ್ಮಪರಿ ತ್ಯಾಗಕ್ಕೆ ಪ್ರತ್ಯವಾಯವನ್ನು ಹೇಳುವ ಪ್ರಮಾಣಗಳು ಎಲ್ಲರಿಗೂ ಅನ್ವಯಿಸುತ್ತವೆ; ಮೋಕ್ಷಾಪೇಕ್ಷೆಯಿಲ್ಲದವರಿಗೆ ಮಾತ್ರವಲ್ಲ. ಆದ್ದರಿಂದ ಕರ್ಮಪರಿತ್ಯಾಗದಿಂದಲೂ ಮೋಕ್ಷವು ದೊರೆಯಲೆಂಬ ನಿನ್ನ ಯುಕ್ತಿಯು ಸಾಧುವಲ್ಲ. (೪)

ಅರ್ಜುನ—ಕರ್ಮದಿಂದಲೇ ಪ್ರಾಣಿಗಳು ಬಂಧನಕ್ಕೊಳಗಾಗುವರು. ಮುಕ್ತಿಪ್ರತಿಬಂಧಕವಾದ್ದರಿಂದ, ಕರ್ಮವು ತ್ಯಾಜ್ಯವಲ್ಲವೇ?

ಶ್ರೀಕೃಷ್ಣ— ಸರ್ವಥಾ ಕರ್ಮವು ತ್ಯಾಜ್ಯವಲ್ಲ; ಮುಕ್ತಿಪ್ರತಿ ಬಂಧಕವೂ ಅಲ್ಲ. ಕರ್ಮದಿಂದ ಪ್ರಾಣಿಗಳು ಬಂಧಿಸಲ್ಪಡುವರೆಂಬ ಪ್ರಮಾಣವಾಕ್ಯದಲ್ಲಿ, ಕರ್ಮಶಬ್ದವು ಕಾಮ್ಯಕರ್ಮವೆಂಬ ಸಂಕುಚಿತಾರ್ಥ ವುಳ್ಳದ್ದು. ಪಾರ್ಥ! ಜ್ಞಾನಿಯಾಗಲಿ, ಅಜ್ಞಾನಿಯಾಗಲಿ, ಯಾವ ಅವಸ್ಥೆ ಯಲ್ಲಿದ್ದರೂ ಒಂದುಕ್ಷಣವಾದರೂ ಕರ್ಮಮಾಡದೇ ಇರಲು ಶಕ್ಯವಿಲ್ಲ. ಸ್ವತಂತ್ರಕರ್ತನಾದ ಭಗವಂತನಿಂದಲೂ, ವಿಕಾರಿಕರ್ತೃಭೂತಸತ್ವಾದಿ

ಗುಣಗಳಿಂದಲೂ ಪ್ರೇರಿತವಾದ ಜೀವಸಮುದಾಯವು ಸದಾ ಯಾವುದಾದರೊಂದು ಕರ್ಮವನ್ನು ಮಾಡುವುದರಲ್ಲಿಯೇ ತೊಡಗಿರುವುದು. ಸತ್ವರಜಸ್ತಮೋಗುಣಗಳು ಪ್ರಕೃತಿವಿಕಾರಗಳು. ಮೂಲ ಪ್ರಕೃತಿಯು ಅತ್ಯಲ್ಪವಿಕಾರದಿಂದ ಈ ಮೂರು ಗುಣಗಳು ಪ್ರಕಟವಾಗುವುದರಿಂದ ಪ್ರಕೃತಿಯು ಸತ್ವಾದಿಗುಣಾತ್ಮಕವೆಂದೂ ಹೇಳಲ್ಪಡುವುದು. ಸತ್ವಾದಿ ಗುಣಗಳು ಭಗವದಿಚ್ಛಾನುಸಾರವಾಗಿ ಪ್ರಾಣಿಸಮೂಹವನ್ನು ಬಂಧಿಸುವುವು. ಸತ್ವಾದಿ ಗುಣಗಳು ಭಗವದಿಚ್ಛಾನುಸಾರವಾಗಿ ಪ್ರಾಣಿಸಮೂಹವನ್ನು ಬಂಧಿಸುವುವು. ಪ್ರಕೃತಿಯು ವಿಕಾರಹೊಂದುವುದಾದರೂ ಭಗವದಿಚ್ಛೆಯಿಂದಲೇ. ಈ ಗುಣಗಳು ಪ್ರಾಣಿಗಳಲ್ಲಿ, ತಮ್ಮ ಸ್ವಭಾವಕ್ಕನುಗುಣವಾದ ಪ್ರವೃತ್ತಿಗಳನ್ನುಂಟುಮಾಡುವುವು. ಗುಣಗಳ ಈ ವಿಕಾರಿಕರ್ತೃತ್ವವೂ ಭಗವದಧೀನವಾದುದೇ. ನಿತ್ಯ ಭಗವಧೀನರಾದ ಜೀವರು, ಭಗವಂತನ ಸ್ವತಂತ್ರಕರ್ತೃತ್ವದಿಂದಲೂ, ಸತ್ವಾದಿ ಗುಣಗಳ ವಿಕಾರಿ ಕರ್ತೃತ್ವದಿಂದಲೂ ಪ್ರೇರಿತರಾಗಿ, ಪ್ರವರ್ತಿಸುವರಾದ್ದರಿಂದ, ಸರ್ವಾತ್ಮನಾಕರ್ಮಪರಿತ್ಯಾಗ ಮಾಡಲು ಅಸಮರ್ಥರಾಗಿರುವರು. (೫).

ಅರ್ಜುನ—ಶರೀರಪೋಷಣಾದಿಗಳ ನಿರ್ವಾಹಕ್ಕಾಗಿ ಮಾಡುವ ಕರ್ಮಗಳನ್ನು ಬಿಡಲಿಕ್ಕೆ ಅಸಾಧ್ಯವಾದರೂ, ಯಜ್ಞಾದಿಕರ್ಮಗಳನ್ನು ಬಿಡುವುದು ಶಕ್ಯವಷ್ಟೆ. ಕರ್ಮವು ಬಂಧಕವೆಂದು ಹೇಳುವ ವಾಕ್ಯದಲ್ಲಿ ಕರ್ಮಶಬ್ದವು ಯಜ್ಞಾದಿಕರ್ಮಪರವೆಂದು ಏಕೆ ತಿಳಿಯಕೂಡದು ?

ಶ್ರೀಕೃಷ್ಣ—ಪಾರ್ಥ! ಮುಖ್ಯ ತಾತ್ಪರ್ಯವನ್ನು ತಿಳಿ. ಕರ್ಮಗಳನ್ನು ಮಾಡುವುದು ಅಥವಾ ಬಿಡುವುದು ಬಂಧಮೋಕ್ಷಗಳಿಗೆ ಕಾರಣವಲ್ಲ; ಮನಸ್ಸೇ ಪ್ರಧಾನಕಾರಣವು. ಜೀವವನ್ನು ಕರ್ಮದಲ್ಲಿ ತೊಡಗಿಸುವ ವಾಕ್, ಪಾಣಿ (ಕೈಗಳು), ಪಾದ, ಪಾಯು (ಗುದ), ಉಪಸ್ಥ (ಗುಹ್ಯ), ಹಾಗೂ, ಚಕ್ಷು, ಶ್ರೋತ್ರ, ಸ್ಪರ್ಶ, ರಸನ (ಜಿಹ್ವೆ), ಘ್ರಾಣ (ನಾಸಿಕ) ಗಳೆಂಬ ದಶೇಂದ್ರಿಯಗಳನ್ನು ನಿರ್ಬಂಧಿಸಿ, ಇಂದ್ರಿಯಾರ್ಥಗಳಾದ ರೂಪಾದಿವಿಷಯಗಳನ್ನು ಮನಸಾ ಇಚ್ಛಿಸಿ ಸ್ಮರಿಸುತ್ತಿರುವ ಡಾಂಭಿಕನು ವಿಮೂಢನೆನಿಸುವನು. (೬). ಚಕ್ಷುರಾದಿ ಜ್ಞಾನೇಂದ್ರಿಯ

ಗಳನ್ನು ಮನಸಾ ಜಯಿಸಿ, ಫಲಸ್ನೇಹವನ್ನು ಪರಿತ್ಯಾಗವಾಡಿ, ವಾಗಾದ್ಯ ಕರ್ಮೇಂದ್ರಿಯಗಳಿಂದ ವರ್ಣಾಶ್ರಮೋಚಿತ ಕರ್ಮಾನುಷ್ಠಾನರೂಪವಾದ ಕರ್ಮಯೋಗವನ್ನು ಆರಂಭಿಸುವವನು ಹಿಂದೆ ಹೇಳಿದ ಕಪಟಾಚಾರಿಗಿಂತ ಉತ್ತಮನಲ್ಲವೇ! ವಶವರ್ತಿಯಾದ ಮನಸ್ಸುಳ್ಳವನು ಮಾತ್ರ ಇಂದ್ರಿಯ ಗಳನ್ನು ಜಯಿಸಿ ಕರ್ಮಯೋಗಪರನಾಗಬಲ್ಲನು. ಮನೋಜಯವಿಲ್ಲ ದಿದ್ದರೇ ಬಂಧವು, ಇದ್ದರೆ ಬಂಧವಿಲ್ಲ. ಮನೋನಿಗ್ರಹವಿಲ್ಲದಿದ್ದರೆ ಮೋಕ್ಷವಿಲ್ಲ, ನಿಗ್ರಹವಿದ್ದರೆ ಮೋಕ್ಷವುಂಟು. ಬಂಧಮೋಕ್ಷಗಳಿಗೆ ಮನೋಜಯರಾಹಿತ್ಯ ಮತ್ತು ಮನೋಜಯಗಳೇ ಪ್ರಯೋಜಕಗಳು. ಆದ್ದರಿಂದಲೇ ಮನಸ್ಸು ಪ್ರಧಾನ ಕಾರಣವೆಂದು ಹೇಳಿದೆನು, ತಿಳಿಯಿತೇ? ಹೀಗಿರುವುದರಿಂದ, ಕರ್ಮಕರಣ ಮತ್ತು ಕರ್ಮಪರಿತ್ಯಾಗಗಳೇ ಬಂಧ ಮೋಕ್ಷಗಳಿಗೆ ಕಾರಣಗಳೆಂದು ಸರ್ವಥಾ ತಿಳಿಯಬೇಡ. ಅಲ್ಲದೇ ಯಜ್ಞಾದಿ ಕರ್ಮಗಳೇ ಬಂಧಕವೆಂದು ತಿಳಿಯುವುದೂ ಸರಿಯಲ್ಲ. ಫಲ ಸ್ನೇಹ ಪರಿತ್ಯಾಗ ಪೂರ್ವಕವಾಗಿ ಆಚರಿಸಲ್ಪಡುವ ಯಜ್ಞಾದಿ ಕರ್ಮಗಳು ಉತ್ತಮ ಜ್ಞಾನೋಪಾಯಗಳೆಂದು ತಿಳಿ (೭). ಕರ್ಮ ಪರಿತ್ಯಾಗ ಕ್ಕಿಂತ ಕರ್ಮಾನುಷ್ಠಾನವೇ ಶ್ರೇಷ್ಠವಾದ್ದರಿಂದ ನಿಯತವಾದ ವರ್ಣಾಶ್ರ ಮೋಚಿತ ಕರ್ಮಗಳನ್ನು ಮಾಡು. ಕರ್ಮಗಳನ್ನು ಬಿಟ್ಟವನಿಗೆ ದೇಹ ನಿರ್ವಾಹವೂ ಸಾಧಿಸುವುದಿಲ್ಲವೆಂದು ನೀನೇ ಹೇಳಿರುವಿ; ಅದು ಸತ್ಯವೂ ಅಹುದು. (೮). ಕರ್ಮ ಸಾಮಾನ್ಯವೇ ಮುಕ್ತಿಪ್ರತಿಬಂಧಕವಾದ್ದರಿಂದ ತ್ಯಾಜ್ಯವೆಂಬ ಸಂಶಯವು ಸರಿಯಾದ ವಿಮರ್ಶೆಯಿಲ್ಲದ್ದರಿಂದ ಹುಟ್ಟಿದುದು. ಶ್ರೀ ವಿಷ್ಣುವೇ ಯಜ್ಞನಾಮಕನು. ಶ್ರೀ ವಿಷ್ಣುಪ್ರೀತ್ಯರ್ಥವಾಗಿ ಆಚರಿಸ ಲ್ಪಡದಿರುವ ಕರ್ಮಗಳುಮಾತ್ರ ಲೋಕದ ಜನರನ್ನು ಬಂಧಿಸುವುವು. ತನ್ನನ್ನೂ ಇತರ ಸರ್ವವನ್ನೂ ಅಶೇಷ ವಿಶೇಷವಾಗಿ ತಿಳಿದ ಸರ್ವಜ್ಞ ನಾದ್ದರಿಂದ ಶ್ರೀ ವಿಷ್ಣುವು (ಪರಮಾತ್ಮನು) 'ಜ್ಞ' ಎನಿಸುವನು. ಆತನ ಉದ್ದೇಶವಾಗಿಯೇ ಮಾಡಲ್ಪಡುವ ಕರ್ಮವು ಯಜ್ಞವೆನಿಸು ವುದು. ಯಜ್ಞಶಬ್ದದ ಮುಖ್ಯಾರ್ಥವನ್ನು ಗ್ರಹಿಸಿದೆಯಾ? ಆದ್ದರಿಂದ ಭಗವಂತನ ಪೂಜಾರ್ಥವಾಗಿ, ಆತನ ಪ್ರಸನ್ನತೆಯನ್ನುಳಿದು, ಬೇರಾವ

ಫಲವನ್ನೂ ಕೋರದೇ ವಿಹಿತಕರ್ಮಗಳನ್ನಾಚರಿಸು. ಅದೇ ಯಜ್ಞವು; ಅದರಿಂದಲೇ ಸಂಸಾರ ಬಂಧದ ಪರಿಹಾರವು (೯).

ಅರ್ಜುನ—ವರ್ಣಾಶ್ರಮೋಚಿತವಾದ ವಿಷ್ಣು ಪೂಜಾತ್ಮಕಕರ್ಮಾನುಷ್ಠಾನವೇ ಯಜ್ಞವೆಂದು ತಿಳಿದೆನು. ಯಜ್ಞವು ಸರ್ವಥಾ ಕರ್ತವ್ಯವೆಂಬುದನ್ನು ಸಯುಕ್ತಿಕವಾಗಿ ಪ್ರತಿಪಾದಿಸಿ ದೃಢಪಡಿಸು ದೇವ!

ಶ್ರೀ ಕೃಷ್ಣ—ಪಾರ್ಥ! ನಿನ್ನ ಪ್ರಶ್ನೆಯು ಪರಮ ಸಾಧುವಾದುದು. ಈ ಪ್ರಮೇಯವನ್ನು ದೃಢವಾಗಿ ಗ್ರಹಿಸಬೇಕಾದುದು ಅತ್ಯವಶ್ಯಕವೇ ಸರಿ. ಹೇಳುವೆನು, ಕೇಳು. ವೇದಗಳಲ್ಲಿ ಆಪಾತತಃ (ನೋಡುವ ಮಾತ್ರಕ್ಕೆ) ತೋರುವ ಅರ್ಥಗಳಿಂದ ಮೋಹಗೊಳ್ಳದಿರೆಂದೂ, ತಾತ್ಪರ್ಯಾರ್ಥವನ್ನು ವಿಮರ್ಶೆಯಿಂದ ತಿಳಿಯಬೇಕೆಂದೂ ಈ ಹಿಂದೆ ಹೇಳಿದುದನ್ನು ಮರೆತಿಲ್ಲವಷ್ಟೆ! ಉಪಕ್ರಮ—ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ ಮತ್ತು ಉಪಪತ್ತಿಗಳೆಂಬ ಆರು ಲಿಂಗಗಳಿಂದ ವೇದಗಳ ಹೃದಯವನ್ನು ಅರಿಯಬೇಕು. ಯಾವುದೊಂದು ವಿಷಯವನ್ನು ಪ್ರತಿಪಾದಿಸುವ ಪ್ರಕರಣದ, ಮೊದಲಿನ ಮತ್ತು ಕೊನೆಯ ಮಾತುಗಳನ್ನು ಗಮನಿಸಬೇಕು. (ವಿಷಯವು ಹೇಗೆ ಪ್ರಾರಂಭವಾಗಿದೆ ಮತ್ತು ಪರಿಸಮಾಪ್ತಿಗೊಂಡಿದೆ ಎಂಬುದನ್ನು ಗಮನಿಸದೇ ನಿಜವಾದ ತಾತ್ಪರ್ಯವು ತಿಳಿಯುವುದಿಲ್ಲ.) ಮೇಲಿಂದ ಮೇಲೆ ಹೇಳಲ್ಪಡುವ ಅಂಶವು (ಅಭ್ಯಾಸ) ತಾತ್ಪರ್ಯಾರ್ಥವನ್ನು ನಿರ್ಣಯಿಸಲು ವಿಶೇಷ ಸಹಾಯವಾಗುತ್ತದೆ. ಹಾಗೆಯೇ ಅಪೂರ್ವವಾದ ಅರ್ಥ, ಫಲನಿರೂಪಣೆ, ಯುಕ್ತಿನಿರೂಪಣೆ ಮತ್ತು ಪ್ರಶಂಸೆಗಳನ್ನು ಸಹ ಲಕ್ಷಿಸಬೇಕು. ಇವೆಲ್ಲ ದೃಷ್ಟಿಗೆ ಸರಿದೂಗುವ ಅರ್ಥವೇ ಗ್ರಾಹ್ಯವಾಗುವುದು. ಬೋಧ್ಯವಾದ ಅರ್ಥಪ್ರಶಂಸೆಯು ಸ್ತುತಿರೂಪವಾಗಿರಬಹುದು; ವಿರುದ್ಧಾರ್ಥದ ನಿಂದಾರೂಪವಾಗಿರಬಹುದು; ಬಹು ಪ್ರಾಚೀನವಾದುದೆಂದು ನಿರೂಪಿಸುತ್ತಾ, ಶ್ರೇಷ್ಠರ ಕೃತಿಗಳನ್ನು ಉದಹರಿಸುವುದಾಗಿರಬಹುದು. ಇದನ್ನೇ ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪರೂಪದ ಅರ್ಥವಾದವೆನ್ನುವರು. ಇತರ ಲಿಂಗಗಳಿಂದ ನಿರ್ಣೀತವಾದ ತಾತ್ಪರ್ಯಾರ್ಥದಲ್ಲಿ ಅರ್ಥವಾದವು ವಿಶೇಷ ದಾರ್ಢ್ಯವನ್ನುಂಟುಮಾಡು

ತ್ತದೆ. ಆದ್ದರಿಂದ ಹೇ ಪಾರ್ಥ! ಯಜ್ಞವು ಸರ್ವಥಾ ಕರ್ತವ್ಯವೆಂಬರ್ಥ ಅರ್ಥವಾದವನ್ನು ನಿರೂಪಿಸುವೆನು. ಕೇಳಿ, ಉಕ್ತಾರ್ಥದಲ್ಲಿ ನಿಷ್ಠೆಯನ್ನು ಹೊಂದುವನಾಗು. ಸೃಷ್ಟಿ ಪ್ರಾರಂಭದಲ್ಲಿ ಪ್ರಜಾಪತಿಯು (ಬ್ರಹ್ಮನು) ಯಜ್ಞಸಹಿತರಾದ ಬ್ರಾಹ್ಮಣಾದಿ ಪ್ರಜೆಗಳನ್ನು ಸೃಷ್ಟಿಸಿ ಅವರನ್ನು ಕುರಿತು ಹೀಗೆ ಮಾತನಾಡಿದನು. "ಹೇ ಪ್ರಜೆಗಳಿರಾ! ಯಜ್ಞವು ಸರ್ವಾಭೀಷ್ಟ ಗಳನ್ನು ಕೊಡುವ ಕಾಮಧೇನುವು. ಅದರಿಂದ ನಿಮಗಿಷ್ಟವಾದ ಸಕಲ ಪುರುಷಾರ್ಥಗಳನ್ನು ಪಡೆಯಿರಿ. (೧೦). ಯಜ್ಞದಲ್ಲಿ ಹವಿಸ್ಸು ಮೊದ ಲಾದುವುಗಳನ್ನು ಅರ್ಪಿಸಿ, ದೇವತೆಗಳನ್ನು ತೃಪ್ತಿಗೊಳಿಸಿರಿ. ಹಾಗೆ ತೃಪ್ತರಾದ ದೇವತೆಗಳು ನಿಮ್ಮ ಇಷ್ಟಾರ್ಥಗಳನ್ನು ಸಲ್ಲಿಸಿ ನಿಮ್ಮನ್ನು ತೃಪ್ತಿ ಗೊಳಿಸಲಿ. ಹೀಗೆ ಪರಸ್ಪರ ಸಂತುಷ್ಟರಾಗಿ ಮೋಕ್ಷವೆಂಬ ಪರಮ ಶ್ರೇಯಸ್ಸನ್ನು ಸಾಧಿಸಿರಿ (೧೧). ಹವಿರಾದಿಗಳನ್ನಿತ್ತು ಯಜ್ಞದ್ವಾರಾ ದೇವತೆಗಳನ್ನು ಪೂಜಿಸುವುದನ್ನು ಸರ್ವಥಾ ಬಿಡಬೇಡಿರಿ. ದೇವತೆಗಳಿಂದ ದತ್ತವಾದ ಅನ್ನಾದಿಭೋಗಗಳನ್ನು ದೇವತೆಗಳಿಗೆ ಅರ್ಪಿಸದೇ ಭೋಗಿಸು ವವನು ಕಳ್ಳನೆನಿಸುವನು. (೧೨). ದೇವತೆಗಳು ಶ್ರೀವಿಷ್ಣುಪರಿವಾರ ದವರು. ಆತನ ಪ್ರೇರಣೆಯಿಂದಲೇ ಅನ್ನಾದಿ ಭೋಗ್ಯವಸ್ತುಗಳನ್ನು ನಿಮಗೆ ಕೊಡುತ್ತಿರುವರು. ದೇವತೆಗಳನ್ನು ಹೀಗೆ ವಿಷ್ಣುಪರಿವಾರದವ ರೆಂದು ತಿಳಿದು, ಶ್ರೀವಿಷ್ಣುಪ್ರೀತ್ಯರ್ಥವಾಗಿಯೇ ಯಜ್ಞದಲ್ಲಿ ಅವರನ್ನು ಪೂಜಿಸಿರಿ. ಶ್ರೀ ವಿಷ್ಣು ಮತ್ತು ಆತನ ಪರಿವಾರದವರಿಗೆ ಅರ್ಪಿತವಾಗಿ ಉಳಿದುದನ್ನೇ ನೀವು ಭೋಗಿಸಿರಿ. ಆಗ ಸರ್ವಪಾಪಗಳಿಂದ ಮುಕ್ತರಾಗು ವಿರಿ. ಹಾಗಲ್ಲದೇ ಕೇವಲ ನಿಮಗಾಗಿ ಅನ್ನಾದಿ ಪಾಕಗಳನ್ನು ಸಿದ್ಧಗೊಳಿಸಿ ಉಂಡರೆ ನಿಮಗೆ ಪಾಪವು ತಪ್ಪಿದ್ದಲ್ಲ. ಪಾಕಮಾಡುವ ಧಾನ್ಯಾದಿಗಳನ್ನು ಕುಟ್ಟುವುದು, ಬೀಸುವುದು, ಹುರಿಯುವುದು, ತೋಯಿಸುವುದು, ಕೇರು ವುದು ಮೊದಲಾದ ಸಂಸ್ಕಾರಗಳಿಗೆ ಒಳಪಡಿಸುವುದರಿಂದ ಅನೇಕಪ್ರಾಣಿ ಗಳು ನಾಶವಾಗುತ್ತವೆ. ಈ ಅನಿವಾರ್ಯವಾದ (ಪಂಚಸೂನಾ) ದೋಷವು ಗೃಹಸ್ಥರಿಗೆ ಬರುವುದು. ಅದರ ಪರಿಹಾರಕ್ಕಾಗಿ ವೈಶ್ವದೇವಾದಿ ಯಜ್ಞ ವನ್ನು ಮಾಡಬೇಕು. ನಂತರ ಪಾಕ ಸಿದ್ಧವಾದ ಅನ್ನಾದಿಗಳನ್ನು ಅರ್ಪಿ

ಅಭ್ಯಾಗತರಿಗೆ ಉಣಿಸಿ, ಮಿಕ್ಕ ಅನ್ನಾದಿಗಳನ್ನು ಭೋಜನ ಮಾಡಬೇಕು. ಇವು ಯಜ್ಞಾವಶಿಷ್ಟಪ್ರಸಾದಗಳೆನಿಸುವುವು. (೧೩). ವರ್ಣಾಶ್ರಮೋಚಿತವಾದ ಕರ್ಮಗಳು ಸರ್ವಥಾ ಕರ್ತವ್ಯಗಳೆಂಬಲ್ಲಿ ಬೇರೆ ಕಾರಣಗಳನ್ನೂ, ಅವುಗಳ ಪರಿತ್ಯಾಗದಿಂದ ಪ್ರಾಪ್ತವಾಗುವ ಅನರ್ಥಗಳನ್ನೂ ನಿರೂಪಿಸುವೆನು, ಕೇಳು. ಅನ್ನದಿಂದ ಪ್ರಾಣಿಗಳು ಹುಟ್ಟುತ್ತವೆ. (ಅನ್ನವು ರೇತಸ್ಸಾಗಿ ಪರಿಣಮಿಸಿ ಅದರಿಂದ ಪ್ರಾಣಿದೇಹಗಳು ಹುಟ್ಟುತ್ತವೆ) ಅನ್ನವು ಮೇಘಚಕ್ರಾಭಿಮಾನಿಯಾದ ಪರ್ಜನ್ಯನಾಮಕ ಆದಿತ್ಯನಿಂದ ಹುಟ್ಟುವುದು. (ಪರ್ಜನ್ಯನು ಮಳೆಗರೆಯುವನು; ಅದರಿಂದ ಅನ್ನವು ಹುಟ್ಟುತ್ತದೆ). ಯಜ್ಞದಲ್ಲಿ ಅರ್ಪಿಸಲ್ಪಡುವ ತುಪ್ಪ (ಆಜ್ಯ) ಮೊದಲಾದ ಹವಿಸ್ಸುಗಳಿಂದ ಪರ್ಜನ್ಯನು ಸಂತುಷ್ಟನಾಗಿ ಮಳೆಗರೆಯುವನು. (ಪರ್ಜನ್ಯನಿಂದ ಮಳೆಯು ದೊರೆಯುವುದರಿಂದ, ಮಳೆಗರೆಯುವ ಮೇಘಸಮೂಹವೇ ಪರ್ಜನ್ಯವೆಂದೂ ಕರೆಯಲ್ಪಡುವುದು. ಯಜ್ಞದಿಂದ ಪರ್ಜನ್ಯನ ಉದ್ಭವವಾಗುವುದು). ದೇವತೋದ್ದೇಶವಾಗಿ ಮಾಡಲ್ಪಡುವ ದ್ರವ್ಯತ್ಯಾಗರೂಪವಾದ ಯಜ್ಞವು ತದಂಗಕ್ರಿಯೆಗಳಿಂದ ಸಂಭವಿಸುವುದು. (ಯಜ್ಞವು ಕರ್ಮದಿಂದಾಗುವುದು). (೧೪). ಕರ್ಮವು ಪರಬ್ರಹ್ಮನಿಂದ ಹುಟ್ಟುವುದು; ಎಂದರೆ ಪ್ರಾಣಿಗಳ ಕರ್ಮಶಕ್ತಿಯು ಸ್ವತಂತ್ರಕರ್ತನಾದ ಪರಮಾತ್ಮನಿಂದಲೇ ಪ್ರಕಟವಾಗುವುದೆಂದು ತಿಳಿ. ಪರಬ್ರಹ್ಮನು (ಅಕ್ಷರದಿಂದ) ಅನಾದಿನಿತ್ಯವೇದಗಳಿಂದಲೇ ವೇದ್ಯನು. ವೇದಗಳಿಂದ ಯಥಾರ್ಥವಾಗಿ ತಿಳಿಯಲ್ಪಟ್ಟ ಪರಬ್ರಹ್ಮನೇ ಯಜ್ಞಾದಿ ಸತ್ಕರ್ಮಗಳನ್ನು ಮಾಡಿಸುವವನು. ವೇದಗಳು ಪ್ರಾಣಿಗಳ ಉಚ್ಚಾರಾದಿಗಳಿಂದ ಅಭಿವ್ಯಕ್ತವಾಗುವುವು. ಹೀಗೆ ಸರ್ವಗತನಾದ ಪರಬ್ರಹ್ಮನು ಪರಂಪರೆಯಿಂದ, ಯಜ್ಞದಿಂದ ಅಭಿವ್ಯಕ್ತನಾಗುತ್ತಾನಾದ್ದರಿಂದ ಯಜ್ಞದಲ್ಲಿ ಪ್ರತಿಷ್ಠಿತನೆಂದು ಹೇಳಲ್ಪಡುವನು. ಯಜ್ಞಾನುಷ್ಠಾನದಿಂದ ಈ ಜಗಚ್ಚಕ್ರವು ಪ್ರವರ್ತಿತವಾಗಿ ಪ್ರಾಣಿಗಳ ಸ್ಥಿತಿಗೆ ಕಾರಣವಾದ ಸತ್ಕೃತವುಂಟಾಗುವಂತೆ, ಭಗವದ್ಭಕ್ತಿಗೆ ಕಾರಣವಾದ ಸುಕೃತವೂ ಯಜ್ಞದಿಂದಲೇ ಉಂಟಾಗುವುದು. (೧೫).

ಅರ್ಜುನ— ವರ್ಣಾಶ್ರಮೋಚಿತ ಕರ್ಮಾನುಷ್ಠಾನರೂಪವಾದ

ಯಜ್ಞಾದಿಕರ್ಮಗಳ ಪರಿತ್ಯಾಗದಿಂದ ಪ್ರಾಪ್ತವಾಗುವ ಅನರ್ಥಗಳನ್ನು ನಿರೂಪಿಸುವೆನೆಂದು ಹೇಳಿದೆಯಲ್ಲವೇ? ಅವುಗಳನ್ನು ಹೇಳುವೆಯಾ ಸ್ವಾಮಿ!

ಶ್ರೀಕೃಷ್ಣ— ಪ್ರಾಣಿಗಳ ಇಷ್ಟಾರ್ಥಸಿದ್ಧಿಗಾಗಿ ಭಗವಂತನಿಂದಲೇ ಪ್ರವರ್ತಿತವಾದ ಈ ಜಗಚ್ಚಕ್ರವನ್ನು ಯಾವನು ಅನುಸರಿಸುವುದಿಲ್ಲವೋ, ಎಂದರೆ, ಚಕ್ರವು ಉರುಳುತ್ತಿರಲು ಅವಶ್ಯಕವಾದ ಯಜ್ಞಾದಿಕರ್ಮಗಳನ್ನು ಮಾಡುವುದಿಲ್ಲವೋ, ಅವನು ಕೇವಲ ಪಾಪನಿಮಿತ್ತವಾದ ಆಯುಸ್ಸುಳ್ಳವನಾಗುವನು. ಚಕ್ರಪ್ರವೃತ್ತಿಯನ್ನು ತಡೆಯಲೆತ್ನಿಸಿದರೆ, ಜಗತ್ತಿನ ನಾಶಕ್ಕಾಗಿ ಯತ್ನಿಸಿದಂತಲ್ಲವೇ? (ಇಂಥವನಿಂದ ಚಕ್ರವು ನಾಶಹೊಂದುವುದಿಲ್ಲ; ಪರಂತು, ವಿರುದ್ಧಪ್ರವರ್ತನೆಯುಳ್ಳ ತಾನೇ ನಾಶಹೊಂದುವನು). ಆತನು ಕೇವಲ ವಿಷಯಭೋಗಗಳಲ್ಲಿಯೇ ಆಸಕ್ತನಾಗಿ, ಹೇ ಪಾರ್ಥ! ವ್ಯರ್ಥಜೀವನವನ್ನು ನೀಗಿ, ನರಕದಲ್ಲಿ ಬೀಳುವನು.

ಅರ್ಜುನ— ಗೃಹಸ್ಥಾಶ್ರಮಿಗಳಂತೆ, ಬ್ರಹ್ಮಚರ್ಯಾದಿ ಉಳಿದ ಮೂರು ಆಶ್ರಮಗಳಲ್ಲಿರುವವರಿಗೆ ಯಜ್ಞಾದಿ ಕರ್ಮಗಳೇ ಇಲ್ಲದಿರಲು, ಜಗಚ್ಚಕ್ರಾನುಸರಣವು ಅವರಿಗೆ ಹೇಗೆ ಕೂಡುವುದು?

ಶ್ರೀಕೃಷ್ಣ—ಯಜ್ಞ, ದಾನ, ತಪಸ್ಸುಗಳೆಂಬ ತ್ರಿವಿಧ ಕರ್ಮಗಳು ಎಲ್ಲ ಆಶ್ರಮದವರಿಗೂ ಇರುವುವು. ಇಲ್ಲವೆಂದು ಯಾರು ಹೇಳಿದರು? ವಿದ್ಯಾದಾನ, ಅಭಯದಾನ, ತಾವು ಉಂಬ ಅನ್ನದಾನಗಳೆಂಬ ದಾನವೂ; ಅಧ್ಯಯನ ಪ್ರವಚನ ಮತ್ತು ಧ್ಯಾನಗಳೆಂಬ, ವಾಚನಿಕ, ಮಾನಸಿಕ ಯಜ್ಞವೂ; ಚಾಂದ್ರಾಯಣಾದಿ ವ್ರತಾನುಷ್ಠಾನರೂಪತಪಸ್ಸೂ ಗೃಹಸ್ಥರಲ್ಲದ ಇತರ ಆಶ್ರಮದವರಿಗೂ ಇವೆ.[1] ಆದ್ದರಿಂದ ಜಗಚ್ಚಕ್ರದ ಅನುವರ್ತನವು ಅವರಿಗೂ ಇರುತ್ತದೆ. (೧೬)

---

[1] ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸಗಳೆಂದು ಆಶ್ರಮಗಳು ನಾಲ್ಕು. ಇವು, ಯಥಾಯೋಗ್ಯವಾಗಿ ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ವೇದಾಧಿಕಾರವುಳ್ಳ ಮೂರು ವರ್ಣದವರಿಗೆ) ವಿಹಿತವಾಗುತ್ತದೆ. ಈ ವಿವರಗಳನ್ನೂ ಸನ್ಯಾಸಾಶ್ರಮದ ಅವಾಂತರಪ್ರಭೇದಗಳನ್ನೂ ಪ್ರತ್ಯೇಕವಾಗಿ, ಗ್ರಂಥಾಂತರಗಳಿಂದ ತಿಳಿಯಬೇಕು.

ಅರ್ಜುನ—ಹೇ, ದೇವ! ನೀನು ಹೇಳುವಂತೆ ಕರ್ಮಪರಿತ್ಯಾಗದಿಂದ ಅನರ್ಥವೇ ಸಂಭವಿಸುವುದಾದರೆ,[2] ಅಸಂಪ್ರಜ್ಞಾತಸಮಾಧಿರೂಪ ಮನೋಯೋಜನೆಯೂ ಅಕಾರ್ಯವೆಂದೇ ಪ್ರಾಪ್ತವಾಗುವುದು. ಸಮಾಧಿಸ್ಥನಿಗೆ ಅವಶ್ಯವಾಗಿ ಕರ್ಮಲೋಪವು ಒದಗುವುದಿಲ್ಲವೇ?

ಶ್ರೀಕೃಷ್ಣ—ಅಸಂಪ್ರಜ್ಞಾತಸಮಾಧಿಯಲ್ಲಿ ಬಹುಕಾಲನಿಲ್ಲಲು ಅಪರೋಕ್ಷಜ್ಞಾನಿಗೆ ಮಾತ್ರ ಸಾಧ್ಯವು. ಆತನು, ಭಗವದ್ದರ್ಶನಜನ್ಯವಾದ ಅಲೌಕಿಕಸುಖದಲ್ಲಿ ಮಗ್ನನಾಗಿರುವನು. ಭಗವದಿತರವಸ್ತುಗಳಲ್ಲಿ ಸರ್ವಾತ್ಮನಾ ಗತಿಯಿಲ್ಲದವನಾಗಿರುವನು. ಪರಮಾತ್ಮನ ಪ್ರಸನ್ನತೆಯಿಂದ ಸಂತೃಪ್ತನಾಗಿರುವನು. ಅನ್ಯತ್ರ ರತಿಯಿಲ್ಲದಿರುವಿಕೆಯೂ ಪರಮಾತ್ಮನ ಪ್ರಸಾದದಿಂದಲೇ ಪ್ರಾಪ್ತವಾದುದು. ದರ್ಶನಲಭ್ಯವಾದ ಮಹಾಸುಖವೂ ಅನ್ಯತ್ರ ಅಲಂಬುದ್ಧಿಗೆ ಕಾರಣವು. ಹೀಗೆ ಭಗವದ್ದರ್ಶನದಿಂದ ಸಂತುಷ್ಟನಾದ, ಬಹಿರ್ವ್ಯಾಪಾರರಹಿತನಾದ ಜ್ಞಾನಿಗೆ ಸಂಧ್ಯಾವಂದನಾದಿ ಯಾವ ಕರ್ತವ್ಯಕರ್ಮಗಳೂ ಇಲ್ಲ. ಆದ್ದರಿಂದ ಸಮಾಧಿಸ್ಥನಾದ ಜ್ಞಾನಿಗೆ ಕರ್ಮಲೋಪದಿಂದ ಜಗಚ್ಚಕ್ರವನ್ನು ಅನುವರ್ತಿಸಲಿಲ್ಲವೆಂಬ ದೋಷವಿಲ್ಲ. (೧೭)

ಅರ್ಜುನ—ಅದೇಕೆ, ಕೃಷ್ಣ! ಕರ್ತವ್ಯಕರ್ಮವನ್ನಾಚರಿಸಬೇಕಾದ ಸಮಯದಲ್ಲಿ ಸಮಾಧಿಯಿಂದ ತನ್ನನ್ನು ಎಚ್ಚರಗೊಳಿಸೆಂದು ಮತ್ತೊಬ್ಬನಿಗೆ ಹೇಳಿ, ಸಮಾಧಿಯಲ್ಲಿ ಕುಳಿತು, ಯೋಗಶಾಸ್ತ್ರದಲ್ಲಿ ಹೇಳುವ ಉಪಾಯಗಳಿಂದ ಆತನಿಂದ ಸಕಾಲದಲ್ಲಿ ಉದ್ಬೋಧಿತನಾಗಿ ಕರ್ತವ್ಯ ಕರ್ಮಗಳನ್ನು ಮಾಡಬಹುದಲ್ಲವೇ?

---

[2] ಧಾರಣ, ಧ್ಯಾನ, ಸಮಾಧಿಗಳೆಂಬುವು, ಮನಸ್ಸಿನ ಸ್ಥಿತಿವಿಶೇಷಗಳು. ಒಂದು ವಿಷಯದಲ್ಲಿ ಪ್ರವೃತ್ತವಾದ ಮನಸ್ಸು, ಮಧ್ಯದಲ್ಲಿ ವಿಚ್ಛಿತ್ತಿಯನ್ನು ಹೊಂದಿದರೆ, ಎಂದರೆ ಆ ವಸ್ತುವನ್ನು ಬಿಟ್ಟು ಅನ್ಯತ್ರ ಚಲಿಸುತ್ತಿದ್ದರೆ, ಧಾರಣವೆಂದೂ, ಏಕಧಾರೆಯಂತೆ ಒಂದೇ ವಸ್ತುವಿನಲ್ಲಿ ನಿಂತರೆ ಧ್ಯಾನವೆಂದೂ, ಪ್ರಯತ್ನವಿಲ್ಲದೇ ಧ್ಯಾನದಲ್ಲಿ (ಏಕತ್ರ ಚಲಿಸದಂತೆ) ನಿಂತರೆ ಸಮಾಧಿಯೆಂದೂ, ಮನಸ್ಸಿನ ಅವಸ್ಥಾವಿಶೇಷಗಳು ವ್ಯವಹರಿಸಲ್ಪಡುತ್ತವೆ. ಭೇರಿತಾಡನ ಮೊದಲಾದವುಗಳಿಂದ ಸಹ ಹೊರಮುಖವಾಗದಂತೆ ಮನಸ್ಸು ನಿಶ್ಚಲವಾಗಿ ಸಮಾಧಿಸ್ಥವಾದರೆ, ಆ ಸ್ಥಿತಿಯನ್ನು ಅಸಂಪ್ರಜ್ಞಾತಸಮಾಧಿಯೆಂದು ತಿಳಿಯಬೇಕು.

ಶ್ರೀಕೃಷ್ಣ— ಯಾವ ಪ್ರಯೋಜನಕ್ಕಾಗಿ ಹಾಗೆ ಮಾಡಬೇಕು? ಬೇರಾವ ಕರ್ಮಾನುಷ್ಠಾನದಿಂದಲೂ, ಸಮಾಧಿಯಲ್ಲಿ ಭಗವದ್ದರ್ಶನವನ್ನು ಪಡೆಯುವುದಕ್ಕಿಂತ, ಹೆಚ್ಚಿನ ಅಥವಾ ಸಮವಾದ ಪುರುಷಾರ್ಥವನ್ನು ಯಾರೂ ಸಾಧಿಸಲಾರರು.

ಅರ್ಜುನ—ನಿತ್ಯನೈಮಿತ್ತಿಕಕರ್ಮಗಳಪರಿತ್ಯಾಗದಿಂದ ಪ್ರತ್ಯವಾಯ (ದೋಷ) ವಿಲ್ಲವೇ? ಅದರ ಪರಿಹಾರಕ್ಕಾಗಿಯಾದರೂ, ಸಮಾಧಿಯಿಂದ ಏಳಬೇಕಾದುದು ಅವಶ್ಯಕವಲ್ಲವೇ?

ಶ್ರೀಕೃಷ್ಣ—ಸಂಧ್ಯಾವಂದನಾದಿ ಆಯಾ ಕಾಲಗಳಲ್ಲಿ ಅನುಷ್ಠೇಯ ವಾದ ಕರ್ಮಗಳನ್ನು ಮಾಡದಿರುವುದರಿಂದ ಅವನಿಗೆ ಯಾವ ಪ್ರತ್ಯ ವಾಯವೂ ಇಲ್ಲ.

ಅರ್ಜುನ— ಗುರುವು ಸನ್ನಿಹಿತನಾದರೂ (ಎದುರಿಗೆ ಬಂದು ನಿಂತರೂ) ಸಮಾಧಿಸ್ಥನು ಉದ್ಬೋಧಿತನಾಗಿ ಪೂಜಿಸಬೇಕಾದ್ದಿಲ್ಲವೇ? ಗುರುಪೂಜಾದಿಗಳ ಅಭಾವದಿಂದಲೂ ಪ್ರತ್ಯವಾಯವಿಲ್ಲವೇ?

ಶ್ರೀಕೃಷ್ಣ— ಸಮಾಧಿಸ್ಥನಿಗೆ ಯಾವ ಪ್ರಾಣಿಗಳಿಂದ ಪ್ರಾಪ್ತವಾಗ ಬೇಕಾದ ಯಾವ ಪ್ರಯೋಜನವೂ ಇಲ್ಲ. ಯಾರ ದರ್ಶನ, ಸಂಭಾಷಣ, ಪೂಜಾದಿ ವ್ಯಾಪಾರಗಳಿಂದ ಪ್ರಾಪ್ತವಾಗತಕ್ಕ ಅರ್ಥವೂ ಇರುವುದಿಲ್ಲ. ಆತ್ಮರತಿಗೆ (ಪರಮಾತ್ಮನ ದರ್ಶನಸುಖಕ್ಕೆ) ಸಮವಾದ ಸುಖವು ಈ ಯಾವ ವ್ಯಾಪಾರಗಳಿಂದ ಲಭಿಸಬಹುದು? ಪರಮಪುರುಷಾರ್ಥರೂಪ ವಾದ ಶ್ರೀಹರಿದರ್ಶನವೇ ಲಭಿಸಿರಲು, ಆತನು ಬೇರಾವಕರ್ಮದಿಂದಲೂ ಏನನ್ನೂ ಸಾಧಿಸಬೇಕಾದ್ದಿರುವುದಿಲ್ಲ. ಆತನಿಗೆ ಈ ವ್ಯಾಪಾರಗಳ ಅಭಾವದಿಂದ ಯಾವ ಅನರ್ಥವೂ ಇಲ್ಲ.

ಅರ್ಜುನ—ಹೀಗೆ ಹೇಳಿದರೆ, ಜಗಚ್ಚಕ್ರಪ್ರವರ್ತಕತ್ವವೆಂಬ ಕಾರಣ ದಿಂದ ಕರ್ಮಾನುಷ್ಠಾನವು ಅವಶ್ಯಕವೆಂಬುದು, ಅಜ್ಞಾನಿಗಳಿಗೆ ಮಾತ್ರ ವೆಂದು ಹೇಳಿದಂತಾಗುವುದಿಲ್ಲವೇ?

ಶ್ರೀಕೃಷ್ಣ—ಹಾಗಲ್ಲ, ಅರ್ಜುನ! ಅಸಂಪ್ರಜ್ಞಾತ ಸಮಾಧಿಯಲ್ಲಿ ಇರುವವನಿಗೆ ಕರ್ಮಪರಿತ್ಯಾಗದಿಂದ ದೋಷವಿಲ್ಲೆಂದುಮಾತ್ರ ಸಿದ್ಧ

ವಾಯಿತು. ಅಪರೋಕ್ಷಜ್ಞಾನಿಗಳೆಲ್ಲರೂ ಸದಾ ಸಮಾಧಿಸ್ಥರಾಗಿರುವುದಿಲ್ಲ. ಸಮಾಧಿಯಲ್ಲಿಲ್ಲದಾಗ ಕರ್ತವ್ಯಕರ್ಮಗಳನ್ನು ಅವರೂ ಅನುಷ್ಠಾನ ಮಾಡಲೇಬೇಕು. ಸಮಾಧಿಸ್ಥನು ಮುಕ್ತಸದೃಶನು. ಮುಕ್ತಿಪರ್ಯಂತ ವಿಹಿತಾನುಷ್ಠಾನವು ಅತ್ಯಗತ್ಯ. ಅಮುಕ್ತರೆಲ್ಲರೂ, ಜ್ಞಾನಿಗಳಾಗಲಿ, ಅಜ್ಞಾನಿಗಳಾಗಲಿ, ಕರ್ಮಾನುಷ್ಠಾನದಿಂದ ಜಗಚ್ಚಕ್ರವನ್ನು ಅನುವರ್ತಿಸಬೇಕು. ಮುಕ್ತನಾದರೋ ಪರಮಾತ್ಮನಿಂದ ಅಭಿವ್ಯಕ್ತಿಗೊಳಿಸಲ್ಪಟ್ಟ ಸ್ವರೂಪಾನಂದವುಳ್ಳವನು, ಕೃತಕೃತ್ಯನು ಮತ್ತು ಪರಮಾತ್ಮನಲ್ಲಿಯೇ ಸಂತುಷ್ಟನು. ಮುಕ್ತನಿಗೆ ಕರ್ತವ್ಯಕರ್ಮವೆಂಬುದಿಲ್ಲ. ಆದರೂ ಮುಕ್ತನು ನಿಷ್ಕ್ರಿಯನಲ್ಲ; ಸ್ವೇಚ್ಛಾವಿಹಾರಿಯು; ಮನಬಂದ ಕರ್ಮಗಳಲ್ಲಿ ತೊಡಗುವನು. ಮುಕ್ತಿಯು ಸರ್ವಕರ್ಮಗಳ ಫಲರೂಪವಾದ ಸ್ಥಿತಿಯು. ಫಲಾಂತರವೇ ಇಲ್ಲದ್ದರಿಂದ ಫಲಪ್ರಾಪಕವಾದ ಯಾವ ಕರ್ಮಗಳೂ ಅವನಿಗಿಲ್ಲ. (೧೮) ಆದ್ದರಿಂದ ಫಲಸ್ನೇಹರಹಿತನಾಗಿ (ಅಸಕ್ತನಾಗಿ) ಕರ್ತವ್ಯಕರ್ಮವನ್ನು ಭಗವತ್ಪೂಜೆಯೆಂದು ಭಾವಿಸಿ ಬಿಡದಂತೆ ಆಚರಿಸುತ್ತಿರು.

ಅರ್ಜುನ— ಕರ್ಮದಿಂದ ಪ್ರಯೋಜನವಿಲ್ಲದ್ದರಿಂದ ಮುಕ್ತನಿಗೆ ಹೇಗೆ ಕರ್ತವ್ಯವೆಂಬುದಿಲ್ಲವೋ, ಹಾಗೆ, ಮುಮುಕ್ಷುವಿಗೂ (ಮುಕ್ತಿಯನ್ನೇ ಕೋರುವ ನಿಷ್ಕಾಮಕರ್ಮಿಗೂ) ಕರ್ಮದಿಂದ ಫಲವಿಲ್ಲದ್ದರಿಂದ ಕರ್ತವ್ಯವೇ ಇಲ್ಲವೆಂದು ಏರ್ಪಡುವುದಿಲ್ಲವೇ?

ಶ್ರೀಕೃಷ್ಣ—ಪ್ರತಿಯೊಬ್ಬ ಪುರುಷನೂ ಫಲಸ್ನೇಹವನ್ನು ತೊರೆದು ಕರ್ಮಗಳನ್ನಾಚರಿಸಿಯೇ ಜ್ಞಾನದ್ವಾರಾ ಮೋಕ್ಷವನ್ನು ಹೊಂದುವನು. ಮುಮುಕ್ಷುವಿನ ಕರ್ಮಕ್ಕೆ ಜ್ಞಾನರೂಪವಾದ ಫಲವಿದೆ. ನಿಷ್ಕಾಮ ಕರ್ಮವು ಜ್ಞಾನೋಪಾಯವೆಂದು ಹೇಳಿದ್ದನ್ನು ಮರೆತೆಯಾ? ಮುಕ್ತನು ಕೃತಕೃತ್ಯನು; ಅವನಿಗೆ ಲಭಿಸಬೇಕಾದ ಯಾವ ಫಲವೂ ಇಲ್ಲ. ಆದ್ದರಿಂದ ಮುಕ್ತ ಮತ್ತು ತತ್ಸದೃಶನಾದ ಸಮಾಧಿಸ್ಥನ ವಿನಾ ಇತರರೆಲ್ಲರಿಗೂ ಕರ್ಮದಿಂದ ಪ್ರಯೋಜನವುಂಟು. ಅತ ಏವ ಕರ್ತವ್ಯವೂ ಉಂಟು. (೧೯)

ಅರ್ಜುನ—ಜ್ಞಾನದಿಂದ ಮೋಕ್ಷವೆಂದು ಸಿದ್ಧವಾದಮೇಲೆ ಜ್ಞಾನಿಗೆ

ಕರ್ತವ್ಯಕರ್ಮಗಳಿಲ್ಲವೆಂದು ಪ್ರಾಪ್ತವಾಗುವುದಿಲ್ಲವೇ ? ಜ್ಞಾನಿಯೂ ಕರ್ಮಗಳನ್ನು ಮಾಡಬೇಕೇ ?

ಶ್ರೀಕೃಷ್ಣ—ಅರ್ಜುನ! ಜನಕ, ಪ್ರಿಯವ್ರತಾದಿಗಳು ಜ್ಞಾನಿಗಳು. ಆದರೂ ಕರ್ಮಗಳನ್ನು ಮಾಡಿಯೇ ಪೂರ್ಣವಾದ ಮೋಕ್ಷವನ್ನು ಹೊಂದಿದರು.

ಅರ್ಜುನ—ಜ್ಞಾನಿಗೆ ಮೋಕ್ಷವು ಸಿದ್ಧವಾಗಿರಲು, ಪುನಃ ಕರ್ಮ ಮಾಡಿ ಸಂಪೂರ್ಣ ಮೋಕ್ಷವನ್ನು ಹೊಂದಿದರೆಂಬುದರ ಅರ್ಥವೇನು ?

ಶ್ರೀಕೃಷ್ಣ—ಜ್ಞಾನದಿಂದ ಮೋಕ್ಷವು ಸಿದ್ಧವೆಂಬುದು ನಿಜ.* ಆದರೂ ಮುಕ್ತಿಯಲ್ಲಿ ಆನಂದಾತಿಶಯವನ್ನು ಪಡೆಯುವುದಕ್ಕಾಗಿ ಜ್ಞಾನಿಗಳು ಕರ್ಮ ಮಾಡುತ್ತಾರೆ. ಅಲ್ಲದೆ ಈಶ್ವರಪ್ರೀತಿದ್ವಾರಾ, ಮುಕ್ತಿಹೇತುವಾದ ಲೋಕಸಂಗ್ರಹರೂಪವಾದ ಪ್ರಯೋಜನವೂ ಜ್ಞಾನಿಗಳ ಕರ್ಮದಿಂದಾಗುವುದು. ಅಜ್ಞಾನಿಜನರಿಗೆ ನಿಷ್ಕಾಮಕರ್ಮದಲ್ಲಿ ಪ್ರವೃತ್ತಿಯನ್ನುಂಟುಮಾಡುವುದೇ ಲೋಕಸಂಗ್ರಹವು. ಇದರಿಂದ ಭಗವತ್ಪ್ರೀತಿಯೂ, ಅದರಿಂದ ಮೋಕ್ಷದಲ್ಲಿ ಸುಖಾತಿಶಯವೂ ಉಂಟೆಂದು ತಿಳಿ. (೨೦)

ಅರ್ಜುನ—ಜ್ಞಾನಿಕರ್ಮದಿಂದ ಇತರರಿಗೆ ಕರ್ಮದಲ್ಲಿ ಹೇಗೆ ಪ್ರವೃತ್ತಿಯುಂಟಾಗುವುದು ? ಜ್ಞಾನಿಯಂತೆ ಕರ್ಮ ಮಾಡಲು ಇತರರಿಗೆ ಸಾಧ್ಯವೇ ?

---

* ಸೂಚನೆ—ಜ್ಞಾನದಿಂದ ಮುಕ್ತಿಯಲ್ಲಿ ಸ್ವಯೋಗ್ಯವಾದ ಆನಂದವು ಲಭಿಸಿದರೂ ಜ್ಞಾನಾನಂತರ ಆಚರಿಸಲ್ಪಡುವ ಕರ್ಮದ ಫಲರೂಪವಾಗಿ ಆನಂದವು ವೃದ್ಧಿಯಾಗುವುದು. ಹಾಲು ಇದ್ದಷ್ಟೇ ಇದ್ದರೂ, ಉಕ್ಕಿದಾಗ ತುಂಬಿಬರುವಂತೆ ಸ್ವಯೋಗ್ಯತೆಗೆ ವ್ಯತ್ಯಾಸವಿಲ್ಲದಿದ್ದರೂ, ಆನಂದದಲ್ಲಿ ಅತಿಶಯವು (ಅಭಿವೃದ್ಧಿಯು) ಉಂಟಾಗುವುದೆಂದು ತಿಳಿಯಬೇಕು. ಜ್ಞಾನಾನಂತರದ ಕರ್ತವ್ಯಪರಿತ್ಯಾಗದಿಂದಲೂ, ನಿಷಿದ್ಧಾಚರಣೆಯಿಂದಲೂ, ದೇವತೆಗಳೇ ಮೊದಲಾದ ಉತ್ತಮಜೀವರಿಗೆ ನಿಯತವಾದ ಆನಂದದಲ್ಲಿ ಹ್ರಾಸವುಂಟಾಗುವುದಿಲ್ಲ. ಮನುಷ್ಯಾದಿ ಅಲ್ಪಜೀವರಿಗೆ ಹ್ರಾಸವೂ ಉಂಟು. ಹೀಗಿದ್ದರೂ, ಎಲ್ಲ ಜ್ಞಾನಿಗಳಿಗೆ ದುಃಖಮಿಶ್ರವಲ್ಲದ ನಿತ್ಯಾನಂದವು ಲಭಿಸುವುದು ನಿಶ್ಚಯ.

ಶ್ರೀಕೃಷ್ಣ— ಮಹಾತ್ಮನಾದವನು (ಜ್ಞಾನಿಯು) ಯಾವ ಶಾಸ್ತ್ರ ವಾಕ್ಯಾದಿಗಳನ್ನು ತನ್ನ ಆಚರಣೆಗಳಿಂದ ಪ್ರಮಾಣೀಕರಿಸುವನೋ, ಅದನ್ನು ಲೋಕದ ಜನರು ಪ್ರಮಾಣವೆಂದು ನಂಬುವರು. ಅಲ್ಲದೆ ಜ್ಞಾನಿಯು ಅನುಷ್ಠಾನ ಮಾಡುವ ಲೌಕಿಕ ವೈದಿಕ ಕರ್ಮಗಳನ್ನು ಮೇಲ್ಪಂಙ್ತಿಯಾಗಿಟ್ಟುಕೊಂಡು ಯಥಾಯೋಗ್ಯವಾಗಿ ಅನುಸರಿಸುವರು. (೨೧) ನೋಡು, ಅರ್ಜುನ! ಕರ್ಮಾಚರಣೆಯಿಂದ ಯಾವ ಪ್ರಯೋಜನವೂ ಇಲ್ಲದ ನಾನೂ ಸಹ ಲೋಕಸಂಗ್ರಹಾರ್ಥವಾಗಿ ಕರ್ಮಗಳನ್ನು ಮಾಡುತ್ತೇನೆಂದಮೇಲೆ ಆನಂದಾತಿಶಯರೂಪವಾದ ಪ್ರಯೋಜನವುಳ್ಳ ಜ್ಞಾನಿಯು ಕರ್ತವ್ಯಕರ್ಮಗಳನ್ನು ಬಿಡಕೂಡದೆಂದು ಹೇಳಬೇಕಾದ್ದೇನು? ಹೇ ಪಾರ್ಥ! ನನ್ನಿಂದ ಕರ್ತವ್ಯವಾದ ಯಾವ ಕರ್ಮವೂ ಇಲ್ಲ. ಏಕೆಂದರೆ ನನಗೆ ಮೂರು ಲೋಕಗಳಲ್ಲಿ (ಎಲ್ಲಿಯೂ) ಹಿಂದೆ ದೊರೆತಿರದ ಮತ್ತು ಮುಂದೆ ದೊರಕಿಸಿಕೊಳ್ಳಬೇಕಾದ ಯಾವ ಪ್ರಯೋಜನಾಂಶವೂ ಇಲ್ಲ. ಆದರೂ ಕರ್ಮಗಳನ್ನು ಮಾಡುತ್ತಲೇ ಇರುವೆನಷ್ಟೆ! (೨೨) ನಾನೊಮ್ಮೆ ಆಲಸ್ಯದಿಂದ ಕರ್ಮವನ್ನು ಬಿಟ್ಟೆನಾದರೆ, ನನ್ನ ಉದಾಹರಣೆಯನ್ನೇ ಎಲ್ಲ ಮನುಷ್ಯರೂ ಅನುಸರಿಸಿ, ಕರ್ಮಗಳನ್ನು ಬಿಟ್ಟು ಕೊಡುವರು. (೨೩) ಕರ್ಮತ್ಯಾಗದಿಂದ ನರಕಾದ್ಯನರ್ಥಗಳನ್ನು ಹೊಂದುವರು; ಕರ್ಮಲೋಪ ದಿಂದ ಬ್ರಾಹ್ಮಣಾದಿ ವರ್ಣವಿವೇಕವೂ ಇಲ್ಲದಂತಾಗಿ ನಾನೇ ವರ್ಣ-ಸಾಂಕರ್ಯವನ್ನು ಮಾಡಿದಂತಾಗುವುದು; ಅದರಿಂದ ಪ್ರಜೆಗಳ ನಾಶಕ್ಕೆ ನಾನೇ ಕಾರಣನಾಗುವೆನು. (೨೪)

ಅರ್ಜುನ—ಅಜ್ಞಾನಿಯಂತೆ ಜ್ಞಾನಿಯೂ ಆಗ್ರಹದಿಂದ ಕರ್ಮದಲ್ಲಿ ತೊಡಗುವುದಾದರೆ, ಜ್ಞಾನಿಕರ್ಮಕ್ಕೂ ಅಜ್ಞಾನಿಕರ್ಮಕ್ಕೂ ಯಾವ ವಿಶೇಷವೂ ಇಲ್ಲವೆಂದು ಪ್ರಾಪ್ತವಾಗುವುದು. ಈ ಉಭಯರ ಕರ್ಮಗಳಲ್ಲಿ ವಿಶೇಷವೇನು?

ಶ್ರೀಕೃಷ್ಣ—ಅಜ್ಞಾನಿಗಳು ಫಲದಲ್ಲಿ ಆಸಕ್ತರಾಗಿ ಕರ್ಮಗಳನ್ನು ಹೇಗೆ ಮಾಡುವರೋ, ಹಾಗೆಯೇ ಜ್ಞಾನಿಯೂ ಫಲಾಸಕ್ತಿಯನ್ನು ಬಿಟ್ಟು ಲೋಕಸಂಗ್ರಹಕ್ಕಾಗಿ ಕರ್ಮಗಳನ್ನು ಮಾಡಬೇಕು. ಅಜ್ಞಾನಿಯು

ಫಲೇಚ್ಛೆಯಿಂದ ಕರ್ಮಗಳನ್ನು ಮಾಡುವನು; ಜ್ಞಾನಿಯು ಅನಾಸಕ್ತನಾಗಿ ಮಾಡುವನು. ಇದೇ ಉಭಯರ ಕರ್ಮಗಳಲ್ಲಿರುವ ವಿಶೇಷವು. ಹೊರದೃಷ್ಟಿಯಿಂದ ಉಭಯರ ಕರ್ಮಗಳಲ್ಲಿ ಯಾವ ವಿಶೇಷವೂ ತೋರುವುದಿಲ್ಲವೆಂಬುದು ನಿಜ. ಜ್ಞಾನಿಕರ್ಮದ ವೈಶಿಷ್ಟ್ಯವನ್ನು ತಿಳಿದೆಯಾ? (೨೫) ಭಗವತ್ಸ್ವರೂಪವನ್ನು ಕಂಡರಿಯದಿದ್ದರೂ, ಫಲೇಚ್ಛೆಯಿಂದಾದರೂ ಅಜ್ಞಾನಿಗಳು ಕರ್ಮಗಳಲ್ಲಿ ತೊಡಗುವರು, ಅಂಥವರ ಕರ್ಮೇಚ್ಛೆಯನ್ನು ಜ್ಞಾನಿಯು ತಪ್ಪಿಸಬಾರದು. ತಾನೂ ಕರ್ಮಗಳನ್ನಾಚರಿಸುತ್ತಾ ಅವರ ಕರ್ಮಶ್ರದ್ಧೆಯನ್ನು ರಕ್ಷಿಸಬೇಕು. ತಾನು ಮಾತ್ರ ಎಲ್ಲ ಕರ್ಮಗಳೂ ಭಗವತ್ಪೂಜೆಯೆಂಬ ಅನುಸಂಧಾನವುಳ್ಳವನಾಗಿರಬೇಕು. ಇದೇ ಅಜ್ಞಜನ ಸೇವೆಯು. ಅಜ್ಞಾನಿಗಳು ಕ್ರಮೇಣ ಫಲಸ್ನೇಹಪರಿತ್ಯಾಗದಿಂದ ಜ್ಞಾನವನ್ನು ಪಡೆಯುವರು. ಕರ್ಮವನ್ನೇ ಬಿಡುವುದರಿಂದ ಎಂದೂ ಜ್ಞಾನಲಾಭವಾಗುವುದಿಲ್ಲ. (೨೬)

ಅರ್ಜುನ—ಜ್ಞಾನಿ ಮತ್ತು ಅಜ್ಞಾನಿಗಳ ಕರ್ಮಾನುಷ್ಠಾನವೈಲಕ್ಷಣ್ಯವನ್ನು ಇನ್ನೂ ವಿಸ್ತಾರವಾಗಿ ತಿಳಿಯಲಿಚ್ಛಿಸುವೆನು. ಅನುಗ್ರಹಿಸು, ಕೃಷ್ಣ!

ಶ್ರೀಕೃಷ್ಣ—ಹೇಳುವೆನು, ಕೇಳು. ಸಾಧು, ಅಸಾಧು ಮತ್ತು ಮಿಶ್ರವೆಂದು ಕರ್ಮಗಳು ಸಾಮಾನ್ಯವಾಗಿ ಮೂರು ಪ್ರಕಾರಗಳೆಂದು ತಿಳಿ. ಈ ಮೂರು ಬಗೆಯಲ್ಲಿ ಎಲ್ಲರ ಎಲ್ಲ ಕರ್ಮಗಳು ಸಮಾವೇಶವಾಗುವುವು. ಪರಮಾತ್ಮನ ಜ್ಞಾನ, ಇಚ್ಛೆ ಮತ್ತು ಕ್ರಿಯೆಗಳೆಂಬ ಸ್ವತಂತ್ರ ಧರ್ಮ (ಗುಣ) ಗಳಿಂದಲೇ ಎಲ್ಲ ಕರ್ಮಗಳೂ ಸಂಭವಿಸುವುವು. ಭಗವಂತನ ಈ ಧರ್ಮಗಳು, ಉತ್ತಮ, ಮಧ್ಯಮ ಮತ್ತು ಅಧಮಗಳೆಂಬ ತ್ರಿವಿಧ ಜೀವರಾಶಿ ಸ್ವಭಾವಗಳಾದ, ತತ್ವಜ್ಞಾನ, ಮಿಶ್ರಜ್ಞಾನ ಮತ್ತು ಮಿಥ್ಯಾಜ್ಞಾನ ಈ ರೂಪವಾದ ಈಶಾಧೀನಜೀವಧರ್ಮಗಳನ್ನೂ, ಜಡಪ್ರಕೃತಿಯ ಸತ್ವ ರಜಸ್ತಮೋಗುಣಗಳನ್ನೂ, ಅನುಲಕ್ಷಿಸಿ, ಅವುಗಳನ್ನು ನಿಮಿತ್ತಮಾಡಿಕೊಂಡು ಕೆಲಸಮಾಡುತ್ತವೆ. ಹೀಗೆ ತ್ರಿವಿಧಜೀವಸ್ವಭಾವವನ್ನನುಸರಿಸಿ ಪ್ರಕೃತಿವಿಕಾರಗಳಾದ ಜೀವನ ದೇಹೇಂದ್ರಿಯಾಂತಃಕರಣಗಳಿಂದ, ಸತ್ವಾದಿಗುಣರೂಪಉಪಾದಾನಕಾರಣವನ್ನು ನಿಮಿತ್ತೀಕರಿಸಿ, ಸ್ವತಂತ್ರ

ಕರ್ತನಾದ ಈಶ್ವರನು ಮಾಡುವ ಕರ್ಮಗಳನ್ನು ಅಹಂಕಾರವಿಮೂಢನಾದ ಜೀವನು, ತಾನೇ ಸ್ವತಂತ್ರನಾಗಿ ಮಾಡುವೆನೆಂದು ತಿಳಿಯುತ್ತಾನೆ. (೨೭) ಆದರೆ ಗುಣಕರ್ಮ ವಿಭಾಗಗಳನ್ನು ತಿಳಿದ ವಿದ್ವಾಂಸನು ಹಾಗೆಂದಿಗೂ ಭಾವಿಸನು. ಇ ಚ್ಛಾ ದಿ ಭ ಗ ವ ದ್ಗು ಣ ಗ ಳ, ಸತ್ವಾದಿಪ್ರಕೃತಿಗುಣಗಳ ಮತ್ತು ಪ್ರಕೃತಿವಿಕಾರಗಳಾದ ದೇಹೇಂದ್ರಿಯಾಂತಃಕರಣಗಳ ಅನ್ಯೋನ್ಯ ವಿಭಾಗವನ್ನೂ, ಸ್ವತಂತ್ರಭಗವತ್ಕರ್ತೃಕವೂ ಮತ್ತು ವಿಕಾರರೂಪ-ಪ್ರಕೃತಿಕರ್ತೃಕವೂ ಆದ ಕರ್ಮವಿಭಾಗವನ್ನೂ, ಜ್ಞಾನಿಯು ತಿಳಿಯುತ್ತಾನೆ. ಭಗವದಿಚ್ಛಾದಿಗುಣಗಳು, ಜೀವಸ್ವಭಾವಕರ್ಮಾದಿಗಳನ್ನು ಪ್ರೇರಿಸುತ್ತವೆಂದೂ, ಭಗವದಿಚ್ಛಾನುಸಾರವಾಗಿ ಇಂದ್ರಿಯಗಳು ಶಬ್ದಾದಿ-ವಿಷಯಗಳಲ್ಲಿ ಪ್ರವರ್ತಿಸುವುವೆಂದೂ ತಿಳಿದು, ಜೀವನಲ್ಲಿ (ಸ್ವತಂತ್ರ) ಕರ್ತೃತ್ವಾಭಿಮಾನವನ್ನು ಆರೋಪಿಸದೇ ನಿರ್ಲಿಪ್ತನಾಗಿರುವನು; ಸಂಸಾರದಲ್ಲಿ ಮಗ್ನನಾಗುವುದಿಲ್ಲ. (೨೮) ಹೀಗೆ ಈಶ್ವರನ ಇಚ್ಛೆ, ಜ್ಞಾನ, ಕ್ರಿಯೆಗಳೆಂಬ ಧರ್ಮಗಳು ಎಲ್ಲರ ಎಲ್ಲ ಕರ್ಮಗಳನ್ನೂ ಮಾಡಿ ಮಾಡಿಸುತ್ತಾ ಸ್ವತಂತ್ರಕಾರಣಗಳಾಗಿರಲು ದೇಹೇಂದ್ರಿಯಾದಿಗಳು ತಮ್ಮ ಅಧೀನವೆಂದು ಭ್ರಮಿಸಿ, ತಾವೇ ಸ್ವತಂತ್ರ ಕರ್ತೃಗಳೆಂದು ತಿಳಿಯುವ ಅಯೋಗ್ಯ ಜನರು ಸದಾ ವಿಷಯಗಳಲ್ಲಿ ಆಸಕ್ತರಾಗಿರುವರು. ಪೂರ್ವೋಕ್ತ ಗುಣಕರ್ಮವಿಭಾಗವನ್ನರಿತ ತತ್ವಜ್ಞಾನಿಯು, ಇಂಥವರನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲೆತ್ನಿಸುವುದು ವ್ಯರ್ಥವೇ ಸರಿ. (೨೯) ಆದ್ದರಿಂದ ಅರ್ಜುನ! ಜ್ಞಾನಿಯಾದ ನೀನು ನನ್ನನ್ನೇ ಆಶ್ರಯಿಸಿ, ಸರ್ವೋತ್ತಮನಾದ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳವನಾಗಿ, ಫಲಾಪೇಕ್ಷೆಯನ್ನು ತೊರೆದು, ಸ್ವತಂತ್ರಕರ್ತನೆಂಬ ಅಭಿಮಾನಲೇಶವನ್ನೂ ಹೊಂದದೇ, ಸಕಲ ಕರ್ಮಗಳನ್ನೂ ನಾನೇ ನಿನ್ನಲ್ಲಿದ್ದು ಮಾಡಿಸುವೆನೆಂಬ ಸ್ಥಿರಚಿತ್ತದಿಂದ, ಎಲ್ಲವೂ ನನ್ನ ಪೂಜೆಯೆಂದೇ ಭಾವಿಸಿ, ನನಗೇ ಅರ್ಪಿಸು; ಶೋಕವನ್ನು ಬಿಟ್ಟು ಯುದ್ಧಮಾಡು. (೩೦)

ಅರ್ಜುನ—ನೀನು ಹೇಳಿದಂತೆ ಗುಣಕರ್ಮಗಳ ವಿಭಾಗವನ್ನು ತಿಳಿದು ಕರ್ಮಗಳನ್ನಾಚರಿಸುವ ಜೀವರಿಗೆ ದೊರೆಯುವ ಫಲವೇನು ?

ಶ್ರೀಕೃಷ್ಣ—ಅಪರೋಕ್ಷಜ್ಞಾನವೂ ಅದರಿಂದ ಲಭ್ಯವಾದ ಮೋಕ್ಷವೂ ಜೀವರಿಗೆ ಫಲಗಳು. ನನ್ನ ಈ ಉಪದೇಶದಲ್ಲಿ ಆಸ್ತಿಕ್ಯಬುದ್ಧಿಯುಳ್ಳ ಮಾನವರು (ಶ್ರದ್ಧಾವಂತರು) ಅಸೂಯಾರಹಿತರಾಗಿ, ಎಂದರೆ ಕಷ್ಟ ಕರ್ಮದಲ್ಲಿ ತೊಡಗಿಸುವೆನೆಂಬ ದೋಷದೃಷ್ಟಿಯನ್ನು ನನ್ನಲ್ಲಿ ಹೊಂದದೆ, ಗುಣಕರ್ಮವಿಭಾಗಜ್ಞಾನಸಹಿತರಾಗಿ ಕರ್ಮಾನುಷ್ಠಾನಮಾಡಬೇಕೆಂಬ ನನ್ನ ಮತವನ್ನು ನಿತ್ಯದಲ್ಲಿ ಅನುಸರಿಸಿ, ಜ್ಞಾನದ್ವಾರಾ ಮುಕ್ತರಾಗುವರು. ಅಪರೋಕ್ಷಜ್ಞಾನಿಗಳು ಮುಕ್ತರಾಗುವರೆಂದು ಹೇಳಲೇನು! (೩೧)

ಅರ್ಜುನ—ಈ ನಿನ್ನ ಮತವನ್ನು ಅವಲಂಬಿಸದವರಿಗೆ ದೊರೆಯುವ ಗತಿಯಾವುದು, ದೇವ!

ಶ್ರೀಕೃಷ್ಣ— ಗುಣಕರ್ಮವಿಭಾಗಜ್ಞಾನವಿಲ್ಲದೇ ತಾವೇ ಸ್ವತಂತ್ರ ಕರ್ತರೆಂದು ಭ್ರಮಿಸಿ, ಕಷ್ಟಕರ್ಮದಲ್ಲಿ ಪ್ರೇರಿಸುವೆನೆಂಬ ದೋಷವನ್ನು ನನ್ನಲ್ಲಿ ಚಿಂತಿಸಿ (ಅಸೂಯೆಯಿಂದ) ನನ್ನ ಮತವನ್ನು ಅನುಷ್ಠಾನ ಮಾಡದಿರುವ ವಿಮೂಢರು, ತಿಳಿಯಬೇಕಾದ ಸರ್ವವನ್ನೂ ತಿಳಿಯದೆ ವಿರುದ್ಧವಾಗಿ ತಿಳಿದು, ನರಕಾದ್ಯನರ್ಥಗಳಿಗೆ ಗುರಿಯಾಗುವರು. (೩೨)

ಅರ್ಜುನ—ನಿನ್ನ ಮತಾನುಷ್ಠಾನದಿಂದ ಮೋಕ್ಷವೂ, ಅನ್ಯಥಾ ಅನರ್ಥವೂ ಪ್ರಾಪ್ತವಾಗುವುದಾದರೆ ಸರ್ವರೂ ನಿನ್ನ ಮತವನ್ನೇಕೆ ಅನುಸರಿಸುವುದಿಲ್ಲ?

ಶ್ರೀಕೃಷ್ಣ—ನನ್ನ ಮತದಂತೆ ನಡೆದರೆ ಇಷ್ಟಪ್ರಾಪ್ತಿಯೂ, ಇಲ್ಲವಾದರೆ ಅನರ್ಥವೆಂದೂ ತಿಳಿದವನು ಸಹ ತನ್ನ ಪೂರ್ವಸಂಸ್ಕಾರಜನ್ಯ ರಾಗದ್ವೇಷಗಳಿಗನುಗುಣವಾಗಿ ಕರ್ಮಗಳಲ್ಲಿ ತೊಡಗಿ ಅದರಲ್ಲಿ ಆಸಕ್ತನಾಗುವನು. ಹೀಗಿರಲು ತಿಳಿಯದ ಅಜ್ಞರು ನನ್ನ ಮತವನ್ನು ಹೇಗೆ ಅವಲಂಬಿಸಬಲ್ಲರು?

ಅರ್ಜುನ—ಮನೋನಿಗ್ರಹದಿಂದ ರಾಗದ್ವೇಷಗಳು ತೊಲಗಲು ನಿನ್ನ ಮತಾನುಸರಣೆಯಲ್ಲಿ ಶಕ್ತರಾಗಬಹುದಲ್ಲವೇ?

ಶ್ರೀಕೃಷ್ಣ—ಸಕಲ ಪ್ರಾಣಿಗಳೂ ತಮ್ಮ ಸ್ವಭಾವಾನುಗುಣವಾಗಿ

ವರ್ತಿಸುವರು. ಮನೋನಿಗ್ರಹವು ಹೆಚ್ಚೇನೂ ಮಾಡಲಾರದು. ತತ್ತ್ವೋಪದೇಶದಿಂದ ಉತ್ಪನ್ನವಾದ ತಿಳಿವಳಿಕೆಯುಳ್ಳವರಾದರೂ ಸ್ವಭಾವಾನುಗುಣವಾಗಿ ಚೇಷ್ಟಿಸುವರಲ್ಲದೇ ಜ್ಞಾನಾನುರೂಪವಾದ ಪ್ರವೃತ್ತಿಯುಳ್ಳವರಾಗುವುದಿಲ್ಲ. ಸ್ವಭಾವವೇ ಈ ವಿಷಯದಲ್ಲಿ ಪ್ರಬಲ ಕಾರಣವು. ಸ್ವಭಾವವಾದರೋ ಪರಿವರ್ತನೆ ಹೊಂದತಕ್ಕದ್ದಲ್ಲ. ಅಯೋಗ್ಯಸ್ವಭಾವದವರನ್ನು ತತ್ತ್ವೋಪದೇಶದಿಂದ ಸನ್ಮಾರ್ಗಕ್ಕೆ ತರುವ ಯತ್ನವನ್ನು ಮಾಡಕೂಡದೆಂದು ಇದಕ್ಕಾಗಿಯೇ ಹೇಳಿದೆನು. ಇಂಥವರಿಗೆ ಮನೋನಿಗ್ರಹವು ವ್ಯರ್ಥವೇ ಸರಿ. (೩೩)

ಅರ್ಜುನ—ಮನೋನಿಗ್ರಹವು ವ್ಯರ್ಥವೆಂದೂ, ಎಲ್ಲ ಪ್ರಾಣಿಗಳು ತಮ್ಮ ಸ್ವಭಾವಾನುಸಾರವಾದ ಪ್ರವೃತ್ತಿಯುಳ್ಳವರಾಗುವರೆಂದೂ ಹೇಳಿದರೆ ಕರ್ಮವನ್ನು ಹೀಗೆಯೇ ಆಚರಿಸಬೇಕೆಂದು ವಿಧಿಸುವುದೂ, ಅದರಿಂದ ಮೋಕ್ಷವೆಂಬ ಮಹಾ ಫಲವುಂಟೆಂದು ಹೇಳುವುದೂ ಅರ್ಥವಿಲ್ಲದ ಮಾತುಗಳಾಗುವುದಿಲ್ಲವೇ ?

ಶ್ರೀಕೃಷ್ಣ—ಮನೋನಿಗ್ರಹವು, ಯದ್ಯಪಿ ಸ್ವಭಾವಾನುಗುಣವಾದ ಚೇಷ್ಟೆಯನ್ನು ತಡೆದು ನಿಲ್ಲಿಸಲಾರದು. ಆದ್ದರಿಂದಲೇ ಅಯೋಗ್ಯಜನರ ಮಾರ್ಗವನ್ನು ಬದಲಿಸುವ ಯತ್ನವು ವ್ಯರ್ಥವು. ಆದರೆ ಯೋಗ್ಯ ಸ್ವಭಾವದ ಜೀವರು (ಸಾಧುಸ್ವಭಾವದವರು) ಮನೋನಿಗ್ರಹದಿಂದ ತತ್ಕಾಲದಲ್ಲಿ ಫಲವನ್ನು ಕಾಣದಿದ್ದರೂ ಬಹುಪ್ರಯತ್ನದಿಂದ ಫಲವನ್ನು ಪಡೆಯುವರು. ಇದನ್ನು ಸ್ವಲ್ಪ ವಿವರವಾಗಿ ನಿರೂಪಿಸುವೆನು, ಕೇಳು. ಚಕ್ಷುರಾದಿ ಇಂದ್ರಿಯಗಳಿಗೆ ರೂಪಾದಿ ವಿಷಯಗಳ ಮಧ್ಯದಲ್ಲಿ ಅನುಕೂಲವಾದವುಗಳಲ್ಲಿ ರಾಗವೂ, ಪ್ರತಿಕೂಲವಾದವುಗಳಲ್ಲಿ ದ್ವೇಷವೂ ಅವಶ್ಯವಾಗಿ ಉಂಟಾಗುತ್ತವೆ. ವಿಷಯೇಂದ್ರಿಯಸನ್ನಿಕರ್ಷದಿಂದ ಅನುಕೂಲ ಪ್ರತಿಕೂಲವೇದನೆಗಳುಂಟಾಗುವುದು ಈಶ್ವರಾಧೀನವಾದ ಸಹಜ ವ್ಯಾಪಾರವು, ರಾಗದ್ವೇಷಗಳಂತೆಯೇ (ಕಾಮಕ್ರೋಧಗಳಂತೆಯೇ), ಲೋಭ, ಮೋಹ, ಮದ, ಮಾತ್ಸರ್ಯಗಳೂ ಉಂಟಾಗುತ್ತವೆ. ಪ್ರಾಣಿಗಳು ತದನುರೂಪವಾದ ಚೇಷ್ಟೆಗಳನ್ನುಳ್ಳವಾಗುತ್ತವೆ. ರಾಗ ದ್ವೇಷಾದಿ

ಭಾವಗಳು ಪಾಪಹೇತುಗಳು ಮತ್ತು ಶ್ರೇಯೋವಿಘಾತಿಗಳು. ಶ್ರೇಯೋರ್ಥಿಯು ಇವುಗಳ ವಶನಾಗದಿರಬೇಕಾದುದು ಅತ್ಯವಶ್ಯಕ. ಮನೋನಿಗ್ರಹವು ಇವುಗಳಿಂದ ಪಾರಾಗಲು ಸಹಾಯಕವಾಗುವುದು. (೩೪)

ಅರ್ಜುನ—ಯುದ್ಧರೂಪವಾದ ಕರ್ಮವು ರಾಗದ್ವೇಷಗಳಿಗೆ ವಿಶೇಷವಾಗಿ ಎಡೆಕೊಡುವ ಘೋರಕರ್ಮವು. ರಾಗದ್ವೇಷಗಳು ಪಾಪಹೇತುಗಳೆಂದು ಹೇಳುತ್ತಿರುವೆ. ಕ್ಷತ್ರಿಯೋಚಿತಕರ್ಮವೆಂಬ ಕಾರಣದಿಂದ ಮಾತ್ರ ಈ ಯುದ್ಧದಲ್ಲಿ ನನ್ನನ್ನು ಪ್ರೇರಿಸುವುದು ಉಚಿತವೆನಿಸುವುದೇ ಕೃಷ್ಣ !

ಶ್ರೀಕೃಷ್ಣ—ಅರ್ಜುನ! ರಾಗದ್ವೇಷಗಳಿಗೆ ವಶನಾಗದೇ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳವನಾಗಿ, ನನ್ನ ಪೂಜೆಯೆಂದು ತಿಳಿದು ಯುದ್ಧ ಮಾಡೆಂದು ಹೇಳಿದೆನಲ್ಲವೇ? ಮನೋನಿಗ್ರಹವು ಕ್ಷತ್ರಿಯನಿಗೂ ಅತ್ಯವಶ್ಯಕವೇ ಸರಿ. ಕ್ಷತ್ರಿಯೋಚಿತಕರ್ಮವೆಂಬ ಮಾತ್ರದಿಂದ ಯುದ್ಧ ಮಾಡೆಂದು ನಾನು ಹೇಳುತ್ತಿಲ್ಲ. ಪರಧರ್ಮಾಚರಣೆಯಿಂದ ಪ್ರಾಪ್ತವಾದ ಮಹದನರ್ಥವನ್ನು ಗಮನಿಸಿಯೂ ನಿನ್ನನ್ನು ಯುದ್ಧದಲ್ಲಿ ಪ್ರೇರಿಸುತ್ತಿರುವೆನು. ಸರ್ವಾಂಗಪರಿಪೂರ್ಣವಾಗಿ ಆಚರಿಸಲ್ಪಡಬಹುದಾದ ಅನ್ಯ ವರ್ಣಾಶ್ರಮಧರ್ಮಕ್ಕಿಂತಲೂ, ಅಂಗವೈಕಲ್ಯದಿಂದ ಯುಕ್ತವಾದ (ಅಷ್ಟು ಸಮರ್ಪಕವಾಗಿ ಆಚರಿಸಲು ಸಮರ್ಥನಲ್ಲದಿದ್ದರೂ) ಸ್ವವರ್ಣಾಶ್ರಮೋಚಿತ ಧರ್ಮಾನುಷ್ಠಾನವೇ ಶ್ರೇಷ್ಠವು. ಪರಧರ್ಮವು ನಿಷಿದ್ಧವಾದ್ದರಿಂದ (ನರಕಾದಿ) ಅನರ್ಥಗಳಿಗೆ ಕಾರಣವಾಗುವುದು. ಸ್ವಧರ್ಮವಾದ ಯುದ್ಧದಲ್ಲಿ ಮಡಿದರೂ ಅದೇ ಶ್ರೇಯಸ್ಕರವು, ಈ ಘೋರವೆನಿಸುವ ಯುದ್ಧವು ನಿನಗೆ ಸ್ವಧರ್ಮವಾದ್ದರಿಂದಲೇ ಅದನ್ನೇ ಕೈಗೊಳ್ಳೆಂದು ಹೇಳುತ್ತಿರುವೆನು. (೩೫)

ಅರ್ಜುನ—ಹೇ ವೃಷ್ಣಿಕುಲೋದ್ಭವ! ಚಕ್ಷುರಾದಿ ಇಂದ್ರಿಯಗಳಿಗೆ ನಿಷಿದ್ಧವಿಷಯಗಳಲ್ಲಿ ರಾಗವೂ, ಸದ್ವಿಷಯಗಳಲ್ಲಿ ದ್ವೇಷವೂ ಲೋಭಾದಿ ಇತರಭಾವಗಳೂ ಹುಟ್ಟಲು ಕಾರಣವೇನು? ಸರ್ವಪ್ರೇರಕನಾದ ಈಶ್ವರ ನನ್ನುಳಿದು, ಈ ವಿಷಯದಲ್ಲಿ ಅನ್ಯಪ್ರೇರಕರಿರುವರೇ? ಪಾಪಹೇತು

ಗಳಾದ ರಾಗದ್ವೇಷಾದಿಗಳ ಜಯವು ಶಕ್ಯವೆಂದೂ, ಮನೋನಿಗ್ರಹವು ಆ ಜಯವನ್ನು ಸಂಪಾದಿಸುವುದರಲ್ಲಿ ಸಹಾಯಕವೆಂದೂ ಹೇಳಿದೆಯಲ್ಲವೆ? ಯೋಗ್ಯಜೀವನು ಪಾಪಕರ್ಮವನ್ನಾಚರಿಸಲು ಇಚ್ಛೆಯಿಲ್ಲದವನಾದರೂ, ಬಲಾತ್ಕಾರವಾಗಿ ನಿಯೋಜಿಸಲ್ಪಟ್ಟವನಂತೆ ಪಾಪವನ್ನೇಕೆ ಆಚರಿಸುವನು? ಆ ಪಾಪ ಪ್ರವರ್ತಕರಲ್ಲಿ ಪ್ರಬಲನು ಯಾರು? ಮಹತ್ಪ್ರಯತ್ನದಿಂದ ಆತನನ್ನೇ ಮೊದಲಿಗೆ ಜಯಿಸುವೆನು. (೩೬)

ಶ್ರೀಕೃಷ್ಣ—ಕಾಮಾದಿ ಶತ್ರುಗಳೇ ಪಾಪಪ್ರವರ್ತಕರು. ಜೀವಸ್ವಭಾವ ಧರ್ಮಗಳನ್ನೂ (ಯೋಗ್ಯತೆಯನ್ನೂ), ಪೂರ್ವಸಂಸ್ಕಾರಾನು-ಗುಣವಾಗಿ ಪ್ರಾಪ್ತವಾಗುವ ದೇಹೇಂದ್ರಿಯಾಂತಃಕರಣಸ್ವಭಾವಗಳನ್ನೂ ನಿಮಿತ್ತೀಕರಿಸಿ, ಈಶ್ವರನು ಸಕಲಕರ್ಮಗಳನ್ನು ಸ್ವತಂತ್ರವಾಗಿ ಮಾಡಿಸುವನೆಂದು ಹೇಳಿದೆನಷ್ಟೆ. ಈಶ್ವರೇಚ್ಛೆಯಿಂದಲೇ ಕಾಮಾದಿಗಳು ಪಾಪಕರ್ಮಗಳ ಪ್ರಚೋದಕರಾಗಿರುವರು. ಕಾಮಾಭಿಮಾನಿಯಾದ ಕಾಲನೇಮಿ ಎಂಬ ದೈತ್ಯನು ಮುಖ್ಯ ಪಾಪಪ್ರೇರಕನು. ರಾಗ (ಕಾಮ)ವೇ ಮೊದಲಾದ ಷಡ್ವರ್ಗದಲ್ಲಿ, ಕಾಮವೇ ಪಾಪಮೂಲವಾದ್ದರಿಂದ, ಕಾಲನೇಮಿಯೇ ಎಲ್ಲರಲ್ಲಿ ಪ್ರಬಲನು. ಕ್ರೋಧಾದಿಗಳ ಅಭಿಮಾನಿ ದೈತ್ಯರು ಈತನನ್ನು ಹಿಂಬಾಲಿಸುವರು. ಕಾಮದಿಂದ ಕ್ರೋಧವು ಹುಟ್ಟುವುದು. ಕಾಮನಿಮಿತ್ತವಾದ ಈ ಕ್ರೋಧವು ರಜೋಗುಣದ ಪರಿಣಾಮವು. ಕಾಮವು ತೊಲಗಿದರೆ ಪಾಪಹೇತುಗಳಾದ ಕ್ರೋಧಾದಿಗಳು ತಾವಾಗಿಯೇ ಹಿಮ್ಮೆಟ್ಟುವುವು. ಅಪೇಕ್ಷಿತ ವಸ್ತುಗಳನ್ನಿತ್ತು ತೃಪ್ತಿಗೊಳಿಸಿ ಕಾಮವನ್ನು ಹತ್ತಿಕ್ಕಬಹುದೆಂದು (ಜಯಿಸಬಹುದೆಂದು) ತಿಳಿಯಬೇಡ. ಏನು ಕೊಟ್ಟರೂ, ಎಷ್ಟು ಕೊಟ್ಟರೂ ತೃಪ್ತಿಗೊಳ್ಳದ ಮಹಾಭೋಕ್ತನಿವನು. ತನಗೆ ಬೇಕಾದುದನ್ನು ದೊರಕಿಸಿಕೊಳ್ಳಲು ಬ್ರಹ್ಮಹತ್ಯಾದಿ ಮಹಾಪಾಪಗಳನ್ನೂ ಮಾಡಿಸುವನು. ಸದಾ ದುಷ್ಕರ್ಮಪ್ರವರ್ತಕನಾದ ಈತನು ಪ್ರಬಲ ಮೋಕ್ಷವಿರೋಧಿಯು. ಸಕಲ ಐಹಿಕ, ಆಮುಷ್ಮಿಕ ಪುರುಷಾರ್ಥಗಳನ್ನು ದೊರಕಿಸಿಕೊಳ್ಳುವ ವಿಷಯದಲ್ಲಿ ಯೋಗ್ಯಜೀವರಿಗೆ ಈತನೇ ಪ್ರಬಲ ಶತ್ರುವೆಂದು ತಿಳಿ. (೩೭)

ಅರ್ಜುನ—[illegible] ?

ಶ್ರೀಕೃಷ್ಣ— ಕೇಳು, ಅರ್ಜುನ! ಈ [illegible] ಸಾಧನಾವ್ಯಾಪಾರವನ್ನು ಜ್ಞಾನವು ಹೊಗೆಯಿಂದ [illegible] ಆತ್ಮನು ಜೀವನನ್ನು, [illegible] ಆವರಿಸಲ್ಪಡುವಂತೆ ಮಧ್ಯಮ ಜೀವಜಾತವು, [illegible] ಬಿಗಿದಿರುವ ಚರ್ಮದಿಂದ ಆವರಿಸಲ್ಪಡುವಂತೆ [illegible] ಈ ಕಾಮದಿಂದ ಆವರಿಸಲ್ಪಟ್ಟಿವೆ. ಆತ್ಮವನ್ನು ಹೊಗೆಯಂತೆ [illegible] ಹುಟ್ಟಿಗಳು, ಮಧ್ಯಮವನ್ನು ಮಲದಂತೆ ಅಧಿಕವಾಗಿಯೂ, [illegible] ಗರ್ಭವೇಷ್ಟನಚರ್ಮದಂತೆ ಅತ್ಯಂತವಾಗಿಯೂ, ಕಾಮವು [illegible] ತ್ರಿವಿಧ ಜೀವಸಮೂಹಕ್ಕೆ ಪರಮಾತ್ಮಸ್ವರೂಪ ತಿಳಿಯದಂತೆ [illegible] ಜೀವಸ್ವರೂಪವನ್ನು ಹೇಗೆ ಆವರಿಸುವುದೆಂದು ಮಾತ್ರವಲ್ಲ. [illegible] ಪ್ರಕಾಶರೂಪವುಳ್ಳವನಾದರೂ ಹೊಗೆಯಿಂದ ಆವರಿಸಲ್ಪಟ್ಟು [illegible] ಹೇಗೆ ಕಾಣಿಸಲ್ಪಡುವುದಿಲ್ಲವೋ, ಹಾಗೆ ಕಾಮವು ಈಶ್ವರನನ್ನು [illegible] ಪ್ರತಿಬಂಧಿಸುವುದರಿಂದ, ಈಶ್ವರನು ಸ್ವಯಂ ಸರ್ವವನ್ನು ತಿಳಿದವ ನಾದರೂ ಜೀವನಿಂದ ತಿಳಿಯಲ್ಪಡುವುದಿಲ್ಲ. ಮನಸ್ಸೇ ಮೊದಲಾದ ಅಂತಃಕರಣವು ಕಾಮದಿಂದ ಆವೃತವಾಗಿ, ಧೂಳಿನಿಂದ ಮುಚ್ಚಿಟ್ಟ ಕನ್ನಡಿಯು ಮುಖವನ್ನು ಪ್ರತಿಬಿಂಬಿಸಲು ಅಸಮರ್ಥವಾಗುವಂತೆ, ಈಶ್ವರನನ್ನಾಗಲಿ, ಜೀವನನ್ನಾಗಲಿ ಪ್ರಕಾಶಿಸಲು ಅಸಮರ್ಥವಾಗುತ್ತದೆ. [illegible] (ಗರ್ಭವನ್ನು ಬಿಗಿಯುವ ಚರ್ಮ) ದಿಂದ ಆವೃತವಾದ ಗರ್ಭವು, [illegible] ಅಂಗಗಳನ್ನು ಚಲಿಸುವಿಕೆ ಮೊದಲಾದ ಯಾವ ವ್ಯಾಪಾರವನ್ನೂ ಮಾಡಲು ಅಸಮರ್ಥನಾಗುವಂತೆ ಕಾಮಾವೃತನಾದ ಜೀವನು ಈಶ್ವರಾದಿ ಸಂಬಂಧ ಯಥಾರ್ಥ ಜ್ಞಾನವನ್ನು ಪಡೆಯುವ ವಿಷಯದಲ್ಲಿ ಅಕ್ಷಮನಾಗುತ್ತಾನೆ. ಹೀಗೆ ಜ್ಞೇಯನಾದ ಈಶ್ವರ, ಜ್ಞಾನಕರಣವಾದ ಮನಸ್ಸು (ಅಂತಃಕರಣ

ಮತ್ತು ಜ್ಞಾತೃವಾದ ಜೀವ ಇವರುಗಳ ಸಂಬಂಧವಾದ ಜ್ಞಾನೋತ್ಪತ್ತಿಗೆ ಕಾಮನು ಪ್ರತಿಬಂಧಕನಾಗುವನು. (೩೮)

ಅರ್ಜುನ— ಶಾಸ್ತ್ರಜನ್ಯಜ್ಞಾನವೂ ಭಗವದಪರೋಕ್ಷಜ್ಞಾನವನ್ನು ದೊರಕಿಸಲು ಸಮರ್ಥವಾಗಲಾರದೇ ?

ಶ್ರೀಕೃಷ್ಣ—ಇಲ್ಲ, ಅರ್ಜುನ! ಶಾಸ್ತ್ರಪಾಂಡಿತ್ಯವುಳ್ಳವರ ಜ್ಞಾನವೂ ಸಹ ಕಾಮನಿಂದ ಆವೃತವಾಗಿ, ಅಪರೋಕ್ಷ ಜ್ಞಾನವನ್ನು ದೊರಕಿಸಲು ಅಸಮರ್ಥವಾಗುವುದು. ಕೇವಲ ಗುರೂಪದೇಶ ಮಾತ್ರದಿಂದ ಲಭ್ಯವಾದ ಜ್ಞಾನವು ಅಪರೋಕ್ಷವನ್ನು ಹೇಗೆ ದೊರಕಿಸಬಲ್ಲದು ? ಈ ಕಾಮನೆಂಬ ವೈರಿಯ ಇಚ್ಛಿತವನ್ನು ಪೂರೈಸುವುದು ಶಕ್ಯವಿಲ್ಲ. ಅವನು, ಅಷ್ಟು ದೊರೆತರೆ ಮತ್ತಷ್ಟು ಬೇಕೆಂಬ ಮಹಾಭೋಗಿಯು. ಇವನಿಗೆ ತೃಪ್ತಿ ಯೆಂಬುದಿಲ್ಲ. ಈತನನ್ನು ಶಾಸ್ತ್ರಜ್ಞಾನಿಯೂ ಸಹ ಎದುರಿಸಿ ಗೆಲ್ಲ ಲಾರನು. (೩೯)

ಅರ್ಜುನ—ಶತ್ರುವಿನ ಆಶ್ರಯಸ್ಥಾನವನ್ನು ತಿಳಿಯದೇ, ಶತ್ರುವನ್ನು ನಿಗ್ರಹಿಸಲಾಗುವುದಿಲ್ಲ. ಮಹಾ ಪ್ರಬಲನಾದ ಈ ಕಾಮನ (ಕಾಲ ನೇಮಿಯ) ಆಶ್ರಯಸ್ಥಾನವನ್ನು ನಿರೂಪಿಸು ಸ್ವಾಮಿ!

ಶ್ರೀಕೃಷ್ಣ—ಕಾಮನೆಂಬ ಈ ಬಲಿಷ್ಠನಾದ ಶತ್ರುವಿಗೆ, ಚಕ್ಷುರಾದಿ ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ*ಗಳೇ ಅಧಿಷ್ಠಾನವು. ವಿಷಯ ಸಂಬಂಧವುಳ್ಳ ಈ ಮನೋಬುದ್ಧೀಂದ್ರಿಯಗಳಿಂದ ಜ್ಞಾನೋತ್ಪತ್ತಿಯಾಗ ದಂತೆ ಕಾಮನು ಪ್ರತಿಬಂಧಿಸುವನು. ಹಾಗೂ ಹುಟ್ಟಬಹುದಾದ ಜ್ಞಾನ ವನ್ನು, ಅಪರೋಕ್ಷಜ್ಞಾನವನ್ನು ದೊರಕಿಸುವುದೆಂಬ ತನ್ನ ಕಾರ್ಯದಲ್ಲಿ ಅಸಮರ್ಥವಾಗುವಂತೆ ನಿರ್ವೀರ್ಯಗೊಳಿಸಿ, ಜೀವನನ್ನು ಮೋಹ ಗೊಳಿಸುವನು. (೪೦) ಆದ್ದರಿಂದ, ಹೇ ಭರತಕುಲಮಣಿಯೇ! ಮೊಟ್ಟ ಮೊದಲಿಗೆ ಇಂದ್ರಿಯಗಳನ್ನು ನಿಯಮನ ಮಾಡಬೇಕು ; ವಿಷಯಸಂಗ

---

* **ಸೂಚನೆ.**—ಭಗವದಿತರವಿಷಯಗಳಲ್ಲಿ ಪ್ರವೃತ್ತವಾಗುವ ಮನಃಪ್ರಭೇದ-ರೂಪ ಶಕ್ತಿಯ ಕಾರ್ಯ.

ವನ್ನು ತಪ್ಪಿಸಬೇಕು; ಸಂಗವಾದರೂ ಮನೋಬುದ್ಧಿಗಳಿಗೆ ಅಂಟಕೊಳ್ಳದಂತೆ ಎಚ್ಚರವಾಗಿರಬೇಕು. ಮನೋಬುದ್ಧಿಗಳು ವಿಕಾರ ಹೊಂದದಂತೆ ಮಹಾ ಪ್ರಯತ್ನವನ್ನು ಮಾಡಬೇಕು. ವಸ್ತುಗಳನ್ನು ಇದ್ದಂತೆ (ವಸ್ತುಸ್ಥಿತಿಯನ್ನು ಅತಿಕ್ರಮಿಸದೆ), ಅವುಗಳ ಸಾಮಾನ್ಯ ವಿಶೇಷ ಧರ್ಮಗಳೊಂದಿಗೆ, ಗ್ರಹಿಸುವ ಜ್ಞಾನವಿಜ್ಞಾನಗಳನ್ನು ನಾಶಮಾಡುವ ಪಾಪಮೂಲನಾದ ಈ ಕಾಮನನ್ನು ಗೆಲ್ಲಬೇಕು—ಕೊಲ್ಲಬೇಕು. ಶತ್ರುವಿನ ಆಶ್ರಯಸ್ಥಾನಗಳನ್ನು ವಶಮಾಡಿಕೊಂಡಲ್ಲದೇ ಶತ್ರುಜಯವೆಂಬುದು ಅರ್ಥವಿಲ್ಲದ ಮಾತಾಗುವುದು. ಆದ್ದರಿಂದ ಇಂದ್ರಿಯ ಜಯವೇ ಕಾಮಜಯಕ್ಕೆ ಶ್ರೇಷ್ಠ ಸಾಧನವು. (೪೧)

ಅರ್ಜುನ—ಈ ಶತ್ರುವಧೆಗೆ ಅವಶ್ಯಕವಾದ ಆಯುಧವಾವುದು?

ಶ್ರೀಕೃಷ್ಣ—ಈಶ್ವರನೇ ಸರ್ವೋತ್ತಮನಾದ ಮಹಾಪ್ರಭುವೆಂಬ ಜ್ಞಾನವಲ್ಲದೇ ಬೇರಾವ ಆಯುಧವೂ ಇಲ್ಲ.

ಅರ್ಜುನ—ಈ ಸರ್ವೋತ್ತಮಜ್ಞಾನವು ಯಾವ ಪ್ರಕಾರವಾದುದಾದರೆ ಆಯುಧರೂಪವಾಗುವುದು?

ಶ್ರೀಕೃಷ್ಣ—ಆ ಜ್ಞಾನವು ತಾರತಮ್ಯಸಹಿತವಾದ ಉತ್ತಮಜ್ಞಾನವಾಗಬೇಕು. ಅದನ್ನೇ ವಿವರಿಸುವೆನು ಕೇಳು. ಇಂದ್ರಿಯಗಳು (ಸುಜೀವಿಗೆ ಉತ್ತಮಜ್ಞಾನಸಾಧನಗಳಾದ್ದರಿಂದ) ಸ್ವಾಭಾವಿಕವಾಗಿ ಉತ್ಕೃಷ್ಟವಾದವುಗಳೇ. ಆದರೆ ಮನಸ್ಸು ಅವುಗಳಿಕಿಂತ ಉತ್ತಮವಾದುದು; ಮನಸ್ಸಿನ ದೆಶೆಯಿಂದ ಬುದ್ಧಿಯು* ಶ್ರೇಷ್ಠವು. ಬುದ್ಧಿಗಿಂತ ಅತ್ಯಂತ ಉತ್ತಮನು ಪರಮಾತ್ಮನು.

ಅರ್ಜುನ—ಇದೇನು, ಕೃಷ್ಣ! ಜಡವಿವಕ್ಷೆಯಿಂದ ಪರಮಾತ್ಮನ ಉತ್ತಮತ್ವವನ್ನು ತಿಳಿಯಬೇಕೆನ್ನುವಿಯಾ?

ಶ್ರೀಕೃಷ್ಣ—ಹಾಗಲ್ಲ, ಅರ್ಜುನ! ಕಾಮನೆಂದರೆ ಕಾಮಾಭಿಮಾನಿಯಾದ ಕಾಲನೇಮಿಯೆಂಬ ದೈತ್ಯನನ್ನು ವಿವಕ್ಷಿಸುವಂತೆ, ಇಲ್ಲಿಯೂ

***ಸೂಚನೆ.**—ಭಗವದ್ವಿಷಯದಲ್ಲಿಯೇ ಮನಸ್ಸನ್ನು ಯೋಜಿಸುವ ನಿರ್ಮಲ ಬುದ್ಧಿತತ್ವ.

ಇಂದ್ರಿಯಾದ್ಯಭಿಮಾನಿದೇವತೆಗಳನ್ನು ಗ್ರಹಿಸಬೇಕು. ಪ್ರಾಕೃತವಸ್ತುಗಳು ಸ್ವತಃ ಯಾವ ಕಾರ್ಯದಲ್ಲಿಯೂ ಅಸಮರ್ಥಗಳಾಗಿರುವುವು. ಶ್ರೋತ್ರ, ಸ್ಪರ್ಶ, ಚಕ್ಷು, ರಸನ ಮತ್ತು ಘ್ರಾಣಗಳೆಂಬ ಪಂಚ ಜ್ಞಾನೇಂದ್ರಿಯಗಳಿಗೆ ಕ್ರಮವಾಗಿ, ಚಂದ್ರ, ಕುಬೇರ, ಸೂರ್ಯ, ವರುಣ ಮತ್ತು ಅಶ್ವಿನೀದೇವತೆಗಳು ಅಭಿಮಾನಿಗಳು. ಅಗ್ನಿ, ಇಂದ್ರ, ಜಯಂತ, ಯಮ ಮತ್ತು ದಕ್ಷ ಇವರು ಕ್ರಮದಿಂದ, ವಾಕ್, ಪಾಣಿ, ಪಾದ, ಪಾಯು ಮತ್ತು ಗುಹ್ಯಗಳೆಂಬ ಪಂಚ ಕರ್ಮೇಂದ್ರಿಯಗಳಿಗೆ ಅಭಿಮಾನಿಗಳು. ಇವರೆಲ್ಲ ಉತ್ಕೃಷ್ಟರಾದವರೇ. ಇವರಿಗಿಂತ, ಜ್ಞಾನೇಂದ್ರಿಯಗಳ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಇಂದ್ರಿಯಾರ್ಥಗಳಿಗೆ ಅಭಿಮಾನಿಗಳಾದ, ಸೌಪರ್ಣೀ (ಗರುಡ ಪತ್ನಿ), ವಾರುಣೀ (ಶೇಷಪತ್ನಿ) ಮತ್ತು ಉಮಾ (ರುದ್ರಪತ್ನಿ) ಇವರು ಶ್ರೇಷ್ಠರು. ಇವರಿಗಿಂತ ಮನಸ್ಸಿಗೆ ಅಭಿಮಾನಿಗಳಾದ, ಗರುಡ, ಶೇಷ ಮತ್ತು ರುದ್ರರು ಶ್ರೇಷ್ಠರು. ಇವರಿಗಿಂತ ಬುದ್ಧಿತತ್ವಕ್ಕೆ ಅಭಿಮಾನಿಯಾದ ಸರಸ್ವತಿಯು ಶ್ರೇಷ್ಠಳು. ಈಕೆಗಿಂತ ಮಹತ್ತತ್ವಕ್ಕೆ ಅಭಿಮಾನಿಯಾದ ಚತುರ್ಮುಖಬ್ರಹ್ಮನು ಶ್ರೇಷ್ಠನು. ಈತನಿಗಿಂತಲೂ ಅವ್ಯಕ್ತ ತತ್ವಕ್ಕೆ (ಮೂಲಪ್ರಕೃತಿಗೆ) ಅಭಿಮಾನಿಯಾದ ಲಕ್ಷ್ಮೀದೇವಿಯು ಶ್ರೇಷ್ಠಳು. ಈಕೆಗಿಂತ ಪುರುಷೋತ್ತಮನಾದ ಶ್ರೀ ವಿಷ್ಣುವು ಅನಂತಮಡಿ ಅಧಿಕನು. ಸರ್ವೇಶ್ವರನಾದ ಶ್ರೀ ವಿಷ್ಣುವಿಗೆ ತ್ರಿಕಾಲದಲ್ಲಿ ಯಾರೂ ಸಮರಿಲ್ಲ: ಉತ್ತಮರಂತೂ ಇಲ್ಲವೇ ಇಲ್ಲ. (೪೨) ಹೀಗೆ ಬುದ್ಧಿಗಿಂತ, ಎಂದರೆ ಬುದ್ಧಿ, ಮಹತ್ತತ್ವ ಮತ್ತು ಪ್ರಕೃತಿಗಳ ಅಭಿಮಾನಿಗಳಾದ, ಸರಸ್ವತಿ, ಚತುರ್ಮುಖ ಮತ್ತು ಲಕ್ಷ್ಮೀ-ದೇವಿಯರಿಂದ ಸಹ ಸರ್ವತೋಧಿಕನೆಂದು, ಪರಮಾತ್ಮನನ್ನು ತಿಳಿದು, ಬುದ್ಧಿಯಿಂದ ಮನಸ್ಸನ್ನು ನಿಶ್ಚಲವಾದುದನ್ನಾಗಿ ಮಾಡಿಕೊಂಡು, ಹೇ ಮಹಾಬಾಹೋ! ದುರಾಸದನಾದ (ಬಹುಪ್ರಯಾಸದಿಂದ ನಿವಾರಿಸಿಕೊಳ್ಳಬೇಕಾದ) ಈ ಕಾಮಾಖ್ಯಶತ್ರುವನ್ನು ಜಯಿಸು. ಕಾಮಾದಿ-ಶತ್ರುಗಳಿಗೆ ಆವಾಸಸ್ಥಾನವಾದ ಮನ ಮೊದಲಾದ ಇಂದ್ರಿಯಗಳನ್ನು, ದುರ್ವಿಷಯಗಳಿಂದ ದೂರವಿಟ್ಟು, ಭಗವಂತನಲ್ಲಿಯೇ ನಿರತವಾಗುವಂತೆ

ಮಾಡಿಕೊಂಡರೆ, ಜ್ಞಾನಪ್ರತಿಬಂಧಕವಾದ ದೋಷಗಳು ನಿವೃತ್ತ... ಭಗವಂತನ ದಿವ್ಯದರ್ಶನಲಾಭವಾಗುವುದು. ಅದರಿಂದ ಮೋಕ್ಷ... ಸಕಲ ಪುರುಷಾರ್ಥಗಳೂ ಸಿದ್ಧಿಸುವುವು.

ಮೂರನೇ ಅಧ್ಯಾಯವು ಮುಗಿದುದು.

ಅಧ್ಯಾಯ ೪

[ಈಹಿಂದೆ ಸ್ವಲ್ಪವಾಗಿ ವಿವರಿಸಲ್ಪಟ್ಟ ನಿಷ್ಕಾಮಕರ್ಮಾನುಷ್ಠಾನವೂ, ಸರ್ವೋತ್ತಮನೆಂದು ತಾರತಮ್ಯಪೂರ್ವಕ ನಿರೂಪಿತನಾದ ಪರಮಾತ್ಮನೂ ಮತ್ತು ಆತನ ವಿಶೇಷಜ್ಞಾನವೂ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಡುತ್ತವೆ.]

ಅರ್ಜುನ—ನಿಷ್ಕಾಮಕರ್ಮರೂಪಜ್ಞಾನೋಪಾಯದ ಅನುಷ್ಠಾನದಿಂದ ದೊರೆಯುವ ಮಹತ್ಫಲವನ್ನೂ, ಬಿಡುವುದರಿಂದ ಪ್ರಾಪ್ತವಾಗುವ ಅನರ್ಥಗಳನ್ನೂ ಹೇಳಿರುವೆಯಷ್ಟೆ. ಹೇ ದೇವ! ಯೋಗವೆಂಬ ಈ ಜ್ಞಾನೋಪಾಯವನ್ನು ಪೂರ್ವಿಕರು ಅನುಷ್ಠಾನಮಾಡುತ್ತಿದ್ದರೆ? ಅಥವಾ ನೂತನವಾಗಿ ಈಗ ನೀನು ಉಪದೇಶಿಸುತ್ತಿರುವೆಯೋ?

ಶ್ರೀಕೃಷ್ಣ—ಅವ್ಯಯವಾದ ನಿತ್ಯಸುಖಕ್ಕೆ ಸಾಧನವಾದ ನಿವೃತ್ತ-ಕರ್ಮಲಕ್ಷಣವಾದ **ಯೋಗ**ವೆಂದು ಕರೆಯಲ್ಪಡುವ ಈ ಜ್ಞಾನೋಪಾಯವನ್ನು ನಾನೇ, ಹಿಂದೆ, ಸೂರ್ಯನಿಗೆ ಉಪದೇಶಮಾಡಿದೆನು. ಸೂರ್ಯನು ತನ್ನ ಮಗನಾದ ಶ್ರಾದ್ಧದೇವನೆಂಬ ಮನುವಿಗೆ ಅದನ್ನು ಉಪದೇಶಿಸಿದನು. ಆತನು ಅದನ್ನೇ ತನ್ನ ಮಗನಾದ ಇಕ್ಷ್ವಾಕುರಾಜನಿಗೆ ಉಪದೇಶಿಸಿದನು. ಅವರೆಲ್ಲರೂ ಅದನ್ನು ಉಪದೇಶಗೊಂಡು ಆಚರಿಸಿದರು. (೧) ಹೀಗೆ ಜ್ಞಾನಿಪರಂಪರೆಯಿಂದ ಪ್ರಾಪ್ತವಾದ ಈ ಧರ್ಮವನ್ನು ಇಕ್ಷ್ವಾಕು...

ನಾದ ನಿಮಿ ಮೊದಲಾದ ರಾಜಶ್ರೇಷ್ಠರೂ, ಅನೇಕ ಋಷಿಗಳೂ ತಿಳಿದು ಆಚರಿಸುತ್ತಾ ಅನ್ಯರಿಗೂ ಉಪದೇಶಮಾಡುವವರಾದರು.

ಅರ್ಜುನ— ಹಾಗಿದ್ದರೆ ಈಗಿನ ಜನರಿಗೆ ಅದು ತಿಳಿಯದಿರಲು ಕಾರಣವೇನು?

ಶ್ರೀಕೃಷ್ಣ—ಹೇ ಪರಂತಪ! ಅದು ಬಹು ಹಿಂದಿನ ಮಾತು. ಕಾಲವು ಗತಿಸುತ್ತ ಬಂದಂತೆ ಆಚಾರವು ನಷ್ಟವಾಗುತ್ತಾ ಬಂದು ಈಗ ಅದು ಕಾಣದಂತಾಗಿದೆ. (೨)

ಅರ್ಜುನ—ನಷ್ಟವಾದುದನ್ನು ನೀನು ಮತ್ತೇಕೆ ಹೇಳುತ್ತಿರುವೆ?

ಶ್ರೀಕೃಷ್ಣ—ನೀನು ನನ್ನ ಸಖನು; ನನ್ನನ್ನಾಶ್ರಯಿಸಿರುವ ಭಕ್ತನು. ಆದ್ದರಿಂದ ಪುರಾತನವಾದ ಈ ಯೋಗವನ್ನು ನಿನಗಾಗಿ ಉಪದೇಶಿಸುತ್ತಿರುವೆನು. ಇದನ್ನು ಅತ್ಯುತ್ತಮವಾದ ರಹಸ್ಯವೆಂದು ತಿಳಿ. ಆದರದಿಂದ ಶ್ರವಣಮಾಡಿ ಅನುಷ್ಠಾನಮಾಡು. ನಿತ್ಯಸುಖಪ್ರಾಪ್ತಿಗೆ ಯೋಗವನ್ನುಳಿದು ಅನ್ಯೋಪಾಯವಿಲ್ಲ, ಪ್ರಾಚೀನ ಮಹಾತ್ಮರ ಆಚಾರವು ಉತ್ತಮಪ್ರಮಾಣವೆಂದು ತಿಳಿಸಲಿಕ್ಕಾಗಿ ಸೂರ್ಯನು ನನ್ನಿಂದ ಉಪದೇಶಗೊಂಡು ಅನುಷ್ಠಾನ ಮಾಡಿದನೆಂಬ ಮುಂತಾದ ಪೂರ್ವ-ವೃತ್ತಾಂತವನ್ನೂ ನಿರೂಪಿಸಿದೆನು. (೩)

ಅರ್ಜುನ— ಹೇ ಭಗವನ್! ಸೂರ್ಯನು ಬಹು ಪ್ರಾಚೀನ-ಕಾಲದವನು. ನೀನಾದರೋ ಮೊನ್ನೆಮೊನ್ನೆ ಹುಟ್ಟಿದವನು. ನೀನೇ ಸೂರ್ಯನಿಗೆ ಉಪದೇಶಿಸಿದವನೆಂಬುದನ್ನು ಹೇಗೆ ತಿಳಿಯಲಿ? (೪)

ಶ್ರೀಕೃಷ್ಣ—ಹೇ ಭಾರತ! ನನಗೂ ನಿನಗೂ ಅನೇಕ ಜನ್ಮಗಳು ಆಗಿಹೋಗಿವೆ. ಅವೆಲ್ಲವನ್ನೂ ನಾನು ಈಗಲೂ ತಿಳಿದಿರುವೆನು. ನೀನು ತಿಳಿಯೆ. ಒಂದಾನೊಂದು ಹಿಂದಿನಜನ್ಮದಲ್ಲಿ ನಾನೇ ಸೂರ್ಯನಿಗೆ ಉಪದೇಶಮಾಡಿದೆನು. ಹೀಗೆಂಬುದು ಅವಿಚಾರದಿಂದ ಅಜ್ಞರು ಮಾಡಬಹುದಾದ ಇದೇ ಪ್ರಶ್ನೆಗೆ ಸಾಕಷ್ಟು ಉತ್ತರವಾಗುವುದು. ಆದರೆ ನಿನ್ನ ಪ್ರಶ್ನೆಯ ಭಾವವನ್ನು ನಾನು ಬಲ್ಲೆನು. ಸರ್ವಪ್ರಕಾರದಿಂದ

ನಾನು ಉತ್ಪತ್ತಿ-ನಾಶರಹಿತನೆಂಬುದನ್ನು ನನ್ನಿಂದಲೇ ಈ ಮೊದಲು ಶ್ರವಣಮಾಡಿ ತಿಳಿದಿರುವ ನೀನು, ಉಕ್ತವಾದ ಜೀವೇಶ್ವರಭೇದವನ್ನು ಭಿನ್ನಲಕ್ಷಣಗಳ ನಿರೂಪಣಪೂರ್ವಕ ವಿವರವಾಗಿ ತಿಳಿಯಲಪೇಕ್ಷಿಸಿ ಹೀಗೆ ಪ್ರಶ್ನಿಸಿರುವೆ. ಹೇಳುವೆನು, ಕೇಳು. ಸಕಲಜೀವಾತ್ಮರ ಬಿಂಬರೂಪಿಯಾದ ನನಗೂ, ಪ್ರತಿಬಿಂಬರಾದ ಜೀವಚೇತನರಿಗೂ ಅನಂತಜನ್ಮಗಳು ಆಗಿಹೋಗಿವೆ. ಬಿಂಬನಾದ ನನ್ನ ವ್ಯಾಪಾರದಿಂದಲೇ ಪ್ರತಿಬಿಂಬರಾದ ಜೀವರಿಗೆ ಸಕಲ ಕಾರ್ಯಗಳಲ್ಲಿ ಪ್ರವೃತ್ತಿಯುಂಟಾಗುವುದು. ಪರಾಧೀನರಾದ ಜೀವರು ಯಾವ ಯಾವ ಜನ್ಮಗಳಲ್ಲಿ ಏನೇನು ನಡೆಯಿತೆಂಬುದನ್ನು ತಿಳಿಯರು. ಅವರು ಅಲ್ಪಜ್ಞರು. ಸ್ವತಂತ್ರನಾದ ನಾನು ಸರ್ವಜ್ಞನು. ಆ ಎಲ್ಲವನ್ನೂ ಸದಾ ಬಲ್ಲೆನು. ನಾನು ನಿಯಾಮಕನು, ಜೀವರು ನಿಯಮ್ಯರು, ನಾನು ಸರ್ವಜ್ಞನು, ಜೀವರು ಅಲ್ಪಜ್ಞರು. ನಾನು ಸ್ವತಂತ್ರಕರ್ತನು, ಜೀವರು ಪರಾಧೀನಕರ್ತರು. ಆದ್ದರಿಂದ ನನಗೆ ಪೂಜ್ಯತ್ವವೂ ಜೀವರಿಗೆ ಪೂಜಕತ್ವವೂ ಸಿದ್ಧವಾಗುತ್ತದೆ. (೫)

ಅರ್ಜುನ—ನಿನಗೂ ಅನೇಕ ಜನ್ಮಗಳು ಕಳೆದಿದ್ದರೆ, ನಿನಗೆ ಜನನಮರಣರಾಹಿತ್ಯವೂ, ಈಶ್ವರತ್ವವೂ ಇಲ್ಲದೇಹೋಗಬೇಕಾಗುವುದಲ್ಲವೇ?

ಶ್ರೀಕೃಷ್ಣ—ಹೇ ಅರ್ಜುನ! ಜೀವನಿಯಾಮಕಬಿಂಬರೂಪದಿಂದ ಮಾತ್ರ ನಾನು ನಿತ್ಯನಲ್ಲ. ನನ್ನ ಅವತಾರರೂಪಗಳೂ ನಿತ್ಯವಾದವುಗಳೇ. ದೇಹದಿಂದ ಉತ್ಪತ್ತಿಯೆಂಬುದು ನನಗಿಲ್ಲ. ನನ್ನ ಸ್ವರೂಪವೂ ಅದರಿಂದ ಅಭಿನ್ನವಾದ ನನ್ನ ದೇಹವೂ ನಾಶರಹಿತವಾದುದು. ಸರ್ವ-ಪ್ರಾಣಿನಿಯಾಮಕಅನಂತಬಿಂಬರೂಪಗಳಿಂದ ಸಕಲಚೇತನಾಂತರ್ಯಾಮಿ-ಯಾಗಿರುವವನೂ ನಾನೇ. ಹೀಗಿದ್ದರೂ ಜನಿಸಿದನೆಂಬ ಲೋಕವ್ಯವಹಾರಕ್ಕೊಳಗಾಗುವೆನು.

ಅರ್ಜುನ—ಸ್ವರೂಪದಿಂದಲೂ ದೇಹದಿಂದಲೂ ಅನಾದಿನಿತ್ಯನಾದ ನಿನಗೆ ಜನನಮರಣಗಳೆಂಬ ವ್ಯವಹಾರಗಳು ಹೇಗೆ ಸಲ್ಲುವುವು?

ಶ್ರೀಕೃಷ್ಣ—ಪ್ರಾಕೃತದೇಹವುಳ್ಳ ವಸುದೇವ, ದೇವಕಿ ಮೊದಲಾದವರನ್ನು ಪ್ರವೇಶ ಮಾಡಿ, ಸ್ವೇಚ್ಛೆಯಿಂದ ಆವಿರ್ಭವಿಸುತ್ತೇನೆ. ದೇವಕ್ಯಾದಿ-

ಸ್ಥಾನಮೂಲಕ ನನ್ನ ರೂಪವನ್ನು ಜನರ ಪ್ರತ್ಯಕ್ಷಕ್ಕೆ ಗೋಚರವಾಗುವಂತೆ ಮಾಡುವುದೇ ನನ್ನ ಜನನವು. ಆ ರೂಪವನ್ನು ತಿರೋಧಾನಗೊಳಿಸುವುದೇ (ಮರೆಮಾಡುವುದೇ) ಮರಣವು. ನಿಮ್ಮೆಲ್ಲರಂತೆ ಪ್ರಾಕೃತದೇಹ-ಯೋಗವಿಯೋಗರೂಪವಾದ ಜನನಮರಣಗಳು ನನಗೆ ಇಲ್ಲವೇ ಇಲ್ಲ. ಹೀಗಿರುವಲ್ಲಿ ಜನನಮರಣರಾಹಿತ್ಯ ಮತ್ತು ಈಶ್ವರತ್ವಗಳಿಗೆ ಹಾನಿ ಎಲ್ಲಿದೆ? ಅಜ್ಞಲೋಕವು, ಎಲ್ಲರಂತೆ ನಾನೂ ಹುಟ್ಟಿ ಸಾಯುವೆನೆಂದು ಭ್ರಮಿಸುವುದು.

ಅರ್ಜುನ—ವಸುದೇವಾದಿಗಳನ್ನು ನಿಮಿತ್ತೀಕರಿಸಿ ಹೀಗೆ ಪ್ರಾದು-ರ್ಭವಿಸುವುದರಿಂದ ನಿನಗಾವಪ್ರಯೋಜನವುಂಟು?

ಶ್ರೀಕೃಷ್ಣ—ಪೂರ್ಣಕಾಮನಾದ ನನಗೆ ಹೊಸದಾಗಿ ಲಭಿಸಬೇಕಾದ ಪ್ರಯೋಜನವೇನಿರುವುದು? ಯಾವುದೂ ಇಲ್ಲ. ಹೀಗಿದ್ದರೂ ಸ್ವೇಚ್ಛೆಯಿಂದ ಕಾಲವಿಶೇಷಗಳಲ್ಲಿ ನನ್ನ ರೂಪವಿಶೇಷಗಳನ್ನು ಪ್ರಕಟಗೊಳಿಸಿ ಲೋಕವನ್ನುದ್ಧರಿಸುವುದು ನನ್ನ ಸ್ವಭಾವವು. (೬)

ಅರ್ಜುನ—ಹೀಗೆ ನೀನು ಅವತರಿಸುವ ಕಾಲವಾವುದು? ಮತ್ತು ನಿನ್ನ ಅವತಾರರೂಪಗಳಿಂದ ನೀನು ಸಾಧಿಸುವ ಲೋಕೋದ್ಧಾರಕಾರ್ಯಗಳಾವುವು?

ಶ್ರೀಕೃಷ್ಣ—ಧರ್ಮದ ಹಾನಿಯೂ, ಅಧರ್ಮದ ವೃದ್ಧಿಯೂ ಯಾವ ಕಾಲದಲ್ಲಿ ಸಂಭವಿಸುವುದೋ ಆಗೆಲ್ಲ ನಾನು ಅವತರಿಸುವೆನು. ಸಜ್ಜನರ ರಕ್ಷಣೆಯೂ, ದುರ್ಜನರ ವಿನಾಶವೂ, ಧರ್ಮಸಂಸ್ಥಾಪನೆಯೂ ನನ್ನಿಂದ ಸಾಧಿಸಲ್ಪಡುವ ಕಾರ್ಯಗಳು. ಇದಕ್ಕಾಗಿ ಅವತರಿಸುವುದು ನನ್ನ ಲೀಲೆಯು. ಅವತಾರವಿಲ್ಲದೇ ಸಾಧುಪರಿರಕ್ಷಣ ಮೊದಲಾದವುಗಳನ್ನು ಸಾಧಿಸಲಾರೆನೆಂದು ತಿಳಿಯಬೇಡ. ಇಚ್ಛಾಮಾತ್ರದಿಂದ ಸಾಧಿಸಬಲ್ಲೆನು, ಆದರೆ ಅವತರಿಸಿ ಸಾಧಿಸುವುದು ನನ್ನ ಸ್ವಭಾವ. (೭-೮) ನನ್ನ ಜನ್ಮ-ಕರ್ಮಗಳನ್ನು ಈ ಪ್ರಕಾರವಾಗಿ ತಿಳಿದು, ಲೋಕವಿಲಕ್ಷಣಗಳೆಂಬ ಯಥಾರ್ಥಜ್ಞಾನವುಳ್ಳವರು ದೇಹವನ್ನು ಬಿಟ್ಟನಂತರ ಮತ್ತೆ ಹುಟ್ಟುವುದಿಲ್ಲ. ನನ್ನನ್ನೇ ಹೊಂದಿ ಮುಕ್ತರಾಗುವರು. (೯)

ಅರ್ಜುನ—ಇದೇನು, ಕೃಷ್ಣ! ಹೀಗೆ ಹೇಳುವಿ. ನಿನ್ನ ಜನ್ಮ ಕರ್ಮಗಳು ದಿವ್ಯವೆಂದು (ಲೋಕವಿಲಕ್ಷಣಗಳೆಂದು) ತಿಳಿಯುವ ಮಾತ್ರ ದಿಂದಲೇ ಮುಕ್ತರಾಗುವುದಾದರೆ, ನಿವೃತ್ತಕರ್ಮಾನುಷ್ಠಾನವೇ ಮೊದಲಾದ ಜ್ಞಾನೋಪಾಯಗಳ ಅವಶ್ಯಕತೆಯೇಕೆ?

ಶ್ರೀಕೃಷ್ಣ—ಹೀಗೆ ತಿಳಿ, ಪಾರ್ಥ! ಜನ್ಮಕರ್ಮಸಂಬಂಧವಾದ ನನ್ನ ಏಕದೇಶಜ್ಞಾನದಿಂದ ಮುಕ್ತಿಯೆಂದು ಹೇಳಿದುದು ಸ್ವಶಕ್ತ್ಯನುಸಾರವಾದ ನನ್ನ ಗುಣಜ್ಞಾನದ ಉಪಲಕ್ಷಣಾರ್ಥವೆಂದು ತಿಳಿ. ಸ್ವಯೋಗ್ಯವಾದ ಯಥಾರ್ಥಪೂರ್ಣಗುಣಜ್ಞಾನದಿಂದಲೇ ಮುಕ್ತಿಯು, ನನ್ನ ಮಹಿಮೆಗಳ ಏಕದೇಶವಾದ ನನ್ನ ಜನ್ಮಕರ್ಮಗಳನ್ನು ಉಕ್ತಪ್ರಕಾರದಿಂದಲ್ಲದೇ ವಿರೋಧ ವಾಗಿ ತಿಳಿದಲ್ಲಿ ಮುಕ್ತಿಯು ಸರ್ವಥಾ ದೊರೆಯದು.

ಅರ್ಜುನ—ಹೀಗೆ ನಿನ್ನನ್ನು ತಿಳಿದು ಮುಕ್ತರಾದವರಿರುವರೇ? ಈ ವಿಧಜ್ಞಾನವು ಮುಕ್ತಿಗೆ ಕಾರಣವಾಗುವುದಾದರೂ ಹೇಗೆ?

ಶ್ರೀಕೃಷ್ಣ—ಅರ್ಜುನ! ಇರುವರು. ಬಹುಮಂದಿ ಹೀಗೆ ನನ್ನನ್ನು ತಿಳಿದು ಮುಕ್ತರಾಗಿದ್ದಾರೆ. ನನ್ನವಿಷಯಕವಾದ ಈ ಪ್ರಕಾರದ ಯಥಾರ್ಥಜ್ಞಾನದಿಂದ, ಅವರು ಮೊದಲಿಗೆ, ಸರ್ವಪ್ರಾಣಿಗಳಲ್ಲಿರುವ ನನ್ನನ್ನು ಸತ್ತಾಪ್ರತೀತ್ಯಾದಿ(ಅಸ್ತಿತ್ವ,ಜ್ಞಾನಕ್ರಿಯಾದಿ ಸರ್ವ)ಪ್ರದನೆಂದು ಅರಿಯುವರು; ರಾಗದ್ವೇಷಭಯಾದಿಗಳಿಂದ ರಹಿತರಾಗಿ ನಾನೇ ಸರ್ವೋತ್ತಮನೆಂಬ ನಿಶ್ಚಯಜ್ಞಾನವುಳ್ಳವರಾಗುವರು. ನನ್ನನ್ನೇ ಅನನ್ಯ-ಭಾವದಿಂದ ಶರಣುಹೊಂದುವರು. ಜ್ಞಾನರೂಪವಾದ ತಪಸ್ಸಿನಿಂದ ಪರಿಶುದ್ಧಾಂತಃಕರಣವುಳ್ಳವರಾಗುವರು; ನನ್ನ ದರ್ಶನದಿಂದ ದಗ್ಧವಾದ ಕರ್ಮಗಳುಳ್ಳವರಾಗಿ ನನ್ನಲ್ಲಿ ಸ್ಥಿತಿರೂಪವಾದ ಮುಕ್ತಿಯನ್ನು ಹೊಂದು ವರು. ಯಥಾರ್ಥವಾದ ನನ್ನ ಗುಣಜ್ಞಾನವು ಹೇಗೆ ಮುಕ್ತಿಗೆ ಕಾರಣ ವಾಗುವುದೆಂಬುದನ್ನು ಅರಿತೆಯಾ? (೧೦)

ಅರ್ಜುನ—ನೀನೇ ಸರ್ವೋತ್ತಮನೆಂಬ ಸಾಮಾನ್ಯಜ್ಞಾನವುಳ್ಳವ ರಾಗಿ, ಅನ್ಯದೇವತೆಗಳನ್ನೂ, ಪಿತೃಗಳನ್ನೂ ಉದ್ದೇಶಿಸಿ ವಿಧ್ಯುಕ್ತ ಕರ್ಮ

ಗಳನ್ನಾಚರಿಸಿ, ಅಂತ್ಯದಲ್ಲಿ 'ಶ್ರೀಕೃಷ್ಣಾರ್ಪಣಮಸ್ತು' ಎಂಬುದಾಗಿ ಸಕಲ ವನ್ನೂ ನಿನ್ನಲ್ಲಿಯೇ ಅರ್ಪಿಸುವವರಿಗೆ ದೊರೆಯುವ ಫಲವಾವುದು? ಅವರಿಗೂ ಮೋಕ್ಷವು ದೊರೆಯುವುದೇ? ಹಾಗಾದರೆ ನಿನ್ನ ಸರ್ವೋತ್ತಮತ್ವವನ್ನು ತಿಳಿದು ಸಕಲ ಕರ್ಮಗಳನ್ನು ನಿನಗೇ ಅರ್ಪಿಸಿ, ನಿನ್ನನ್ನೇ ಆಶ್ರಯಿಸುವವರ ವೈಶಿಷ್ಟ್ಯವೇನು?

ಶ್ರೀಕೃಷ್ಣ—ಅನ್ಯದೇವತೆಗಳನ್ನುದ್ದೇಶಿಸಿ ಆಚರಿಸಿದ ಕರ್ಮಗಳನ್ನು ಅಂತ್ಯದಲ್ಲಿ ನನಗೆ ಅರ್ಪಿಸುವವರು ತ್ರೈವಿದ್ಯರೆಂದು ಕರೆಯಲ್ಪಡುವರು. ಕೇವಲ ನನ್ನನ್ನೇ ಸರ್ವಾತ್ಮನಾ ಆಶ್ರಯಿಸುವವರು ಜ್ಞಾನಿಗಳು. ಈ ಉಭಯರಿಗೆ ದೊರೆಯುವ ಫಲದಲ್ಲಿ ಸಾಮ್ಯವಿಲ್ಲ. ಜ್ಞಾನಿಗಳು ಮೋಕ್ಷೇಚ್ಛೆ ಯಿಂದ ನನ್ನನ್ನೇ ಆಶ್ರಯಿಸಿ ಸೇವಿಸುವರು; ತ್ರೈವಿದ್ಯರು ಸ್ವರ್ಗಾದಿ ಫಲಗಳನ್ನು ಇಚ್ಛಿಸಿ ಅನ್ಯದೇವತೆಗಳನ್ನು ಸೇವಿಸುವರು. ಉಭಯರಿಗೂ ಫಲದಾತನು ನಾನೇ. ಅವರವರ ಸೇವಾನುಸಾರವಾಗಿ ಫಲಗಳನ್ನು ಕೊಡುವೆನು. ಅವರ ಸೇವೆಯ ವೈಷಮ್ಯವೇ ಫಲವೈಷಮ್ಯಕ್ಕೆ ಕಾರಣವು. ಜ್ಞಾನಿಗಳು ಮೋಕ್ಷವನ್ನು ಹೊಂದುವರು; ತ್ರೈವಿದ್ಯರು ಸ್ವರ್ಗಾದಿಗಳನ್ನು ಪಡೆಯುವರು. ಈ ಉಭಯರೂ ನನ್ನ ಮಾರ್ಗಾನುವರ್ತಿಗಳೆಂದೇ ತಿಳಿ. ಸಕಲ ಕರ್ಮಪ್ರೇರಕನೂ ನಾನೇ; ಫಲದಾತನೂ ನಾನೇ. ಆದ್ದರಿಂದಲೇ ನನ್ನ ಮಾರ್ಗಾನುವರ್ತಿಗಳೆನಿಸುವರು. (೧೧)

ಅರ್ಜುನ—ಉಭಯರೂ ನಿನ್ನ ಮಾರ್ಗಾನುವರ್ತಿಗಳಾದರೆ, ಜ್ಞಾನಿ ಗಳ ಸೇವೆಗೂ, ತ್ರೈವಿದ್ಯರ ಸೇವೆಗೂ ವೈಲಕ್ಷಣ್ಯವೇನು?

ಶ್ರೀಕೃಷ್ಣ— ಜ್ಞಾನಿಗಳು ನನ್ನನ್ನೇ ಸರ್ವಕರ್ಮಪ್ರೇರಕನೆಂದೂ, ಸರ್ವಯಜ್ಞಫಲಭೋಕ್ತನೆಂದೂ ತಿಳಿದು, ನಿಷ್ಕಾಮರಾಗಿ ನನ್ನನ್ನು ಭಜಿಸುತ್ತಾರೆ. ತ್ರೈವಿದ್ಯರು ಇದನ್ನರಿಯದೇ ಕರ್ಮಸಿದ್ಧಿಯನ್ನು (ಫಲವನ್ನು) ಕೋರಿ ಅನ್ಯದೇವತೆಗಳನ್ನು ಭಜಿಸುತ್ತಾರೆ.

ಅರ್ಜುನ—ಜೀವರು ಅಸ್ವತಂತ್ರರೆಂಬುದು ಅನುಭವಸಿದ್ಧವಿರುವುದ ರಿಂದ ನೀನು ಸರ್ವರ ಸರ್ವಕರ್ಮಪ್ರೇರಕನೆಂಬುದನ್ನು ಗ್ರಹಿಸಬಹುದು.

ಆದರೆ ನೀನು ಸರ್ವಕರ್ಮಫಲಭೋಕ್ತನೆಂದರೇನು? ಅದನ್ನು ತಿಳಿ ಯುವ ಬಗೆ ಹೇಗೆ?

ಶ್ರೀಕೃಷ್ಣ—ಕರ್ಮಜನ್ಯವಾದ ಫಲವು ಮನುಷ್ಯಲೋಕದಲ್ಲಿ ಶೀಘ್ರ ವಾಗಿ ದೊರೆಯುವುದನ್ನು ಕಂಡು ನಾನೇ ಫಲಭೋಕ್ತ್ರನೆಂದು ತರ್ಕಿಸ ಬಹುದಲ್ಲವೇ? ನಾನು ಯಜ್ಞಭೋಕ್ತನಾದ್ದರಿಂದಲೇ ಅದರ ಫಲವು ಯಜಮಾನನಿಗೆ ಶೀಘ್ರವಾಗಿ ಲಭಿಸುವುದು. ಏಕೆಂದರೆ, ಯಜ್ಞಾದಿ ಗಳಲ್ಲಿ ಆರಾಧಿಸಲ್ಪಡುವ ಇತರ ದೇವತೆಗಳೂ ಅಸ್ವತಂತ್ರರು. ಅವರು ಸ್ವತಂತ್ರರಾಗಿ ಫಲ ಕೊಡಲು ಶಕ್ತರಲ್ಲ. ಆದರೂ ಅವರನ್ನುದ್ದೇಶಿಸಿ ಮಾಡಲ್ಪಡುವ ಕರ್ಮಗಳಿಗೆ ಶೀಘ್ರವಾಗಿ ಫಲವು ದೊರೆಯುತ್ತದೆ. ಇದರಿಂದ, ಕಾಮ್ಯಕರ್ಮಿಗಳಿಗೆ ತಿಳಿಯದಿದ್ದರೂ ಭಗವಂತನೇ ಯಜ್ಞಾದಿ ಗಳನ್ನು ಸ್ವೀಕರಿಸಿ ಫಲಕೊಡುತ್ತಾನೆಂದು ತಿಳಿಯಬಹುದಲ್ಲವೇ? ಫಲ ಭೋಕ್ತನೂ, ಫಲದಾತನೂ ನಾನಲ್ಲದಿದ್ದರೆ, ಯಾವ ಕರ್ಮಕ್ಕೂ ಫಲ ಸಿದ್ಧಿಯೇ ಆಗದಿರಬೇಕಾದೀತು! ಯಜ್ಞದಲ್ಲಿ ಅರ್ಪಿಸಲ್ಪಡುವ ಹವಿಸ್ಸು ಮೊದಲಾದವುಗಳನ್ನೂ (ಪೂಜಾರೂಪವಾದ ಸಕಲಕರ್ಮವನ್ನೂ) ನಾನು ಸ್ವೀಕರಿಸಿ, ನಿರ್ದಿಷ್ಟವಾದ ಫಲವು ಯಜಮಾನನಿಗೆ ದೊರೆಯ ಲೆಂದು ಇಚ್ಛಿಸುವುದೇ ಭೋಗವು. ಅನ್ಯಥಾ, ಪೂರ್ಣಕಾಮನಾದ ನನಗೆ ಭೋಗವೆಂದರೇನು? ನಿತ್ಯತೃಪ್ತನಿಗೆ ನೂತನವಾಗಿ ಪ್ರಾಪ್ತಿ ಯಾಗುವ ತೃಪ್ತಿಯೆಂಬುದುಂಟೇ? ಆದರೂ ಜೀವರ ಭೋಗಕ್ಕಾಗಿ ನಾನು ಭೋಗಿಸುವೆನು. ನನ್ನ ಈ ಭೋಕ್ತೃತ್ವವು ಅತ್ಯಂತ ವಿಲಕ್ಷಣ ವಯ್ಯಾ, ಅರ್ಜುನ!

ಅರ್ಜುನ—ಅನ್ಯದೇವತೆಗಳನ್ನುದ್ದೇಶಿಸಿ ಫಲಾಪೇಕ್ಷೆಯಿಂದ ಯಜ್ಞಾದಿಕರ್ಮಗಳಲ್ಲಿ ತೊಡಗುವ ತ್ರೈವಿದ್ಯರು ನಿನ್ನ ಮಾರ್ಗಾನುವರ್ತಿ ಗಳೆಂದು ಕರೆಯಲ್ಪಡಲು ಹೇಗೆ ಅರ್ಹರೆನಿಸುವರು?

ಶ್ರೀಕೃಷ್ಣ—ತ್ರೈವಿದ್ಯರು ಯಜ್ಞಾದಿಕರ್ಮಗಳನ್ನಾಚರಿಸಿ ಅನ್ಯ- ದೇವತೆಗಳನ್ನು ಪೂಜಿಸಿ, ಸ್ವರ್ಗಾದಿಫಲಗಳನ್ನು ಕೋರಿದರೂ, ಅಂತ್ಯದಲ್ಲಿ ಆ ಕರ್ಮಗಳನ್ನು ನನ್ನಲ್ಲಿ ಅರ್ಪಿಸುವುದರಿಂದ ಅವರೂ ವೈಷ್ಣವಮಾರ್ಗಾನು-

ವರ್ತಿಗಳೇ ಸರಿ. ಹಾಗೆ ಅರ್ಪಿಸುವುದರಿಂದಲೇ ಕ್ಷಿಪ್ರವಾಗಿ ಫಲ ದೊರೆಯುತ್ತದೆ. ಇಲ್ಲವಾದರೆ ಸ್ವರ್ಗಾದಿಫಲಗಳಾದರೂ ಹೇಗೆ ದೊರೆಯಬೇಕು? ಅಂತ್ಯದಲ್ಲಿಸಹ ನನಗೆ ಅರ್ಪಿಸಲ್ಪಡದ, ಹಾಗೂ ಭೂತಪ್ರೇತಾದಿಪೂಜಕರ ಕರ್ಮಗಳಿಗೆ ಐಹಿಕಸುಖದಾಯಕಫಲಗಳಾಗಲಿ, ಸ್ವರ್ಗಾದಿಫಲಗಳಾಗಲಿ ಸರ್ವಥಾ ಲಭಿಸುವುದಿಲ್ಲ. ದುಃಖಪ್ರಾಪಕನರಕಾದ್ಯನರ್ಥಗಳೇ ದೊರೆಯುವುವು. ಅವರಿಗೆ ಲಭಿಸುವಂತೆಕಾಣುವ ಐಹಿಕಭೋಗಗಳಿಗೂ ಅವರ ಈಗಿನ ಕರ್ಮಗಳಿಗೂ ಕಾರ್ಯಕಾರಣಸಂಬಂಧವನ್ನು ತಿಳಿಯಬೇಡ, ಮತ್ತು ಅವರಿಗೆ ದೊರೆಯುವ ಐಶ್ವರ್ಯಾದಿಗಳು ಪರಿಣಾಮದಲ್ಲಿ ಮಹಾದುಃಖಸಾಧನಗಳೇ ಆಗುವುವು. (೧೨)

ಅರ್ಜುನ—ಹೇ ಪ್ರಭೋ! ನಿನ್ನನ್ನು ಭಜಿಸದವರ ಕರ್ಮಗಳಿಗೆ ಅದೇಕೆ ಫಲವಿಲ್ಲ? ಮತ್ತು ಜ್ಞಾನಿಗಳಂತೆ ತ್ರೈವಿದ್ಯರಿಗೂ ಮಹಾಫಲವು ಅದೇಕೆ ಲಭಿಸುವುದಿಲ್ಲ? ಅವರೂ ತಮ್ಮ ಕರ್ಮಗಳನ್ನು ಅಂತ್ಯದಲ್ಲಿ ನಿನಗೇ ಅರ್ಪಿಸುವರಷ್ಟೆ!

ಶ್ರೀಕೃಷ್ಣ—ನಾನು ಸ್ವತಂತ್ರಫಲದಾತನು ಮತ್ತು ಸರ್ವರ ತಂದೆಯು. ತಂದೆಯನ್ನು ಬಿಟ್ಟು ಅನ್ಯರನ್ನು ಭಜಿಸುವ (ಸೇವಿಸುವ) **ಕೇವಲ** ಅನ್ಯದೇವತೋಪಾಸಕರಿಗೆ ಯಾವ ಫಲವೂ ಇಲ್ಲ. ಅಂತ್ಯದಲ್ಲಿಯಾದರೂ ಕೃಷ್ಣಾರ್ಪಣವೆನ್ನುವುದರಿಂದ ಅಲ್ಪಫಲಗಳಾದರೂ ತ್ರೈವಿದ್ಯರಿಗೆ ದೊರೆಯುವುವು. ಅವೂ ನನ್ನಿಂದಲೇ ದೊರೆಯುವುವು. ಸರ್ವಾತ್ಮನಾ ನನ್ನನ್ನೇ ಆಶ್ರಯಿಸಿದ ಜ್ಞಾನಿಗಳಿಗೆ ದೊರೆಯುವ ಮೋಕ್ಷರೂಪವಾದ ಮಹಾಫಲವು ಅವರಿಗೆ ಹೇಗೆ ದೊರೆಯಬೇಕು!

ಅರ್ಜುನ—ಜನರು, ಬ್ರಾಹ್ಮಣಾದಿವರ್ಣಯೋಗ್ಯವಾದ ಕರ್ಮಗಳನ್ನು ಮಾಡುವರು. ವಿಹಿತಕರ್ಮಾನುಷ್ಠಾನದಿಂದ ಫಲವು ದೊರೆಯಲೇಬೇಕಲ್ಲವೇ?

ಶ್ರೀಕೃಷ್ಣ— ಬಾಹ್ಮಣಾದಿವರ್ಣವಿಭಾಗವೂ ಸಹ ನನ್ನಿಂದಲೇ ಆದುದು. ಸೃಷ್ಟಿಪ್ರಾರಂಭದಲ್ಲಿ (ಈ ಕೃಷ್ಣರೂಪದಿಂದ ಅವತರಿಸಿದನಂತರವಲ್ಲ) ನಾನೇ ಬ್ರಾಹ್ಮಣಾದಿನಾಲ್ಕುವರ್ಣಗಳ ಸಮೂಹವನ್ನು, ಗುಣಕರ್ಮಗಳ ವಿಭಾಗದಿಂದ ವ್ಯವಸ್ಥೆಗೊಳಿಸಿ, ವರ್ಣಧರ್ಮಾಚರಣೆಯಿಂದ

ನನ್ನನ್ನು ಅರ್ಚಿಸಿ ಸಿದ್ಧಿಯನ್ನು ಪಡೆಯಿರೆಂದು ಪ್ರಜೆಗಳನ್ನು ಆಜ್ಞಾಪಿಸಿದೆನು. ಚಾತುರ್ವರ್ಣ್ಯದ ಕರ್ತನು ನಾನೇ. ನನಗೊಬ್ಬ ಅನ್ಯಕರ್ತನಿಲ್ಲ–ನಿಯಾಮಕನಿಲ್ಲ. ಸ್ವತಂತ್ರಕರ್ತನಾದ ಮುಖ್ಯಸ್ವಾಮಿಯನ್ನು ಮರೆತು, ವರ್ಣವಿಹಿತಕರ್ಮಗಳನ್ನು ಫಲಾಪೇಕ್ಷೆಯಿಂದ ಅನ್ಯರನ್ನುದ್ದೇಶಿಸಿ ಆಚರಿಸಿದರೆ ಫಲವೆಂತು ದೊರೆಯುವುದು ? ಪ್ರಭುವಿನ ಆಜ್ಞೆಯನ್ನು ಪಾಲಿಸಿ ಆತನಿಗೆ ನಿವೇದಿಸಿದರೆ (ಅರ್ಪಿಸಿದರೆ) ಆತನು ಫಲ ಕೊಡುವನು. ಫಲದಾತನನ್ನು ಅಲಕ್ಷಿಸಿ, "ಕರ್ಮಮಾಡಿದ್ದೇನೆ, ಫಲ ಬರಲಿ" ಎಂದು ಸ್ವಾಭಿಮಾನದಿಂದ ಕುಳಿತರೆ, ಲೋಕದಲ್ಲಿಯಾದರೂ, ಫಲ ದೊರೆಯುವುದು ಕಂಡಿದೆಯೇ ?

ಅರ್ಜುನ—ಗುಣಕರ್ಮಗಳ ವಿಭಾಗದಿಂದ ವರ್ಣಗಳನ್ನು ಸೃಷ್ಟಿಸಿದೆನೆಂದು ಹೇಳಿದೆಯಲ್ಲವೇ? ಆ ವಿಭಾಗಗಳ ವಿವರವನ್ನು ನಿರೂಪಿಸು, ಸ್ವಾಮಿ !

ಶ್ರೀಕೃಷ್ಣ—ಅರ್ಜುನ! ಜನರು, ಸಾತ್ವಿಕಸಾತ್ವಿಕರೆಂದೂ ರಾಜಸ-ಸಾತ್ವಿಕರೆಂದೂ, ತಾಮಸಸಾತ್ವಿಕರೆಂದೂ ತ್ರಿವಿಧರಾಗಿರುವರು. ಇವರ ಸ್ವರೂಪವು ಪ್ರಾಕೃತಗುಣಮಯವಲ್ಲ; ಚೇತನಾತ್ಮಕವು ಮತ್ತು ನಿರ್ವಿ-ಕಾರವಾದುದು. ಬಾಹ್ಯದೇಹದಲ್ಲಿರುವ, ಇಂದ್ರಿಯ, ಮನಸ್ಸು ಮೊದಲಾದವುಗಳೆಲ್ಲ ಪ್ರಾಕೃತಸತ್ವರಜಸ್ತಮೋಗುಣಗಳ ವಿಕಾರಗಳು. ಈ ಗುಣಗಳು ಜೀವಸ್ವರೂಪವನ್ನು ವ್ಯಂಜನಮಾಡುತ್ತವೆ. ಸಾತ್ವಿಕಸಾತ್ವಿಕರು ದೇವತೆಗಳು. ರಾಜಸಸಾತ್ವಿಕರು ಮನುಷ್ಯೋತ್ತಮರು. ತಾಮಸ-ಸಾತ್ವಿಕರು ದೈತ್ಯಭೃತ್ಯರು. ದೇವತೆಗಳೆಲ್ಲರೂ ಮುಕ್ತಿಯೋಗ್ಯರು. ರಾಜಸ-ಸಾತ್ವಿಕರಾದ ಮನುಷ್ಯೋತ್ತಮರೂ ಮುಕ್ತಿಯೋಗ್ಯರೇ. ತಾಮಸ-ಸಾತ್ವಿಕರು ತಮೋಯೋಗ್ಯರು. ತಾಮಸರಾಜಸರು ಮತ್ತು ತಾಮಸ-ತಾಮಸರೆಂಬುವರು ಹಿರಿಯದೈತ್ಯರು. ರಾಜಸರಾಜಸರು ನಿತ್ಯಸಂಸಾರಿಗಳು. ಇವರೇ ಮನುಷ್ಯಮಧ್ಯಮರು. ರಾಜಸತಾಮಸರು ಮನುಷ್ಯಾ-ಧಮರು. ಇವರೂ ತಮೋಯೋಗ್ಯರೇ. ಸ್ವರೂಪಭೂತವಾದ ಬ್ರಾಹ್ಮಣ-ತ್ವಾದಿಗಳೂ ಉಂಟು. ಆದರೆ ಮುಕ್ತಿಯೋಗ್ಯರಾದ ಮನುಷ್ಯವರ್ಗದವರ ಪ್ರಾಕೃತದೇಹೇಂದ್ರಿಯಾದಿಗಳನ್ನು ವಿವಕ್ಷಿಸಿ ವರ್ಣವಿಭಾಗವು ಹೇಳ ...

ವುದು. ಬ್ರಾಹ್ಮಣಾದಿವರ್ಣದವರ ದೇಹೇಂದ್ರಿಯಾದಿಗಳು ಗುಣತ್ರಯಗಳ ವಿಭಾಗದಿಂದ ಹೇಗೆ ನಿರ್ಮಿತವಾಗಿರುವುವೆಂಬುದನ್ನು ವಿವರಿಸುವೆನು ಕೇಳು. ರಜೋಗುಣಕ್ಕಿಂತ ಬಹಳ ಅಧಿಕವಾದ ಸತ್ವಗುಣವುಳ್ಳವರು ಬ್ರಾಹ್ಮಣರು. ರಜೋಗುಣಕ್ಕಿಂತ ಸ್ವಲ್ಪ ಅಧಿಕವಾದ ಸತ್ವಗುಣವುಳ್ಳವರು ಕ್ಷತ್ರಿಯರು. ತಮೋಗುಣಕ್ಕಿಂತ ಅಧಿಕವಾದ ಸತ್ವಗುಣಕ್ಕೆ ಸಮಾನವಾದ ರಜೋಗುಣವುಳ್ಳವರು ವೈಶ್ಯರು. ರಜೋಗುಣಕ್ಕಿಂತ ಅಧಿಕವಾದ ತಮೋಗುಣವುಳ್ಳವರಾಗಿ, ಅದಕ್ಕಿಂತ ಅಧಿಕವಾದ ಸತ್ವಗುಣವುಳ್ಳವರು ಶೂದ್ರರು. ಬ್ರಾಹ್ಮಣಾದಿವರ್ಣದವರಿಗೆ ಕರ್ಮಗಳೂ ವಿಭಾಗದಿಂದ ವಿಹಿತವಾಗಿವೆ. ಶಮ, ದಮ, ಇವೇ ಮೊದಲಾದವುಗಳು ಬ್ರಾಹ್ಮಣರಿಗೆ ವಿಶೇಷವಾಗಿ ವಿಧಿಸಲ್ಪಟ್ಟಿರುವ ಧರ್ಮಗಳು. ಶೌರ್ಯ, ಧೈರ್ಯ, ಯುದ್ಧದಲ್ಲಿ ಹಿಂದಿರುಗದಿರುವಿಕೆ ಇತ್ಯಾದಿಗಳು ಕ್ಷತ್ರಿಯಧರ್ಮಗಳು. ಕೃಷಿ, ಗೋರಕ್ಷಣೆ, ವಾಣಿಜ್ಯ ಮೊದಲಾದವು ವೈಶ್ಯರಿಗೂ, ಮೇಲಿನ ಮೂರು ವರ್ಣದವರ ಪರಿಚರ್ಯಾದಿಗಳು ಶೂದ್ರರಿಗೂ ವಿಹಿತವಾದ ಧರ್ಮಗಳು.

ಅರ್ಜುನ—ನೀನು ಈ ಎಲ್ಲಕ್ಕೂ ಕರ್ತನಾದರೆ, ನಿನಗೊಬ್ಬ ಅನ್ಯಕರ್ತನಿರುವನೇ?

ಶ್ರೀಕೃಷ್ಣ—ನನಗೆ ಕರ್ತನಿಲ್ಲ; ನನ್ನ ಕರ್ತೃತ್ವವು ಸ್ವತಂತ್ರವೆಂದು ಹೇಳಿದೆನಲ್ಲವೇ? ನಾನೇ ಸ್ವತಂತ್ರನಾದ ಸರ್ವಕರ್ತನು. ನನ್ನ ಕರ್ತೃತ್ವವು ನಾಶರಹಿತವಾದುದು; ತ್ರಿಕಾಲದಲ್ಲಿಯೂ ಏಕಪ್ರಕಾರವಾಗಿರುವುದು. (೧೩)

ಅರ್ಜುನ—ಇರಲಿ, ಕೃಷ್ಣ! ಕರ್ತೃತ್ವವುಳ್ಳ ನಿನಗೆ ಕರ್ಮದ ಅನುಷ್ಠಾನ ಮತ್ತು ಪರಿತ್ಯಾಗದಿಂದ ಫಲಸಂಬಂಧವಿರಬೇಕಷ್ಟೆ. ಕರ್ತೃತ್ವವುಳ್ಳ ಜೀವರು, ಹೇಗೆ ಕರ್ಮಗಳನ್ನು ಮಾಡುವುದರಿಂದ ಅಥವಾ ಬಿಡುವುದರಿಂದ, ಫಲಾಫಲಗಳಿಗೆ ಗುರಿಯಾಗುವರೋ, ಹಾಗೇ ನೀನಾದರೂ ಗುರಿಯಾಕಬೇಕಲ್ಲವೇ?

ಶ್ರೀಕೃಷ್ಣ—ಹೇ ಪಾರ್ಥ! ನನ್ನ ಕರ್ತೃತ್ವವು ಜೀವಕರ್ತೃತ್ವದಿಂದ ಅತ್ಯಂತವಿಲಕ್ಷಣವಾದುದು. ಜೀವರು ಕರ್ಮಫಲದಲ್ಲಿ ಆಸಕ್ತರು.

ಆದ್ದರಿಂದ ಅವರಿಗೆ ಕರ್ಮಲೇಪವುಂಟು. ನನಗೆ ಕರ್ಮಫಲದಲ್ಲಿ ಯಾವ ಆಶೆಯೂ ಇಲ್ಲ; ಕರ್ಮಲೇಪವೂ ಇಲ್ಲ. ಫಲಪ್ರಾಪ್ತಿಪರ್ಯಂತ, ಜೀವರು ಚಂಚಲಮನಸ್ಕರಾಗಿರುವರು. ಈ ವಿಧವಾದ ಕರ್ಮದಲ್ಲಿ ಅಭಿನಿವೇಶವು ನನಗಿಲ್ಲ. ಹೀಗಿರುವಾಗ ನನಗೆಲ್ಲಿಯ ಕರ್ಮಲೇಪ! ಅಷ್ಟೇಕೆ, ಅರ್ಜುನ! ಸುತರಾಂ ಫಲೇಚ್ಛಾರಹಿತನೆಂದೂ ಕರ್ಮಲೇಪವಿಲ್ಲದವನೆಂದೂ ನನ್ನನ್ನು ಯಾರು ತಿಳಿಯುವರೋ ಅವರೂ ಸಹ ಕರ್ಮಗಳಿಂದ ಬಂಧಿತರಾಗುವುದಿಲ್ಲ. ನನಗೆ ಕರ್ಮಲೇಪವಿಲ್ಲವೆಂದು ಹೇಳಲೇನು! (೧೪)

ಅರ್ಜುನ—ನಿನ್ನನ್ನೇ ಆಶ್ರಯಿಸಿ, ನಿಷ್ಕಾಮರಾಗಿ ಸದಾ ನಿನ್ನನ್ನೇ ಭಜಿಸುವ ಜ್ಞಾನಿಗಳಿಗೆ ಕರ್ಮಬಂಧವಿಲ್ಲವಷ್ಟೆ. ಅವರೇಕೆ ವರ್ಣೋಚಿತ ಕರ್ಮಗಳನ್ನು ಅನುಷ್ಠಾನಮಾಡಬೇಕು?

ಶ್ರೀಕೃಷ್ಣ—ಜ್ಞಾನಿಗೆ ಮೋಕ್ಷವು ತಪ್ಪದೇ ಲಭಿಸುವುದೆಂಬುವುದು ನಿಜ. ಆದರೂ ಮುಕ್ತಿಯಲ್ಲಿ ಆನಂದಾತಿಶಯವನ್ನು ದೊರಕಿಸಿಕೊಳ್ಳುವ ಸಲುವಾಗಿ ಮತ್ತು ಲೋಕಶಿಕ್ಷಾರ್ಥವಾಗಿ ವಿಹಿತಕರ್ಮಗಳನ್ನು ಆಚರಿಸಲೇಬೇಕು. ಪೂರ್ವಿಕರ ಆಚರಣೆಯೂ ಈ ವಿಷಯದಲ್ಲಿ ಪ್ರಮಾಣವು. ಜ್ಞಾನಿಗಳಾದ ಜನಕವಿವಸ್ವತಾದಿಗಳು ವಿಹಿತಕರ್ಮಗಳನ್ನು ತೊರೆದರೇ? ಹೇ ಅರ್ಜುನ! ನೀನೂ ಜ್ಞಾನಿಯೇ. ನೀನಾದರೂ, ಅತಿಪ್ರಾಚೀನ ಪೂರ್ವಿಕರಿಂದ ಸಹ ಆಚರಿಸಲ್ಪಟ್ಟಂತೆ, ವಿಹಿತಕರ್ಮಗಳನ್ನಾಚರಿಸು. (೧೫)

ಅರ್ಜುನ—ಅವಶ್ಯಕರ್ತವ್ಯವೆಂದು ನೀನು ಮೇಲಿಂದ ಮೇಲೆ ಹೇಳುತ್ತಿರುವ ಕರ್ಮದ ಸ್ವರೂಪವನ್ನು ವಿವರವಾಗಿ ತಿಳಿಯಲಿಚ್ಛಿಸುವೆನು. ಕರ್ತವ್ಯಕರ್ಮಗಳ ಮಧ್ಯದಲ್ಲಿ ಯಾವುದನ್ನು ಕೈಗೊಳ್ಳಬೇಕೆಂಬುದನ್ನು ನಿರ್ಧರಿಸಿಕೊಳ್ಳುವ ಬಗೆ ಹೇಗೆ?

ಶ್ರೀಕೃಷ್ಣ—ಯಾವುದೊಂದು ಕರ್ಮವನ್ನು ಪ್ರಾರಂಭಿಸುವ ಮೊದಲು ಬಹುಪರಿ ವಿಚಾರ ಮಾಡಬೇಕು. ಕರ್ಮಸ್ವರೂಪವನ್ನರಿಯುವುದು ಬಹು ಕಷ್ಟಸಾಧ್ಯವಯ್ಯಾ! ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು ಎಂಬ ವಿಷಯದಲ್ಲಿ ಪಂಡಿತರೂ ಭ್ರಾಂತರಾಗುವರು. ಆದ್ದರಿಂದ

ಯಾವುದರ ಆಚರಣೆಯಿಂದ ಮತ್ತು ಯಾವುದರ ಪರಿತ್ಯಾಗದಿಂದ, ಬಂಧ-ನಿರ್ಮುಕ್ತನಾಗುವೆಯೋ ಅದನ್ನು ನಿನಗೆ ತಿಳಿಸಿಕೊಡುವೆನು. (೧೬) ಕೇಳು! ಕರ್ಮ, ಅಕರ್ಮ, ವಿಕರ್ಮಗಳೆಂಬುವು ಪ್ರತ್ಯೇಕವಾದುವು. ಅಕರ್ಮವೆಂದರೆ ಕರ್ಮಮಾಡದಿರುವಿಕೆ—ಕರ್ಮದ ಅಭಾವ. ವಿಕರ್ಮವೆಂದರೆ ವಿರುದ್ಧ ಕರ್ಮ (ಮಾಡಬಾರದ ಕರ್ಮ), ಅವಶ್ಯವಾಗಿ ಮಾಡಬೇಕಾದುದು ಕರ್ಮವೆನಿಸುವುವು. ಕರ್ಮದ ದೆಶೆಯಿಂದ ಅಕರ್ಮ, ವಿಕರ್ಮಗಳನ್ನು ವಿವೇಚಿಸಿ ತಿಳಿಯಬೇಕು. ಹಾಗೂ ವಿಕರ್ಮದಿಂದ, ಕರ್ಮ, ಅಕರ್ಮಗಳೆರಡೂ ವಿಲಕ್ಷಣವೆಂದು (ಪ್ರತ್ಯೇಕವಾದ ಭಿನ್ನ ಸ್ವರೂಪವುಳ್ಳವುಗಳೆಂದು) ತಿಳಿಯಬೇಕು. ಮತ್ತು ಅಕರ್ಮದಿಂದ ಕರ್ಮ, ವಿಕರ್ಮಗಳೆರಡೂ ಭಿನ್ನವಾದವುಗಳೆಂದು ತಿಳಿಯಬೇಕು. ಕರ್ಮಾದಿಗಳ ಜ್ಞಾನವು ಬಹು ಗಹನವಾದುದು. ವಿಮರ್ಶೆ ಮಾಡಿ ಅವುಗಳ ನಿಜವನ್ನರಿಯಬೇಕು. ಕರ್ಮಾಕರ್ಮವಿಕರ್ಮಗಳೆಲ್ಲವೂ ಅನಂತರೂಪಿಯಾದ ನನ್ನಿಂದಲೇ ಘಟಿಸುವುವೆಂಬುದನ್ನು ಮರೆಯದಿರು. ಕರ್ಮಾದಿಗಳ ಸ್ವರೂಪವೂ ನನ್ನ ಅಧೀನವೇ; ಇದು ಕರ್ಮ, ಇದು ಅಕರ್ಮ, ಇದು ವಿಕರ್ಮವೆಂಬ ಕರ್ಮಸ್ವಭಾವವೂ ನನ್ನ ಅಧೀನವೆಂದು ತಿಳಿ. (೧೭)

ಅರ್ಜುನ—ಹೇ ಕೃಷ್ಣ! ಇದೊಂದು ದೊಡ್ಡ ಸಮಸ್ಯೆಯಂತಿದೆ. ಕರ್ಮಾದಿಗಳ ಸ್ವರೂಪಜ್ಞಾನವು ಬಹು ಮಹತ್ವವುಳ್ಳದ್ದೂ ಗಂಭೀರವೂ ಆದುದೆಂದು ತೋರುತ್ತದೆ. ಇನ್ನಷ್ಟು ವಿಸ್ತರಿಸು, ದೇವ!

ಶ್ರೀಕೃಷ್ಣ—ಅಹುದು, ಅರ್ಜುನ! ಇದನ್ನು ಹೆಚ್ಚು ವಿಸ್ತಾರದಿಂದ ಕೇಳಬೇಕಾದುದೇ ಸರಿ. ಹೇಳುವೆನು ಕೇಳು. ಅವಶ್ಯಕರ್ತವ್ಯಗಳಾದ ವರ್ಣಾಶ್ರಮೋಚಿತಕರ್ಮಗಳನ್ನು ತಾನು ಮಾಡಿದರೂ, ತನಗೆ ಕರ್ಮಾ-ಭಾವವನ್ನು ಎಂದರೆ ಅಕರ್ಮವನ್ನು ತಿಳಿಯಬೇಕು.—'ಭಗವಂತನೇ ಕರ್ತನು; ನಾನು ಸ್ವತಂತ್ರನಲ್ಲ; ಕಿಂತು ಅವನ ಅಧೀನವಾದ ಕರ್ತೃತ್ವ-ಶಕ್ತಿಯುಳ್ಳವನು.' ಹೀಗೆಂದು ತಿಳಿಯುವುದೇ ಕರ್ಮದಲ್ಲಿ ಅಕರ್ಮವನ್ನು ತಿಳಿಯುವಿಕೆ, ಅಕರ್ಮದಲ್ಲಿ ಕರ್ಮವನ್ನೂ ಕಾಣಬೇಕು. ಅಧೀನಕರ್ತನಾದ ಜೀವನಿಂದ ಯಾವ ಕರ್ಮವೂ ಮಾಡಲ್ಪಡದಿರುವ ಸ್ವಪ್ನಾದಿ ಅವಸ್ಥೆ

ಗಳಲ್ಲಿ ಸಹ ಪರಮಾತ್ಮನು ವ್ಯಾಪಾರಗಳನ್ನು ಮಾಡುತ್ತಿರುವನೆಂದು ತಿಳಿಯಬೇಕು. ಹೀಗೆ, ಪರಮಾತ್ಮನಿಗೆ ಪರಾನಪೇಕ್ಷೆಯಿಂದ (ಸ್ವತಂತ್ರವಾದ) ಕರ್ತೃತ್ವವನ್ನೂ ತನಗೆ ಭಗವದಧೀನವಾದ ಕರ್ತೃತ್ವವನ್ನೂ ತಿಳಿದು ಮಾಡುವ ವರ್ಣಾಶ್ರಮೋಚಿತ ಕರ್ಮವೇ ಕರ್ಮವು. ಇದರ ಪರಿತ್ಯಾಗವು ಅಕರ್ಮವು. ನಿಷಿದ್ಧಕರ್ಮವು ವಿಕರ್ಮವು. ಹೀಗೆ ತಿಳಿದವನೇ ಮನುಷ್ಯರಲ್ಲಿ ತತ್ವಜ್ಞಾನಿಯೆನಿಸುವನು. ಆತನೇ ನಿಜವಾಗಿ ಜ್ಞಾನೋಪಾಯವುಳ್ಳವನು, ಅವನು ಸ್ವಯೋಗ್ಯವಾದ ಸಕಲ ಕರ್ಮಗಳನ್ನೂ ಆಚರಿಸಿ, ಜ್ಞಾನವನ್ನೂ ಮೋಕ್ಷವನ್ನೂ ಹೊಂದಿದಂತೆಯೇ ಸರಿ. ಸಾರಾಂಶ:— ಜೀವನಿಗೆ ಪರಾಧೀನಕರ್ತೃತ್ವವನ್ನೂ, ಪರಮಾತ್ಮನಿಗೆ ಸ್ವತಂತ್ರಕರ್ತೃತ್ವವನ್ನೂ ತಿಳಿದು ವಿಹಿತವನ್ನಾಚರಿಸಬೇಕು. ಸರ್ವಕರ್ತನಾದ ಪರಮಾತ್ಮನು ಮಾಡದ ಯಾವ ಕರ್ಮವನ್ನೂ ನಾನು ಮಾಡುವುದಿಲ್ಲ, ಎಂದರೆ ಪರಮಾತ್ಮನೇ ಮಾಡಿ ಮಾಡಿಸುವನೆಂದು ತಿಳಿಯಬೇಕು. ಈ ವಿವೇಚನೆಯಿಂದ ವಿಧಿಬದ್ಧನಾದ ಜೀವನು 'ಕರ್ಮ' ನೆಂದೂ, ಸ್ವತಂತ್ರನಾದ ಪರಮಾತ್ಮನು 'ಅಕರ್ಮ' ನೆಂದೂ ವ್ಯವಹರಿಸಲ್ಪಡುವರೆಂಬುದೂ ಪರ್ಯವಸಿತವಾಗುತ್ತದೆ. (೧೮)

ಅರ್ಜುನ—ಸ್ವತಂತ್ರಕರ್ತೃತ್ವಾಭಿಮಾನವನ್ನು ತೊರೆದು ವರ್ಣಾಶ್ರಮೋಚಿತವಾದ ಕರ್ಮಗಳನ್ನು ಮಾಡಿದರೆ ಅದರಿಂದ ಜ್ಞಾನರೂಪವಾದ ಫಲವು ಸಿದ್ಧಿಸುವುದೇ?

ಶ್ರೀಕೃಷ್ಣ—ಕರ್ತೃತ್ವಾಭಿಮಾನವನ್ನು ಬಿಟ್ಟು ವಿಹಿತ ಕರ್ಮವನ್ನಾಚರಿಸುವ ಮಾತ್ರದಿಂದ ಕರ್ಮಕ್ಕೆ ಜ್ಞಾನಫಲಕತ್ವವು ಸಿದ್ಧಿಸುವುದಿಲ್ಲ. ಕಾಮಸಂಕಲ್ಪಾದಿಗಳ ಪರಿತ್ಯಾಗವೂ ಅತ್ಯವಶ್ಯಕ. ಯಾವ ಮನುಷ್ಯನ ಸಕಲ ಕರ್ಮಾರಂಭಗಳು, ಫಲೇಚ್ಛೆಯಿಂದಲೂ, ಈ ಕರ್ಮದಿಂದ ಸ್ವರ್ಗಾದಿ ಇಂಥ ಫಲವನ್ನು ಸಾಧಿಸುವೆನೆಂಬ ಮುಂತಾದ ಸಂಕಲ್ಪದಿಂದಲೂ, ರಹಿತವಾದವುಗಳೋ ಮತ್ತು ಶ್ರೀಹರಿಗೆ ಸ್ವತಂತ್ರಕರ್ತೃತ್ವವನ್ನೂ ತನಗೆ ಅದರ ಅಭಾವವನ್ನೂ ತಿಳಿಯುವುದೆಂಬ ಜ್ಞಾನರೂಪವಾದ ಅಗ್ನಿಯಿಂದ ಯಾರ ಕರ್ಮಗಳು ದಹಿಸಲ್ಪಟ್ಟಿರುವುವೋ, ಅಂಥವನನ್ನು ಜ್ಞಾನಿಗಳು ತತ್ವಜ್ಞಾನಿಯೆಂದು ಕರೆಯುವರು.

ಅರ್ಜುನ— ಕಾಮಸಂಕಲ್ಪಗಳಿಂದಲೂ ವರ್ಜಿತವಾಗಿರಬೇಕೆಂದು ಹೇಳುವುದರಿಂದ ಕರ್ಮಸ್ವರೂಪವು ಪೂರ್ಣವಾಗಿ ಹೇಳಲ್ಪಟ್ಟಂತಾಯಿತೇ ?

ಶ್ರೀಕೃಷ್ಣ—ಇಲ್ಲ ; ಫಲದಲ್ಲಿ ಆಸಕ್ತಿಯನ್ನೂ ಬಿಡಬೇಕು. ಇಂಥದೇ ಫಲವನ್ನು ಸಾಧಿಸುವೆನೆಂಬ ಸಂಕಲ್ಪವನ್ನೂ, ಫಲಾಪೇಕ್ಷೆಯನ್ನೂ ಬಿಟ್ಟು ಕರ್ಮವನ್ನು ಆರಂಭಿಸಬಹುದು ; ಕರ್ತೃತ್ವಾಭಿಮಾನವನ್ನೂ ಬಿಟ್ಟಿರ ಬಹುದು. ಆದರೆ, ಭಗವದಿಚ್ಛೆಯಿಂದ ಪ್ರಾಪ್ತವಾಗಬಹುದಾದ ಫಲ ವನ್ನು ಭೋಗಿಸುವೆನೆಂಬ ಆಸಕ್ತಿಯುಳ್ಳವನಾಗಿರಬಹುದಲ್ಲವೇ ? ಅದನ್ನೂ ಪರಿತ್ಯಾಗ ಮಾಡಬೇಕು. ಕರ್ಮದಲ್ಲಿ ಮತ್ತು ಕರ್ಮಫಲದಲ್ಲಿ ಸಹ ಆಸಕ್ತಿ ಯಿರಕೂಡದು. ನಿತ್ಯತೃಪ್ತನೂ, ಅನ್ಯಾಶ್ರಯಶೂನ್ಯನೂ ಆದ ಪರ-ಮಾತ್ಮನ ಪ್ರತಿಬಿಂಬನು ತಾನೆಂದು ತಿಳಿದು, ಪರಮಾತ್ಮನನ್ನೇ ಆಶ್ರಯಿಸಿ, ಕರ್ಮದಲ್ಲಿ ಪ್ರವೃತ್ತನಾಗುವವನು, ನಿಜವಾಗಿಯೂ ಯಾವ ಕರ್ಮವನ್ನೂ ಮಾಡುವುದೇ ಇಲ್ಲ ; ಕರ್ಮಬಂಧಕ್ಕೂ ಒಳಗಾಗುವುದಿಲ್ಲ. (೨೦)

ಅರ್ಜುನ—ಹೇ ಸ್ವಾಮಿ! ಈ ವಿಧದಿಂದ ಕರ್ಮವನ್ನಾಚರಿಸಲು ಜೀವರು ಶಕ್ತರೇ ? ಕಾಮಸಂಕಲ್ಪಾದಿಗಳನ್ನು ಬಿಡುವುದು ಸಾಧ್ಯವೇ ? ಸಾಧ್ಯವಾಗುವುದಾದರೆ ಅದಕ್ಕೆ ಉಪಾಯವಾವುದು ?

ಶ್ರೀಕೃಷ್ಣ— ಹೇ ಪಾರ್ಥ! ಕಾಮಸಂಕಲ್ಪಾದಿಗಳನ್ನು ಬಿಟ್ಟು ಕರ್ಮಮಾಡಲಿಕ್ಕೆ ಸ್ವರೂಪಗತವಾದ ಅಶಕ್ತತೆಯು ಜೀವರಿಗಿಲ್ಲ. ಯೋಗ್ಯ-ಸಾಧನಗಳಿಂದ ತಮ್ಮಲ್ಲಿರುವ ಆ ಸಹಜಶಕ್ತಿಯನ್ನು ದೊರಕಿಸಿಕೊಳ್ಳ ಬೇಕು. ಅಂಥ ಸಾಧನಗಳನ್ನು ನಿರೂಪಿಸುವೆನು, ಕೇಳು.* ಮನಸ್ಸು ಮತ್ತು ಚಿತ್ತ, ಈ ಎರಡನ್ನು ಚೆನ್ನಾಗಿ ತನ್ನ ವಶಪಡಿಸಿಕೊಳ್ಳಬೇಕು. ಮನೋನಿಗ್ರಹವೇ ಕಾಮಾದಿತ್ಯಾಗಕ್ಕೆ ಮುಖ್ಯ ಸಾಧನವು. ಮನೋ-ನಿಗ್ರಹದಿಂದ ದೇಹೇಂದ್ರಿಯಾದಿಗಳಲ್ಲಿರುವ ಅಭಿಮಾನವನ್ನು ಪೂರ್ಣವಾಗಿ

***ಸೂಚನೆ.—**ಮನಸ್ಸು ಮತ್ತು ಚಿತ್ತಗಳೆಂಬವು ಅಂತಃಕರಣದ ವೃತ್ತಿಭೇದ ಗಳು. ಸಂಕಲ್ಪ, ವಿಕಲ್ಪಗಳೆಂಬ ವೃತ್ತಿಯು ಮನಸ್ಸೆಂದು ಕರೆಯಲ್ಪಡುವುದು. ಯಥಾರ್ಥ ಮತ್ತು ಅಯಥಾರ್ಥಗಳನ್ನು ಸಾಮಾನ್ಯವಾಗಿ ಗ್ರಹಿಸುವ ವೃತ್ತಿಯು ಚಿತ್ತವೆನಿಸುವುದು.

ತೊರೆಯಲು ಸಾಧ್ಯವಾಗುತ್ತದೆ. ನಿಷ್ಕಾಮನಾಗಿ ಶರೀರದ ಪೋಷಣೆ ಮಾತ್ರ ಅವಶ್ಯಕವಾದ ಕರ್ಮಗಳನ್ನು ಮಾಡಿದರೂ (ದೇಹೇಂದ್ರಿಯಗಳಿಂದಾಗುವ ಕರ್ಮಗಳನ್ನು ಮಾಡಿದರೂ) ಕರ್ಮಬಂಧವನ್ನು ಹೊಂದುವುದಿಲ್ಲ. (೨೧)

ಅರ್ಜುನ—ವಶವಾದ ಮನಸ್ಸು ಮತ್ತು ಚಿತ್ತಗಳುಳ್ಳವನ ಲಕ್ಷಣಗಳಾವುವು ?

ಶ್ರೀಕೃಷ್ಣ— ಪ್ರಯತ್ನವಿಲ್ಲದೇ ದೊರೆಯುವ ಲಾಭದಿಂದ ತೃಪ್ತನಾಗಿರುವನು. ಇನ್ನಷ್ಟು ಬೇಕೆಂಬ ಆಶೆಯಿಂದ ರಹಿತನಾಗಿರುವನು. ಸುಖ, ದುಃಖ, ಲಾಭಾಲಾಭಗಳೆಂಬ ದ್ವಂದ್ವಗಳನ್ನು ಮೀರಿರುವನು. ಅವು ಯಾವುವೂ ತನ್ನ ಅಧೀನಗಳಲ್ಲವೆಂದು ಅರಿತವನಾದ್ದರಿಂದ ಮನಃಖೇದವನ್ನು ಹೊಂದುವುದಿಲ್ಲ; ಎಂದರೆ ಮತ್ಸರವರ್ಜಿತನಾಗಿರುವನು.

ಅರ್ಜುನ—ದ್ವಂದ್ವಗಳನ್ನು ಮೀರಿದವನೆಂದರೇನು ?

ಶ್ರೀಕೃಷ್ಣ—ಸಿದ್ಧಿ, ಅಸಿದ್ಧಿಗಳಿಂದ ಹಿಗ್ಗುಕುಗ್ಗುಗಳಿಲ್ಲದವನೇ ದ್ವಂದ್ವಾತೀತನೆನಿಸುವನು. ಈ ಲಕ್ಷಣಗಳುಳ್ಳವನು ಕರ್ಮ ಮಾಡಿಯೂ ಅದರಿಂದ ಬಂಧಿತನಾಗುವುದಿಲ್ಲ. (೨೨) ಫಲಸ್ನೇಹರಹಿತನೂ, ದೇಹಾದ್ಯಭಿಮಾನಹೀನನೂ, ಸ್ವಾತಂತ್ರ್ಯಾಭಿಮಾನವಿಲ್ಲದವನೂ ಮತ್ತು ವಿಷ್ಣುಜ್ಞಾನದಲ್ಲಿಯೇ ಅಭಿನಿವಿಷ್ಟವಾದ ಚಿತ್ತವುಳ್ಳವನೂ ಮಾಡುವ ಸಕಲ ಕರ್ಮಗಳು, ವಿಷ್ಣುಪ್ರೀತ್ಯರ್ಥವಾಗಿಯೇ ಆಚರಿಸಲ್ಪಡುವುದರಿಂದ, ಬಂಧಕಫಲರಹಿತವಾಗುತ್ತವೆ. (೨೩)

ಅರ್ಜುನ—ವಿಷ್ಣುಜ್ಞಾನದಲ್ಲಿ ನಿರತವಾದ ಚಿತ್ತವುಳ್ಳವನೆಂದರೇನು? ಅನ್ಯವಸ್ತುಗಳನ್ನು ಲಕ್ಷಿಸದೇ ಸದಾ ವಿಷ್ಣುಧ್ಯಾನನಿರತನೆಂದರ್ಥವೇ ?

ಶ್ರೀ ಕೃಷ್ಣ—ಹಾಗಲ್ಲ, ಅರ್ಜುನ! ಆತನು ವಿಷ್ಣುಪ್ರೀತ್ಯರ್ಥವಾಗಿ ಕರ್ಮಗಳನ್ನು ಮಾಡುವನೆಂದಮೇಲೆ ಅನ್ಯವಸ್ತುಗಳನ್ನು ಗಮನಿಸದಿರುವುದು ಶಕ್ಯವೇ ? ಪರಮಾತ್ಮಜ್ಞಾನನಿರತನಾಗಿರುವುದೆಂದರೇನು ಎಂಬುದನ್ನು ವಿಶದಪಡಿಸುವೆನು, ಕೇಳು. ಆ ವಿಷ್ಣುಜ್ಞಾನನಿರತನು ಯಜ್ಞರೂಪ

ವಾದ ಒಂದು ಕರ್ಮವನ್ನು ಮಾಡುವನೆಂದು ತಿಳಿ. ಅಲ್ಲಿ ಉಪಯೋಗಿ ಸಲ್ಪಡುವ ಪಾತ್ರೆಗಳನ್ನೂ, ತುಪ್ಪವೇ ಮೊದಲಾದ ಹೋಮದ್ರವ್ಯಗಳನ್ನೂ ಅಗ್ನಿಯಲ್ಲಿ ಅರ್ಪಿಸಲ್ಪಡುವ ಹೋಮಗಳನ್ನೂ ಬ್ರಹ್ಮ (ವಿಷ್ಣು)ವೆಂದೇ ಭಾವಿಸುವನು. ಆ ಎಲ್ಲ ವಸ್ತುಗಳೇ ಬ್ರಹ್ಮಸ್ವರೂಪವೆಂದು ತಿಳಿಯುವುದಿಲ್ಲ. ಅವುಗಳ ಸ್ಥಿತಿ, ಜ್ಞಾನ ಮೊದಲಾದುವೆಲ್ಲವೂ ಬ್ರಹ್ಮಾಧೀನವೆಂದು ತಿಳಿಯುತ್ತಾನೆ. ಬ್ರಹ್ಮಾಧೀನವಾದ್ದರಿಂದ ಬ್ರಹ್ಮವೆಂದು ಅಭೇದದಿಂದ ವ್ಯವಹಾರವು. ಹೀಗೆಯೇ ಅಗ್ನಿ, ಹೋಮ, ಧ್ಯಾನಸಹಿತವಾದ ಕರ್ಮ, ಇವೆಲ್ಲವೂ ಪರಮಾತ್ಮಾಧೀನವೆಂದು ತಿಳಿದು, ಪರಮಾತ್ಮನಲ್ಲಿಯೇ ಅರ್ಪಿಸಿ ಆತನ ಪ್ರೀತಿಮಾತ್ರವನ್ನು ಇಚ್ಛಿಸುತ್ತಾನೆ. ಇಂತಹವನಿಂದಲೇ ಬ್ರಹ್ಮನು ಪ್ರಾಪ್ಯನು; ಇದೇ ಪರಮಾತ್ಮಜ್ಞಾನ ನಿರತತ್ವವು. ಸಕಲ ಕರ್ಮಗಳಲ್ಲಿ ಈ ಪ್ರಕಾರವಾದ ಅನುಸಂಧಾನವುಳ್ಳವನು ವಿಷ್ಣುಜ್ಞಾನನಿರತವಾದ ಚಿತ್ತವುಳ್ಳವನೆನಿಸುವನು. (೨೪)

ಅರ್ಜುನ—ಭಗವದಧೀನಕರ್ತೃತ್ವಾನುಸಂಧಾನಪೂರ್ವಕ, ಭಗವಂತನ ಪ್ರೀತಿಮಾತ್ರವನ್ನುದ್ದೇಶಿಸಿ ಆಚರಿಸಲ್ಪಡುವ ವರ್ಣಾಶ್ರಮೋಚಿತ ಕರ್ಮಗಳೇ 'ಕರ್ಮ'ವೆಂದು ಕರ್ಮಸ್ವರೂಪವಿವರಣೆಯಿಂದ ತಿಳಿದೆನು. ಕರ್ಮ-ಪ್ರಭೇದಗಳನ್ನು ತಿಳಿಯಲಿಚ್ಛಿಸುವೆನು, ದೇವ!

ಶ್ರೀ ಕೃಷ್ಣ—ಹೇ ಪಾರ್ಥ! ಕರ್ಮಸ್ವರೂಪವನ್ನು ಗ್ರಹಿಸಿದನಂತರ ಅದರ ಪ್ರಭೇದಗಳನ್ನು ತಿಳಿಯುವುದು ಕಷ್ಟವಲ್ಲ. ಯಜ್ಞಾದಿಭೇದದಿಂದ ಕರ್ಮವು ಬಹುಪ್ರಕಾರವಾದುದು. ಕೆಲವು ಯೋಗಿಗಳು ಭಗವದುಪಾಸನೆಯನ್ನೇ ಯಜ್ಞವೆಂದು ತಿಳಿದು ಅನುಷ್ಠಾನಮಾಡುತ್ತಾರೆ. ಮತ್ತೆ ಕೆಲವರು ಬ್ರಹ್ಮವೆಂಬ ಅಗ್ನಿಯಲ್ಲಿ, ಅಗ್ನಿಹೋತ್ರಾದಿಗಳೆಂಬ ಯಜ್ಞದಿಂದ (ವಿಷ್ಣುಪೂಜಾತ್ಮಕಕರ್ಮದಿಂದ) ಯಜ್ಞನಾಮಕ ಬ್ರಹ್ಮನನ್ನು ಪೂಜಿಸುತ್ತಾರೆ. ಯಜ್ಞನಾಮಕ ಬ್ರಹ್ಮನಿಂದ ಪ್ರೇರಿತರಾಗಿ (ಪರಮಾತ್ಮನ ಸ್ವತಂತ್ರ-ಕರ್ತೃತ್ವಾನುಸಂಧಾನವುಳ್ಳವರಾಗಿ) ಅಗ್ನಿಹೋತ್ರಾದಿ ಕರ್ಮಗಳನ್ನು ಬ್ರಹ್ಮನೆಂಬ ಅಗ್ನಿಯಲ್ಲಿ ಅರ್ಪಿಸುತ್ತಾರೆ. (೨೫) ಇನ್ನು ಕೆಲವರು ಶ್ರೋತ್ರಾದಿ ಜ್ಞಾನೇಂದ್ರಿಯಗಳನ್ನು ನಿಷಿದ್ಧವಿಷಯಗಳ ದೆಶೆಯಿಂದ

ನಿಯಮಿಸಿ ಆ **ಸಂಯಮ**ವನ್ನೇ ಭಗವತ್ಪೂಜೆಯೆಂದು ತಿಳಿಯುತ್ತಾರೆ. ಸರ್ವವೂ ಯಜ್ಞನಾಮಕ ಶ್ರೀಹರಿಯ ಅಧೀನವೆಂದೂ ತಮಗೆ ಕಿಂಚಿತ್ತಾದರೂ ಸ್ವಾತಂತ್ರ್ಯವಿಲ್ಲವೆಂದೂ ತಿಳಿಯುತ್ತಾರೆ. ಇವರು, ನಿಷಿದ್ಧವಿಷಯಗಳಿಂದ ಇಂದ್ರಿಯಗಳನ್ನು ಹಿಂದೆ ಸೆಳೆದುಕೊಳ್ಳುವುದೆಂಬ ಪ್ರತ್ಯಾಹಾರಗಳಿಂದ ಪರಮಾತ್ಮನನ್ನು ಪೂಜಿಸುವರು. ಇವರ ಇಂದ್ರಿಯನಿಯಮನವು ಬ್ರಹ್ಮಾರ್ಪಣರೂಪವಾದುದೇ. ಬೇರೆ ಕೆಲವರು, ಶಬ್ದಾದಿ ವಿಷಯಗಳನ್ನು ಶ್ರೋತ್ರಾದಿ ಇಂದ್ರಿಯಗಳೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಇವರು ವಿಷಯಗಳನ್ನೂ, ಇಂದ್ರಿಯಗಳನ್ನೂ, ತಮ್ಮನ್ನೂ ಸಹ ಭಗವದಧೀನವೆಂದು ತಿಳಿದು, ಶುಭ (ನಿಷಿದ್ಧವಲ್ಲದ) ವಿಷಯಗಳನ್ನು, ಭಗವತ್ಪೂಜೆಯೆಂಬ ಭಾವನೆಯಿಂದ, ಭೋಗಿಸುತ್ತಾರೆ. ಇವರಿಗೆ ಅದೇ ಯಜ್ಞವು. (೨೬).

ಅರ್ಜುನ—ಅದೆಷ್ಟುಪ್ರಕಾರವಾದುದೋ, ಕೃಷ್ಣ! ಯಜ್ಞವೆಂಬುದು? ಇನ್ನೂ ವಿವಿಧಗಳಾದ ಯಜ್ಞಗಳಿರುವುವೇ?

ಶ್ರೀ ಕೃಷ್ಣ—'ಕರ್ಮ' ವೆಂಬುದೆಲ್ಲವೂ ಯಜ್ಞರೂಪವಾದುದೇ! ಅದು ಅನಂತಪ್ರಕಾರವಾಗಿರುವುದು. ಮುಖ್ಯವಾದವುಗಳನ್ನು ಮಾತ್ರ ಹೇಳುತ್ತಿರುವೆನು. ಇನ್ನೂ ಕೆಲವು ಯೋಗಿಗಳು, ವಾಗಾದಿ ಪಂಚ ಕರ್ಮೇಂದ್ರಿಯಗಳ ವ್ಯಾಪಾರಗಳನ್ನೂ, ಪ್ರಾಣಾಪಾನ ಮೊದಲಾದ ಪಂಚ ಪ್ರಾಣಗಳ ವ್ಯಾಪಾರಗಳನ್ನೂ, ಮನೋನಿಯಮನವೆಂಬ ಸಾಧನಾಗ್ನಿಯಲ್ಲಿ ಹೋಮಮಾಡುತ್ತಾರೆ. ಈ ಅಗ್ನಿಯು ಸಾಮಾನ್ಯವಾದುದಲ್ಲ. ಭಗವದಧೀನತಾಜ್ಞಾನಪೂರ್ವಕವಾದ ವಿವೇಕದಿಂದ ಪ್ರಜ್ವಲಿಸುತ್ತಿರುವುದು. ಇದರಲ್ಲಿ ಅರ್ಪಿಸಲ್ಪಡುವ ಹೋಮವು ಭಗವಂತನನ್ನು ನಿಸ್ಸಂಶಯವಾಗಿ ಮುಟ್ಟುವುದು. (೨೭) ಆಜ್ಯಾದಿದ್ರವ್ಯದಿಂದ ಯಜ್ಞ ಮಾಡುವವರು ದ್ರವ್ಯಯಜ್ಞರು, ಎಂದರೆ ದ್ರವ್ಯಯಜ್ಞವುಳ್ಳವರು. ಚಾಂದ್ರಾಯಣಾದಿ ದೇಹಶೋಷಣಕರತಪಸ್ಸನ್ನು ಭಗವದರ್ಪಣಬುದ್ಧಿಯಿಂದ ಆಚರಿಸುವವರು ತಪೋಯಜ್ಞರು. ಯೋಗಯಜ್ಞರು ಧ್ಯಾನವನ್ನೇ ಭಗವತ್ಪೂಜೆಯೆಂದು ಆಚರಿಸುತ್ತಾರೆ. ವಿಷ್ಣುಪೂಜೆಯೆಂದು ಭಾವಿಸಿ ವೇದಾದಿ-

ಸಚ್ಛಾಸ್ತ್ರಗಳನ್ನು ಅಧ್ಯಯನಮಾಡುವವರು ಸ್ವಾಧ್ಯಾಯಯಜ್ಞರೆನಿಸು ವರು. ತೀಕ್ಷ್ಣವಾದ ವ್ರತಗಳುಳ್ಳ ಯತ್ನಶೀಲರಾದ ಕೆಲವರು ಶ್ರವಣಾದಿ ಗಳನ್ನು ಭಗವತ್ಪೂಜೆಯೆಂದು ಆಚರಿಸುವರು. ಇವರು ಜ್ಞಾನಯಜ್ಞ-ರೆನಿಸುವರು. (೨೮) ಪ್ರಾಣಾಯಾಮಪರರಾದ ಕೆಲವು ಯೋಗಿಗಳು ಪ್ರಾಣ, ಅಪಾನಗಳ (ಊರ್ಧ್ವಾಧಗಳೆಂಬ ಮೇಲಿನ ಹಾಗೂ ಕೆಳಗಿನ ಶ್ವಾಸಸಂಚಾರಗಳ) ಮಾರ್ಗಗಳನ್ನು ನಿರೋಧಿಸಿ, ಅಪಾನವಾಯುವಿನಲ್ಲಿ ಪ್ರಾಣವಾಯುವನ್ನೂ, ಪ್ರಾಣವಾಯುವಿನಲ್ಲಿ ಅಪಾನವನ್ನೂ ಪ್ರವೇಶ ಗೊಳಿಸುತ್ತಾರೆ, ಎಂದರೆ ಶ್ವಾಸನಿರೋಧದಿಂದ ಕುಂಭಕಸ್ಥರಾಗುತ್ತಾರೆ. ಇವರಿಗೆ ಶ್ವಾಸನಿರೋಧವೇ ಭಗವತ್ಪೂಜೆಯು. (೨೯) ಮತ್ತೂ ಕೆಲವರು ಶ್ರೋತ್ರಾದಿ ಇಂದ್ರಿಯವೃತ್ತಿಗಳನ್ನು ಇಂದ್ರಿಯಗಳಲ್ಲಿ ಹೋಮಮಾಡುತ್ತಾರೆ ಎಂದರೆ ಇಂದ್ರಿಯವೃತ್ತಿಗಳನ್ನು ಸಂಕೋಚಗೊಳಿಸುತ್ತಾರೆ; ಇಂದ್ರಿಯಗಳ ವಿಷಯಭೋಗಶಕ್ತಿಯನ್ನು ಕಡಿಮೆ ಮಾಡಲಿಕ್ಕಾಗಿ ಆಹಾರಾದಿ ನಿಯಮ ಗಳನ್ನು ಭಗವದರ್ಪಣಬುದ್ಧಿಯಿಂದ ಆಚರಿಸುತ್ತಾರೆ; ವಾಗಾದಿ-ಇಂದ್ರಿಯಾಭಿಮಾನಿ ದೇವತೆಗಳನ್ನು ಮನೋಭಿಮಾನಿಗಳೇ ಮೊದಲಾದ ಉತ್ತಮ ದೇವತೆಗಳಲ್ಲಿ ಚಿಂತಿಸುತ್ತಾರೆ, ಎಂದರೆ ಅವರ ಅಧೀನತ್ವವನ್ನು ಧ್ಯಾನಿಸುತ್ತಾರೆ. ಹೀಗೆ ವಿವಿಧ ಯಜ್ಞಗಳುಳ್ಳವರಾದ ಇವರೆಲ್ಲರೂ ಯಜ್ಞ ವೇತ್ತೃಗಳೇ ಮತ್ತು ಯಜ್ಞಾನುಷ್ಠಾನದಿಂದ ಕಳೆದುಕೊಂಡವರು. (೩೦)

ಅರ್ಜುನ—ಯಜ್ಞಪ್ರಭೇದಗಳನ್ನು ತಿಳಿದೆನು, ಪ್ರಭೋ! ಯಜ್ಞ-ವನ್ನು ಅನುಷ್ಠಾನ ಮಾಡುವವರಿಗೂ, ಮಾಡದವರಿಗೂ ಇರುವ ಫಲಭೇದ ವನ್ನು ತಿಳಿಯಲಿಚ್ಛಿಸುವೆನು.

ಶ್ರೀ ಕೃಷ್ಣ—ಯಜ್ಞದಲ್ಲಿ ದೇವತೆಗಾಗಿ ದತ್ತವಾದ ಹವಿಃಶೇಷವು ಅಮೃತವೆನಿಸುತ್ತದೆ, ಅದನ್ನು ಸ್ವೀಕರಿಸುವವರು (ಭೋಗಿಸುವವರು) ಎಂದರೆ ಯಜ್ಞಾನುಷ್ಠಾನಮಾಡುವವರು ಅನಾದಿನಿತ್ಯನಾದ ಪರಬ್ರಹ್ಮ ನನ್ನು ಹೊಂದುತ್ತಾರೆ. ಅಯಜ್ಞನಿಗೆ, ಎಂದರೆ ಯಾವ ಯಜ್ಞವನ್ನೂ ಆಚರಿಸದವನಿಗೆ ಈ ಲೋಕದಲ್ಲಿ ಸಹ ಅಲ್ಪ ಸುಖವೂ ದೊರೆಯುವುದಿಲ್ಲ. ಹೇ ಕುರುಶ್ರೇಷ್ಠ! ಸ್ವರ್ಗಾದಿಸುಖಪ್ರಚುರವಾದ ಅನ್ಯಲೋಕಗಳ ಪ್ರಾಪ್ತಿ

ಯಂತೂ ಇಲ್ಲವೇ ಇಲ್ಲ, ಆದ್ದರಿಂದ ಯಜ್ಞಾನುಷ್ಠಾನವು ಸರ್ವಥಾ ಕರ್ತವ್ಯವೆಂದು ತಿಳಿ. (೩೧) ಹೀಗೆ ಮಾನಸಿಕ, ವಾಚನಿಕ ಮತ್ತು ಕಾಯಕಭೇದದಿಂದ ಬಹುಪ್ರಕಾರಗಳಾದ ಯಜ್ಞಗಳು ಶ್ರೀಹರಿಯ ಮುಖ ದಲ್ಲಿ ವಿಸ್ತಾರಗೊಂಡಿವೆ. ಎಂದರೆ ಆತನು ಸರ್ವಯಜ್ಞಭೋಕ್ತನಾದ್ದರಿಂದ ಸರ್ವಯಜ್ಞಗಳಿಂದ ಆತನೇ ಆರಾಧ್ಯನು.

ಅರ್ಜುನ—ಯಜ್ಞಗಳು ಜ್ಞಾನಯಜ್ಞಾದಿರೂಪದಿಂದ ಬಹುಪ್ರಕಾರ ಗಳಾಗಿರಲು ಜ್ಞಾನಯಜ್ಞವನ್ನೇ ಅನುಷ್ಠಾನ ಮಾಡಬಹುದಲ್ಲವೇ? ಕರ್ಮಾತ್ಮಕಯಜ್ಞವಾದ ಈ ಯುದ್ಧದಿಂದೇನು?

ಶ್ರೀ ಕೃಷ್ಣ—ಇದೇನು, ಅರ್ಜುನ! ಹೀಗೆ ಶಂಕಿಸುವಿ? ಪೂರ್ವೋಕ್ತ ಸರ್ವಯಜ್ಞಗಳೂ, ಮಾನಸಿಕ, ವಾಚನಿಕ, ಕಾಯಕಭೇದದಿಂದ ಕರ್ಮಾ ತ್ಮಕವಾದವುಗಳೇ ಅಲ್ಲವೇ? ಅವುಗಳ ಮಧ್ಯೆ ಸ್ವವಿಹಿತಕರ್ಮರೂಪವಾದ ಯುದ್ಧವೇ ನಿನಗೆ ಉಚಿತವಾದ ಯಜ್ಞವು. ಸಂಸಾರದಿಂದ ಮುಕ್ತನಾಗಲು ಇಚ್ಛಿಸುವೆಯಾದರೆ ಅದರಿಂದಲೇ ನಿನ್ನ ಗತಿಯೆಂದು ತಿಳಿ. ಉಪಾಸನಾದಿ ಜ್ಞಾನಯಜ್ಞಗಳೂ ಕರ್ಮಾತ್ಮಕವೇ. ಆದರೂ ಯುದ್ಧವನ್ನು ಬಿಡುವುದ ರಿಂದ ವಿಹಿತಧರ್ಮತ್ಯಾಗವೇ ಪ್ರಾಪ್ತವಾಗುವುದಲ್ಲದೇ ಕರ್ಮತ್ಯಾಗವಲ್ಲ. ಆದ್ದರಿಂದ ಎಲ್ಲ ಯಜ್ಞಗಳೂ ಕರ್ಮದಿಂದಲೇ ಹುಟ್ಟುವುವೆಂದು ತಿಳಿದು, ವಿಹಿತವನ್ನಾಚರಿಸಿ ಮುಕ್ತನಾಗು. (೩೨)

ಅರ್ಜುನ—ಉಕ್ತವಾದ ಬಹುವಿಧ ಯಜ್ಞಗಳಲ್ಲಿ ಶ್ರೇಷ್ಠವಾದುದು ಯಾವುದು ಮತ್ತು ಅದರಿಂದ ಲಭಿಸುವ ಮುಖ್ಯ ಫಲವೇನು?

ಶ್ರೀ ಕೃಷ್ಣ—ಭಿನ್ನರಾದ ತಾರತಮ್ಯೋಪೇತರಾದ ಅಧಿಕಾರಿಗಳಿರು ವರು. ಅವರವರ ಯೋಗ್ಯತಾನುಸಾರವಾದ ಯಜ್ಞವು ಅವರವರಿಗೆ ಉಚಿತವಾಗುವುದು. ಉತ್ತಮಾಧಿಕಾರಿಗಳಿಗೆ ಉಚಿತವಾದ ಯಜ್ಞವೇ ಶ್ರೇಷ್ಠವು. ಆದರೆ ಎಲ್ಲ ಯಜ್ಞಗಳ ಮುಖ್ಯ ಫಲವು ಜ್ಞಾನವೇ; ಜ್ಞಾನವು ಲಭಿಸಿದರೇ ಯಜ್ಞವು ಸಫಲವು. ಹೇ ಪರಂತಪ! ದೇವತೋದ್ದೇಶದಿಂದ ಮಾಡಲ್ಪಡುವ ಆಜ್ಯಾದಿದ್ರವ್ಯತ್ಯಾಗರೂಪವಾದ ಯಜ್ಞಕ್ಕಿಂತ ಜ್ಞಾನ ಯಜ್ಞವೇ ಶ್ರೇಷ್ಠವು. ಏಕೆಂದರೆ, ಕರ್ಮಸಮೃದ್ಧಿಗೆ ಅವಶ್ಯಕವಾದ

ಉಪಾಸನಾದಿ ಅಂಗಸಹಿತವಾದ ಎಲ್ಲ ಕರ್ಮವೂ ಜ್ಞಾನಫಲದಲ್ಲಿ ಅಂತರ್ಭವಿಸುತ್ತದೆ. (೩೩) ಹೇ ಪಾರ್ಥ! ಸಕಲ ಕರ್ಮಗಳಿಗೆ ಜ್ಞಾನವೇ ಫಲವಾದ್ದರಿಂದ ಜ್ಞಾನಸಂಪಾದನೆಯೇ ನಿನ್ನ ಗುರಿಯಾಗಿರಲಿ. ತತ್ತ್ವದರ್ಶಿಗಳಾದ ಜ್ಞಾನಿಗಳನ್ನು ನಮಸ್ಕರಿಸಿ, ಸೇವಿಸಿ ಪ್ರಸನ್ನೀಕರಿಸಿಕೊಂಡು ಪ್ರಶ್ನೆಮಾಡಿದರೆ ಜ್ಞಾನಜನಕವಾದ ಶಾಸ್ತ್ರವನ್ನು ಉಪದೇಶಿಸುತ್ತಾರೆ. ತಿಳಿಯಬೇಕಾದ ಮುಖ್ಯಾರ್ಥವನ್ನು ಅವರಿಂದ ತಿಳಿ.* (೩೪) ಜ್ಞಾನದ ಉದಯವಾಯಿತೆಂದರೆ ಈ ತೆರನಾದ ಬಂಧುವಿಷಯಕವಾದ ಮೋಹವು ಸರ್ವಥಾ ಉಂಟಾಗದು. ಹೇ ಪಾಂಡವ! ಸರ್ವಾಂತರ್ಯಾಮಿಯಾದ ನನ್ನನ್ನು ಸಕಲ ಪ್ರಾಣಿಗಳೂ ಆಶ್ರಯಿಸಿಕೊಂಡಿರುವುವೆಂದು ಮನಗಾಣುವಿ; ಸರ್ವತ್ರವ್ಯಾಪ್ತನಾದ ನನ್ನಲ್ಲಿ ಎಲ್ಲವನ್ನೂ ನೋಡುವಿ. (೩೫) ಯುದ್ಧವು ನಿನಗುಚಿತವಾದ ಯಜ್ಞವು. ಅದರಿಂದ ಪಾಪ ಬರುವುದೆಂಬ ಶಂಕೆಯನ್ನು ಬಿಡು. ಎಲ್ಲವಿಧ ಪಾಪಗಳನ್ನು ಮಾಡಿದ ಪಾಪಿಗಳಿಗಿಂತ ಅತಿಶಯ ಪಾಪಕಾರಿಯಾದರೂ ಯಜ್ಞಲಭ್ಯವಾದ ಜ್ಞಾನವೆಂಬ ನಾವೆಯು ನಿನ್ನನ್ನು ಎಲ್ಲ ಪಾಪಗಳಿಂದ ಪಾರಗಾಣಿಸುವುದು. (೩೬) ಪ್ರಜ್ವಲಿಸುವ ಅಗ್ನಿಯು ಒಣ ಕಟ್ಟಿಗೆಯನ್ನು (ಸಮಿತ್ತುಗಳನ್ನು) ಸುಟ್ಟು ಬೂದಿಮಾಡುವಂತೆ ಜ್ಞಾನವೆಂಬ ಅಗ್ನಿಯು (ಪ್ರಾರಬ್ಧೇತರ) ಸಕಲ ಕರ್ಮಗಳನ್ನೂ ನಾಶಮಾಡುತ್ತದೆ. (೩೭) ಹೇ ಅರ್ಜುನ! ಜಗತ್ತಿನಲ್ಲಿ ಜ್ಞಾನಕ್ಕೆಸದೃಶವಾದ ಪವಿತ್ರವಸ್ತುವಿಲ್ಲ. ಜ್ಞಾನೋಪಾಯವಾದ ಯೋಗವನ್ನು ಚೆನ್ನಾಗಿ ಸಾಧಿಸುವವನು ಬಹುಕಾಲಕ್ಕೆ ತನ್ನಲ್ಲಿಯೇ ಜ್ಞಾನವನ್ನು ಹೊಂದುವನು. (೩೮)

---

*ಸೂಚನೆ— ಅರ್ಜುನನು ಜ್ಞಾನಿಯಾದರೂ, ಪ್ರಾಪ್ತವಾದ ಜ್ಞಾನತಿರೋಭಾವದ ನಿವೃತ್ತಿಗಾಗಿ ಉಪದೇಶವೆಂದು ತಿಳಿಯಬೇಕು. ಜ್ಞಾನಾರ್ಥವಾಗಿ ಅರ್ಜುನನು ಬೇರೊಬ್ಬ ತತ್ವಜ್ಞಾನಿಯ ಬಳಿಗೆ ಹೋಗಿ ಸೇವಿಸಲೆಂಬುದು ಶ್ರೀಕೃಷ್ಣನ ತಾತ್ಪರ್ಯವಲ್ಲ. ಜ್ಞಾನವಿಜ್ಞಾನಗಳನ್ನು ನಿನಗೆ ಉಪದೇಶಿಸುವೆನೆಂದು ಪ್ರತಿಜ್ಞೆಮಾಡಿ ಅರ್ಜುನನಿಗೆ ತಾನೇ ಮುಂದೆ ವಿಸ್ತಾರವಾಗಿ ಉಪದೇಶಿಸುವುದರಿಂದ, ಶರಣಾಗತನಾಗಿರುವ ನಿನಗೆ ನಾನು ಉಪದೇಶಿಸುವೆನೆಂಬುದೇ ತಾತ್ಪರ್ಯವು. ಇತರ ಜಿಜ್ಞಾಸುಗಳು ಜ್ಞಾನಿಗಳನ್ನು ಸೇವಿಸಿ ಉಪದೇಶವನ್ನು ಪಡೆಯಬೇಕೆಂಬುದು ಸೂಚಿತಾರ್ಥವು.

ಹಾಗೆ ತನ್ನಲ್ಲಿ ವಿದ್ಯಮಾನವಾದ ಜ್ಞಾನದ ಪೂರ್ಣವಿಕಾಸವಾಗಬೇಕಾದ್ದ ಆಸ್ತಿಕ್ಯಬುದ್ಧಿಯುಳ್ಳವನಾಗಬೇಕು; ನನ್ನಲ್ಲಿ ಏಕನಿಷ್ಠೆಯನ್ನು ಹೊಂದಿರಬೇಕು; ಜಿತೇಂದ್ರಿಯನಾಗಿರಬೇಕು. ಜ್ಞಾನಪ್ರಾಪ್ತಿಗೆ ಇವು ಅತ್ಯವಶ್ಯವಾಗಿರುವ ಅಂತರಂಗಸಾಧನಗಳು. ಜ್ಞಾನಲಾಭವಾಯಿತೆಂದರೆ ಪರಮಶಾಂತಿರೂಪವಾದ ಮೋಕ್ಷವು ಹೆಚ್ಚು ವಿಳಂಬವಿಲ್ಲದೇ (ಪ್ರಾರಬ್ಧಕರ್ಮವನ್ನು ಭೋಗಿಸಿದನಂತರ) ದೊರಕುವುದು. (೩೯) ಜ್ಞಾನ ಮತ್ತು ಜ್ಞಾನಸಾಧನ (ಯೋಗ) ಗಳ ಅಭಾವದಿಂದ ತದ್ವಿರೋಧಿಯಾದ ವಿಪರೀತಜ್ಞಾನವೂ, ನರಕಾದಿ ಅನಿಷ್ಟಗಳೂ ಪ್ರಾಪ್ತವಾಗುವುವು. ಅಜ್ಞನೂ, ಶ್ರದ್ಧಾರಹಿತನೂ, ಸಂಶಯಾತ್ಮನೂ ನಷ್ಟರಾಗುವರು. (ಅನರ್ಥಗಳನ್ನು ಹೊಂದುವರು). ತತ್ವವಿಷಯಕವಾದ ಸಂಶಯಮನಸ್ಕನಿಗೆ ಇಹಲೋಕದಲ್ಲಿ ಯಾವ ಸುಖವೂ ಲಭಿಸದು; ಸ್ವರ್ಗಾದಿಗಳೂ ದೊರೆಯುವುದಿಲ್ಲ. ಹೆಚ್ಚೇನು, ಆತನಿಗೆ ಸುಖವು ಎಲ್ಲಿಯೂ ಲಭಿಸುವುದಿಲ್ಲ. (೪೦) ಭಗವಂತನಲ್ಲಿ ಸ್ಥಾಪಿತವಾದ ಮನಸ್ಸುಳ್ಳ, ಆತನಲ್ಲಿ ಅರ್ಪಿಸಲ್ಪಟ್ಟ ಸಕಲ ಕರ್ಮಗಳುಳ್ಳ, ಜ್ಞಾನದಿಂದ ಸಕಲ ಸಂಶಯಗಳನ್ನು ಪರಿಹರಿಸಿಕೊಂಡ ಭಗವದ್ಭಕ್ತನನ್ನು, ಹೇ ಧನಂಜಯ! ಯಾವ ಕರ್ಮಗಳೂ ಬಂಧಿಸುವುದಿಲ್ಲ; ಆತನು ನಿಶ್ಚಯವಾಗಿಯೂ ಮುಕ್ತನಾಗುವನು. (೪೧) ಆದ್ದರಿಂದ ಹೇ ಭರತಶ್ರೇಷ್ಠ! ಅಜ್ಞಾನದಿಂದ ಹುಟ್ಟಿದ ಹೃದ್ಗತವಾದ ನಿನ್ನ ಸಂಶಯವನ್ನು ಜ್ಞಾನವೆಂಬ ಖಡ್ಗದಿಂದ ತುಂಡರಿಸಿ ಒಗೆದು, ಕರ್ಮಾನುಷ್ಠಾನುರೂಪಯೋಗದಲ್ಲಿ ಉದ್ಯುಕ್ತನಾಗು. ಎದ್ದು ನಿಲ್ಲು, ಯುದ್ಧದಲ್ಲಿ ತೊಡಗು. (೪೨)

ನಾಲ್ಕನೇ ಅಧ್ಯಾಯವು ಮುಗಿದುದು.

ಅಧ್ಯಾಯ ೫

[ಎರಡನೇ ಅಧ್ಯಾಯದಲ್ಲಿ ಸಂಕ್ಷೇಪವಾಗಿ ಹೇಳಲ್ಪಟ್ಟು, ಮೂರನೇ ಅಧ್ಯಾಯದ ಪ್ರಾರಂಭದಲ್ಲಿ ಸ್ಪಷ್ಟಗೊಳಿಸಲ್ಪಟ್ಟ ಫಲಕಾಮನಾದಿತ್ಯಾಗ-ಪೂರ್ವಕ ಈಶ್ವರಾರ್ಪಣಬುದ್ಧಿಯುಕ್ತವಾದ ವರ್ಣಾಶ್ರಮವಿಹಿತಕರ್ಮಾ-ನುಷ್ಠಾನವೆಂಬ ಕರ್ಮಯೋಗವು ಈ ಅಧ್ಯಾಯದಲ್ಲಿ ವಿಸ್ತರಿಸಲ್ಪಡುತ್ತದೆ. ಕಾಮಸಂಕಲ್ಪವರ್ಜನ ಮತ್ತು ಉಕ್ತಕರ್ಮಾನುಷ್ಠಾನಗಳೆಂಬುವು ಕರ್ಮ-ಯೋಗದ ಮುಖ್ಯವಾದ ಎರಡು ಅಂಗಗಳು. ಅವುಗಳ ವಿವರವನ್ನು ಈ ಅಧ್ಯಾಯದಿಂದ ತಿಳಿಯಬೇಕು.]

ಅರ್ಜುನ— ಹೇ ಕೃಷ್ಣ! 'ಯದೃಚ್ಛಾಲಾಭಸಂತುಷ್ಟನಾಗು, ಕಾಮಾದಿಗಳನ್ನು ಬಿಡು' ಎಂದು ಮುಂತಾಗಿ ಉಪದೇಶಿಸುವುದರಿಂದ ಸನ್ಯಾಸವನ್ನೂ, 'ಈಶ್ವರಾರ್ಪಣಬುದ್ಧಿಯಿಂದ ವಿಹಿತಕರ್ಮಗಳನ್ನಾಚರಿಸು' ಎಂಬುದರಿಂದ ಕರ್ಮಯೋಗವನ್ನೂ ಪ್ರಶಂಸಿಸುತ್ತಿರುವಿ. ಈ ಎರಡರಲ್ಲಿ ಹೆಚ್ಚು ಶ್ರೇಯಸ್ಕರವಾದ ಒಂದನ್ನು ನಿಶ್ಚಯಿಸಿ ಹೇಳು. ಸನ್ಯಾಸವೇ ಅಧಿಕವಾದರೆ ಅದನ್ನೇ ಆಶ್ರಯಿಸುವೆನು; ತದ್ವಿರೋಧಿಯಾದ ರಾಗದ್ವೇಷಯುತವಾದ ಯುದ್ಧರೂಪಕರ್ಮಯೋಗದಿಂದೇನು? ಸನ್ಯಾಸವು ಯತ್ಯಾಶ್ರಮಿಗಳಿಗೂ ಯೋಗವು ಗೃಹಸ್ಥಾಶ್ರಮಿಗಳಿಗೂ ಪ್ರಶಸ್ತವಲ್ಲವೇ? ಸನ್ಯಾಸ ಯೋಗಗಳೆರಡೂ ಒಬ್ಬನಲ್ಲಿರಬಹುದೆಂದು ತಿಳಿಯುವುದು ಅಯುಕ್ತವೆನಿಸುವುದು. ಆದ್ದರಿಂದ ಈ ಎರಡರಲ್ಲಿ ಯಾವುದು ಶ್ರೇಷ್ಠವೆಂಬುದನ್ನು ನಿರ್ಣಯಮಾಡಿಕೊಡು, ದೇವ! (೧)

ಶ್ರೀ ಕೃಷ್ಣ—ಮೊದಲು, ಸನ್ಯಾಸ ಮತ್ತು ಕರ್ಮಯೋಗಗಳ ಸ್ವರೂಪವನ್ನು ಹೇಳುವೆನು, ಕೇಳು. ಸನ್ಯಾಸವೆಂದರೆ ಕರ್ಮತ್ಯಾಗವಲ್ಲ ಮತ್ತು ಸನ್ಯಾಸಪದವು ಯತಿಪರವಲ್ಲ. ಹಾಗೆಯೇ ಯೋಗವೆಂದರೆ ಕೇವಲ ಕರ್ಮಾನುಷ್ಠಾನವಲ್ಲ ಮತ್ತು ಯೋಗಪದವು ಗೃಹಸ್ಥಪರವೂ ಅಲ್ಲ. ಅವುಗಳಲ್ಲಿ ಯಾವುದೊಂದು ಶ್ರೇಷ್ಠವೆಂಬ ಪ್ರಶ್ನೆಯೂ ಸರಿಯಲ್ಲ. ಕಾಮಾದಿ-ವರ್ಜನ ಮತ್ತು ಕರ್ಮಾನುಷ್ಠಾನವೆಂಬ ಅರ್ಥವುಳ್ಳ ಈ ಪದಗಳು ಒಬ್ಬ

ಪುರುಷನಲ್ಲಿ ಏಕಕಾಲದಲ್ಲಿ ಇರಲು ಯೋಗ್ಯವಾದ ಧರ್ಮಗಳನ್ನು ಹೇಳು ತ್ತವೆ. ಎರಡೂ ಮಿಳಿತವಾಗಿಯೇ (ಕೂಡಿಕೊಂಡೇ) ಆತ್ಯಂತಿಕಶ್ರೇಯ ಸ್ಸನ್ನು (ಮುಕ್ತಿಯನ್ನು) ದೊರಕಿಸುತ್ತವೆ, ಆದ್ದರಿಂದ ಸಹ ಅವುಗಳಲ್ಲಿ ಯಾವುದು ಶ್ರೇಷ್ಠವೆಂಬ ಪ್ರಶ್ನೆಯು ವ್ಯರ್ಥವೇ ಸರಿ. ಹೀಗಿದ್ದರೂ, ಕರ್ಮಾನುಷ್ಠಾನವಿಷಯದಲ್ಲಿ ಕಾಮಕ್ರೋಧದ್ವೇಷಾದಿಗಳನ್ನು ಬಿಡುವ ದೆಂಬ ಸನ್ಯಾಸಕ್ಕಿಂತಲೂ ಭಗವದರ್ಪಣಬುದ್ಧಿಯಿಂದ ವಿಹಿತ ಕರ್ಮಗಳ ನ್ನಾಚರಿಸುವುದೆಂಬ ಕರ್ಮಯೋಗವು ಶ್ರೇಷ್ಠವೆನಿಸುವುದು. ಹೀಗೆಂದು ಹೇಳಿದುದು, ಅವುಗಳ ಸ್ವರೂಪಮಾತ್ರವನ್ನು ವಿವಕ್ಷಿಸಿ ಮಾಡಿದ ನಿರೂಪಣೆಯು. ಒಂದನ್ನು ಬಿಟ್ಟು ಇನ್ನೊಂದರಿಂದ ಮುಕ್ತಿಯು ಸರ್ವಥಾ ದೊರೆಯುವುದಿಲ್ಲ. (೨)

ಅರ್ಜುನ—ಸನ್ಯಾಸವು ಯತಿಪರವಲ್ಲದಿದ್ದರೆ, ಅದರ ಮುಖ್ಯಾರ್ಥ ವಾವುದು?

ಶ್ರೀಕೃಷ್ಣ—ಸನ್ಯಾಸಶಬ್ದಾರ್ಥವು ನಿನಗೆ ತಿಳಿದಿದೆ; ನಾನು ಹೇಳಿರು ವೆನು. ಕಾಮಾದಿತ್ಯಾಗರೂಪವಾದ ಮನೋಭಾವವೇ ಸನ್ಯಾಸವು. ಆದರೂ ಅದು ಮುಕ್ತಿಸಾಧಕವೆಂಬುದನ್ನು ಪ್ರತಿಪಾದಿಸುವುದಕ್ಕಾಗಿ, ಪುನಃ ಅದರ ಮುಖ್ಯಾರ್ಥವನ್ನು ಜ್ಞಾಪಿಸುವೆನು. ದ್ವೇಷ, ಆಕಾಂಕ್ಷೆ ಮೊದಲಾದವು ಗಳನ್ನು ಬಿಟ್ಟವನು (ಉಪಲಕ್ಷಣದಿಂದ ಕಾಮ್ಯಕರ್ಮಪರಿತ್ಯಾಗಿಯೂ) ನಿತ್ಯಸನ್ಯಾಸಿಯೆನಿಸುವನು. ರಾಗದ್ವೇಷಾದಿದ್ವಂದ್ವರಹಿತನಾದ ಪುರುಷನು (ಸನ್ಯಾಸಿಯು) ಅನಾಯಾಸವಾಗಿ ಕರ್ಮಬಂಧದಿಂದ (ಅತಏವ ಸಂಸಾರ ದಿಂದಲೂ) ಬಿಡುಗಡೆ ಹೊಂದುವನು. (೩)

ಅರ್ಜುನ—ವಿಷಯವೈರಾಗ್ಯವಿಲ್ಲದೇ ತತ್ವಜ್ಞಾನವು ಲಭಿಸುವುದಿಲ್ಲ ವೆಂಬುದನ್ನು ಗ್ರಹಿಸಬಹುದು. ವೈರಾಗ್ಯಶಬ್ದದಿಂದ ಹೇಳಲ್ಪಡುವುದೇ ಕಾಮಾದಿವರ್ಜನರೂಪಸನ್ಯಾಸವೆಂದು ತಿಳಿಯುತ್ತೇನೆ. ಜ್ಞಾನೋತ್ಪತ್ತಿಗೆ ಸನ್ಯಾಸವು ಅತ್ಯವಶ್ಯಕವೆಂದು ಸಾರಿ ಕರ್ಮಾಚರಣೆಯನ್ನು ಶ್ರೇಯಸ್ಕರ ವೆಂದು ತಿಳಿಯುವ ಕರ್ಮಿಗಳನ್ನು ಭ್ರಾಂತರೆಂದು ನಿಂದಿಸುವ ಶ್ರುತಿ ಸ್ಮೃತಿ

ಗಳು ಹೇರಳವಾಗಿವೆ. ಹೀಗಿರಲು ಸನ್ಯಾಸಕ್ಕಿಂತಲೂ ಕರ್ಮಯೋಗವೇ ಶ್ರೇಷ್ಠವೆಂದು ಹೇಳುವ ನಿನ್ನ ಉಪದೇಶವನ್ನು ಹೇಗೆ ಮೆಚ್ಚಲಿ ಸ್ವಾಮಿ!

ಶ್ರೀಕೃಷ್ಣ—ಸನ್ಯಾಸದಂತೆ ಕರ್ಮಯೋಗವೂ ಜ್ಞಾನೋತ್ಪತ್ತಿಗೆ ಅತ್ಯವಶ್ಯಕವೆಂದು ತಿಳಿ. ಸಾಂಖ್ಯವೆಂದರೆ ಜ್ಞಾನವು; ಯೋಗವೆಂದರೆ ಭಗವದರ್ಪಣ ಬುದ್ಧಿಯಿಂದ ವಿಹಿತ ಕರ್ಮಗಳನ್ನಾಚರಿಸುವುದು. ಇವೆರಡೂ ಸಾಧ್ಯಸಾಧನರೂಪಸಂಬಂಧವುಳ್ಳವುಗಳು. ಯೋಗದಿಂದ ಜ್ಞಾನವು ಸಿದ್ಧಿಸುವುದು. ಅವಿವೇಕಿಗಳು ಮಾತ್ರ ಇವೆರಡನ್ನು ಸಾಧ್ಯಸಾಧನ-ಸಂಬಂಧವಿಲ್ಲದ ಪ್ರತ್ಯೇಕವಸ್ತುಗಳೆಂದು ಹೇಳುತ್ತಾರೆ; ಪಂಡಿತರಲ್ಲ. ಆದ್ದರಿಂದ ಸನ್ಯಾಸಯುಕ್ತವಾದ ಕರ್ಮಯೋಗವೇ ಜ್ಞಾನವನ್ನು ದೊರಕಿಸುವುದೆಂದು ತಿಳಿ. ಕಾಮ್ಯಕರ್ಮಗಳಲ್ಲಿ ಆಸಕ್ತರಾದ ಕರ್ಮಿಗಳ ನಿಂದೆಯನ್ನು ನಿಷ್ಕಾಮಕರ್ಮಾನುಷ್ಠಾನವೆಂಬ ಯೋಗದ ನಿಂದೆಯೆಂದು ಭ್ರಮಿಸದಿರು. ಧ್ಯಾನಾದಿಪ್ರಚುರಜ್ಞಾನೋಪಾಯವುಳ್ಳ ಜ್ಞಾನಮಾರ್ಗವನ್ನಾಗಲಿ, ಕರ್ಮಪ್ರಾಚುರ್ಯವುಳ್ಳ ಕರ್ಮಮಾರ್ಗವನ್ನಾಗಲಿ, ಯಾವುದೊಂದನ್ನು ಚೆನ್ನಾಗಿ ಅನುಷ್ಠಾನಮಾಡುವವನು ಸಹ ಎರಡರ ಫಲವಾದ ತತ್ವಜ್ಞಾನವನ್ನು ನಿಶ್ಚಯವಾಗಿ ಹೊಂದುವನು. (೪).

ಅರ್ಜುನ—ಹೇ ಕೃಷ್ಣ! ಹೀಗೆ ಹೇಳುವುದರಿಂದ ಜ್ಞಾನಕರ್ಮ-ಗಳೆರಡೂ ಒಂದು ಫಲಕ್ಕೆ (ತತ್ವಜ್ಞಾನಕ್ಕೆ) ಸ್ವತಂತ್ರಕಾರಣಗಳೆಂದು ಹೇಳಿದಂತಾಗುವುದಲ್ಲದೇ ಕರ್ಮಯೋಗಕ್ಕೆ ಜ್ಞಾನಸಾಧನತ್ವವು ಹೇಗೆ ಸಿದ್ಧವಾಗುವುದು?

ಶ್ರೀಕೃಷ್ಣ—ಜ್ಞಾನಯೋಗಿಗಳಿಂದ ಹೊಂದಲ್ಪಡುವ ಭಗವತ್ಸ್ವ-ರೂಪಪ್ರಾಪ್ತಿಯೆಂಬ ಫಲವು ಕರ್ಮಯೋಗಿಗಳಿಂದಲೂ ಹೊಂದಲ್ಪಡುತ್ತದೆ. ಜ್ಞಾನಮಾರ್ಗ, ಕರ್ಮಮಾರ್ಗಗಳ ವೈಲಕ್ಷಣ್ಯವನ್ನು ಈ ಹಿಂದೆ ಸ್ಪಷ್ಟಗೊಳಿಸಿರುವೆನಷ್ಟೆ. ಜ್ಞಾನಮಾರ್ಗವು ಕರ್ಮಾನುಷ್ಠಾನರಹಿತವಾದುದಲ್ಲ; ಅಪ್ರಚುರಕರ್ಮವುಳ್ಳದ್ದು. ಭಗವದರ್ಪಣಬುದ್ಧಿಯಿಂದ ವಿಹಿತಕರ್ಮಾ-ನುಷ್ಠಾನಮಾಡುವುದೆಂಬ ಯೋಗವು ಉಭಯಮಾರ್ಗಗಳಿಗೂ ಸಮಾನವೇ.

ಆದ್ದರಿಂದಲೇ ಈ ಎರಡು ಮಾರ್ಗಗಳೂ, ಜ್ಞಾನಯೋಗ, ಕರ್ಮಯೋಗಗಳೆಂದು ಯೋಗಶಬ್ದಘಟಿತವಾಗಿಯೇ ಕರೆಯಲ್ಪಡುತ್ತವೆ. ಯೋಗದಿಂದಲೇ ತತ್ತ್ವಜ್ಞಾನಸಿದ್ಧಿಯು. ಜ್ಞಾನ ಮತ್ತು ಯೋಗಗಳು ಹೀಗೆ ಸಾಧ್ಯಸಾಧನಭಾವಯುಕ್ತವಾದವುಗಳೆಂದು ತಿಳಿದವನೇ ಯಥಾರ್ಥವನ್ನರಿತವನು. ಕಾಮಾದಿವರ್ಜನರೂಪಸನ್ಯಾಸವು ಉಭಯಮಾರ್ಗಸ್ಥರಿಗೂ ಅವಶ್ಯಕವು. ಜ್ಞಾನಯೋಗಿಗಳೇ ಸನ್ಯಾಸಿಗಳಲ್ಲ. ಸನ್ಯಾಸ ಮತ್ತು ಯೋಗಗಳೆಂಬುವು ಅಧಿಕಾರಿಭೇದದಿಂದ ಭಿನ್ನಜೀವರಿಗೆ ಹೇಳಲ್ಪಡುವ ಪ್ರತ್ಯೇಕಮಾರ್ಗಗಳೂ ಅಲ್ಲ. ಕಿಂತು, ಒಬ್ಬ ಅಧಿಕಾರಿಯಲ್ಲಿ ಇರಬೇಕಾದ ಭಿನ್ನಧರ್ಮಗಳು. ಎರಡೂ ಮಿಳಿತವಾಗಿಯೇ ತತ್ತ್ವಜ್ಞಾನವೆಂಬ ಫಲಕ್ಕೆ ಸಾಧನಗಳಾಗುತ್ತವೆ. ಯತ್ಯಾಶ್ರಮಿಗಳಿಗೆ ಸಾಂಖ್ಯಪದೋಕ್ತವಾದ ಜ್ಞಾನದಲ್ಲಿ ಅಧಿಕಾರವೆಂದೂ, ಕರ್ಮದಲ್ಲಿಲ್ಲವೆಂದೂ, ಗೃಹಸ್ಥರಿಗೆ ಯೋಗಪದೋಕ್ತವಾದ ಕರ್ಮದಲ್ಲಿ ಅಧಿಕಾರವೆಂದೂ, ಜ್ಞಾನದಲ್ಲಿಲ್ಲವೆಂದೂ ಅಜ್ಞಾನಿಗಳು ತಿಳಿಯುವರು—ಪಂಡಿತರಲ್ಲ. ಗೃಹಸ್ಥರಿಗೆ ಜ್ಞಾನಾಧಿಕಾರವನ್ನೂ, ಯತಿಗೆ (ಜಪ-ಧ್ಯಾನಾದಿ) ಕರ್ಮಾಧಿಕಾರವನ್ನೂ, ಉಭಯರಲ್ಲಿ ಸನ್ಯಾಸ ಹಾಗೂ ಯೋಗಗಳ ಸಮಾವೇಶವನ್ನೂ ತಿಳಿಯುವವನೇ ನಿಜವನ್ನರಿತವನು. ತಿಳಿದೆಯಾ? ಅರ್ಜುನ! ಇನ್ನೂ ಸಂದೇಹವಿದ್ದರೆ ಕೇಳು. (೫).

ಅರ್ಜುನ—ಸನ್ಯಾಸ ಮತ್ತು ಯೋಗಗಳ ಸ್ವರೂಪವನ್ನರಿತೆನು, ದೇವ! ತತ್ತ್ವಜ್ಞಾನಲಾಭಕ್ಕೆ ಎರಡೂ ಅವಶ್ಯಕವಾಗಿರಲು ಸನ್ಯಾಸಕ್ಕಿಂತ ಯೋಗವೇ ಶ್ರೇಷ್ಠವೆಂದು ಹೇಳಿದೆಯಲ್ಲ, ಅದು ಹೇಗೆ?

ಶ್ರೀಕೃಷ್ಣ—ಸನ್ಯಾಸವು ಯೋಗಕ್ಕಿಂತ ಅವರ (ಕಡಿಮೆ—ಅಧಮ) ವೆಂಬುದಕ್ಕೆ ಕಾರಣವನ್ನು ಹೇಳುವೆನು, ಕೇಳು. ಸನ್ಯಾಸವು ಯೋಗಯುಕ್ತವಾಗದಿದ್ದರೆ, ಎಂದರೆ ಈಶ್ವರಾರ್ಪಣಬುದ್ಧಿಯುಕ್ತವಿಹಿತಾಚರಣೆಯಿಂದ ಕೂಡಿಕೊಂಡಿರದಿದ್ದರೆ, ನರಕಾದಿ ಅನರ್ಥಕ್ಕೇ ಕಾರಣವಾಗುತ್ತದೆ. ಸ್ವವಿಹಿತಕರ್ಮಾನುಷ್ಠಾನವಿಲ್ಲದ ಕೇವಲಸನ್ಯಾಸವು, ವಿಹಿತಪರಿತ್ಯಾಗವೆಂಬ ದೋಷದಿಂದ ನರಕಕ್ಕೆ ಕಾರಣವಾಗುತ್ತದೆ. ಕಾಮಾದಿರಹಿತ

ನಾದವನು (ಸನ್ಯಾಸಿಯು) ಯೋಗಯುಕ್ತನಾದರೆ (ಸ್ವವಿಹಿತಕರ್ಮಾ-ಚರಣಪರನಾದರೆ) ಶೀಘ್ರವಾಗಿ ಪರಬ್ರಹ್ಮನನ್ನು ಹೊಂದುತ್ತಾನೆ. ಯೋಗ ವಿಲ್ಲದಿದ್ದರೆ ಮುಕ್ತಿಯಿಲ್ಲ; ಇದ್ದರೆ ಮುಕ್ತಿಯುಂಟು ಎಂಬ (ಅನ್ವಯ-ವ್ಯತಿರೇಕರೂಪ) ಯುಕ್ತಿಯಿಂದ ಯೋಗದ ಆಧಿಕ್ಯವನ್ನು ತಿಳಿಯಬೇಕು. ಕಾಮಾದಿವರ್ಜನಸನ್ಯಾಸವು ವಿಷ್ಣ್ವರ್ಪಿತವಿಹಿತಾನುಷ್ಠಾನವೆಂಬ ಯೋಗ-ರೂಪತ್ವವನ್ನು ಹೊಂದದಿದ್ದರೆ ಅನರ್ಥಕ್ಕೇ ಕಾರಣವಾಗುತ್ತದೆ.

ಅರ್ಜುನ—ಸನ್ಯಾಸಕ್ಕೆ ಯೋಗರೂಪತ್ವವನ್ನು ತಿಳಿಯುವುದಾದರೆ ಸನ್ಯಾಸ ಮತ್ತು ಯೋಗಗಳೆಂದು ಪ್ರತ್ಯೇಕವಾಗಿ ನಿರೂಪಿಸುವುದಾದರೂ ಏಕೆ?

ಶ್ರೀಕೃಷ್ಣ—ಮೋಕ್ಷಸಾಧನವಾದ ಸನ್ಯಾಸವು ಯೋಗದಲ್ಲಿನ ಅವಾಂತರಪ್ರಭೇದವೇ ಸರಿ. ಸನ್ಯಾಸ ಮತ್ತು ಕರ್ಮಯೋಗಗಳು ಮಿಳಿತ ವಾಗಿಯೇ ಮೋಕ್ಷ ಸಾಧನಗಳೆಂದು ಹೇಳುವುದಾದರೂ ಈ ಕಾರಣದಿಂದಲೇ. ಕುರುವಂಶಸಂಭೂತರಾದ್ದರಿಂದ, ದುರ್ಯೋಧನಾದಿಗಳಂತೆ ಪಾಂಡುವಿನ ಪುತ್ರರಾದ ಯುಧಿಷ್ಠಿರಾದಿಗಳೂ ಕೌರವರೇ ಆದರೂ, ದುರ್ಯೋಧನಾದಿ ಗಳನ್ನು ಕೌರವರೆಂದೂ, ಯುಧಿಷ್ಠಿರಾದಿಗಳನ್ನು ಪಾಂಡವರೆಂದೂ ಕರೆಯು ವಂತೆ, ಸನ್ಯಾಸ ಮತ್ತು ಕರ್ಮಯೋಗಗಳ ಪ್ರತ್ಯೇಕ ನಿರೂಪಣೆಯೂ ಯುಕ್ತವಾಗುತ್ತದೆ. (೬).

ಅರ್ಜುನ—ಯೋಗಯುಕ್ತವಾದ ಸನ್ಯಾಸವು ಮಹಾಫಲಕ್ಕೆ ಹೇಗೆ ಕಾರಣವಾಗುತ್ತದೆಂಬುದನ್ನೂ ಕೇಳಲಪೇಕ್ಷಿಸುವೆನು.

ಶ್ರೀಕೃಷ್ಣ—ಈಶ್ವರಾರ್ಪಿತವಿಹಿತಾಚರಣೆಯಿಂದ ಅಂತಃಕರಣವು ಪರಿಶುದ್ಧಗೊಳ್ಳುತ್ತದೆ. ಅದರಿಂದ ಮನಸ್ಸು ಮತ್ತು ಇಂದ್ರಿಯಗಳು ವಶವರ್ತಿಗಳಾಗುತ್ತವೆ. ಸರ್ವಸ್ವಾಮಿಯಾದ ಶ್ರೀಹರಿಯಲ್ಲಿ ನಿಶ್ಚಲವಾದ ಮನೋಯೋಗವು ಲಭಿಸುತ್ತದೆ; ಶೀಘ್ರವಾಗಿ ಭಗವದಪರೋಕ್ಷವನ್ನು ಹೊಂದುತ್ತಾನೆ. ಇಂಥವನು ಕರ್ಮಗಳನ್ನು ಮಾಡಿದರೂ ನಿರ್ಲಿಪ್ತನಾಗಿರು

ವನು. (೭). ಯೋಗಯುಕ್ತನಾದ ಜ್ಞಾನಿಯು, ರೂಪಾದಿಗಳನ್ನು ನೋಡಲಿ, ಶಬ್ದಗಳನ್ನು ಕೇಳಲಿ, ಸ್ಪರ್ಶ ಮಾಡಲಿ, ಮೂಸಿ ನೋಡಲಿ, ಭಕ್ಷಣಮಾಡಲಿ, ಸಂಚರಿಸಲಿ, ಮಲಗಲಿ, ಉಸಿರಾಡಲಿ, ಮಾತಾಡಲಿ, ಮಲಾದಿಗಳನ್ನು ವಿಸರ್ಜನೆಮಾಡಲಿ, ಹಿಡಿಯಲಿ, ಕಣ್ಣು ಬಿಡಲಿ, ಮುಚ್ಚಲಿ, ಯಾವುದೇ ಜ್ಞಾನೇಂದ್ರಿಯ ಅಥವಾ ಕರ್ಮೇಂದ್ರಿಯವ್ಯಾಪಾರ ವನ್ನು ಮಾಡಲಿ, ಆಯಾ ಇಂದ್ರಿಯಗಳು ಶ್ರೀ ಹರಿಯಿಂದ ಪ್ರೇರಿತಗಳಾಗಿ ವಿಷಯಗಳಲ್ಲಿ ಪ್ರವರ್ತಿಸುತ್ತವೆಂದೂ, ತಾನು ಸ್ವತಂತ್ರನಾಗಿ ಯಾವುದೊಂ ದನ್ನೂ ಮಾಡುವುದಿಲ್ಲವೆಂದೂ ತಿಳಿಯುವನು. (೮-೯). ಯಾರು, ಫಲ ಕಾಮನೆಯನ್ನು ಬಿಟ್ಟು, ತನ್ನ ಶ್ರೇಯಸ್ಸಾಧನೆಗಾಗಿ ಭಗವಂತನ ಸ್ವಪೂಜಾತ್ಮಕಕರ್ಮಗಳನ್ನು ಅಧೀನಕರ್ತನಾದ ತನ್ನಿಂದ ಮಾಡಿಸುತ್ತಾ ನೆಂಬ ಅನುಸಂಧಾನವುಳ್ಳವನಾಗುವನೋ, ಅವನು, ನೀರಿನಲ್ಲಿದ್ದರೂ ನೀರಿನೊಂದಿಗೆ ಅಂಟಿಕೊಳ್ಳದ ಕಮಲಪತ್ರದಂತೆ, ಕರ್ಮಗಳನ್ನು ಮಾಡಿ ದರೂ ಕರ್ಮಫಲ ಸಂಬಂಧವುಳ್ಳವನಾಗುವುದಿಲ್ಲ. ಆದ್ದರಿಂದ ಸನ್ಯಾಸ ಯೋಗಗಳೆರಡೂ ಮಿಳಿತವಾಗಿಯೇ ಶ್ರೇಯಸ್ಸಾಧಕಗಳೆಂಬುದು ಉಪ ಚಾರೋಕ್ತಿಯಲ್ಲ; ನಿಯಮವೆಂದು ತಿಳಿ. (೧೦). ಯೋಗಿಗಳ ಆಚಾರವೂ ಈ ನಿಯಮವನ್ನೇ ಸಾಧಿಸಿಕೊಡುತ್ತದೆ. ಅವರು, ದೇಹದಿಂದಲೂ, ಮನಸ್ಸಿನಿಂದಲೂ, ಬುದ್ಧಿಯಿಂದಲೂ, ಮತ್ತು ಕಾಮಾಹಂಭಾವ, ಸ್ವಾತಂತ್ರ್ಯಾಭಿಮಾನಗಳಿಲ್ಲದ ಇಂದ್ರಿಯಗಳಿಂದಲೂ ಜ್ಞಾನೋತ್ಪತ್ತಿಗಾಗಿ, ಫಲಾಶೆಯನ್ನು ಬಿಟ್ಟು ಕರ್ಮಗಳನ್ನು ಮಾಡುತ್ತಾರೆ. (೧೧) ಕರ್ಮಫಲಾಶೆ ಯನ್ನೂ ಕಾಮಾದಿಗಳನ್ನೂ ಬಿಟ್ಟವನು (ಸನ್ಯಾಸಿಯು) ಭಗವದರ್ಪಣ- ಬುದ್ಧಿಯಿಂದ ವಿಹಿತಕರ್ಮಾನುಷ್ಠಾನವೆಂಬ ಯೋಗವುಳ್ಳವನಾದರೆ, ತನ್ನ ಸ್ವಭಾವಸಿದ್ಧವಾದ ಶಾಂತಿಯನ್ನು (ಸ್ವರೂಪಾನಂದದ ಆವಿರ್ಭಾವರೂಪ ವಾದ ಮುಕ್ತಿಯನ್ನು ಹೊಂದುವನು. ಯೋಗಹೀನನು, ಕ್ಷುದ್ರಫಲ ಗಳಲ್ಲಿ ಆಸಕ್ತನಾಗುವನು; ಸನ್ಯಾಸವೂ ಇಲ್ಲದೇ ಅತಿಶಯವಾಗಿ ಸಂಸಾರ ದಲ್ಲಿ ಸಿಕ್ಕು ತೊಳಲುವನು. (೧೨).

ಅರ್ಜುನ—ಸ್ವತಂತ್ರಕರ್ತೃತ್ವಾಭಿಮಾನ ತ್ಯಾಗರೂಪವಾದುದು ಸನ್ಯಾಸವೆಂದು ಹೇಳಿರುವಿ. ಕರ್ಮಘಟನೆಗೆ ಉಪಕರಣಗಳಾದ ದೇಹೇಂ-ದ್ರಿಯಾದಿಗಳಿಂದ ಈಶಾಧೀನನಾಗಿ, ಕರ್ಮಗಳನ್ನು **ಮಾಡಿಸುವೆನೆಂದೂ** ತಿಳಿಯಲಾಗದೇ?

ಶ್ರೀಕೃಷ್ಣ—ದೇಹ, ಮನಸ್ಸು ಮತ್ತು ಇಂದ್ರಿಯಗಳು ಜೀವಾಧೀನ ಗಳೆಂದು ತಿಳಿದೆಯಾ? ಕೇಳು, ಅರ್ಜುನ! ಸ್ವಪೂಜಾತ್ಮಕವಾದ ಸಕಲ ಕರ್ಮಗಳನ್ನು ಭಗವಂತನು ತನ್ನ ಶ್ರೇಯಸ್ಸಿಗಾಗಿ ತನ್ನಿಂದ ಮಾಡಿಸುವ ನೆಂದೂ ತನ್ನ ಕರ್ತೃತ್ವಶಕ್ತಿಯೂ ಆತನ ಅಧೀನವೆಂದೂ, ಮನಸ್ಸಿನಿಂದ ಅನುಸಂಧಾನಮಾಡಬೇಕು. ಇಷ್ಟು ಮಾತ್ರವಲ್ಲ, ದೇಹೇಂದ್ರಿಯಾದಿಗಳು ತನ್ನ ವಶವರ್ತಿಗಳೆಂದೂ ಅವುಗಳಿಂದ ತಾನು ಕರ್ಮಗಳನ್ನು **ಮಾಡಿಸುವೆನೆಂಬ** ಸ್ವಾಮಿತ್ವಬುದ್ಧಿಯನ್ನೂ ಪರಿತ್ಯಾಗಮಾಡಬೇಕು. ಮನ ಮೊದ ಲಾದ ಇಂದ್ರಿಯಗಳು ತನಗೆ ಉಪಕರಣಸಾಮಗ್ರಿಗಳಾಗಿರುವುದು ಸಹ ಈಶಾನುಗ್ರಹದಿಂದಲೇ ಎಂಬ ಭಾವನೆಯಿಂದ ಅವುಗಳನ್ನು ತನ್ನ ವಶ ದಲ್ಲಿಟ್ಟುಕೊಂಡು, ಸ್ವತಂತ್ರನಾಗಿ ತಾನು ಏನನ್ನೂ **ಮಾಡುವುದಿಲ್ಲ ವೆಂದೂ,** ಯಾವುದನ್ನೂ **ಮಾಡಿಸುವುದಿಲ್ಲವೆಂದೂ** ತಿಳಿದವನು, (ಕಣ್ಣು, ಕಿವಿ, ಮೂಗುಗಳಿಂದ ಆರು; ಮುಖ, ಪಾಯು, ಉಪಸ್ಥಗಳಿಂದ ಮೂರು; ಹೀಗೆ ಒಟ್ಟು) ಒಂಭತ್ತು ದ್ವಾರಗಳುಳ್ಳ ಈ ದೇಹದಲ್ಲಿ ಕರ್ಮ ಲೇಪವಿಲ್ಲದೇ ಸುಖದಿಂದ ವಾಸಮಾಡುವನು. (೧೩)

ಅರ್ಜುನ—ನೋಡುವುದು, ನಡೆವುದು ಮುಂತಾದ ಯಾವ ಕರ್ಮ ಗಳನ್ನೂ ತಾನು ಮಾಡುವುದಿಲ್ಲವೆಂದು ಸನ್ಯಾಸಿಯು ತಿಳಿಯಬೇಕೆಂ ಬುದು ಯುಕ್ತಿವಿರೋಧವಲ್ಲವೇ? ನೋಡಿದರೂ ನೋಡಲಿಲ್ಲವೆಂದು ತಿಳಿಯುವುದೂ ಕೇಳಿದರೂ ಕೇಳಲಿಲ್ಲವೆಂದು ತಿಳಿಯುವುದೂ ಮಿಥ್ಯಾ-ಜ್ಞಾನವಲ್ಲವೆ?

ಶ್ರೀಕೃಷ್ಣ—ಜಡವಿಲಕ್ಷಣನಾದ ಜೀವನು ಜಡಕ್ಕಿಂತ ಸಮರ್ಥನೇಸರಿ. ಜ್ಞಾನಕ್ರಿಯಾಶಕ್ತಿಗಳುಳ್ಳವನಾದರೂ, ಜೀವನು, ಸ್ವತಂತ್ರನಾಗಿ ಯಾರಿಂ-ದಲೂ ಯಾವ ಕರ್ಮಗಳನ್ನೂ ಮಾಡಿಸುವುದಿಲ್ಲ; ಸ್ವಯಂ ತಾನು

ಸ್ವತಂತ್ರನಾಗಿ ಯಾವ ಕರ್ಮವನ್ನೂ ಮಾಡುವುದಿಲ್ಲ; ತನಗಾಗಲಿ, ಅನ್ಯರಿಗಾಗಲಿ ಕರ್ಮಫಲವನ್ನು ದೊರಕಿಸಲೂ ಅಸಮರ್ಥನು. ಸ್ವಾತಂತ್ರ್ಯಭಾವದ ವಿವಕ್ಷೆಯಿಂದ ಜೀವನು ಏನನ್ನೂ ಮಾಡುವುದಿಲ್ಲ ವೆಂಬ ಅನುಸಂಧಾನವುಳ್ಳವನಾಗಬೇಕೆಂದು ಹೇಳಿದುದು. ತಿಳಿಯಿತೆ ಅರ್ಜುನ?

ಅರ್ಜುನ—ಸ್ವತಂತ್ರಕರ್ತೃತ್ವವಿಲ್ಲದಿದ್ದರೂ, ಕರ್ಮಗಳನ್ನು ಮಾಡು ವುದರಲ್ಲಿ, ಕರ್ಮಜನ್ಯ ಅದೃಷ್ಟವನ್ನು ಮತ್ತು ಕರ್ಮಫಲವನ್ನು ದೊರಕಿಸಿ ಕೊಳ್ಳುವುದರಲ್ಲಿ ಜೀವನು ಈಶ್ವರದತ್ತವಾದ ಕಿಂಚಿತ್ ಸ್ವಾತಂತ್ರ್ಯವುಳ್ಳವ ನಷ್ಟೆ. ಹೀಗಿರಲು ನೀನು ಹೇಳುವ ಅನುಸಂಧಾನವು ಹೇಗೆ ಯುಕ್ತ ವಾಗುವುದು?

ಶ್ರೀಕೃಷ್ಣ—ಪ್ರಭುವು, ಜೀವನಿಗೆ ಕರ್ಮಗಳನ್ನು ಮಾಡುವುದರಲ್ಲಿ ಯಾವ ಸ್ವಾತಂತ್ರ್ಯವನ್ನೂ ಕೊಡುವುದಿಲ್ಲ; ತಾನೇ ಮಾಡಿಸುವನು. ಕ್ರಿಯಾಜನ್ಯ ಅದೃಷ್ಟವನ್ನು ಹುಟ್ಟಿಸುವುದರಲ್ಲಿ ಮತ್ತು ಫಲಸಂಬಂಧ ವನ್ನುಂಟುಮಾಡುವುದರಲ್ಲಿ (ಫಲಪ್ರಾಪ್ತಿ ವಿಷಯದಲ್ಲಿ) ಈ ಲೋಕಕ್ಕೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ; ಇವೆಲ್ಲವನ್ನೂ ತಾನೇ ನಿರ್ವಹಿಸುತ್ತಾನೆ.

ಅರ್ಜುನ—ಆಶ್ಚರ್ಯವು! ಜೀವನಿಗೆ ಈ ವಿಷಯಗಳಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲದಿದ್ದರೆ ಕ್ರಿಯಾನಿಷ್ಪತ್ತಿಯಾದರೂ ಹೇಗೆ ಸಂಭವಿ ಸುವುದು? (ಕರ್ಮಗಳು ನಡೆಯುವುದಾದರೂ ಹೇಗೆ?)

ಶ್ರೀಕೃಷ್ಣ—ಭಗವಂತನು ಪರಾಪೇಕ್ಷೆಯಿಲ್ಲದೇ ಸರ್ವವನ್ನೂ ನಿರ್ವಹಿಸಬಲ್ಲ ಸರ್ವಶಕ್ತನಾದ ಪ್ರಭುವು. ಸರ್ವಪ್ರವರ್ತಕನಾದ ಆತನೇ ಜೀವರಿಂದ ಕರ್ಮಗಳನ್ನು ಮಾಡಿಸಿ ಫಲವನ್ನೂ ಕೊಡುತ್ತಾನೆ. ಇದರಲ್ಲೇನಾಶ್ಚರ್ಯವು ಮತ್ತು ಜೀವರಿಂದ ಕರ್ಮಗಳೇ ಘಟಿಸದಿರಲು ಪ್ರತಿಬಂಧಕವೇನಿದೆ?

ಅರ್ಜುನ—ಸುಕೃತದುಷ್ಕೃತಗಳ ಫಲವಾದ ಪುಣ್ಯಪಾಪಗಳನ್ನು ಜೀವನು ಹೊಂದಲು ಕಾರಣವಿಲ್ಲ. ಪ್ರವರ್ತಕನಾದ ಭಗವಂತನಿಗೆ ಜೀವಕೃತಕರ್ಮಗಳ ಲೇಪವಾಗಬೇಕಲ್ಲವೇ?

ಶ್ರೀಕೃಷ್ಣ—ಹಾಗೆಂದಿಗೂ ಅಲ್ಲ, ಅರ್ಜುನ! ಪುಣ್ಯಪಾಪಗಳನ್ನು ಹೊಂದುವವನು ಜೀವನೇ, ಪರಮಾತ್ಮನಲ್ಲ. ಪುಣ್ಯಪಾಪಗಳನ್ನು ಸಹ ಸ್ವತಂತ್ರನಾಗಿ ಜೀವನೇ ಪಡೆಯುವುದಿಲ್ಲ; ಪರಮಾತ್ಮನಿಂದ ಹೊಂದಿಸಲ್ಪಡುವನು. ಪ್ರಭುವು, ವಿಭುವಾದ್ದರಿಂದಲೇ (ಸ್ವತಂತ್ರನಾದ್ದರಿಂದಲೇ) ಪುಣ್ಯಪಾಪಗಳಿಗೆ ತಾನು ಗುರಿಯಾಗುವುದಿಲ್ಲ. ಕರ್ಮಲೇಪಾಭಾವದಲ್ಲಿ ಪರಾನಪೇಕ್ಷಸ್ವಾತಂತ್ರ್ಯವೇ ಮುಖ್ಯಹೇತುವು. ಕರ್ಮಲೇಪವಿದ್ದರೆ ಎಲ್ಲಿಯ ಸ್ವಾತಂತ್ರ್ಯ? ಮಾಡಿದ್ದುಣ್ಣುವ ಮಹರಾಯನಾದರೆ ಈಶ್ವರನು ಸ್ವತಂತ್ರನೆಂಬುದು ಅರ್ಥವಿಲ್ಲದ ಮಾತು, ಅಲ್ಲವೇ? ಪರಮಾತ್ಮನು, ಪರಾಧೀನನಾದ ಜೀವನಿಂದ, ಅವನ ಯೋಗ್ಯತಾನುಸಾರವಾದ ಕರ್ಮಗಳನ್ನು ಮಾಡಿಸಿ, ಫಲವನ್ನೂ ಉಣಿಸುವನು. ಇದರಲ್ಲಿ ಯುಕ್ತಿ-ವಿರೋಧವೇನಿದೆ?

ಅರ್ಜುನ—ಈಶ್ವರನು ಸರ್ವರಲ್ಲಿದ್ದು ಸ್ವತಂತ್ರನಾದ ಸರ್ವಕರ್ತನಾದರೆ ಎಲ್ಲರೂ ಅವನನ್ನು ಹಾಗೇಕೆ ತಿಳಿಯುವುದಿಲ್ಲ?

ಶ್ರೀಕೃಷ್ಣ—ಅಜ್ಞಾನದಿಂದ ಆವೃತವಾದ ಜ್ಞಾನವುಳ್ಳವರು ಭಗವಂತನನ್ನು ಹಾಗೆ ತಿಳಿಯಲು ಅಸಮರ್ಥರಾಗಿರುವರು. ಜ್ಞಾನಿಗಳು ಸರಿಯಾಗಿಯೇ ತಿಳಿಯುವರು ಮತ್ತು ತಿಳಿದು ಆತನ ದಿವ್ಯ ಸಂದರ್ಶನವನ್ನೂ ಪಡೆಯುವರು. (೧೪-೧೫)

ಅರ್ಜುನ— ಜ್ಞಾನವು ಅಜ್ಞಾನದಿಂದ ಆವರಿಸಲ್ಪಡುವುದಾದರೆ ಅಜ್ಞಾನದ ನಾಶವಾದರೂ ಏತರಿಂದಾಗಬೇಕು? ಅಜ್ಞಾನನಾಶಕವಾದ ವಸ್ತುವು ಜ್ಞಾನವಲ್ಲದೇ ಬೇರಾವುದೂ ಅಲ್ಲವಷ್ಟೆ? ಜ್ಞಾನವೇ ಪ್ರಯೋಜನವಾಗಿವುಳ್ಳ ಸನ್ಯಾಸ ಮತ್ತು ಯೋಗಗಳೂ ವ್ಯರ್ಥವೆಂದೇ ಪ್ರಾಪ್ತವಾಗುವುದಲ್ಲ!

ಶ್ರೀಕೃಷ್ಣ—ಅಜ್ಞಾನದಿಂದ ಆವೃತವಾದ ಜ್ಞಾನವು ಯಾವುದೆಂಬುದನ್ನು ಹೇಳುವೆನು, ಕೇಳು. ಸ್ವರೂಪಜ್ಞಾನವೆಂದೂ ವೃತ್ತಿಜ್ಞಾನವೆಂದೂ ಜ್ಞಾನವು ಎರಡು ವಿಧವು. ಆತ್ಮಸ್ವರೂಪಜ್ಞಾನವು ಅಜ್ಞಾನದಿಂದ ಆವೃತವಾಗಿರುವುದು; ಮತ್ತು ಆವರಕವಾದ ಅಜ್ಞಾನವನ್ನು ನಾಶಗೊಳಿಸು

ವುದರಲ್ಲಿ ಅಸಮರ್ಥವಾಗಿರುವುದು. ಹೀಗಿದ್ದರೂ, ವೃತ್ತಿಜ್ಞಾನವು (ಭಗವದ್ವಿಷಯಕವಾದ ಪರೋಕ್ಷ ಎಂದರೆ ಶಾಸ್ತ್ರಜನ್ಯಮನಃಪರಿಣಾಮರೂಪವೃತ್ತಿಜ್ಞಾನವು) ಯಾವ ಜೀವರ ಆವರಕವಾದ ಅಜ್ಞಾನವನ್ನು ಶಿಥಿಲಗೊಳಿಸುವುದೋ, ಅವರು, ಆಗ, ತಮ್ಮ ಸ್ವರೂಪಜ್ಞಾನದಿಂದ ಭಗವಂತನನ್ನು ಸೂರ್ಯನಂತೆ ವಿಷಯೀಕರಿಸುವರು. ಸಚ್ಛಾಸ್ತ್ರಶ್ರವಣಮನನಗಳಿಂದ ಹುಟ್ಟುವ ಪರೋಕ್ಷಜ್ಞಾನವು ವೃತ್ತಿಜ್ಞಾನವೆಂದು ಕರೆಯಲ್ಪಡುತ್ತದೆ. ಇದು ಮನಃಪರಿಣಾಮರೂಪವಾದುದು. ವೃತ್ತಿ-ಜ್ಞಾನವು ಆವರಕವಾದ ಅಜ್ಞಾನವನ್ನು ನಾಶಮಾಡುವುದು. ನಾಶಗೊಳಿಸುವುದೆಂದರೆ ದುರ್ಬಲಗೊಳಿಸಿ, ಸ್ವರೂಪಜ್ಞಾನವನ್ನು ಕಾರ್ಯಸಮರ್ಥವಾಗದಂತೆ ತಡೆಗಟ್ಟುವ ಅದರ ಸಾಮರ್ಥ್ಯವನ್ನು ಕುಂದಿಸುವುದೆಂದರ್ಥ. ಹೀಗೆ ವೃತ್ತಿಜ್ಞಾನವು ಪ್ರಬಲಗೊಳ್ಳಲು, ಅಧಿಕಾರಿಗಳು ಅಪರೋಕ್ಷಜ್ಞಾನವನ್ನು ಪಡೆದು ಭಗವಂತನನ್ನು ಪ್ರತ್ಯಕ್ಷವಾಗಿ ಕಾಣುವರು. (೧೬)

ಅರ್ಜುನ—ಯಾವ ಪ್ರಕಾರದ ಪರೋಕ್ಷಜ್ಞಾನವು ಅಪರೋಕ್ಷಕ್ಕೆ ಸಾಧನವಾಗುವುದು?

ಶ್ರೀಕೃಷ್ಣ—ಆವರಕವಾದ ಅಜ್ಞಾನವನ್ನು ನೀಗಲು, ಸಕೃತ್ (ಒಂದಾವರ್ತಿ ಯಾವುದಾದರೊಂದು ಕಾಲದಲ್ಲಿ) ದೊರಕಿಸಿಕೊಳ್ಳಲ್ಪಟ್ಟ ಪರೋಕ್ಷಜ್ಞಾನವು ಸಾಕಾಗದು; ನಿರಂತರವಾದುದಾಗಬೇಕು ಮತ್ತು ದೃಢವಾಗಿರಬೇಕು. ಇದಕ್ಕಾಗಿ ಪರಮಾತ್ಮನಿಂದ ಹಿಂತಿರುಗುವ ಬುದ್ಧಿಯನ್ನು ಪುನಃಪುನಃ ಪರಮಾತ್ಮನಲ್ಲಿ ನಿಯೋಜಿಸಬೇಕು. ಆತನೇ ಆದಾನಾದಿ-ಕರ್ತನೂ ಸರ್ವಸ್ವಾಮಿಯೂ ಎಂಬ ಅಚಂಚಲವಾದ ನಿಷ್ಠೆಯನ್ನು ಹೊಂದಬೇಕು; ಸರ್ವಪ್ರಕಾರದಿಂದ ಆತನನ್ನೇ ಆಶ್ರಯಿಸಬೇಕು. ಈ ವಿಧವಾದ ಪರೋಕ್ಷಜ್ಞಾನನಿಶ್ಚಯವನ್ನು ಹೊಂದಿದ ಸಜ್ಜನರಿಗೆ ಭಗವದ್ದರ್ಶನವು ಲಭಿಸುವುದು. ಅದರಿಂದ ಸಕಲದೋಷಗಳ ಪರಿಹಾರವಾಗಿ (ಪಾಪಗಳಿಂದ ನಿರ್ಮುಕ್ತರಾಗಿ) ಜನನಮರಣರೂಪವಾದ ಈ ಸಂಸಾರಕ್ಕೆ ಎಂದೂ ಹಿಂತಿರುಗಿಬರದ ನಿತ್ಯಾನಂದಸ್ಥಿತಿಯನ್ನು (ಮೋಕ್ಷವನ್ನು) ಹೊಂದುವರು. (೧೭) ಹೇ ಪಾರ್ಥ! ಪರೋಕ್ಷನಿಶ್ಚಯವುಳ್ಳ ಜ್ಞಾನಿಗಳು ಪರಮಾತ್ಮನನ್ನು

ಸರ್ವತ್ರಸಮನೆಂದು ತಿಳಿಯುವರು. ವಿದ್ಯಾವಿನಯಸಂಪನ್ನರಾದ ಬ್ರಾಹ್ಮಣರಲ್ಲಿಯೂ, ಗೋವು, ಗಜ, ಶ್ವಾನ(ನಾಯಿ), ಚಂಡಾಲಾದಿಗಳಲ್ಲಿಯೂ, ಪರಮಾತ್ಮನು, ಯಾವ ತಾರತಮ್ಯವೂ ಇಲ್ಲದೇ, ಗುಣಪೂರ್ಣನಾಗಿ, ನಿರ್ದೋಷಿಯಾಗಿರುವನೆಂದು ತಿಳಿಯುತ್ತಾರೆ; ಸಾಕ್ಷಾತ್ಕಾರವಾದಾಗ, ತಿಳಿದಂತೆ ಕಾಣುತ್ತಾರೆ. ಈ ಸಮದರ್ಶಿತ್ವವೂ ಅಪರೋಕ್ಷಜ್ಞಾನಸಾಧನವೇ. (೧೮) ಸರ್ವದೋಷರಹಿತನಾದ ಪರಬ್ರಹ್ಮನು ಸಮನೆಂದು ಕರೆಯಲ್ಪಡುವನು. ಪರಬ್ರಹ್ಮನು ಸರ್ವತ್ರಸ್ಥಿತನಾದ್ದರಿಂದ, ಈ ಸಮನನ್ನು (ಪರಬ್ರಹ್ಮನನ್ನು) ಕಂಡ ಸಮದರ್ಶಿಗಳು ಬ್ರಹ್ಮನಲ್ಲಿ ಸ್ಥಿತರೆಂದು ಹೇಳಲ್ಪಡುವರು. ಇವರು ಈ ಜನ್ಮದಲ್ಲಿಯೇ ಸಂಸಾರವನ್ನು ಜಯಿಸಿದವರು; ಇದಕ್ಕಾವ ಸಂಶಯವೂ ಇಲ್ಲ. (೧೯)

ಅರ್ಜುನ—ಹೇ ಸ್ವಾಮಿ! ಸ್ವತಂತ್ರಕರ್ತೃತ್ವಾಭಿಮಾನತ್ಯಾಗವೆಂಬ ಸನ್ಯಾಸವನ್ನು ಸಾಧಿಸಿ ಧೃಢಪಡಿಸಿಕೊಳ್ಳಲು, ಅವಶ್ಯಕವಾದ ಉಪಾಯಗಳನ್ನು ನಿರೂಪಿಸುವೆಯಾ?

ಶ್ರೀಕೃಷ್ಣ— ಕೇಳು, ಅರ್ಜುನ. ಸುಖಸಾಧನವಸ್ತುಗಳು ದೊರೆತರೆ ಹರ್ಷಪಡಬಾರದು. ದುಃಖಸಾಧನವಸ್ತುಗಳು ದೊರೆತರೆ ಮನೋದ್ವೇಗವನ್ನು ಹೊಂದಬಾರದು; ಅಧೈರ್ಯಗೊಳ್ಳಬಾರದು. ಪ್ರಿಯಾಪ್ರಿಯವಸ್ತುಗಳ ಪ್ರಾಪ್ತಿಗೆ ಲೋಕದ ಜನರು ಸ್ವತಂತ್ರಕಾರಣರೆಂಬ ಮಿಥ್ಯಾಜ್ಞಾನವನ್ನು ಬಿಡಬೇಕು; ಭಗವಂತನೇ ಕಾರಣನೆಂಬ ಸ್ಥಿರಬುದ್ಧಿಯುಳ್ಳವನಾಗಬೇಕು. ಇಷ್ಟೇ ಸಾಲದು, ಸದಾ ಭಗವಂತನ ಸ್ಮರಣಯುಕ್ತನಾಗಬೇಕು. (೨೦)

ಅರ್ಜುನ— ಸನ್ಯಾಸದಿಂದಲೇ ಕಾಮಾದ್ಯುಪದ್ರವಗಳು ನಾಶವಾಗಿ ಸ್ವರೂಪಸುಖದ ಆವಿರ್ಭಾವವಾಗುವುದರಿಂದ, ಯೋಗಕ್ಕೆ ಆಧಿಕ್ಯವನ್ನು ಹೇಳಿದುದು ಅಯುಕ್ತವಲ್ಲವೇ?

ಶ್ರೀಕೃಷ್ಣ—ಯೋಗಯುಕ್ತವಲ್ಲದ ಸನ್ಯಾಸವು ಅನರ್ಥಗಳಿಗೆ ಕಾರಣವೆಂದು ಈ ಹಿಂದೆ ಹೇಳಿರುವೆನು. ದೃಢಸನ್ಯಾಸವು ಯದ್ಯಪಿ ಸ್ವರೂಪಾವಿರ್ಭಾವಕ್ಕೆ ಕಾರಣವಾಗುವುದಾದರೂ ಯೋಗವು, (ನಿತ್ಯಸ್ಮರಣ-

ಯುಕ್ತವಾದ ಯೋಗವು—ಧ್ಯಾನಸಹಿತವಾದ ಯೋಗವು) ಆ ಸು
ಅಕ್ಷಯವಾಗುವುದಕ್ಕೆ ಕಾರಣವಾಗುತ್ತದೆ. ವಿಷಯಗಳಿಗೆ ಇಂದ್ರಿಯ
ವಿಷಯತ್ವವನ್ನು ಸಂಪಾದಿಸಿದ ಸನ್ಯಾಸಿಯು, ಎಂದರೆ ವಿಷಯಭೋ
ವನ್ನೂ ಭೋಗಾಸಕ್ತಿಯನ್ನೂ ಪರಿತ್ಯಾಗಮಾಡಿದವನು, ಧ್ಯಾನಸಹಿ
ಯುಕ್ತವಾದ ಮನಸ್ಸುಳ್ಳವನಾದರೆ, ಸನ್ಯಾಸದಿಂದ ಯಾವ ಸ್ವರೂಪಸು
ಆವಿರ್ಭಾವವಾಗುವುದೋ ಆ ಸುಖದ ನಿತ್ಯಾನುಭವವನ್ನು (ಮರೆಯಾಗ
ರುವಿಕೆಯನ್ನು—ಅಕ್ಷಯತ್ವವನ್ನು) ಪಡೆಯುವನು. ಅಲ್ಲದೇ ಸನ್ಯಾಸ
ರಹಿತವಾದ ಕಾಮಭೋಗವು ದುಃಖಬೀಜವಾಗಿರುವುದರಿಂದ ಜ್ಞಾ
ಸನ್ಯಾಸವು ಅವಶ್ಯ ಸಂಪಾದನೀಯವು. ಆಸಕ್ತಿಯಿಂದ ಭೋಗಿಸಲ್ಪಡು
ವಿಷಯಗಳು ದುಃಖವನ್ನೇ ಉತ್ಪಾದನೆಮಾಡುತ್ತವೆ. ಆದ್ದರಿಂದ ಸನ್ಯಾಸವು
ಯೋಗಯುಕ್ತವಾಗಬೇಕಾದುದು ಅವಶ್ಯಕ. ಸನ್ಯಾಸವು ವ್ಯರ್ಥವಲ್ಲ;
ಅವಶ್ಯಕವೂ ಅಹುದು. ಆದರೂ ಯೋಗದ ಶ್ರೇಷ್ಠತೆಗೆ ಯಾವ
ಕೊರತೆಯೂ ಇಲ್ಲ. (೨೧)

ಅರ್ಜುನ—ಸನ್ಯಾಸವಿಲ್ಲದ ವಿಷಯಭೋಗವು ದುಃಖಬೀಜವೆಂದು
ಹೇಗೆ ತಿಳಿಯಬೇಕು?

ಶ್ರೀಕೃಷ್ಣ— ವಿಷಯಸುಖಾನುಭವವು ಉತ್ಪತ್ತಿವಿನಾಶಗಳುಳ್ಳದ್ದೆಂ
ಬುದು ಲೌಕಿಕಾನುಭವಸಿದ್ಧವು. ಸುಖವು ನಷ್ಟವಾದರೆ ಅದರ
ಅಭಾವದಿಂದ ದುಃಖವೇ ಉಂಟಾಗುವುದಲ್ಲವೇ? ಆದ್ದರಿಂದ ಜ್ಞಾನಿಯು
ನಶ್ವರವಾದ ವಿಷಯಭೋಗದಲ್ಲಿ ಎಂದೂ ಆಸಕ್ತನಾಗುವುದಿಲ್ಲ. (೨೨)
ಯಾರು, ಈ ಮನುಷ್ಯದೇಹದಲ್ಲಿರುವಾಗಲೇ, (ಶರೀರವು ಬಿದ್ದುಹೋಗುವ
ಮೊದಲೇ) ಕಾಮಕ್ರೋಧಗಳಿಂದ ಉದ್ಭವಿಸುವ ಮನೋದ್ವೇಗವನ್ನು
ಸಹಿಸಲು ಶಕ್ತನಾಗುವನೋ ಅವನೇ ನಿಜವಾದ ಜ್ಞಾನೋಪಾಯವುಳ್ಳ
ವನು—ಯೋಗಿಯು. ಆತನೇ ಶಾಶ್ವತಸುಖವನ್ನು ಪಡೆಯುವನು.

ಅರ್ಜುನ—ಈ ಮನುಷ್ಯದೇಹದಲ್ಲಿರುವಾಗಲೇ ಮನೋದ್ವೇಗವನ್ನು
ಸಹಿಸುವ ಶಕ್ತಿಯನ್ನು ಸಂಪಾದಿಸಬೇಕೆಂದು ಹೇಳುವುದರಲ್ಲಿ ವಿಶೇಷವೇನು?

ಶ್ರೀಕೃಷ್ಣ—ಕಾಮಾದಿಜನ್ಯಮನೋದ್ವೇಗವನ್ನು ಸಹಿಸಲು ಮನುಷ್ಯ-ದೇಹದಲ್ಲಿರುವ ಸೌಲಭ್ಯವು ಇತರ ದೇಹಗಳಲ್ಲಿಲ್ಲ. ಎಲ್ಲ ಪ್ರಾಣಿದೇಹಗಳ ಮಧ್ಯದಲ್ಲಿ ಮನುಷ್ಯದೇಹವು ಬುದ್ಧ್ಯಾದಿಸಾಮಗ್ರಿಗಳಿಂದ ಕೂಡಿದ್ದು ಉತ್ಕೃಷ್ಟವಾದುದು. ಆದ್ದರಿಂದ ಈ ದೇಹದಲ್ಲಿರುವಾಗಲೇ ಸರ್ವಪ್ರಯತ್ನದಿಂದ ಇದನ್ನು ಸಾಧಿಸಿಕೊಳ್ಳಬೇಕು. (೨೩)

ಅರ್ಜುನ—ಜ್ಞಾನಿಲಕ್ಷಣಗಳನ್ನು ವಿಸ್ತಾರದಿಂದ ಕೇಳಲಪೇಕ್ಷಿಸುವೆನು; ನಿರೂಪಿಸು, ದೇವ!

ಶ್ರೀಕೃಷ್ಣ—ಜ್ಞಾನಿಯು ಕಾಮಾದ್ಯುಪದ್ರವನಾಶದಿಂದ ಅಭಿವ್ಯಕ್ತನಾದ ಸ್ವರೂಪಸುಖವುಳ್ಳವನು—**ಅಂತಃಸುಖಿ** ಮತ್ತು ಭಗವದ್ದರ್ಶನದಿಂದ ದೊರೆತ ಅಲೌಕಿಕಾನಂದಾನುಭವವುಳ್ಳವನು—**ಅಂತರಾರಾಮನು.** ಅಂತರಂಗದಲ್ಲಿ ಭಗವತ್ಸ್ವರೂಪವೆಂಬ ಜ್ಯೋತಿಯು ಪ್ರಕಾಶಿಸುತ್ತಿರಲು ಅವನ ಆನಂದಾನುಭವಕ್ಕೆ ಕೊರತೆಯುಂಟೇ! ಅಸಂಪ್ರಜ್ಞಾತಸಮಾಧಿಯಲ್ಲಿ ಭಗವದ್ದರ್ಶನವನ್ನು ಹೊಂದಿ ಸುಖಿಸುವ ಜ್ಞಾನಿಗೆ ಮಾತ್ರ ಈ ಲಕ್ಷಣಗಳೆಂದು ತಿಳಿ. ಸಂಪ್ರಜ್ಞಾತಸಮಾಧಿಯಲ್ಲಿ ಭಗವದ್ದರ್ಶನವಾದರೂ, ಅನ್ಯವಸ್ತುಜ್ಞಾನವೂ ಸೇರಿಕೊಂಡು ಮನಸ್ಸು ಚಲಿಸುವುದರಿಂದ ದರ್ಶನವಾಗದ ಪ್ರಾಯವೇ. ಸಂಪ್ರಜ್ಞಾತಸಮಾಧಿಯಲ್ಲಿರುವವನು ಅಂತಃಸುಖಿಯೂ ಅಲ್ಲ—ಅಂತರಾರಾಮನೂ ಅಲ್ಲ. ಅಸಂಪ್ರಜ್ಞಾತಸಮಾಧಿಯಲ್ಲಿರುವ ಯೋಗಿಯೇ ಬ್ರಹ್ಮಸ್ಥಿತನು. ಆತನು ಅಶರೀರಿಯಾದ (ಪ್ರಾಕೃತಶರೀರವಲ್ಲದ ಚಿದಾನಂದಾತ್ಮಕ ದೇಹವುಳ್ಳ) ಬ್ರಹ್ಮನನ್ನೇ ಹೊಂದುವನು. (೨೪) ಕೇವಲ ಬ್ರಹ್ಮಸ್ಥಿತಿಯು ಮೋಕ್ಷಕ್ಕೆ ಕಾರಣವಲ್ಲ; ಸಕಲಪಾಪಕ್ಷಯವೂ ಕಾರಣವು. ಶ್ರವಣಮನನಗಳಿಂದ ಸಂಶಯವಿಪರ್ಯಯಗಳನ್ನು ಕಳೆದು ಸಕಲಪ್ರಮೇಯಜ್ಞರಾಗಿ, ವಶವರ್ತಿಗಳಾದ ಮನಮೊದಲಾದ ಇಂದ್ರಿಯಗಳುಳ್ಳ ವಿಶಾಲಹೃದಯರಾದ ಜ್ಞಾನಿಗಳು ಸಕಲ ಪ್ರಾಣಿಗಳ ಹಿತವನ್ನೇ ಸಾಧಿಸುವರಾಗಿ, ಧ್ಯಾನ-ಯೋಗದಿಂದ ಅಪ್ರಾಕೃತಸ್ವರೂಪನಾದ ಶ್ರೀಹರಿಯ ದಿವ್ಯದರ್ಶನವನ್ನು ಪಡೆಯುತ್ತಾರೆ. ಭಗವದ್ದರ್ಶನದಿಂದ ಅವರ ಸಕಲಪಾಪಗಳೂ

ನೀಗುತ್ತವೆ; ಪ್ರಾರಬ್ಧಾನುಭವದ ನಂತರ ಅವರು ಬ್ರಹ್ಮನನ್ನು ಹೊಂದು ತ್ತಾರೆ. (ಮುಕ್ತರಾಗುತ್ತಾರೆ). (೨೫) ಕೇವಲ ಅಂತಃಸುಖಿತ್ವವೇ ಜ್ಞಾನಿ ಲಕ್ಷಣವಲ್ಲ. ಯತ್ನಶೀಲರಾದ, ವಶೀಕೃತಮನಸ್ಕರಾದ ಈ ಬ್ರಹ್ಮಜ್ಞಾನಿ ಗಳು ಸದಾ ಕಾಮಕ್ರೋಧಾದಿರಹಿತರಾಗಿರುವರು. ಇವರಿಗೆ ಭಗವಂತನು ಸರ್ವದೇಶಕಾಲಗಳಲ್ಲಿ ರಕ್ಷಕನಾಗಿರುವನಲ್ಲದೇ ಜ್ಞಾನವಿಷಯನೂ ಆಗಿರುವನು. (೨೬)

ಅರ್ಜುನ—ಜ್ಞಾನಿಗಳ (ಪರೋಕ್ಷನಿಶ್ಚಯವುಳ್ಳವರ) ಧ್ಯಾನಪ್ರಕಾರ ವನ್ನು ತಿಳಿಯಲಿಚ್ಛಿಸುವೆನು, ದೇವ !

ಶ್ರೀಕೃಷ್ಣ—ದುಃಖಸಂಪಾದಕಗಳಾದ ಶಬ್ದಾದಿವಿಷಯಗಳನ್ನು ಶ್ರೋತ್ರಾದಿ ಇಂದ್ರಿಯಗಳಿಂದ ದೂರಮಾಡಿ, ಒಂದುವೇಳೆ ಇಂದ್ರಿಯಗಳು ವಿಷಯಾಭಿಮುಖವಾದಲ್ಲಿ, ಅವುಗಳನ್ನು ವಿವೇಕದಿಂದ ಹಿಂತಿರುಗಿಸಿ ಕೊಂಡು, ಹುಬ್ಬುಗಳ ಮಧ್ಯದಲ್ಲಿ ದೃಷ್ಟಿಯನ್ನಿಟ್ಟು, ಪ್ರಾಣಾಪಾನಗಳನ್ನು ನಿರ್ವಿಕಾರಗೊಳಿಸಿ (ಸಮಾನವಾಗಿಟ್ಟು), ಶ್ವಾಸವನ್ನು ನಿರೋಧಿಸಿ ನಿಶ್ಚಲ ವಾಗಿ (ಕುಂಭಕದಲ್ಲಿ) ನಿಲ್ಲಿಸಿ, ಇಂದ್ರಿಯಮನೋಬುದ್ಧಿಗಳನ್ನು ಚೆನ್ನಾಗಿ ವಶದಲ್ಲಿಟ್ಟುಕೊಂಡು, ಮೋಕ್ಷೇತರವಾದ ಯಾವ ಪುರುಷಾರ್ಥವನ್ನೂ ಚಿಂತಿಸದೇ, ಭಗವನ್ಮಹಿಮೆಗಳ ಮನನಪೂರ್ವಕ ಧ್ಯಾನದಲ್ಲಿ ತೊಡಗುವನು. ವಿಷಯೇಚ್ಛೆ, ಭಯ, ಕ್ರೋಧಾದಿಗಳಿಂದ ರಹಿತನಾದ ಜ್ಞಾನಿಯು, ಬ್ರಹ್ಮ ದರ್ಶನವನ್ನು ಪಡೆದು ಜೀವನ್ಮುಕ್ತನೆನಿಸುವನು. ಬ್ರಹ್ಮದರ್ಶಿಯು, ಅಭಿಮಾನತ್ಯಾಗವೆಂಬ ಮುಕ್ತಲಕ್ಷಣವುಳ್ಳವನಾದ್ದರಿಂದ, ಮುಕ್ತಸದೃಶನು; ಗೌಣಪ್ರಯೋಗದಿಂದ ಮುಕ್ತನೆಂದೇ ವ್ಯವಹರಿಸಲ್ಪಡುವನು. (೨೭-೨೮). ಧ್ಯೇಯನಾದ ನನ್ನನ್ನು ಯೋಗಿಯು, ಹೇಗೆ ತಿಳಿದು ಧ್ಯಾನಿಸುವ ನೆಂಬುದನ್ನೂ ಹೇಳುವೆನು, ಕೇಳು. ನನ್ನನ್ನು, ಜ್ಯೋತಿಷ್ಟೋಮಾದಿ ಸಕಲ ಯಾಗಗಳ ಹಾಗೂ ಚಾಂದ್ರಾಯಣಾದಿ ಸಕಲತಪಸ್ಸುಗಳ ಉದ್ದೇಶ್ಯ ನೆಂದೂ, ಫಲಭೋಕ್ತನೆಂದೂ, ಸರ್ವಲೋಕಗಳ ಮುಖ್ಯಸ್ವಾಮಿ ಯೆಂದೂ, ಸರ್ವಜೀವರ ಅನಿಮಿತ್ತಬಂಧುವೆಂದೂ, ಶಾಂತಿಪ್ರದನೆಂದೂ

(ಮುಕ್ತಿದಾತನೆಂದೂ) ದೃಢವಾಗಿ ತಿಳಿದು, ಸ್ವಯೋಗ್ಯವಾದ ನನ್ನ ರೂಪವನ್ನು ಧ್ಯಾನಿಸಿ, ಸಾಕ್ಷಾತ್ಕರಿಸಿಕೊಳ್ಳುವನು. (೨೯)

ಐದನೇ ಅಧ್ಯಾಯವು ಮುಗಿದುದು.

ಅಧ್ಯಾಯ ೬

[ಯೋಗವು, ಈ ಅಧ್ಯಾಯದಿಂದ ಅಂತ್ಯವಾಗುವ ಮೊದಲನೆಯ ಷಟ್ಕದ ಮುಖ್ಯವಿಷಯವು. ಎರಡನೆಯ ಷಟ್ಕದಲ್ಲಿ ಹೇಳಲ್ಪಡುವ ಭಗವದಪರೋಕ್ಷಜ್ಞಾನಕ್ಕೆ ಸಾಧನವು. ಯೋಗವು, ಕರ್ಮಯೋಗವೆಂದೂ ಧ್ಯಾನಯೋಗವೆಂದೂ ಎರಡು ವಿಧವು. ಕರ್ಮಯೋಗವು ಜ್ಞಾನಕ್ಕೆ ಬಹಿರಂಗಸಾಧನವು; ಧ್ಯಾನಯೋಗವು ಅಂತರಂಗಸಾಧನವು. ಕರ್ಮ-ಯೋಗವು ಅಧಿಕಾರಿಯನ್ನು ಧ್ಯಾನಯೋಗಕ್ಕೆ ಸಿದ್ಧಗೊಳಿಸುತ್ತದೆ. ಈ ವರೆಗೆ ಕರ್ಮಯೋಗವನ್ನು ವಿಸ್ತಾರವಾಗಿ ನಿರೂಪಿಸಿ, ಈ ಅಧ್ಯಾಯದಲ್ಲಿ, ಶ್ರೀಕೃಷ್ಣನು ಧ್ಯಾನಯೋಗವನ್ನು ವಿವರಿಸುತ್ತಾನೆ. ಪೂರ್ವಾಧ್ಯಾಯದ ಅಂತ್ಯದಲ್ಲಿ ಈ ವಿಷಯವು ಸಂಕ್ಷೇಪದಿಂದ ಪ್ರಸಕ್ತವಾಗಿದೆ. ಧ್ಯಾನ-ಯೋಗಕ್ಕೆ, ಈಶ್ವರಾರಾಧನರೂಪ ಸ್ವಕರ್ಮಾನುಷ್ಠಾನವೆಂಬ ಕರ್ಮ-ಯೋಗವೂ, ಕಾಮಾದಿವರ್ಜನರೂಪ ಸನ್ಯಾಸವೂ ಅತ್ಯವಶ್ಯಕಗಳೆಂದೂ, ಅವುಗಳನ್ನು ದೊರಕಿಸಿಕೊಂಡವನೇ ಧ್ಯಾನಕ್ಕೆ ಅಧಿಕಾರಿಯೆಂದೂ ಉಪ-ಕ್ರಮದಲ್ಲಿ ಹೇಳುತ್ತಾನೆ.]

ಶ್ರೀಕೃಷ್ಣ—ಕರ್ಮಫಲವನ್ನಪೇಕ್ಷಿಸದೇ ತನ್ನ ವರ್ಣ ಮತ್ತು ಆಶ್ರಮಕ್ಕೆ ವಿಹಿತವಾದ ಕರ್ತವ್ಯವೆಂಬ ದೃಷ್ಟಿಯಿಂದ ಕರ್ಮಗಳನ್ನಾಚರಿಸುವವನು ಸನ್ಯಾಸಿಯು; ಅವನೇ ಯೋಗಿಯು. ಆಹವನೀಯಾದಿ ಅಗ್ನಿತ್ಯಾಗದಿಂದಲೂ, ಅಗ್ನಿಹೋತ್ರಾದಿ ಕ್ರಿಯಾಪರಿತ್ಯಾಗದಿಂದಲೂ ನಿಸ್ಸಂಗನಾದವನು ಮಾತ್ರ ಧ್ಯಾನಾಧಿಕಾರಿಯೆಂದು ತಿಳಿಯುವುದು ತಪ್ಪು.

ಅಗ್ನಿ ಮತ್ತು ಅಗ್ನಿಕಾರ್ಯಗಳನ್ನು ಬಿಟ್ಟವನು ಸನ್ಯಾಸಿಯೂ ಅಲ್ಲ, ಯೋಗಿಯೂ ಅಲ್ಲ.

ಅರ್ಜುನ—ಯತ್ಯಾಶ್ರಮವನ್ನು ಸ್ವೀಕರಿಸಿದವರು ಅಗ್ನಿ ಮತ್ತು ಅಗ್ನಿ-ಕಾರ್ಯಗಳನ್ನು ಬಿಟ್ಟಿರುವುದಿಲ್ಲವೇ? ಅವರು ಸನ್ಯಾಸಿಗಳಲ್ಲವೇ?

ಶ್ರೀಕೃಷ್ಣ—ಯತ್ಯಾಶ್ರಮಸ್ವೀಕಾರಮಾಡುವಾಗ, ಪೂರ್ವಾಶ್ರಮದಲ್ಲಿ ತನ್ನಿಂದ ಸ್ವೀಕೃತವಾದ ಅಗ್ನಿಯನ್ನು ತನ್ನ ಆತ್ಮನಲ್ಲಿ ಸಮಾರೋಪಣ ಮಾಡಿಕೊಂಡು ಯತಿಯಾಗುವನು ; ಭಗವದುಪಾಸನಾರೂಪವಾದ ಯಜ್ಞವನ್ನೂ ಆಚರಿಸುವನು. ಆದ್ದರಿಂದ ಯತಿಯೂ ಸನ್ಯಾಸಿಯೇ. ಅವನು ಯೋಗಿಯೂ ಆಹುದು. ಬಾಹ್ಯಾಗ್ನಿ ಕ್ರಿಯೆಗಳಿಲ್ಲದ ಮಾತ್ರದಿಂದ ಯತಿಯು ಅಗ್ನಿಕ್ರಿಯಾಶೂನ್ಯನಲ್ಲ. (೧)

ಅರ್ಜುನ—'ಅವನೇ ಸನ್ಯಾಸಿಯು—ಯೋಗಿಯೂ ಅಹುದು' ಎಂದು ಹೇಳುವುದರಿಂದ ಸನ್ಯಾಸ ಮತ್ತು ಯೋಗಗಳೆಂಬುವು ಅತ್ಯಂತಭಿನ್ನ ಧರ್ಮಗಳೆಂದು ಪ್ರಾಪ್ತವಾಗುವುದಿಲ್ಲವೇ?

ಶ್ರೀಕೃಷ್ಣ— ಸನ್ಯಾಸಕ್ಕೆ ಯೋಗಾಂತರ್ಭಾವವನ್ನು ಈ ಮೊದಲು ಪ್ರತಿಪಾದನೆ ಮಾಡಿರುವೆನು. ಕೇವಲ ಕರ್ಮಯೋಗವನ್ನೇ 'ಯೋಗ' ವೆಂದು ವ್ಯವಹರಿಸುವುದು ಯೋಗಶಬ್ದದ ಅಮುಖ್ಯ ಪ್ರಯೋಗವು. ಕರ್ಮಪ್ರಯೋಗದಿಂದ ಸನ್ಯಾಸವು ಪ್ರತ್ಯೇಕವಾದುದಾದರೂ, ಮುಖ್ಯ 'ಯೋಗ' ದಲ್ಲಿ (ಮುಖ್ಯಾರ್ಥದಲ್ಲಿ ಪ್ರಯೋಗಿಸಲ್ಪಡುವ 'ಯೋಗ' ದಲ್ಲಿ) ಅಂತರ್ಭಾವವನ್ನು ಹೊಂದುವುದು. ಯಾವುದನ್ನು ಸನ್ಯಾಸವೆಂದು ಹೇಳುವರೋ ಅದನ್ನೇ ಯೋಗವೆಂದು ತಿಳಿ. ಕಾಮಕ್ರೋಧಾದಿವರ್ಜನ-ರೂಪ ಸನ್ಯಾಸವು, ಮುಖ್ಯ ಜ್ಞಾನೋಪಾಯವಾದ, ಕಾಮಾದಿವರ್ಜನ-ವಿಶಿಷ್ಟನಿವೃತ್ತಕರ್ಮಾನುಷ್ಠಾನರೂಪ ಯೋಗಾಂತರ್ಭೂತವಾದುದೆಂದು ತಿಳಿ. ಹೇ ಪಾಂಡವ! ಸನ್ಯಾಸರಹಿತವಾದ ಕರ್ಮಾನುಷ್ಠಾನಮಾತ್ರವುಳ್ಳ ಯಾವನೂ ಯೋಗಿಯಾಗುವುದಿಲ್ಲ. ಸಾಮಗ್ರಿಗಳ ಏಕದೇಶವು(ಒಂದು ಭಾಗವು) ಕಾರ್ಯವನ್ನು ಹುಟ್ಟಿಸಬಲ್ಲುದೇ? ಏಕದೇಶದ ನಿರೂಪಣೆಗಾಗಿ ಮಾತ್ರ ಸನ್ಯಾಸವೆಂದೂ, ಕರ್ಮಯೋಗವೆಂದೂ ಪ್ರತ್ಯೇಕವಾದ

ವ್ಯವಹಾರವು. ಜ್ಞಾನಕ್ಕೆ ಭಕ್ತಿಭಾಗತ್ವ (ಭಕ್ತಿಯ ಏಕದೇಶತ್ವ) ಇರುವುದರಿಂದ, ಭಕ್ತಿಯನ್ನು ಜ್ಞಾನವೆಂದೂ ವ್ಯವಹರಿಸುವಂತೆ, ಸನ್ಯಾಸ ಮತ್ತು ಯೋಗಗಳ ನಿರೂಪಣೆಯೆಂದು ತಿಳಿ. (೨).

ಅರ್ಜುನ — ಧ್ಯಾನಾಧಿಕಾರವನ್ನು ದೊರಕಿಸುವ ಯೋಗವನ್ನು (ಸನ್ಯಾಸಯುಕ್ತ ಕರ್ಮಯೋಗವನ್ನು) ಕೆಲಕಾಲಮಾತ್ರ ಅನುಷ್ಠಾನ ಮಾಡತಕ್ಕದ್ದೋ ಅಥವಾ ಫಲಪ್ರಾಪ್ತಿ ಪರ್ಯಂತವೋ ?

ಶ್ರೀಕೃಷ್ಣ—ಯೋಗದ ನಿಶ್ಚಣಿಕೆಯನ್ನು ಏರಬೇಕೆಂಬ ಇಚ್ಛೆಯುಳ್ಳ ಪರೋಕ್ಷಜ್ಞಾನಿಗೆ, ಸನ್ಯಾಸಯುಕ್ತಕರ್ಮಾನುಷ್ಠಾನವು ಫಲಪ್ರಾಪ್ತಿ-ಪರ್ಯಂತವೂ ಅವಶ್ಯಕವು. ಭಗವಂತನ ಸಾಕ್ಷಾತ್ಕಾರವಾಗುವವರೆಗೆ ಯಥಾಯೋಗ್ಯಧ್ಯಾನಸಹಿತವಾದ ಕರ್ಮಾನುಷ್ಠಾನವು ಅತ್ಯವಶ್ಯಕ. ಅದೇ, ಯೋಗಾರೂಢನಿಗೆ (ಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಗೆ) ಶಮವು ಅವಶ್ಯಕ. ಶಮವೆಂದರೆ ಭಗವನ್ನಿಷ್ಠಬುದ್ಧಿ ಮತ್ತು ಅವರ ವ್ಯಾಪಾರಗಳಾದ ಧ್ಯಾನ, ವ್ಯಾಖ್ಯಾನ, ಅರ್ಚನಾದಿಗಳು. ಇದರಿಂದ ಜ್ಞಾನಿಯು ಮುಕ್ತಿಯಲ್ಲಿ ಆನಂದಾತಿಶಯವನ್ನು ಪಡೆಯುವನು. ಸಾರಾಂಶ:— ಜ್ಞಾನಾರ್ಥಿಗೆ ಕರ್ಮವು ಸಾಕ್ಷಾತ್ಕಾರಕ್ಕೆ ಕಾರಣವು; ಜ್ಞಾನಿಗೆ ಶಮವು ಮುಕ್ತಿಯಲ್ಲಿ ಆನಂದಾತಿಶಯಕ್ಕೆ ಕಾರಣವು. ವಿಹಿತಕರ್ಮಾನುಷ್ಠಾನವು ಉತ್ತಮಾಧಮಮಧ್ಯಮರೆಂಬ ತ್ರಿವಿಧಜನೋಪಕಾರಿಯೂ ಅಹುದು; ಅವರ ಸೇವಾರೂಪವಾಗಿಯೂ ಇರುವುದು. ಜ್ಞಾನಾರ್ಥಿಗೆ ತ್ರಿವಿಧಜನ-ಸೇವೆಯು ಅವಶ್ಯಕರ್ತವ್ಯವು. ಉತ್ತಮರನ್ನು ಪಾದಸಂಹನನ ಮೊದಲಾದ ಶುಶ್ರೂಷೆಗಳಿಂದ ಸೇವಿಸಬೇಕು; ಮಧ್ಯಮರನ್ನು ಪ್ರತಿವಂದನಾದಿಗಳಿಂದ ಸತ್ಕರಿಸಬೇಕು ಮತ್ತು ಅಧಮರನ್ನು ಅನ್ನದಾನಾದಿಗಳಿಂದ ರಕ್ಷಿಸಬೇಕು. ಜ್ಞಾನಾರ್ಥಿಯ ವಿಹಿತಾಚರಣೆಗಳಿಂದ ಪ್ರೀತನಾದ ಪರಮಾತ್ಮನು ಆತನಿಗೆ ದರ್ಶನಭಾಗ್ಯವನ್ನು ಕರುಣಿಸುವನು. ಜ್ಞಾನಿಗೆ ಕರ್ಮಾನುಷ್ಠಾನಮೂಲಕ ತ್ರಿವಿಧಜನಸೇವೆಯ ಅವಶ್ಯಕತೆಯಿಲ್ಲ. ಏಕೆಂದರೆ ತಲ್ಲಭ್ಯಗಳಾದ ಭಗವ-ತ್ಪ್ರೀತಿಸಂದರ್ಶನಗಳು ಆತನಿಗೆ ದೊರೆತಿವೆ. ಹೀಗಿದ್ದರೂ ಅಸಂಪ್ರಜ್ಞಾತ-ಸಮಾಧ್ಯವಸ್ಥೆಯನ್ನುಳಿದು, ಇತರಕಾಲಗಳಲ್ಲಿ ಸ್ವೋತ್ತಮಸೇವೆಯು

ಜ್ಞಾನಿಗೂ ತ್ಯಾಜ್ಯವಲ್ಲ. ಜ್ಞಾನಿಗೆ ಕರ್ಮದ ಉಪಶಮವು (ಸಂಕೋಚಪ್ಪ ನಿಲ್ಲಿಸುವಿಕೆಯು) ಯುಕ್ತವಾದರೂ ಜಪಧ್ಯಾನಾದಿಗಳಿಗೆ ಉಪಶಮವಿಲ್ಲ; ಅವು ಅವಶ್ಯಕರ್ತವ್ಯಗಳೇ ಸರಿ. ಜ್ಞಾನಿಗೆ, ಜ್ಞಾನಾರ್ಥಿಯಂತೆ, ಕರ್ಮಾನು ಷ್ಠಾನದಿಂದ ದೊರೆಯಬೇಕಾದ ಯಾವ ಫಲವೂ ಇಲ್ಲ. ಆತನಿಗೆ ಮುಕ್ತಿಯು ಕಟ್ಟಿಟ್ಟ ಗಂಟು; ತಪ್ಪದೇ ದೊರೆಯುವುದು. ಆದರೆ ಮುಕ್ತಿಯಲ್ಲಿ ಸುಖಾತಿಶಯವನ್ನು ಹೊಂದಲಿಕ್ಕಾಗಿ, ಧ್ಯಾನವ್ಯಾಖ್ಯಾನಾದಿ ಕರ್ಮಗಳು ಉಕ್ತವಾಗಿವೆ. ಕಾಯಕಕರ್ಮಗಳ ಉಪಶಮವೂ (ಮಾನಸಿಕ, ವಾಚನಿಕ) ಧ್ಯಾನಾದಿಕರ್ಮಗಳ ಅನುಷ್ಠಾನವೂ ಯೋಗ್ಯ ವೆನಿಸುವುವು. (೩).

ಅರ್ಜುನ—ಯೋಗಾರೂಢನ ಲಕ್ಷಣಗಳಾವುವು ?

ಶ್ರೀಕೃಷ್ಣ—ಪಾರ್ಥ! ಈ ಹಿಂದೆ ಅಪರೋಕ್ಷಜ್ಞಾನಿಯ (ಸ್ಥಿತಪ್ರಜ್ಞನ) ಲಕ್ಷಣಗಳನ್ನು ವಿಸ್ತಾರವಾಗಿ ನಿರೂಪಿಸಿರುವೆನು. ಅವನೇ ಯೋಗಾ ರೂಢನು. ಆದರೂ ಆತನ ಸಿದ್ಧಿದ್ಯೋತಕವಾದ ಮುಖ್ಯ ಲಕ್ಷಣವನ್ನು ಸಂಗ್ರಹಿಸಿ ಹೇಳುವೆನು, ಕೇಳು. ಯಾರು, ಶಬ್ದಾದಿವಿಷಯಗಳಲ್ಲಿಯೂ, ಕರ್ಮಗಳಲ್ಲಿಯೂ, ಯಾವ ಪ್ರಯತ್ನವೂ ಇಲ್ಲದೇ (ಅನಾಯಾಸದಿಂದ) ಯಾವಾಗ, ಅನುಷಂಗರಹಿತನಾಗುವನೋ, ಆಗ ಆತನು ಯೋಗಾರೂಢ ನೆಂದು ಕರೆಯಲ್ಪಡುವನು. ಕರ್ಮಾನುಷ್ಠಾನದಲ್ಲಿ ಸಂಕಲ್ಪವನ್ನು ಪರಿ ತ್ಯಾಗಮಾಡುವುದೇ ಅನುಷಂಗವಿಲ್ಲದಿರುವಿಕೆಯು. ಸಂಕಲ್ಪತ್ಯಾಗವೆಂದರೆ ಭಗವತ್ಪ್ರೀತಿಯನ್ನಲ್ಲದೇ ಬೇರಾವ ಉದ್ದೇಶವೂ ಇಲ್ಲದಿರುವಿಕೆ; ಮಾತ್ರವಲ್ಲ, ಮಮತೆಯನ್ನೂ ಬಿಟ್ಟಿರುವಿಕೆ. ಸಂಕಲ್ಪಾದಿ ಸರ್ವಕ್ರಿಯೆಯೂ ಭಗವದಧೀನವೆಂಬ ಜ್ಞಾನವೇ ಕರ್ಮದಲ್ಲಿ ಸಂಕಲ್ಪತ್ಯಾಗವು. ಸಾರಾಂಶ:- ಕರ್ಮಾಸಕ್ತಿರಾಹಿತ್ಯವು ಯೋಗಾರೂಢನ ಮುಖ್ಯಲಕ್ಷಣವು. ಆಸಕ್ತಿರಹಿತ ನೆಂದರೆ ಉದಾಸೀನನಾಗಿ ಕರ್ಮಗಳನ್ನು ಬಿಟ್ಟು ಕೂಡುವುದೆಂದು ಭ್ರಮಿಸಲಾರೆಯಷ್ಟೆ! (೪). ಆದ್ದರಿಂದ ಸನ್ಯಾಸಯುಕ್ತ ವಿಹಿತ ಕರ್ಮಾನುಷ್ಠಾನವುಳ್ಳ ಅಧಿಕಾರಿಯು ಅಪರೋಕ್ಷಜ್ಞಾನಲಾಭವಾಗುವ ಪರ್ಯಂತವೂ ಧ್ಯಾನಯೋಗವನ್ನು ಯತ್ನಪೂರ್ವಕವಾಗಿ ಆಚರಿಸಬೇಕು.

ಧ್ಯಾನಯೋಗವೆಂಬುದು 'ಯೋಗ' ದ ಮೇಲಿನ ಮೆಟ್ಟಲು. ಅಲ್ಲಿಂದ ಮೇಲೆ ಕಾಲಿಟ್ಟರೆ ಅದೇ ಸಿದ್ಧಿಸ್ಥಾನವು; ಯೋಗಸಿದ್ಧಿಯೇ ಅಪರೋಕ್ಷಜ್ಞಾನವು. ಧ್ಯಾನವೆಂಬುದು ಪರಿಶುದ್ಧವಾದ ಮನಸ್ಸಿನ ವ್ಯಾಪಾರವು. ಪ್ರತಿಯೊಬ್ಬನಿಗೂ ತನ್ನ ಮನಸ್ಸೇ ಬಂಧುವು; ಮನಸ್ಸೇ ಶತ್ರುವು. ಉಪಕಾರ, ಅಪಕಾರಗಳೆರಡೂ ಮನಸ್ಸಿನಿಂದಲೇ ಆಗುವುವು. ಜೀವನು ತನ್ನ ಉದ್ಧಾರವನ್ನು ತನ್ನ ಮನಸ್ಸಿನಿಂದಲೇ ಕಂಡುಕೊಂಡು ಪುರುಷಾರ್ಥವನ್ನು ಸಾಧಿಸಬೇಕು—ದುಃಖಭಾಜನನಾಗಬಾರದು.

ಅರ್ಜುನ—ಯಾರಿಗೆ, ಎಂತಹ ಮನಸ್ಸು, ಬಂಧುವೂ ಶತ್ರುವೂ ಆಗುವುದು ?

ಶ್ರೀಕೃಷ್ಣ—ಯಾರಿಂದ ಮನಸ್ಸು ಜಯಿಸಲ್ಪಟ್ಟಿರುವುದೋ, ಅವನಿಗೆ ಮನಸ್ಸು ಧ್ಯಾನೋಪಯೋಗಿಯಾಗುವುದರಿಂದ ಉಪಕಾರಿಯು, ಮನೋ-ಜಯವಿಲ್ಲದವನಿಗಾದರೋ ಮನಸ್ಸೇ, ಪ್ರಸಿದ್ಧಶತ್ರುವಿನಂತೆ, ಅನುಪ-ಕಾರಿಯೂ, ಅನರ್ಥಕಾರಿಯೂ ಆಗುವುದು.

ಅರ್ಜುನ—ಅಸ್ವತಂತ್ರನಾದ ಜೀವನು ಮನಸ್ಸನ್ನು ಜಯಿಸಲು ಹೇಗೆ ಸಮರ್ಥನಾಗುವನು ?

ಶ್ರೀಕೃಷ್ಣ—ಯತ್ನಶೀಲನಾದ ಜೀವನಿಗೆ ಪರಮಾತ್ಮನ ಪ್ರಸಾದದಿಂದ ಮನೋಜಯವು ದೊರೆಯುವುದು. ಅದರಿಂದ ಧ್ಯಾನವೂ, ಧ್ಯಾನದಿಂದ ಅಪರೋಕ್ಷವೂ ಅದರಿಂದ ಮುಕ್ತಿಯೂ, ಕ್ರಮವಾಗಿ, ಭಗವತ್ಪ್ರಸಾದ ದಿಂದಲೇ ಲಭಿಸುವುವು. ಜೀವನಿಗೆ, ಪ್ರಸನ್ನನಾದ ಪರಮಾತ್ಮನೇ ಬಂಧುವು; ಪ್ರಸನ್ನನಾಗದೇ ಕುಪಿತನಾದರೆ ಆತನೇ ಶತ್ರುವು. ಜೀವದ ಯತ್ನಾನುಸಾರವಾಗಿ ಪ್ರಸನ್ನನಾಗತಕ್ಕ, ದೋಷದೂರನಾದ, ಸರ್ವೋತ್ಕೃಷ್ಟ ಪ್ರಭುವೆಂದು ತಿಳಿದು, ಭಗವಂತನನ್ನು ಭಕ್ತಿಯಿಂದ ಸೇವಿಸಿ ಮನೋಜಯ ವನ್ನು ಯತ್ನಪೂರ್ವಕವಾಗಿ ಸಂಪಾದಿಸಿಕೊಂಡು ಧ್ಯಾನದಲ್ಲಿ ತೊಡಗ ಬೇಕು. (೫—೬)

ಅರ್ಜುನ—ಭಕ್ತಿಯಿಂದ ಪರಮಾತ್ಮನನ್ನೂ, ತತ್ಪೂರ್ವಕವಾದ ಂದ ಮನಸ್ಸನ್ನೂ ವಶಗೊಳಿಸಿಕೊಂಡವನಿಗೆ, ಪರಮಾತ್ಮನೂ,

ಮನಸ್ಸೂ ಬಂಧುಗಳೆಂದೂ ಇಲ್ಲದಿದ್ದರೆ ಶತ್ರುಗಳೆಂದೂ ಹೇಳಿದಂತಾಯಿತು, ಅಲ್ಲವೇ ?

ಶ್ರೀಕೃಷ್ಣ—ನಿಶ್ಚಯವಾಗಿಯೂ ಹಾಗೆಯೇ ಸರಿ.

ಅರ್ಜುನ—ಈ ಬಂಧುಗಳು ಯಾವ ಪ್ರಕಾರದ ಉಪಕಾರವನ್ನೆಸಗು ವರು ?

ಶ್ರೀಕೃಷ್ಣ—ಈ ಬಂಧುಗಳು ಅವನನ್ನು ಪ್ರಶಾಂತನನ್ನಾಗಿ ಮಾಡು ವರು. ಎಂದರೆ, ಆತನ ಮನಸ್ಸು ಅನಾಯಾಸವಾಗಿ ವಿಷಯಗಳಲ್ಲಿ ಆಸಕ್ತ ವಾಗದ ಸ್ಥಿತಿಯನ್ನು ಹೊಂದುತ್ತದೆ ; ಆತನ ಹೃದಯದಲ್ಲಿ ಪರಮಾತ್ಮನು ಸನ್ನಿಹಿತನಾಗುತ್ತಾನೆ; ಧ್ಯಾನವಿಷಯನಾಗಿ ಪ್ರತ್ಯಕ್ಷದರ್ಶನವನ್ನು ಕೊಡುತ್ತಾನೆ. ಇದೇ ಯೋಗದ ಫಲವು. ಅವನೇ ಯೋಗಾರೂಢನು. ಆತನು ವಿಷಯಭೋಗೇಚ್ಛೆಯನ್ನು ಸರ್ವಥಾ ಬಿಟ್ಟಿರುವನು ; ಜ್ಞಾನ-ವಿಜ್ಞಾನಗಳಿಂದ ಸಂತೃಪ್ತನಾಗಿರುವನು. ಎಂದರೆ ಪರಾಪರತತ್ತ್ವವಿಷಯಕ ವಾದ ಪರೋಕ್ಷಜ್ಞಾನನಿಶ್ಚಯವುಳ್ಳವನೂ, ಬ್ರಹ್ಮದರ್ಶನವೆಂಬ ವಿಜ್ಞಾನ ವುಳ್ಳವನೂ ಆಗಿರುವನು. ಶೀತ, ಉಷ್ಣ ; ಸುಖ, ದುಃಖ, ಮಾನ, ಅಪ-ಮಾನಗಳೆಂಬ ದ್ವಂದ್ವ (ವಿರುದ್ಧ) ಧರ್ಮಗಳಿಗೆ ಸಿಕ್ಕಿದರೂ, ಹಿಗ್ಗು ಕುಗ್ಗು ಗಳಿಲ್ಲದೇ ಆಕಾಶದಂತೆ ನಿರ್ವಿಕಾರನಾಗಿರುವನು. ಮಣ್ಣು, ಕಲ್ಲು, ಭಂಗಾರ ಗಳೆಲ್ಲವನ್ನೂ ಸಮಾನವಾಗಿ ಕಾಣುವನು. ಆ ಎಲ್ಲ ವಸ್ತುಗಳೂ, ಅವುಗಳ ಪ್ರಾಪ್ತಿಯೂ ಸಹ ಪರಮಾತ್ಮಾಧೀನವೆಂದೂ ಯಾವುದೊಂದೂ ಸ್ವತಂತ್ರ ವಾಗಿ ಸುಖದುಃಖವನ್ನುಂಟುಮಾಡಲಾರದುದೆಂದೂ, ಅಶಾಶ್ವತವಾದವು ಗಳೆಂದೂ ತಿಳಿದು, ಅವುಗಳ ಪ್ರಾಪ್ತಿ, ಅಪ್ರಾಪ್ತಿಗಳಿಂದ ವಿಕಾರಗೊಳ್ಳದೇ ಸ್ಥಿರಚಿತ್ತನಾಗಿರುವನು. ಆತನೇ ಯುಕ್ತನು, ಎಂದರೆ, ಯೋಗಸಂಪೂರ್ತಿ ಯುಳ್ಳವನು— ಯೋಗಾರೂಢನು. (೭—೮)

ಅರ್ಜುನ—ಹೇ ದೇವ ! ಯೋಗಾರೂಢನ ಈ ಸಮತ್ವಬುದ್ಧಿ ಪ್ರಕಾರ ವನ್ನು ವಿಶದಗೊಳಿಸು. ಯೋಗಿಶ್ರೇಷ್ಠನ ಸಮಬುದ್ಧಿಯ ರಹಸ್ಯವಿಶೇಷ ಗಳನ್ನು—ತಾತ್ವಿಕಸೂಕ್ಷ್ಮಗಳನ್ನು—ತಿಳಿಯಲಪೇಕ್ಷಿಸುವೆನು.

ಶ್ರೀಕೃಷ್ಣ—ಯೋಗಿಶ್ರೇಷ್ಠನು, ಹೊನ್ನುಮಣ್ಣುಗಳಲ್ಲಿ ಮಾತ್ರವಲ್ಲ; ಸಕಲಜೀವಸಮುದಾಯದಲ್ಲಿ ಸಮಬುದ್ಧಿಯುಳ್ಳವನಾಗಿರುವನು. ಸಮತ್ವವನ್ನು ವಿವರಿಸುವೆನು, ಕೇಳು. ಪ್ರತ್ಯುಪಕಾರವನ್ನು ನಿರೀಕ್ಷಿಸದೇ ಉಪಕಾರಮಾಡುವವನು **ಸುಹೃತ್**; ದುಃಖಸ್ಥಾನವನ್ನು ತಿಳಿಸಿ, ಅದರಿಂದ ರಕ್ಷಿಸುವವನು **ಮಿತ್ರನು**; ಪ್ರಾಣಾಪಹಾರ ಮೊದಲಾದ ಅಪಾಯಗಳನ್ನೆಸಗುವವನು **ಅರಿಯು**; ಕರ್ತವ್ಯವಾದ ಉಪಕಾರ ವಿಷಯದಲ್ಲಿಯೂ, ಅಪಕಾರಮಾಡುವುದರಲ್ಲಿಯೂ ಉಪೇಕ್ಷಾಬುದ್ಧಿಯುಳ್ಳವನು **ಉದಾಸೀನನು**: ಅಪಕಾರಉಪಕಾರಗಳೆರಡನ್ನೂ ಮಾಡುವವನು **ಮಧ್ಯಸ್ಥನು**; ಅನಿಷ್ಟವನ್ನು ಮಾಡುವವನು **ದ್ವೇಷ್ಯನು**; ಉಪಕಾರ ಮಾಡುವವನು **ಬಂಧುವು**; ಸದಾ ಲೋಕಹಿತಕಾರಿಗಳಾದ ಪ್ರಶಾಂತರಾದ ಸದಾಚಾರಿಗಳು **ಸಾಧುಗಳು**; ದುಷ್ಕರ್ಮಿಗಳಾದ, ಸಜ್ಜನಾಪಕಾರಿಗಳು **ಪಾಪಿಗಳು**; ಈ ಎಲ್ಲರಲ್ಲಿ ಸಮಬುದ್ಧಿಯುಳ್ಳವನೇ ಯೋಗಿಶ್ರೇಷ್ಠನು. ಈತನು ಸುಹೃದಾದಿಸರ್ವರಲ್ಲಿರುವ ಎಲ್ಲ ಪರಮಾತ್ಮನ ರೂಪಗಳು ಗುಣ-ಪೂರ್ಣತ್ವಾದಿಗಳಿಂದ ಸಮಾನವಾದವುಗಳೆಂದು ತಿಳಿಯುತ್ತಾನೆ. ಮಿತ್ರನಲ್ಲಿ ಮಿತ್ರತ್ವವನ್ನೂ ಶತ್ರುವಿನಲ್ಲಿ ಶತ್ರುತ್ವವನ್ನೂ ಉಂಟುಮಾಡುವುದನ್ನು ಬಿಟ್ಟು ಮಿತ್ರನಲ್ಲಿ ಶತ್ರುತ್ವವನ್ನೂ ಶತ್ರುವಿನಲ್ಲಿ ಮಿತ್ರತ್ವವನ್ನೂ ಉಂಟು-ಮಾಡುವುದೆಂಬ ವೈಷಮ್ಯವು ಪರಮಾತ್ಮನಲ್ಲಿಲ್ಲವೆಂದು ದೃಢವಾಗಿ ತಿಳಿದಿರುವನು. ಈ ಕಾರಣದಿಂದ ಸುಹೃತ್ವಾದಿಗಳು ಈಶಕೃತವಾದವುಗಳೆಂದೂ, ಯಾರೂ ಸ್ವತಂತ್ರರಾಗಿ ಶತ್ರುಮಿತ್ರರಲ್ಲವೆಂದೂ ತಿಳಿದಿರುವನು. ಸುಹೃದಾದಿ **ಜೀವರ** ವಿಷಯದಲ್ಲಿ ಸಹ ಸಮಬುದ್ಧಿಯುಳ್ಳವನಾಗಿರುತ್ತಾನೆ. ಎಂದರೆ ಸುಹೃತ್ವಾದಿ ಧರ್ಮಗಳು ಜೀವರಲ್ಲಿ ಸ್ವಾಭಾವಿಕವಲ್ಲವೆಂದೂ ಮನಸ್ಸಿನ ವ್ಯಾಪಾರಭೇದದಿಂದ ಉಂಟಾದವುಗಳೆಂದೂ ತಿಳಿಯುವನು. ಸುಜೀವರಲ್ಲಿಯೇ ಕೆಲವರು ಮಿತ್ರರಾಗಿರುವುದೂ ಕೆಲವರು ಶತ್ರುಗಳಾಗಿರುವುದೂ ನಮ್ಮ ಅನುಭವಕ್ಕೆ ಬರುವುದು. ಈ ಮಿತ್ರತ್ವಾದಿಧರ್ಮಗಳು ಅಂತಃಕರಣರೂಪ ಉಪಾಧಿಯಿಂದ ತತ್ಕಾಲದಲ್ಲಿ ಉದ್ಭವಿಸಿ ಕಾಲಾಂತರದಲ್ಲಿ ನಷ್ಟಗೊಳ್ಳುವುವು. ದೇವ, ದಾನವ, ಮಾನವ ಭೇದದಿಂದ ತಾರತಮ್ಯಯುಕ್ತವಾದ ಜೀವಸ್ವಭಾವಗಳು (ಸ್ವರೂಪಧರ್ಮ

ಗಳು) ಏಕಪ್ರಕಾರವಾಗಿರುವುವೆಂದೂ ಯೋಗಿಶ್ರೇಷ್ಠನು ತಿಳಿಯುತ್ತಾ. ಹೀಗೆ ತಿಳಿಯುವುದೂ ಸಮಬುದ್ಧಿಯೆನಿಸುವುದು. ಈ ತ್ರಿವಿಧಜ್ಞ ವಿಷಯದಲ್ಲಿ ಹೇಗೆ ಹೇಗೆ ವರ್ತಿಸಬೇಕೆಂದು ಶಾಸ್ತ್ರದಲ್ಲಿ ವಿಹಿತವಾ ವುದೋ ಹಾಗೆ ನಡೆಮುಕೊಳ್ಳಬೇಕೆಂಬ ಜ್ಞಾನವೂ ಸಮಬುದ್ಧಿಯೆ. ಯೋಗಿಶ್ರೇಷ್ಠನು ಈ ವಿಧವಾದ ಸಮಬುದ್ಧಿಯುಳ್ಳವನಾಗಿ ಹಾಗೆಯೆ ವರ್ತಿಸುವನು. ಸಮಬುದ್ಧಿಪ್ರಕಾರಗಳನ್ನೂ ಯೋಗಿಶ್ರೇಷ್ಠನ ಅನು ಸಂಧಾನ ವಿಶೇಷಗಳನ್ನೂ ತಿಳಿದೆಯಾ, ಪಾರ್ಥ? (೯)

ಅರ್ಜುನ—ತಿಳಿದೆನು, ಸ್ವಾಮಿ! ಭಗವದ್ದರ್ಶನರೂಪವಾದ ಮುಕ್ತಿ ಫಲವನ್ನು ಸಾಧಿಸಿಕೊಡುವ ಧ್ಯಾನಪ್ರಕಾರವನ್ನು, ಯದ್ಯಪಿ, ಈ ಹಿಂದೆ ಸಂಗ್ರಹವಾಗಿ ನಿರೂಪಿಸಿರುವಿ. ಆಸನಾದಿ ನಿಯಮಗಳ ವಿವರಪೂರ್ವಕ ಅದನ್ನೇ ವಿಸ್ತಾರವಾಗಿ ತಿಳಿಯಲಿಚ್ಛಿಸುವೆನು.

ಶ್ರೀಕೃಷ್ಣ—ಅಹುದು, ಪರಂತಪ! ಕೇಳಬೇಕಾದುದೇ ಸರಿ. ಧ್ಯಾನ ಯೋಗವು ಸಿದ್ಧಿಸಬೇಕಾದರೆ ಬಹು ನಿಯಮಗಳನ್ನು ತಪ್ಪದೇ ಅನುಸರಿಸ ಬೇಕಾಗುವುದು. ಅವುಗಳಲ್ಲಿ ಮುಖ್ಯವಾದುವುಗಳನ್ನು ವಿವರಿಸುವೆನು. ಧ್ಯಾನಕ್ಕಾಗಿ ಮೊದಲು ಮನಸ್ಸನ್ನು ಸಜ್ಜುಗೊಳಿಸಬೇಕು. ಇದು ಬಹು ಮುಖ್ಯವಾದುದು ಮತ್ತು ಕಷ್ಟವೂ ಅಹುದು. ಧ್ಯಾನಕ್ಕೆ ಕೂಡುವ ಮುನ್ನ ವಿಷಯಚಿಂತನೆಯನ್ನು ಮನಸ್ಸಿನಿಂದ ದೂರಮಾಡಬೇಕು. ಯಾವ ವಿಧ ವಾದ ಆಶೆಯೂ ಮನಸ್ಸಿನಲ್ಲಿ ತಲೆದೋರದಂತೆ ಎಚ್ಚರಗೊಳ್ಳಬೇಕು. ಆಶೆಯೆಂಬುದು ಧ್ಯಾನಕ್ಕೆ ದೊಡ್ಡ ಶತ್ರು; ಅದಿಲ್ಲದಂತೆ ಮಾಡಿಕೊಳ್ಳದಿದ್ದರೆ, ಧ್ಯಾನದ ಆಶೆಯನ್ನೇ ಬಿಡುವುದು ಲೇಸು. ಹಾಗೂ ನಿಯಮಿಸಲ್ಪಟ್ಟ ದೇಹವುಳ್ಳವನಾಗಬೇಕು. ಸ್ನಾನ, ಆಹಾರಾದಿನಿಯಮಗಳನ್ನು ತಪ್ಪದೆ ಪಾಲಿಸುತ್ತಿರಬೇಕು. ದುರ್ಜನರೂ ದುರಾಚಾರಿಗಳೂ ಸೇರದಿರುವ ಪವಿತ್ರ ಸ್ಥಳದಲ್ಲಿ ಸಂಗಶೂನ್ಯನಾಗಿ (ಒಬ್ಬನೇ) ಕೂತು, ಧ್ಯಾನಯೋಗಾನುಷ್ಠಾನ- ಕರ್ತನು ಮನಸ್ಸನ್ನು ಏಕಧಾರೆಯಂತೆ (ಮಧ್ಯೆ ವಿಚ್ಛಿತ್ತಿಬಾರದಂತೆ) ಭಗವಂತನಲ್ಲಿ ಹರಿಗೊಡಬೇಕು (ಭಗವನ್ನಿಷ್ಠವಾದುದನ್ನಾಗಿ ಮಾಡ ಬೇಕು (೧೦) ಧ್ಯಾನಕ್ಕಾಗಿ ಕೂಡುವ ಸ್ಥಳವು ಪರಿಶುದ್ಧವಾಗಿರಬೇಕು;

ಮನಃಪ್ರಸನ್ನತೆಗೆ ಸ್ವಚ್ಛತೆಯು ಅತ್ಯವಶ್ಯಕ. ಕೂಡುವ ಆಸನವು ಅತಿ ಎತ್ತರ ವಾಗಿರಬಾರದು ಅಥವಾ ಅತಿ ತಗ್ಗೂ ಆಗಿರಬಾರದು; ವಸ್ತ್ರ, ವ್ಯಾಘ್ರಾದಿಗಳ ಚರ್ಮ, ದರ್ಭೆಗಳಿಂದ ಆಸನವು ಆಚ್ಛಾದಿತವಾಗಿರಬೇಕು. (ಆಸನದಮೇಲೆ ಮುಚ್ಚಿರಬೇಕು). ಆಸನವು ಸ್ಥಿರವಾಗಿರಬೇಕು. ಎಂದರೆ ತನ್ನ ದೇಹಕ್ಕೆ ಯೋಗ್ಯವಾದ ವಿಸ್ತಾರವುಳ್ಳದ್ದೂ, ಅಲ್ಲಾಡದಂತೆ ಭದ್ರವಾಗಿ ನೆಲೆಸಿರುವುದೂ ಆಗಿರಬೇಕು. (೧೧) ಇಂತಹ ಆಸನದಲ್ಲಿ ಸ್ಥಿರವಾಗಿ ಕೂಡಬೇಕು. ದೇಹವು ಚಲಿಸಿದರೆ ಮನಸ್ಸಿನ ಏಕಾಗ್ರತೆಗೆ ಭಂಗಬರುವುದು. ಕುಳಿತು ಧ್ಯಾನಮಾಡು ವುದೇ ಶ್ರೇಷ್ಠವು. ಆಸನದಲ್ಲಿ ಕೂತು, ದಶೇಂದ್ರಿಯಗಳ ಮತ್ತು ಮನಸ್ಸಿನ ಸಕಲ ವ್ಯಾಪಾರಗಳನ್ನು ಉಪರಮಗೊಳಿಸಿ (ನಿಲ್ಲಿಸಿ) ಮನಸ್ಸನ್ನು ಏಕಾಗ್ರ ಗೊಳಿಸಿ ಧ್ಯಾನದಲ್ಲಿ ತೊಡಗಬೇಕು. ಧ್ಯಾನಯೋಗವು ಸರ್ವಪಾಪಪರಿಹಾರ ಕವು ಮತ್ತು ಸಂಸಾರರೂಪವಾದ ಮಲವನ್ನು ನಿವೃತ್ತಿಗೊಳಿಸಲು ಸಮರ್ಥ ವಾದುದು. ಆದ್ದರಿಂದ ಈ ಎಲ್ಲ ನಿಯಮಗಳನ್ನೂ ಸ್ವಲ್ಪವೂ ತಪ್ಪದೇ ಪಾಲಿಸಬೇಕು. (೧೨) ಇನ್ನೂ ಹೇಳುವೆನು, ಕೇಳು. ದೇಹ, (ಮಧ್ಯದೇಹ-ಕಾಯ) ತಲೆ ಮತ್ತು ಕುತ್ತಿಗೆಗಳನ್ನು ಋಜುವಾಗಿ (ಬಗ್ಗದಂತೆ) ಧರಿಸ ಬೇಕು ; ಚಲಿಸದಂತೆ ದೃಢವಾಗಿರಬೇಕು. ತನ್ನ ಮೂಗಿನ ಕೊನೆಯನ್ನೇ ನೋಡುತ್ತಾ, ದಿಕ್ಕುಗಳನ್ನು ನೋಡದೇ (ಬೇರಾವಕಡೆಗೂ ನೋಡದೇ) ಧ್ಯಾನಮಾಡಬೇಕು. (೧೩) ಮನಸ್ಸು, ಧ್ಯಾನದಲ್ಲಿ ಚಿರಕಾಲ ನಿಲ್ಲುವಂತಾ ಗಲು ಅದು ಪ್ರಶಾಂತವಾಗಿರಬೇಕು, ಎಂದರೆ, ಸ್ವಾಭಾವಿಕವಾದ ವಿಷಯ-ಪ್ರವೃತ್ತಿರಾಹಿತ್ಯವನ್ನು ಪಡೆದಿರಬೇಕು. ವಿಷಯಗಳಿಂದ ಮನಸ್ಸನ್ನು ಬಿಗಿಹಿಡಿಯುವುದು ಯತ್ನದಿಂದಮಾತ್ರ ಸಾಧ್ಯವಾಗುತ್ತಲಿದ್ದರೆ, ಅಂಥವನು ಧ್ಯಾನಾಧಿಕಾರಿಯಾಗಲಾರನು. ಅದಕ್ಕಾಗಿ ಆತನ ಶಕ್ತಿಯು ವೆಚ್ಚವಾಗು ವುದು ಮತ್ತು ಆ ಕಾರಣದಿಂದಲೇ ಮನಸ್ಸು ಭಗವಂತನಲ್ಲಿ ನಿರಂತರವಾಗಿ ನಿಲ್ಲುವುದಿಲ್ಲ. ಅಲ್ಲದೇ, ವ್ಯಾಘ್ರಚೋರಾದಿಭಯಗಳಿಗೆ ಅವಕಾಶವಿರುವ ಸ್ಥಳವು ಧ್ಯಾನಕ್ಕೆ ಯೋಗ್ಯವಲ್ಲ ; ಹಾಗೂ ಭಗವದಾಜ್ಞೆಯಿಲ್ಲದೇ ತನಗೆ ಯಾರಿಂದ ಯಾವಭಯವೂ ಅಪಾಯವೂ ಸಂಭವಿಸಲು ಶಕ್ಯವಿಲ್ಲವೆಂಬ ನಿರ್ಭಯಮನೋಭಾವವನ್ನೂ ಬೆಳೆಸಿಕೊಂಡಿರಬೇಕು; ಬ್ರಹ್ಮಚರ್ಯ-

ಪರಿಪಾಲನೆಯಿಂದ, (ವಿಷಯಭೋಗಪರಿತ್ಯಾಗವೇ ಮೊದಲಾದ ನಿಯಮ ಗಳಿಂದ), ವಾಸನಾಬಲದಿಂದ ವಿಷಯಗಳನ್ನು ಕುರಿತು ಧಾವಿಸುವ ಮನಸ್ಸನ್ನು ಹಿಂತಿರುಗಿಸಿ, ನಾನೇ ಸರ್ವೋತ್ತಮನೆಂಬ ಜ್ಞಾನನಿಷ್ಠವು ಳ್ಳವನಾಗಿ, ನನ್ನಲ್ಲಿ ಸ್ಥಾಪಿಸಿದರೆ, ಅಪ್ರಯತ್ನದಿಂದ ಮನಸ್ಸು ನನ್ನಲ್ಲಿ ನಿಲ್ಲುವುದು. (೧೪) ಹೀಗೆ ನಿಯತವಾದ ಮನಸ್ಸುಳ್ಳ ಯೋಗಾನುಷ್ಠಾನ ಕರ್ತನು ಸದಾ ನನ್ನ ಧ್ಯಾನದಲ್ಲಿ ಆಸಕ್ತನಾಗಿ, ನನ್ನ ದರ್ಶನವನ್ನು ಪಡೆದು, ದೇಹತ್ಯಾಗಾನಂತರ ನನ್ನಲ್ಲಿ ಸ್ಥಿತಿರೂಪವಾದ ಮುಕ್ತಿಯನ್ನು ಹೊಂದು ವನು. (೧೫)

ಅರ್ಜುನ—ಧ್ಯಾನಯೋಗನಿಷ್ಠನಿಗೆ ಆಹಾರಾದಿ ನಿಯಮಗಳಾವುವು?

ಶ್ರೀಕೃಷ್ಣ—ಅಧಿಕವಾಗಿ ಭೋಜನಮಾಡುವವನಿಗೂ, ಸರ್ವಥಾ ಭೋಜನವನ್ನೇ ಮಾಡದವನಿಗೂ ಯೋಗವು ಸಾಧಿಸುವುದಿಲ್ಲ. ಹಾಗೆಯೇ ಅತಿಯಾಗಿ ನಿದ್ರಿಸುವವನಿಗೂ, ನಿದ್ರೆಯೇ ಇಲ್ಲದೇ ಸದಾ ಜಾಗ್ರತನಾಗಿ ರುವವನಿಗೂ, ಧ್ಯಾನವು ಕೂಡುವುದಿಲ್ಲ. ಅತಿನಿದ್ರೆ, ಅಧಿಕಭೋಜನ ಗಳನ್ನು ಪರಿತ್ಯಾಗಮಾಡಬೇಕು. ಮಿತವಾದ ನಿದ್ರಾಹಾರಗಳುಳ್ಳವನಾಗ ಬೇಕು. (೧೬)

ಅರ್ಜುನ—ನಿದ್ರಾಹಾರಗಳನ್ನು ತೊರೆದು ದೀರ್ಘಕಾಲ ಧ್ಯಾನ-ಮಗ್ನರಾಗುವ ಯೋಗಿಗಳಿಲ್ಲವೇ?

ಶ್ರೀಕೃಷ್ಣ—ಇರುವರು; ಅವರು ಬಹು ಶಕ್ತರು. ಅಶಕ್ತರಿಗೆ ಅನಶನ ಮತ್ತು ಜಾಗರಣಗಳು ನಿಷೇಧಿಸಲ್ಪಡುತ್ತವೆ. ಶಕ್ತರಿಗೆ ಅನಶನಾದಿಗಳು ಯೋಗನಾಶಕ್ಕೆ ಕಾರಣವಾಗುವುದಿಲ್ಲ. ಆದ್ದರಿಂದ, ಹೇ ಪಾರ್ಥ! ಆಹಾರ-ವಿಹಾರಗಳು, ವಿವಿಧ ಕಾರ್ಯಾಚರಣೆ, ನಿದ್ರೆ ಮತ್ತು ಎಚ್ಚರಿಕೆಗಳು ಯೋಗವಿಘಾತಕಗಳಾಗದಂತಿರಬೇಕು; ಎಂದರೆ, ಶ್ರಮ, ವಿಷಯಾತುರತೆ, ಆಲಸ್ಯ ಮೊದಲಾದ ಧ್ಯಾನವಿರೋಧಿಗಳಾದ ಪರಿಣಾಮಗಳುಂಟಾಗದಂತೆ ಮಿತಿಯಲ್ಲಿರಬೇಕು. ನಿದ್ರಾಹಾರ ದುಡಿಮೆಗಳ ಮಿತಿಯನ್ನು ಯೋಗದಲ್ಲಿ ತೊಡಗುವವನು ತನ್ನ ಶಕ್ತಿಯನ್ನು ಗಮನಿಸಿ ತಾನೇ ನಿರ್ಧರಿಸಿಕೊಳ್ಳ ಬೇಕು. ಹೀಗೆ ಯುಕ್ತವಾದ ಆಹಾರಾದಿಗಳುಳ್ಳವನಿಗೇ ಯೋಗವು ದುಃಖ-ಪರಿಹಾರಕವಾಗಿ ಶಾಂತಿಯನ್ನು ದೊರಕಿಸುತ್ತದೆ. (೧೭)

ಅರ್ಜುನ—ಯಾರನ್ನು ಸಂಪೂರ್ಣಗೊಂಡ ಧ್ಯಾನಯೋಗವುಳ್ಳವನೆಂದು ಹೇಳಬಹುದು ?

ಶ್ರೀಕೃಷ್ಣ—ಯಾವಾತನ ಮನಸ್ಸು, ವಿಷಯಗಳಿಂದ ವಿಶೇಷವಾಗಿ ನಿವರ್ತಿಸಲ್ಪಟ್ಟು, ಯಾವಾಗ ಭಗವಂತನಲ್ಲಿ ಸ್ಥಿರವಾಗಿ ನಿಲ್ಲುವುದೋ ಮತ್ತು ಸಕಲ ಕಾಮನೆಗಳನ್ನು ಬಿಟ್ಟು ನಿಸ್ಪೃಹವಾಗುವುದೋ, ಆಗ, ಆ ಅಧಿಕಾರಿಯು ಯೋಗಸಂಪೂರ್ತಿಯುಳ್ಳವನೆಂದು ಕರೆಯಲ್ಪಡುತ್ತಾನೆ. (೧೮

ಅರ್ಜುನ—ಯೋಗಸಂಪನ್ನನ ಮನಃಸ್ಥಿತಿಯನ್ನು ಸದೃಷ್ಟಾಂತವಾಗಿ ಬುದ್ಧ್ಯಾರೂಢವಾಗುವಂತೆ ನಿರೂಪಿಸು, ದೇವ !

ಶ್ರೀಕೃಷ್ಣ—ವಶವರ್ತಿಯಾದ ಮನಸ್ಸಿನಿಂದ ಭಗವಂತನನ್ನು ಧ್ಯಾನಿಸುತ್ತ, ಸಮಾಧಿಯನ್ನೇರಿದ, ಧ್ಯಾನಯೋಗಿಯ ಮನಸ್ಸು, ಗಾಳಿಯ ಸುಳಿವಿಲ್ಲದ ಸ್ಥಳದಲ್ಲಿ ಉರಿಯುವ ದೀಪಜ್ವಾಲೆಯಂತೆ ನಿಶ್ಚಲವಾಗಿರುವುದು. (೧೯) ಯೋಗಸೇವೆಯಿಂದ (ಧ್ಯಾನದಲ್ಲಿ ತೊಡಗುವುದರಿಂದ) ಸಮಾಧಿಯನ್ನು ಹೊಂದಿದ ಯೋಗಿಯ ಮನಸ್ಸು ಸಕಲಬಾಹ್ಯವ್ಯಾಪಾರಶೂನ್ಯವಾಗಿರುವುದು. ಭಗವಂತನ ಅನುಗ್ರಹವಾಗಲು, ಸಮಾಧ್ಯವಸ್ಥೆಯಲ್ಲಿ ಮನಸ್ಸಿನಿಂದ ಭಗವಂತನನ್ನು ನೋಡುತ್ತಾ, ಈ ಭೌತಿಕದೇಹದಲ್ಲಿದ್ದರೂ, ಯೋಗಿಯು ಅಲೌಕಿಕವಾದ ತೃಪ್ತಿಯನ್ನು ಹೊಂದುವನು. (೨೦)

ಅರ್ಜುನ—ಭಗವದ್ದರ್ಶನದಿಂದ ಲಭಿಸುವುದೆಂಬ ಈ ವಿಲಕ್ಷಣ-ತೃಪ್ತಿಗೆ ಕಾರಣವೇನು ಮತ್ತು ಅದು ಹೇಗೆ ವಿಲಕ್ಷಣವು ?

ಶ್ರೀಕೃಷ್ಣ—ತೃಪ್ತಿಗೆ ಸುಖವಲ್ಲದೇ ಬೇರಾವುದೂ ಎಂದೂ ಕಾರಣವಲ್ಲ. ಭಗವದ್ದರ್ಶನದಿಂದ, ಯೋಗಿಗೆ, ಆತ್ಯಂತಿಕವಾದ (ಅತಿಶ್ರೇಷ್ಠವಾದ–ಎಲ್ಲೆಮೀರಿದ) ಸುಖವು ಲಭಿಸುವುದು. ಆ ಸುಖವು ಅನುಭವೈಕವೇದ್ಯವಾದುದು—ಬುದ್ಧಿಗ್ರಾಹ್ಯವಾದುದು. ಯೋಗಿಯು ಸುಖಾನುಭವಜ್ಞಾನವುಳ್ಳವನಾಗಿರುವನು. ಆ ಸುಖವು ಅತೀಂದ್ರಿಯವಾದುದು; ಇಂದ್ರಿಯ-ಜನ್ಯವಾದುದಲ್ಲ–ಸಂಸಾರದಲ್ಲಿ ಅನುಭವಿಸುವ ವೈಷಯಿಕಸುಖದಿಂತಿರುವ ಸುಖವಲ್ಲ; ಎಂದೂ ಅನುಭವಿಸದ ವಿಲಕ್ಷಣ ಆನಂದವಿಶೇಷವು. ತಾನು ಕಾಣುತ್ತಿರುವ ಭಗವದ್ರೂಪದಿಂದ ಚಲಿಸದೇ, ಯೋಗಿಯು ಆನಂದಮಗ್ನ

ನಾಗಿರುವನು. (೨೧) ಯೋಗಸಿದ್ಧಿಯನ್ನು ಪಡೆದ ಜೀವನು, ಅದಕ್ಕಿಂತ ಅಧಿಕವಾದ ಮತ್ತೊಂದು ಲಾಭವಿಲ್ಲೆಂದು ಮನಗಾಣುವನು. ಯೋಗ ನಿರತನು, ಗುರುತರವಾದ ದುಃಖಕಾರಣಗಳಿಂದ ಸಹ (ಯಾವ ದುಃಖಗಳೇ ಬರಲಿ, ಎಂತಹ ಕಷ್ಟಗಳೇ ಬರಲಿ) ಹಿಮ್ಮೆಟ್ಟುವುದಿಲ್ಲ, ಅನ್ಯಮಾರ್ಗವನ್ನು ಹಿಡಿಯುವುದಿಲ್ಲ. ಯೋಗಾರೂಢನು (ಅಸಂಪ್ರಜ್ಞಾತಸಮಾಧಿಯಲ್ಲಿರಲು) ದುಃಖಜನಕವಾದ ಯಾವಕಾರಣದಿಂದಲೂ ಬಹಿರ್ಮುಖನಾಗುವುದಿಲ್ಲ. ಭಗವದಿಚ್ಛೆಯಿಂದ ತಾನು ಕಾಣುತ್ತಿರುವ ಭಗವದ್ರೂಪವು ಮರೆಯಾದಾಗ ಬಹಿರ್ಮುಖನಾಗುವನು). (೨೨) ಯೋಗಸಿದ್ಧಿಯು ಸಕಲ ದುಃಖಗಳನ್ನು ಪರಿಹರಿಸುವುದು. ಹುಟ್ಟುವ ದುಃಖಗಳನ್ನು ಪರಿಹರಿಸುವುದು ಮಾತ್ರವಲ್ಲ, ದುಃಖದ ಉತ್ಪತ್ತಿಯನ್ನೇ ನಿರೋಧಿಸುತ್ತದೆ. ಈ ಪೂರ್ವೋಕ್ತಲಕ್ಷಣ ಗಳಿಂದ ಯುಕ್ತವಾದ ಮತ್ತು ಮಹಾಫಲವುಳ್ಳ ಧ್ಯಾನಯೋಗವೂ, '**ಯೋಗ**'ದಲ್ಲಿ ಅಂತರ್ಭಾವವುಳ್ಳದ್ದು. ಸಂನ್ಯಾಸಯುಕ್ತ ಕರ್ಮಯೋಗ ದಿಂದ ಧ್ಯಾನಯೋಗವು ಸಿದ್ಧಿಸಿ, ಅದರಿಂದ ಬ್ರಹ್ಮದರ್ಶನವು ಲಭಿಸುವುದು. ಆದ್ದರಿಂದ ವಿರಕ್ತನಾದ ಮುಮುಕ್ಷುವು ಅತ್ಯವಶ್ಯವಾಗಿ ಯೋಗಾನುಷ್ಠಾನ ಪರನಾಗಬೇಕು. (೨೩)

ಅರ್ಜುನ—ಹೇ ಕೃಷ್ಣ! ಧ್ಯಾನಯೋಗಿಯು ಅವಶ್ಯವಾಗಿ ಪಾಲಿಸ ಬೇಕಾದ, ಆಸನ, ಆಹಾರಾದಿನಿಯಮಗಳನ್ನೂ, ಸಮಾಧಿಸ್ವರೂಪವನ್ನೂ, ಭಗವದ್ದರ್ಶನದಿಂದ ಲಭಿಸುವ ಸುಖಾನುಭವ ಲಕ್ಷಣಗಳನ್ನೂ ತಿಳಿದೆನು. ಆದರೆ, ಮನಸ್ಸನ್ನು ಸಮಾಧಿಸ್ಥಿತಿಗೊಯ್ಯುವ ಬಗೆ ಹೇಗೆ, ಧ್ಯಾನಕಾಲದಲ್ಲಿ ಯಾವಬಗೆಯ ಆತಂಕಗಳನ್ನು ಎದುರಿಸಬೇಕಾಗಬಹುದು ಮತ್ತು ಅವುಗಳ ಪರಿಹಾರ ಹೇಗೆ ಎಂಬೀ ವಿಷಯಗಳನ್ನು ಇನ್ನೂ ವಿಸ್ತಾರವಾಗಿ, ನಿನ್ನ ಮುಖದಿಂದ ತಿಳಿಯಲಿಚ್ಛಿಸುವೆನು.

ಶ್ರೀಕೃಷ್ಣ— ಪಾರ್ಥ! ಕೇಳು. ದೃಢವಾದ ಸನ್ಯಾಸವಲ್ಲದೇ, ಮನಸ್ಸನ್ನು ಸಮಾಧಿಗೇರಿಸಲು ಅನ್ಯೋಪಾಯವಿಲ್ಲ. ಇದರಿಂದ ಈ ಪ್ರಯೋಜನವನ್ನು ಸಾಧಿಸುವೆನೆಂಬ ಸಂಕಲ್ಪಪೂರ್ವಕವಾಗಿ ಯಾವು ದೊಂದು ಕರ್ಮವನ್ನು ಆರಂಭಿಸುವುದು ಸಾಮಾನ್ಯವಾಗಿ ಎಲ್ಲರಲ್ಲಿ ಕಂಡು

ಬರುತ್ತದೆಯಲ್ಲವೇ ? ಪ್ರಯೋಜನವಿಲ್ಲದ ಪ್ರವೃತ್ತಿಯು ಮಂದಮತಿಯಲ್ಲಿ ಸಹ ಕಾಣುವುದಿಲ್ಲವೆಂಬ ಪ್ರವಾದವೂ ಇದೆ. ಆದರೆ ನಿಜವಾದ ಸನ್ಯಾಸವುಳ್ಳವನು ಈವಿಧಸಂಕಲ್ಪಗಳನ್ನೂ ಬಿಟ್ಟಿರುವನು. ಸಂಕಲ್ಪಪೂರ್ವಕವಾದ ಅನುಷ್ಠಾನದಿಂದ ಮನಸ್ಸು ಫಲವನ್ನು ನಿರೀಕ್ಷಿಸುತ್ತದೆ. ಫಲಾಶೆಯನ್ನು ಸಂಪೂರ್ಣವಾಗಿ ಪರಿತ್ಯಾಗಮಾಡಲು, ಸಂಕಲ್ಪಪೂರ್ವಕವಾದ ಅನುಷ್ಠಾನವನ್ನೇ ಬಿಡಬೇಕು. ಆದ್ದರಿಂದ ಧ್ಯಾನದ ಸಿದ್ಧಿಗೆ ಸಂಕಲ್ಪಜನ್ಯವಾದ ಸರ್ವವಿಧ ಕಾಮನೆಗಳನ್ನು ನಿಃಶೇಷವಾಗಿ ತೊರೆದ ದೃಢಸನ್ಯಾಸವು, ಎಲ್ಲಕ್ಕೂ ಮೊದಲು, ಅತ್ಯವಶ್ಯಕವು. ಇಂದ್ರಿಯಸಮೂಹವನ್ನು ಸರ್ವ-ಪ್ರಕಾರದಿಂದ ನಿಗ್ರಹಿಸಿ ಮನಸ್ಸಿನ ಅಧೀನದಲ್ಲಿಟ್ಟುಕೊಂಡಿರಬೇಕು. ಮನಸ್ಸಿನಿಂದಲ್ಲದೇ, ಇಂದ್ರಿಯನಿಗ್ರಹವು, ಬೇರಾವುದರಿಂದಲೂ ಸಾಧ್ಯವಿಲ್ಲ. ವಿಷಯಾಸಕ್ತಿಯುಳ್ಳ ಮನಸ್ಸು ಇಂದ್ರಿಯಗಳದ್ವಾರಾ ಚಲಿಸಿ, ಧ್ಯಾನಕ್ಕೆ ವಿಚ್ಛಿತ್ತಿಯುಂಟಾಗುತ್ತದೆ. ಆದ್ದರಿಂದ ವಿಷಯಾಸಕ್ತಿಯನ್ನು ದೂರಮಾಡಬೇಕು. ಇದೂ ಕಷ್ಟಸಾಧ್ಯವಾದುದು. ಧೈರ್ಯದಿಂದ ವಶಗೊಳಿಸಲ್ಪಟ್ಟ ಬುದ್ಧಿಯಿಂದ ಇದನ್ನು ಸಾಧಿಸಿಕೊಳ್ಳಬೇಕಾಗುವುದು. ಶ್ರವಣಮನನಗಳಿಂದ ಬುದ್ಧಿಯು ವಶವಾಗುವುದು. ಸಚ್ಛಾಸ್ತ್ರಗಳ ನಿರಂತರ ಶ್ರವಣ-ಮನನಗಳಿಂದ ಬುದ್ಧಿಯು ಸ್ಥಿರಗೊಂಡು, ಜೀವನ ವಶವಾಗುವುದಲ್ಲದೇ, ಧ್ಯಾನಕ್ಕೆ ಅತ್ಯವಶ್ಯಕವಾದ ಭಗವತ್ಪ್ರೀತಿಯನ್ನೂ (ಭಕ್ತಿಯನ್ನೂ) ಉಂಟುಮಾಡುತ್ತದೆ. ಏವಂಚ ಮನಸ್ಸು ಉಪರಮಗೊಳ್ಳಬೇಕು. ಎಂದರೆ, ವಿಷಯಗಳಿಂದ ವ್ಯಾವರ್ತವಾಗಿ ಭಗವಂತನಲ್ಲಿ ರಮಿಸಬೇಕು. ಸನ್ಯಾಸಯುಕ್ತವಾದ ಮನಸ್ಸನ್ನು, ಮೆಲ್ಲಮೆಲ್ಲಗೆ (ಕ್ರಮಕ್ರಮವಾಗಿ) ಉಪರಮಗೊಳಿಸಿ, ಭಗವನ್ನಿಷ್ಠವಾದುದನ್ನಾಗಿ ಮಾಡಬೇಕು; ಅನ್ಯವಸ್ತುಗಳ ಚಿಂತೆಯನ್ನು ಸರ್ವಥಾ ಮಾಡಕೂಡದು. (೨೪-೨೫) ಎಷ್ಟೇ ಪ್ರಯತ್ನಪಟ್ಟರೂ, ಸ್ವತಃ ಚಂಚಲವಾದ ಮನಸ್ಸು ಭಗವಂತನನ್ನು ಬಿಟ್ಟು ಮತ್ತೆ ಮತ್ತೆ ಅನ್ಯವಸ್ತುಗಳ ಕಡೆಗೆ ಹರಿಯುತ್ತದೆ. ಹಾಗೆ ಮನಸ್ಸು ಯಾವ ಯಾವ ವಿಷಯಗಳಲ್ಲಿ ಹೋಗುವುದೋ, ಆಯಾಯ ವಿಷಯಗಳಿಂದ ಅದನ್ನು ಹಿಂದಕ್ಕೆ ಸೆಳೆದುಕೊಂಡು ಭಗವಂತನ ವಶಕ್ಕೆ ಕೊಡಬೇಕು. ತಾನು ಧ್ಯಾನಿಸುತ್ತಿರುವ ಭಗವದ್ರೂಪವನ್ನು ಬಿಟ್ಟು ಬೇರೆ ವಸ್ತುಗಳ

ಕಡೆಗೆ ಧಾವಿಸುವ ಮನಸ್ಸನ್ನು ಪುನಃ ಪುನಃ ಹಿಂದಕ್ಕೆ ಸೆಳೆದು ಆ ಭಗವ ದ್ರೂಪದಲ್ಲಿಯೇ ಸ್ಥಾಪಿಸಬೇಕು. ಚಂಚಲವಾದ ಬಳ್ಳಿಯು, ಬೆಳಗೆದ್ದು ನೋಡುವುದರೊಳಗೆ ಊರುಗೋಲನ್ನು ಬಿಟ್ಟು ಪಕ್ಕಕ್ಕೆ ಚಾಚಿಕೊಂಡಿರು ತ್ತದೆ. ಅದನ್ನು ಎಳೆದು, ಅದರ ಬೆಳವಣಿಗೆಗೋಸ್ಕರವೇ ನೆಟ್ಟಿರುವ ಕೋಲಿಗೆ ಹುರಿಯಿಂದ ಬಿಗಿಯುತ್ತೇವೆ. ಪುನಃ ಮಾರನೆಯ ದಿನವೂ ಹೀಗೆಯೇ—ಇದರಂತೆ ಚಂಚಲವಾದ ಮನಸ್ಸನ್ನು ಧ್ಯಾನಪ್ರತೀಕವಾದ* ಭಗವದ್ರೂಪಕ್ಕೆ ಬಿಗಿಯಬೇಕು. (೨೬) ಹೀಗೆ ಯತ್ನಿಸುವ ಯೋಗಿಯ ಮನಸ್ಸು ಕ್ರಮವಾಗಿ ಪ್ರಶಾಂತವಾಗಿ, ರಜೋಗುಣದ ಉಪಶಮನದಿಂದ ರಾಗದ್ವೇಷಾದಿಕಲ್ಮಷಗಳು ತೊಲಗುತ್ತವೆ. ಮನಸ್ಸು ಸಮಾಧಿಸ್ಥಿತಿಯನ್ನು ನಿರಾಯಾಸವಾಗಿ ಮುಟ್ಟುತ್ತದೆ. ಧ್ಯಾನಸಿದ್ಧಿಯನ್ನು ಪಡೆದ ಪುರುಷನಿಗೆ ಪೂರ್ವೋಕ್ತ ಆತ್ಯಂತಿಕ ಸುಖವು ಲಭಿಸುವುದು. ಇದು ವೇದಪ್ರಸಿದ್ಧ ಪ್ರಮೇಯವಯ್ಯಾ, ಅರ್ಜುನ! (೨೭)

ಅರ್ಜುನ— ಹೀಗೆ ಲಭಿಸುವ ಸುಖವು ಧ್ಯಾನಾದಿಸಾಧನಗಳಿಂದ ದೊರೆಯುವುದೆಂದು ಹೇಳುವುದರಿಂದ, ಸಾಧನಾಭಾವದಿಂದ ನಷ್ಟವೂ ಆಗಬಹುದಲ್ಲವೇ? ಕಾರಣಜನ್ಯವಾದುದು ಕಾರಣಾಭಾವದಿಂದ ನಷ್ಟ ವಾಗುವುದೆಂಬುದು ಲೋಕಸಿದ್ಧವಷ್ಟೆ!

ಶ್ರೀಕೃಷ್ಣ—ಕಲ್ಮಷರಹಿತನಾದ ಯೋಗಿಯು, ನಿರಂತರವಾದ ಭಗವ ದ್ಧ್ಯಾನದಿಂದ ಪಡೆದು ಅನುಭವಿಸುವ ಸುಖವು, ಪರಮಾತ್ಮನ ಸಂಸರ್ಗ

*ಸೂಚನೆ—ಭಕ್ತನು ತನ್ನ ಮನಮೆಚ್ಚುವ ರಾಮ, ಕೃಷ್ಣಾದಿ ಯಾವುದೊಂದು ಭಗವದ್ರೂಪವನ್ನು ಧ್ಯಾನಿಸುತ್ತಿರುವನು. ಅದು ಮನೋಮಯವಾದ ಕೇವಲ ಪ್ರತಿಮೆಯು, ಅದನ್ನೇ ಭಗವಂತನೆಂದು ತಿಳಿಯುವುದು ಭ್ರಮೆ. ಆ ಪ್ರತಿಮೆಯ ಪಾದಾದಿ ಒಂದೊಂದು ಅಂಗವನ್ನು, ಮುಖಪರ್ಯಂತವಾಗಿ, (ಕ್ರಮೇಣ) ಧಾರಣ, ಧ್ಯಾನ, ಸಮಾಧಿ ಕ್ರಮದಿಂದ ಮನಸ್ಸಿನ ವಶಗೊಳಿಸಬೇಕು. ಆ ರೂಪವು ಸಮಾಧಿಯಲ್ಲಿ ಯೋಗಿಯ ಕಣ್ಣಿಗೆ ಕಟ್ಟುವುದು. ನಂತರ ಭಗವದ್ದರ್ಶನಪ್ರತಿ- ಬಂಧಕವಾದ ಪ್ರಾರಬ್ಧಕರ್ಮವಿಲ್ಲದಿದ್ದರೆ, ಅಧಿಕಾರಿಯ ಯೋಗ್ಯತೆಯನ್ನನು- ಲಕ್ಷಿಸಿ, ಪರಮಾತ್ಮನು ಸ್ವೇಚ್ಛೆಯಿಂದ ಮಾನಸಪ್ರತೀಕವೆಂಬ ತೆರೆಯ ಒಳಬದಿ ಯಲ್ಲಿ, ತನ್ನ ಸಚ್ಚಿದಾನಂದಾತ್ಮಕವಾದ ದಿವ್ಯರೂಪದ ಸಂದರ್ಶನ ಭಾಗ್ಯವನ್ನು ಕರುಣಿಸುವನು.

ದಿಂದ ಅಭಿವ್ಯಕ್ತವಾದ ಸ್ವಕೀಯ ಸುಖಾತಿಶಯವು; ಅದು ತನ್ನಲ್ಲಿರದ, ಹುಟ್ಟಿದ ಹೊಸ ವಸ್ತುವಲ್ಲ; ಜೀವಸ್ವರೂಪದಲ್ಲಿದ್ದ ಸುಖದ ಅಭಿವ್ಯಕ್ತಿಯೇ ಆಗಿದೆ. ಭಗವಂತನ ಸಂಸರ್ಗದಿಂದ ಇದ್ದುದೇ ಅನುಭವಾರೂಢವಾಗುತ್ತದೆ; ಆದ್ದರಿಂದ ನಷ್ಟವಾಗತಕ್ಕದ್ದಲ್ಲ. ಈ ಸುಖಾತಿಶಯದ ಭೋಗವನ್ನು ಪಡೆದವನೇ ಅಪರೋಕ್ಷಜ್ಞಾನಿಯು. ಈತನು, ಪ್ರಾರಬ್ಧಾನುಭವದ ನಂತರ ಮುಕ್ತನಾಗುವನು. ಮುಕ್ತಿಯಲ್ಲಿ ಇದೇ ಸ್ವರೂಪಸುಖವನ್ನು ಸದಾ ಅನುಭವಿಸುವನು. (೨೮)

ಅರ್ಜುನ— ನಿನ್ನ ಸಾಕ್ಷಾತ್ಕಾರದಿಂದ ದೊರೆಯುವ ಮಹಾ-ಫಲವನ್ನು ತಿಳಿದೆನು. ಧ್ಯೇಯನಾದ ನಿನ್ನನ್ನು ಹೇಗೆ ತಿಳಿದು ಸಾಕ್ಷಾ-ತ್ಕರಿಸಿಕೊಳ್ಳುವರೆಂಬುದನ್ನೂ ಸಾಮಾನ್ಯವಾಗಿ ನಿರೂಪಿಸಿರುವಿ. ಉತ್ತಮಾಧಿಕಾರಿಗಳು ನಿನ್ನನ್ನು ಹೇಗೆ ತಿಳಿದು ಸಾಕ್ಷಾತ್ಕರಿಸಿಕೊಳ್ಳುವರೆಂಬುದನ್ನು ಕೇಳಲಪೇಕ್ಷಿಸುವೆನು.

ಶ್ರೀಕೃಷ್ಣ—ಧ್ಯಾನನಿರತವಾದ ಮನಸ್ಸುಳ್ಳ ಉತ್ತಮಾಧಿಕಾರಿಗಳು ಬ್ರಹ್ಮಾದಿತೃಣಾಂತವಸ್ತುಸ್ಥಿತನಾದ ಭಗವಂತನು ಐಶ್ವರ್ಯಪೂರ್ಣತ್ವಾದಿ ಸರ್ವಗುಣಗಳಿಂದ ಸಮನೆಂದು ತಿಳಿಯುತ್ತಾರೆ. ತಿಳಿದಂತೆಯೇ, ಎಂದರೆ, ಸರ್ವ ಭೂತಾಂತರ್ಯಾಮಿಯನ್ನಾಗಿಯೇ ನೋಡುತ್ತಾರೆ; ಸರ್ವ ಪ್ರಾಣಿಗಳು ಆತನ ಆಶ್ರಯದಲ್ಲಿರುವುದನ್ನೂ ಕಾಣುತ್ತಾರೆ. (೨೯)

ಅರ್ಜುನ—ಹೀಗೆ ತಿಳಿದು ನೋಡುವ ಉತ್ತಮಾಧಿಕಾರಿಗಳ ಧ್ಯಾನ-ವಿಶೇಷಕ್ಕೆ ದೊರೆಯುವ ಅಧಿಕಫಲವೇನು?

ಶ್ರೀಕೃಷ್ಣ—ಬ್ರಹ್ಮಾದಿ ಸಕಲಜಗತ್ತನ್ನು ನನ್ನ ಅಧೀನವೆಂದು ತಿಳಿದು, ಸರ್ವತ್ರಸ್ಥಿತನಾದ ನನ್ನನ್ನು ಯಾವ ಅಧಿಕಾರಿಯು ನೋಡುತ್ತಾನೆಯೋ ಅವನಿಗೆ ನಾನು ಎಂದೂ ಇಲ್ಲದವನಾಗುವುದಿಲ್ಲ; ಅವನೂ ನನಗೆ ಇಲ್ಲದವನಾಗುವುದಿಲ್ಲ. ಅವನ ಯೋಗಕ್ಷೇಮವನ್ನು ಸರ್ವದಾ ನಾನು ವಹಿಸಿರುವೆನು; ಅವನು ಸದಾ ನನ್ನ ಭಕ್ತನಾಗಿಯೇ ಇರುವನು. (೩೦) ಸರ್ವಭೂತಸ್ಥನೂ ಸರ್ವತ್ರವ್ಯಾಪ್ತನೂ ಆದ ನನ್ನನ್ನು ತಿಳಿದು

ಭಜಿಸುವ ಯೋಗಿಯು, ಯಾವಪ್ರಕಾರದ ಪ್ರವೃತ್ತಿಯುಳ್ಳವನಾದರೂ, ನ್ಯಾಯ, ಅನ್ಯಾಯಗಳನ್ನಾಚರಿಸಿದರೂ (ಅಧರ್ಮಮಾರ್ಗಪ್ರವೃತ್ತನಾದರೂ) ನಿಯತವಾದ ಮೋಕ್ಷವನ್ನು ಪಡೆಯುವನು. (೩೧)

ಅರ್ಜುನ—ಹೇ ಕೃಷ್ಣ! ಭಗವದನುವರ್ತಿಗಳಾದ ಇತರರ ವಿಷಯದಲ್ಲಿ ಉತ್ತಮಾಧಿಕಾರಿಯು ಹೇಗೆ ನಡೆದುಕೊಳ್ಳುವನು?

ಶ್ರೀಕೃಷ್ಣ—ಅವನು ಸರ್ವತ್ರಸಮದರ್ಶಿಯೆಂದು ಹೇಳಿದೆನಲ್ಲವೇ, ಅರ್ಜುನ? ತನ್ನಂತೆ ಇತರರನ್ನು ಬಗೆಯುವನು. ತನಗೆ ಹೇಗೆ ಸುಖವು ಇಷ್ಟವೋ, ದುಃಖವು ಅಪ್ರಿಯವೋ, ಹಾಗೆ ಇತರರಿಗೂ ಎಂದು ತಿಳಿದು, ಎಲ್ಲ ಭಗವದನುವರ್ತಿಗಳಿಗೂ ಸುಖವನ್ನೇ ಕೋರುವನು; ಎಲ್ಲ ಭಗವದ್ಭಕ್ತರನ್ನು ತನ್ನಂತೆ ತಿಳಿದು ಅವರಲ್ಲಿ ಸ್ನೇಹವುಳ್ಳವನಾಗುವನು. ಈತನೇ ಉತ್ತಮ ಯೋಗಿಯು. (೩೨)

ಅರ್ಜುನ— ಹೇ ಮಧುಸೂದನ! ಸರ್ವತ್ರಸ್ಥಿತಭಗವದ್ರೂಪಗಳ ಐಕ್ಯವನ್ನೂ ತನ್ನಂತೆ ಎಲ್ಲರೆಂಬ ಸಾಮ್ಯಬುದ್ಧಿಯನ್ನೂ, ಏಕಾಗ್ರತಾರೂಪ ಮನಸ್ಸಿನಸಾಮ್ಯವನ್ನೂ ಸಾಧಿಸುವುದೆಂಬ ಈ ಯೋಗವು, ಸ್ಥಿರವಾಗಿ ಉಳಿಯುವುದು ಅಶಕ್ಯವೆಂದೇ ತೋರುವುದು. ಸ್ವಭಾವಸಿದ್ಧವಾದ ಮನಸ್ಸಿನ ಚಾಂಚಲ್ಯವನ್ನು ಗಮನಿಸಿದರೆ ಈ ಯೋಗವು ಅನುಷ್ಠಾನಯೋಗ್ಯವಲ್ಲವೆಂದೇ ನಿಶ್ಚಯಿಸಬಹುದು. ಹೇ ಕೃಷ್ಣ! ಮನಸ್ಸು ಅತಿ ಚಪಲವಾದುದು; ದೇಹೇಂದ್ರಿಯಗಳನ್ನು ಕ್ಷೋಭೆಗೊಳಿಸುವ ಸಾಮರ್ಥ್ಯವುಳ್ಳದ್ದು; ವಿವೇಕದಿಂದ ಸಹ ಜಯಿಸಲು ಅಶಕ್ಯವಾದುದು; ಅನಾದಿವಿಷಯವಾಸನಾಸಂಬಂಧವುಳ್ಳದ್ದಾದಪ್ರಯುಕ್ತ, ಆ ಸಂಬಂಧವನ್ನು ತಪ್ಪಿಸಿ ಸಾಧುವಿಷಯಗಳಲ್ಲಿ ನಿಯೋಜಿಸಲಿಕ್ಕೆ ಬಾರದಂತಹ ದುರ್ಭೇದ್ಯಸ್ವಭಾವವುಳ್ಳದ್ದು. ಮನಸ್ಸೆಂಬುದು ಈ ಪ್ರಸಿದ್ಧಲಕ್ಷಣಗಳುಳ್ಳಪ್ರಯುಕ್ತ, ಅದನ್ನು ನಿಗ್ರಹಿಸಿ ವಶದಲ್ಲಿಟ್ಟುಕೊಳ್ಳುವುದೆಂದರೆ, ಆಕಾಶದಲ್ಲಿ ಓಡುವ ಗಾಳಿಯನ್ನು ಬಟ್ಟೆಯಲ್ಲಿ ಹಿಡಿದು ಕಟ್ಟುವಂತೆ ದುಸ್ಸಾಧ್ಯವೆಂದೇ ತೋರುವುದು. ಆದ್ದರಿಂದ ನಿನ್ನಿಂದ ಉಪದಿಷ್ಟವಾದ ಧ್ಯಾನಯೋಗದ ವಿಷಯದಲ್ಲಿ ಪ್ರಬಲವಾದ ಅಪ್ರಾಮಾಣ್ಯಶಂಕೆಯುಂಟಾಗುವುದಿಲ್ಲವೇ? (೩೩-೩೪)

ಶ್ರೀಕೃಷ್ಣ—ಹೇ ಮಹಾಬಾಹೋ! ನೀನು ಹೇಳುವಂತೆ ಮನಸ್ಸು ಸ್ವಭಾವದಿಂದಲೇ ಚಂಚಲವೆಂಬುದು ನಿಜ; ಅದನ್ನು ನಿಗ್ರಹಿಸುವುದೂ ಅಸಾಧ್ಯವೇ ಸರಿ. ಆದರೂ, ವೈರಾಗ್ಯದಿಂದಲೂ, ಅಭ್ಯಾಸಬಲದಿಂದಲೂ ಅದನ್ನು ಜಯಿಸಿ ವಶಪಡಿಸಿಕೊಳ್ಳಬಹುದು. (೩೫)

ಅರ್ಜುನ—ಮದಿಸಿದ ಗಜವು ಸ್ವೇಚ್ಛಾವಿಹಾರದಿಂದ ಶ್ರಾಂತವಾಗಿ, ಮದವಿಳಿದು ಶಾಂತವಾಗುವಂತೆ, ವಿಷಯಭೋಗದಿಂದ ತೃಪ್ತಿಗೊಂಡ ಮನಸ್ಸು ತಾನಾಗಿಯೇ ವಶವರ್ತಿಯಾಗಬಹುದಲ್ಲವೇ?

ಶ್ರೀಕೃಷ್ಣ—ಹಾಗೆಂದೂ ಆಗದು. ವಿಷಯಭೋಗದಿಂದ ಮನಸ್ಸಿಗೆ ಸಾಕೆಂಬ ತುಷ್ಟಿಯು ಹುಟ್ಟುವುದಿಲ್ಲ. ಅಗ್ನಿಯನ್ನು ತುಪ್ಪದಿಂದ ಆರಿಸಬಹುದೇ! ಒಮ್ಮೆ ಮದವಿಳಿದ ಆನೆಗೆ ಮತ್ತೆ ಮದವೇರುವುದಿಲ್ಲವೇ? ಅಭ್ಯಾಸಾದಿ ಪ್ರಯತ್ನಗಳಿಂದ ಮನಸ್ಸನ್ನು ವಶಗೊಳಿಸದಿದ್ದರೆ ಯೋಗವು ಸಾಧಿಸುವುದಿಲ್ಲ ಮತ್ತು ಯತ್ನಪೂರ್ವಕವಾಗಿ ಮನೋಜಯವನ್ನು ಪಡೆದವನಿಗೇ ಧ್ಯಾನಯೋಗವು ಸಿದ್ಧಿಸುವುದು. ಹೀಗೆಂಬುದು ನನ್ನ ನಿಶ್ಚಯಾಭಿಪ್ರಾಯವು. (೩೬)

ಅರ್ಜುನ—ಹೇ ಸ್ವಾಮಿ! ಯತ್ನಪೂರ್ವಕ ಮನಸ್ಸನ್ನು ಜಯಿಸದವನು, ಎಷ್ಟೇ ಶ್ರದ್ಧಾವಂತನಾದರೂ (ಆಸ್ತಿಕ್ಯಬುದ್ಧಿಯುಳ್ಳವನಾದರೂ) ಧ್ಯಾನಯೋಗವನ್ನು ಸಾಧಿಸಲಾರನೇ? ಯೋಗಸಿದ್ಧಿಯನ್ನು (ಅಪರೋಕ್ಷ ಜ್ಞಾನವನ್ನು) ಪಡೆಯಲಾರದ, ಆ ಶ್ರದ್ಧಾವಂತನು ಹೊಂದುವ ಗತಿಯಾದರೂ ಯಾವುದು? (೩೭) ಇಹಪರಪುರುಷಾರ್ಥಗಳಿಂದ ಭ್ರಷ್ಟನಾಗಿ (ಸ್ವರ್ಗಾಪವರ್ಗಗಳೆಂಬ ಉಭಯ ಪುರುಷಾರ್ಥಗಳನ್ನೂ ಹೊಂದದೇ), ಆಶ್ರಯಶೂನ್ಯನಾಗಿ, ಪರಮಾತ್ಮನನ್ನು ಹೊಂದುವ ಉಪಾಯವನ್ನೇ ಕಾಣದೇ, ವಿಮೂಢನಾಗಿ, ಚಂಡಮಾರುತನಿಂದ ತುಂಡರಿಸಲ್ಪಟ್ಟ ಮೇಘದಂತೆ, ನಷ್ಟನಾಗುವನೋ ಹೇಗೆ? (ನರಕಾದ್ಯನರ್ಥಗಳಿಗೆ ಗುರಿಯಾಗುವನೇ?) (೩೮) ಹೇ ಸರ್ವಜ್ಞ! ನನ್ನ ಈ ಸಂಶಯಗಳನ್ನು ನಿಶ್ಶೇಷವಾಗಿ ಪರಿಹರಿಸಲು ನೀನೇ ಸಮರ್ಥನು; ಬೇರಾವನೂ ಶಕ್ತನಿಲ್ಲ. (೩೯)

ಶ್ರೀಕೃಷ್ಣ—ಹೇ ಪಾರ್ಥ! ಮನಸ್ಸನ್ನು ನಿಗ್ರಹಿಸದವನು, ಶ್ರ ಶ್ರದ್ಧಾವಂತನಾದರೂ ಧ್ಯಾನಯೋಗದ ಫಲವಾದ ಭಗವದ್ದರ್ಶನವನ್ನು ಪಡೆಯಲಾರನು. ಆದರೆ, ಶ್ರದ್ಧೆಯಿಂದ ಸಿದ್ಧಿಗಾಗಿ ಯತ್ನಿಸುವ ಯೋಗಿಗೆ ಅನರ್ಥಗಳೆಂದರೇನು! ಆತನಿಗೆ ಇಹಪರಲೋಕಗಳಲ್ಲಿ ಯಾವವಿಧವಾದ ನಷ್ಟವೂ (ನಾಶವೂ) ಸಂಭವಿಸದು. ಶ್ರೇಯಸ್ಸಾಧಕವಾದ ಜ್ಞಾನೋಪಾಯ ದಲ್ಲಿ (ಯೋಗದಲ್ಲಿ) ತೊಡಗಿದವನು, ಮನೋಜಯವಿಲ್ಲವೆಂಬ ಕಾರಣ ಮಾತ್ರದಿಂದ, ಎಂದೂ ದುರ್ಗತಿಯನ್ನು ಹೊಂದುವುದಿಲ್ಲ. ಪಶ್ವಾದಿಯೋನಿ ಗಳಲ್ಲಿ ಜನ್ಮಪಡೆಯುವುದು ಇಹದುರ್ಗತಿಯು; ನರಕವಾಸಾದಿಗಳನ್ನು ಹೊಂದುವುದು ಪರದಲ್ಲಿ ದುರ್ಗತಿಯು. ಇವೆರಡಕ್ಕೂ ಅವನು ಭಾಗಿ ಯಾಗುವುದಿಲ್ಲ. (೪೦) ಮನೋಜಯವನ್ನು ಪಡೆಯದೇ ಹೋದ್ದರಿಂದ ಯೋಗಮಾರ್ಗದಿಂದ ಜಾರಿಬಿದ್ದ ಯೋಗಿಯು— ಯೋಗಭ್ರಷ್ಟನು, ಪುಣ್ಯಲಭ್ಯಗಳಾದ ಉತ್ತಮ ಲೋಕಗಳನ್ನೇ ಹೊಂದುವನು. ಅಲ್ಲಿ, ಬಹುಕಾಲ (ಬಹು ಸಂವತ್ಸರಗಳಪರ್ಯಂತ) ಸುಖದಿಂದ ವಾಸವಾಗಿ, ನಿರ್ಮಲಹೃದಯರಾದ ಶ್ರೀಮಂತರ ಗೃಹದಲ್ಲಿ ಜನಿಸುವನು. (೪೧) ಅಥವಾ ಜ್ಞಾನಿಗಳಾದ ಯೋಗಿಗಳ ಕುಲದಲ್ಲಿ ಹುಟ್ಟುವನು. ಈ ಉಭಯ ವಿಧ ಜನ್ಮವು ಬಹುಪುಣ್ಯಸಾಧ್ಯವೆಂಬುದು ಪ್ರಸಿದ್ಧವಷ್ಟೆ! ಆದ್ದರಿಂದ, ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಸಮಾಧಿಯನ್ನೇರಿಸಲು ಸಾಧ್ಯ ವಾಗದ ಮಾತ್ರಕ್ಕೆ ಮತ್ತು ಮುಖ್ಯಫಲವಾದ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದದಿದ್ದ ಮಾತ್ರಕ್ಕೆ, ಯೋಗಾನುಷ್ಠಾನಕರ್ತನಿಗೆ ಅನರ್ಥಗಳುಂಟೆಂದು ಶಂಕಿಸುವುದು ಸರ್ವಥಾ ಅಯುಕ್ತವು (೪೨). ಯೋಗಭ್ರಷ್ಟನು, ಹೀಗೆ ದೊರೆಯುವ ಶ್ರೇಷ್ಠವಾದ ನೂತನ ಜನ್ಮದಲ್ಲಿ, ಪೂರ್ವದೇಹದಲ್ಲಿ ಹೊಂದಿದ್ದ ಮನೋಯೋಗದ ಮಟ್ಟವನ್ನು (ಧ್ಯಾನಶಕ್ತಿಯನ್ನು) ಶೀಘ್ರವಾಗಿ ಮುಟ್ಟಿ, ಹೇ ಕುರುನಂದನ! ಅಧಿಕವಾದ ಧ್ಯಾನಸಂಪೂರ್ತಿಗಾಗಿ ಯತ್ನಿಸು ತ್ತಿರುವನು. ಧ್ಯಾನಯೋಗವನ್ನು ಸಾಧಿಸುವ ಇಚ್ಛೆಯು ಸಹ ವ್ಯರ್ಥವಲ್ಲ; ಮಹಾಫಲವುಳ್ಳದ್ದು; ಕ್ರಮದಿಂದ, ವಿಧಿನಿಷೇಧರೂಪವಾದ ಶಾಸ್ತ್ರನಿರ್ಬಂಧ ವನ್ನು ದಾಟಿಸಿ, ಮುಕ್ತನನ್ನಾಗಿ ಮಾಡುತ್ತದೆ. ಹೀಗಿರಲು, ಕೆಲಕಾಲ ಅನುಷ್ಠಾನಮಾಡಿದವನು ಮುಕ್ತನಾಗುವುದೇನಾಶ್ಚರ್ಯ! (೪೪)

ಅರ್ಜುನ—ಕೇವಲ ತಿಳಿಯಬೇಕೆಂಬ ಇಚ್ಛೆಯಿಂದಲೇ ಮುಕ್ತಿಯು ದೊರೆಯುವುದಾದರೆ ಧ್ಯಾನಯೋಗದ ಅನುಷ್ಠಾನವು ವ್ಯರ್ಥವೆಂದು ಪ್ರಾಪ್ತವಾಗುವುದಿಲ್ಲವೇ, ಕೃಷ್ಣ?

ಶ್ರೀಕೃಷ್ಣ—ಯೋಗ ಜಿಜ್ಞಾಸೆಯುಳ್ಳವನು (ತಿಳಿಯಲಿಚ್ಛಿಸುವವನು) ಅದನ್ನು ತಿಳಿಯುತ್ತಾನೆ; ತಿಳಿದು ಅನುಷ್ಠಾನದಲ್ಲಿ ತೊಡಗುತ್ತಾನೆ. ಪ್ರಯತ್ನದಿಂದ ಧ್ಯಾನಸಂಪೂರ್ತಿಯನ್ನು ಹೊಂದುತ್ತಾನೆ. ಅದರಿಂದ ಪಾಪರಹಿತನಾಗಿ ಭಗವದ್ದರ್ಶನವನ್ನು ಪಡೆದು, ನಂತರ ಉತ್ತಮ ಗತಿಯನ್ನು (ಮುಕ್ತಿಯನ್ನು) ಹೊಂದುತ್ತಾನೆ. ಹೀಗೆ ಧ್ಯಾನಯೋಗದ ಜಿಜ್ಞಾಸೆಯು ಸಹ ಪರಂಪರೆಯಿಂದ ಮುಕ್ತಿಗೆ ಕಾರಣವಾಗುತ್ತಿರಲು, ಅನುಷ್ಠಾನದಲ್ಲಿ ತೊಡಗಿದವನಿಗೆ, ಯಾವ ಅನರ್ಥಗಳುಂಟಾಗಲಿಕ್ಕೂ, ಸರ್ವಥಾ ಅವಕಾಶವಿಲ್ಲವೆಂಬ ಕೈಮುತ್ಯನ್ಯಾಯವನ್ನು ಸೂಚಿಸಲಿಕ್ಕಾಗಿ ಜಿಜ್ಞಾಸೆಯ ಫಲವನ್ನು ಹೇಳಿದುದು; ಅನುಷ್ಠಾನವಿಲ್ಲದೇ ಮುಕ್ತಿಯಾಗುವುದೆಂದು ಹೇಳಲಿಕ್ಕಾಗಿ ಅಲ್ಲ. ತಿಳಿದೆಯಾ, ಪಾರ್ಥ? (೪೫). ಯೋಗದ ಮಹಿಮೆಯನ್ನು ಎಷ್ಟೆಂದು ಹೇಳಲಿ! ಹೇ ಅರ್ಜುನ! ಚಾಂದ್ರಾಯಣಾದಿ ತಪೋನಿಷ್ಠರಕ್ಕಿಂತ (ತಪಸ್ವಿಗಳಕಿಂತ) ಧ್ಯಾನಯೋಗಿಯು ಅಧಿಕನು. ಧ್ಯಾನರಹಿತರಾದ ಪರೋಕ್ಷಜ್ಞಾನಿಗಳಿಗಿಂತ (ಶಾಸ್ತ್ರ ಪಂಡಿತರ ದೆಶೆಯಿಂದ) ಶ್ರೇಷ್ಠನು. ಮತ್ತು ಪರೋಕ್ಷಜ್ಞಾನಯುಕ್ತಕರ್ಮಾಚರಣೆಯುಳ್ಳವರ ದೆಶೆಯಿಂದ ಅಧಿಕನು. ಆದ್ದರಿಂದ, ಪಾರ್ಥ! ನೀನು ಯೋಗಿಯಾಗು. (೪೬) ನನ್ನಲ್ಲಿಯೇ ಅರ್ಪಿತವಾದ ಮನಸ್ಸುಳ್ಳವನಾಗಿ, ಕಾಮಸಂಕಲ್ಪಾದಿಗಳನ್ನು ತೊರೆದು, ಯಾವಾತನು ನನ್ನನ್ನೇ ಭಕ್ತಿಯಿಂದ ಸೇವಿಸುವನೋ, ಆತನೇ ಜ್ಞಾನ (ಬ್ರಹ್ಮಸಾಕ್ಷಾತ್ಕಾರ) ಸಾಧನವಾದ ಯೋಗವುಳ್ಳವನು; ವಿವಿಧ ಯೋಗಿಗಳ ಮಧ್ಯದಲ್ಲಿ ಆತನೇ ಅತ್ಯಂತ ಶ್ರೇಷ್ಠನೆಂದು ನನ್ನ ಮತವು. (೪೭).

ಆರನೇ ಅಧ್ಯಾಯವು ಮುಗಿದುದು.

ಅಧ್ಯಾಯ ೭

[ಭಗವದಪರೋಕ್ಷಜ್ಞಾನಕ್ಕೆ ಬಹಿರಂಗೋಪಾಯವಾದ ಕಾಮ್ಯಾದಿ ವರ್ಜನಸಹಿತನಿವೃತ್ತಕರ್ಮಾನುಷ್ಠಾನರೂಪಕರ್ಮಯೋಗವನ್ನೂ, ಅಂತ ರಂಗಸಾಧನವಾದ ಧ್ಯಾನಯೋಗವನ್ನೂ ಹೇಳುವೆನೆಂದು ಪ್ರತಿಜ್ಞೆಮಾಡಿ, ಶ್ರೀಕೃಷ್ಣನು ಮೊದಲಿನ ಆರು ಅಧ್ಯಾಯಗಳಲ್ಲಿ ನಿರೂಪಿಸಿದನು. ಆರನೆಯ ಅಧ್ಯಾಯದಲ್ಲಿ ವಿಸ್ತರಿಸಲ್ಪಟ್ಟ ಭಗವದ್ಧ್ಯಾನವು ಭಕ್ತಿಪೂರ್ವಕವಾಗಿ ಆಚರಿಸಲ್ಪಟ್ಟರೆ ಮಾತ್ರ ಜ್ಞಾನ (ಭಗವದ್ದರ್ಶನ) ಸಾಧನವಾಗುವುದಲ್ಲದೇ, ಭಗವಂತನು ದ್ವೇಷದಿಂದ* ಪ್ರಾಪ್ಯನಲ್ಲವಾದ್ದರಿಂದ, ಭಕ್ತ್ಯರ್ಥವಾಗಿ ಭಗವನ್ಮಹಿಮೆಯನ್ನು ಈ ಅಧ್ಯಾಯದಿಂದ ಆರಂಭವಾಗುವ ದ್ವಿತೀಯ ಷಟ್ಕದಲ್ಲಿ ನಿರೂಪಿಸುತ್ತಾನೆ. ಪೂರ್ವಷಟ್ಕದಲ್ಲಿಯೂ ಭಗವನ್ಮಹಿಮೆಯು ಹೇಳಲ್ಪಟ್ಟಿದೆ; ಆದರೆ ಜ್ಞಾನಸಾಧನವೇ ಹೆಚ್ಚಾಗಿ ಉಪದಿಷ್ಟವಾಗಿದೆ. ಈ ದ್ವಿತೀಯ ಷಟ್ಕದಲ್ಲಿ ಜ್ಞಾನಸಾಧನೆಯು (ಯೋಗವು) ಅಲ್ಲಲ್ಲಿ ಹೇಳಲ್ಪಡುತ್ತದೆ. ಆದರೆ ಭಗವನ್ಮಹಿಮೆಯೇ ಪ್ರಚುರವಾಗಿ ನಿರೂಪಿಸಲ್ಪಡುತ್ತದೆ. ಪ್ರಧಾನವಿಷಯವನ್ನು ಗಮನಿಸಿದರೆ, ಪ್ರಥಮಷಟ್ಕವು ಯೋಗಪರವೆಂದೂ (ಜ್ಞಾನಸಾಧನವನ್ನು ಬೋಧಿಸುವುದೆಂದೂ), ದ್ವಿತೀಯಷಟ್ಕವು, ಯೋಗಸಾಧ್ಯವಾದ ಜ್ಞಾನವನ್ನು (ಭಗವನ್ಮಾಹಾತ್ಮ್ಯವನ್ನು—ಭಗವನ್ಮಹಿಮಾಜ್ಞಾನವೇ ಭಗವಂತನ ಜ್ಞಾನವು) ಪ್ರತಿಪಾದಿಸುವುದೆಂದೂ ತಿಳಿಯಬರುತ್ತದೆ. ಈ ದೃಷ್ಟಿಯಿಂದ ಈ ಎರಡೂ ಷಟ್ಕಗಳ ಅರ್ಥಭೇದವನ್ನೂ

***ಸೂಚನೆ :—** ಶಿಶುಪಾಲಾದಿಗಳು ದ್ವೇಷದಿಂದ ಭಗವಂತನನ್ನು ಹೊಂದಿದರೆಂದು ತಿಳಿಯುವುದು ತಪ್ಪು. ಜೀವದ್ವಯಾವೇಶವುಳ್ಳ ದೇಹದದ್ವಾರಾ, ದ್ವೇಷಯುಕ್ತವಾದ ಭಕ್ತಿಯಿಂದ, ಉಭಯಜೀವರುಗಳು ಸ್ವಯೋಗ್ಯವಾದ ಗತಿಗಳನ್ನು ಹೊಂದಿರುವರು. ಜಯಾದಿಸುಜೀವರು ಭಗವಂತನನ್ನು ಹೊಂದಿದರು. ಪಾಪಿಗಳು ತಮಸ್ಸನ್ನು ಹೊಂದಿದರು. ಏವಂ ಚ ಭಕ್ತಿಯಿಂದಲೇ ಭಗವಂತನು ಪ್ರಾಪ್ಯನೆಂದು ಶ್ರೀಮದ್ಭಾಗವತಸಪ್ತಮಸ್ಕಂಧತಾತ್ಪರ್ಯದಿಂದ ನಿಶ್ಚಿತವಾಗುತ್ತದೆ.

ಸಂಗತಿಯನ್ನೂ ತಿಳಿಯಬೇಕು. ಯದರ್ಥವಾಗಿ ಜ್ಞಾನಸಾಧನವು ನಿರೂಪಿಸಲ್ಪಟ್ಟಿತೋ ಆ ಜ್ಞಾನಕ್ಕಾಗಿ, ಜ್ಞಾತವ್ಯವಾದ (ತಿಳಿಯಲಾಗುವ —ತಿಳಿಯಲ್ಪಡಬೇಕಾದ) ಭಗವನ್ಮಹಿಮೆಯನ್ನು ಈ ಷಟ್ಕದಲ್ಲಿ ಹೇಳುವುದರಿಂದ, ಈ ಎರಡೂ ಷಟ್ಕಗಳಲ್ಲಿ, ಯೋಗ್ಯಕ್ರಮವೂ, ಕಾರ್ಯಕಾರಣ ರೂಪಸಂಬಂಧವೂ ಉಂಟೆಂದು ತಿಳಿಯಬೇಕು. ಹೀಗೆಂಬುದು ಪ್ರಾರಂಭದಲ್ಲಿ ಶ್ರೀಕೃಷ್ಣನು ಮಾಡುವ ಪ್ರತಿಜ್ಞೆಯಿಂದ ಸಹ ಸ್ಪಷ್ಟವಾಗುತ್ತದೆ.]

ಶ್ರೀಕೃಷ್ಣ—ಹೇ ಪಾರ್ಥ! ನನ್ನಲ್ಲಿ ಅತ್ಯಂತಸ್ನೇಹಯುಕ್ತವಾದ ಮನಸ್ಸುಳ್ಳವನಾಗಿ ಕರ್ಮ, ಧ್ಯಾನರೂಪವಾದ ಯೋಗವನ್ನಾಚರಿಸಿ, ನಾನೇ ಸರ್ವವನ್ನೂ ಮಾಡಿಸುವವನೆಂದೂ, ಸರ್ವವಿಧದಿಂದ ಆಶ್ರಯನೆಂದೂ ತಿಳಿದರೆ, ನಿನ್ನ ಯೋಗ್ಯತೆಗೆತಕ್ಕಂತೆ ಪೂರ್ಣವಾಗಿಯೂ ನಿಸ್ಸಂಶಯವಾಗಿಯೂ ನನ್ನನ್ನು ಹೇಗೆ ತಿಳಿಯುವೆಯೋ ಅದನ್ನು ಹೇಳುವೆನು. ಕೇಳು, ಅದನ್ನು ನಂಬು. (೧) ನೀನು ತಿಳಿಯಬಹುದಾದವುಗಳ ಮಧ್ಯದಲ್ಲಿ ಯಾವುದನ್ನೂ ಬಿಡದಂತೆ, ವಿಜ್ಞಾನಸಹಿತವಾದ ಜ್ಞಾನವನ್ನು (ವಿಶೇಷಮಹಿಮೆಗಳಿಂದ ಸಹಿತವಾದ ನನ್ನ ಮಹಿಮೆಯನ್ನು) ಹೇಳುವೆನು. ಇದನ್ನು ತಿಳಿದೆಯಾದರೆ, ತಿಳಿಯಬೇಕಾದ ಬೇರಾವುದೂ ಉಳಿಯುವುದಿಲ್ಲ. (೨) ನನ್ನ ಮಹಿಮಾಜ್ಞಾನವು ಅತಿದುರ್ಲಭವಾದುದು; ಆದರದಿಂದ ಕೇಳು. ಸಾವಿರದಲ್ಲೊಬ್ಬನು (ಬಹುಜನರ ಮಧ್ಯದಲ್ಲಿ ಪುಣ್ಯವಂತನಾದ ಒಬ್ಬ ಪುರುಷನು) ಜ್ಞಾನಾರ್ಥವಾಗಿ ಯತ್ನಿಸುತ್ತಾನೆ. ಹೀಗೆ ಯತ್ನಿಸುವವರಲ್ಲಿ ಯಾವನೋ ಒಬ್ಬನು ಸಿದ್ಧಿಯನ್ನು ಪಡೆಯುತ್ತಾನೆ, ಎಂದರೆ ನನ್ನ ಮಹಾತ್ಮ್ಯೆಯನ್ನು ಅರಿಯುತ್ತಾನೆ. ತಿಳಿದ ಬಹುಮಂದಿಗಳಲ್ಲಿ ಒಬ್ಬಾನೊಬ್ಬನು ನನ್ನನ್ನು ಯಥಾರ್ಥವಾಗಿ (ಇದ್ದಂತೆ) ತಿಳಿದು ಕಾಣುತ್ತಾನೆ. (೩)

ಅರ್ಜುನ—ನಿನ್ನ ಮಹಿಮಾಜ್ಞಾನವು ಇಷ್ಟು ಮಹತ್ವವುಳ್ಳದ್ದೇ! ಜ್ಞಾನವೆಂದು ಹೇಳಲ್ಪಟ್ಟ ಜ್ಞಾತವ್ಯವಾದ (ತಿಳಿಯಲ್ಪಡಬೇಕಾದ) ಸಾಮಾನ್ಯ ಮಹಿಮೆಗಳನ್ನು ಮೊದಲು ನಿರೂಪಿಸು. ನಂತರ ವಿಜ್ಞಾನವನ್ನು (ವಿಶೇಷಮಹಿಮೆಗಳನ್ನು) ಹೇಳುವೆಯಂತೆ. ಸಾಮಾನ್ಯ

ವನ್ನು ಮೊದಲು ತಿಳಿದರೆ ವಿಶೇಷವನ್ನು ಗ್ರಹಿಸುವುದು ಸುಲಭವು ಆಗುವುದಲ್ಲವೇ ?

ಶ್ರೀಕೃಷ್ಣ—ಕೇಳು, ಅರ್ಜುನ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳು, ಮನಸ್ಸು ಬುದ್ಧಿ ಮತ್ತು ಅಹಂ ಕಾರಗಳೆಂಬುದಾಗಿ, ನನ್ನ ಅಧೀನವಾದ ಪ್ರಕೃತಿಯು, ಪ್ರತ್ಯೇಕವಾಗಿ ಎಂಟು ಪ್ರಕಾರವಾದುದು. ಮೂಲವಾದ ಜಡಪ್ರಕೃತಿಯು ನನ್ನಿಂದ ಪ್ರೇರಿತ ವಾಗಿಯೇ ಪೃಥಿವ್ಯಾದಿ ಕಾರ್ಯರೂಪದಿಂದ, ಹೀಗೆ ಎಂಟು ಪ್ರಕಾರವಾಗಿ ಭಿನ್ನವಾಗಿರುವುದೆಂದು ತಿಳಿ. (೪) ಕಾರ್ಯರೂಪಗಳಿಂದ ಸಹಿತವಾದ ಜಡಪ್ರಕೃತಿಮಾತ್ರವೇ ನನ್ನ ವಶವೆಂದಲ್ಲ; ಚತುರ್ಮುಖ ಬ್ರಹ್ಮನೇ ಮೊದಲಾದ ಸಕಲ ಜಗತ್ತಿಗೆ ತಾಯಿಯಾದ ಚಿತ್ಪ್ರಕೃತಿಯೂ (ರಮಾದೇವಿಯೂ) ನನ್ನ ಅಧೀನಳು. ಹೆಚ್ಚೇನು, ಪರಾವರ ಸಕಲ ವಸ್ತುಗಳೂ ನನ್ನ ಅಧೀನಗಳು. ಜಡಪ್ರಕೃತಿ ಮತ್ತು ಸಕಲಜೀವರು **ಅವರರು**—ಅಧಮರು; ಇವರಿಂದ ಉತ್ತಮಳಾದ ಶ್ರೀದೇವಿಯೂ ಮುಕ್ತಜೀವರೂ ಸಹ ಪರರು—ಪರಶಬ್ದವಾಚ್ಯರು. ಮಹಾಲಕ್ಷ್ಮಿಯು ಸಕಲಜೀವರ ದೇಹದಲ್ಲಿದ್ದು ಅವರ ಪ್ರಾಣಗಳನ್ನು ಸರ್ವದಾ ಅವರ ದೇಹಗಳಲ್ಲಿ ಧಾರಣಮಾಡುತ್ತಿರುವಳು. ಹೇ ಮಹಾಬಾಹೋ! ಈ ಉಭಯ ಪ್ರಕೃತಿಗಳು, ಜಡ ಮತ್ತು ಚಿತ್‌ಪ್ರಕೃತಿಗಳು ಸರ್ವದಾ ನನ್ನ ವಶದಲ್ಲಿರುವುವು. (೫)

ಅರ್ಜುನ—ದೇಹ, ಇಂದ್ರಿಯ ಮೊದಲಾದ ಇತರ ಅನೇಕ ವಸ್ತು ಗಳೂ ನಿನ್ನ ಅಧೀನವಾಗಿರಲು, ಉಭಯಪ್ರಕೃತಿಗಳನ್ನು ಮಾತ್ರ ಎತ್ತಿ ಹೇಳುವುದರ ಉದ್ದೇಶವೇನು ?

ಶ್ರೀಕೃಷ್ಣ—ಶರೀರ, ಇಂದ್ರಿಯ, ವಿಷಯರೂಪಕಾರ್ಯಸಹಿತವಾದ ಎಲ್ಲ ಜೀವಸಮೂಹವೂ (ಸರ್ವಭೂತಗಳೂ) ಜಡ ಮತ್ತು ಚಿತ್‌ಪ್ರಕೃತಿ ಗಳಿಂದಲೇ ಯಥಾಯೋಗ್ಯವಾದ ಉತ್ಪತ್ತಿಯುಳ್ಳವುಗಳು.

ಅರ್ಜುನ—ಹಾಗಾದರೆ, ಈ ಉಭಯಪ್ರಕೃತಿಗಳು ಮಾತ್ರ ನಿನ್ನ

ವನೆಂದೂ, ಜಗತ್ತಿನ, ಸೃಷ್ಟಿ, ಸ್ಥಿತಿ, ಲಯಾದಿಗಳು ಪ್ರಕೃತ್ಯಧೀನಗಳೆಂದೂ ತಿಳಿಯಲೇ ?

ಶ್ರೀಕೃಷ್ಣ—ಹಾಗೆಂದೂ ಅಲ್ಲ. ಸಕಲಪ್ರಪಂಚಕ್ಕೂ ಸೃಷ್ಟಿಕರ್ತನು ನಾನೇ; ಲಯಕರ್ತನೂ ನಾನೇ. ಆದರೆ, ಈ ಎಲ್ಲವನ್ನೂ ಪ್ರಕೃತಿದ್ವಾರಾ ಮಾಡುವೆನು. (೬)

ಅರ್ಜುನ—ನಿನ್ನಂತೆ ಉತ್ತಮನಾದ ಮತ್ತೊಬ್ಬನಿದ್ದು ಆತನಿಂದಲೂ ಜಗತ್ತಿನ ಸೃಷ್ಟ್ಯಾದಿಗಳು ನಡೆಯಬಹುದಲ್ಲವೇ? ನೀನೇ ಸರ್ವಕ್ಕೂ ಉತ್ಪಾದಕನೆಂಬುದು ಹೇಗೆ?

ಶ್ರೀಕೃಷ್ಣ—ಪರನಾಮಕಳಾದ ಮಹಾಲಕ್ಷ್ಮಿಗಿಂತಲೂ ಉತ್ತಮನಾದ ನಾನು ಪರತರನೆಂದು ಕರೆಯಲ್ಪಡುವೆನು. ನನ್ನಿಂದ ಅನ್ಯವಾದ ಮತ್ತಾವ ಪರತರವಸ್ತುವಿಲ್ಲ. ಅಪರತತ್ವವು ಪೃಥಿವ್ಯಾದಿಭೇದದಿಂದ ಹೇಗೆ ಬಹುಪ್ರಕಾರವಾದುದೋ ಮತ್ತು ಪರತತ್ತ್ವವು ಶ್ರೀದೇವಿ ಮತ್ತು ಮುಕ್ತಜೀವರೆಂಬ ಭೇದದಿಂದ ಹೇಗೆ ಅನೇಕ ಪ್ರಕಾರವೋ, ಹಾಗೆ ಪರತರತತ್ವವೂ ಬಹುಪ್ರಕಾರವುಳ್ಳದ್ದೆಂದು ಸರ್ವಥಾ ಶಂಕಿಸಬೇಡ. ಪರತರವಸ್ತುವೆಂಬುದು ಒಂದೇ; ಅದೇ ನಾನು; ಸರ್ವೋತ್ತಮವಾದುದು ಒಂದಕ್ಕಿಂತ ಹೆಚ್ಚಿರಬಹುದೆಂಬುದು ಯುಕ್ತಿ ಸಮ್ಮತವೂ ಅಲ್ಲ; ಸಮಾನರಾದ ಸ್ವತಂತ್ರಬಹುಕರ್ತೃಗಳಿರಬಹುದೆಂದು ಕಲ್ಪಿಸುವುದೂ ದೋಷದುಷ್ಟವಾದುದು. ಜಗತ್ತಿನ ಉತ್ಪತ್ತಿವಿನಾಶಗಳಿಗೆ ಮಾತ್ರ ನಾನು ಕಾರಣನೆಂದು ತಿಳಿಯಬೇಡ; ಸ್ಥಿತಿಕರ್ತನೂ ನಾನೇ. ಹಾರದಲ್ಲಿರುವ ಮುತ್ತುರತ್ನಗಳು, ಅವುಗಳನ್ನು ಪೋಣಿಸಿದದಾರ (ಸೂತ್ರ) ವನ್ನು ಆಶ್ರಯಿಸಿ ನಿಂತಿರುವಂತೆ ಪ್ರಕೃತ್ಯಾದಿ ಸರ್ವವೂ ನನ್ನನ್ನೇ ಆಶ್ರಯಿಸಿಕೊಂಡಿದೆ; ನಾನೇ ಸರ್ವ ಜಗದಾಧಾರನು. (೭)

ಅರ್ಜುನ—ನಿನ್ನ ಮಹಿಮಾತಿಶಯಗಳನ್ನು (ವಿಜ್ಞಾನವನ್ನು) ನಿರೂಪಿಸು, ಪ್ರಭೋ!

ಶ್ರೀಕೃಷ್ಣ—ಹೇ ಕೌಂತೇಯ! ಜಲದಲ್ಲಿರುವ ರಸ ನಾನು. ಸೂರ್ಯ ಚಂದ್ರರಲ್ಲಿರುವ ಪ್ರಕಾಶ ನಾನು. ಸಕಲವೇದಗಳಲ್ಲಿ ಓಂಕಾರ ನಾನು.

ಆಕಾಶದಲ್ಲಿರುವ ಶಬ್ದ, ಪುರುಷರಲ್ಲಿರುವ ಪೌರುಷ (ಪುರುಷತ್ವ), ಭೂಮಿಯಲ್ಲಿರುವ ಗಂಧ, ಅಗ್ನಿಯಲ್ಲಿರುವ ತೇಜಸ್ಸು (ದಾಹಕ ಶಕ್ತಿ), ತಪಸ್ವಿಗಳಲ್ಲಿರುವ ತಪಸ್ಸು, ಮತ್ತು ಸಕಲಪ್ರಾಣಿಗಳಲ್ಲಿರುವ ಜೀವನ, ಇವೆಲ್ಲವೂ ನಾನೇ.

ಅರ್ಜುನ—ರಸ, ಪ್ರಕಾಶಾದಿಗಳು ಆಯಾ ವಸ್ತುಧರ್ಮಗಳೆಂದು ಲೋಕಾನುಭವ ಸಿದ್ಧವಾಗಿರಲು, ಅವೆಲ್ಲವೂ ನೀನೇ ಎಂಬೀ ಉಪದೇಶದಿಂದ ನಿನ್ನ ಯಾವ ಮಹಿಮಾತಿಶಯವನ್ನು ತಿಳಿಯಲಿ?

ಶ್ರೀಕೃಷ್ಣ—ರಸವು ಜಲದ ಸ್ವಭಾವಧರ್ಮವಾಗಿರುವುದಕ್ಕೂ, ಜಲದಲ್ಲಿರುವ ಇತರಧರ್ಮಗಳಿಗಿಂತ ರಸತ್ವಕ್ಕೆ ಶ್ರೇಷ್ಠತೆಯುಂಟಾಗಲಿಕ್ಕೂ (ರಸವೇ ಸಾರಭೂತ ಧರ್ಮವಾಗಲಿಕ್ಕೂ), ರಸಕ್ಕೆ ರಸತ್ವಧರ್ಮವಿರಲಿಕ್ಕೂ ನಾನೇ ಕಾರಣನು—ನಿಯಾಮಕನು. ರಸಭೋಕ್ತನೂ ನಾನೇ. ಪ್ರಕಾಶಾದಿ ಇತರ ಧರ್ಮಗಳ ವಿಷಯದಲ್ಲಿ ಸಹ ಹೀಗೆಯೇ ತಿಳಿ. ಸರ್ವಸಾರಭೋಕ್ತನಾದ ನಾನು ರಸಾದಿ ಸರ್ವಸಾರಧರ್ಮಗಳ ಸಾಕ್ಷಾದನುಭವವುಳ್ಳವನು, ಸಾರಜ್ಞನು. ಸರ್ವಭೋಕ್ತನಾದರೂ ಜಲಾದಿಗಳ ಭೋಗಕ್ಕಿಂತ ಅತಿಶಯವಾಗಿ ರಸಾದಿ ಸಾರಭೋಗವು ನನ್ನ ಪ್ರಸನ್ನತೆಗೆ ಕಾರಣವೆಂದು ತಿಳಿದು ರಸಾದಿಗಳಲ್ಲಿ ನನ್ನನ್ನು ಉಪಾಸನೆಮಾಡಲಿಕ್ಕಾಗಿ ನಾನೇ ರಸನು ಇತ್ಯಾದಿಯಾಗಿ ಅಭೇದಬೋಧಕ ಶಬ್ದಗಳಿಂದ ಹೇಳುತ್ತಿರುವೆನು. ರಸಾದಿಸಾರಭೂತ ವಸ್ತುಧರ್ಮಗಳು ನನ್ನ ಪ್ರತಿಮೆಗಳೆಂದು ತಿಳಿದು, ತನ್ನಿಯಾಮಕನೆಂದೂ ತನ್ನಾಮಕನೆಂದೂ, ಉಪಾಸಿಸಬೇಕು. ಪ್ರತಿಮೆಗಳೇ ನಾನಲ್ಲ; ಪ್ರತಿಮಾಂತರ್ಯಾಮಿಯು. ನನ್ನ ಈ ವಿಶೇಷ ಮಹಾತ್ಮ್ಯೆಯನ್ನು ಸದೃಷ್ಟಾಂತವಾಗಿ ಬುದ್ಧ್ಯಾರೂಢವಾಗುವಂತೆ ಹೇಳುವೆನು, ಕೇಳು. ನೇಯ್ಗೆಯವನು ಬಟ್ಟೆಯನ್ನು ನಿರ್ಮಿಸುವನು; ಕುಂಬಾರನು ಗಡಿಗೆಯನ್ನು ತಯಾರಿಸುವನು. ಆದರೆ ಅವರು ಆ ವಸ್ತು ಧರ್ಮಗಳಾದ, ಹಿಮನಿವಾರಕತ್ವ, ಭೂಷಣತ್ವ, ಮೊದಲಾದ ಗುಣಗಳನ್ನು ನಿರ್ಮಿಸಲಾರರು. ಆ ವಸ್ತುಗಳಿಗೆ ಆ ಧರ್ಮಗಳುಂಟಾಗುವುದರಲ್ಲಿ ಅವರ ಕೈವಾಡವಿಲ್ಲ; ಅವರ ಪ್ರಯತ್ನವಿಲ್ಲ; ಸ್ವಾಭಾವಿಕವಾದ ತಮ್ಮ ಗುಣಸಮೂಹ

ಡೊಂದಿಗೆ ಆ ವಸ್ತುಗಳು ಉತ್ಪನ್ನವಾಗುತ್ತವೆ. ನಾನಾದರೋ, ಜಲಾದಿ ವಸ್ತು ನಿರ್ಮಾಣದಲ್ಲಿಯೂ ಅವುಗಳ ಸಾಮಾನ್ಯ ಹಾಗೂ ಪ್ರಧಾನಧರ್ಮಗಳನ್ನುಂಟುಮಾಡುವುದರಲ್ಲಿಯೂ ಕಾರಣನು. ರಸಾದಿಗಳಲ್ಲಿ ಸನ್ನಿಹಿತನಾಗಿದ್ದು ರಸತ್ವಾದಿಗಳ ನಿಯಾಮಕನಾಗಿರುವೆನು. ಕಾರ್ಯಕಾರಣಗಳಿಗೂ, ಅಧೀನನಿಯಾಮಕಗಳಿಗೂ, ಆಧಾರ ಆಧೇಯಗಳಿಗೂ ಲೋಕದಲ್ಲಿ ಅಭೇದವ್ಯವಹಾರವು ಕಂಡಿಲ್ಲವೇ? ನಾನು ರಸ, ನಾನು ಪ್ರಭಾ ಇತ್ಯಾದಿಗಳ ಅರ್ಥವನ್ನು ಈ ವಿವಕ್ಷೆಯಿಂದಲೂ ಗ್ರಹಿಸು. ವೇದಗಳಲ್ಲಿ ಓಂಕಾರವು ಮುಖ್ಯವಾಗುವುದಕ್ಕೆ ನಾನೇ ಕಾರಣನು. ಪುರುಷರಲ್ಲಿರುವ ಗುಣಗಳ ಮಧ್ಯೆ, ಸ್ತ್ರೀಯರಲ್ಲಿಲ್ಲದ ದಿಟ್ಟತನ (ಪ್ರಗಲ್ಭತೆ) ವೆಂಬ ಗುಣಕ್ಕೆ ನಾನು ಕಾರಣನು. ಪ್ರಾಣಧಾರಣಶಕ್ತಿಗೂ ನಿಯಾಮಕನಾದ್ದರಿಂದ ನಾನೇ ಜೀವನು. ಜೀವನಾಮಕನಾಗಿ ಜೀವರಲ್ಲಿರುವೆನು. ತಪಸ್ವಿಗಳಲ್ಲಿರುವ ತಪಃಶಕ್ತಿಗೆ ನಿಯಾಮಕನಾಗಿದ್ದು ತಪಃಶಬ್ದವಾಚ್ಯನಾಗಿರುವೆನು. ಹೀಗೆ ಸರ್ವಸತ್ತಾಪ್ರತೀತಿಗಳಿಗೆ ಕಾರಣನೆಂದು ತಿಳಿದು ರಸಾದಿನಾಮಕನಾದ ನನ್ನನ್ನು ಉಪಾಸಿಸುವ ಅಧಿಕಾರಿಗಳು ದೊಡ್ಡಯೋಗ್ಯತೆಯುಳ್ಳವರು; ಅವರೇ ಈ ವಿಜ್ಞಾನಕ್ಕೆ ಅರ್ಹರು. (೮-೯). ನನ್ನ ಮಹಿಮಾತಿಶಯಗಳನ್ನು ಸಂಗ್ರಹಿಸಿ ಹೇಳುವೆನು, ಕೇಳು. ಜ್ಞಾನಿಗಳ ಜ್ಞಾನಕ್ಕೆ ಪ್ರವರ್ತಕನಾದ್ದರಿಂದ ನಾನು ಬುದ್ಧಿಯೆನಿಸುವೆನು; ತೇಜೋವಂತರ ತೇಜಸ್ಸಿಗೆ ಪ್ರವರ್ತಕನಾದ್ದರಿಂದ ತೇಜೋನಾಮಕನು. ಹೇ ಪಾರ್ಥ! ಸರ್ವಪ್ರಾಣಿಗಳ ಮತ್ತು ಅವುಗಳ ವಿವಿಧ ಭಾವಗಳ ಅಭಿವ್ಯಕ್ತಿಗೆ ನಾನೇ ಬೀಜರೂಪನಾಗಿರುವೆನು.

ಅರ್ಜುನ—ಬೀಜವು ಅಂಕುರಾದಿಗಳಿಗೆ ಪರಿಣಾಮಿಕಾರಣವು. ಅಂಕುರೋತ್ಪತ್ತಿಯಾದ ಒಡನೆಯೇ ಬೀಜವು ನಷ್ಟವಾಗುತ್ತದೆ. ನೀನು ಬೀಜರೂಪನೆಂದರೇನು?

ಶ್ರೀಕೃಷ್ಣ—ಬೀಜನೆಂದರೆ ವ್ಯಂಜಕನೆಂದು ತಿಳಿ–ಪರಿಣಾಮಿಕಾರಣನಲ್ಲ, ನಾನು ಸನಾತನನು, ಯಾವಪ್ರಕಾರದ ನಾಶವೂ ನನಗಿಲ್ಲ. ಬೀಜವು ರೂಪಾಂತರಗೊಳ್ಳುವಂತೆ ಪರಿಣಾಮಹೊಂದುವೆನೆಂದಾಗಲಿ, ಬೀಜವು

ಬೀಜರೂಪದಿಂದ ನಷ್ಟವಾಗುವಂತೆ ಸಷ್ಟನಾಗುವೆನೆಂದಾಗಲಿ ತಿಳಿಯಬೇಕು. (೧೦) ನಾನು ವಿಷಯಭೋಗದ ಅವಶ್ಯಕವಿಲ್ಲದೇ ಪೂರ್ಣವಾದ ನಿತ್ಯಬಲ ವುಳ್ಳವನು. ಇತರರ ದ್ರವ್ಯ, ಸ್ತ್ರೀ ಮೊದಲಾದವುಗಳಲ್ಲಿ ಅನುರಾಗವುಳ್ಳವರು ಅವುಗಳನ್ನು ದೊರಕಿಸಿಕೊಳ್ಳಲು, ಬಲಪ್ರಯೋಗಕ್ಕೆ ಅನರ್ಹರಾದ ವಸ್ತುಗಳ ಯಜಮಾನರಲ್ಲಿ ತಮ್ಮ ಬಲವನ್ನು ಪ್ರಯೋಗಿಸುವಂತೆ, ನಾನು ಅಯೋಗ್ಯಸ್ಥಾನದಲ್ಲಿ ನನ್ನ ಬಲವನ್ನು ಪ್ರಯೋಗಿಸುವುದಿಲ್ಲ. ನನ್ನ ಬಲವು ಕಾಮರಾಗವರ್ಜಿತವಾದುದು. ಈವಿಧಪೂರ್ಣಬಲನಾದ ನಾನು ಬಲರೂಪದಿಂದ ಭೀಮಾದಿಬಲಿಷ್ಠರಿಗೆಲ್ಲ ಬಲಪ್ರದನು. ಸಾಮಾನ್ಯವಾಗಿ ಅರ್ಥಾಪೇಕ್ಷೆಯು ಧರ್ಮವನ್ನು ಕೆಡಿಸುತ್ತದೆ. ನಾನಾದರೋ ಪೂರ್ಣ ಕಾಮನಾದ್ದರಿಂದ ಯಾವ ಅರ್ಥವನ್ನೂ ಇಚ್ಛಿಸುವುದಿಲ್ಲ. ನನ್ನನ್ನು ಭಕ್ತಿ ಯಿಂದ ವಶಗೊಳಿಸಿಕೊಂಡವರ ಧರ್ಮವನ್ನೂ ಉಳಿಸಿ ಅಭಿವೃದ್ಧಿಗೊಳಿಸು ತ್ತೇನೆ; ಧರ್ಮವಿರೋಧಿಯಲ್ಲದ ಕಾಮವುಳ್ಳವರನ್ನಾಗಿ ಮಾಡುತ್ತೇನೆ. ಧರ್ಮವಿರುದ್ಧವಾದ ಕಾಮರೂಪದಿಂದ ಅವರಲ್ಲಿ ನಾನೇ ಇರುವೆನೆಂದು ತಿಳಿ. ಯದ್ಯಪಿ ಅಯೋಗ್ಯಜನರ ದುಷ್ಟಬಲ ಕಾಮಾದಿಗಳ ನಿಯಾಮಕನೂ ನಾನೇ; ಆದರೆ ಅವು ನನ್ನ ಸ್ವರೂಪವಲ್ಲ. ಸರ್ವಸ್ವತಂತ್ರನಾದ ನನ್ನ ಅಧೀನ ದಲ್ಲಿ ನನ್ನ ಇಚ್ಛಾನುಸಾರವಾಗಿ ಪ್ರವರ್ತಿಸುವ ದುಷ್ಟಶಕ್ತಿಗಳು ಸರ್ವತ್ರ ವ್ಯಾಪ್ತನೂ, ಸರ್ವನಿಯಾಮಕನೂ, ಸದಾ ಸರ್ವರ ಪ್ರಭುವೂ ಆದ ನಾನು, ಶುಭಗಂಧ, ಕಾಮರಾಗವರ್ಜಿತಬಲ, ಧರ್ಮಾವಿರುದ್ಧಕಾಮ ಇತ್ಯಾದಿ ಸಾರಭೂತವಾದ ಧರ್ಮಗಳಿಗೆ, ಆಯಾವಿಧರೂಪದಿಂದ ಪ್ರವರ್ತಕನೆಂದು ತಿಳಿದು ಭಕ್ತನು ಉಪಾಸಿಸಬೇಕಲ್ಲದೇ ಅಯೋಗ್ಯಜೀವರ ಅಧೋಗತಿ ಗಾಗಿ, ಅಶುಭಧರ್ಮಗಳ ಪ್ರವರ್ತಕನೆಂದು ಅವುಗಳಲ್ಲಿ ಚಿಂತಿಸಬಾರದೆಂಬ ಕಾರಣದಿಂದ ನನ್ನ ಈ ಮಹಿಮಾತಿಶಯವನ್ನು ವಿವರಿಸುತ್ತಿರುವೆನು, ಹೇ, ಭರತಶ್ರೇಷ್ಠ ! (೧೧).

ಅರ್ಜುನ—ಹೇ ಪ್ರಭೋ! ರಸಾದಿಧರ್ಮಗಳಿಗೆ ಮಾತ್ರ ನೀನು ಪ್ರೇರಕನೋ ಅಥವಾ ಜಲಾದಿ ಸಕಲವಸ್ತುಗಳಿಗೂ ಪ್ರೇರಕನೋ ?

ಶ್ರೀಕೃಷ್ಣ—ವಸ್ತುಸ್ವಭಾವಧರ್ಮಗಳು ಮಾತ್ರ ನನ್ನ ವಶವೆಂದಲ್ಲ. ಈ

ಮೊದಲು ಹೇಳಿದಂತೆ ಸಕಲವಸ್ತುಗಳು ಸರ್ವವಿಧದಿಂದ ನನ್ನ ಅಧೀನಗಳು. ಹೀಗಿನು, ಸಾತ್ವಿಕ, ರಾಜಸ ಮತ್ತು ತಾಮಸ ಗುಣವಿಕಾರಗಳಾದ ಸಕಲ ವಸ್ತುಗಳು ನನ್ನಿಂದಲೇ ಉತ್ಪತ್ತಿಯುಳ್ಳವು; ಮತ್ತು ಸರ್ವವಿಧದಿಂದ ನನ್ನನ್ನೇ ಉಪಜೀವಿಸಿಕೊಂಡಿರುವುವು. ಸಕಲ ಜಗತ್ತು ನನ್ನನ್ನೇ ಆಶ್ರಯಿಸಿ ಕೊಂಡಿರುವುದು; ನನ್ನ ಪ್ರೇರಣಾನುಸಾರವಾಗಿ ವರ್ತಿಸುವುದು. ನಾನು ಅದನ್ನು ಯಾವರೀತಿಯಿಂದಲೂ ಆಶ್ರಯಿಸಿಕೊಂಡಿಲ್ಲ. (೧೨).

ಅರ್ಜುನ— ಸತ್ವಾದಿಗುಣಜನ್ಯಸಕಲವಸ್ತುಗಳಿಗೆ ನೀನೇ ಕಾರಣ ನೆಂದೂ ಆಶ್ರಯನೆಂದೂ ಹೇಳಿದ್ದರಿಂದ ನೀನು ಗುಣಾತೀತನೆಂದು ಹೇಳಿ ದಂತಾಯಿತು. ಹಾಗಾದರೆ ನೀನು ಸಗುಣನೆಂದು ತಿಳಿಯಲ್ಪಡಲು ಕಾರಣವೇನು ?

ಶ್ರೀಕೃಷ್ಣ—ಸಕಲವಸ್ತುಗಳೂ ಸತ್ವಾದಿತ್ರಿಗುಣವಿಕಾರಗಳೇ. ಆದರೂ ಆಯಾಗುಣಪ್ರಾಚುರ್ಯದಿಂದ, ವಸ್ತುಗಳು ಆಯಾಗುಣವಿಕಾರಗಳೆಂದು ಹೇಳಲ್ಪಡುತ್ತವೆ. ತ್ರಿಗುಣಾತ್ಮಕಜಗದ್ವಸ್ತುಗಳಿಂದ ಮೋಹಿತವಾದ ಅಜ್ಞಾನಿ ಸಮೂಹವು, ಅವುಗಳಿಂದ ಭಿನ್ನನೂ, ಉತ್ತಮನೂ, ವಿಕಾರರಹಿತನೂ ಆದ ನನ್ನನ್ನು ಗುಣಾತೀತನೆಂದು ತಿಳಿಯುವುದಿಲ್ಲ. ನನ್ನ ಜ್ಞಾನ, ಇಚ್ಛೆ, ಕ್ರಿಯೆಗಳೆಲ್ಲ ಅಪ್ರಾಕೃತವಾದವುಗಳು. ಈ ನನ್ನ ದೇಹವೂ ಗುಣಾತೀತ ವಾದುದೇ; ಆದರೂ ಅಜ್ಞಾನಿಗಳು ಗುಣವಿಕಾರದಿಂದಾದ ಪ್ರಾಕೃತದೇಹ ವೆಂದೇ ತಿಳಿಯುತ್ತಾರೆ.

ಅರ್ಜುನ—ನೀನು ಗುಣಾತೀತನಲ್ಲವೆಂಬ ಮೋಹವನ್ನು ಹುಟ್ಟಿಸಲು ಜಗದ್ವಸ್ತುಗಳು ಹೇಗೆ ಕಾರಣವಾಗುತ್ತವೆ ?

ಶ್ರೀಕೃಷ್ಣ— ಅಜ್ಞಾನಿಗಳ ಕುತರ್ಕಗಳಿಗೆ ಎಡೆಗೊಡುವುದರಮೂಲಕ ಮೋಹಕ್ಕೆ ಕಾರಣವಾಗುತ್ತವೆ. "ಶ್ರೀಕೃಷ್ಣನ ದೇಹವೂ ಗುಣಾತ್ಮಕ ವಾದುದು, ದೇಹತ್ವವಿರುವುದರಿಂದ–ಗುಣಮಯಗಳಾದ ನಮ್ಮ ದೇಹ ಗಳಂತೆ" ಎಂದು ಮುಂತಾಗಿ ಅನುಮಾನಿಸಿ, ಈ ಅಜ್ಞಲೋಕವು ಭ್ರಮಿಸುತ್ತದೆ. ಆದರೆ ಜ್ಞಾನಿಗಳು ನನ್ನ ದೇಹವೂ ಅಪ್ರಾಕೃತ (ಗುಣಾ ತೀತ)ವಾದುದೆಂದು ಯಥಾವತ್ತಾಗಿ ತಿಳಿಯುತ್ತಾರೆ; ಪಾಮರರು

ಜ್ಞಾನೋಪಾಯರಹಿತರಾದುದರಿಂದ ತಿಳಿಯುವುದಿಲ್ಲ. ಹೀಗೆಯೇ ನನ್ನ ಎಲ್ಲ ರೂಪಗಳ ವಿಷಯದಲ್ಲಿಯೂ ಅಜ್ಞರು ಭ್ರಮಿಸುವರು; ಜ್ಞಾನಿಗಳು ಅಪ್ರಾಕೃತಗಳೆಂದೇ ತಿಳಿಯುವರು. (೧೩)

ಅರ್ಜುನ— ಬ್ರಹ್ಮಾದಿಜೀವರ ದೇಹೇಂದ್ರಿಯಗಳಂತೆ ನೀನೂ ಗುಣಮಯವಾದ ದೇಹವುಳ್ಳವನೆಂದು ತಿಳಿಯುವುದು ಭ್ರಮೆಯೇ? ಅದು ಹೇಗೆ?

ಶ್ರೀಕೃಷ್ಣ—ಹಗ್ಗವನ್ನು ಕಂಡು ಸರ್ಪವೆಂದು ತಿಳಿಯುವುದು ಭ್ರಮೆಯಲ್ಲವೇ?

ಅರ್ಜುನ—ಇದು ಸರ್ಪವಲ್ಲ, ಕೇವಲ ಹಗ್ಗವೆಂದು ಪರೀಕ್ಷಾನಂತರ ಉಂಟಾಗುವ ಬಾಧಜ್ಞಾನದಿಂದ, ಸರ್ಪವೆಂದು ತಿಳಿದುದು ಭ್ರಮವೆಂದು ಕರೆಯಲ್ಪಡುವುದು. ಈ ವಿಧವಾದ ಬಾಧಜ್ಞಾನವು ನಿನ್ನ ಈ ಕೃಷ್ಣರೂಪದ (ಹಾಗೂ ನಿನ್ನ ಇತರ ರೂಪಗಳ) ವಿಷಯದಲ್ಲಿ ಯಾರಿಗೂ ಉಂಟಾಗುವುದಿಲ್ಲವಲ್ಲ!

ಶ್ರೀಕೃಷ್ಣ— ನನ್ನ ದೇಹವು ಅಪ್ರಾಕೃತವೆಂದು ಗ್ರಹಿಸುವ ಜ್ಞಾನಿಗಳ ತಿಳುವಳಿಕೆಯೆಂಬ ಬಾಧಜ್ಞಾನವಿರುವುದು.

ಅರ್ಜುನ— ಹೀಗೆ ತಿಳಿಯುವವರು ಬಹು ವಿರಳ. ಬಾಧಜ್ಞಾನರಹಿತರಾದ ಬಹುಜನರಿರುವಾಗ, ಜ್ಞಾನಿಗಳೆಂಬ ಆ ಅಲ್ಪಜನರ ಗ್ರಹಿಕೆಯೇ ತಪ್ಪಿರಬಹುದೆಂದು ಏಕೆ ತಿಳಿಯಬಾರದು?

ಶ್ರೀಕೃಷ್ಣ—ಜ್ಞಾನಿಗಳ ತಿಳುವಳಿಕೆಯೇ ತಪ್ಪಿರಬಹುದೆಂದು ಹೇಳುವುದು ಅವರೇ ಅಜ್ಞಾನಿಗಳೆಂದು ಹೇಳಿದಂತಲ್ಲವೇ? ಸತ್ಯವನ್ನರಿಯದವರು ಜ್ಞಾನಿಗಳಲ್ಲ; ನನ್ನನ್ನು ಎಲ್ಲರಂತೆ ಪ್ರಾಕೃತನೆಂದು ತಿಳಿಯುವ ಜನರೇ ಜ್ಞಾನಿಗಳೆಂದು ಹೇಳಿದಂತಾಗುವುದು. ಆದರೆ, ಸುಜೀವಿಗಳೆಲ್ಲರೂ ಈ ಮೋಹವನ್ನು ಕಳೆದು ನಾನು ಪ್ರಾಕೃತನಲ್ಲವೆಂಬ ಜ್ಞಾನವನ್ನು ಕಾಲಾಂತರದಲ್ಲಿ (ಸಾಧನಪೂರ್ತಿಯನಂತರ) ಪಡೆಯುವರು.

ಅರ್ಜುನ— ಅನಾದಿಕಾಲದಿಂದ ಇಲ್ಲದಿರುವ ಈ ಬಾಧಜ್ಞಾನವು ಉತ್ತರತ್ರದಲ್ಲಿ ಹುಟ್ಟುವುದೆಂದು ತಿಳಿಯುವುದು ಅಸಂಭಾವಿತವಲ್ಲವೇ ?

ಶ್ರೀಕೃಷ್ಣ— ಎಷ್ಟುಮಾತ್ರಕ್ಕೂ ಅಸಂಭಾವಿತವಲ್ಲ. ತನ್ನ ನಿಜ-ಜ್ಞಾನದ ಅಭಾವಕ್ಕೂ ನಾನು ಪ್ರಾಕೃತನೆಂಬ ವಿಪರೀತಜ್ಞಾನಕ್ಕೂ (ಭ್ರಮೆಗೂ) ಮೂಲಕಾರಣವು ಬೇರೆ ಇರುವುದು. ಅದನ್ನೂ, ಈ ಬುದ್ಧಿಮೋಹದ ಪರಿಹಾರೋಪಾಯವನ್ನೂ ವಿವರಿಸುವೆನು, ಕೇಳು. ಈ ಬುದ್ಧಿ-ಮೋಹಕ್ಕೆ ದುರ್ಗಾದೇವಿಯು ಮುಖ್ಯ ಕಾರಣಳು. ನನಗೆ ಅತ್ಯಂತ ಪ್ರಿಯಳಾದ ರಮಾದೇವಿಯು ತನ್ನ ದುರ್ಗಾರೂಪದಿಂದ ಮೋಹಕಳಾಗಿರುವಳು. ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಾದಿಗಳನ್ನು ಲೀಲೆಯಿಂದ ಮಾಡುವ ಸರ್ವಶಕ್ತನಾದ ನನಗೆ ಪ್ರಿಯತಮಳಾದ್ದರಿಂದ ಆಕೆಯು ಅಚಿಂತ್ಯವಾದ ಅದ್ಭುತ ಶಕ್ತಿಯುಳ್ಳವಳು; ಸತ್ವಾದಿತ್ರಿಗುಣಗಳಿಗೆ ಅಭಿಮಾನಿಯು. ಆಕೆಯು ತನ್ನ ವಶದಲ್ಲಿರುವ ತಮೋಗುಣದಿಂದ ತನ್ನ ಇಚ್ಛಾನುಸಾರವಾಗಿ ಜೀವರನ್ನು ಬಂಧಿಸಿ ಈ ತಿರನಾದ ಮೋಹವನ್ನುಂಟು ಮಾಡುವಳು. ಈ ಮೋಹವು ದುರಂತವಾದುದು—ಜೀವರಿಂದ ದಾಟಲಶಕ್ಯವಾದುದು.

ಅರ್ಜುನ— ಈ ಮೋಹವು ದುರತ್ಯಯವೆಂದು ಹೇಳಿದ್ದರಿಂದ, ನೀನು ಸಗುಣ(ಪ್ರಾಕೃತ)ನೆಂಬ ಭ್ರಮೆಗೆ ಬಾಧಜ್ಞಾನವು ಯಾವಕಾಲಕ್ಕೂ ಉಂಟಾಗಲಾರದೆಂದು ಸ್ಪಷ್ಟವಾಗಿ ಒಪ್ಪಿಕೊಂಡಾಯಿತಲ್ಲವೇ ?

ಶ್ರೀಕೃಷ್ಣ—ಅವಸರಿಸಬೇಡ, ಪಾರ್ಥ! ಈ ದುರಂತಮೋಹವನ್ನು ದಾಟುವ ಉಪಾಯವೂ ಇದೆ. ಬೇರೆಲ್ಲವನ್ನೂ ಪರಿತ್ಯಾಗಮಾಡಿ, ನನ್ನನ್ನೇ ಯಾರು ಶರಣುಹೊಂದುವರೋ, ಮಾಯಾನಾಮಕಳಾದ ದುರ್ಗಾದೇವಿಯಿಂದುಂಟಾದ ಈ ಮೋಹವನ್ನು ಸುಲಭವಾಗಿ ದಾಟುವರು.

ಅರ್ಜುನ— ನಿನ್ನನ್ನೇ ಶರಣುಹೊಂದುವುದೆಂದರೇನು? ಅವಶ್ಯ ಕರ್ತವ್ಯಗಳನ್ನೂ (ಗುರುವಂದನಾದಿಗಳನ್ನೂ) ಪರಿತ್ಯಾಗಮಾಡಬೇಕೇ?

ಶ್ರೀಕೃಷ್ಣ— ನನ್ನಾಜ್ಞೆಯೆಂಬ ಭಾವನೆಯಿಂದಲೇ ಗುರುದೇವತಾ-

ವಂದನಾದಿಕರ್ತವ್ಯಗಳನ್ನು ಆಚರಿಸಬೇಕು—ಅವರೇ ಶರಣ್ಯರೆಂಬ ಭಾವ ದಿಂದಲ್ಲ. ಹೀಗೆ ನನ್ನನ್ನು ಸರ್ವಶರಣ್ಯನೆಂದು ತಿಳಿದವನೇ ಅನನ್ಯ ಶರಣನು. (೧೪)

ಅರ್ಜುನ— ನಿನ್ನನ್ನು ಶರಣುಹೊಂದುವುದೇ ಈ ದುರಂತಮೋಹಕ್ಕೆ ಕಾರಣೋಪಾಯವಾದರೆ, ಎಲ್ಲರೂ ನಿನ್ನನ್ನಾಶ್ರಯಿಸಿ ಮಾಯಾಬಂಧ ದಿಂದ ಮುಕ್ತರಾಗಿ ನೀನು ಗುಣಾತೀತನೆಂಬ ನಿಜಜ್ಞಾನವನ್ನು ಏಕೆ ಪಡೆಯುವುದಿಲ್ಲ?

ಶ್ರೀಕೃಷ್ಣ— ನನ್ನ ಯಥಾರ್ಥಸ್ವರೂಪವನ್ನು ಸರ್ವಥಾ ತಿಳಿಯ ಲಾರದ ಸ್ವಭಾವವುಳ್ಳ ಚೇತನರೂ (ತಮೋಯೋಗ್ಯರೂ) ಇರುವರು. ಆದರೆ ತಿಳಿಯುವ ಯೋಗ್ಯತೆಯುಳ್ಳವರು ಸಹ, ನನ್ನ ಇಚ್ಛೆಯಿಂದಲೂ, ಪ್ರಕೃತಿಯಿಂದಲೂ ಮರೆಮಾಡಲ್ಪಟ್ಟ ನನ್ನ ಮಹಿಮಾಜ್ಞಾನವುಳ್ಳವರಾಗಿ ಇಂದ್ರಿಯಲೋಲುಪರಾಗಿ ಪಾಪವನ್ನಾಚರಿಸುವರು. ಅದರಿಂದ ವಿವೇಕ ಶೂನ್ಯರಾಗಿ ಮಿಥ್ಯಾಜ್ಞಾನವುಳ್ಳವರಾಗುವರು. ವಿಮೂಢರಾದ ಅಧಮರು ಎಂದೂ ನನ್ನನ್ನು ತಿಳಿಯಲಾರರು ಮತ್ತು ನನ್ನ ಪ್ರಾಪ್ತಿಯೂ ಅವರಿಗಿಲ್ಲ. (೧೫) ಆದರೆ, ಹೇ ಅರ್ಜುನ! ನನ್ನನ್ನೇ ಭಜಿಸುವ ಸುಕೃತಿಗಳು (ಪುಣ್ಯ ವಂತರು) ನನ್ನನ್ನು ಯಥಾರ್ಥವಾಗಿ ತಿಳಿದು, ಹೊಂದುತ್ತಾರೆ. ಅವರು ನಾಲ್ಕುವಿಧರಾಗಿರುವರು. ರೋಗಾದಿಉಪದ್ರವಗಳಿಗೆ ಸಿಕ್ಕವನು (ಆರ್ತ); ನನ್ನ ನಿಜಸ್ವರೂಪವನ್ನು ತಿಳಿಯಲಪೇಕ್ಷಿಸಿ ಯತ್ನಿಸುವವನು (ಜಿಜ್ಞಾಸು) ಐಹಿಕಸುಖಸಾಧನೆಗಳನ್ನು ಕೋರುವವನು (ಅರ್ಥಾರ್ಥಿ) ಮತ್ತು ತತ್ವ- ಜ್ಞಾನಿಯು (ಜ್ಞಾನಿ). ಈ ನಾಲ್ಕುವಿಧಜನರೂ ನನ್ನನ್ನು ಭಜಿಸುವರು. (೧೬) ಇವರ ಮಧ್ಯೆ, ಸದಾ ಸಮಾಧಿಯುಕ್ತಮನಸ್ಸಿನಿಂದ ನನ್ನನ್ನೇ ಭಕ್ತಿಪೂರ್ವಕಉಪಾಸಿಸುವ ಜ್ಞಾನಿಯು ಶ್ರೇಷ್ಠನು. ನಾನು ಜ್ಞಾನಿಗಳಿಗೆ ಅತ್ಯಂತಪ್ರಿಯನು; ಜ್ಞಾನಿಗಳೇ ನನಗೂ ಅತ್ಯಂತಪ್ರಿಯರು. (೧೭)

ಅರ್ಜುನ— ಜ್ಞಾನಿಯೇ ಶ್ರೇಷ್ಠನೆಂದು ಹೇಳಿದ್ದರಿಂದ, ನಿನ್ನನ್ನು ಭಜಿಸುವ ಇತರ ವರ್ಗದವರನ್ನು ದೂಷಿಸಿದಂತಲ್ಲವೇ?

ಶ್ರೀಕೃಷ್ಣ—ಆರ್ತನೇ ಮೊದಲಾದ ನಾಲ್ಕುವಿಧಜನರೂ ಉತ್ಕೃಷ್ಟರೇ ಸರಿ. ಅವರಲ್ಲಿ ಜ್ಞಾನಿಯು ನನಗೆ ನನ್ನ ಸ್ವರೂಪದಷ್ಟೇ ಪ್ರಿಯನು—ಜ್ಞಾನಿಯೇ ನಾನೆಂದು ತಿಳಿಯುವೆನು. ನನ್ನ ವಿಷಯಕವಾದ ಯಥಾರ್ಥಜ್ಞಾನನಿಷ್ಠೆಯುಳ್ಳವನಾದ್ದರಿಂದಲೂ, ಸಂಪೂರ್ಣವಾಗಿ ನನ್ನ ಅಧೀನವಾದ ಸ್ವರೂಪವುಳ್ಳವನಾದ್ದರಿಂದಲೂ, ಅವನ ಸಕಲಚೇಷ್ಟೆಗಳು ನನ್ನ ವ್ಯಾಪಾರಗಳೇ ಆದ್ದರಿಂದಲೂ, ಜ್ಞಾನಿಯೇ ನಾನೆಂಬ ಐಕ್ಯೋಕ್ತಿಯು, ಔಪಚಾರಿಕವಾದರೂ, ಕೂಡುತ್ತದೆ. ಅನುತ್ತಮಗತಿಯನ್ನು (ಮೋಕ್ಷವನ್ನು) ಮಾತ್ರ ಉದ್ದೇಶಿಸಿ, ಸಮಾಧಿಯುಕ್ತಮನಸ್ಸಿನಿಂದ ಸದಾ ನನ್ನನ್ನಾಶ್ರಯಿಸಿರುವ ಜ್ಞಾನಿಯಲ್ಲದೇ ನನಗೆ ಮತ್ತಾರು ಪ್ರಿಯರಾಗಬಹುದು! (೧೮) ಹೇ ಪಾರ್ಥ! ಬಹುಜನ್ಮಗಳನ್ನು (ಮನುಷ್ಯಶರೀರಗಳನ್ನು) ಹೊಂದಿ ಜ್ಞಾನಾರ್ಥವಾಗಿ ಪ್ರಯತ್ನಿಸಿ, ಸಕಲಜಗತ್ತು ವಾಸುದೇವಾಧೀನವೆಂದೂ, ಸ್ವಾತಂತ್ರ್ಯಾದಿಗುಣಪೂರ್ಣನು ವಾಸುದೇವನೇ ಎಂದೂ ತಿಳಿದ ಜ್ಞಾನಿಗೇ ನನ್ನ ಪ್ರಾಪ್ತಿಯಲ್ಲದೇ ಅನ್ಯರಿಗಾಗಲು ಸಾಧ್ಯವೇ? ಈ ವಿಧ ಜ್ಞಾನಿಯು ದುರ್ಲಭನು—ಅವನೇ ಮಹಾತ್ಮನು. (೧೯)

ಅರ್ಜುನ— ಲೋಕದಲ್ಲಿ ಜ್ಞಾನಿಗಳೆಂಬುವರು ಬಹುಮಂದಿ ಕಾಣಿಸುವರು. ನೀನಾದರೋ ಜ್ಞಾನಿಯು ದುರ್ಲಭನೆಂದು ಹೇಳುತ್ತಿರುವಿ. ಇದರ ಮರ್ಮವೇನು?

ಶ್ರೀಕೃಷ್ಣ— ಜ್ಞಾನಿಗಳೆಂದು ತೋರುವ ಈ ಜನರು, ತಮತಮಗೆ ಅಪೇಕ್ಷಿತವಾದ ನಾನಾವಿಧಫಲಗಳನ್ನು ಕಾಮಿಸಿ, ನನ್ನ ಸರ್ವೋತ್ತಮತ್ವಜ್ಞಾನವನ್ನು ಕಳೆದುಕೊಂಡು, ಬ್ರಹ್ಮಾದಿದೇವತಾಪ್ರತಿಪಾದಕಆಗಮಗಳಲ್ಲಿ ಹೇಳಲ್ಪಡುವ ನಿಯಮಗಳನ್ನು ಅನುಸರಿಸುತ್ತಾ, ಸ್ವಭಾವಕ್ಕೆ ವಶರಾಗಿ, ಅನ್ಯದೇವತೆಗಳನ್ನು ಭಜಿಸಿ, ಅವರನ್ನೇ ಹೊಂದುವರು. (ಅವರಿಂದ ಲಭಿಸುವ ಅಶಾಶ್ವತಫಲಗಳನ್ನು ಹೊಂದುವರು). (೨೦)

ಅರ್ಜುನ— ಹೀಗೆ, ಅನ್ಯದೇವತೋದ್ದೇಶ್ಯಕವಾದ ಯಜ್ಞಯಾಗಾದಿ ಮಿಶ್ರಕರ್ಮಗಳಲ್ಲಿ ತೊಡಗುವವನು ಕ್ರಮೇಣ (ನಿನ್ನ ಸರ್ವೋತ್ತಮತ್ವಜ್ಞಾನವುಳ್ಳ) ಭಾಗವತನಾಗುವನೋ ಹೇಗೆ?

ಶ್ರೀಕೃಷ್ಣ— ಶುದ್ಧಭಾಗವತನು ಸಾತ್ವಿಕನು—ಮುಕ್ತಿಯೋಗ್ಯನು. ಭಗವದ್ದ್ವೇಷಾದಿದುಷ್ಟಸ್ವಭಾವವುಳ್ಳವನು ತಾಮಸಿಯು—ತಮೋಯೋಗ್ಯನು. ಇವರಿಬ್ಬರಿಂದಲೂ ಭಿನ್ನನಾದವನು ಮಿಶ್ರಸ್ವಭಾವವುಳ್ಳ ರಾಜಸನು—ವಿಷ್ಣುತತ್ವಜ್ಞಾನ ಮತ್ತು ತದ್ವಿಪರೀತಜ್ಞಾನ (ಮಿಥ್ಯಾಜ್ಞಾನ) ಗಳೆರಡೂ ಇಲ್ಲದವನು. ಈತನು ಕಾರಣವಿಶೇಷದಿಂದ ಬ್ರಹ್ಮರುದ್ರಾದಿ ಯಾವ ದೇವತೆಯನ್ನು ಭಕ್ತಿಯಿಂದ ಪೂಜಿಸಲಪೇಕ್ಷಿಸುವನೋ, ಆ ದೇವತೆಯಲ್ಲಿ ಅವನಿಗೆ ಅಚಲವಾದ ವಿಶ್ವಾಸವನ್ನು ನಾನೇ ಹುಟ್ಟಿಸುತ್ತೇನೆ. ಆತನು ಆ ದೇವತೆಯನ್ನು ಶ್ರದ್ಧೆಯಿಂದ ಪೂಜಿಸಿ, ತನಗೆ ಇಷ್ಟವಾದ ಫಲವನ್ನು ಹೊಂದುತ್ತಾನೆ. ಆಯಾದೇವತಾಂತರ್ಯಾಮಿಯಾದ ನಾನೇ ಆ ಫಲಗಳನ್ನು ಕೊಡುವವನು. ಅನ್ಯರಿಗೆ ಫಲದಾನದಲ್ಲಿ ಶಕ್ತಿಯಿಲ್ಲ—ಸ್ವಾತಂತ್ರ್ಯವಿಲ್ಲ.

ಅರ್ಜುನ— ಸದುಪದೇಶವೇ ಮೊದಲಾದ ನಿನ್ನ ಸರ್ವೋತ್ತಮತ್ವ-ನಿರ್ಣಾಯಕಸಾಮಗ್ರಿಗಳಿಲ್ಲದ ಪ್ರಯುಕ್ತ, ಶುದ್ಧಸಾತ್ವಿಕಸ್ವಭಾವದವನೂ ಅನ್ಯದೇವತಾಭಜಕನಾಗಬಹುದಲ್ಲವೇ ? ಅವನ ಗತಿಯೇನು ?

ಶ್ರೀಕೃಷ್ಣ—ಸ್ವತಃ ವಿಷ್ಣುಭಕ್ತನಾದ ಶುದ್ಧಭಾಗವತನು, ನನ್ನ ಸರ್ವೋತ್ತಮತ್ವವನ್ನು ತಿಳಿದೂ, ಕಾರಣಾಂತರಗಳಿಗೆ ವಶನಾಗಿ ಬ್ರಹ್ಮಾದಿ-ದೇವತೆಗಳನ್ನು ಆರಾಧಿಸಿದರೆ, ಸ್ವರ್ಗಾದಿಫಲಗಳನ್ನು ಹೊಂದುವನಾದರೂ ಕ್ರಮೇಣ ನನ್ನ ಅನುಗ್ರಹದಿಂದ ಸದ್ಗುರೂಪದೇಶಾದಿಸದವಕಾಶಗಳನ್ನು ಪಡೆದು ನನ್ನನ್ನೇ ಆರಾಧಿಸುವನು ಮತ್ತು ಮೋಕ್ಷಾದಿಸರ್ವಕಾಮಗಳನ್ನೂ ಪಡೆಯುವನು. (೨೧-೨೨)

ಅರ್ಜುನ— ಅನ್ಯದೇವತೆಗಳನ್ನು ಭಜಿಸುವವರಿಗೂ ನಿನ್ನಿಂದಲೇ ಫಲವು ಲಭಿಸುವುದಾದರೆ, ಅವರನ್ನು ಬಿಟ್ಟು ನಿನ್ನನ್ನೇ ಆರಾಧಿಸಬೇಕೆಂಬುದಾದರೂ ಏಕೆ ?

ಶ್ರೀಕೃಷ್ಣ— ನನ್ನನ್ನು ರಮಾಬ್ರಹ್ಮಾದಿಗಳಿಗಿಂತ ಉತ್ತಮನೆಂದು ತಿಳಿದೂ, ಇತರ ದೇವತೆಗಳನ್ನು ಸೇವಿಸಿದರೆ ನಶ್ವರವಾದ ಅಲ್ಪಫಲವೇ

ಹೊರೆಯುವುದು. ಸರ್ವೋತ್ತಮನವನ್ನು ಬಿಟ್ಟು ಅನ್ಯರನ್ನಾಶ್ರಯಿಸುವ ಅಲ್ಪಬುದ್ಧಿಯುಳ್ಳವರಿಗೆ ಅಲ್ಪಫಲವಲ್ಲದೇ ನನ್ನ ಪ್ರಾಪ್ತಿರೂಪವಾದ ಮಹಾಫಲವು ಹೇಗೆ ಲಭಿಸಬಹುದು? ನನ್ನನ್ನೇ ಆಶ್ರಯಿಸಿದ ನನ್ನ ಭಕ್ತರು, ಮಾರ್ಗಸ್ಥರೀನ ಅನ್ಯದೇವತೆಗಳನ್ನೂ ಹೊಂದಿ, ಅಂತ್ಯದಲ್ಲಿ ನನ್ನನ್ನೂ ಹೊಂದುವರು. ವಿವೇಕಿಯು, ನನ್ನನ್ನು ಪ್ರಧಾನವಾಗಿಯೂ, ನನ್ನ ಪರಿವಾರದವರಾದ ಬ್ರಹ್ಮಾದಿಗಳನ್ನು ಅಪ್ರಧಾನವಾಗಿಯೂ ಆರಾಧಿಸಬೇಕು. ಇದು ಸರ್ವೋತ್ತಮತ್ವಜ್ಞಾನಪೂರ್ವಕವಾದ ನನ್ನ ಆರಾಧನೆಯಾಗುವುದು. ಇದರಿಂದ ದೊರೆಯುವ ಫಲವು ಅನಂತವು. ಕೇವಲ ಅನ್ಯದೇವತೆಗಳನ್ನು ಭಜಿಸಿದರೆ, ನಾನೇ ಫಲಕೊಡುವವನಾದರೂ, ಅಲ್ಪಫಲವೇ ದೊರೆಯುವುದು. (೨೩)

ಅರ್ಜುನ— ಈ ವಿಧವಾದ ಫಲವೈಷಮ್ಯಕ್ಕೆ ಕಾರಣವೇನು?

ಶ್ರೀಕೃಷ್ಣ— ಐಹಿಕಭೋಗಗಳೂ, ಸ್ವರ್ಗಾದಿಗಳೂ ನಶ್ವರವಾದವು. ನನ್ನನ್ನು ಹೊಂದಿದವರು, ಸಂಸಾರದಿಂದ ಮುಕ್ತರಾಗಿ, ತಮ್ಮ ಸ್ವರೂಪಾನಂದದ ಆವಿರ್ಭಾವವನ್ನು ಹೊಂದಿ ನಿತ್ಯಸುಖಿಗಳಾಗುವರು. ಪ್ರಕೃತಿ ಬಂಧವೇ ಸಂಸಾರವು. ಅದರಿಂದ ಬಿಡುಗಡೆಹೊಂದಲು, ಪ್ರಕೃತಿಬಂಧರಹಿತನೂ, ಪ್ರಕೃತಿಸ್ವಾಮಿಯೂ ಆದ ನನ್ನನ್ನೇ ಆಶ್ರಯಿಸಬೇಕಲ್ಲವೇ? ಬ್ರಹ್ಮಾದಿಗಳೂ ಪ್ರಕೃತಿಬಂಧವುಳ್ಳವರು. ಅವರಿಂದ ಮೋಕ್ಷರೂಪವಾದ ಮಹಾಫಲವು ಹೇಗೆ ದೊರೆಯಬಹುದು? ನಾನಾದರೋ, ಇತರ ವಿಲಕ್ಷಣನು; ಸರ್ವದಾ ಸರ್ವೋತ್ತಮನು; ಜನ್ಯ(ಪ್ರಾಕೃತ)ದೇಹ ರಹಿತನು; ನಿತ್ಯಚಿದಾನಂದದೇಹಿಯು. ಹೀಗೆಂದು ನನ್ನ ನಿಜಸ್ವರೂಪವನ್ನು ತಿಳಿದು ನನ್ನನ್ನು ಸೇವಿಸುವ ನನ್ನ ಭಕ್ತರು ನನ್ನ ಅನುಗ್ರಹಕ್ಕೆ ಪಾತ್ರರಾಗಿ, ಪ್ರಾಕೃತಬಂಧದಿಂದ ಬಿಡುಗಡೆಹೊಂದುವರು.

ಹೇಗೆ ಅನ್ಯದೇವತಾರಾಧಕರೂ, ನನ್ನನ್ನೇ ಆರಾಧಿಸುವ ಭಾಗವತರೂ ಇರುವರೋ, ಹಾಗೆ ಸ್ವಭಾವದಿಂದಲೇ ನನ್ನನ್ನು ದ್ವೇಷಿಸುವವರೂ ಇರುವರು. ಅವರೇ, ನಾನು ಈ ಮೊದಲು ಹೇಳಿದ ತಮೋಯೋಗ್ಯರು.

ಅರ್ಜುನ— ಇವರು ನಿನ್ನ ಸ್ವರೂಪವನ್ನು ಯಾವ ಪ್ರಕಾರಕವೆಂ‍ದು ತಿಳಿಯುವರು ?

ಶ್ರೀಕೃಷ್ಣ— ನಾನೊಬ್ಬ ಪ್ರಾಕೃತಶರೀರಿಯಾದ ಸಾಮಾನ್ಯಜೀವ ನೆಂದೇ ಇವರು ತಿಳಿಯುವರು. ಎಂದೂ ಯಾರಿಂದಲೂ ಪೂರ್ಣವಾ ತಿಳಿಯಲಾಗದ ಅನಂತಮಹಿಮೆಗಳುಳ್ಳವನೂ, ನನ್ನ ಇಚ್ಛೆಯಿಂದಲ್ಲದೆ ಯಥಾಯೋಗ್ಯವಾಗಿ ಸಹ ಗೋಚರಿಸದ ಸ್ವಭಾವದವನೂ, ಅತ್ಯ ಅವ್ಯಕ್ತನೂ ಆದ ನನ್ನನ್ನು, ವಿಮೂಢರಾದ ಈ ಜನರು, ವ್ಯಕ್ತಿತ್ವವನ್ನು ಹೊಂದಿದ (ಪ್ರಾಕೃತ ಶರೀರವನ್ನು ಪಡೆದ) ಜೀವನೆಂದು ಭ್ರಮಿಸುವರು, ಸರ್ವಪ್ರೇರಕತ್ವಾದಿಮಹಾಮಹಿಮೋಪೇತನಾದ ನನ್ನನ್ನು ಜೀವಾಭಿನ್ನ ನೆಂದೇ ನಂಬಿ, ತದಾಗ್ರಹಯುಕ್ತರಾಗುವರು. (೨೪)

ಅರ್ಜುನ—ಹೇ ದೇವ! ಈವಿಧಜ್ಞಾನವುಳ್ಳವರು ನಿನ್ನ ಮಹಿಮೆ ಗಳನ್ನು ತಿರಸ್ಕರಿಸಿ ನಿನ್ನ ಅವಹೇಳನರೂಪವಾದ ನಿಂದೆಯನ್ನು ಮಾಡುವುದ ರಿಂದ ನಿನಗೆ ಖೇದವಾಗುವುದಿಲ್ಲವೇ ?

ಶ್ರೀಕೃಷ್ಣ—ನನ್ನ ಸರ್ವೋತ್ತಮಭಾವವನ್ನು ವಿಪರೀತವಾಗಿ ತಿಳಿಯು ವುದಕ್ಕೆ ಕಾರಣವಾದ ಅವರ ಅಜ್ಞಾನವು ನನ್ನ ಅಧೀನವೇ ಆದ್ದರಿಂದ ನನಗೇಕೆ ಖೇದವಾದೀತು? ಸರ್ವಥಾ ಯಾವ ಖೇದವೂ ನನಗಿಲ್ಲ. ನನ್ನ ಅಚಿಂತ್ಯಶಕ್ತಿಯಿಂದಲೂ, ದುರ್ಗಾದೇವಿಯಿಂದಲೂ (ಲಕ್ಷ್ಮೀರೂಪ) ಮರೆಮಾಡಲ್ಪಟ್ಟ ನಾನು ಎಲ್ಲ ಜನರಿಗೆ ಜ್ಞಾನವಿಷಯನಾಗುವುದಿಲ್ಲ. ನನ್ನಿಂದಲೇ ಮೋಹಿತವಾದ ಈ ತಮೋಯೋಗ್ಯರ ತಂಡವು ನನ್ನನ್ನು ಉತ್ಪತ್ತಿ ವಿನಾಶಗಳಿಲ್ಲದ ನಿತ್ಯಸ್ವರೂಪದವನೆಂದು ತಿಳಿಯುವುದಿಲ್ಲ. (೨೫)

ಅರ್ಜುನ—ಇಬ್ಬರ ಮಧ್ಯದಲ್ಲಿರುವ ತೆರೆಯು (ಮರೆಮಾಡುವವಸ್ತ್ರ ಅಥವಾ ಇತರವಸ್ತು) ಪರಸ್ಪರವಾಗಿ ಒಬ್ಬನಿಗೆ ಮತ್ತೊಬ್ಬನ ಜ್ಞಾನ ವಿಲ್ಲದಂತೆ ಮಾಡುವುದು. ತೆರೆಯಂತಿರುವ ದುರ್ಗಾದೇವಿಯು (ಮಾಯೆಯು) ನಿನ್ನನ್ನು ಜೀವರಿಗೆ ಕಾಣದಂತೆ ಮರೆಮಾಡಿದರೆ, ನಿನಗೂ ಜೀವರು ಮರೆಯಾಗಬೇಕಲ್ಲವೇ? ಹೀಗಿರಲು ಜೀವರ ಈ ವಿಭಿನ್ನಸ್ವರೂಪ ಗಳನ್ನು ನೀನು ಹೇಗೆ ತಿಳಿಯುವಿ?

ಶ್ರೀಕೃಷ್ಣ—ಹೇ ಅರ್ಜುನ! ಮಾಯಾಕೃತವಾದ ಬಂಧವು ನನಗಿಲ್ಲ. ನನ್ನ ಅಧೀನಳಾದ ಮಾಯೆಯು ನನ್ನನ್ನೇ ಪ್ರತಿಬಂಧಿಸುವಳೇ! ಆಕೆಯು ಜೀವರನ್ನು ಬಂಧಿಸಿ, ನನ್ನ ಸ್ವರೂಪವನ್ನು ಅವರಿಂದ ಮರೆಮಾಡುವುದಾದರೂ ನನ್ನ ಇಚ್ಛೆಯಿಂದಲೇ. ಭೂತ, ಭವಿಷ್ಯತ್, ವರ್ತಮಾನಕಾಲದ ಸರ್ವ ಪ್ರಾಣಿಗಳನ್ನೂ ನಾನು ಬಲ್ಲೆನು. ನನ್ನನ್ನಾದರೋ ಯಾರೂ ತಿಳಿಯರು. ಅತಿ ಭಕ್ತನಾದ ಚತುರ್ಮುಖಬ್ರಹ್ಮನೂ ಸಹ ಸ್ವಲ್ಪಮಟ್ಟಿಗೆ ತಿಳಿಯುವನು. ನನ್ನನ್ನು ಯಥಾವತ್ತಾಗಿ ಪೂರ್ಣವಾಗಿ ತಿಳಿದವರು ಯಾರೂ ಇಲ್ಲ. (೨೬)

ಅರ್ಜುನ—ನಿನ್ನನ್ನು ಜೀವಾಭಿನ್ನನೆಂದು (ಜೀವಬ್ರಹ್ಮರು ಒಂದೇ ಎಂದು) ತಿಳಿಯುವ ಮಿಥ್ಯಾಜ್ಞಾನಕ್ಕೆ ನಿನ್ನ ಇಚ್ಛೆಯೂ, ದುರ್ಗಾದೇವಿಯ ಬಂಧಕಶಕ್ತಿಯೂ ಕಾರಣಗಳೆಂದು ಹೇಳುವಿ. ಈ ಮೋಹವು (ಮಿಥ್ಯಾಜ್ಞಾನವು) ಎಲ್ಲರಿಗೂ ಉಂಟಾಗುವುದೋ, ಯಾವಕಾಲದಲ್ಲಿ ಮತ್ತು ಅದಕ್ಕೆ ಬೇರಾವಕಾರಣಗಳಾದರೂ ಇರುವುವೋ ಎಂಬೀವಿಷಯಗಳನ್ನು ವಿವರಿಸು.

ಶ್ರೀಕೃಷ್ಣ—ದ್ವಂದ್ವಮೋಹವೂ ಮಿಥ್ಯಾಜ್ಞಾನಕ್ಕೆ ಕಾರಣವು. ವಿವರಿಸುವೆನು, ಕೇಳು. ಅನುಕೂಲವೆಂದು ತೋರುವ ವಿಷಯದಲ್ಲಿ ಇಚ್ಛೆ ಮತ್ತು ಪ್ರತಿಕೂಲವೆಂದು ತೋರುವ ವಿಷಯದಲ್ಲಿ ದ್ವೇಷ, ಇವು ಸೃಷ್ಟಿಕಾಲದಿಂದಲೂ ಆರಂಭವಾಗುತ್ತವೆ. ಶರೀರದೊಂದಿಗೆ ಇಚ್ಛಾದ್ವೇಷಗಳು ಬೆಳೆದು ಅದರಿಂದ ದ್ವಂದ್ವಮೋಹವು ಹುಟ್ಟುತ್ತದೆ. ಸುಖ, ದುಃಖ; ಲಾಭಾಲಾಭಾದಿಗಳು ದ್ವಂದ್ವಗಳು. ಇವುಗಳಲ್ಲಿ ಮೋಹವೆಂದರೆ, ದುಃಖವು ಹೇಗೆ ಹೇಯವೋ ಹಾಗೆ ವಿಷಯಸುಖವೂ ಹೇಯವೆಂಬ ಯಥಾರ್ಥವಾದ ತಿಳುವಳಿಕೆಗೆ ವಿರುದ್ಧವಾಗಿ, ವಿಷಯಸುಖವು ಉಪಾದೇಯವೆಂದು ತಿಳಿಯುವುದು. (ಉಪಾದೇಯ—ಯತ್ನಪೂರ್ವಕವಾಗಿ ದೊರಕಿಸಿಕೊಳ್ಳಬೇಕೆಂಬ ಆಶೆ.) ಹೇ ಪರಂತಪ! ದುಃಖವು ನಮ್ಮ ಇಚ್ಛೆಯಿಂದ ಬರುವುದಿಲ್ಲ; ಯಾರೂ ದುಃಖಕ್ಕಾಗಿ ಯತ್ನಿಸುವುದಿಲ್ಲ. ದುಃಖವು ನಮ್ಮ ಅಧೀನವಲ್ಲ. ನಿತ್ಯವೂ ಅಲ್ಲ, ಮೋಕ್ಷಸಾಧಕವೂ ಅಲ್ಲ. ಇದರಂತೆಯೇ ವಿಷಯಸುಖಾದಿಗಳೂ ಕೂಡ ನಮ್ಮ ಅಧೀನಗಳಲ್ಲ; ನಮ್ಮ ಯತ್ನಗಳಿಂದ ದೊರೆಯತಕ್ಕವುಗಳಲ್ಲ, ನಿತ್ಯಗಳೂ ಅಲ್ಲ, ಮೋಕ್ಷೋಪಯೋಗಿಗಳೂ ಅಲ್ಲ;

ಆದ್ದರಿಂದ ಹೇಯವಾದವುಗಳು. ವಸ್ತುಸ್ಥಿತಿ ಹೀಗಿದ್ದರೂ, ಇದಕ್ಕೆ ವಿರುದ್ಧವಾಗಿ ಸುಖಬೇಕು, ದುಃಖಬೇಡ; ಸುಖವು ನನ್ನ ಯತ್ನದಿಂದ ದೊರೆಯಿತು, ದುಃಖವು ದೈವದಿಂದಾಯಿತು; ವಿಷಯಸುಖವೇ ಸುಖ, ಬೇರೆ ಸುಖವಿಲ್ಲ; ಇತ್ಯಾದಿಯಾಗಿ ತಿಳಿಯುವುದು ಮೋಹವು. ಈ ದ್ವಂದ್ವಮೋಹದಿಂದ, ಹೇ ಭಾರತ! ಸೃಷ್ಟ್ಯಾರಂಭದಿಂದಲೂ ಸರ್ವಪ್ರಾಣಿಗಳೂ ಜೀವಬ್ರಹ್ಮ ವಿಷಯಕವಾದ ಮಿಥ್ಯಾಜ್ಞಾನವನ್ನು ಹೊಂದುವರು.

ಅರ್ಜುನ—ದ್ವಂದ್ವಮೋಹವು ಮಿಥ್ಯಾಜ್ಞಾನಕ್ಕೆ ಹೇಗೆ ಕಾರಣವಾಗುವುದು?

ಶ್ರೀಕೃಷ್ಣ—ಸುಖದುಃಖಾದಿವಿಷಯಕವಿಪರೀತಜ್ಞಾನದಿಂದ, ಜೀವನು ಕಾಮಕ್ರೋಧಾದಿಗಳ ವಶನಾಗುವನು; ದುರಹಂಕಾರಿಯಾಗಿ ತಾನೇ ಸ್ವತಂತ್ರನೆಂದು ಭ್ರಮಿಸುವನು; ಕ್ರಮೇಣ ಮಿಥ್ಯಾಜ್ಞಾನವು ದೃಢಗೊಳ್ಳುವುದು. ಹೀಗೆ ದ್ವಂದ್ವಮೋಹವೂ ಮಿಥ್ಯಾಜ್ಞಾನಕ್ಕೆ ಕಾರಣವಾಗುವುದು. ನನ್ನ ಇಚ್ಛೆಯೂ, ದೇವಿಯ ಬಂಧಕಶಕ್ತಿಯೂ ಮುಖ್ಯಕಾರಣಗಳೆಂದು ತಿಳಿ. (೨೭)

ಅರ್ಜುನ—ಸರ್ವಪ್ರಾಣಿಗಳೂ ಹೀಗೆ ಮಿಥ್ಯಾಜ್ಞಾನವಶರಾದರೆ ಮೋಕ್ಷಮಾರ್ಗವೇ ಲೋಪವಾಗಬೇಕಲ್ಲವೇ?

ಶ್ರೀಕೃಷ್ಣ—ಈಶ್ವರ ಮತ್ತು ಜೀವ; ಹಾಗೂ ಇವರ ಸ್ವಭಾವಧರ್ಮಗಳಾದ ಸರ್ವಜ್ಞತ್ವ-ಅಲ್ಪಜ್ಞತ್ವ; ಸ್ವಾತಂತ್ರ್ಯ-ಪಾರತಂತ್ರ್ಯ; ಸರ್ವಶಕ್ತಿತ್ವ-ಅಲ್ಪಶಕ್ತಿತ್ವ ಮೊದಲಾದವುಗಳು ದ್ವಂದ್ವಗಳು. ತದ್ವಿಷಯಕ ಮೋಹವೂ, ಎಂದರೆ ಜೀವ ಧರ್ಮಗಳನ್ನು ಈಶ್ವರನಲ್ಲಿಯಾಗಲಿ, ಈಶ್ವರ ಧರ್ಮಗಳನ್ನು ಜೀವನಲ್ಲಿಯಾಗಲಿ, ಜೀವೇಶ್ವರರ ಐಕ್ಯವನ್ನಾಗಲಿ ತಿಳಿಯುವುದೂ ಇನ್ನೊಂದು ಪ್ರಕಾರದ ದ್ವಂದ್ವಮೋಹವು. ಸೃಷ್ಟ್ಯಾರಂಭದಿಂದ ಈ ದ್ವಂದ್ವಮೋಹದ ದಾರ್ಢ್ಯವನ್ನು ಹೊಂದುತ್ತಾ ಮಿಥ್ಯಾಜ್ಞಾನದಲ್ಲಿ ಆಗ್ರಹಯುಕ್ತರಾಗುತ್ತಾ ಸಾಗುವವರು ತಮೋಯೋಗ್ಯಜೀವರು. ಈ ವಿಧವಾದ ದ್ವಂದ್ವಮೋಹದಿಂದ ರಹಿತರಾಗಿ ನನ್ನನ್ನು ಸೇವಿಸುವವರೂ ಇರುವರು. ಇವರು ಮುಕ್ತಿಯೋಗ್ಯರು. ಸ್ವಾತಂತ್ರ್ಯಾಭಿಮಾನ

[illegible] ಸ್ವವಿಹಿತಕರ್ಮಗಳನ್ನಾಚರಿಸಿ, ಪಾಪನಿರ್ಮುಕ್ತರಾಗಿ, ಸುಖದುಃಖಾದಿ ದ್ವಂದ್ವಮೋಹವನ್ನೂ ಕಳೆದು, ಅಚಲವಾದ ನಿಯಮಾನುಷ್ಠಾನಪರರಾಗಿ ನನ್ನನ್ನು ಸೇವಿಸುವವರೇ ಪೂರ್ವೋಕ್ತ ಉಭಯವಿಧ ದ್ವಂದ್ವಮೋಹಕ್ಕೊಳಗಾಗದ ನನ್ನ ಭಕ್ತರು. (೨೮) ಸಾಧುಸ್ವಭಾವದ ಈ ಜನರು ಜರಾಮರಣಗಳಿಂದ ಮುಕ್ತರಾಗಲು ನನ್ನನ್ನಾಶ್ರಯಿಸುವರು. ದ್ವಂದ್ವಮೋಹದಿಂದ ಹುಟ್ಟುವ ಸ್ವರ್ಗಾದಿಫಲಕಾಮನೆಗಳ ನಿವೃತ್ತಿಯನ್ನು ಕೋರಿ, ನನ್ನನ್ನಾಶ್ರಯಿಸುವರು. ಈ ಪ್ರಕಾರವಾದ ನನ್ನ ಸೇವಾರೂಪಯತ್ನದಿಂದ ಆ ಪರಬ್ರಹ್ಮನನ್ನೂ ಸಕಲ ಅಧ್ಯಾತ್ಮವನ್ನೂ, ಸಕಲ ಕರ್ಮವನ್ನೂ ತಿಳಿಯುವರು.

ಅರ್ಜುನ—ಫಲಾಸಕ್ತಿಯನ್ನು ಪರಿತ್ಯಾಗಮಾಡಿ ನಿನ್ನನ್ನು ಸೇವಿಸಬೇಕೆಂದು ಮೇಲಿಂದಮೇಲೆ ಉಪದೇಶಿಸುತ್ತಿರುವಿ. ಮೋಕ್ಷಾಸಕ್ತಿಯುಳ್ಳ ನಿನ್ನ ಭಕ್ತರು ಫಲಾಸಕ್ತರೆನಿಸುವುದಿಲ್ಲವೇ? ಮೋಕ್ಷವೆಂಬ ಫಲವನ್ನು ಹೊಂದಬೇಕೆಂದಲ್ಲವೇ ನಿನ್ನನ್ನಾಶ್ರಯಿಸುವರು?

ಶ್ರೀಕೃಷ್ಣ—ಏಕಾಂತಭಕ್ತರಾದ ಉತ್ತಮಾಧಿಕಾರಿಗಳಿಗೆ ಮೋಕ್ಷಾಪೇಕ್ಷೆಯೂ ಇರುವುದಿಲ್ಲ. ಅನ್ಯಾಸಕ್ತಿಗಿಂತ ಮೋಕ್ಷಾಸಕ್ತಿಯು ಪ್ರಶಸ್ತವಾದುದು. ಅನರ್ಥಪ್ರಾಪಕವಾದ ಜನನಮರಣರೂಪವಾದ ಈಸಂಸಾರಬಂಧದಿಂದ ಬಿಡುಗಡೆಯನ್ನು ಕೋರುವುದು ಫಲಕಾಮನೆಯೆನಿಸುವುದಿಲ್ಲ. ನಶ್ವರವಾದ ಇಹಭೋಗಗಳನ್ನೂ ಕಾಮಿಸುವುದು ಅನುಚಿತವು. ಇವುಗಳಲ್ಲಿ ಅಸಕ್ತರಾಗಬಾರದೆಂದು ನನ್ನ ತಾತ್ಪರ್ಯವು. ಮೋಕ್ಷೇಚ್ಛೆಯನ್ನು ಬಿಟ್ಟು ಸ್ವೇಚ್ಛಾಪ್ರವೃತ್ತರಾದರೆ ಸದಾ ಈ ಸಂಸಾರದಲ್ಲಿಯೇ ತೊಳಲುತ್ತಿರಬೇಕಾಗುವುದು; ಸುಖವು ಎಂದೂ ಲಭಿಸದು. (೨೯) ಅಧಿಭೂತ, ಅಧಿದೈವಗಳಿಂದಲೂ, ಹಾಗೂ ಅಧಿಯಜ್ಞದಿಂದಲೂ ಸಹಿತನಾದ ನನ್ನನ್ನು ಯಾರು ತಿಳಿಯುವರೋ ಮತ್ತು ಮರಣಕಾಲದಲ್ಲಿ ನನ್ನ ಸ್ಮರಣೆಯುಳ್ಳವರಾಗಿ ಸಮಾಧಿಯುಕ್ತಮನಸ್ಸುಳ್ಳವರಾಗುವರೋ ಅವರು ನಿಶ್ಚಯವಾಗಿ ನನ್ನನ್ನೇ ಹೊಂದುವರು. (೩೦)

ಏಳನೇ ಅಧ್ಯಾಯವು ಮುಗಿದುದು.

ಅಧ್ಯಾಯ ೮

[ಆ ಪರಬ್ರಹ್ಮನೆಂದು ಹೇಳಲ್ಪಟ್ಟವನು ಯಾರು, ಅಂತಕಾಲಸ್ಮೃತಿಯ ಉಪಾಯವೇನು, ಮತ್ತು ಪರಬ್ರಹ್ಮಪ್ರಾಪ್ತಿಯ ಮಾರ್ಗವಾವುದು ಇತ್ಯಾದಿ ವಿಷಯಗಳು ಈ ಅಧ್ಯಾಯದ ಪ್ರಧಾನವಿಷಯಗಳು. ಧ್ಯಾನಗೋಚರತ್ವ ಮತ್ತು ಜ್ಞಾನಿಪ್ರಾಶಸ್ತ್ಯಮಹಿಮೆಗಳು ಇಲ್ಲಿ ಹೇಳಲ್ಪಡುವುದರಿಂದ, ಭಕ್ತ್ಯರ್ಥವಾಗಿ ಭಗವನ್ಮಹಿಮೆಯನ್ನು ವಿಸ್ತರಿಸುವ ಈ ದ್ವಿತೀಯಷಟ್ಕದಲ್ಲಿ ಈ ಅಧ್ಯಾಯವು ಸಂಗತವಾಗುತ್ತದೆ. ಹಿಂದಿನ ಅಧ್ಯಾಯದ ಕೊನೆಯ ಎರಡು ಶ್ಲೋಕಭಾಗದಲ್ಲಿ ಪ್ರಸಕ್ತವಾದ ವಿಷಯಗಳ ವಿವರವನ್ನು ತಿಳಿಯಲು ಅಪೇಕ್ಷಿಸಿ ಅರ್ಜುನನು ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ.]

ಅರ್ಜುನ— ನಿನ್ನನ್ನೇ ಆಶ್ರಯಿಸಿದ ಭಕ್ತರು ನಿನ್ನ ಸಂಬಂಧವಾದ ಮನಸ್ಸಮಾಧಿಯುಳ್ಳವರಾಗಿ ಆ ಬ್ರಹ್ಮನನ್ನು (ತದ್ಬ್ರಹ್ಮ) ತಿಳಿಯುವರೆಂದು ಹೇಳಿದ್ದರಿಂದ ಬ್ರಹ್ಮನು ನಿನ್ನಿಂದ ಭಿನ್ನನೆಂಬ ಶಂಕೆಗೆ ಅವಕಾಶವಾಗುತ್ತದೆ. ಹಾಗೂ, ಅಧಿಭೂತ, ಅಧಿದೈವ ಮತ್ತು ಅಧಿಯಜ್ಞಸಹಿತನಾದ ನಿನ್ನನ್ನು ತಿಳಿಯಬೇಕೆಂದು ಹೇಳಿದ್ದರಿಂದ ನಿನ್ನ ವಿಷಯಕಜ್ಞಾನವು ಬ್ರಹ್ಮಜ್ಞಾನದಿಂದ ಭಿನ್ನವೆಂದು ತೋರುತ್ತದೆ. ಹೇ ವಾಸುದೇವ! ವಾಸುದೇವನು (ನೀನು) ಬ್ರಹ್ಮಾಭಿನ್ನನೆಂದು ಹೇಳಿದ ನಿನ್ನ ಮಾತುಗಳು ನೀನೇ ಬ್ರಹ್ಮನೆಂದು ತೋರಿಸುತ್ತಿವೆ. ಕೃಷ್ಣರೂಪದ ನೀನೇ ಬ್ರಹ್ಮನೋ ಅಥವಾ ಬ್ರಹ್ಮನು ನಿನ್ನಿಂದ ಭಿನ್ನನೋ ಎಂಬ ಪ್ರಬಲವಾದ ಸಂಶಯಕ್ಕೆ ಅವಕಾಶವಾಗಿದೆ. ಆದ್ದರಿಂದ, ಹೇ ಪುರುಷೋತ್ತಮ! ಆ ಬ್ರಹ್ಮವೆಂಬುದು ಯಾವುದು, ಅಧ್ಯಾತ್ಮವೆಂಬುದು ಯಾವುದು, ಕರ್ಮವೆಂದರೇನು, ಅಧಿಭೂತವಾವುದು, ಅಧಿದೈವವಾವುದು, ಮತ್ತು ಸಮಾಧಿಯುಕ್ತಜ್ಞಾನಿಗಳು ದೇಹತ್ಯಾಗಸಮಯದಲ್ಲಿ ಯಾವಪ್ರಕಾರದಿಂದ, ಏತಕ್ಕೋಸ್ಕರ ನಿನ್ನನ್ನು ಸ್ಮರಿಸಬೇಕು ಎಂಬ ಪ್ರಶ್ನೆಗಳಿಗೆ ವಿವರವಾದ ಉತ್ತರಗಳನ್ನು ನಿರೂಪಿಸು. ಹೇ ಮಧುಸೂದನ! ದೈತ್ಯಸಂಹಾರಕನಾದ ನೀನೇ ಅಜ್ಞಾನವನ್ನು ಪರಿಹರಿಸಲು ಶಕ್ತನಷ್ಟೆ! (೧-೨).

ಶ್ರೀಕೃಷ್ಣ—ಹೇ ಪಾರ್ಥ! ಪರಮಾಕ್ಷರವೆಂಬ ವಸ್ತುವೇ ನೀನು ಕೇಳಿದ ಆ ಬ್ರಹ್ಮವೆಂಬುದು. ಇನ್ನು ಅಧ್ಯಾತ್ಮವೆಂದರೆ . . . . . .

ಅರ್ಜುನ—ಸ್ವಲ್ಪ ನಿಲ್ಲು, ಪ್ರಭೋ! ಬ್ರಹ್ಮವೆಂಬುದು ನೀನೋ ಅಥವಾ ನಿನ್ನಿಂದ ಬೇರೆಯಾದುದೋ ಎಂದು ಕೇಳಿದರೆ, ಅದು ಪರಮಾಕ್ಷರ ನೆಂದು ಕರೆಯಲ್ಪಡುವ ವಸ್ತುವೆಂದು ಹೇಳಿ ಮುಂದೆ ಸಾಗುತ್ತಿರುವೆಯಲ್ಲ!

ಶ್ರೀಕೃಷ್ಣ—ಅಕ್ಷರಶಬ್ದವಾಚ್ಯನು ಶ್ರೀವಿಷ್ಣುವೆಂಬುದು ಪ್ರಸಿದ್ಧವು, ನಾನೇ ವಿಷ್ಣುವು. ಬ್ರಹ್ಮನು ಅಕ್ಷರಶಬ್ದವಾಚ್ಯನೆಂದು ಹೇಳಿದ್ದರಿಂದ ನಾನೇ ಬ್ರಹ್ಮನೆಂದು ತಿಳಿಯುವಿಯೆಂದೂ, ಆ ಪ್ರಸಿದ್ಧಿಯನ್ನರಿಯದವರಿಗೂ ಅಕ್ಷರ-ಶಬ್ದವು ವಿಷ್ಣುವಾಚಕವೆಂದು ತಿಳಿಸಿದಂತಾಗುವುದೆಂದೂ ಭಾವಿಸಿ ಹಾಗೆ ಹೇಳಿದೆನು. ಅಕ್ಷರಶಬ್ದಕ್ಕೆ ಕೆಲವು ಸಂದರ್ಭಗಳಲ್ಲಿ ಪ್ರಕೃತಿಪರವಾದ ಅರ್ಥವೂ ವಿವಕ್ಷಿತವಾಗುವುದರಿಂದ ಸಂಶಯಕ್ಕೆ ಅವಕಾಶವಿರದಿರಲೆಂದು ಪರಮಾಕ್ಷರವೆಂದು ಹೇಳಿದೆನು. ಪ್ರಕೃತಿಗಿಂತ ಉತ್ತಮನೂ, ಭಿನ್ನನೂ ಆದ್ದರಿಂದ ಬ್ರಹ್ಮನು ಪರಮಾಕ್ಷರನು. ಆ ಬ್ರಹ್ಮನೇ ನಾನು. ತಿಳಿದೆಯಾ? ಸಂಶಯವಿಲ್ಲಷ್ಟೆ?

ಅರ್ಜುನ— ತಿಳಿದೆನು, ಪ್ರಭೋ! ವಿಷಯವು ಮುಂದರಿಯಲಿ.

ಶ್ರೀಕೃಷ್ಣ— ಜಡಭಿನ್ನವೂ ಕಾರ್ಯಸಮರ್ಥವೂ ಆದ್ದರಿಂದ ಜೀವ-ಚೇತನವೂ ಆತ್ಮವೆಂದು ವ್ಯವಹರಿಸಲ್ಪಡುತ್ತದೆ. ಮುಖ್ಯಾರ್ಥದಲ್ಲಿ ಸರ್ವ ಸ್ವಾಮಿಯಾದ ನಾನೇ ಆತ್ಮನು, ಅನ್ಯರಾರೂ ಅಲ್ಲ. ಜೀವವನ್ನು ಹೊಂದಿ ಕೊಂಡಿರುವ ದೇಹ, ಇಂದ್ರಿಯ, ಅಂತಃಕರಣಗಳ (ಮನಸ್ಸು, ಬುದ್ಧಿ ಮೊದಲಾದವುಗಳ) ಸಮೂಹವು ಅಧ್ಯಾತ್ಮವೆಂದು ಕರೆಯಲ್ಪಡುತ್ತದೆ; ಅದೇ ಸ್ವಭಾವವೆಂಬುದು. ಸ್ವಭಾವ (ಸ್ವಸ್ಯ+ಭವತಿ) ವೆಂದರೆ, ಜೀವನಿಗೆ ಉಪಕಾರಕಗಳಾಗಿ ಅವನೊಂದಿಗೆ ಇರುವವುಗಳೆಂದರ್ಥ. ಸ್ವಭಾವ ಮತ್ತು ಅಧ್ಯಾತ್ಮ ಪದಗಳು ಜೀವಪರವೂ ಅಹುದು. ಸದಾ ಏಕಪ್ರಕಾರವಾಗಿ ರುವ (ಸ್ವರೂಪದಿಂದ ವಿಕಾರವಿಲ್ಲದವ) ನೆಂದು ಆತ್ಮಾಧಿಕಾರವೆಂಬ ಗ್ರಂಥ ದಲ್ಲಿ ಹೇಳಲ್ಪಡುವವನು ಜೀವನು. ಅಂತಕಾಲಸ್ಮರಣೆಯುಳ್ಳವನಾಗಿ

ಬ್ರಹ್ಮನನ್ನು ಹೊಂದುವನೆಂದು ನನ್ನಿಂದ ಹೇಳಲ್ಪಟ್ಟವನು ಜೀವನೇ. ಅವನೇ ಅಧ್ಯಾತ್ಮನು. ಹೀಗಿದ್ದರೂ, ಜೀವನಿಯಾಮಕನೂ ಜೀವಸ್ವಾಮಿಯೂ ಆದ ನಾನೇ ಸ್ವಭಾವ, ಅಧ್ಯಾತ್ಮಶಬ್ದಗಳಿಂದ ಮುಖ್ಯವಾಚ್ಯನೆಂಬುದನ್ನು ಮರೆಯದಿರು. ಸರ್ವಜೀವರಿಗೂ, ಜಡಪದಾರ್ಥಗಳಿಗೂ ಉತ್ಪತ್ತಿಕಾರಣ ವಾದ ನನ್ನ ವ್ಯಾಪಾರವು ಕರ್ಮವೆನಿಸುವುದು. ಕರ್ಮಶಬ್ದದ ಮುಖ್ಯಾರ್ಥವೇ ಇದು. (೩) ಸದೇಹರಾದ ಜೀವರನ್ನು ಹೊಂದಿಕೊಂಡು, ಅವರಿಗೆ ಉಪಕಾರಕವಾಗಿರುವ, ವಿನಾಶವುಳ್ಳ ಪೃಥಿವ್ಯಾದಿಕಾರ್ಯಭೂತ ವಸ್ತುಸಮೂಹವು ಅಧಿಭೂತವೆಂದು ಕರೆಯಲ್ಪಡುವುದು. ಸಕಲದೇವತೆ ಗಳನ್ನು ಸ್ವಾಮಿತ್ವೇನ ಹೊಂದಿಕೊಂಡಿರುವ ಪುರುಷನು ಅಧಿದೈವನು. ದೇವತಾಪ್ರತಿಪಾದಕಗ್ರಂಥಗಳಲ್ಲಿ ಪ್ರತಿಪಾದ್ಯರಾದ ಸಕಲಜೀವಾಭಿಮಾನಿ ಗಳಾದ ಶೇಷ, ಬ್ರಹ್ಮರೂ ಅಧಿದೈವರೆನಿಸುವರು. ಹೇ ಅರ್ಜುನ! ದೇಹ ಧಾರಿಗಳಲ್ಲಿ ನೀನು ಶ್ರೇಷ್ಠನಯ್ಯ! ಜೀವಶರೀರಗಳಲ್ಲೆಲ್ಲಾ, ಅಧಿಯಜ್ಞ ನೆಂಬುವನು ನಾನೇ. ಸರ್ವಯಜ್ಞಪ್ರವರ್ತಕನೂ, ಭೋಕ್ತನೂ, ಫಲ ದಾತನೂ ಆದ್ದರಿಂದ ನಾನೇ ಅಧಿಯಜ್ಞನು. ನನ್ನ ದೇಹದಲ್ಲಾದರೋ ಬೇರಾವವಸ್ತುವೂ ಇಲ್ಲ; ನನಗೊಬ್ಬ ಅನ್ಯನಿಯಾಮಕನೂ ಇಲ್ಲ. ಆದ್ದರಿಂದಲೇ **ಜೀವಶರೀರದಲ್ಲಿ** ನಾನು ಅಧಿಯಜ್ಞನೆಂದು ಹೇಳುತ್ತಿರುವೆ ನೆಂಬುದನ್ನು ಗಮನಿಸು. ನಿನ್ನ ಪ್ರಶ್ನೆಯೂ ಈ ದೇಹದಲ್ಲಿ ಅಧಿಯಜ್ಞನು ಯಾರೆಂದೇ ಆಗಿದೆ. ಯಾವಪ್ರಕಾರದಿಂದ ಅಧಿಯಜ್ಞನೆಂಬ ನಿನ್ನ ಪ್ರಶ್ನೆಯೂ, ಯಜ್ಞಪ್ರವರ್ತಕ, ಫಲಭೋಕ್ತ ಮತ್ತು ಫಲದಾತನೆಂದು ಹೇಳಿದ್ದರಿಂದ ಉತ್ತರಿಸಲ್ಪಟ್ಟದೆ.

ಅರ್ಜುನ—ಅಗ್ನಿ ಮೊದಲಾದವರು ಯಜ್ಞಭೋಕ್ತರೆಂದು ಪ್ರಸಿದ್ಧ ರಲ್ಲವೇ? ಮತ್ತು ಪೂರ್ವಾಧ್ಯಾಯದ ಅಂತ್ಯದಲ್ಲಿ ಅಧಿಯಜ್ಞಸಹಿತನಾದ ನಿನ್ನನ್ನು ತಿಳಿಯಬೇಕೆಂದು ಹೇಳಿದ್ದರಿಂದ, ಅಧಿಯಜ್ಞನು ನಿನ್ನಿಂದ ಭಿನ್ನ ನೆಂದು ಕಂಡುಬರುವುದಿಲ್ಲವೇ?

ಶ್ರೀಕೃಷ್ಣ—ಸರ್ವಪ್ರಾಣಿದೇಹದಲ್ಲಿರುವ ಅಧಿಯಜ್ಞವೆಂಬ ನನ್ನ ರೂಪವಿಶೇಷದ ವಿವಕ್ಷೆಯಿಂದ, ಅಧಿಯಜ್ಞಸಹಿತನಾದ ನನ್ನನ್ನು ತಿಳಿಯ

ನಾನೇ ಎಂದು ಹೇಳಿದೆನು. ದೇಹಗತಅಧಿಯಜ್ಞರೂಪವನ್ನು ತಿಳಿಯುವುದು ಅತ್ಯವಶ್ಯಕವು. ಆದ್ದರಿಂದ ಅಧಿಯಜ್ಞನು ಬೇರೆ, ನಾನು ಬೇರೆ ಎಂದು ತಿಳಿಯಬೇಡ. ಅಗ್ನಿ ಮೊದಲಾದವರು ಅಮುಖ್ಯಯಜ್ಞಭೋಕ್ತರು. ಅಧಿಯಜ್ಞಶಬ್ದವು ಅವರಲ್ಲಿ, ಜೀವನನ್ನು ಆತ್ಮನೆಂದು ಕರೆಯುವಂತೆ, ಔಪಚಾರಿಕವೇ ಸರಿ. ಅಲ್ಲದೇ, ಕರ್ತೃ, ಭೋಕ್ತೃ, ಫಲದಾತೃಗಳ ಶರೀರದಲ್ಲಿ ಪ್ರೇರಕನಾಗಿ ನಾನೇ ಇರುವೆನು. ಅಗ್ನಿ ಮೊದಲಾದವರಲ್ಲಿ ಈ ಲಕ್ಷಣವು ಸರ್ವಥಾ ಇಲ್ಲ. ಮತ್ತು ಸರ್ವಪ್ರಾಣಿದೇಹದಲ್ಲಿ ನಾನು ಅಧಿಕಯಾಜ್ಯ (ಪೂಜ್ಯ) ನಾದ್ದರಿಂದಲೂ ನಾನೇ ಅಧಿಯಜ್ಞನು (೪) ದೇಹ ತ್ಯಾಗಕಾಲದಲ್ಲಿ ನನ್ನನ್ನು ಏಕೆ ಮತ್ತು ಹೇಗೆ ಸ್ಮರಿಸಬೇಕೆಂದು ಕೇಳಿದೆ ಯಲ್ಲವೇ? ಹೇಳುವೆನು ಕೇಳು. ಮರಣಕಾಲದಲ್ಲಿ ನನ್ನ ಸ್ಮರಣೆಯುಳ್ಳವ ನಾಗಿ ದೇಹಬಿಡುವವನು, ನನ್ನಲ್ಲಿ ಸ್ಥಿತಿರೂಪವಾದ ನಿತ್ಯಾನಂದವನ್ನು ಹೊಂದುವನು. ಈ ವಿಷಯದಲ್ಲಿ ಸಂಶಯವಿಲ್ಲ. ದುಃಖಸಂಪರ್ಕವಿಲ್ಲದ ನಿರತಿಶಯಾನಂದಸ್ಥಿತಿಯನ್ನು ಹೊಂದಲಪೇಕ್ಷಿಸುವವರು ಮರಣಕಾಲದಲ್ಲಿ ನನ್ನನ್ನೇ ಸ್ಮರಿಸಬೇಕು. (೫)

ಅರ್ಜುನ–ನಿನ್ನನ್ನು ಸ್ಮರಿಸಿದಮಾತ್ರಕ್ಕೆ ನಿನ್ನ ಪ್ರಾಪ್ತಿಯಾಗುವುದೇ?

ಶ್ರೀಕೃಷ್ಣ—ಮರಣಕಾಲದಲ್ಲಿ ಯಾವ ಭಾವವನ್ನು ಅಥವಾ ಯಾವ ಪದಾರ್ಥವನ್ನು ಸ್ಮರಿಸಿ, ದೇಹವನ್ನು ಬಿಡುವನೋ ಆ ಭಾವವನ್ನೇ ಅಥವಾ ಆ ವಸ್ತುವನ್ನೇ ಹೊಂದುವನೆಂಬುದು ಸಾಮಾನ್ಯ ನಿಯಮವು. ಆದ್ದರಿಂದ ನನ್ನ ಸ್ಮರಣೆಯಿಂದ ನನ್ನ ಪ್ರಾಪ್ತಿಯಾಗುವುದು.

ಅರ್ಜುನ—ಅಂತಹ ಸ್ಮರಣೆಯುಂಟಾಗುವಂತೆ ಮಾಡಿಕೊಳ್ಳುವ ಉಪಾಯವಾವುದು? ಅದೂ ಕಷ್ಟಸಾಧ್ಯವೇ?

ಶ್ರೀಕೃಷ್ಣ—ಅಂತ್ಯಕಾಲದಲ್ಲಿ ನನ್ನ ಸ್ಮರಣೆಯು ಇಚ್ಛಿಸುವ ಮಾತ್ರ ದಿಂದ ಲಭಿಸುವುದೆಂದು ತಿಳಿಯಬೇಡ, ನಿರಂತರವಾಗಿ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸಿನಿಂದ, ನನ್ನ ಸ್ಮೃತಿಜನಕವಾದ ಸಂಸ್ಕಾರವುಳ್ಳವನಾಗ ಬೇಕು. ಈ ವಿಧವಾದ ನಿತ್ಯಸ್ಮರಣೆಯು (ತದ್ಭಾವಭಾವಿತತ್ವವು) ಅಪರೋಕ್ಷ

ಜ್ಞಾನವನ್ನು ಹುಟ್ಟಿಸಿ, ಭೋಗದಿಂದ ಪ್ರಾರಬ್ಧಕರ್ಮವು ನಷ್ಟವಾದನಂತರ, ನನ್ನ ಅಂತ್ಯಕಾಲಸ್ಮರಣೆಗೆ ಸಾಧನವಾಗುತ್ತದೆ.

ಅರ್ಜುನ—ದೇಹತ್ಯಾಗಸಮಯದಲ್ಲಿ ನಿನ್ನ ಸ್ಮರಣೆಯುಂಟಾಗ ಬೇಕೆಂದು ಹೇಳಿದ್ದರಿಂದ, ದೇಹತ್ಯಾಗವೂ ಸ್ಮರಣೆಯೂ ಏಕಕಾಲದಲ್ಲಿ ಸಂಭವಿಸಬೇಕೆಂದು ಹೇಳಿದಂತಾಯಿತು. ಮರಣಸಮಯವು ಮಹಾ ದುಃಖಯುಕ್ತವಾದುದೆಂದು ಪ್ರಸಿದ್ಧವಲ್ಲವೇ? ಆಗ ಭಗವತ್ಸ್ಮರಣೆ ಯುಂಟಾಗುವುದು ಅಸಂಭಾವಿತವೆಂದೇ ತೋರುವುದು.

ಶ್ರೀ ಕೃಷ್ಣ—ಶರೀರವು ಹೇಯವೆಂದು ಸರ್ವದಾ ತಿಳಿದಿರುವ ಜ್ಞಾನಿ ಗಳಿಗೆ ದೇಹತ್ಯಾಗವು ದುಃಖಕಾರಕವಲ್ಲ. ನನ್ನ ಸ್ಮರಣೆಯು ಅವರಿಗೆ ಅಸಂಭಾವಿತವಲ್ಲ. ಅಜ್ಞಾನಿಗೆ ಸಹ - ದೇಹತ್ಯಾಗಕ್ಷಣಕ್ಕೆ ಪೂರ್ವದಲ್ಲಿ ದುಃಖವುಂಟಾಗುವುದಲ್ಲದೇ ತ್ಯಾಗಕ್ಷಣದಲ್ಲಿಲ್ಲ. (೬)

ಅರ್ಜುನ—ಅಂತ್ಯಕಾಲಸ್ಮರಣೆಯ ಮಹತ್ವವನ್ನು ನಿರೂಪಿಸುವುದರ ಉದ್ದೇಶವೇನು?

ಶ್ರೀಕೃಷ್ಣ—ನನ್ನ ಸಂತತಸ್ಮರಣೆಯು ಅಂತ್ಯಕಾಲಸ್ಮರಣೆಗೆ ಕಾರಣ ವಾಗುವುದು. ಅಂತ್ಯಕಾಲಸ್ಮರಣೆಯಿಂದ ನನ್ನ ಪ್ರಾಪ್ತಿರೂಪವಾದ ಮೋಕ್ಷವು ಲಭಿಸುವುದು. ನನ್ನ ವಿಷಯಕವಾದ ನಿತ್ಯಸ್ಮರಣೆಯುಳ್ಳವರಾಗಬೇಕೆಂಬು ದನ್ನು ತಿಳಿಸಿಕೊಡುವುದೇ ಅಂತ್ಯಕಾಲಸ್ಮರಣೆಯ ಮಹತ್ವವನ್ನು ತಿಳಿಸು ವುದರ ಮುಖ್ಯೋದ್ದೇಶವು. ಆದ್ದರಿಂದ ಸರ್ವಕಾಲದಲ್ಲಿ ನನ್ನನ್ನೇ ಸ್ಮರಿಸು; ನನ್ನಲ್ಲಿಯೇ ಅರ್ಪಿಸಲ್ಪಟ್ಟ ಮನೋಬುದ್ಧಿಗಳುಳ್ಳವನಾಗಿ ಯುದ್ಧಮಾಡು; ನನ್ನನ್ನೇ ಹೊಂದುವಿ, ಯಾವಸಂಶಯವೂ ಇಲ್ಲ. (೭) ಅಭ್ಯಾಸಯೋಗ ದಿಂದ (ಪುನಃಪುನಃ ಆವರ್ತನೆಮಾಡುವುದೆಂಬ ಉಪಾಯದಿಂದ) ಸಹಿತ ವಾದ, ವಿಷಯಾಂತರಗಳಲ್ಲಿ ಸಂಚರಿಸದಿರುವ ಮನಸ್ಸಿನಿಂದ, ಸೃಷ್ಟ್ಯಾದಿ ಲೀಲೆಗಳಿಂದ ಸರ್ವೋತ್ತಮನಾದ, ಸರ್ವಪ್ರಾಣಿದೇಹಗಳಲ್ಲಿ ಸ್ವತಂತ್ರ ನಿಯಾಮಕನಾದ ನನ್ನನ್ನು ಸದಾ ಚಿಂತಿಸುವವನು, ನಿಸ್ಸಂಶಯವಾಗಿ ಪರಮ ಪುರುಷನಾದ ನನ್ನನ್ನೇ ಹೊಂದುವನು. (೮). ಅಂತ್ಯ ಕಾಲದಲ್ಲಿ

ಏಕೆ ಸ್ಮರಿಸಬೇಕೆಂಬುದನ್ನು ಹೇಳಿದೆನು. ಇನ್ನು, ಹೇಗೆ ಚಿಂತಿಸಬೇಕೆಂಬುದನ್ನು ವಿವರಿಸುವೆನು, ಕೇಳು, ಚರಾಚರಜಗತ್ತಿನ ಧಾರಣ-ಪೋಷಣಕರ್ತನೆಂದೂ; ಸರ್ವಲೋಕ ಶಿಕ್ಷಕನೆಂದೂ; ಸರ್ವಜ್ಞನೆಂದೂ; ಅಣುವಿಗಿಂತ ಅಣುವೆಂದೂ; ಮನಸ್ಸಿಗೂ ನಿಲುಕದ ಅಚಿಂತ್ಯಮಹಿಮನೆಂದೂ; ಜರಾ, ಮೃತ್ಯು, ಪ್ರಕೃತಿಗಳಿಂದ ಸರ್ವಥಾ ಅಸ್ಪೃಷ್ಟನೆಂದೂ; ಸೂರ್ಯನಂತೆ ಶುಭ್ರವಾದ ಅಮಿತ ಪ್ರಕಾಶವುಳ್ಳನೆಂದೂ, ಉತ್ಪತ್ತಿರಹಿತನಾದ ನನ್ನನ್ನು ತಿಳಿದು, (ಈ ಪ್ರಕಾರವಾದ ಜ್ಞಾನಯುಕ್ತನಾಗಿ), ಯೋಗಬಲದಿಂದ ಭ್ರೂಮಧ್ಯದಲ್ಲಿ ಪ್ರಾಣಶಕ್ತಿಯನ್ನು ಸಮಾವೇಶಗೊಳಿಸಿ, ಅಚಲವಾದ ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಚಿಂತಿಸುತ್ತಾ, ದೇಹದಿಂದ ಹೊರಡಬೇಕು. ಈ ಪ್ರಕಾರವಾದ ಅಂತ್ಯಕಾಲಸ್ಮರಣೆಯುಳ್ಳವನಾಗಿ ಮರಣಹೊಂದಿದವನು ಅದ್ಭುತನಾದ (ಆಶ್ಚರ್ಯನಾದ) ಆ ಪರಮಪುರುಷನನ್ನು (ನನ್ನನ್ನೇ) ಹೊಂದುವನು.

ಅರ್ಜುನ—ಭ್ರೂಮಧ್ಯದಲ್ಲಿ ಪ್ರಾಣವಾಯುವನ್ನು ಸ್ಥಾಪಿಸುವ ಶಕ್ತಿಯಿಲ್ಲದವರಿಗೆ ಮುಕ್ತಿಯೇ ಇಲ್ಲವೇ?

ಶ್ರೀಕೃಷ್ಣ—ವಾಯುಜಯಾದಿಗಳಿಲ್ಲದವರಿಗೆ ಮುಕ್ತಿಯಿಲ್ಲವೆಂದಲ್ಲ. ಅವರಿಗೆ ಜ್ಞಾನ, ಭಕ್ತಿ, ವೈರಾಗ್ಯಗಳ ಪರಿಪೂರ್ತಿಯಿಂದಲೇ ಮುಕ್ತಿಯು ಸಿದ್ಧಿಸುವುದು. ವಾಯುಜಯಾದಿಯೋಗಶಕ್ತಿಯುಳ್ಳವರನ್ನೂ ಒಳಗೊಂಡ ಮುಕ್ತಿಯೋಗ್ಯಜನರ ಅಂತ್ಯಕಾಲಸ್ಮರಣಪ್ರಕಾರವನ್ನು ನಿರೂಪಿಸಿದೆನು. ಯೋಗನಿಪುಣರ ಜ್ಞಾನ, ಭಕ್ತಿ, ವೈರಾಗ್ಯಗಳು ಸ್ವಲ್ಪ ಕಡಿಮೆ ಮಟ್ಟದವು. ಅಲ್ಲದೇ ವಾಯುಜಯಾದಿಬಲದಿಂದ ಸ್ವಲ್ಪ ಶೀಘ್ರವಾಗಿಯೇ ಮುಕ್ತಿಯನ್ನು ಹೊಂದುತ್ತಾರೆ; ಆದರೆ ಭಕ್ತಿಯೋಗಿಗಳಿಗಿಂತ ಇವರ ಸಾಧನವೂ, ದೊರೆಯುವ ಮುಕ್ತಿಯೂ ಅಲ್ಪವಾದುದು; ಇಷ್ಟುಮಾತ್ರ ವಿಶೇಷವೆಂದು ತಿಳಿ. (೯-೧೦).

ಅರ್ಜುನ— ವಾಯುಜಯಾದಿಮಾರ್ಗವರ್ತಿಗಳು ದೇಹತ್ಯಾಗ ಮಾಡುವ ಪ್ರಕಾರವಾವುದು, ಮರಣಕಾಲದಲ್ಲಿ ಅವರು ಮಾಡಬೇಕಾದ

ಕರ್ತವ್ಯಗಳಾವುವು, ಮತ್ತು ಧ್ಯೇಯವಸ್ತುಸ್ವರೂಪವೆಂತಹದು ಎಂಬ ಅಂಶಗಳನ್ನು, ವಿಶದಗೊಳಿಸು, ದೇವ!

ಶ್ರೀಕೃಷ್ಣ—ವೇದಜ್ಞಾನಿಗಳು ಯಾವುದನ್ನು ಸರ್ವಥಾ ನಾಶರಹಿತವಾದ್ದರಿಂದ ಅಕ್ಷರವೆಂದು ಹೇಳುವರೋ, ಕಾಮಾದಿದೋಷರಹಿತರಾದ ಯತ್ನಶೀಲರು ಯಾವುದನ್ನು ಪ್ರವೇಶಿಸುವರೋ, ಯಾವುದನ್ನು ಇಚ್ಛಿಸಿ ಬ್ರಹ್ಮಚರ್ಯವನ್ನು ಅನುಷ್ಠಾನವಮಾಡುವರೋ, ಮೋಕ್ಷಾಪೇಕ್ಷಿಗಳಿಂದ ಹೊಂದಲ್ಪಡುವ ಆ ವಸ್ತುವೇ ಮರಣಕಾಲದಲ್ಲಿ ಧ್ಯೇಯವಾದುದು. (೧೧) ಇನ್ನು, ಯೋಗಿಗಳ ದೇಹತ್ಯಾಗದ ಪ್ರಕಾರವನ್ನೂ ಆ ಕಾಲದ ಅನ್ಯ ಕರ್ತವ್ಯವನ್ನೂ ವಿವರಿಸುವೆನು, ಕೇಳು. ಮರಣಕಾಲ ಸಮೀಪಿಸಲು, ಯೋಗಿಯು, ಸುಷುಮ್ನಾನಾಡಿಯನ್ನುಳಿದು ಇತರ ಎಲ್ಲ ವಾಯುಸಂಚಾರ ನಾಡಿಗಳನ್ನು ನಿರೋಧಿಸಬೇಕು. ಪ್ರಾಣವಾಯುವನ್ನು ಇತರ ನಾಡಿಗಳಲ್ಲಿ ಸಂಚರಿಸದಂತೆ ತಡೆದು, ಲಯಕರ್ತನಾದ ನಾರಾಯಣನಲ್ಲಿ ಮನಸ್ಸನ್ನು ಸ್ಥಾಪಿಸಿ, ಪ್ರಾಣವಾಯುವನ್ನು ಸುಷುಮ್ನಾನಾಡಿಯಮೂಲಕ ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರಕ್ಕೆ ತಂದಿಡಬೇಕು. ಅಖಂಡಸ್ಮೃತಿರೂಪವಾದ ಯೋಗದಲ್ಲಿ ತೊಡಗಬೇಕು. (೧೨) 'ಓಂ' ಎಂಬ ಏಕಾಕ್ಷರದಿಂದ ಮುಖ್ಯ ಪ್ರತಿಪಾದ್ಯನಾದ ಪರಬ್ರಹ್ಮಸ್ವರೂಪನಾದ ನನ್ನನ್ನು ಸ್ಮರಿಸುತ್ತಾ, ಓಂಕಾರವನ್ನು ಉಚ್ಚರಿಸಿ ದೇಹವನ್ನು ಬಿಟ್ಟು, ಹೊರಡಬೇಕು. ಹೀಗೆ ದೇಹತ್ಯಾಗ ಮಾಡುವ ಯೋಗಿಯು ಉತ್ತಮಗತಿಯನ್ನು ಹೊಂದುತ್ತಾನೆ. (೧೩).

ಅರ್ಜುನ—ಅಂತ್ಯ ಕಾಲದಲ್ಲಿ ನಿನ್ನ ಸ್ಮರಣೆಯುಂಟಾಗಲು ಸದಾ ನಿನ್ನ ಚಿಂತೆಯಿಂದ ದೊರೆಯುವ ಸಂಸ್ಕಾರವಲ್ಲದೆ ಬೇರಾವ ಉಪಾಯವೂ ಇಲ್ಲವೇ ?

ಶ್ರೀಕೃಷ್ಣ—ಇಲ್ಲ, ಪಾರ್ಥ! ನಿಶ್ಚಯವಾಗಿಯೂ ಇಲ್ಲ ; ನಿತ್ಯಾಭ್ಯಾಸವುಳ್ಳವನಿಗೆ ಮಾತ್ರ ಲಭಿಸುವುದು. ಅನ್ಯವಿಷಯಗಳ ಚಿಂತೆಯನ್ನು ಬಿಟ್ಟು ಸತತವಾಗಿ ನನ್ನನ್ನೇ ಸ್ಮರಿಸುವ ಅಭ್ಯಾಸವುಳ್ಳವನಿಗೆ ಮಾತ್ರ ಮರಣಕಾಲದಲ್ಲಿ ನನ್ನ ಸ್ಮರಣೆಯು ಸುಲಭವಾಗಿ ದೊರೆಯುವುದು. ಅವನಿಗೆ ನನ್ನ ಪ್ರಾಪ್ತಿಯೂ ಸುಲಭವೇ. (೧೪)

ಅರ್ಜುನ — ನಿನ್ನ ಪ್ರಾಪ್ತಿಯ ವೈಶಿಷ್ಟ್ಯವೇನು? ಅದೇ ಹೇಗೆ ಉತ್ತಮಗತಿಯೆಂಬುದನ್ನು ತಿಳಿಯಲಿಚ್ಛಿಸುವೆನು.

ಶ್ರೀಕೃಷ್ಣ — ಮಹಾತ್ಮರಾದ ಜ್ಞಾನಿಗಳು ನನ್ನನ್ನು ಹೊಂದುವರು. ನನ್ನನ್ನು ಹೊಂದಿದನಂತರ ದುಃಖಾಶ್ರಯವಾದ ಅನಿತ್ಯವಾದ ಪ್ರಾಕೃತ ದೇಹಸಂಬಂಧವನ್ನು ಪುನಃ ಹೊಂದುವುದಿಲ್ಲ. ನನ್ನ ಪ್ರಾಪ್ತಿಯೇ ಪರಮ ಸಿದ್ಧಿಯು. ಅವನ್ನು ಹೊಂದಿದವರು ಜನನಮರಣರೂಪವಾದ ಸಂಸಾರಕ್ಕೆ ಎಂದಿಗೂ ಬಾರರು; ನಿತ್ಯಾನಂದಸ್ಥಿತಿಯನ್ನು ಪಡೆಯುವರು. (೧೫)

ಅರ್ಜುನ — ಚತುರ್ಮುಖನೇ ಮೊದಲಾದ ದೇವತೆಗಳನ್ನೂ, ಅವರಿಂದ ಅಧಿಷ್ಠಿತವಾದ ಸತ್ಯಲೋಕ ಮೊದಲಾದ ಸ್ಥಾನಗಳನ್ನೂ ಹೊಂದಿದವರು ಸಹ ಇಲ್ಲಿ ಪುನಃ ಹುಟ್ಟುವುದಿಲ್ಲ ಎಂದು ಕೇಳಿರುವೆನು. ಹೀಗಿರಲು ನಿನ್ನನ್ನು ಹೊಂದಿದವರು ಮತ್ತೆ ಇಲ್ಲಿ ಜನ್ಮ ತಾಳುವುದಿಲ್ಲವೆಂದು ಹೇಳುವುದರಲ್ಲಿ ವಿಶೇಷವೇನು?

ಶ್ರೀಕೃಷ್ಣ — ಮೇರುಪರ್ವತದಲ್ಲಿ ಬ್ರಹ್ಮಸದನವೆಂಬುದಿದೆ. ಅಲ್ಲಿಂದ ಕೆಳಗಿರುವ ಲೋಕಗಳಲ್ಲಿರುವ ಜನರೂ ಪುನಃ ಈ ಭೂಮಿಯಲ್ಲಿ ಹುಟ್ಟುತ್ತಾರೆ. ನನ್ನನ್ನು ಹೊಂದಿದವರಿಗೆ ಮಾತ್ರ ಪುನರ್ಜನ್ಮವಿಲ್ಲ.

ಅರ್ಜುನ—ಆಗಲಿ; ಆ ಬ್ರಹ್ಮಸದನದಿಂದ ಮೇಲಿರುವ ಜನೋಲೋಕದಿಂದ ಆರಂಭಿಸಿ ಸತ್ಯಲೋಕದ ವರೆಗಿನ ಉತ್ತಮ ಲೋಕಗಳನ್ನು ಹೊಂದಿದವರಿಗಂತೂ ಪುನರ್ಜನ್ಮವಿಲ್ಲವಷ್ಟೆ; ಹೀಗಿರಲು ನಿನ್ನನ್ನು ಹೊಂದಿದವರಿಗೆ ಮಾತ್ರ ಪುನರ್ಜನ್ಮವಿಲ್ಲೆಂಬುದು ಹೇಗೆ?

ಶ್ರೀಕೃಷ್ಣ—ಜನೋಲೋಕದಿಂದ ಮೇಲಿನಲೋಕಗಳ ಜನರಿಗೆ ಪುನರ್ಜನ್ಮವಿಲ್ಲೆಂಬುದು ನಿಜ. ಆದರೆ ಆ ಲೋಕದಲ್ಲಿರುವುದೆಂಬುದು ಮಾತ್ರ ಜನ್ಮಾಭಾವಕ್ಕೆ ಕಾರಣವಲ್ಲ. ಆ ಲೋಕಗಳಲ್ಲಿರತಕ್ಕ ನನ್ನನ್ನು ಹೊಂದಿ ಅಲ್ಲಿರತಕ್ಕವರಿಗೆ ಮಾತ್ರ ಪುನರ್ಜನ್ಮವಿಲ್ಲೆಂದು ತಿಳಿ. ಬ್ರಹ್ಮಸದನವೆಂಬುದರಿಂದ ಸತ್ಯಲೋಕವೆಂದಿಟ್ಟುಕೊಂಡರೂ, ಸತ್ಯಲೋಕ ಮತ್ತು ಅದರ ಕೆಳಗಿರುವ ತಪೋಲೋಕ, ಜನೋಲೋಕಗಳಿಂದ ಸಹ ಒಂದು ವಿವಕ್ಷೆ

ಯಿಂದ ಪುನರ್ಜನ್ಮವಿದೆ. ಆ ಲೋಕದ ಜನರು ಮೂಲರೂಪದಿಂದ ಅಲ್ಲಿಯೇ ಇರುತ್ತಿದ್ದರೂ ಒಂದಂಶದಿಂದ ಈ ಭೂಮಿಯಲ್ಲಿ ಹುಟ್ಟುವುದುಂಟು. ಆದರೆ ನನ್ನನ್ನು ಹೊಂದಿದವರಿಗೆ, ಎಲ್ಲಿದ್ದರೂ ಪುನರ್ಜನ್ಮವಿಲ್ಲ. ನಿಯಮೇನ ಜನನ ಮರಣಗಳಿಲ್ಲೆಂಬುದು ಮುಕ್ತರಿಗೆ ಮಾತ್ರ, ಅನ್ಯರಿಗಲ್ಲ (೧೬).

ಅರ್ಜುನ— ಹೇ ದೇವೋತ್ತಮ! ನಿನ್ನ ಪ್ರಾಪ್ತಿಯಿಂದಲೇ ಪುನರ್ಜನ್ಮರಹಿತವಾದ ಸ್ಥಿತಿಯು ಲಭ್ಯವಾಗುವುದೆಂಬ ಜ್ಞಾನವು ದೃಢಗೊಳ್ಳಲು ಅವಶ್ಯ ತಿಳಿಯಬೇಕಾದ ನಿನ್ನ ಮಹಿಮೆಯನ್ನು ವಿಸ್ತಾರವಾಗಿ ನಿರೂಪಿಸಿ, ವಿಶದಗೊಳಿಸು.

ಶ್ರೀಕೃಷ್ಣ—ಈ ಜಗತ್ತಿನ ಸೃಷ್ಟಿಕರ್ತನೂ, ಲಯಕರ್ತನೂ ನಾನೇ. ಅನಾದಿನಿತ್ಯನಾದ ನಾನು ಕಾಲಾವಧಿ ರಹಿತನು. ಸೃಷ್ಟ್ಯಾದಿ ನನ್ನ ವ್ಯಾಪಾರಗಳು ನಡೆಯುತ್ತಿರುವ ಅವಸ್ಥೆಯು ನನ್ನ ಹಗಲೆಂದೂ, ಅವುಗಳಿಲ್ಲದ ಅವಸ್ಥೆಯು ರಾತ್ರಿಯೆಂದೂ ಹೇಳಲ್ಪಡುತ್ತವೆ. ಈ ಹಗಲು ರಾತ್ರಿಗಳ ವ್ಯವಹಾರವು ಕೇವಲ ಉಪಚಾರವೆಂದೂ ತಿಳಿ. ಬಹುಯುಗ-ಪರ್ಯಂತವಾದ ದ್ವಿಪರಾರ್ಧ ಕಾಲವು (ವಿರಿಂಚನ ೧೦೦ ವರ್ಷಗಳು) ಪರಬ್ರಹ್ಮನಾದ ನನ್ನ ಹಗಲೆಂದೂ, ಅಷ್ಟೇಕಾಲವು ನನ್ನ ರಾತ್ರಿಯೆಂದೂ ಯಾರು ತಿಳಿಯುವರೋ ಅವರು ಅಹೋರಾತ್ರಿಗಳನ್ನು ನಿಜವಾಗಿ ತಿಳಿದ ಜ್ಞಾನಿಗಳು. ಚತುರ್ಮುಖನಿಗಾದರೋ, ಕೃತ, ತ್ರೇತ, ದ್ವಾಪರ ಮತ್ತು ಕಲಿಗಳೆಂಬ ನಾಲ್ಕು ಯುಗಗಳು ಒಂದು ಸಾವಿರಸಲ ಸುತ್ತಿದರೆ, ಒಂದು ಹಗಲು. ಅತನ ರಾತ್ರಿಯೂ ಅಷ್ಟೇ ಅವಧಿಯುಳ್ಳದ್ದು. ಆತನ ಪ್ರತಿ ಹಗಲಿನಲ್ಲಿ ಮೂರು ಲೋಕಗಳ ಸೃಷ್ಟಿಯಾಗುವುದು ; ರಾತ್ರಿಯಲ್ಲಿ ಲಯಹೊಂದುವುವು. ಮಹದಾದಿ ಸತ್ಯಲೋಕದವರೆಗಿನ ಲೋಕಗಳು ಚತುರ್ಮುಖನ ಒಂದುನೂರು ವರ್ಷದನಂತರ ಮಹಾಪ್ರಳಯ ಕಾಲದಲ್ಲಿ ಲಯಹೊಂದುವುವು. (೧೭) ಮಹಾಪ್ರಳಯ ಕಾಲವು ಮುಗಿದು ನನ್ನ ಹಗಲು ಪ್ರಾರಂಭವಾಗಲು ಅವ್ಯಕ್ತನಾಮಕನಾದ ನನ್ನಿಂದ, ವ್ಯಕ್ತಿಗಳು (ಕಾರ್ಯಪದಾರ್ಥಗಳು) ಹುಟ್ಟುತ್ತವೆ. ಪುನಃ ರಾತ್ರಿ ಬರಲು (ಮಹಾ

ಪ್ರಳಯ ಕಾಲದಲ್ಲಿ) ಅವ್ಯಕ್ತನಾಮಕನಾದ ನನ್ನಲ್ಲಿಯೇ ಲೀನವಾಗುತ್ತವೆ. ನಾನು ಅನುಗ್ರಹಿಸಿ ನನ್ನನ್ನು ತೋರಗೊಡದಿದ್ದರೆ ಯಾರಿಗೂ ಗೋಚರಿಸ ದವನಾದ್ದರಿಂದ ನಾನು ಅವ್ಯಕ್ತನೆನಿಸುವೆನು. ಅಂತಹ ನನ್ನಿಂದಲೇ ಜಗತ್ತಿನ ಸೃಷ್ಟಿಲಯಗಳಾಗುವುವು. (೧೮)

ಅರ್ಜುನ—ನಿನಗೂ ಹಗಲು ರಾತ್ರಿಗಳಿರುವುದಾದರೆ, ಜಗತ್ತಿನಂತೆ ನಿನಗೂ ಮತ್ತೊಬ್ಬನಿಂದ ಉತ್ಪತ್ತಿಲಯಗಳುಂಟೇ? ಮತ್ತು ಇಂತಹ ದೀರ್ಘಕಾಲದ ಹಗಲುರಾತ್ರಿಗಳಿಂದ ಕೂಡಿದ ನಿನ್ನ ಆಯುಷ್ಯವಾದರೂ ಎಷ್ಟಿರುವುದು?

ಶ್ರೀಕೃಷ್ಣ—ಉತ್ಪತ್ತಿಲಯಗಳುಳ್ಳದೆಂದು ಹೇಳಲ್ಪಟ್ಟ ಚರಾಚರ ಜಗತ್ಸಮುದಾಯವು, ಪ್ರತಿಹಗಲಿನಲ್ಲಿ ಹುಟ್ಟಿ, ರಾತ್ರಿಕಾಲದಲ್ಲಿ ಲಯ ಹೊಂದುತ್ತದೆ. ಪರಾಧೀನವಾದ ಈ ಪ್ರಪಂಚವು, ಹೇ ಪಾರ್ಥ! ನನ್ನ ಹಗಲು ಬರಲು ಪುನಃ ಹುಟ್ಟುತ್ತದೆ. ಈ ಪ್ರಕಾರದ ಸೃಷ್ಟಿಲಯಗಳಿಗೆ ಯಾವ ಕಾಲಕ್ಕೂ ವಿಚ್ಛೇದವಿಲ್ಲ; ಸದಾ ಹೀಗೆಯೇ ನಡೆದಿರುತ್ತವೆ. (೧೯) ಅವ್ಯಕ್ತನಾದ ನಾನಾದರೋ, ಈ ಪ್ರಪಂಚದಿಂದ ಅತ್ಯಂತಭಿನ್ನನು ಮತ್ತು ವಿಲಕ್ಷಣನು; ಸ್ವತಂತ್ರನು ಮತ್ತು ಉತ್ತಮನು; ಸನಾತನನು ಮತ್ತು ಅನಾದಿಯಾದವನು (ನನಗೊಬ್ಬ ಸೃಷ್ಟಿಕರ್ತನಿಲ್ಲ.) ಅನಂತಾನಂತ ಕಾಲಕ್ಕೂ ಈ ವಿಧ ಮಹಿಮೋಪೇತನಾಗಿಯೇ ಇರುವೆನು; ಸಕಲವಸ್ತುಗಳು ನಷ್ಟ ಹೊಂದಿದರೂ ನಾನು ನಾಶಹೊಂದತಕ್ಕವನಲ್ಲ; ಅವುಗಳ ನಾಶವೂ ನನ್ನ ಅಧೀನವೇ. ಚತುರ್ಮುಖನ ಇಡೀ ಆಯುಷ್ಯವು ನನ್ನ ಒಂದು ಹಗ ಲೆಂಬುದು ನನ್ನ ಸೃಷ್ಟಿಕಾರ್ಯವನ್ನು ಅಭಿವ್ಯಕ್ತಗೊಳಿಸುವ ಅವಸ್ಥಾ ವಿಶೇಷವನ್ನು ಸೂಚಿಸುವ ಔಪಚಾರಿಕ ವ್ಯವಹಾರವೆಂದು ತಿಳಿ. (೨೦) ಹೀಗೆ ಸರ್ವಥಾ ನಾಶರಹಿತನಾದ್ದರಿಂದಲೇ ಅವ್ಯಕ್ತನಾಮಕನಾದ ನಾನು ಅಕ್ಷರನೆಂದೂ ಕರೆಯಲ್ಪಡುವೆನು. ವೇದಾದಿಗಳಲ್ಲಿ ಉತ್ತಮಗತಿಯೆಂದು ನಿರೂಪಿಸಲ್ಪಡುವವನು ಈ ಅಕ್ಷರನೇ. ಈತನನ್ನು ಹೊಂದಿದ ಯಾರೂ ಸಂಸಾರಕ್ಕೆ ತಿರುಗಿ ಬರುವುದಿಲ್ಲ. (೨೧).

ಅರ್ಜುನ—ಹೇ ಪ್ರಭೋ! ನಿನ್ನ ವಿಷಯಕವಾದ ಅಂತ್ಯಕಾಲ ಸ್ಮರಣೆಯು ಭಕ್ತಿಯಿಂದಲೂ, ವಾಯುಜಯಾದಿ ಯೋಗಬಲದಿಂದಲೂ ಸಾಧ್ಯವೆಂದು ನಿರೂಪಿಸಿದೆಯಲ್ಲವೇ? ಭಕ್ತಿಭಿನ್ನವಾದ ಇತರ ಸಾಧನಗಳೂ ನಿನ್ನ ಪ್ರಾಪ್ತಿಗೆ ಪ್ರತ್ಯೇಕವಾದ ಸಮಾನಮಾರ್ಗಗಳೆಂಬ ಶಂಕೆಯುಂಟಾಗುವುದು.

ಶ್ರೀಕೃಷ್ಣ—ಹೇ ಪಾರ್ಥ! ಸಕಲ ಪ್ರಾಣಿಗಳೂ ನನ್ನನ್ನೇ ಆಶ್ರಯಿಸಿಕೊಂಡಿವೆ; ಈ ಜಗತ್ತೆಲ್ಲ ನನ್ನಿಂದ ವ್ಯಾಪ್ತವಾಗಿದೆ. ಹೀಗಿರಲು ಪರಮ-ಪುರುಷನಾದ ನನ್ನ ಲಾಭವು ಅನನ್ಯವಾದ ಭಕ್ತಿಯಿಂದಲ್ಲದೇ ಬೇರಾವ ಮಾರ್ಗದಿಂದ ಆದೀತು? ವಾಯುಜಯಾದಿಗಳಿಂದ ಯತ್ನಿಸುವ ಯೋಗಿಗಳೂ ಭಕ್ತಿಶೂನ್ಯರಾದರೆ ನನ್ನನ್ನು ಹೊಂದಲಾರರು. (೨೨).

ಅರ್ಜುನ—ಹೇ ಭಗವನ್! ನಿನ್ನನ್ನು ಹೊಂದಿದವರಿಗೆ ಅಪುನರಾವೃತ್ತಿಯನ್ನೂ ಇತರರಿಗೆ ಪುನರಾವೃತ್ತಿಯನ್ನೂ (ಸಂಸಾರಕ್ಕೆ ಹಿಂತಿರುಗುವಿಕೆಯನ್ನೂ) ಹೇಳುತ್ತಿರುವಿ. ಈ ಉಭಯರ ಮಾರ್ಗಗಳನ್ನೂ, ಆ ಮಾರ್ಗಗಳು ಯಾವ ಯಾವ ದೇವತಾಧಿಷ್ಠಿತವಾದವುಗಳೆಂಬುದನ್ನು ವಿವರಿಸು.

ಶ್ರೀಕೃಷ್ಣ— ಹೇ ಭರತಕುಲಶೇಖರ!* ಯಾವ ಕಾಲಾಭಿಮಾನಿ ದೇವತಾ ಸನ್ನಿಧಾನವುಳ್ಳ ಮಾರ್ಗದಿಂದ ಪ್ರಯಾಣಮಾಡಿದ ಯೋಗಿಗಳು (ನನ್ನ ಪ್ರಾಪ್ತಿಗೆ ಅವಶ್ಯಕವಾದ ಉಪಾಯವುಳ್ಳವರು) ಹಿಂತಿರುಗುವುದಿಲ್ಲವೋ ಮತ್ತು ಯಾವ ಅನ್ಯದೇವತಾಧಿಷ್ಠಿತಮಾರ್ಗದಿಂದ ಹೋದವರು

***ಸೂಚನೆ:**—ದಕ್ಷಿಣಾಯನ, ಉತ್ತರಾಯಣಾದಿ ಕಾಲವಿಶೇಷಗಳಲ್ಲಿ ಮರಣ ಹೊಂದಿದವರು ಕಾಲಾನುಸಾರವಾದ ಗತಿಗಳನ್ನು ಹೊಂದುವರೆಂದು ತಿಳಿಯಕೂಡದು. ಜ್ಞಾನಯೋಗವನ್ನಾಗಲಿ, ಕರ್ಮಯೋಗವನ್ನಾಗಲಿ (ತನಗೆ ಯೋಗ್ಯವಾದುದನ್ನು) ಆಶ್ರಯಿಸಿ, ಸಾಧನಪೂರ್ತಿಯನ್ನು ಹೊಂದಿದ ಅಪರೋಕ್ಷಜ್ಞಾನಿಯು ಜ್ಞಾನದ ಮಹಿಮೆಯಿಂದಲೇ ಪರಬ್ರಹ್ಮನನ್ನು ಹೊಂದುವನು. ಹಿಂದಿರುಗುವವನ್ನೂ ಯೋಗೀ ಎಂದು ಕರೆದಿರುವುದರಿಂದ ಸಾಧನಪರಿಪೂರ್ತಿಯನ್ನು ಹೊಂದದ, ಆದರೂ ಜ್ಞಾನೋಪಾಯವಂತರಾದ ಇತರರೆಂದು ತಿಳಿಯಬೇಕು.

ಹಿಂತಿರುಗುವರೋ ಆ ಕಾಲವಿಶೇಷಗಳನ್ನು (ಆಯಾದೇವತಾಧಿಷ್ಠಿತ ಮಾರ್ಗವಿಶೇಷಗಳನ್ನು ಹೇಳುವೆನು, ಕೇಳು. (೨೪) ಅಗ್ನಿ, ಜ್ಯೋತಿ (ಅರ್ಚಿ)-ಇವರಿಬ್ಬರೂ ಪ್ರಧಾನಾಗ್ನಿ ದೇವತೆಯ ಮಕ್ಕಳು—ಅಹಸ್ಸು ಹಗಲಿಗೆ ಅಭಿಮಾನಿದೇವತೆ), (ಶುಕ್ಲಪಕ್ಷಾಭಿಮಾನಿದೇವತೆ),— ಅಹ ಸ್ಸೆಂಬುದನ್ನು ಅಭಿಜಿತ್ ಎಂದರೆ ಮಧ್ಯಾಹ್ನಾಭಿಮಾನಿದೇವತೆಯನ್ನೊಳ ಗೊಂಡುದೆಂದೂ, ಶುಕ್ಲವೆಂಬುದನ್ನು ಪೌರ್ಣಮಾಸ್ಯಾಭಿಮಾನಿ ದೇವತೆ ಯನ್ನೊಳಗೊಂಡುದೆಂದೂ ಗ್ರಹಿಸಬೇಕು—ಆರು ಮಾಸಗಳ ಅಭಿಮಾನಿ ದೇವತೆ* (ವಿಷುವಿಗೆ ಅಭಿಮಾನಿಯಾದ ದೇವತಾಸಹಿತ), ಉತ್ತ ರಾಯಣಾಭಿಮಾನಿದೇವತೆ, ಈ ದೇವತೆಗಳಿಂದ ಕ್ರಮವಾಗಿ ಅಧಿಷ್ಠಿತವಾದ ಲೋಕಗಳುಳ್ಳ ಮಾರ್ಗದಲ್ಲಿ ಹೋದ ಬ್ರಹ್ಮಜ್ಞಾನಿಗಳು ಪರಬ್ರಹ್ಮನನ್ನು ಹೊಂದುತ್ತಾರೆ; ಹಿಂತಿರುಗುವುದಿಲ್ಲ. (೨೫) ಧೂಮ, (ಧೂಮಾಭಿ- ಮಾನಿ), ರಾತ್ರಿ (ರಾತ್ರಿಗಭಿಮಾನಿ), ಕೃಷ್ಣ (ಕೃಷ್ಣಪಕ್ಷಾಭಿಮಾನಿ), ಆಷಾಢಾದಿ ಆರುಮಾಸಗಳಿಗೆ ಅಭಿಮಾನಿ, ದಕ್ಷಿಣಾಯನ (ದಕ್ಷಿಣಾಯ ನಾಭಿಮಾನಿ), ಈ ದೇವತೆಗಳಿಂದ ಕ್ರಮವಾಗಿ ಅಧಿಷ್ಠಿತವಾದ ಲೋಕ ಗಳುಳ್ಳ ಮಾರ್ಗದಲ್ಲಿ ಹೋದ ಯೋಗಿಜನವು (ಕರ್ಮಫಲಾಸಕ್ತಿಯನ್ನು ಪೂರ್ಣವಾಗಿ ಬಿಡದವರ ಸಮೂಹವು), ಚಂದ್ರಾದಿತೇಜೋವಂತರ ನಿವಾಸಸ್ಥಾನವಾದ ಸ್ವರ್ಗಾದಿಲೋಕಗಳನ್ನು ಹೊಂದಿ, ಪುಣ್ಯಫಲರೂಪ ವಾದ ಭೋಗಗಳನ್ನು ಅನುಭವಿಸಿ, ಮತ್ತೆ ಭೂಲೋಕಕ್ಕೆ ಹಿಂತಿರುಗು

ಮತ್ತು ಮರಣಕಾಲದಲ್ಲಿ ಮುಂದಿನ ಮಾರ್ಗವನ್ನು ಸ್ಮರಣೆಗೆ ತಂದುಕೊಂಡು ಚರಮದೇಹದಿಂದ ಹೊರಡಬೇಕೆಂಬುದರ ಅವಶ್ಯಕತೆಯೂ ಇದರಿಂದ ಸೂಚಿತ ವಾಗುತ್ತದೆ. ಮಾರ್ಗಸ್ಮರಣೆಯಿಲ್ಲದೇ ಧೂಮಾದಿಮಾರ್ಗದಲ್ಲಿ ಹೊರಟರೆ ಹಿಂತಿರುಗಿ ಪುನಹ ಮತ್ತೊಂದು ದೇಹದಿಂದ ಸ್ಮರಣೆಯುಕ್ತನಾಗಿ ಹೊರಟು, ಅಗ್ನ್ಯಾದಿ ಮಾರ್ಗದಿಂದ ಪರಬ್ರಹ್ಮನನ್ನು ಹೊಂದಬೇಕಾಗುವುದೆಂದು ತಿಳಿಯ ಬೇಕು.

***ಸೂಚನೆ** :— ಯಾವ ಸಂಕ್ರಮಣದಲ್ಲಿ ಹಗಲು ರಾತ್ರಿಗಳು ಸಮವಾ ಗಿರುವುವೋ ಅದು ವಿಷುವೆಂದು ಕರೆಯಲ್ಪಡುತ್ತದೆ. ಉತ್ತರಾಯಣದಲ್ಲಿ ಮೇಷ ಸಂಕ್ರಮಣವೂ ದಕ್ಷಿಣಾಯನದಲ್ಲಿ ತುಲಾಸಂಕ್ರಮಣವೂ ವಿಷುವೆನಿಸುವುದು.

ವುದು. (೨೫) ಈ ಶುಕ್ಲ* ಕೃಷ್ಣಗತಿಗಳೆಂಬ ಮಾರ್ಗಗಳು, ಜ್ಞಾನಿ ಯೋಗಿ ಕರ್ಮಯೋಗಿ ಜನರಿಗೆ ಸಂಬಂಧಪಟ್ಟವುಗಳೆಂದೂ ಶಾಶ್ವತವಾದವು ಗಳೆಂದೂ ಸಮ್ಮತವಾಗಿವೆ. ಶುಕ್ಲಮಾರ್ಗದಿಂದ ಹೋದವನು ಸಂಸಾರಕ್ಕೆ ತಿರಿಗಿ ಬರದೇ ಮುಕ್ತನಾಗುತ್ತಾನೆ (ಅಪುನರಾವೃತ್ತಿಯನ್ನು ಹೊಂದು ತ್ತಾನೆ). ಕೃಷ್ಣಮಾರ್ಗದಿಂದ ಹೋದವನು ತಿರಿಗಿ ಬಂದು ದೇಹವನ್ನು ಹೊಂದುತ್ತಾನೆ. (೨೬) ಹೇ ಪಾರ್ಥ! ಈ ಮಾರ್ಗಗಳನ್ನು ತಿಳಿದ ಯೋಗಿಯು, ಮಾರ್ಗಸ್ಮರಣೆಗೆ ಅವಶ್ಯಕವಾದ ಜ್ಞಾನ, ಹಾಗೂ ಕರ್ಮಾನುಷ್ಠಾನವುಳ್ಳವನಾಗಿ, ಭಗವಂತನ ವಿಸ್ಮೃತಿರೂಪವಾದ ಮೋಹ ವನ್ನು ಸರ್ವಥಾ ಹೊಂದುವುದಿಲ್ಲ. ಬ್ರಹ್ಮಾಪರೋಕ್ಷವುಳ್ಳ ಜ್ಞಾನಿಯು ಈ ವಿಧವಾದ ಮೋಹವನ್ನು ಹೊಂದುವುದಿಲ್ಲವೆಂದು ಹೇಳಬೇಕಾದುದೇನು! ಯೋಗವು ಪುರುಷಾರ್ಥಹೇತುವಾದ್ದರಿಂದ, ಹೇ ಅರ್ಜುನ! ಎಲ್ಲ ಕಾಲದಲ್ಲಿ ಜ್ಞಾನ, ಭಕ್ತಿ ಪೂರ್ವಕವಾದ ಸ್ವವಿಹಿತ ನಿವೃತ್ತಕರ್ಮಾನುಷ್ಠಾನ ವುಳ್ಳವನಾಗು. (೨೭)

ಯೋಗಿಯಾಗು, ಅರ್ಜುನ! ವೇದಾಧ್ಯಯನ, ಯಜ್ಞಾಚರಣೆ, ವ್ರತೋಪವಾಸಾದಿ ತಪಸ್ಸು, ನ್ಯಾಯಾರ್ಜಿತವಾದ ದ್ರವ್ಯವನ್ನು ಸತ್ಪಾತ್ರ

---

*ಸೂಚನೆ :—ಅಗ್ನಿ, ಧೂಮ ಮೊದಲಾದವರು ಕಾಲಾಭಿಮಾನಿಗಳಲ್ಲ. ಆದರೆ, ಉಭಯ ಮಾರ್ಗಗಳಲ್ಲಿ, ಶುಕ್ಲ-ಕೃಷ್ಣ, ಉತ್ತರಾಯಣ-ದಕ್ಷಿಣಾಯನಾದಿ ಕಾಲಾಭಿಮಾನಿಗಳೇ ಹೆಚ್ಚಾಗಿ ಪ್ರಾಪ್ಯರಾಗುವುದರಿಂದ, ಕಾಲಪದದಿಂದ (ಯಾವ ಕಾಲದಲ್ಲಿ ಮರಣಹೊಂದಿದವರು ಹಿಂತಿರುಗುವರೋ ಮತ್ತು ಹಿಂತಿರುಗುವು ದಿಲ್ಲವೋ ಅದನ್ನು ಹೇಳುವೆನು ಎಂಬಲ್ಲಿ) ಮಾರ್ಗದಲ್ಲಿ ಸಿಗುವ ಅಗ್ನಿಮೊದಲಾ ದವರನ್ನು ಇಟ್ಟುಕೊಳ್ಳಬೇಕು. ಅಲ್ಲದೇ ಹಗಲಿನಲ್ಲಿ, ಶುಕ್ಲಪಕ್ಷದಲ್ಲಿ, ಉತ್ತರಾಯಣ ದಲ್ಲಿ ಮರಣಹೊಂದಿದವರಿಗೆಲ್ಲ ಪುನರಾವೃತ್ತಿಯಿಲ್ಲವೆಂದೇ ಶ್ರೀಕೃಷ್ಣನ ಅಭಿಪ್ರಾಯ ವಾಗಿದ್ದರೆ, ಅಗ್ನಿ, ಧೂಮಗಳು ಕಾಲವಿಶೇಷಗಳಲ್ಲದ ಪ್ರಯುಕ್ತ, ಅವುಗಳನ್ನು ಹೇಳಿದ್ದು ಅರ್ಥವಿಲ್ಲದೇ ಹೋಗಬೇಕಾಗುವುದು. ಜ್ಞಾನಿಯು ಯಾವಕಾಲದಲ್ಲಿ ಮರಣಹೊಂದಿದರೂ ಮುಕ್ತನಾಗುವನೆಂಬುದು ಶಾಸ್ತ್ರನಿರ್ಣಯವಾದ್ದರಿಂದ, ಶುಕ್ಲ ಕೃಷ್ಣಾದಿ ಎಲ್ಲಪದಗಳೂ ಮಾರ್ಗದಲ್ಲಿ ದೊರೆಯುವ ಆಯಾ ಅಭಿಮಾನಿದೇವತಾ ಧಿಷ್ಠಿತಲೋಕಗಳ ವಿವಕ್ಷೆಯಿಂದ ಹೇಳಿದ್ದೆಂದು ತಿಳಿಯಬೇಕು.

ಲ್ಲಿ ದಾನಮಾಡುವುದು ಈ ಮೊದಲಾದ ಎಲ್ಲ ಪುಣ್ಯಕರ್ಮಗಳ ಫಲವನ್ನು ಅತಿಕ್ರಮಿಸಿದ ಮಹಾಫಲವನ್ನು ಯೋಗಿಯು ಹೊಂದುವನು. ಶುಕ್ಲ-ಕೃಷ್ಣ ಮಾರ್ಗಗಳನ್ನೂ, ಭಗವಂತನ ಅಧ್ಯಾತ್ಮ ಅಧಿದೈವಾದಿ ಸ್ವರೂಪವನ್ನೂ ತಿಳಿದವನು, ಸಮಾಧಿಯುಕ್ತಮನಸ್ಸುಳ್ಳವನಾಗಿ ಸರ್ವಶ್ರೇಷ್ಠವಾದ ವಿಷ್ಣುಸ್ಥಾನವನ್ನು ಹೊಂದುವನು. ಆದ್ದರಿಂದ ಹೇ ಪಾರ್ಥ! ಯೋಗಿಯಾಗು. (೨೮)

ಎಂಟನೇ ಅಧ್ಯಾಯವು ಮುಗಿದುದು.

ಅಧ್ಯಾಯ ೯

[ಸಪ್ತಮಾಧ್ಯಾಯದಲ್ಲಿ, ಅಧಿಭೂತ, ಅಧಿದೈವ ಮತ್ತು ಅಧಿಯಜ್ಞಗಳಿಂದ ಸಹಿತವಾದ ನನ್ನನ್ನು ತಿಳಿದವರೇ ಸಮಾಧಿಯುಕ್ತಮನಸ್ಸುಳ್ಳವನಾಗಿ ಉತ್ತಮಗತಿಯನ್ನು ಹೊಂದುವನೆಂದು ಹೇಳಿದ್ದರಿಂದ ಸೂಚಿತವಾದ ಭಗವನ್ಮಾಹಾತ್ಮ್ಯೆಯು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ಉಪದೇಶಿಸಲ್ಪಡುತ್ತದೆ.]

ಶ್ರೀಕೃಷ್ಣ—ಅರ್ಜುನ! ನನ್ನ ವಿಚಿತ್ರ ಮಹಿಮೆಗಳನ್ನು ಹೇಳುವೆನು, ಆದರದಿಂದ ಕೇಳು. ಈಗ ಹೇಳುವ ವಿಷಯವು ಅತಿ ರಹಸ್ಯವಾದುದು; ಸಂಸ್ಸಾರಬಂಧದಿಂದ ಮುಕ್ತನಾಗಲು ಅವಶ್ಯ ತಿಳಿಯಬೇಕಾದ ನನ್ನ ಮಹಿಮಾತಿಶಯಗಳನ್ನು ಒಳಗೊಂಡುದು. ಅಸೂಯಾರಹಿತನೂ, ಆದ್ದರಿಂದಲೇ ಈ ವಿದ್ಯೆಯ ಉಪದೇಶಕ್ಕೆ ಅಧಿಕಾರಿಯೂ ಆದ ನಿನಗೋಸ್ಕರ ಪ್ರತಿಜ್ಞಾಪೂರ್ವಕವಾಗಿ ನಿರೂಪಿಸುವೆನು. (೧)

ಅರ್ಜುನ—ಪ್ರಭೋ! ಅದೇಕಿಷ್ಟು ಮಹಿಮೆ, ಈ ವಿದ್ಯೆಗೆ?

ಶ್ರೀಕೃಷ್ಣ—ಇದು ಸಕಲ ವಿದ್ಯೆಗಳಲ್ಲಿ ಪ್ರಧಾನವಾದುದು ; ಅತ್ಯಂತ ಗೋಪ್ಯವಾದುದು ; ಅಧಿಕಾರಿಯನ್ನು ಪವಿತ್ರಗೊಳಿಸಿ ಭಗವಂತನನ್ನು ಸಾಕ್ಷಾತ್ಕರಿಸಿಕೊಡುವುದು : ಸರ್ವಾಶ್ರಯನಾದ ಆತನ ಪ್ರೀತಿಸಂಪಾದಕವು; ಅಕ್ಷಯಸುಖಜನಕವು ಮತ್ತು ಸಂಪಾದಿಸಿಕೊಳ್ಳಲು ಅತಿ ಸುಲಭವು. (೨)

ಅರ್ಜುನ—ಅಷ್ಟು ಸುಲಭವಿದ್ದರೆ ಎಲ್ಲ ಜೀವರೂ ಮುಕ್ತರಾಗಿ ಸಂಸಾರಿಗಳೇ ಇಲ್ಲವಾಗಬೇಕು, ಅಲ್ಲವೇ, ಕೃಷ್ಣ ? ಹಾಗೂ, ಈ ವಿದ್ಯೆಯನ್ನು ಸಂಪಾದಿಸದಿದ್ದರೆ ಆಗುವ ಹಾನಿಯೇನು?

ಶ್ರೀಕೃಷ್ಣ— ಪುರುಷಾರ್ಥಸಾಧನರೂಪ ಶ್ರದ್ಧೆಯಿಲ್ಲದವರಿಗೆ ಈ ವಿದ್ಯೆಯು ಸುಲಭವಲ್ಲ. ನೀನಾದರೋ ಶ್ರದ್ಧಾವಂತನು. ಈ ವಿದ್ಯೆಯನ್ನು ದೊರಕಿಸಿಕೊಳ್ಳದವರು ನನ್ನನ್ನು ಹೊಂದುವುದಿಲ್ಲ ಮತ್ತು ಜನನಮರಣರೂಪವಾದ ಸಂಸಾರದಲ್ಲಿಯೇ ಸುತ್ತುತ್ತಿರುವರು. (೩)

ಅರ್ಜುನ—ಅವಶ್ಯ ತಿಳಿಯಬೇಕಾದ ನಿನ್ನ ಮಹಿಮೆಗಳನ್ನೂ, ವಿಶೇಷವಾಗಿ ತಿಳಿಯಬೇಕಾದ ಮಹಿಮಾತಿಶಯಗಳನ್ನೂ (ಜ್ಞಾನವಿಜ್ಞಾನಗಳನ್ನೂ) ಒಳಗೊಂಡ ಈ ವಿದ್ಯೆಯನ್ನು ಕ್ರಮದಿಂದ ವಿಸ್ತರಿಸುವನಾಗು.

ಶ್ರೀಕೃಷ್ಣ—ಅರ್ಜುನ! ಚರಾಚರಾತ್ಮಕವಾದ ಈ ಜಗತ್ತು ನನ್ನಿಂದ ವ್ಯಾಪಿಸಲ್ಪಟ್ಟಿದೆ. ನಾನು ಅವ್ಯಕ್ತನು—ನನ್ನ ಇಚ್ಛೆಯಿಲ್ಲದೇ ಅನ್ಯರಿಗೆ ಕಾಣತಕ್ಕವನಲ್ಲ. ಸಕಲ ಜೀವಜಡಸಮೂಹವು ನನ್ನಿಂದಲೇ ಧರಿಸಲ್ಪಟ್ಟಿದೆ. ನಾನೇ ಅದಕ್ಕೆ ಸರ್ವಾಧಾರನು. ಈ ಜಗತ್ತು ಮಾತ್ರ ನನಗೆ ಯಾವ ಪ್ರಕಾರದಿಂದಲೂ ಆಶ್ರಯವಲ್ಲ. (೪)

ಅರ್ಜುನ—ನಿನ್ನನ್ನೇ ಆಶ್ರಯಿಸಿಕೊಂಡು ನಾವೆಲ್ಲರೂ ಇರುವುದಾದರೆ 'ಭೂತಳದಲ್ಲಿ ನಾವಿದ್ದೇವೆ' ಎಂಬಂತೆ ನಾವು ನಿನ್ನಲ್ಲಿದ್ದೇವೆಂಬ ಜ್ಞಾನವಾಗಬೇಕು ಮತ್ತು 'ಭೂತಳದ ಶೈತ್ಯದಿಂದ ನಾನು ಶೀತಳನಾದೆ' ಎಂಬಂತೆ ಭೂಮಿಯ ಶೀತೋಷ್ಣಾದಿಗಳು ಅದರ ಮೇಲಿರುವ ವಸ್ತುಗಳಿಗೆ ಉಂಟಾಗುವಂತೆ, ನಿನಗೂ, ಜಗದ್ವಸ್ತುಗಳಿಗೂ ಪರಸ್ಪರಧರ್ಮಸಂಕ್ರಾಂತಿಯೂ ಆಗಬೇಕಲ್ಲವೇ ?

ಶ್ರೀಕೃಷ್ಣ—ತ್ವಗಿಂದ್ರಿಯದಿಂದ ನನ್ನನ್ನು ತಿಳಿದು, ಪರಸ್ಪರ ಧರ್ಮ ಸಂಕ್ರಾಂತಿಯನ್ನು ಹೊಂದಿ, ಜಗತ್ತು ನನ್ನಲ್ಲಿಲ್ಲ. ನಾನು ಪ್ರಾಕೃತೇಂದ್ರಿಯಗಳುಳ್ಳವನಲ್ಲ ಮತ್ತು ಪ್ರಾಕೃತೇಂದ್ರಿಯಗಳಿಗೆ ಗೋಚರನೂ ಅಲ್ಲ. ಘಟಾದಿ ವಸ್ತುಗಳಿಗೆ ಭೂತಳದಂತೆ ಸಹ ನಾನು ಆಧಾರನಾಗಿದ್ದರೂ, ಹಾಗೆಂದು ಸ್ಪರ್ಶಾದಿಗಳಿಂದ ತಿಳಿಯಲ್ಪಡುವವನಲ್ಲ. ಹೀಗೆ ಜಗದಾಧಾರನಾದರೂ, ಅನಾಧಾರನಂತೆ ಇರುವ ನನ್ನ ಈಶ್ವರೀಶಕ್ತಿಯನ್ನು (ಸ್ವತಂತ್ರವಾದ ಅಚಿಂತ್ಯಶಕ್ತಿಯನ್ನು ಯೋಗಸಾಮರ್ಥ್ಯವನ್ನು) ತಿಳಿಯುವನಾಗು.

ಅರ್ಜುನ—ಅವ್ಯಕ್ತರೂಪದಿಂದ ಜಗತ್ತನ್ನು ವ್ಯಾಪಿಸಿ ಧರಿಸಿರುವೆಯೆಂದು ಹೇಳಿದೆಯಲ್ಲವೇ? ನಮ್ಮ ದೇಹದಂತೆ ಆ ಅವ್ಯಕ್ತರೂಪವು ನಿನ್ನ ದೇಹವೇನು? ಆ ದೇಹಕ್ಕೆ ಅದೆಂಥ ಅದ್ಭುತಶಕ್ತಿಯೋ, ಕೃಷ್ಣ!

ಶ್ರೀಕೃಷ್ಣ—ಅಹುದು, ಅದು ನನ್ನ ದೇಹವು. ಆದರೆ ನಿನಗೂ ನಿನ್ನ ದೇಹಕ್ಕೂ ಇರುವಂತೆ, ನನಗೂ ನನ್ನ ದೇಹಕ್ಕೂ ಭೇದವಿಲ್ಲ. ನಿನ್ನಂತೆ ನಾನು ನನ್ನ ದೇಹದಿಂದ ಭಿನ್ನನಲ್ಲ. ನನ್ನ ದೇಹವು ಪ್ರಾಕೃತವಾದುದೂ ಅಲ್ಲ—ಕೇವಲ ಚಿನ್ಮಯವು. ಅದು ಜಗತ್ತನ್ನು ಉತ್ಪಾದನೆಮಾಡುವುದು ಮತ್ತು ಧರಿಸುವುದು. ನೀನು ನಿನ್ನ ದೇಹವನ್ನು ಆಶ್ರಯಿಸಿರುವಂತೆ ನಾನು ಜಗತ್ತನ್ನು ಆಶ್ರಯಿಸಿಲ್ಲ. (೫)

ಅರ್ಜುನ—ನಿನ್ನ ದೇಹದಿಂದ ಜಗತ್ತನ್ನು ಧರಿಸಿ, ನೀನು ಅದರೊಂದಿಗೆ ನಿಕಟಸಂಬಂಧವುಳ್ಳವನಾದರೂ, ಅನ್ಯೋನ್ಯಧರ್ಮಸಂಕ್ರಾಂತಿಗೆ ಅವಕಾಶನಲ್ಲೆಂಬುದನ್ನು ಗ್ರಹಿಸುವುದು ಕಷ್ಟ, ಸದೃಷ್ಟಾಂತವಾಗಿ ಬುದ್ಧ್ಯಾರೂಢ ಮಾಡಿಕೊಡು, ದೇವ!

ಶ್ರೀಕೃಷ್ಣ—ಎಲ್ಲ ದೇಶದಲ್ಲಿರುವ ವಾಯುವು, ಆಯಾ ಸ್ಥಳದ ಧರ್ಮಸಂಪರ್ಕವನ್ನು ಹೊಂದದೇ ನಿರ್ಲಿಪ್ತವಾಗಿರುವುದಿಲ್ಲವೇ! ಶೀತಳತ್ವ, ಗಂಧಯುಕ್ತತ್ವಾದಿಗಳು ವಾಯುವಿಗೆ ಆಯಾ ಸ್ಥಳದ ಗುಣಸಂಪರ್ಕವನ್ನು ಸೂಚಿಸುತ್ತವೆಂದು ಭ್ರಮಿಸಬೇಡ. ಆ ಗುಣಗಳು ವಾಯುಗತವಾದ, ಜಲಗಂಧಾದಿ ರೇಣುಗಳಲ್ಲಿರುವುವು; ವಾಯುವಿನಲ್ಲಿ ಅಲ್ಲ. ಈ ದೃಷ್ಟಾಂತದಿಂದ

ಅಚಿಂತ್ಯಶಕ್ತಿಯುತನಾದ ನಾನು ಗುಣಸಂಪರ್ಕರಹಿತನೆಂದು ಗ್ರಹಿಸ-ಲಾರೆಯಾ? (೬) ಹೀಗೆ ವ್ಯಾಪ್ತನೂ, ಸರ್ವಾಧಾರನೂ, ಆದ ನನ್ನ ಮಹಿಮೆಯನ್ನು ಇನ್ನೂ ಹೇಳುವೆನು, ಕೇಳು. ಪ್ರಳಯಕಾಲದಲ್ಲಿ ಎಲ್ಲ ಜೀವ ಜಡಸಮೂಹವೂ ನನ್ನ ಅಧೀನವಾದ ತ್ರಿಗುಣಾತ್ಮಕಪ್ರಕೃತಿಯಲ್ಲಿ ಲಯ ಹೊಂದಿ ನಿಲ್ಲುತ್ತದೆ. ಕಲ್ಪಾದಿಯಲ್ಲಿ (ಸೃಷ್ಟ್ಯಾರಂಭದಲ್ಲಿ) ಪುನಃ ಅವುಗಳನ್ನು ನಾನೇ ನಾನಾವಿಧವಾಗಿ ಸೃಷ್ಟಿಮಾಡುತ್ತೇನೆ. (೭)

ಅರ್ಜುನ—**ನೀನೇ** ಸೃಷ್ಟಿ ಮಾಡುವೆಯೆಂದರೇನು? ಸಾಧನಗಳಿಲ್ಲದೇ ಸೃಷ್ಟಿಮಾಡುವೆಯಾ?

ಶ್ರೀಕೃಷ್ಣ—ನನ್ನ ವಶವರ್ತಿಯಾದ ತ್ರಿಗುಣಾತ್ಮಕ ಪ್ರಕೃತಿಯನ್ನು ಉಪಾದಾನ ವಸ್ತುವಾಗಿ ಸ್ವೀಕರಿಸಿ, ಎಲ್ಲ ಜೀವಜಡಸಮೂಹವನ್ನು ಪ್ರತಿಕಲ್ಪದಲ್ಲಿ ಸೃಷ್ಟಿಮಾಡುತ್ತೇನೆ.

ಅರ್ಜುನ—ಪ್ರಕೃತಿಯನ್ನು ಬಿಟ್ಟೂ ಸೃಷ್ಟಿಮಾಡಲು ಸಮರ್ಥನೇ?

ಶ್ರೀಕೃಷ್ಣ—ಅಹುದು, ನಿಶ್ಚಯುವಾಗಿಯೂ ಮಾಡಬಲ್ಲೆನು. ಆದರೆ ಲೀಲೆಯಿಂದ ಅದನ್ನು ಉಪಯೋಗಿಸಿಕೊಳ್ಳುತ್ತೇನೆ.

ಅರ್ಜುನ—ಪ್ರಕೃತಿಯು, ಸೃಷ್ಟಿಗೆ ಉಪಯುಕ್ತವಾದ ಸ್ವಭಾವವುಳ್ಳದ್ದಾದ್ದರಿಂದ ಅದಕ್ಕೂ ಸೃಷ್ಟಿಕಾರಣತ್ವವಿದೆಯಲ್ಲವೇ?

ಶ್ರೀಕೃಷ್ಣ—ಪ್ರಕೃತಿಯ ಸಾಧನತಾಶಕ್ತಿಯೂ (ಅದರ ಸ್ವಭಾವವೂ) ನನ್ನ ಅಧೀನವು. (೮)

ಅರ್ಜುನ—ಇರಲಿ, ಸೃಷ್ಟ್ಯಾದಿಕರ್ಮಗಳನ್ನು ಮಾಡುವ ನೀನು ಕರ್ಮಫಲಬದ್ಧನೋ ಹೇಗೆ?

ಶ್ರೀಕೃಷ್ಣ — ಸೃಷ್ಟಿ ಮೊದಲಾದ ಯಾವ ಕರ್ಮಗಳೂ ನನ್ನನ್ನು ಬಂಧಿಸುವುದಿಲ್ಲ. ಏಕೆಂದರೆ ಅವುಗಳಲ್ಲಿ ನಾನು ಆಸಕ್ತನಲ್ಲ. ಕರ್ಮಗಳಲ್ಲಿ ಉದಾಸೀನನಂತೆ ಇರುವೆನು. ಗಮನಿಸು, ಅರ್ಜುನ! ಉದಾಸೀನನಂತಿರುವೆನು, ಉದಾಸೀನನೇ ಅಲ್ಲ. ಮಾಡುವ ಕರ್ಮದಲ್ಲಿ ಪ್ರಯೋಜನವನ್ನು ಪಡೆಯಬೇಕೆಂಬ (ಆದರವೂ) ಉತ್ಸಾಹವೂ, ಕರ್ಮಮಾಡುವುದರಿಂದ

ಆಯಾಸಾದಿಗಳು ಯಾರಿಗೆ ಇರುವುವೋ ಅವರು ಆ ಕರ್ಮದಲ್ಲಿ ಆಸಕ್ತ ರೆನಿಸುವರು. ಅವುಗಳಿಲ್ಲದ ಪ್ರಯುಕ್ತ ನಾನು ಅನಾಸಕ್ತನು, ತಿಳಿಯಿತೇ? (೯)

ಅರ್ಜುನ — ಪ್ರಕೃತಿಯನ್ನು ಸಾಧನವಾಗಿ ಉಪಯೋಗಿಸಿಕೊಂಡು ಸೃಷ್ಟಿ ಮಾಡುವಿಯೆಂದೂ, ಉದಾಸೀನನೆಂದು ಹೇಳಿದ್ದರಿಂದ ನೀನು ನಿಷ್ಕ್ರಿಯನೆಂದೂ ಪ್ರಕೃತಿಯೇ ಸ್ವತಂತ್ರವಾಗಿ ಜಗತ್ತನ್ನು ಸೃಜಿಸುವು ದೆಂದೂ ತಿಳಿಯಲವಕಾಶವಿಲ್ಲವೇ? ನಿನ್ನ ಸನ್ನಿಧಾನಮಾತ್ರದಿಂದಲೇ ಸೃಷ್ಟ್ಯಾದಿಗಳು ನಡೆಯುತ್ತವೆಂದು ಪ್ರಾಪ್ತವಾಗಿ, ನಿನ್ನನ್ನು ಸೃಷ್ಟಿಕರ್ತ ನೆನ್ನುವುದು ಔಪಚಾರಿಕವಾಗುವುದಿಲ್ಲವೇ?

ಶ್ರೀಕೃಷ್ಣ — ಅಲ್ಲವೋ, ಅರ್ಜುನ! ಅನಾಸಕ್ತನಾಗಿ ಆ ಕರ್ಮ ಗಳನ್ನು ನಾನೇ ಮಾಡುವೆನೆಂದು ಹೇಳಿ, ಆಸಕ್ತಿ ಎಂದರೇನೆಂಬುದನ್ನೂ ವಿವರಿಸಿದೆನಲ್ಲವೇ? ನಾನು ಪ್ರಕೃತಿಯ ಸ್ವಾಮಿಯೂ, ಅಧ್ಯಕ್ಷನು, ಆಳುವ ಅಧಿಪತಿಯು. ಸ್ವತಂತ್ರಕರ್ತನಾದ ನನ್ನಿಂದಲೇ ಪ್ರಕೃತಿಯು ಚರಾಚರಾ ತ್ಮಕವಾದ ಜಗತ್ತನ್ನು ಪ್ರಸವಿಸುತ್ತದೆ. ಸೃಷ್ಟ್ಯಾದಿಗಳ ವಿಷಯದಲ್ಲಿ ನನ್ನನ್ನು ಸನ್ನಿಧಾನಮಾತ್ರ ಪ್ರಯೋಜನವುಳ್ಳವನೆಂದು ತಿಳಿಯಬೇಡ. (೧೦)

ಅರ್ಜುನ — ಹೀಗೆ ನೀನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಾದಿಗಳ ಸ್ವತಂತ್ರಕರ್ತನಾದರೆ ಅನೇಕರು ನಿನ್ನನ್ನು ಹಾಗೆಂದೇಕೆ ತಿಳಿಯುವುದಿಲ್ಲ ಮತ್ತು ತಿಳಿಯದೇಹೋದ್ದರಿಂದ ಅವರಿಗೆ ಯಾವ ಹಾನಿಯೂ ಕಂಡಿಲ್ಲ ವಲ್ಲ?

ಶ್ರೀಕೃಷ್ಣ — ನನ್ನನ್ನು ಜಗತ್ಕಾರಣನಾದ ಮಹಾಸ್ವಾಮಿಯೆಂದು ತಿಳಿಯದೇ ಅನೇಕರು ಕೀಳಾಗಿ ತಿಳಿಯಲು (ಅವಜ್ಞೆಯನ್ನು ಹೊಂದಲು) ಕಾರಣಗಳಿವೆ. ನನ್ನ ಈ ದೇಹವು ಮನುಷ್ಯದೇಹಸದೃಶವಾಗಿ ತೋರು ತ್ತದೆ. ಇತರ ಜೀವರಂತೆ ನಾನು ಜಡದೇಹವನ್ನು ಆಶ್ರಯಿಸಿರುವೆನೆಂದು ಮೂಢರು ಭ್ರಮಿಸುತ್ತಾರೆ. ನಾನು ಭೂತಮಹೇಶ್ವರನು; ನನ್ನ ದೇಹವು ಜಡವಲ್ಲ, ಪ್ರಾಕೃತವಲ್ಲ — ಅಪ್ರಾಕೃತವಾದುದು. ಸದಾ ವಿದ್ಯಮಾನವಾದ

ಪೂರ್ಣಗುಣವುಳ್ಳ ಅಪ್ರಾಕೃತರೂಪವೇ ನನ್ನ ಈ ದೇಹವೆಂಬ ಯಥಾರ್ಥ ವನ್ನು ತಿಳಿಯುವುದಿಲ್ಲ. (೧೧) ಹೀಗೆ ತಿಳಿಯದವರಿಗೆ ಯಾವ ಹಾನಿಯೂ ಇಲ್ಲವೆಂದೂ ಆದ್ದರಿಂದ ನಾನು ಜಗತ್ಕರ್ತನಲ್ಲವೆಂದೂ ಏಕೆ ತಿಳಿಯಬಾರ ದೆಂದೂ ಕೇಳಿದೆಯಲ್ಲವೇ ? ಹಾಗೆ ತಿಳಿಯದವರಿಗೆ ಅನರ್ಥವಿಲ್ಲೆಂದು ಹೇಗೆ ಹೇಳುವಿ ? (ಹಾನಿಯಿಲ್ಲವೆಂಬ ಹೇತು, ಸಿದ್ಧವಲ್ಲ).

ಅರ್ಜುನ— ನಿನ್ನ ದ್ವೇಷಿಗಳು ಸಹ ದ್ರವ್ಯಾದಿ ಬಹುಸಂಪತ್ತನ್ನು ಹೊಂದಿ ಇಹದಲ್ಲಿ ಸುಖಿಗಳಾಗಿರುವರಲ್ಲವೇ ? ಇದು ಪ್ರತ್ಯಕ್ಷ ಸಿದ್ಧವು.

ಶ್ರೀಕೃಷ್ಣ—ಆಮುಷ್ಮಿಕ ಸುಖವುಂಟು. ಇಹ ಪರಗಳಲ್ಲಿ ಸಹ ಸುಖ ಲಭಿಸಬೇಕು. ಅವರಿಗೆ ಪಾರತ್ರಿಕ ಸುಖವು ಕಿಂಚಿದಪಿ ಇಲ್ಲ. ನನ್ನ ದ್ವೇಷಿ ಗಳೂ ಯಜ್ಞಾದಿಕರ್ಮಗಳನ್ನು ಮಾಡುವರು ; ಶಾಸ್ತ್ರಾಭ್ಯಾಸಾದಿಗಳಿಂದ ಜ್ಞಾನಕ್ಕಾಗಿ ಯತ್ನಿಸುವರು ; ಆದರೆ ಅವರ ಆಶೆಗಳೆಲ್ಲ ವ್ಯರ್ಥವಾಗುವುವು. ಯಜ್ಞಾದಿಗಳು ಅವರಿಗೆ ಯಾವ ಪುಣ್ಯವನ್ನೂ ದೊರಕಿಸುವುದಿಲ್ಲ ; ಶಾಸ್ತ್ರಾ ಭ್ಯಾಸಾದಿಗಳು ತತ್ವಜ್ಞಾನವನ್ನು ಎಂದಿಗೂ ಹುಟ್ಟಿಸುವುದಿಲ್ಲ. ಜ್ಞಾನ ಮತ್ತು ಪುಣ್ಯಗಳಿಲ್ಲದೇ ಪಾರತ್ರಿಕ ಸುಖವು ದೊರೆಯದು. ಅವರ ಐಹಿಕ ಸಂಪತ್ತಿನಿಂದ ಪಾಪವೇ ಅಧಿಕವಾಗಿ ಸಾಧಿಸಲ್ಪಡುತ್ತದೆ. ಬುದ್ಧಿಭ್ರಂಶಕರ ವಾದ ಅಸುರ ಸ್ವಭಾವವನ್ನು ಆಶ್ರಯಿಸಿದ ಆ ತಾಮಸಜನರು ನನ್ನ ನಿಜ ವನ್ನೆಂದಿಗೂ ಅರಿಯರು.

ಅರ್ಜುನ— ಶಿಶುಪಾಲಾದಿಗಳು ನಿನ್ನ ದ್ವೇಷದಿಂದಲೇ ಉತ್ತಮಗತಿ ಯನ್ನು (ನಿನ್ನಪ್ರಾಪ್ತಿಯನ್ನು) ಹೊಂದಲಿಲ್ಲವೆ ?

ಶ್ರೀಕೃಷ್ಣ — ಶಿಶುಪಾಲನ ದೇಹದಲ್ಲಿದ್ದ ಅಸುರನು ದ್ವೇಷದಿಂದ ತಮಸ್ಸನ್ನೇ ಹೊಂದಿದನು. ಶಾಪದಿಂದ ಆ ದೇಹದಲ್ಲಿದ್ದ ನನ್ನ ಭಕ್ತನಾದ ಜಯನು ಭಕ್ತಿಯಿಂದ ನನ್ನನ್ನು ಹೊಂದಿದನು. ನನ್ನ ಸಂಬಂಧವಾದ ನಿತ್ಯ- ಧ್ಯಾನವು ಅವರವರ ಯೋಗ್ಯತಾನುಸಾರವಾದ ಗತಿಗಳನ್ನು ದೊರಕಿಸುವುದ ರಲ್ಲಿ ಮುಖ್ಯಸಾಧನವೆಂದು ತಿಳಿ. (೧೨).

ಅರ್ಜುನ—ನಿನ್ನಲ್ಲಿ ದೋಷಗಳಿರುವುದರಿಂದಲೇ ದೋಷಿಯೆಂದು ತಿಳಿದು ಅವರು ನಿನ್ನನ್ನು ದ್ವೇಷಿಸುತ್ತಾರೆಂದು ಏಕೆ ತಿಳಿಯಕೂಡದು?

ಶ್ರೀಕೃಷ್ಣ—ಹಾಗಿದ್ದರೆ, ಯಥಾರ್ಥವನ್ನು ತಿಳಿಯುವ ದೇವಸ್ವಭಾವದವರೂ ನನ್ನನ್ನು ದೋಷಿಯೆಂದು ತಿಳಿಯಬಹುದಿತ್ತು. ಹಾಗಿಲ್ಲವಲ್ಲ! ನೋಡು, ಮುಕ್ತಿಯೋಗ್ಯಸ್ವಭಾವವುಳ್ಳ ಜ್ಞಾನಿಗಳು ನನ್ನನ್ನು ಚತುರ್ವಿಧದೋಷರಹಿತನೆಂದೂ, ಸ್ವತಂತ್ರಜಗತ್ಕರ್ತನೆಂದೂ ತಿಳಿದು, ಅನ್ಯವಿಷಯವನ್ನು ಮನಸ್ಸಿನಲ್ಲಿ ತಾರದೇ ನನ್ನನ್ನೇ ಸೇವಿಸುತ್ತಾರೆ. (೧೩)

ಅರ್ಜುನ—ಅವರು ಯಾವ ಪ್ರಕಾರದಿಂದ ನಿನ್ನನ್ನು ಭಜಿಸುವರು?

ಶ್ರೀಕೃಷ್ಣ—ಕೃಷ್ಣ ಕೃಷ್ಣೇತ್ಯಾದಿ ನಾಮಗಳಿಂದ ಸತತವಾಗಿ ನನ್ನನ್ನು ಕೀರ್ತನೆಮಾಡುತ್ತಾರೆ. ನನ್ನ ಪೂಜಾದಿಗಳಲ್ಲಿ ನಿರಂತರ ಯತ್ನಶೀಲರಾಗಿರುತ್ತಾರೆ. ನನ್ನ ಪ್ರಸನ್ನತೆಯನ್ನು ಪಡೆಯಲು ಉಪವಾಸಾದಿವ್ರತಗಳನ್ನು ತಪ್ಪದೇ ಆಚರಿಸುತ್ತಾರೆ. ನಿತ್ಯವೂ ನನ್ನ ವಿಷಯಕವಾದ ಜ್ಞಾನವನ್ನು ಸಂಪಾದಿಸುವುದರಲ್ಲಿಯೂ, ನನ್ನ ಆಜ್ಞಾರೂಪವಾದ ವೇದೋಕ್ತ-ಕರ್ಮಾನುಷ್ಠಾನದಲ್ಲಿಯೂ ತೊಡಗಿ, ಭಕ್ತಿಯಿಂದ ನಮಸ್ಕರಿಸುತ್ತಾ ನನ್ನನ್ನು ಸರ್ವವಿಧದಿಂದ ಆಶ್ರಯಿಸುತ್ತಾರೆ. (೧೪) ಮತ್ತೆ ಕೆಲವರು ಮಹಾತ್ಮರು ಸಚ್ಛಾಸ್ತ್ರಗಳನ್ನು ಶ್ರವಣ, ಮನನ, ಧ್ಯಾನಗಳಿಂದ, ಉಪಸೇವಿಸುತ್ತಲೂ ಅನ್ಯರಿಗೆ ಉಪದೇಶಿಸುತ್ತಲೂ ನನ್ನ ಮಹಿಮೆಗಳಲ್ಲಿಯೇ ನಿತ್ಯಾಸಕ್ತರಾಗಿರುತ್ತಾರೆ. ಅರ್ಜುನ! ಇದೇ ಜ್ಞಾನಯಜ್ಞವು. ಇದರಿಂದ ನಾನು ವಿಶೇಷವಾಗಿ ಪ್ರಸನ್ನನಾಗುವೆನು. ಇವರು, ಅನಂತರೂಪಿಯಾದ ನನ್ನನ್ನು ವಿಶ್ವವ್ಯಾಪ್ತನಾದ ಒಂದು ರೂಪವುಳ್ಳವನೆಂದೂ, ಸರ್ವಜಗದ್ವಿ-ಲಕ್ಷಣನೆಂದೂ, ಶುಕ್ಲ, ನೀಲ, ಪೀತಾದಿ ಭೇದದಿಂದ ಬಹು ರೂಪಗಳುಳ್ಳವನೆಂದೂ ತಿಳಿದು, ನನ್ನ ಸರ್ವರೂಪಾತ್ಮಕ ನಾರಾಯಣರೂಪವನ್ನೂ, ವಾಸುದೇವಾದಿ ನಾಲ್ಕು ರೂಪಗಳನ್ನೂ, ನಾರಾಯಣ, ವಾಸುದೇವಾದಿ ಪಂಚಮೂರ್ತಿಗಳನ್ನೂ, ಕೇಶವಾದಿ ಇಪ್ಪತ್ತನಾಲ್ಕು ರೂಪಗಳನ್ನೂ, ಸಕಲ ರೂಪಗಳಿಂದ ಅಭಿನ್ನನೆಂಬ ಭಾವದಿಂದ, ಉಪಾಸಿಸುತ್ತಾರೆ. (೧೫)

ಅರ್ಜುನ— ಹೇ ಕೃಷ್ಣ! ವಿಶೇಷಜ್ಞಾತವ್ಯವೆಂಬ ನಿನ್ನ ಸಂಬಂಧಿಯಾದ ವಿಜ್ಞಾನವನ್ನು ನಿನ್ನ ಮುಖದಿಂದಲೇ ಕೇಳಲು ಉತ್ಸಾಹಿಸುವೆನು

ಶ್ರೀಕೃಷ್ಣ— ಪಾರ್ಥ! ಹೇಳುವೆನು, ಕೇಳು. (ದೀಕ್ಷೆಯಿಂದ ಆರಂಭವಾಗಿ ಅವಭೃತಾಂತವಾದ ಕರ್ಮಕಲಾಪಗಳುಳ್ಳ ಜ್ಯೋತಿಷ್ಟೋಮಾದಿ) ಕ್ರತು, (ದೇವತೋದ್ದೇಶ್ಯದ್ರವ್ಯತ್ಯಾಗರೂಪವಾದ ಪ್ರಧಾನಕರ್ಮವೆಂಬ) ಯಜ್ಞ, (ಪಿತೃಗಳಿಗೆ ಕೊಡಲ್ಪಡುವ ತಿಲೋದಕಾದಿ ರೂಪ) ಸ್ವಧಾ, ಯಜ್ಞಸಾಧನವಾದ ಓಷಧಿ (ವನಸ್ಪತಿ), ಮಂತ್ರ, ಆಜ್ಯ, ಅಗ್ನಿ, ಹವಿಸ್ಸು ಈ ಎಲ್ಲವೂ ನಾನೇ. ಉದಕದಲ್ಲಿರುವ ರಸ, ಸೂರ್ಯಚಂದ್ರಾದಿಗಳಲ್ಲಿರುವ ತೇಜಸ್ಸು ಇತ್ಯಾದಿ ಎಲ್ಲವೂ ನಾನೇ ಎಂದು ಈ ಹಿಂದೆ ಉಪದೇಶಿಸಿದ ಸಂದರ್ಭದಲ್ಲಿ ಹೇಳಿದುದನ್ನು ಸ್ಮರಿಸು. ಅದರಂತೆ ಇಲ್ಲಿಯೂ 'ನಾನೇ' ಎಂದು ಹೇಳಿದುದರ ತಾತ್ಪರ್ಯವನ್ನು ಗ್ರಹಿಸಿ, ನಾನು, ಯಜ್ಞಾದಿಗಳ ನಿಯಾಮಕನೂ, ತದಂಗ ಹವಿರಾದಿಗಳ ಭೋಕ್ತನೂ ಎಂದು ತಿಳಿ. (೧೬) ನಾನು, ಚೇತನಾಚೇತನಾತ್ಮಕಜಗತ್ತಿನ ಜನಕನು, ಹಾಗೂ ಜನನಿಯು; ನಾನೇ ಅದರ ಪೋಷಕನು, ಪೂಜ್ಯಪಿತಾಮಹನೂ ನಾನೇ; ಮುಖ್ಯವಾಗಿ ತಿಳಿಯಲ್ಪಡಬೇಕಾದ ವಸ್ತುವೇ ನಾನು. ನಾನು ಪರಮಪಾವನನು ಮತ್ತು ಸಕಲ ವಸ್ತುಗಳಿಗೆ ಪಾವಿತ್ರ್ಯಪ್ರದನು. ಪ್ರಣವ (ಓಂಕಾರ) ಪ್ರತಿಪಾದ್ಯನೂ, ಋಕ್, ಯಜುಃ ಮತ್ತು ಸಾಮಗಳೆಂಬ ಮೂರು ವೇದಗಳಿಂದ (ಸರ್ವವೇದಗಳಿಂದ) ಮುಖ್ಯ ಪ್ರತಿಪಾದ್ಯನೂ, ಅವುಗಳಿಗೆ ಆಯಾ ಅರ್ಥವಿಶೇಷ ವಾಚಕತ್ವಶಕ್ತಿಪ್ರದನೂ ನಾನೇ. ಕ್ರತು ಮೊದಲಾದ ಶಬ್ದವಾಚ್ಯನೂ ನಾನೇ ಎಂಬುದನ್ನು ಹೀಗೆ ತಿಳಿ, ಅರ್ಜುನ! ಕೃತಿಸ್ವರೂಪನಾದ್ದರಿಂದ **ಕ್ರತು** ಎಂದೂ, ವಿದ್ಯಮಾನವಾದ ಸಕಲ ವಸ್ತುಗಳನ್ನು ಇದ್ದಂತೆ ತಿಳಿದಿರುವ ಸರ್ವಜ್ಞನಾದ್ದರಿಂದ **ಯಜ್ಞ**ನೆಂದೂ, ಅನ್ಯಾಶ್ರಯವಿಲ್ಲದೇ ನನ್ನನ್ನು ನಾನೇ ಧರಿಸುವೆನಾದ್ದರಿಂದ **ಸ್ವಧಾ** ಎಂದೂ, ತಾಪತ್ರಯದಗ್ಧರಾದವರಿಗೆ (ಉಷಸಾಂ) ಆಶ್ರಯನಾದ್ದರಿಂದ **ಔಷಧ**ನೆಂದೂ, ಸಕಲರ ಜ್ಞಾನಪರಿರಕ್ಷಕನಾದ್ದರಿಂದ **ಮಂತ್ರ**ನೆಂದೂ, ಸರ್ವಪ್ರಕಾರದಿಂದ ಶ್ರೇಷ್ಠನಾದ್ದರಿಂದ **ಆಜ್ಯ**ನೆಂದೂ, ಸ್ವತಃ ಗತಿಹೀನವಾದ ಜಗತ್ತಿಗೆ ಗತಿಪ್ರದನಾದ್ದರಿಂದ

ಅಗ್ನಿಯೆಂದೂ, ಯಜ್ಞಾದಿಗಳಲ್ಲಿ ಮುಖ್ಯನಾಗಿ ಆಹ್ವಾನಿಸಲ್ಪಡುವೆನಾದ್ದರಿಂದ ಹುತನೆಂದೂ ಓಂ ಎಂದು ಆಕ್ರೀಯಮಾಣನಾದ್ದರಿಂದ **ಓಂಕಾರ**ನೆಂದೂ, ಪೂಜ್ಯ (ಅರ್ಚ್ಯ) ನಾದ್ದರಿಂದ **ಋಕ್** ಎಂದೂ, ಸರ್ವರೂಪಗಳಿಂದ ಸಮನಾದ್ದರಿಂದ **ಸಾಮ**ನೆಂದೂ, ಪೂಜಿಸಲ್ಪಡುವವನಾದ್ದರಿಂದ **ಯಜು**ವೆಂದೂ, ಮುಮುಕ್ಷುಗಳಿಂದ ಗಮ್ಯನಾದ್ದರಿಂದ (ಹೊಂದಲ್ಪಡುವವನಾದ್ದರಿಂದ) **ಗತಿ** ಎಂದೂ, ಪೋಷಕನಾದ್ದರಿಂದ **ಭರ್ತಾ** ಎಂದೂ, ಎಲ್ಲವನ್ನೂ ಆಳುವ ಪ್ರಭುವಾದ್ದರಿಂದ **ಸ್ವಾಮೀ** ಎಂದೂ ಸಾಕ್ಷಾತ್ತಾಗಿ ಸರ್ವವನ್ನೂ ನೋಡುವವನಾದ್ದರಿಂದ **ಸಾಕ್ಷೀ** ಎಂದೂ, ಆಶ್ರಯನಾದ್ದರಿಂದ **ನಿವಾಸ**ನೆಂದೂ, ಭೀತರಕ್ಷಕನಾದ್ದರಿಂದ **ಶರಣ**ನೆಂದೂ, ಅನಿಮಿತ್ತೋಪಕಾರಿಯಾದ್ದರಿಂದ **ಸುಹೃತ್** ಎಂದೂ, ಜಗದುತ್ಪತ್ತಿಕರ್ತನಾದ್ದರಿಂದ **ಪ್ರಭವ**ನೆಂದೂ, ಪ್ರಳಯಕರ್ತನಾದ್ದರಿಂದ **ಪ್ರಳಯ**ನೆಂದೂ, ಸರ್ವಾಧಾರನಾದ್ದರಿಂದ **ಸ್ಥಾನ**ನೆಂದೂ, ಪ್ರಳಯಕಾಲದಲ್ಲಿ ಪ್ರಕೃತ್ಯಾದಿ ವಿಶ್ವವನ್ನು ನನ್ನಲ್ಲಿಟ್ಟುಕೊಳ್ಳುವೆನಾದ್ದರಿಂದ **ನಿಧಾನ**ನೆಂದೂ, ಜಗತ್ತಿಗೆ ವ್ಯಂಜಕನಾದ್ದರಿಂದ **ಬೀಜ**ನೆಂದೂ, ಬೀಜಸಾಮಾನ್ಯದಂತೆ ವಿಕಾರಹೊಂದುವವನಲ್ಲವಾದ್ದರಿಂದ **ಅವ್ಯಯ**ನೆಂದೂ, ತಿಳಿದು ಉಪಾಸಿಸಬೇಕು. (೧೭-೧೮). ಅರ್ಜುನ! ಸೂರ್ಯನಲ್ಲಿದ್ದು ತಾಪಕರನಾಗುತ್ತೇನೆ. ಮೇಘಸಮೂಹದಲ್ಲಿದ್ದು ಮಳೆಗರೆಯುವವನೂ, ಮಳೆಯನ್ನು ತಡೆದು ನಿಲ್ಲಿಸುವವನೂ ನಾನೇ. ಪ್ರಾಣಿಗಳ ದೇಹವನ್ನು ಧಾರಣೆಮಾಡಿ, ಇಂದ್ರಿಯಗಳಲ್ಲಿಯೂ ಇದ್ದು ಮೃತಿಯನ್ನು ಪರಿಹರಿಸುವೆನಾದ್ದರಿಂದ ನಾನು ಅಮೃತನೆನಿಸುವೆನು. ಪ್ರಳಯಕಾಲವಲ್ಲದ ಇತರ ಕಾಲಗಳಲ್ಲಿ ಸಹ ನಾನೇ ಸಂಹಾರಕನಾದ್ದರಿಂದ ಮೃತ್ಯುವೆನಿಸುವೆನು. ಸಕಲಕಾರ್ಯ ಕಾರಣ ವಸ್ತುಗಳ ನಿಯಾಮಕನೂ ನಾನೇ. (೧೯)

ಅರ್ಜುನ—ಕೃಷ್ಣ! ನೀನು ಸರ್ವಯಜ್ಞಭೋಕ್ತನಾದರೆ, ಅನ್ಯದೇವತಾಯಾಜಕರಿಗೂ, ನಿನ್ನನ್ನೇ ಆಶ್ರಯಿಸಿ ಸಕಲ ಕರ್ಮಗಳನ್ನು ನಿನಗೇ ಅರ್ಪಿಸುವ ಭಾಗವತರಿಗೂ (ಮುಕ್ತಿಯೋಗ್ಯರಾದ ಭಕ್ತರಿಗೂ) ಫಲದಲ್ಲಿ ವ್ಯತ್ಯಾಸವಿರಕೂಡದಷ್ಟೆ. ಅರ್ಪಿತವಾದುದು, ನಿನ್ನಿಂದ ಭೋಗಿಸಲ್ಪಟ್ಟರಲ್ಲವೇ ಕರ್ಮವು ಜೀವರಿಗೆ ಫಲಪ್ರದವಾಗುವುದು?

ಶ್ರೀಕೃಷ್ಣ—ವಿಷ್ಣು ಸರ್ವೋತ್ತಮತ್ವವನ್ನು ತಿಳಿದೂ ಸಹ, ಋಗ್ಯಜುಸ್ಸಾಮಗಳೆಂಬ ವೇದತ್ರಯಗಳಿಂದ ಪ್ರತಿಪಾದಿಸಲ್ಪಡುವ ಯಜ್ಞಾದಿ ಕರ್ಮಗಳನ್ನು, ಸ್ವರ್ಗಾದಿ ಫಲಗಳನ್ನು ಕೋರಿ, ಇಂದ್ರಾದಿ ಅನ್ಯದೇವತೆಗಳ ಉದ್ದೇಶದಿಂದ ಆಚರಿಸಿ, ಅಂತ್ಯದಲ್ಲಿ 'ಶ್ರೀಕೃಷ್ಣಾರ್ಪಣಮಸ್ತು' ಎಂದು ನನಗೆ ಅರ್ಪಿಸುವವರೇ, ಅರ್ಜುನ! ತ್ರೈವಿದ್ಯರೆನಿಸುತ್ತಾರೆ. ಇವರು, ಯಜ್ಞಾದಿಗಳನ್ನಾಚರಿಸಿ, ಹುತಶೇಷವಾದ ಸೋಮಪಾನದಿಂದ ಪಾಪನಿರ್ಮುಕ್ತರಾಗಿ, ಸ್ವರ್ಗಾದಿ ಫಲಗಳನ್ನು ಹೊಂದಿ ಇಂದ್ರಲೋಕದಲ್ಲಿ ಅಲೌಕಿಕ ಭೋಗಗಳನ್ನು ಅನುಭವಿಸುತ್ತಾರೆ. (೨೦) ಈ ಭೋಗವು ಶಾಶ್ವತವಲ್ಲ. ವಿಪುಲವಾದ ಸ್ವರ್ಗಸುಖವನ್ನುಂಡು, ಪುಣ್ಯವು ಸವೆಯಲು, ಅವಶಿಷ್ಟ ಪುಣ್ಯಶೇಷದಿಂದ ಪುನಃ ಭೂಲೋಕವನ್ನು ಪ್ರವೇಶಿಸುತ್ತಾರೆ. ಹಿಂದಿನಂತೆ ಪುನಃ ವೇದೋಕ್ತಕರ್ಮಗಳಲ್ಲಿ ತೊಡಗಿ ಭೋಗೇಚ್ಛುಗಳಾಗುತ್ತಾರೆ; ಸ್ವರ್ಗವನ್ನು ಹೊಂದಿ ತಿರಿಗಿ ಬರುತ್ತಾರೆ. ಪುನಃಪುನಃ ಹೀಗೆಯೇ ಸುತ್ತುತ್ತಿರುವರು; ಪುನರಾವೃತ್ತಿರಹಿತವಾದ ನಿತ್ಯಸುಖಸ್ಥಾನವನ್ನು ಹೊಂದುವುದಿಲ್ಲ. (೨೧)

ಅರ್ಜುನ—ಭಾಗವತರಿಗೆ ದೊರೆಯುವ ಫಲವೆಂತಹುದು?

ಶ್ರೀಕೃಷ್ಣ—ಅರ್ಜುನ! ಭಾಗವತರ ಯೋಗಕ್ಷೇಮವನ್ನು ನಾನು ವಹಿಸಿಕೊಂಡಿರುವೆನು. ಅವರಿಗೆ ಪುನರಾವೃತ್ತಿಯಿಲ್ಲದ ನಿತ್ಯಸುಖಸ್ಥಾನವನ್ನು ಕೊಡುವೆನು; ಅದೇ ಮೋಕ್ಷವು — ಪರಮಪುರುಷಾರ್ಥವು. ತ್ರೈವಿದ್ಯರು ಸ್ವರ್ಗಭೋಗವನ್ನು ಕಾಮಿಸುತ್ತಾರೆ. ಭಾಗವತರು ನನ್ನ ವಿನಾ ಅನ್ಯವಿಷಯವನ್ನೇ ಮನಸ್ಸಿನಲ್ಲಿ ತರುವುದಿಲ್ಲ; ಸದಾ ನನ್ನ ಚಿಂತೆಯಲ್ಲಿರುತ್ತಾರೆ. ನನ್ನ ವಿಷಯವಾದ ಜ್ಞಾನನಿಶ್ಚಯವುಳ್ಳವರಾಗಿ, ಭಕ್ತ್ಯುದ್ರೇಕದಿಂದ ನನ್ನ ಉಪಾಸನೆಯಲ್ಲಿರುವರು. ತ್ರೈವಿದ್ಯರಿಗೆ ಈ ವಿಧವಾದ ಅತಿಶಯಜ್ಞಾನಭಕ್ತಿಗಳಿಲ್ಲ. ಅವರು, ಅಂತ್ಯದಲ್ಲಿ ಕರ್ಮಗಳನ್ನು ನನಗರ್ಪಿಸಿದರೆ, ಭಾಗವತರು, ಎಲ್ಲ ದೇಶಕಾಲಗಳಲ್ಲಿ ತಮ್ಮ ಶರೀರೇಂದ್ರಿಯ ಮನಗಳಿಂದಾಗುವ ಎಲ್ಲ ಕರ್ಮಗಳನ್ನು ನನ್ನ ಸೇವೆಯೆಂದು ಭಾವಿಸಿ ನನಗರ್ಪಿಸುತ್ತಿರುವರು. ಹೀಗೆ ಉಭಯರೂ ನಾನು ಸರ್ವೋತ್ತಮನೆಂಬ

ಜ್ಞಾನವುಳ್ಳವರಾದರೂ, ಫಲಪ್ರಾಪ್ತಿಗೆ ಕಾರಣವಾದ ಉಪಾಯಾನುಸರಣೆಯಲ್ಲಿ ಭೇದವುಳ್ಳವರಾದ್ದರಿಂದ ಭಿನ್ನ ಫಲಗಳನ್ನು ಹೊಂದುತ್ತಾರೆ. ಭಾಗವತರಿಗೆ ಮೋಕ್ಷಪ್ರಾಪ್ತಿಯೆಂಬ ಮಹಾಯೋಗವನ್ನು ತಂದಿತ್ತು, ಅದನ್ನು ಎಂದೂ ಹಾನಿಬರವಂತೆ ಅನಂತಕಾಲೀನವಾದುದನ್ನಾಗಿ ರಕ್ಷಿಸುವೆನು. ಈ ಪ್ರಕಾರದ ಯೋಗಕ್ಷೇಮುವನ್ನು ವಹಿಸಲು ಅನ್ಯರಾರೂ ಸಮರ್ಥರಲ್ಲ (೨೨). ಅನ್ಯಭಕ್ತರಿಗೂ ದೊರೆಯುವ ಫಲದಲ್ಲಿ ವ್ಯತ್ಯಾಸ ಉಂಟಾಗಲು ಕಾರಣವನ್ನು ವಿವರಿಸುವೆನು, ಕೇಳು. ಅನ್ಯಭಕ್ತರು ಶ್ರದ್ಧೆಯಿಂದ ಅನ್ಯದೇವತೆಗಳನ್ನು ಪೂಜಿಸುತ್ತಾರೆ. ನನ್ನನ್ನೇ ಉದ್ದೇಶಿಸಿ ಮಾಡಬೇಕಾದ್ದನ್ನು ಅನ್ಯೋದ್ದೇಶದಿಂದ ಮಾಡಿ, ಅಂತದಲ್ಲಿ ನನ್ನಲ್ಲಿ ಅರ್ಪಿಸುತ್ತಾರೆ. ಇದು ವಿಧಿಪೂರ್ವಕವಾದ ನನ್ನ ಪೂಜೆಯಲ್ಲ (೨೩).

ಅರ್ಜುನ—ನಿನ್ನ ಪೂಜಾರೂಪವಾದ ಸಕಲ ಕರ್ಮವೂ ಯಜ್ಞವೆನಿಸುವುದೆಂದು ಹೇಳಿದೆಯಲ್ಲವೇ! ನೀನೇ ಯಜ್ಞಫಲಭೋಕ್ತನು. ನಿನಗೆ ಅರ್ಪಿತವಾದುದನ್ನು ನೀನು ಭೋಗಿಸುವೆ. ಪೂರ್ಣಕಾಮನಾದ ನಿನಗೆ ಆ ಭೋಗದಿಂದ ಯಾವ ಪ್ರಯೋಜನವೂ ಇಲ್ಲ. ಆದರೆ ನಿನ್ನಿಂದ ಭೋಗಿಸಲ್ಪಟ್ಟರೆ, ಎಂದರೆ ಸ್ವೀಕರಿಸಲ್ಪಟ್ಟರೆ ಮಾತ್ರ, ಜೀವರಿಗೆ ಆ ಕರ್ಮವು ಫಲಪ್ರದವಾಗುವುದು. ಅನ್ಯದೇವತಾಪೂಜಕರಾದರೂ ಅಂತ್ಯದಲ್ಲಿ ಕರ್ಮಫಲವನ್ನು ನಿನಗೇ ಅರ್ಪಿಸುವರು. ಹೀಗಿರಲು, ಅವರ ಪೂಜೆಯು ಅದೇಕೆ ವಿಧಿಪೂರ್ವಕವಾದುದಲ್ಲ? ಅನ್ಯದೇವತೆಗಳನ್ನು ಯಾರೂ ಪೂಜಿಸಲಾಗದೇ?

ಶ್ರೀಕೃಷ್ಣ—ನಾನು ಸರ್ವಕರ್ಮಫಲಭೋಕ್ತನೆಂಬುದು ನಿಜ. ಸರ್ವಕರ್ಮ ಪ್ರವರ್ತಕನೂ ಆಗಿರುವೆನು. ಯಜ್ಞಾದಿಕರ್ಮಗಳ ಮುಖ್ಯೋದ್ದೇಶನು ನಾನೆಂಬುದನ್ನು ಅನ್ಯದೇವತಾಪೂಜಕರು ತಿಳಿಯರು. ಅನ್ಯದೇವತಾರಾಧನೆಯೇ ನಿಷಿದ್ಧವಲ್ಲ—ಅವರನ್ನೇ ಉದ್ದೇಶಿಸಿ ಮಾಡಲ್ಪಡುವ ಪೂಜೆಯು ನಿಷೇಧಿಸಲ್ಪಡುತ್ತದೆ. ನಾನೇ ಸಕಲ ದೇವತೆಗಳ ಅಂತರ್ಯಾಮಿಯು. ಅವರಲ್ಲಿದ್ದು ಪೂಜೆಯನ್ನು ಸ್ವೀಕರಿಸುವವನು ನಾನೇ. ಅವರೆಲ್ಲರೂ ನನ್ನ ಪರಿವಾರದವರೆಂಬ ನಿಶ್ಚಯವುಳ್ಳವನಾಗಿ, ಪೂಜಾಕಾಲದಲ್ಲಿ

ಸಹ ನನ್ನ ವಿಸ್ಮರಣೆ ಇಲ್ಲದೇ, ಸರ್ವೋತ್ತಮನೆಂದೂ, ಸ್ವತಂತ್ರ ಫಲಸ್ವಾಮಿ ಯೆಂದೂ ದೃಢವಾಗಿ ತಿಳಿದು, ಅನ್ಯದೇವತೆಗಳನ್ನು ಪೂಜಿಸಬೇಕು. ಅನ್ಯ ದೇವತಾಪೂಜೆಯು ನನ್ನ ಸರ್ವೋತ್ತಮತ್ವಜ್ಞಾನದ ಜ್ಞಾಪಕಮಾತ್ರವೆಂದು ತಿಳಿ. (೨೪) ಇಂದ್ರಾದಿ ದೇವತಾರಾಧಕರು, ಆಯಾದೇವತೆಗಳನ್ನೂ, ಶ್ರಾದ್ಧಾದಿ ಕ್ರಿಯಾಪರರು ಪಿತೃಗಳನ್ನೂ, ಯಕ್ಷಾದಿಭೂತಯಾಜಕರು ಆಯಾಭೂತವಿಶೇಷಗಳನ್ನೂ ಹೊಂದುವರು. ಹಾಗೆಯೇ ನನ್ನ ಪೂಜಕರು ನನ್ನನ್ನೇ ಹೊಂದುತ್ತಾರೆ (೨೫).

ಅರ್ಜುನ—ಅನ್ಯದೇವತಾರಾಧನೆಯು ಅಲ್ಪಫಲವುಳ್ಳದ್ದಾರೂ ಸುಲಭವು. ನೀನು ಅನಂತಮಹಿಮನಾದ್ದರಿಂದ ದುರ್ಬಲರಿಂದ ನಿನ್ನ ಭಜನೆಯು ಅಶಕ್ಯವಲ್ಲವೇ ?

ಶ್ರೀಕೃಷ್ಣ—ಯಾರು, ನಿಷಿದ್ಧವಲ್ಲದ ಪತ್ರ, ಪುಷ್ಪ ಅಥವಾ ಫಲ ವನ್ನಾಗಲಿ ಅಷ್ಟೇಕೆ ಕೇವಲ ಶುದ್ಧ ಜಲವನ್ನಾಗಲಿ ಭಕ್ತಿಯಿಂದ ಅರ್ಪಿ ಸಿದರೂ, ಅದನ್ನು ನಾನು ಸ್ವೀಕರಿಸುವೆನು. ವಿಷಯವಿರಕ್ತನು ಭಕ್ತಿ ಯಿಂದ ಕೊಡುವ ಅತ್ಯಲ್ಪವಸ್ತುವನ್ನೂ ಆದರದಿಂದ ಸ್ವೀಕರಿಸಿ ತುಷ್ಟ ನಾಗುವೆನು ; ಮಹಾಫಲವನ್ನು ಕೊಡುವೆನು. ನನ್ನ ಪೂಜೆಯು ಅತಿ ಸುಲಭವು. ಭಕ್ತಿ ಮಾತ್ರಬೇಕು; ಯಜ್ಞಾದಿಗಳಂತೆ ಕಷ್ಟಸಾಧ್ಯವಲ್ಲ. (೨೬) ಆದ್ದರಿಂದ, ಅರ್ಜುನ! ನೀನು ಮಾಡುವ ಕರ್ಮ, ಉಣ್ಣುವ ಊಟ, ಹಾಕುವ ಆಹುತಿ, ಕೊಡುವ ದಾನ, ಹೆಚ್ಚೇನು ನಿನ್ನ ಮಾನಸಿಕ ವ್ಯಾಪಾರ ಗಳನ್ನು ಸಹ (ಆಲೋಚನೆಗಳನ್ನು ಸಹ) ನನ್ನಲ್ಲಿ ಅರ್ಪಿಸು. ಆದರೆ, ಜೋಕೆ! ನಿಷಿದ್ಧಕರ್ಮಾದಿಗಳನ್ನು ಎಂದೂ ಅರ್ಪಿಸಬೇಡ. ಅದರಿಂದ ಪ್ರತ್ಯವಾಯವು ತಪ್ಪಿದ್ದಲ್ಲ. (೨೭)

ಅರ್ಜುನ—ಹಾಗೆ ಸಕಲವನ್ನು ನಿನಗರ್ಪಿಸುವುದರಿಂದ ಏನಾಗುವುದು?

ಶ್ರೀಕೃಷ್ಣ—ಶುಭಾಶುಭ ಫಲಗಳನ್ನು ಕೊಡುವ ಸಕಲ ಕರ್ಮಬಂಧನ ಗಳಿಂದ ಪರಿಮುಕ್ತನಾಗುವಿ. ಫಲತ್ಯಾಗವೆಂಬ **ಸನ್ಯಾಸ** ಮತ್ತು ಭಗವದರ್ಪಣ ಬುದ್ಧಿಯಿಂದ ವಿಹಿತಕರ್ಮಾನುಷ್ಠಾನ ಮಾಡುವುದೆಂಬ

ಯೋಗ, ಇವುಗಳಿಂದ ಯುಕ್ತನಾಗಿ ನನ್ನನ್ನೇ ಹೊಂದುವಿ. (೨೮)

ಅರ್ಜುನ—ಭಕ್ತಿಯಿಂದ ಅರ್ಪಿಸಿದುದನ್ನು ಮಾತ್ರ ಸ್ವೀಕರಿಸುವಿಯೆಂದು ಹೇಳಿದ್ದರಿಂದ, ನೀನು ಭಕ್ತಪ್ರಿಯನೆಂದಾಯಿತು. ಹಾಗಾದರೆ ದ್ವೇಷಿಗಳಿಗೆ ಅಪ್ರಿಯನಷ್ಟೆ! ನಿನಗೆ ಭಕ್ತರಲ್ಲಿ ಸ್ನೇಹವೂ, ದ್ವೇಷಿಗಳಲ್ಲಿ ದ್ವೇಷವೂ ಇರುವುದಾದರೆ ಅಲ್ಪಭಕ್ತನಿಗೆ ಸ್ನೇಹವಶದಿಂದ ಸುಖರೂಪವಾದ ಬಹುಫಲವನ್ನೂ ಅಲ್ಪದ್ವೇಷಿಗೆ ದ್ವೇಷವಶದಿಂದ ಬಹುದುಃಖರೂಪವಾದ ಫಲವನ್ನೂ ಕೊಡಬಹುದಲ್ಲವೇ? ಲೌಕಿಕ ರಾಜಾದಿಗಳಂತೆ ನಿನ್ನಲ್ಲಿ ವೈಷಮ್ಯ, ನಿರ್ದಯತ್ವ ಮೊದಲಾದವುಗಳೂ ಇರುವುದೆಂದು ಏಕೆ ತಿಳಿಯಬಾರದು?

ಶ್ರೀಕೃಷ್ಣ—ಅರ್ಜುನ! ನನಗೆ ಸಕಲ ಪ್ರಾಣಿಗಳೂ ಸಮರು. ಒಬ್ಬನು ಪ್ರಿಯನು, ಅನ್ಯನು ದ್ವೇಷಿಯು ಎಂಬ ಭೇದಭಾವವು ನನ್ನಲ್ಲಿಲ್ಲ. ವೈಷಮ್ಯವಿಲ್ಲದಮೇಲೆ ನಿರ್ದಯತ್ವದ ಆಪಾದನೆಯು ನಿಲ್ಲಲಾರದಷ್ಟೆ; ನನ್ನ ಭಕ್ತರು ನನ್ನ ವಶದಲ್ಲಿರುವರು, ನಾನು ಅವರ ವಶದಲ್ಲಿರುವೆನು. ಯಾರು ನನ್ನಲ್ಲಿ ಪ್ರೀತಿಯುಕ್ತರೋ ಅವರನ್ನು ನಾನು ಪ್ರೀತಿಸುವೆನು. ಭಕ್ತನಲ್ಲಿ ದ್ವೇಷವನ್ನೂ ಅಭಕ್ತನಲ್ಲಿ ಪ್ರಿತಿಯನ್ನೂ ಮಾಡೆನು ಮತ್ತು ಭಕ್ತಿದ್ವೇಷಗಳ ಗುರುಲಾಘವಗಳನ್ನು ಲಕ್ಷಿಸಿಯೇ ಫಲಕೊಡುವೆನು. (೨೯) ದೇವಾಂಶರೂ, ಋಷ್ಯಾದಿಗಳೂ ಆದ ಕೆಲವು ಉತ್ತಮಭಕ್ತರು, ಸ್ವಯೋಗ್ಯತೆಗಿಂತ ಅಧಿಕವಾದ ತಮ್ಮ ಪುಣ್ಯವನ್ನು ಕಳೆದುಕೊಳ್ಳಲಿಕ್ಕಾಗಿ ನನ್ನಿಂದಲೇ ಪ್ರೇರಿತರಾಗಿ ಕೆಲವು ವಿಶೇಷ ಸಂದರ್ಭಗಳಲ್ಲಿ ದುರಾಚಾರ ಪ್ರವೃತ್ತರಾಗುವುದುಂಟು. ಅವರ ದುರಾಚಾರಗಳಿಗೆ ಅನುಗುಣವಾದ ದುಃಖರೂಪವಾದ ಫಲವನ್ನು ಕೊಡುವುದಿಲ್ಲವೆಂಬ ಕಾರಣದಿಂದ ನಾನು ವಿಷಮನೆಂದು ಭ್ರಮಿಸಬೇಡ. ಅವರು ನನ್ನ ಅನನ್ಯಭಜಕರು—ಅನ್ಯದೇವತಾಸೇವಕರಲ್ಲ; ಚಂದ್ರಸೂರ್ಯಾದಿ ಸ್ವಾಂಶಗಳಲ್ಲಿ ಸುವ್ಯವಸ್ಥಿತರು ಮತ್ತು ಸಮೀಚೀನ ಭಗವತ್ತತ್ವಜ್ಞಾನ ನಿಶ್ಚಯವುಳ್ಳವರು. ನಾನು ಯಾರ ಯೋಗ್ಯತೆಯನ್ನೂ ಮೀರಗೊಡುವವನಲ್ಲ. ಯೋಗ್ಯತೆಯನ್ನು ಅತಿಕ್ರಮಿಸುವುದು ಅವರಿಗೂ ಹಿತವಲ್ಲ; ಅನ್ಯರ ದೃಷ್ಟಿಯಿಂದಲೂ ಹಿತಕರವಲ್ಲ.

ಅವರ ದುಷ್ಪ್ರವೃತ್ತಿಗಳಿಗೆ, ಅಧಿಕಪುಣ್ಯನಾಶರೂಪಫಲವೂ ನನ್ನಿಂದಲೇ ಲಭಿಸುತ್ತದೆ. (೩೦)

ಅರ್ಜುನ—ದೇವಾಂಶರಾದ ಮಾತ್ರಕ್ಕೆ ದುರಾಚಾರಿಗಳಾದರೂ ಅವರನ್ನು ಸಾಧುಗಳೆಂದೇಕೆ ತಿಳಿಯಬೇಕು?

ಶ್ರೀಕೃಷ್ಣ—ಅವರು ಶೀಘ್ರವಾಗಿ ಧರ್ಮಚಿತ್ತರಾಗಿ ನಿತ್ಯಶಾಂತಿ ರೂಪವಾದ ಮೋಕ್ಷವನ್ನು ಹೊಂದುತ್ತಾರೆ; ನರಕಾದ್ಯನರ್ಥಗಳನ್ನು ಹೊಂದುವುದಿಲ್ಲ. ಆದ್ದರಿಂದಲೇ ಸಾಧುಗಳೆನಿಸುವರು. (೩೧)

ಅರ್ಜುನ—ಹೇ ದೇವ ನಿನ್ನಲ್ಲಿ ಮಾಡಬೇಕಾದ ಭಕ್ತಿಯ ಮಹಿಮೆಯನ್ನು ಇನ್ನಷ್ಟು ವಿವರಿಸು.

ಶ್ರೀಕೃಷ್ಣ— ಭಕ್ತಿಯ ಮಹಿಮೆಯನ್ನು ಎಷ್ಟೆಂದು ಹೇಳಲಿ, ಪಾರ್ಥ! ಉತ್ತಮವರ್ಣದವರು ಪಾಪಫಲದಿಂದ ಪ್ರಾಪ್ತವಾದ, ಸ್ತ್ರೀ, ವೈಶ್ಯ-ಶೂದ್ರಾದಿ ಹೀನಯೋನಿಗಳನ್ನು (ಬ್ರಹ್ಮಜ್ಞಾನವನ್ನು ದೊರಕಿಸಿಕೊಳ್ಳಲು ಅವಕಾಶವೂ ಅಧಿಕಾರವೂ ಇಲ್ಲದ ದೇಹಗಳನ್ನು) ಹೊಂದಿದರೂ ಸಹ, ನನ್ನನ್ನೇ ಅನನ್ಯರಾಗಿ ಚಿಂತಿಸಿ (ಭಕ್ತಿಯಿಂದ ಶರಣುಹೊಂದಿ) ಸ್ವಯೋಗ್ಯವಾದ ಉತ್ತಮಗತಿಯನ್ನು ಹೊಂದುವರು.

ಅರ್ಜುನ—ಪಾಪಪ್ರಾಪ್ತವಾದ ಸ್ತ್ರೀತ್ವವೆಂದರೇನು? ಸ್ತ್ರೀಪುರುಷರೆಂಬ ವಿಭಾಗವು ಸ್ವಭಾವಸಿದ್ಧವಾದುದೇ?

ಶ್ರೀಕೃಷ್ಣ— ಜೀವಸ್ವರೂಪದಲ್ಲಿಯೇ ಸ್ತ್ರೀಪುರುಷಭೇದವುಂಟು. ಸ್ವತಃ ಪುರುಷರಾದವರಿಗೆ ಪಾಪದಿಂದ, ಸುದ್ಯುಮ್ನನು ಇಲಾನಾಮಕಸ್ತ್ರೀಯಾದಂತೆ, ಸ್ತ್ರೀತ್ವವು ಬರುವುದುಂಟು. ಆದರೆ ಸ್ವರೂಪಸ್ತ್ರೀತ್ವವಿದ್ದಲ್ಲಿ, ಯಾವಕಾರಣದಿಂದಲೂ ಪುರುಷತ್ವವು ಲಭಿಸುವುದಿಲ್ಲ. (೩೨) ಇರಲಿ, ಪಾಪದಿಂದ ಸ್ತ್ರೀವೈಶ್ಯಾದಿ ಯೋನಿಗಳನ್ನು ಹೊಂದಿದವರೇ ಉತ್ತಮಗತಿಯನ್ನು ಹೊಂದುವಾಗ, ಸ್ವತಃ ಸ್ತ್ರೀವೈಶ್ಯಾದಿಗಳು ಹೊಂದುವರೆಂದು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲವಷ್ಟೆ. ನಿಶ್ಚಯವಾಗಿ ಅವರಿಗೂ ಉತ್ತಮಗತಿಯು ಲಭಿಸುವುದು. ಹೀಗಿರಲು, ಸ್ವರೂಪದಿಂದ ಶೂದ್ರಾದಿಗಳಾದವರು

ಪ್ರಾಪ್ಯವಾದ ದೇಹತಃ ಬ್ರಾಹ್ಮಣತ್ವ, ರಾಜತ್ವ, ಋಷಿತ್ವಾದಿಗಳನ್ನು (ಅಯಾದೇಹಗಳನ್ನು) ಹೊಂದಿದರೆ ಉತ್ತಮಗತಿಯನ್ನು ಪಡೆಯುವ ರೆಂದೂ, ಸ್ವರೂಪತಃ ಬ್ರಾಹ್ಮಣಾದಿ ಉತ್ತಮ ವರ್ಣಕ್ಕೆ ಸೇರಿದವರು ಉತ್ತಮಗತಿಯನ್ನು ಹೊಂದುವರೆಂದೂ ಸ್ವತಏವ ಸಿದ್ಧವಾಗುವುದಿಲ್ಲವೇ? ಹೊಂದಬೇಕಾದ ಉತ್ತಮಗತಿಗೆ ನನ್ನಲ್ಲಿ ಮಾಡುವ ಅನನ್ಯಸಾಧಾರಣ ಭಕ್ತಿಯೇ ಮುಖ್ಯಕಾರಣವು. ಅರ್ಜುನ! ದುಃಖಪ್ರಚುರವಾದ ಈ ದೇಹವು ನಶ್ವರವಾದರೂ ಭಕ್ತಿಸಾಧನಭೂತವಾದುದು. ಆದ್ದರಿಂದ ಈ ದೇಹವಿರುವ ಅಲ್ಪಕಾಲದಲ್ಲಿಯೇ ವಿಳಂಬಮಾಡದೆ ನನ್ನನ್ನು ಭಕ್ತಿಯಿಂದ ಸೇವಿಸಬೇಕು. (೩೩) ನನ್ನನ್ನು ಸೇವಿಸುವ ಪ್ರಕಾರವನ್ನೂ ಅದರಿಂದ ಲಭ್ಯವಾಗುವ ಮುಖ್ಯಫಲವನ್ನೂ ಹೇಳುವೆನು, ಕೇಳು. ಸದಾ ಮನಸ್ಸನ್ನು ನನ್ನಲ್ಲಿಡು; ಮಾಡುವುದೆಲ್ಲ ನನ್ನ ಸೇವೆಯೆಂಬ ಭಾವವನ್ನು ತಾಳು; ನನ್ನನ್ನೇ ಶರಣು ಹೊಂದು—ಅನ್ಯಾಶ್ರಯವನ್ನು ಸರ್ವಥಾ ಚಿಂತಿಸದಿರು. ಸರ್ವೋತ್ತಮನಾದ ಸ್ವತಂತ್ರತತ್ವವೆಂಬುದು ನಾನೇ ಎಂಬ ದೃಢವಿಶ್ವಾಸವನ್ನು ಹೊಂದು; ಈ ಶ್ರದ್ಧೆಯಿಂದ ಚಲಿಸದಿರು. ನಿಸ್ಸಂಶಯನಾಗಿ ನನ್ನನ್ನೇ ಹೊಂದುವಿ. (೩೪).

ಒಂಭತ್ತನೇ ಅಧ್ಯಾಯವು ಮುಗಿದುದು.

ಅಧ್ಯಾಯ ೧೦.

[ಆರನೇ ಅಧ್ಯಾಯದಲ್ಲಿ ಧ್ಯಾನಯೋಗವು ಹೇಳಲ್ಪಟ್ಟಿತು. ಹಿಂದಿನ ಅಧ್ಯಾಯದ ಅಂತ್ಯದಲ್ಲಿ "ಸದಾ ಮನಸ್ಸನ್ನು ನನ್ನಲ್ಲಿಡು" ಎಂಬುದರಿಂದ ಧ್ಯಾನವು ಸ್ಮಾರಿತವಾಯಿತು. ಧ್ಯೇಯವಸ್ತುವಿನಮಾಹಾತ್ಮ್ಯಜ್ಞಾನವು ಧ್ಯಾನಕ್ಕೆ ಅತ್ಯವಶ್ಯಕವಾದ್ದರಿಂದ ಈ ಅಧ್ಯಾಯದಲ್ಲಿ ಭಗವಂತನ ವಿಭೂತಿ-ರೂಪಗಳು ವಿಸ್ತಾರದಿಂದ ವರ್ಣಿಸಲ್ಪಡುತ್ತವೆ.]

ಶ್ರೀಕೃಷ್ಣ—ಹೇ ಮಹಾಬಾಹೋ! ನನ್ನ ಮಹಿಮಾತಿಶಯಪ್ರತಿ-ಪಾದಕವಾದ ಉಪದೇಶವನ್ನು ಪುನಃ ವಿಸ್ತರಿಸುವೆನು. ಅರ್ಜುನ! ನಾನು ಸದಾ ನಿನ್ನ ಹಿತವನ್ನೇ ಬಯಸುವೆನು; ನೀನಾದರೂ ಅದರಿಂದ ಸಂತೋಷಿಸುವ ಯೋಗ್ಯ ಅಧಿಕಾರಿಯು ಆಗಿರುವಿ. (೧)

ಅರ್ಜುನ—ಕೇಳಲು ನನ್ನ ಮನಸ್ಸು ಉತ್ಸಾಹಿಸುತ್ತಿರುವುದು, ಹೇಳು ಪ್ರಭೋ!

ಶ್ರೀಕೃಷ್ಣ— ಅರ್ಜುನ! ನನ್ನ ಮಹಿಮೆಯನ್ನು ದೇವಗಣಗಳೂ, ಮಹರ್ಷಿಗಳೂ ತಿಳಿಯರು. ದೇವಾದಿ ಸಕಲ ಜಗತ್ತು ನನ್ನ ಅಧೀನವು. ಇದರ ಉತ್ಪತ್ತಿಪ್ರಕಾರವು ಅತ್ಯದ್ಭುತವಾದ್ದರಿಂದ ಯಾರೂ ಪೂರ್ಣವಾಗಿ ತಿಳಿಯಲಾರರು. ದೇವತೆಗಳಿಗೂ ಅಗಮ್ಯವಾದಮೇಲೆ ಅಲ್ಪರಾದ ಇತರರಿಗೆ ತಿಳಿಯದೆಂದು ಹೇಳಬೇಕೆ?

ಅರ್ಜುನ—ನಿನ್ನ ಮಹಿಮೆಯೂ ಜಗದುತ್ಪತ್ತಿಯೂ ಅಗಮ್ಯವಾದಂತೆ ನಿನ್ನ ಉತ್ಪತ್ತಿಯೂ ಅಗಮ್ಯವೇನು?

ಶ್ರೀಕೃಷ್ಣ—ಹಾಗೆಂದು ಭ್ರಮಿಸಬೇಡ ಅರ್ಜುನ! ದೇವಾದಿಗಳಿಗೂ ಅಗಮ್ಯವಾದ ಉತ್ಪತ್ತಿಯು ನನಗುಂಟೆಂದು ತಿಳಿಯಬೇಡ. ನನಗೆ ಸರ್ವಥಾ ಉತ್ಪತ್ತಿಯೆಂಬುದಿಲ್ಲ. ದೇವಾದಿ ಸಕಲ ಜಗತ್ತಿನ ಉತ್ಪತ್ತಿಗೆ ಕಾರಣನು ನಾನು.

ಅರ್ಜುನ—ನೀನು ಜಗತ್ಕಾರಣನಾದರೂ, ನಿನಗೊಬ್ಬ ಅನ್ಯಕಾರಣ ನಿರಬಹುದಲ್ಲವೇ?

ಶ್ರೀಕೃಷ್ಣ—ಕಾರ್ಯರೂಪವಾದ ಜಗತ್ತಿಗೆ ಒಂದು ಕಾರಣವಿದ್ದು ಆ ಕಾರಣವಸ್ತುವಿನ ಪ್ರವೃತ್ತಿಗೆ ಮತ್ತೊಂದು ಕಾರಣವನ್ನು ಕಲ್ಪಿಸುವುದು ಕೊನೆಗಾಣದ ಕಲ್ಪನೆಯಲ್ಲಿ ಪರ್ಯವಸಾನ ಹೊಂದುವುದು. ಜಗದುಪಾದಾನ-ಕಾರಣವಾದ ಪ್ರಕೃತಿಗೆ ಪೂರ್ವಪ್ರವೃತ್ತಿರೂಪವಾದ ಜನಕತ್ವವು (ಉತ್ಪತ್ತಿ ಕಾರಣತ್ವವು) ಕೂಡುವುದಿಲ್ಲ. ನನ್ನಿಂದ ನನಗೆ ಉತ್ಪತ್ತಿಯೆಂಬುದು

ಶ್ಯಾತ್ರಯರೂಪದ ದೋಷಕ್ಕೆಡೆಯಾಗುವುದರಿಂದ ಉಪಪನ್ನವಾಗುವು
ಲ್ಲ. ಆದ್ದರಿಂದ ನನಗೆ ಉತ್ಪತ್ತಿಯೇ ಇಲ್ಲವೆಂದು ತಿಳಿ. (೨)

ಅರ್ಜುನ—ನೀನು ಉತ್ಪತ್ತಿರಹಿತನೆಂದು ತಿಳಿಯುವುದರ ಫಲವೇನು?

ಶ್ರೀಕೃಷ್ಣ—ಯಾವ ಅಧಿಕಾರಿಯು ನನ್ನನ್ನು ಉತ್ಪತ್ತಿರಹಿತನೆಂದೂ, ರ್ವರ ಸರ್ವಚೇಷ್ಟಾಪ್ರವರ್ತಕನೆಂದೂ (ಸರ್ವಕರ್ಮಪ್ರೇರಕನೆಂದೂ) ರ್ವಚೇಷ್ಟಾ ಪ್ರೇರಕನಾದ ಮುಖ್ಯ ಪ್ರಾಣನಿಗೂ ಚೇಷ್ಟಕನೆಂದೂ, ಅತ ರ ಸರ್ವಲೋಕಮಹೇಶ್ವರನೆಂದೂ ತಿಳಿಯುವನೋ ಅವನೇ ಯಥಾರ್ಥ ್ಞನಿಯು. ಆತನು ಸರ್ವಪಾಪಗಳಿಂದ ವಿಮುಕ್ತನಾಗುತ್ತಾನೆ. (೩)

ಅರ್ಜುನ—ನೀನೇ ಸಕಲರ ಸರ್ವಚೇಷ್ಟಾಪ್ರವರ್ತಕನಾದರೆ ಂದ್ರಿಯಗಳಲ್ಲಿ ಬುದ್ಧಿಮೊದಲಾದ ಅಂತರಿಂದ್ರಿಯಗಳಿಗೂ, ತಪಸ್ವಿಗಳಲ್ಲಿ ವು ಮಹರ್ಷಿಗಳ ಸಾಮರ್ಥ್ಯಕ್ಕೂ ವೈಶಿಷ್ಟ್ಯ (ಅತಿಶಯ) ಪ್ರಾಪ್ತ ಗಲು ಕಾರಣವೇನು ?

ಶ್ರೀಕೃಷ್ಣ— ಅರ್ಜುನ, ಕಾರ್ಯಾಕಾರ್ಯವನ್ನು ನಿಶ್ಚಯಿಸುವ ದ್ಧಿ, ವಸ್ತುಗಳನ್ನು ತಿಳಿಯುವ **ಜ್ಞಾನ,** ಅಕಾರ್ಯವನ್ನು ಮಾಡ ುವುದೆಂಬ **ಅಸಂಮೋಹ,** ಅಪಕಾರಿಗೂ ಅಪಕಾರವನ್ನೆಸಗದ ೋಪರಾಹಿತ್ಯವೆಂಬ) **ಕ್ಷಮೆ,** ಯಥಾರ್ಥ ವಚನ ಮತ್ತು ಯಥಾರ್ಥ ್ಞನಪೂರ್ವಕವಾದ ಅನುಷ್ಠಾನವೆಂಬ **ಸತ್ಯ, ಇಂದ್ರಿಯನಿಗ್ರಹ,** **ಗವನ್ನಿಷ್ಠೆ, ಸುಖ, ದುಃಖ, ಉತ್ಪತ್ತಿ, ಸ್ಥಿತಿ, ಭಯ, ಅಭಯ,** ್ರಾಣಿಪೀಡಾರಾಹಿತ್ಯವೆಂಬ **ಅಹಿಂಸೆ,** ಶೀತೋಷ್ಣ ಸುಖದುಃಖಾದಿ- ಂದ್ವಗಳಿಂದ ವಿಕಾರ ಹೊಂದದಿರುವುದೆಂಬ **ಸಮತ್ವ,** ವಿಷಯಭೋಗ- ಲಸೆ ಇಲ್ಲದಿರುವುದೆಂಬ **ತುಷ್ಟಿ,** ಬ್ರಹ್ಮಚರ್ಯಾದಿರೂಪ **ತಪಸ್ಸು,** ರ್ಾರ್ಜಿತ ವಸ್ತುಗಳನ್ನು ಪರರಿಗೆ ಒಪ್ಪಿಸುವುದೆಂಬ **ದಾನ, ಕೀರ್ತಿ,** **ಪಕೀರ್ತಿ** ಇವೇ ಮೊದಲಾದ ವಿವಿಧ ಧರ್ಮಗಳು ಪ್ರಾಣಿಗಳಿಗೆ ್ನಿಂದಲೇ ಉಂಟಾಗುವುವು. ಬುದ್ಧ್ಯಾದಿ ವೈಶಿಷ್ಟ್ಯವುಳ್ಳ ಪ್ರಾಣಿಗಳುಸಹ ್ನಿಂದಲೇ ಜನಿಸುತ್ತವೆ. ಅರ್ಜುನ! ಪೂರ್ವಮನ್ವಂತರದ ಸಪ್ತ-

ಮಹರ್ಷಿಗಳಾದ ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಮತ್ತು ವಸಿಷ್ಠ ಇವರುಗಳೂ; ಬ್ರಹ್ಮಮಾನಸ ಪುತ್ರರಾದ ಸ್ವಾಯಂಭುವ, ಸ್ವಾರೋಚಿಷ, ರೈವತ ಮತ್ತು ಉತ್ತಮರೆಂಬ ಮನುಗಳೂ; ವಿಪ್ರ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣವಿಶಿಷ್ಟರಾದ ಬ್ರಹ್ಮಾದಿ ದೇವತೆಗಳೂ; ಪುತ್ರ ಪೌತ್ರರೂಪರಾದ ಈ ಸಕಲಪ್ರಜೆಗಳೂ; ನನ್ನಿಂದಲೇ ಜನಿಸಿದರು.

ಅರ್ಜುನ—ದೇವತೆಗಳಲ್ಲಿ ಬ್ರಾಹ್ಮಣಾದಿ ವರ್ಣಗಳುಂಟೇ?

ಶ್ರೀಕೃಷ್ಣ—ಉಂಟು. ಚತುರ್ಮುಖನು ಶ್ರೀವಿಷ್ಣುವಿನಿಂದ ಬ್ರಾಹ್ಮಣನಾಗಿ ಜನಿಸಿದನು. ವಾಯು, ಸದಾಶಿವ, ಶೇಷ, ಗರುಡ, ಇಂದ್ರ, ಕಾಮ, ವರುಣ, ಸೋಮ, ಸೂರ್ಯ, ಯಮ ಇವರೇ ಮೊದಲಾದವರು ಕ್ಷತ್ರಿಯರು. ಮುಖ್ಯವಾಯುವನ್ನುಳಿದು ಇತರ ವಾಯುಗಳು (೪೮ ಮರುತ್ತುಗಳು), ವಿವಸ್ವಾನ್, ಇಂದ್ರ, ವರುಣ, ವಿಷ್ಣು ಇವರನ್ನು ಬಿಟ್ಟು ಉಳಿದ ಎಂಟು ಆದಿತ್ಯರು, ಮುಖ್ಯ ರುದ್ರ(ಸದಾಶಿವ)ನನ್ನು ಬಿಟ್ಟು ಇತರ ಹತ್ತು ರುದ್ರರು, ಅಗ್ನಿನಾಮಕವಸುವನ್ನುಳಿದು ಉಳಿದ ಏಳು ವಸುಗಳು ಇವರೆಲ್ಲ ವೈಶ್ಯರು. ಅಶ್ವಿನೀ ದೇವತೆಗಳು, ಪೃಥ್ವೀ, ಕಾಲ, ಮೃತ್ಯು ಮೊದಲಾದವರು ಶೂದ್ರ ದೇವತೆಗಳು. ಹೀಗೆ ದೇವವರ್ಣಗಳೆಂದು ತಿಳಿ.

ಅರ್ಜುನ—ಚತುರ್ಮುಖನಿಂದ ಹುಟ್ಟಿದ ಮನುಗಳಿಗೆ ನಿನ್ನಿಂದ ಉತ್ಪತ್ತಿಯೆಂಬುದು ಹೇಗೆ ಕೂಡುವುದು?

ಶ್ರೀಕೃಷ್ಣ—ಬ್ರಹ್ಮಸ್ಥಿತನಾದ (ಅಂತರ್ಯಾಮಿಯಾದ) ನನ್ನಿಂದಲೇ ಮನುಗಳ ಉತ್ಪತ್ತಿಯು; ಬ್ರಹ್ಮನು ದ್ವಾರಮಾತ್ರನು. ಹೀಗೆಯೇ ಚತುರ್ಮುಖನಿಂದ ಹುಟ್ಟುವ ಇತರ ಎಲ್ಲ ವಸ್ತುಗಳ (ಹಾಗೂ ಪ್ರಾಣಿಗಳ) ಸೃಷ್ಟಿಯೆಂದು ತಿಳಿ. (೪-೫-೬).

ಅರ್ಜುನ—ಹೀಗೆ ನೀನೇ ಜಗದುತ್ಪತ್ತಿಗೆ ಕಾರಣನೆಂದು ತಿಳಿಯುವ ನಿನ್ನ ವಿಷಯಕವಾದ ಜ್ಞಾನಕ್ಕೆ ಫಲವೇನು?

ಶ್ರೀಕೃಷ್ಣ—ಈ ನನ್ನ ಮಹಿಮಾತಿಶಯವನ್ನೂ, ನನ್ನ ನಾನಾ ಅವತಾರಗಳನ್ನೂ, ವಸ್ತುಗಳಿಗೆ ಸ್ವಜಾತ್ಯುತ್ತಮತ್ವ ಮೊದಲಾದ ವೈಶಿಷ್ಟ್ಯವನ್ನು

ತಂದು ಕೊಡುವ ನನ್ನ ವಿವಿಧರೂಪಗಳ ಮಹಿಮೆಯನ್ನೂ ಸ
ವಿಶೇಷವನ್ನೂ ಯಾವ ಅಧಿಕಾರಿಯು ತಿಳಿಯುವನೋ ಆತನು ನಿ
ಧ್ಯಾನಯೋಗವುಳ್ಳವನಾಗುತ್ತಾನೆ. ಇದರಲ್ಲಾವ ಸಂಶಯವೂ ಇಲ್ಲ
ಹೇ ಪಾರ್ಥ! ಈ ನನ್ನ ಮಾತುಗಳಲ್ಲಿ ವಿಶ್ವಾಸವಿಡು. ನಾನೇ
ತ್ಪಾದಕನೆಂದೂ; ಇಷ್ಟಪ್ರಾಪ್ತಿ, ಅನಿಷ್ಟಪರಿಹಾರಪ್ರಾಪಕವಾ
ಪ್ರವೃತ್ತಿಗಳೂ ಈಜಗತ್ತಿಗೆ ನನ್ನಿಂದಲೇ ಆಗುವುದೆಂದೂ ತಿಳಿದು ಜ
ನನ್ನನ್ನೇ ಭಜಿಸುತ್ತಾರೆ. (೮) ನನ್ನಲ್ಲಿಯೇ ಮನಸ್ಸನ್ನಿಟ್ಟು
ಸಂಬಂಧವಾದ ವ್ಯಾಪಾರಗಳಲ್ಲಿಯೇ ತೊಡಗಿ, ನನ್ನ ಮಹಿ
ಶಿಷ್ಯರಿಗೂ ಉಪದೇಶಿಸುತ್ತಾ, ಪರಸ್ಪರವಾಗಿ ಕೀರ್ತಿಸುತ್ತಾ,
ವಿರಕ್ತರಾಗಿ ಆನಂದಿಸುತ್ತಾರೆ. (೯) ಹೀಗೆ ನನ್ನಲ್ಲಿ ನಿತ್ಯ
ಚಿತ್ತವುಳ್ಳ, ಪ್ರೀತಿಯಿಂದ ನನ್ನನ್ನು ಸೇವಿಸುವ ಭಕ್ತರಿಗೆ, ನನ್ನ
ಮುಖ್ಯ ಸಾಧನವಾದ ಜ್ಞಾನಯೋಗವನ್ನು ಅನುಗ್ರಹಿಸುತ್ತೇನೆ.

ಅರ್ಜುನ—ಅಜ್ಞಾನ, ಕಾಮ ಕರ್ಮಗಳೆಂಬ ಅನಾದಿ ಬಂಧ
ಈ ವಿಧ ಜ್ಞಾನವು ಹೇಗೆ ಸಾಧ್ಯವಾಗುವುದು?

ಶ್ರೀಕೃಷ್ಣ—ನನ್ನ ಭಕ್ತರನ್ನು ಉದ್ಧರಿಸಬೇಕೆಂಬ ಅವರ
ಕಾರುಣ್ಯದಿಂದ, ನಾನು ಅವರ ಚಿತ್ತದಲ್ಲಿ ನಿಂತು, ದಿವ್ಯಪ್ರಕಾ
ವಾದ ಜ್ಞಾನವೆಂಬ ದೀಪದಿಂದ, ಅಂಧಕಾರವನ್ನು (ಅಜ್ಞಾನ
ಕ್ಲೇಶರೂಪಬಂಧವನ್ನು) ನಾಶಗೊಳಿಸುತ್ತೇನೆ. (೧೧)

ಅರ್ಜುನ—ಹೇ ಕೇಶವ! ನೀನೇ ಸರ್ವೋತ್ತಮನಾದ ಪರ
ಉತ್ತಮಾಶ್ರಯನು, ಪರಮ ಮಂಗಳಸ್ವರೂಪನು. ವಸಿಷ್ಠಾ
ಋಷಿಗಳೂ, ದೇವರ್ಷಿನಾರದನೂ, ಅಸಿತ, ದೇವಲ, ವ್ಯಾಸಾದಿ
ನಿನ್ನನ್ನು ಷಡ್ಗುಣೈಶ್ವರ್ಯಪೂರ್ಣನೂ, ನಿರ್ವಿಕಾರನೂ, ಲೋ
ಕ್ಷಣನೂ, ಉತ್ಪತ್ತಿರಹಿತನೂ, ಬಹುವಿಧ ವೈಶಿಷ್ಟ್ಯಗಳಿಗೆ ಕಾ
ಬಹುರೂಪಗಳುಳ್ಳವನೂ ಎಂದು ಹೇಳುವರು. ನೀನೂ ಹೀಗೆಂದೆ
ತ್ತಿರುವಿ. (೧೨-೧೩). ನನಗಾಗಿ ನೀನು ಹೇಳುತ್ತಿರುವ ಈ ಎ
ಮಹಾತ್ಮ್ಯೆಯನ್ನು ಸತ್ಯವೆಂದೇ ತಿಳಿಯುವೆನು. ಹೇ ಲೋಕ

ನಿನ್ನ ಸಾಮರ್ಥ್ಯವನ್ನು ದೇವದಾನವರಾರೂ ತಿಳಿಯರು. (೧೪) ಹೇ ಪುರುಷೋತ್ತಮ ಜಗದುತ್ಪಾದಕ, ಜಗನ್ನಿಯಾಮಕ, ಜಗನ್ನಾಥ, ದೇವ ದೇವ! ನಿನ್ನನ್ನು ನೀನೇ ಬಲ್ಲೆ. (೧೫) ನಿನ್ನ ವಿಭೂತಿಗಳನ್ನೂ ಯೋಗ ಗಳನ್ನೂ (ಶಕ್ತಿ ವಿಶೇಷಗಳನ್ನೂ) ಬಹು ಸಂಕ್ಷೇಪವಾಗಿ ನಿರೂಪಿಸುತ್ತಿರುವಿ. ವಿಸ್ತಾರವಾಗಿ ನಿನ್ನ ಮುಖದಿಂದಲೇ ಕೇಳಿ ತಿಳಿಯಲು ಉತ್ಸಾಹಿಸುತ್ತಿರು ವೆನು. ಏಕೆಂದರೆ ಈ ವಿಷಯದಲ್ಲಿ ಅನ್ಯರಾರೂ ಸಮರ್ಥರಲ್ಲ. ಆದ್ದರಿಂದ, ಪ್ರಭೋ! ನನ್ನ ಪ್ರಾರ್ಥನೆಯನ್ನು ಲಾಲಿಸು. ಲೋಕವಿಲಕ್ಷಣಗಳಾದ ನಿನ್ನ ಯಾವ ರೂಪವಿಶೇಷಗಳಿಂದ ಈ ಜಗತ್ತನ್ನು ವ್ಯಾಪಿಸಿರುವೆಯೋ, ದಿವ್ಯವಾದ ಆ ವಿಭೂತಿಗಳನ್ನು ಸ್ವಲ್ಪವೂ ಬಿಡದಂತೆ ವಿಸ್ತರಿಸು. (೧೬)

ಶ್ರೀಕೃಷ್ಣ—ನನ್ನ ಸಂತತ ಧ್ಯಾನದಿಂದ ನನ್ನ ವಿಭೂತಿಗಳನ್ನು ತಿಳಿ. ವಿಸ್ತಾರವಾಗಿ ನಿರೂಪಿಸೆಂಬ ಪ್ರಾರ್ಥನೆಯೇಕೆ?

ಅರ್ಜುನ—ಹೇ ಯೋಗೀಶ್ವರ! (ಅನಂತಶಕ್ತನೇ) ನಿನ್ನ ಉಪದೇಶ ವಿಲ್ಲದೆ ಧ್ಯಾನಮಾತ್ರದಿಂದ (ಪರಿಚಿಂತನದಿಂದ) ನಿನ್ನ ವಿಭೂತಿಗಳನ್ನು ತಿಳಿ ಯಲು ಹೇಗೆ ಶಕ್ತನಾಗುವೆನು! ಆದ್ದರಿಂದ ಯಾವ ಯಾವ ವಸ್ತುಗಳಲ್ಲಿ ನಿನ್ನ ಯಾವ ಯಾವ ರೂಪಗಳನ್ನಿಟ್ಟು ನಿನ್ನ ಮಹಿಮೆಗಳನ್ನು ಸಜ್ಜನಲೋಕಕ್ಕೆ ಹೇಗೆ ಧ್ಯಾನಿಸಲ್ಪಡಬೇಕೆಂಬುದನ್ನು ಉಪದೇಶಿಸು. (೧೭) ಹೇ ಜನಾ ರ್ದನ! ನಿನ್ನ ವಚನಾಮೃತವನ್ನು ಎಷ್ಟು ಕೇಳಿದರೂ ನನಗೆ ತೃಪ್ತಿ ಯಾಗದು. ಪುನಃಪುನಃ ನಿನ್ನ ವಿಭೂತಿಗಳನ್ನೂ ಯೋಗಸಾಮರ್ಥ್ಯವನ್ನೂ ನಿರೂಪಿಸು. (೧೮)

ಶ್ರೀಕೃಷ್ಣ— ಸಂತೋಷದಿಂದ ಹೇಳುವೆನು, ಕೇಳು. ನನ್ನ ವಿವಿಧ ರೂಪಗಳನ್ನೂ ವಸ್ತುಗಳಿಗೆ ವೈಶಿಷ್ಟ್ಯವನ್ನುಂಟುಮಾಡುವ ನನ್ನ ರೂಪ ವಿಶೇಷಗಳನ್ನೂ ನಿನಗೋಸ್ಕರ ನಿರೂಪಿಸುವೆನು. ಲೋಕವಿಲಕ್ಷಣಗಳಾದ ನನ್ನ ವಿಭೂತಿರೂಪಗಳ ಸಮೂಹಕ್ಕೆ ಅವಧಿಯಿಲ್ಲ—ಅಸಂಖ್ಯವಾಗಿವೆ. ಆದ್ದರಿಂದ, ಹೇ ಕುರುವಂಶಲಲಾಮ! ಎಲ್ಲವನ್ನೂ ಅಶೇಷವಾಗಿ (ಬಿಡದಂತೆ) ವಿಸ್ತರಿಸೆಂಬ ನಿನ್ನ ಕೋರಿಕೆಯು ಯುಕ್ತವಲ್ಲ. ಪ್ರಧಾನ

...ನ ರೂಪವನ್ನು ಮಾತ್ರ ಉಪಾಸಿಸುವೆನು (೧೯) ಯಾವಯಾವ ...ಗಳಲ್ಲಿ ನನ್ನನ್ನು ಚಿಂತಿಸಬೇಕೆಂದು ಕೇಳಿದೆಯಲ್ಲವೇ ? ನಾನು ಸರ್ವತ್ರ ವ್ಯಾಪ್ತನು; ಸಕಲ ವಸ್ತುಗಳಲ್ಲಿದ್ದೇನೆ. ಸಕಲ ಪ್ರಾಣಿಗಳ ಹೃದಯ ...ಯಲ್ಲಿ ವಾಸವಾಗಿರುವೆನು. ಸಕಲ ವಸ್ತುಗಳ ಸೃಷ್ಟಿ, ಸ್ಥಿತಿ ಲಯ-ಗಳನು ನಾನೇ. ಹೇ ಜಿತನಿದ್ರ! ಈ ನನ್ನ ರೂಪಗಳ ಉಪಾಸನೆಗೆ ನೀನು ಯೋಗ್ಯ ಅಧಿಕಾರಿಯಾಗಿರುವಿ. ಜಿತನಿದ್ರನಿಗಲ್ಲದೆ ಬೇರಾವನಿಗೆ ಉಪಾಸನೆಯಲ್ಲಿ ಅಧಿಕಾರವು? (೨೦). ನನ್ನ ವಿಭೂತಿರೂಪಗಳು ...ರಡು ಪ್ರಕಾರವಾಗಿವೆ. ವಿಷ್ಣು, ಕಪಿಲ, ವ್ಯಾಸ, ರಾಮ, ಕೃಷ್ಣಾದಿ ...ರೂಪಗಳು ಪ್ರತ್ಯಕ್ಷ ವಿಭೂತಿ ರೂಪಗಳು. ವಸ್ತುಗಳಲ್ಲಿ ಉತ್ತಮತ್ವಾ ...ದಕಗಳಾಗಿ ಸನ್ನಿಹಿತವಾದ ರೂಪಗಳು ತಿರೋಹಿತವಿಭೂತಿರೂಪ ...ನಿಸುವವು. ತಿರೋಹಿತವಿಭೂತಿರೂಪಗಳು ಎರಡು ಪ್ರಕಾರವಾದವು ...ವು. ಯಾವುದೊಂದು ವಸ್ತುವಿಗೆ ಸಜಾತೀಯವಸ್ತುಸಮೂಹದಲ್ಲಿ ಶ್ರೇಷ್ಠತೆಯನ್ನು ತಂದುಕೊಡುವುದು ಒಂದು; ವಿಜಾತೀಯ ವಸ್ತುಗಳಲ್ಲಿ ...ಷ್ಠತೆಗೆ ಕಾರಣವಾದುದು ಮತ್ತೊಂದು. ಈ ಎರಡು ಪ್ರಕಾರದ ವಿಭೂತಿ-ರೂಪಗಳ ಮಹಿಮಾ ವಿವರಗಳನ್ನು ಉಪದೇಶಿಸುವೆನು, ಕೇಳು. ದ್ವಾದಶಾ ...ತ್ಯರಲ್ಲಿ ವಿಷ್ಣುನಾಮಕ ಆದಿತ್ಯನು ನಾನು. ಸರ್ವತ್ರ ವ್ಯಾಪ್ತನಾಗಿ ಸರ್ವಪ್ರವಿಷ್ಟನಾದ್ದರಿಂದ ನಾನು ವಿಷ್ಣುಪದ ವಾಚ್ಯನು. ಪ್ರಕಾಶರೂಪ ವಸ್ತುಗಳ ಮಧ್ಯದಲ್ಲಿ ವಿಶ್ವವ್ಯಾಪ್ತರಶ್ಮಿಯುಕ್ತ 'ರವಿ'ಯೇ ನಾನು. ಶಬ್ದ (ವೇದ) ಗಮ್ಯನಾದ್ದರಿಂದ ರವಿನಾಮಕನಾಗಿ ರವಿಗೆ ಆಧಿಕ್ಯವನ್ನಿತ್ತು ರವಿಯಲ್ಲಿರುವೆನು. ೪೯ ಮರುತ್ತುಗಳಲ್ಲಿ ಮರೀಚಿನಾಮಕ ಮರುತ್ತಿಗೆ ಆಧಿಕ್ಯವನ್ನುಂಟುಮಾಡಿ (ಮೇಘಚಾಲಕ ಶಕ್ತಿ ನನ್ನದಾದ್ದರಿಂದ) ಮರೀಚಿ ನಾಮಕನಾಗಿ ಮರೀಚಿಯಲ್ಲಿ ಸನ್ನಿಹಿತನಾಗಿರುವೆನು. ನಕ್ಷತ್ರಗಳ ಮಧ್ಯ ದಲ್ಲಿ ನಾನು ಚಂದ್ರನು. (ವಿಜಾತೀಯ ವಸ್ತುಗಳಲ್ಲಿ ಶ್ರೇಷ್ಠತೆಯನ್ನುಂಟು ಮಾಡುವ ನನ್ನ ತಿರೋಹಿತವಿಭೂತಿರೂಪವು ಚಂದ್ರನಲ್ಲಿದೆ). 'ಶಶಿ'ಪದ ಬೋಧ್ಯವಾದ 'ಅತಿಸುಖಿತ್ವ'ವು ನನ್ನಲ್ಲಿರುವ ಕಾರಣದಿಂದ ನಾನು ಶಶಿ ನಾಮಕನು. ಶಶಿ ಎಂಬ ಹೆಸರಿನಿಂದ ಶಶಿಯಲ್ಲಿ (ಚಂದ್ರನಲ್ಲಿ) ಸನ್ನಿಹಿತ

ನಾಗಿರುವೆನು (೨೧). ಅರ್ಜುನ! ಮುಂದೆ ನಿರೂಪಿಸುವ ಇತರ ವಿಭೂತಿ ರೂಪಗಳನ್ನು ಇದೇ ಅರ್ಥದಲ್ಲಿ ತಿಳಿ. ಋಗ್ವೇದವನ್ನುಳಿದು ಇತರ ವೇದಗಳ ಮಧ್ಯೆ ಸಾಮವೇದಕ್ಕೆ ಆಧಿಕ್ಯವನ್ನುಂಟುಮಾಡಿ, ಸಾಮ್ಯನಿಮಿತ್ತದಿಂದ, ಸಾಮಜ್ಞಾನವಂತನಾದ್ದರಿಂದ ಸಾಮವೇದದಲ್ಲಿದ್ದು ಸಾಮನಾಮಕನಾಗಿರುವೆನು. ದೇವತೆಗಳ ಮಧ್ಯದಲ್ಲಿ ವಾಸವನಾಮಕ ಇಂದ್ರನೇ ನಾನು. ಸರ್ವದೇಶದಲ್ಲಿ ವಾಸಿಸುವೆನಾದ್ದರಿಂದ ನಾನು ವಾಸವನೆಂದು ಕರೆಯಲ್ಪಡುವೆನು. ಆ ನಾಮದಿಂದ ವಾಸವನಲ್ಲಿದ್ದು ವಾಸವನಿಗೆ ದೇವತೆಗಳಲ್ಲಿ ಆಧಿಕ್ಯಪ್ರದನು. ಜ್ಞಾನರೂಪನಾದ್ದರಿಂದ ನಾನು ಮನೋನಾಮಕನು. ಮನಸ್ಸಿನಲ್ಲಿ 'ಮನ' ಎಂಬ ಹೆಸರಿನ ರೂಪದಿಂದಿದ್ದು, ಕರ್ಮಜ್ಞಾನೇಂದ್ರಿಯಗಳ ಮಧ್ಯದಲ್ಲಿ ಮನಸ್ಸಿಗೆ ಪ್ರಾಧಾನ್ಯವನ್ನುಂಟುಮಾಡುವೆನು. ಪ್ರಾಣಿಗಳಲ್ಲಿ 'ಚೇತನಾ' ಎಂಬ ಸಾರಧರ್ಮಪ್ರದನಾಗಿ, ಚೇತನನಾಮಕನಾಗಿ ಸ್ಥಿತನಾಗಿರುವೆನು. (೨೨). ಏಕಾದಶರುದ್ರರಲ್ಲಿ ನಾನು ಶಂಕರನಾಮಕನು. ಸುಖಪ್ರದನಾದ್ದರಿಂದ ನಾನು ಶಂಕರನೆನಿಸುವೆನು. ವಿತ್ತಸ್ವಾಮಿಯಾದ್ದರಿಂದ ವಿತ್ತೇಶನೆಂಬ ಹೆಸರಿನಿಂದ ಯಕ್ಷರಾಕ್ಷಸರ ಮಧ್ಯದಲ್ಲಿ ಕುಬೇರನಲ್ಲಿರುವವನೂ ನಾನೇ. ಅಷ್ಟವಸುಗಳಲ್ಲಿ ನಾನು ಪಾವಕನೆಂಬ ವಸುವು. ಪಾವನಗೊಳಿಸುವವನಾದ್ದರಿಂದ ನಾನು ಪಾವಕನೆಂದು ಕರೆಯಲ್ಪಡುವೆನು. ಪರ್ವತಗಳ ಮಧ್ಯೆ ನಾನು ಮೇರುಪರ್ವತನು. ಅನ್ಯಪ್ರೇರಕರಹಿತನಾದ್ದರಿಂದ ನಾನು 'ಮೇರು'ವೆನಿಸುವೆನು. (೨೩). ಹೇ ಪಾರ್ಥ! ಪುರೋಹಿತರ ಮಧ್ಯದಲ್ಲಿ ನನ್ನನ್ನು ಬೃಹಸ್ಪತಿಯೆಂದು ತಿಳಿ. ಬ್ರಹ್ಮಾದಿಗಳಿಗೂ ಪತಿಯಾದ್ದರಿಂದ ನಾನು ಬೃಹಸ್ಪತಿಯು. ಈ ಹೆಸರಿನ ರೂಪದಿಂದ ದೇವಪುರೋಹಿತನಲ್ಲಿದ್ದು ಆತನಿಗೆ ಆಧಿಕ್ಯಪ್ರದನಾಗಿದ್ದೇನೆ. ಸೇನಾಧಿಪತಿಗಳಲ್ಲಿ ನಾನು ಸ್ಕಂದನು (ಕುಮಾರಸ್ವಾಮಿಯು). ಸ್ವದೇಹದಿಂದ ಜಗತ್ತಿನ ಉತ್ಪಾದಕನಾದ್ದರಿಂನ ನಾನು ಸ್ಕಂದನಾಮಕನು. ಷಣ್ಮುಖನಲ್ಲಿ ಈ ರೂಪದಿಂದ ಸನ್ನಿಹಿತನಾಗಿರುವೆನು. ಜಲಾಶಯಗಳ ಮಧ್ಯದಲ್ಲಿ ನಾನು ಸಾಗರನು. ಸಾರಭೋಕ್ತನಾದ್ದರಿಂದ ಸಾಗರಶಬ್ದ ವಾಚ್ಯನು (೨೪). ಮಹರ್ಷಿಗಳಲ್ಲಿ ನಾನು ಭೃಗುಋಷಿಯು. ವಿರೋಧಿಗಳನ್ನು ದಹಿಸುವೆ

ನಾದ್ದರಿಂದ ನಾನು ಭೃಗುನಾಮಕನು. ವಾಕ್ಯಗಳಲ್ಲಿ ಓಂಕಾರ ವಾಕ್ಯನು ನಾನು ನಾಶರಹಿತನಾದ್ದರಿಂದ ಮುಖ್ಯಾಕ್ಷರನಾಗಿ ಓಂಕಾರದಲ್ಲಿದ್ದು ಪ್ರಣವಕ್ಕೆ ಆಧಿಕ್ಯಪ್ರದನು ನಾನೇ. ಯಜ್ಞಗಳಲ್ಲಿ ನಾನು ಜಪಯಜ್ಞನು. ಜಪ್ಪಿದ್ದೆಲ್ಲವನ್ನು ರಕ್ಷಿಸುವನೂ (ಜಪ), ಪೂಜ್ಯರಲ್ಲಿ ಶ್ರೇಷ್ಠನೂ (ಯಜ್ಞ) ಆದ್ದರಿಂದ ನಾನು 'ಜಪ ಯಜ್ಞ'ನು. ಮಂತ್ರಗಳ ಆವೃತ್ತಿರೂಪವಾದ ಜಪಕ್ಕೆ ಆಧಿಕ್ಯಪ್ರದನಾಗಿ ಅದರಲ್ಲಿ ಆ ನಾಮದಿಂದ ಸನ್ನಿಹಿತನಾಗಿರುವೆನು. ಅಚಲಗಳಾದವಸ್ತುಗಳಲ್ಲಿ ನಾನು ಹಿಮಾಲಯನು. ಹ್ರೀ ಮತ್ತು ಶ್ರೀ ಎಂಬ ಲಕ್ಷ್ಮೀರೂಪಗಳಿಗೂ ಆಶ್ರಯನಾದ್ದರಿಂದ ನಾನು ಹಿಮಾಲಯನು. (೨೫) ಸಕಲವೃಕ್ಷಗಳಲ್ಲಿ ನಾನು ಅಶ್ವತ್ಥನು. ಅತಿಶೀಘ್ರಗಾಮಿಯೂ ಚಂಚಲನೂ ಆದ್ದರಿಂದ ನಾನು ಅಶ್ವತ್ಥನೆನಿಸುವೆನು. ಅಶ್ವತ್ಥವೆಂಬ ನನ್ನ ರೂಪದಿಂದ ಅಶ್ವತ್ಥವೃಕ್ಷದಲ್ಲಿದ್ದು ಇತರ ವೃಕ್ಷಗಳಿಂದ ಅದಕ್ಕೆ ಆಧಿಕ್ಯವನ್ನು ಉಂಟುಮಾಡುವೆನು. ದೇವರ್ಷಿಗಳ ಮಧ್ಯದಲ್ಲಿ ನಾನು, ನರರ ಅಪೇಕ್ಷಿತವನ್ನು ಕೊಡುವವನಾದ್ದರಿಂದ ನಾರದನೆಂಬ ಅನ್ವರ್ಥನಾಮವುಳ್ಳವನಾಗಿ ನಾರದನಲ್ಲಿ ಸನ್ನಿಹಿತನಾಗಿದ್ದು ನಾರದನಿಗೆ ಆಧಿಕ್ಯಪ್ರದನಾಗಿರುವೆನು. ಗಂಧರ್ವರಲ್ಲಿ ನಾನು ಚಿತ್ರರಥನು. ದೇವಾದಿಗಳ ದೇಹರೂಪವಾದ ವಿಚಿತ್ರ ರಥವುಳ್ಳವನಾದ್ದರಿಂದ ನಾನೇ ಚಿತ್ರರಥನು. ಜ್ಞಾನಿಗಳಲ್ಲಿ ನಾನು ಕಪಿಲನು. ಜಗದ್ರಕ್ಷಕನೂ ಲಯಕರ್ತನೂ ಸುಖರೂಪಿಯೂ ಆದ ನಾನು 'ಕಪಿಲ'ನು. ಸುಖವನ್ನು ಲೀಲೆಯಿಂದ ಪಾನ ಮಾಡುವೆನಾದ್ದರಿಂದಲೂ ನಾನು ಕಪಿಲನಾಮವುಳ್ಳವನು. ಇದು ನನ್ನ ಪ್ರತ್ಯಕ್ಷ ವಿಭೂತಿರೂಪವು. (೨೬) ಉತ್ತಮಕೀರ್ತಿವಂತನಾದ ನಾನು ಉಚ್ಚೈಃಶ್ರವವೆಂಬ ನನ್ನ ರೂಪದಿಂದ ಕ್ಷೀರಸಮುದ್ರದಿಂದ ಉದ್ಭವಿಸಿದ ಅಶ್ವಕ್ಕೆ ವಿಶೇಷಕೀರ್ತಿಯನ್ನು ತಂದುಕೊಟ್ಟು, ಅದರಲ್ಲಿ ಸನ್ನಿಹಿತನಾಗಿರುವೆನು. ಗಜಶ್ರೇಷ್ಠಗಳಲ್ಲಿ ನಾನು ಐರಾವತನು. ವೈಕುಂಠದಲ್ಲಿ 'ಐರ' ವೆಂಬ ಲಕ್ಷ್ಮ್ಯಾತ್ಮಕ ಸರೋವರವಿದೆ. ಈ ಸರೋವರರೂಪಳಾದ ಲಕ್ಷ್ಮಿಯನ್ನು ರಕ್ಷಿಸುವೆನಾದ್ದರಿಂದ ನಾನು ಐರಾವತನು. ಇಂದ್ರನ ಐರಾವತವೆಂಬ ಗಜೇಂದ್ರನಲ್ಲಿ ಸನ್ನಿಹಿತನಾಗಿರುವೆನು. ಮನುಷ್ಯ ಮಧ್ಯದಲ್ಲಿ ನರಾಧಿಪನು ನಾನು. ನರಶ್ರೇಷ್ಠನಾದ

ನಾನೇ ನರಾಧಿಪನೆಂಬ ನಾಮದಿಂದ ರಾಜರಲ್ಲಿದ್ದು ಅವರಿಗೆ ಶ್ರೇಷ್ಠತ್ವವನ್ನು ತಂದುಕೊಡುವೆನು. (೨೭) ಸರ್ವದೋಷವಿವರ್ಜಿತನಾದುದರಿಂದಲೂ, ಶತ್ರುಗಳು ನನ್ನನ್ನು ಬಿಟ್ಟು ಹಿಂದಿರುಗುವುದರಿಂದಲೂ ವಜ್ರನೆನಿಸುವ ನಾನು ಇಂದ್ರನ ವಜ್ರಾಯುಧದಲ್ಲಿದ್ದು, ಅದಕ್ಕೆ ಸಕಲಾಯುಧಗಳಿಂದ ಉತ್ತಮತ್ವ ವನ್ನು ದೊರಕಿಸಿರುವೆನು. ಗೋವುಗಳಮಧ್ಯದಲ್ಲಿ ನಾನು ಕಾಮಧೇನು. ಭಕ್ತರಿಗೆ ಕಾಮಿತಾರ್ಥಪ್ರದನಾದುದರಿಂದ ಕಾಮಧೇನುವೆಂಬ ಹೆಸರು ನನಗೆ ಸಲ್ಲುವುದು. ಈ ನಾಮಕನಾಗಿ ಅಲ್ಲಿದ್ದು ಕಾಮಧೇನುವಿಗೆ ಶ್ರೇಷ್ಠತೆಯನ್ನೊದಗಿಸಿರುವೆನು. ಬಹುವಿಧಸುಖಗಳನ್ನು ಭೋಗಿಸುವ ನಾದುದರಿಂದ ಕಂದರ್ಪನೆಂಬ ನಾಮವುಳ್ಳನಾನು ಆ ನಾಮದಿಂದ ಉತ್ತಮ ಜನನಕಾರಣನಾಗಿ ಮನ್ಮಥನಲ್ಲಿರುವೆನು. ಸುಖವಾದ ವಾಸವುಳ್ಳವ ನಾದುದರಿಂದ ವಾಸಕನೆಂದೂ, ಅಂತಹ ಸುಖವನ್ನು ಭಕ್ತರಿಗೆ ಕೊಡುವ ನಾದುದರಿಂದ 'ವಾಸುಕಿ' ಎಂದೂ ಕರೆಯಲ್ಪಡುವೆನು, ಏಕಫಣ (ಒಂದು ಹೆಡೆ) ವುಳ್ಳ ಸರ್ಪಗಳ ಮಧ್ಯದಲ್ಲಿ ವಾಸುಕಿ ಎಂಬ ಸರ್ಪದಲ್ಲಿದ್ದು ಅದೇ ಶ್ರೇಷ್ಠವೆಂದೆನಿಸಿರುವೆನು. (೨೮) ಬಹುಫಣ (ಅನೇಕಹೆಡೆ) ವುಳ್ಳ ನಾಗಗಳ ಮಧ್ಯದಲ್ಲಿ ನಾನು ಶೇಷನು (ಅನಂತನು). ದೇಶಕಾಲ ಗುಣಗಳಿಂದ ಅನಂತನಾದುದರಿಂದ ನಾನು ಅನಂತನು. ಈ ನಾಮದಿಂದ ಶೇಷನಲ್ಲಿದ್ದು ಅವನಿಗೆ ನಾಗರಲ್ಲಿ ಶ್ರೇಷ್ಠತ್ವವನ್ನುಂಟುಮಾಡುವೆನು. ಜಲಚರಪ್ರಾಣಿ ಗಳಲ್ಲಿ ನಾನು ವರುಣನು. ವರುಣನೆಂಬ ಹೆಸರಿನಿಂದ ವರುಣನಲ್ಲಿದ್ದು ಅವನನ್ನು ಶ್ರೇಷ್ಠನೆನಿಸಿರುವೆನು. ಉತ್ಕೃಷ್ಟಾನಂದರೂಪನಾದುದರಿಂದ ನಾನು ವರುಣನು. ಪಿತೃಗಣದಲ್ಲಿ ನಾನು ಅರ್ಯಮನು. ಸಕಲವನ್ನೂ ತಿಳಿದವನಾದುದರಿಂದ ಅರ್ಯಮನೆಂದು ಕರೆಯಲ್ಪಡುವ ನಾನೇ ಅರ್ಯಮ ನಾಮಕ ಪಿತೃದೇವತೆಯಲ್ಲಿದ್ದು ಆಧಿಕ್ಯಪ್ರದನು. ಸರ್ವನಿಯಾಮಕ ನಾದುದರಿಂದ ಯಮ ನಾಮಕನಾದ ನಾನೇ ಯಮನಲ್ಲಿದ್ದು ಯಮದೇವ ನನ್ನು ನಿಯಮನಮಾಡುತ್ತಾ ಆತನಿಗೆ ಆಧಿಕ್ಯಪ್ರದನಾಗಿರುವೆನು. (೨೯) ಪ್ರಕೃಷ್ಟಸುಖಪೂರ್ಣನಾದ್ದರಿಂದ ಪ್ರಹ್ಲಾದನಾಮಕನಾದ ನಾನು ಪ್ರಹ್ಲಾದನಲ್ಲಿದ್ದು ದೈತ್ಯರ ಮಧ್ಯದಲ್ಲಿ ಶ್ರೇಷ್ಠನೆಂದೆನಿಸಿರುವೆನು. ಸರ್ವಜ್ಞ

ನಾದುದರಿಂದ ನಾನು ಕಾಲನೆನಿಸುವೆನು. ಬಂಧನಾದಿಗಳನ್ನು ಮಾಡುವವರ ಮಧ್ಯೆ ಕಾಲಕ್ಕೆ ಪ್ರಾಮುಖ್ಯತೆಯನ್ನು ತಂದಿತ್ತು ಕಾಲನಲ್ಲಿರುವೆನು. ಭಕ್ತ ರಿಂದ ಮೃಗ್ಯನಾದುದರಿಂದ (ಅರಸಲ್ಪಡುವವನಾದರಿಂದ) ಮೃಗನಾಮಕ ನಾದ ನಾನು ಮೃಗೇಂದ್ರನಾದ ಸಿಂಹನಲ್ಲಿದ್ದು ಮೃಗಗಳಲ್ಲಿ ಸಿಂಹವೇ ಶ್ರೇಷ್ಠವೆನಿಸಿರುವೆನು. ವಿಶೇಷವಾಗಿ ನತರಾದ ಜನರಿಗೆ, ಆಶ್ರಯನಾದ ಪ್ರಯುಕ್ತ ವೈನತೇಯ ನಾಮಕನಾದ ನಾನು ವಿನತಾಪುತ್ರನಾದ ಗರುಡ ನಲ್ಲಿದ್ದು ಪಕ್ಷಿಗಳಲ್ಲಿ ಗರುಡನಿಗೆ ಆಧಿಕ್ಯಪ್ರದನಾಗಿರುವೆನು. (೩೦). ಶೋಧಕವಸ್ತುಗಳಲ್ಲಿ ನಾನು ಪವನನು. ಸಕಲ ಪ್ರಜಾರಕ್ಷಕರಿಂದ ಭಜನೀಯನಾದುದರಿಂದ ಪವನನಾಮಕನು. ಶಸ್ತ್ರಧಾರಿಗಳಲ್ಲಿ ನಾನು ರಾಮನು. ಲೋಕರಂಜಕನಾದುದರಿಂದ ರಾಮನಾಮಕನು. (ಪ್ರತ್ಯಕ್ಷ ವಿಭೂತಿರೂಪವಿದು). ಮೀನುಗಳ ಮಧ್ಯದಲ್ಲಿ ಮಕರನಾಮಕನಾಗಿ ಮಕರದಲ್ಲಿದ್ದು (ಮೊಸಳೆಯಲ್ಲಿದ್ದು) ಮಕರವೇ ಶ್ರೇಷ್ಠವೆನಿಸಿರುವೆನು. ಲೋಕಕ್ಕೆ ಅಲ್ಪಜ್ಞಾನವನ್ನುಂಟುಮಾಡುವವನು ನಾನಾದುದರಿಂದ ನಾನು ಮಕರನೆನಿಸುವೆನು. ಅಸಾರವೆಂದರಿತು ಸಂಸಾರವನ್ನು ಬಿಡತಕ್ಕವರನ್ನು ರಕ್ಷಿಸುವೆನಾದುದರಿಂದ ನಾನು ಜಾಹ್ನವೀ ಎನಿಸುವೆನು. ಈ ನಾಮದಿಂದ ಗಂಗೆಯಲ್ಲಿ ವಿಶೇಷ ಸನ್ನಿಹಿತನಾಗಿದ್ದು ನದಿಗಳಲ್ಲಿ ಗಂಗೆಗೆ ಆಧಿಕ್ಯಪ್ರದನಾ-ಗಿರುವೆನು. (೩೧). ಹುಟ್ಟುವ ಸಕಲ ಪ್ರಾಣಿಗಳ ಸೃಷ್ಟಿ, ಸ್ಥಿತಿ, ಲಯಗಳಿಗೆ ನಾನು ಕಾರಣನು. ಅರ್ಜುನ! ಅಧ್ಯಾತ್ಮವಿದ್ಯೆಗೆ ಸಕಲವಿದ್ಯೆಗಳಲ್ಲಿ ಶ್ರೇಷ್ಟಪ್ರದನು ನಾನು. ಅಧ್ಯಾತ್ಮನಾದ ನಾನು ಅದೇ ನಾಮದಿಂದ ಆ ವಿದ್ಯೆಯಲ್ಲಿ ಸನ್ನಿಹಿತನು. ವಾಚ್ಯನಾದುದರಿಂದ ವಾದನಾಮಕನಾದ ನಾನು, ಜಲ್ಪ, ವಿತಂಡ ಮೊದಲಾದ ವಾಕ್ಯಪ್ರಬಂಧಗಳ ಮಧ್ಯದಲ್ಲಿ, ವಾದಕಥಾ ಎಂದರೆ ತತ್ವನಿರ್ಣಯಜನಕವಾದ ಸಜ್ಜನ ವಾಕ್ಯ ಪ್ರಬಂಧಕ್ಕೆ ಶ್ರೇಷ್ಠತ್ವಪ್ರದನು. (೩೨). ೫೧ ಅಕ್ಷರಗಳ ಮಧ್ಯದಲ್ಲಿ 'ಅ'ಕಾರದಲ್ಲಿದ್ದು ಅಕಾರವಾಚ್ಯನಾದುದರಿಂದ 'ಅ'ಕಾರ ನಾಮಕನು. ಆದ್ದರಿಂದಲೇ 'ಅ' ವರ್ಣವು ವರ್ಣಗಳಲ್ಲಿ ಶ್ರೇಷ್ಠವು. ಸಮಾಸಪದಗಳ ಸಮೂಹದಲ್ಲಿ ದ್ವಂದ್ವ ಸಮಾಸಕ್ಕೆ ಉಚ್ಚತೆಯನ್ನುಂಟುಮಾಡುವವನಾಗಿ ದ್ವಂದ್ವನಾಮಕನಾಗಿ

ಅಲ್ಲಿರುವೆನು. ಬಹಿರಂತರಗಳೆಂಬ ಉಭಯರೂಪಗಳುಳ್ಳವನಾದುದರಿಂದ ನಾನು ದ್ವಂದ್ವನೆನಿಸುವೆನು. ಕ್ಷಯ ರಹಿತನಾದುದರಿಂದ ಅಕ್ಷಯನಾಮಕ ನಾದ ನಾನು, ಭೂತ ಭವಿಷ್ಯತ್ ವರ್ತಮಾನವೆಂಬ ಅವಧಿರಹಿತವಾದ ತ್ರಿಕಾಲಗತನಾಗಿದ್ದೇನೆ. ಸಂಹಾರಕರ್ತನಾದುದರಿಂದ ನಾನೇ ಕಾಲ-ನಾಮಕನು. ಸರ್ವತ್ರ ಸ್ಥಿತವಾದ (ಮುಖ ಶಬ್ದದಿಂದ ಉಪಲಕ್ಷಿತವಾದ) ಅವಯವಗಳುಳ್ಳವನಾದುದರಿಂದ ನಾನು ವಿಶ್ವತೋಮುಖನು. ನಾನು ಸರ್ವರ ಧಾರಣ ಪೋಷಣ ಕರ್ತನು (೩೩). ಸರ್ವಸಂಹಾರಕರ್ತನಾದುದ ರಿಂದ (ಪ್ರಳಯಕಾಲದಲ್ಲಿ ಮಾತ್ರವಲ್ಲ) ನಾನು ಮೃತ್ಯುನಾಮಕನು. ಅದೇ ನಾಮದಿಂದ ಮೃತ್ಯುವಿನಲ್ಲಿರುವೆನು. ಮುಂದೆ ಹುಟ್ಟುವ ಸಕಲರನ್ನೂ ಸೃಷ್ಟಿಮಾಡುವವನು ನಾನೇ ಆದ್ದರಿಂದ ಉದ್ಭವನೆನಿಸುವೆನು. ಸ್ತ್ರೀಯರ ಮಧ್ಯದಲ್ಲಿ, ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ ಮತ್ತು ಕ್ಷಮಾ ಎಂಬ ನಾಮಗಳಿಂದ ಆಯಾ ನಾಮಗಳಿಂದ, ಆಯಾ ಗುಣಾಭಿಮಾನಿ ದೇವತೆಗಳಲ್ಲಿದ್ದು ಆಧಿಕ್ಯಪ್ರದನು, ಕೀರ್ತನಾರ್ಹನಾದುದರಿಂದ, ಕೀರ್ತಿ ಎಂದೂ, ಆಶ್ರಯತ್ವವಕ್ತೃತ್ವಗಳಿಂದ ಶ್ರೀ ಮತ್ತು ವಾಕ್ ಎಂದೂ, ಸದಾ ಸ್ಮರಣೀಯನಾದುದರಿಂದ ಸ್ಮೃತಿ ಎಂದೂ, ಮೇಧಾ, ಧೃತಿ ಮತ್ತು ಕ್ಷಮಾಗುಣರೂಪನಾದುದರಿಂದ ಆಯಾನಾಮಗಳಿಂದ ನಾನು ಕರೆ-ಯಲ್ಪಡುವೆನು. (೩೪) ರಥಂತರ, ವೈರೂಪ, ವೈರಾಜ, ಶಾಕ್ವರ ಮೊದ ಲಾದ ಸಾಮಗಳಮಧ್ಯದಲ್ಲಿ ಬೃಹತ್ಸಾಮ ಎಂಬುದಕ್ಕೆ ಉಚ್ಚತ್ವಪ್ರದನಾಗಿ ಆ ನಾಮದಿಂದ ಅಲ್ಲಿ ನಾನು ಸನ್ನಿಹಿತನಾಗಿರುವೆನು. ಪೂರ್ಣಸಾರಸ್ವರೂಪ ನಾದುದರಿಂದ ಬೃಹತ್ಸನೆಂದೂ, ಅಮೇಯನಾದುದರಿಂದ ಅಮನೆಂದೂ ಎನಿಸುವ ನಾನೇ ಬೃಹತ್ಸಾಮನು. ತ್ರಿಷ್ಟುಪ್, ಜಗತೀ ಮೊದಲಾದ ಛಂದಸ್ಸುಗಳ ಮಧ್ಯದಲ್ಲಿ ಗಾಯತ್ರೀಛಂದಸ್ಸಿಗೆ ಶ್ರೇಷ್ಠತೆಯನ್ನಿತ್ತು, ಗಾಯತ್ರೀ ನಾಮಕನಾದ ನಾನು ಅಲ್ಲಿ ಸನ್ನಿಹಿತನಾಗಿರುವೆನು. ನನ್ನ ಮಹಿಮೆಗಳ ಗಾನದಲ್ಲಿ ಮಗ್ನರಾದವರನ್ನು ರಕ್ಷಿಸುವೆನಾದುದರಿಂದ (ಗಾಯಕಾನ್ ತ್ರಾತೀತಿ) ನಾನು ಗಾಯತ್ರೀ ನಾಮಕನು. ಚೈತ್ರಾದಿ ಮಾಸಗಳಲ್ಲಿ ನಾನು ಮಾರ್ಗಶೀರ್ಷನು. ಜ್ಞಾನಿಗಳನ್ನು ನನ್ನ ಬಳಿ

ಕರಿತರುವ ಮಾರ್ಗಗಳಲ್ಲಿ ಅರ್ಚಿರಾದಿ ಮಾರ್ಗಗಳಿಗೆ ಶ್ರೇಷ್ಠತೆಯನ್ನುಂಟು ಮಾಡುವೆನಾದುದರಿಂದ ನಾನು ಮಾರ್ಗಶೀರ್ಷನೆನಿಸುವೆನು. ಈ ನಾಮ ದಿಂದ ತನ್ನಾಮುಕಮಾಸದಲ್ಲಿ ಸ್ಥಿತನಾಗಿರುವೆನು. ವಸಂತಾದಿಷಡೃತುಗಳ ಮಧ್ಯದಲ್ಲಿ ವಸಂತಋತುವಿಗೆ ಆಧಿಕ್ಯಪ್ರದನಾಗಿರುವೆನು. ಕುಸುಮಾಕರ ನೆಂಬ ನಾಮದಿಂದ ಅಲ್ಲಿ ಸನ್ನಿಹಿತನಾಗಿರುವೆನು. ಕು=ಕೀಳಾದ ಮತ್ತು ಸು=ಸಮೀಚೀನವಾದ ಮಾ=ಜ್ಞಾನವನ್ನು ಕರಃ=(ಜೀವರ ಯೋಗ್ಯತಾನು ಗುಣವಾಗಿ) ಉಂಟುಮಾಡುವ ನಾನು ಕುಸುಮಾಕರನೆನಿಸುವೆನು. (೩೫) ಕ್ರೀಡಾರತನಾದುದರಿಂದ ನಾನು ದ್ಯೂತನಾಮಕನು. ಕಪಟಿಗಳ ಮಧ್ಯ ದಲ್ಲಿ ನಾನು ದ್ಯೂತದಲ್ಲಿರುವೆನು.

ಅರ್ಜುನ—ಇದೇನು, ಕೃಷ್ಣ! ಕಪಟಿಗಳಾದ ದುಷ್ಟರಲ್ಲಿಯೂ ನೀನಿರುವೆಯಾ?

ಶ್ರೀಕೃಷ್ಣ—ಹೀಗೇಕೆ ಸಂಶಯಪಡುವಿ? ನಾನು ಸರ್ವತ್ರ ವ್ಯಾಪ್ತ ನಲ್ಲವೇ? ಮೊದಲ ವಾಕ್ಯದಿಂದಲೇ ನಾನು ಸರ್ವರ ಹೃದ್ಗುಹವಾಸಿಯೆಂದು ಹೇಳಿದೆನಲ್ಲವೇ? ಕಪಟಿಗಳ ಕಾಪಟ್ಯಕ್ಕೆ ಮೇಲ್ತರಗತಿಯನ್ನು (ಅತಿ ಕಪಟತ್ವವನ್ನು) ಹೊಂದಿಸಲು ದ್ಯೂತ (ಜೂಜಾಟ) ದಲ್ಲಿರುವೆನು. ಹೀಗೆಯೇ ಕ್ರೌರ್ಯವೇ ಮೊದಲಾದ ದುರ್ಗುಣಗಳ ವಿಷಯದಲ್ಲಿಯೂ ತಿಳಿಯಬೇಕು. ತೇಜಃಪ್ರವರ್ತಕನಾಗಿ ತೇಜೋನಾಮಕನಾದ ನಾನು ತೇಜಸ್ವಿಗಳಲ್ಲಿದ್ದು ಅವರ ತೇಜಸ್ಸಿಗೆ ಕಾರಣನಾಗಿರುವೆನು. ಜಯವೆಂಬ ಸಾರಧರ್ಮಪ್ರವರ್ತಕನಾಗಿ ಜಯನಾಮಕನಾದ ನಾನು ಜಯವಂತ ರಲ್ಲಿಯೂ; ನಿಶ್ಚಯಪ್ರದನಾದುದರಿಂದ ವ್ಯವಸಾಯನಾಮಕನಾಗಿ ನಿಶ್ಚಯವುಳ್ಳವರಲ್ಲಿಯೂ; ಬಲಪ್ರದನಾದುದರಿಂದ ಸತ್ವನಾಮಕನಾಗಿ ಬಲವಂತರಲ್ಲಿಯೂ ಇರುವವನು ನಾನೇ. ಎಲ್ಲ ಉತ್ತಮ ಧರ್ಮಗಳ ಪ್ರಕಾಶಕ್ಕೂ ಆಯಾ ನಾಮಕನಾದ ನಾನೇ ಕಾರಣನೆಂದು ತಿಳಿ. (೩೬) ಯಾದವರ ಮಧ್ಯದಲ್ಲಿ ವಾಸುದೇವನಾಮಕನಾದ ಈ ರೂಪವು ನನ್ನ ಪ್ರತ್ಯ * ವಿಭೂತಿರೂಪವು. ಸರ್ವವನ್ನು ನನ್ನಲ್ಲಿಟ್ಟುಕೊಂಡು ಸರ್ವತ್ರ

ವಾಸಮಾಡುವ ಕ್ರೀಡಾದಿಗುಣವಿಶಿಷ್ಟನಾದುದರಿಂದ ನಾನು ವಾಸುದೇವನು. ಪಾಂಡುಪುತ್ರರಾದ ನಿಮ್ಮ ಐವರಲ್ಲಿ ಭೀಮಸೇನನನ್ನು ಬಿಟ್ಟು ಉಳಿದವರ ಮಧ್ಯದಲ್ಲಿ ಧನಂಜಯನಾಮಕನಾಗಿ ನಿನ್ನಲ್ಲಿದ್ದು ವಿಶೇಷ ಕೀರ್ತಿಪ್ರದನಾಗಿರುವನು ನಾನೇ. ಅಪಾರಧನಸಂಪಾದಕಶಕ್ತಿಯು ನನ್ನದಾದುದರಿಂದ ನಾನು ಧನಂಜಯನು, ತಿಳಿದೆಯಾ ಧನಂಜಯ! ತತ್ವಜ್ಞಾನಿಗಳ ಮಧ್ಯದಲ್ಲಿ ನಾನು ವೇದವ್ಯಾಸನು. ಇದು ನನ್ನ ಪ್ರಕೃಷ್ಟ ವಿಭೂತಿರೂಪವು. ಉತ್ಕೃಷ್ಟವಾದ ತತ್ವಜ್ಞಾನದಲ್ಲಿ ಸದಾ ಇರುವೆನೆಂಬುದರಿಂದಲೂ, ಸರ್ವಗತನಾದುದರಿಂದಲೂ ನಾನು ವ್ಯಾಸನಾಮಕನು. ಕವಿಗಳ ಮಧ್ಯದಲ್ಲಿ (ಉಶನಾಃ) ಶುಕ್ರಾಚಾರ್ಯರಲ್ಲಿದ್ದು, ಆದಿಕವಿ (ಬ್ರಹ್ಮನೇ) ಮೊದಲಾದ ಉತ್ತಮರಹೊರತಾಗಿ, ಇತರ ಕವಿಗಳ ಮಧ್ಯದಲ್ಲಿ ಆತನಿಗೆ ಶ್ರೇಷ್ಠತ್ವವನ್ನಿತ್ತಿರುವೆನು. ಸೃಷ್ಟ್ಯಾದಿ ಇಚ್ಛಾವಿಶಿಷ್ಟನಾದುದರಿಂದ (ಕೇವಲ ಇಚ್ಛೆಯಿಂದಲೇ ಆ ಎಲ್ಲವನ್ನೂ ನಿರ್ವಹಿಸಬಲ್ಲವನಾದುದರಿಂದ) ನಾನು ಉಶನಾಃ ಎನಿಸುವೆನು. (೩೭). ದಂಡವನ್ನು ವಿಧಿಸುವವರ ಮಧ್ಯದಲ್ಲಿ (ಶಿಕ್ಷೆಯನ್ನು ವಿಧಿಸಿ ನಿಗ್ರಹಿಸುವವರ ಮಧ್ಯದಲ್ಲಿ) ದಂಡಕಾರಣನಾದುದರಿಂದ ದಂಡನೆನಿಸಿ ದಂಡನರೂಪಧರ್ಮದಾತನು ನಾನೇ. ಜಯಾಪೇಕ್ಷಿಗಳಲ್ಲಿ ನೀತಿನಾಮಕನಾಗಿದ್ದು ನೀತಿರೂಪಸಾರಪ್ರದನು ನಾನು. ವ್ಯರ್ಥ ಭಾಷಣ ಪರಿತ್ಯಾಗವೆಂಬ (ಮೌನ) ಧರ್ಮಕ್ಕೆ ಪ್ರವರ್ತಕನಾದುದರಿಂದ, ಮೌನನಾಮಕನಾಗಿ, ರಹಸ್ಯವಸ್ತುಗಳ ಮಧ್ಯದಲ್ಲಿ ಮೌನನೆನಿಸುವೆನು. ಜ್ಞಾನಿಗಳಲ್ಲಿರುವ ಜ್ಞಾನವೆಂಬ ಸಾರಧರ್ಮವನ್ನು ಕೊಡುವವನು ನಾನು. ಸ್ವಯಂ ಜ್ಞಾನರೂಪಿಯಾದ ನಾನು ಜ್ಞಾನಿಗಳಲ್ಲಿ ಜ್ಞಾನನಾಮಕನಾಗಿ ಸ್ಥಿತನಾಗಿರುವೆನು.

ಅರ್ಜುನ—ಸಜಾತೀಯ ವಸ್ತುಗಳಲ್ಲಿ ಯಾವುದೊಂದು ವಸ್ತುವಿಗೆ ಆಧಿಕ್ಯವನ್ನುಂಟುಮಾಡುವ ನಿನ್ನ ವಿಭೂತಿರೂಪವು ಆ ವಸ್ತುವೇ ಉತ್ತಮವೆನಿಸುವುದಾದರೆ, ಆಯುಧಗಳಲ್ಲಿ ವಜ್ರಾಯುಧವು ಚಕ್ರಾಯುಧಕ್ಕಿಂತ ಮೇಲಾಯಿತು. ಯಜ್ಞಗಳಲ್ಲಿ ಜಪಯಜ್ಞವೇ ಮೇಲಾದರೆ, ಜ್ಞಾನಯಜ್ಞವೇ ಶ್ರೇಷ್ಠವೆಂದು ನೀನೇ ಹೇಳಿದ ಮಾತಿನ ಅರ್ಥವೇನು ?

*

ಶ್ರೀಕೃಷ್ಣ—ಸಜಾತೀಯ ವಸ್ತುಗಳ ಮಧ್ಯೆ ಏಕದೇಶ (ಕೆಲವನ್ನು ಬಿಟ್ಟು ಇತರ ಸಜಾತೀಯ ವಸ್ತುಗಳಲ್ಲಿ ಒಂದಕ್ಕೆ) ಆಧಿಕ್ಯವನ್ನುಂಟು ಮಾಡುವ ವಿಭೂತಿರೂಪಗಳನ್ನು ನಿರೂಪಿಸಿದೆನು. ಚಕ್ರವನ್ನು ಅತಿಕ್ರಮಿಸುವ ಆಯುಧವಿಲ್ಲ. ಜ್ಞಾನಯಜ್ಞವನ್ನು ಮೀರಬಲ್ಲ ಯಜ್ಞವಿಲ್ಲ. ಕವಿಗಳಲ್ಲಿ ಆದಿಕವಿಯಾದ ಬ್ರಹ್ಮದೇವನಿಗಿಂತ ಉತ್ತಮರಿರುವರೇ? ಶುಕ್ರಾಚಾರ್ಯರು ಬ್ರಹ್ಮನಿಗಿಂತ ಉತ್ತಮಕವಿಯಲ್ಲ. ಪಾಂಡವರಲ್ಲಿ ಭೀಮಸೇನನಿಗಿಂತ ಶ್ರೇಷ್ಠರು ಯಾರು? ವೇದಗಳಲ್ಲಿ ಋಗ್ವೇದಕ್ಕೆ ಸದೃಶವಾದುದುಂಟೇ? ಈ ಮೊದಲಾದ ಸನ್ನಿವೇಶಗಳಲ್ಲಿ, ಉತ್ಕೃಷ್ಟವೆಂದು ಪ್ರಸಿದ್ಧವಾದವುಗಳನ್ನು ಬಿಟ್ಟು ಉಳಿದ ಸಜಾತೀಯ ವಸ್ತುಗಳಲ್ಲಿ ನನ್ನ ವಿಭೂತಿರೂಪಗಳು ಉಕ್ತವಾದ ಆಯಾ ವಸ್ತುಗಳಿಗೆ ಆಧಿಕ್ಯಪ್ರದವೆಂದು ತಿಳಿ. (೩೮) ಸಕಲ ವಸ್ತುಗಳಲ್ಲಿಯೂ ಆಯಾ ವಸ್ತುವಿನ ಶ್ರೇಷ್ಠಗುಣಕ್ಕೆ ಯಾವುದೊಂದು ಕಾರಣವಿದೆಯೋ ಅದರ ಬೀಜನು (ಕಾರಣನು) ನಾನೆಂದು ತಿಳಿ.

ಅರ್ಜುನ— ಜ್ಯೋತಿರ್ವಸ್ತುಗಳಲ್ಲಿ ರವಿಯಲ್ಲಿ ನೀನು ಸನ್ನಿಹಿತನೆಂದು ಹೇಳಿದ್ದರಿಂದ ರವಿಯನ್ನುಳಿದ ಇತರ ಪ್ರಕಾಶವುಳ್ಳ ವಸ್ತುಗಳಲ್ಲಿ ನೀನಿಲ್ಲವೆಂದು ಏಕೆ ತಿಳಿಯಬಾರದು? ಹೀಗೆಯೇ ಇತರ ಸಜಾತೀಯ ವಸ್ತುಗಳ ವಿಷಯದಲ್ಲಿಯೂ ಏಕೆ ತಿಳಿಯಬಾರದು?

ಶ್ರೀಕೃಷ್ಣ— ನನ್ನ ಅಧೀನದಲ್ಲಿಲ್ಲದ ಮತ್ತು ನಾನಿಲ್ಲದ ಯಾವ ಚರಾಚರವಸ್ತುವೂ ಇಲ್ಲವೇ ಇಲ್ಲ. ಸರ್ವಗತನಾದ ನಾನು ಕೆಲವು ವಸ್ತುಗಳಿಗೆ ಆಧಿಕ್ಯಪ್ರದನಾಗಿ ಅಲ್ಲಿ ವಿಶೇಷಸನ್ನಿಧಾನವನ್ನಿಟ್ಟಿರುವುದು ನನ್ನ ಮಹಿಮೆಗಳ ಅಭಿವ್ಯಕ್ತಿಗಾಗಿ ಎಂದು ತಿಳಿ (೩೯). ಗೋವನ್ನು ಕೊಂಬಿನಿಂದ ಹಿಡಿತಂದು ತೋರಿಸುವಂತೆ ಇದು ಇದು ಎಂಬುದಾಗಿ ಈವರೆಗೆ ನನ್ನ ಕೆಲವು ವಿಭೂತಿರೂಪಗಳನ್ನು ಸಂಕ್ಷೇಪವಾಗಿ ಹೇಳಿದೆನು. ಆದರೆ ದಿವ್ಯವಾದ ನನ್ನ ವಿಭೂತಿರೂಪಗಳಿಗೆ ಅವಧಿಯಿಲ್ಲ—ಕೊನೆಯಿಲ್ಲ; ಹೇಳಿಮುಗಿಸಲು ಸಾಧ್ಯವಿಲ್ಲ (೪೦)

ಅರ್ಜುನ—ನಿನ್ನ ವಿಭೂತಿಗಳ ಮುಖ್ಯಲಕ್ಷಣವನ್ನಾದರೂ ಹೇಳು. ಯಾವ ಲಕ್ಷಣದಿಂದ ಇಲ್ಲಿ ನಿನ್ನ ವಿಭೂತಿರೂಪವಿದೆಯೆಂದೂ, ಇದು ನಿನ್ನ ಮಹಿಮೆಯೆಂದೂ, ತಿಳಿಯಲಿ ?

ಶ್ರೀಕೃಷ್ಣ— ಯಾವ ವಸ್ತು ಸ್ವಜಾತಿಯಲ್ಲಿ ಉತ್ತಮವೆನಿಸಿರುವುದೋ, ಯಾವ ವಸ್ತು ಸಂಪದಭಿವೃದ್ಧಿಯುಕ್ತವಾದುದೋ ಅದು ನನ್ನ ತೇಜೋ-ರೂಪವಾದ ಅಂಶದಿಂದ ಸಹಿತವಾದುದೆಂದೂ, ಅಲ್ಲಿ ನನ್ನ ವಿಭೂತಿರೂಪವಿರುವುದೆಂದೂ ತಿಳಿ. (೪೧) ಇರಲಿ, ಅರ್ಜುನ! 'ರವಿ' ಮೊದಲಾದ ಬಹುವಸ್ತುಗಳಲ್ಲಿರುವ ಈ ಪೂರ್ವೋಕ್ತಪರಿಮಿತವಿಭೂತಿರೂಪಗಳ ವಿಸ್ತಾರ ಜ್ಞಾನದಿಂದ ವ್ಯಾಪ್ತವಾದ ಜ್ಞಾನಕ್ಕೆ ಅಧಿಕಾರಿಯಾದ ನಿನಗೇನು ಪ್ರಯೋಜನ!

ಅರ್ಜುನ— ಹಾಗಾದರೆ ಈವರೆಗೆ ಫಲವಿಲ್ಲದುದನ್ನು ಉಪದೇಶಿಸಿದೆಯೊ, ದೇವ?

ಶ್ರೀಕೃಷ್ಣ—ಅರ್ಜುನ! ಹಾಗಲ್ಲ, ನಾನು ವ್ಯರ್ಥೋಪದೇಶವನ್ನು ಮಾಡುವೆನೇ ? ಈ ವಿಭೂತಿರೂಪಗಳ ಜ್ಞಾನವು ದೊಡ್ಡ ಅಧಿಕಾರಿಯಾದ ನಿನಗೆ ಅಲ್ಪಫಲವನ್ನು ಕೊಡತಕ್ಕದ್ದೆಂದು ತಿಳಿ. ನಿನ್ನ ಯೋಗ್ಯತೆಗೆ ತಕ್ಕ ಪೂರ್ಣಫಲವನ್ನು ದೊರಕಿಸುವುದಿಲ್ಲ.

ಅರ್ಜುನ— ನನ್ನ ಯೋಗ್ಯತೆಗೆ ತಕ್ಕ ಪೂರ್ಣಫಲವನ್ನು ಕೊಡದ, ಈ ಉಪದೇಶವು, ಫಲವುಳ್ಳದಾದರೂ ವ್ಯರ್ಥವಲ್ಲವೇ ?

ಶ್ರೀಕೃಷ್ಣ— ನನ್ನ ಈ ವಿಭೂತಿರೂಪಗಳ ಮಹಿಮೆಯನ್ನು ನಿರೂಪಿಸಿದುದು, ವ್ಯಾಪ್ತವಾದ ನನ್ನ ವಿಶ್ವರೂಪದ ಜ್ಞಾನಕ್ಕೆ ನಿನ್ನನ್ನು ಸಿದ್ಧಗೊಳಿಸಲಿಕ್ಕಾಗಿ, ತಿಳಿಯಿತೇ ? ಅಲ್ಲದೇ ನನ್ನ ಸಾಮಾನ್ಯವಿಶೇಷಗಳೆಂಬ ಉಭಯಜ್ಞಾನದಿಂದಲೇ ಸಿದ್ಧಿಯು ದೊರಕುವುದು ; ವಿಶೇಷಜ್ಞಾನ-ಮಾತ್ರದಿಂದ ದೊರಕದು. ಮುಖ್ಯಫಲವು ಅವರವರ ಯೋಗ್ಯತಾನುಸಾರವಾದ ಜ್ಞಾನದಿಂದಲೇ ಲಭ್ಯವೆಂಬುದು ನಿಜ. ನೀನಾದರೋ ಮಹಾ-ಫಲಾಧಿಕಾರಿಯಾದ್ದರಿಂದ ಉಭಯಜ್ಞಾನಕ್ಕೂ ಅರ್ಹನಾಗಿರುವಿ.

ಅರ್ಜುನ—ಹೇ ಸ್ವಾಮಿ! ನಾನು ಮುಖ್ಯವಾಗಿ ಗ್ರಹಿಸಬೇಕಾದ ಅಂಶವೇನು?

ಶ್ರೀಕೃಷ್ಣ—ನನ್ನ ಒಂದಂಶದಿಂದ ಪ್ರಮಾಣ ಪ್ರಮಿತವಾದ ಈ ಸರ್ವ-ಜಗತ್ತನ್ನೂ ವ್ಯಾಪಿಸಿರುವೆನು. ಸರ್ವಾಂಶದಿಂದ ವ್ಯಾಪಿಸಲು ಇಂತಹ ಸಹಸ್ರಾರುಜಗತ್ತುಗಳಾದರೂ ಸಾಲದು. ಈ ವಿಧವಾದ ಪರ್ಯವಸಾನ-ರಹಿತವಾದ ವ್ಯಾಪ್ತಿಯುಳ್ಳವನೆಂದು (ಅನಂತನೆಂದು) ತಿಳಿ. ಆದರೆ ಪೂರ್ವೋಕ್ತಪರಿಚ್ಛಿನ್ನವಿಭೂತಿರೂಪಗಳ (ಆಯಾ ಶ್ರೇಷ್ಠವಸ್ತುಗತವಾದ ರೂಪಗಳ) ಜ್ಞಾನವು ವ್ಯರ್ಥವೆಂದು ಶಂಕಿಸಬೇಡ. ನನ್ನನ್ನು ಸರ್ವವಿಶೇಷ-ಯುಕ್ತಪರದೇವತೆಯೆಂದು ತಿಳಿಯದೇ ಯಾರೂ ಎಂದೂ ಮುಕ್ತರಾಗುವುದಿಲ್ಲ. ಆದ್ದರಿಂದ ಉಕ್ತವಿಭೂತಿರೂಪಗಳ ಜ್ಞಾನವು ನಿನಗಾದರೂ ಅವಶ್ಯಕವೇ ಸರಿ.

ಹತ್ತನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೧.

[ಸಂಕ್ಷೇಪವಾಗಿ ಸೂಚಿತವಾದ ವ್ಯಾಪ್ತರೂಪವನ್ನು ಬುದ್ಧ್ಯಾರೋಹ ಮಾಡಿಕೊಂಡು ಧ್ಯಾನಿಸುವುದು ಕಷ್ಟಸಾಧ್ಯವಾದುದರಿಂದ, ಭಗವಂತನು, ಧ್ಯಾನಸೌಕರ್ಯಕ್ಕಾಗಿ ಅದನ್ನು ಈ ಅಧ್ಯಾಯದಲ್ಲಿ ವಿಸ್ತರಿಸುತ್ತಾನೆ.]

ಅರ್ಜುನ—ಹೇ ಸ್ವಾಮಿ! ನನ್ನ ಅನುಗ್ರಹಾರ್ಥವಾಗಿ ನೀನು ಉಪದೇಶಿಸಿದ ಉತ್ಕೃಷ್ಟವೂ ರಹಸ್ಯವೂ ಆದ ಅಧ್ಯಾತ್ಮವಿದ್ಯೆಯಿಂದ, ನನ್ನ ಬಂಧುಸ್ನೇಹರೂಪವಾದ ಮೋಹವು ದೂರವಾಯಿತು. (೧) ಹೇ ಕಮಲ-ಪತ್ರಾಕ್ಷ! ಸಕಲಜಗತ್ತಿನ ಉತ್ಪತ್ತಿವಿನಾಶಾದಿಗಳು ನಿನ್ನಿಂದಲೇ ಆಗುವುವೆಂಬ ನಿನ್ನ ಅವ್ಯಯವಾದ ಮಹಿಮೆಯನ್ನು ನಿನ್ನಿಂದಲೇ ವಿಸ್ತಾರವಾಗಿ ಶ್ರವಣಮಾಡಿದ ಮಹಾಭಾಗ್ಯವು ನನಗೆ ಲಭಿಸಿತು. (೨) ಹೇ ಪರಮೇಶ್ವರ! ನಿನ್ನ ಉಪದೇಶಗಳ ಸತ್ಯತೆಯನ್ನು ಮನಗಂಡೆನು. ಹೇ ಪುರುಷೋತ್ತಮ!

ಅಚಿಂತ್ಯಶಕ್ತ್ಯುಪೇತವಾದ ನಿನ್ನ ವಿಶ್ವರೂಪವನ್ನು ನೋಡಲಾಶಿಸುವೆನು. (೩) ಆ ನಿನ್ನ ರೂಪವನ್ನು ನೋಡಲು ನಾನು ಅರ್ಹನೆಂದು ನೀನು ಭಾವಿಸಿದರೆ, ಹೇ ಯೋಗೇಶ್ವರ! ಹೇ ಸರ್ವಶಕ್ತ! ಅದನ್ನು ನನಗೆ ಅನುಗ್ರಹಿಸಿ ತೋರಗೊಡು. ಇಂದ್ರಿಯಾತೀತವಸ್ತುಗಳೂ ಸಹ, ನೀನಿಚ್ಛಿಸಿದರೆ, ನಮಗೆ ತೋರಬಲ್ಲವು. (೪)

ಶ್ರೀಕೃಷ್ಣ—ಹೇ ಪಾರ್ಥ! ಶುಕ್ಲಾದಿ ವಿವಿಧವರ್ಣಗಳುಳ್ಳ ದಿವ್ಯವಾದ ನನ್ನ ವಿವಿಧರೂಪಗಳನ್ನು ನೋಡು.

ಅರ್ಜುನ— ವ್ಯಾಪ್ತವಾದ ವಿಶ್ವರೂಪವನ್ನು ನೋಡಬಯಸುವೆನೆಂದು ವಿಜ್ಞಾಪಿಸಿಕೊಂಡೆನಲ್ಲವೇ! ಇದೇನು, ಬಹುರೂಪಗಳನ್ನು ನೋಡೆಂದು ವಿಧಿಸುವಿ. ಯಾವ ರೂಪಗಳನ್ನು ತೋರಿಸುವಿ, ದೇವ?

ಶ್ರೀಕೃಷ್ಣ—ಪಾರ್ಥ! ನಿನ್ನ ಪ್ರಾರ್ಥನೆಯನ್ನೇ ಸಲ್ಲಿಸುವೆನು. ವಿಶ್ವ-ರೂಪವನ್ನೇ ತೋರಿಸುವೆನು. ನನ್ನ ಅಚಿಂತ್ಯಶಕ್ತಿಯಿಂದ ಒಂದೇ ರೂಪಕ್ಕೆ ವಿಶೇಷ ಬಲದಿಂದ ಅನಂತರೂಪಗಳ ಸಮುದಾಯಾತ್ಮಕತ್ವವೂ ಇರುವುದು. ಅದನ್ನೇ ತೋರುವೆನು, ನೋಡು. (೫)

ಅರ್ಜುನ—ಆ ರೂಪವನ್ನು ನೋಡೆಂದು ಆಜ್ಞಾಪಿಸುವಿ. ಆ ರೂಪದಲ್ಲಿ ವಿಶೇಷವೇನು?

ಶ್ರೀಕೃಷ್ಣ—ನೋಡು, ಭಾರತ! ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ಅಶ್ವಿನೀದೇವತೆಗಳು, ನಲವತ್ತೊಂಭತ್ತು ಮರುತ್ತರು, ಹಾಗೂ ಹಿಂದೆಂದೂ ನೋಡದ ಅದ್ಭುತಗಳೆಲ್ಲವೂ ಅಲ್ಲಿರುವುವು. (೬) ಹೇ ಗುಡಾಕೇಶ! ಚರಾಚರಸರ್ವಜಗತ್ತು ಈ ನನ್ನ ರೂಪದ ಏಕದೇಶದಲ್ಲಿರುವುದನ್ನು ಇಂದು ನೋಡು. ಇನ್ನೂ ಏನೇನನ್ನು ನೋಡಬೇಕೆಂದಿರುವಿಯೋ ಅವೆಲ್ಲವನ್ನೂ ಅಲ್ಲಿ ಕಾಣುವಿ. (೭) ಅರ್ಜುನ! ನೀನು ನೋಡಲುತ್ಸಾಹಿಸುತ್ತಿರುವಿ, ನಾನಾದರೂ ನೋಡೆಂದು ಹೇಳುತ್ತಿರುವೆನು. ಆದರೆ ಈ ನಿನ್ನ ಕಣ್ಣುಗಳಿಂದ ಆ ರೂಪವನ್ನು ನೋಡಲಾರೆ. ದಿವ್ಯದೃಷ್ಟಿಯನ್ನು ಕೊಡುವೆನು; ಆ ಅಲೌಕಿಕ ದರ್ಶನಶಕ್ತಿಯಿಂದ ನನ್ನ ಈಶ್ವರೀಸಾಮರ್ಥ್ಯವನ್ನು ಪ್ರತ್ಯಕ್ಷ ನೋಡು. (೮)

ಸಂಜಯ—ಹೀಗೆ ಮಾತನಾಡಿ, ಶ್ರೀಕೃಷ್ಣನು ವಿಶ್ವರೂಪವನ್ನು ತೋರಗೊಟ್ಟನು. ಯಜ್ಞಾದಿಅನಂತಪೂಜಾಸ್ಥಾನಗಳಲ್ಲಿ, ಏಕಕಾಲದಲ್ಲಿ ತನ್ನ ಸನ್ನಿಧಾನವನ್ನಿಟ್ಟು, ಭಕ್ತರಿಂದ ಅರ್ಪಿಸಲ್ಪಡುವ ಅನಂತಪೂಜಾ-ಸಾಧನಪದಾರ್ಥಗಳನ್ನು ಸ್ವೀಕರಿಸುವ ಶ್ರೀಹರಿಯೇ, ಕೃಷ್ಣರೂಪದಿಂದ ನಿಂತಿರುವನು; ಈತನೇ ಮಹಾಯೋಗೇಶ್ವರನು; ಅಪ್ರಾಕೃತಸ್ವರೂಪಿಯು. (೯) ಕೃಷ್ಣಾನುಗ್ರಹದಿಂದ ಅರ್ಜುನನು ಕಂಡ ಆ ವಿಶ್ವರೂಪವು ಅನಂತ ಮುಖಗಳುಳ್ಳದ್ದು; ಅನಂತ ಕಣ್ಣುಗಳುಳ್ಳದ್ದು; ಅನೇಕ ಅದ್ಭುತಗಳನ್ನು ಕಾಣಿಸಿಕೊಡುವ ದಿವ್ಯರೂಪವು. ಅದು, ವಿಲಕ್ಷಣವಾದ ಆಭರಣಗಳಿಂದಲೂ, ಎತ್ತಿಹಿಡಿಯಲ್ಪಟ್ಟ ಅನೇಕ ಆಯುಧಗಳಿಂದಲೂ ಶೋಭಿಸುತ್ತಿರುವುದು. (೧೦) ಲೋಕವಿಲಕ್ಷಣವಾದ ಮುತ್ತಿನಹಾರಗಳಿಂದಲೂ, ಪುಷ್ಪಹಾರಗಳಿಂದಲೂ, ದಿವ್ಯಗಂಧಾನುಲೇಪನದಿಂದಲೂ ಸರ್ವಾಶ್ಚರ್ಯವಾದ ಆ ರೂಪವನ್ನು ಕಂಡು, ಅರ್ಜುನನು ಬೆರಗಾದನು. ಆ ದೇವೋ-ತ್ತಮನು ದೇಶಕಾಲಗುಣಗಳಿಂದ ಅಪರಿಚ್ಛಿನ್ನನು (ವ್ಯಾಪ್ತನು); ವಿಶ್ವ-ತೋಮುಖನು. (೧೧) ಆ ಮಹಾನುಭಾವನ ಪ್ರಕಾಶವು, ಏಕಕಾಲದಲ್ಲಿ ಅನಂತಸೂರ್ಯರ ಉದಯದಿಂದಾಗುವ ಪ್ರಕಾಶದಂತಿರುವುದೆನ್ನಬಹುದು. ಬೇರೆ ದೃಷ್ಟಾಂತವನ್ನು ಬಗೆಯಲು ಸಾಧ್ಯವೇ! (೧೨) ಆ ದೇವದೇವನ ದೇಹದ ಏಕದೇಶದಲ್ಲಿ, ದೇವ, ದಾನವ, ಮಾನವಾದಿ ಭೇದದಿಂದ ಬಹುಪ್ರಕಾರವಾದ ಈ ವಿಶಿಷ್ಟ ಜಗತ್ತನ್ನೂ ಅರ್ಜುನನು ಕಂಡನು. (೧೩) ಆಶ್ಚರ್ಯಭರಿತನಾದ ಧನಂಜಯನು, ರೋಮಾಂಚಗೊಂಡು, ಸಾಷ್ಟಾಂಗವಾಗಿ ನಮಸ್ಕರಿಸಿ, ಅಂಜಲಿಬದ್ಧನಾಗಿ ತಲೆಬಾಗಿ ನಿಂದು, ಹೇ ಧೃತರಾಷ್ಟ್ರ! ಹೀಗೆ ಮಾತನಾಡಿದನು.

ಅರ್ಜುನ—ಹೇ ದೇವ! ನಿನ್ನ ಈ ದೇಹದಲ್ಲಿ ಎಲ್ಲ ದೇವತೆಗಳನ್ನೂ, ಸಕಲಪ್ರಾಣಿವಿಶೇಷಸಮೂಹಗಳನ್ನೂ ಕಾಣುತ್ತಿರುವೆನು. ಚತುರ್ಮುಖಬ್ರಹ್ಮನನ್ನೂ, ಆತನ ತೊಡೆಯಲ್ಲಿ ಕುಳಿತಿರುವ ರುದ್ರನನ್ನೂ, ಋಷಿಗಳನ್ನೂ, ಅದ್ಭುತಸರ್ಪಗಳನ್ನೂ ನೋಡುತ್ತಿರುವೆನು. (೧೫) ಎನದ್ಭುತವಿದು, ಮಹಾನುಭಾವ! ಈ ರೂಪವು ಅಸಂಖ್ಯವಾದ ಬಾಹು, ಉದರ,

ಮುಖ, ಕಣ್ಣುಗಳುಳ್ಳದ್ದಾಗಿದೆ. ಎಲ್ಲಿ ನೋಡಿದರೂ ಅಪರಿಮಿತವಾದ ರೂಪ ಗಳಿವೆ. ಇದರ ಆದಿ, ಮಧ್ಯ, ಅಂತಗಳನ್ನು ಕಾಣೆನು. (೧೬) ಶಿರಸ್ಸಿನಲ್ಲಿ ಕಿರೀಟವಿದೆ. ಹಸ್ತಗಳಲ್ಲಿ ಗದೆ, ಚಕ್ರಗಳನ್ನು ಧರಿಸಿದೆ. ತೇಜಃಪುಂಜವಾದ ಈ ರೂಪವು ಎಲ್ಲೆಡೆ ವ್ಯಾಪಿಸಿ ಬೆಳಗುವ ಅಗ್ನಿಸೂರ್ಯರಂತೆ ವಿರಾಜಿಸು ತ್ತಿದೆ. ಅಮಿತಕಾಂತಿಯುಕ್ತನಾದ ನಿನ್ನನ್ನು ನಾನೇನು ಸ್ತುತಿಸಲಿ! ನನ್ನಿಂದ ನೋಡಲಸಾಧ್ಯವಾಗಿದೆ, ದೇವ! (೧೭) ನೀನೇ ಪರಮಾಕ್ಷರನು; ಜ್ಞೇಯ (ತಿಳಿಯಬೇಕಾದ) ವಸ್ತುಗಳಲ್ಲಿ ಶ್ರೇಷ್ಠನು; ವಿಶ್ವದ ಮುಖ್ಯಾ-ಶ್ರಯನು; ನೀನು ಹ್ರಾಸರಹಿತನು; ಅನಾದಿಪರಂಪರೆಯುಳ್ಳ ಧರ್ಮದ ರಕ್ಷಕನು; ನೀನೇ ಅನಾದಿನಿತ್ಯನಾದ ಪೂರ್ಣಷಡ್ಗುಣನೆಂದು ನನಗೊಪ್ಪಿತು. (೧೮) ನಿನ್ನ ಮಹಿಮೆಗಳಿಗೆ (ಗುಣಗಳಿಗೆ) ಆದಿಮಧ್ಯಾಂತಗಳಿಲ್ಲ; ಸರ್ವ-ರಕ್ಷಕವಾದ ಅನಂತಬಾಹುಗಳುಳ್ಳವನು; ಸೂರ್ಯಚಂದ್ರರು ನಿನ್ನ ನೇತ್ರ ಗಳನ್ನಾಶ್ರಯಿಸಿಕೊಂಡಿರುವರು. ಅವರು ನಿನ್ನ ನೇತ್ರಗಳಿಂದ ಜನಿಸಿದ ವರೂ ಅಹುದು. ನಿನ್ನ ಅನುಗ್ರಹದಿಂದ ದೇವತೆಗಳೂ ಬಹುರೂಪಿಗಳೇ. ಒಂದೊಂದು ರೂಪದಿಂದ ಅವರು, ನಿನ್ನ ಒಂದೊಂದು ಅವಯವದಿಂದ ಜನಿಸುವರು. ಚಂದ್ರನು ನಿನ್ನ ಮನಸ್ಸಿನಿಂದಲೂ ಜನಿಸಿದವನೇ. ಅಗ್ನಿಯು ನಿನ್ನ ಮುಖದಿಂದ ಜನಿಸಿ ಮುಖವನ್ನಾಶ್ರಯಿಸಿಕೊಂಡು ಪ್ರಕಾಶಿಸುವನು. ನೀನಾದರೋ, ಸ್ವಪ್ರಕಾಶದಿಂದ ಈ ವಿಶ್ವವನ್ನೇ ಪ್ರಕಾಶಗೊಳಿಸುತ್ತಿರುವಿ. (೧೯) ವಿಶಾಲವಾದ, ಅಂತರಿಕ್ಷ ಮತ್ತು ಭೂಮಿಗಳ ಈ ಮಧ್ಯಭಾಗವು ಇಲ್ಲಿ ಕಾಣುತ್ತಿರುವ ನಿನ್ನ ಒಂದೇ ರೂಪದಿಂದ ವ್ಯಾಪಿಸಲ್ಪಟ್ಟಿದೆ. ಇತರ ರೂಪಗಳು ಸಕಲದಿಕ್ಕುಗಳನ್ನು ವ್ಯಾಪಿಸಿವೆ. ಅತ್ಯದ್ಭುತವೂ ಭಯಂಕರವೂ ಆದ ಈ ವಿಶ್ವರೂಪವನ್ನು ಕಂಡು, ಹೇ ಮಹಾನುಭಾವ! ಮೂರುಲೋಕ ಗಳೂ ಭಯಗೊಂಡಿರುವುದನ್ನು ಕಾಣುತ್ತಿರುವೆನು. ಭೂಭಾರಹರಣಕ್ಕಾಗಿ ಈ ಉಗ್ರರೂಪವನ್ನು ತಾಳಿರುವೆಯಾ? ನೀನು ಉಗ್ರನೇ? ಅಲ್ಲ, ಪ್ರಭೋ! ಕೆಲವರಿಗೆ ಸಂಹಾರಕಾರಣನಾದುದರಿಂದಲೂ, ನಾನು ಮೊದಲಾದ ಅನ್ಯ ಭಕ್ತವರ್ಗಕ್ಕೆ ಈ ರೂಪದರ್ಶನದ ಅಭ್ಯಾಸವಿಲ್ಲದಪ್ರಯುಕ್ತ ಉಗ್ರನಂತೆ ಕಾಣುತ್ತಿರುವಿ.

ಹೇ ದೇವ! ನೀನು ಹೀಗೆ ಉಗ್ರನಂತೆ ದರ್ಶನವೀಯುತ್ತಿರುವುದರಿಂದ ನಾವು ಭಯಗೊಂಡಿರುವೆವು. ನೋಡಿದ ಅಭ್ಯಾಸವುಳ್ಳ ಉತ್ತಮಭಕ್ತರಿಗೆ ಈ ದರ್ಶನವೂ ಆನಂದಪ್ರದವೇಸರಿ. (೨೦) ಮುಕ್ತದೇವಸಮೂಹಗಳು ನಿನ್ನನ್ನು ಪ್ರವೇಶಿಸುತ್ತಿವೆ. ಅವರಿಗೆ ಪ್ರವೇಶನಿರ್ಗಮಗಳು ಸ್ವೇಚ್ಛೆಯಿಂದಲೇ ಸಂಭವಿಸುತ್ತವೆಂಬ ಪ್ರಮೇಯವನ್ನು ಪ್ರತ್ಯಕ್ಷನೋಡಿ ತಿಳಿಯುತ್ತಿರುವೆನು. ಇನ್ನು ಕೆಲವು ದೇವತೆಗಳು ಭೀತಿಯಿಂದ ಅಂಜಲಿಬದ್ಧರಾಗಿ ನಿನ್ನನ್ನು ಸ್ತುತಿಸುತ್ತಿರುವರು. ಮಹರ್ಷಿಗಳು ಮತ್ತು ಸಿದ್ಧಜನ-ಸಮೂಹಗಳು, ಗುಣಪೂರ್ಣನೆಂದು ನಿನ್ನನ್ನು ಬಹುಪರಿಯಿಂದ ಸ್ತುತಿಸುತ್ತಿವೆ. (೨೧) ರುದ್ರರು, ಆದಿತ್ಯರು, ವಸುಗಳು, ಸಾಧ್ಯರು, ವಿಶ್ವೇ-ದೇವತೆಗಳು, ಅಶ್ವಿನೀದೇವತೆಗಳು, ಮರುತರು, ಪಿತೃದೇವತೆಗಳು, ಗಂಧರ್ವರು, ಯಕ್ಷರು, ಅಸುರರು, ಸಿದ್ಧರು ಮೊದಲಾದವರ ಸಮೂಹಗಳೆಲ್ಲವೂ ಆಶ್ಚರ್ಯದಿಂದ ನಿನ್ನನ್ನು ವೀಕ್ಷಿಸುತ್ತಿರುವರು. (೨೨) ಹೇ ಅನಂತಶಕ್ತ! ಅನಂತಮುಖ, ನೇತ್ರ, ಬಾಹು, ತೊಡೆ, ಪಾದ, ಉದರ, ಮೊದಲಾದ ಅವಯವಗಳಿಂದ ಕೂಡಿದ, ಅನಂತ ಕೋರೆದಾಡೆಗಳಿಂದ ವಿರೂಪವಾದ ಈ ನಿನ್ನ ರೂಪವನ್ನು ಕಂಡು ಅನೇಕಭಕ್ತವರ್ಗಗಳು ಭೀತಿಗೊಂಡಿವೆ. ನಾನು ಬಹುವ್ಯಥಿತನಾಗಿರುವೆನು. (೨೩) ಹೇ ವಿಷ್ಣೋ! ಮುಗಿಲು ಮುಟ್ಟುತ್ತಿರುವ ಈ ವಿಶ್ವವ್ಯಾಪ್ತರೂಪವನ್ನೂ, ಇದರ ಪ್ರಕಾಶವನ್ನೂ, ಬಹುವಿಧವರ್ಣಗಳನ್ನೂ, ತೆರೆದ ಮುಖವನ್ನೂ, ಪ್ರಜ್ವಲಿಸುವ ವಿಶಾಲವಾದ ಕಣ್ಣುಗಳನ್ನೂ ನೋಡಿ ನನ್ನ ಮನಸ್ಸು ಅತ್ಯಂತಭಯಗ್ರಸ್ತವಾಗಿದೆ; ಧೈರ್ಯವನ್ನು ತಾಳಲಾರೆನು; ಸುಖವನ್ನುಹೊಂದಲಾರೆನು. (೨೪) ಕೋರೆದಾಡೆಗಳಿಂದ ವಿರೂಪವಾದ, ಪ್ರಳಯಾಗ್ನಿಸದೃಶಗಳಾದ ನಿನ್ನ ಮುಖಗಳನ್ನು ನೋಡಿ, ಹೇ ಜಗನ್ನಾಥ! ದಿಕ್ಕು ತೋಚದು; ಸುಖವನ್ನು ಕಾಣೆನು. ಪ್ರಸನ್ನನಾಗು, ದೇವೋತ್ತಮ! (೨೫) ಭೂಪಾಲಕರ ಸಮೂಹಗಳಿಂದ ಯುಕ್ತರಾದ ಈ ಧೃತರಾಷ್ಟ್ರಪುತ್ರರೂ, ಭೀಷ್ಮ, ದ್ರೋಣ, ಕರ್ಣ, ಹಾಗೂ ನಮ್ಮ ವೀರಾಗ್ರೇಸರಿಂದಲೂ ಸಹಿತವಾದ ಈ ಕುರುಪಾಂಡವಸೈನ್ಯವು, ವೇಗವಾಗಿ ನಿನ್ನ ಮುಖವನ್ನು ಪ್ರವೇಶಿಸು

ತ್ತಿದೆ. (೨೬) ಕೆಲವರು ತಕ್ಷಣದಲ್ಲಿ ಮರಣಹೊಂದುತ್ತಿರುವರು. ಕೆಲವರು ನಿನ್ನ ಭಯಾನಕ ದವಡೆಗಳಲ್ಲಿ ಸಿಕ್ಕಿರುವರು; ಮತ್ತೆ ಕೆಲವರು ಹಲ್ಲುಗಳ ಮಧ್ಯದಲ್ಲಿ ಸಿಕ್ಕಿರುವರು, ಅವರ ತಲೆಗಳು ಒಡೆದು ಪುಡಿಯಾಗುತ್ತಿವೆ. ಮಂದದೃಷ್ಟಿಗಳಾದವರು, ಇವರೆಲ್ಲರೂ ಈಗಲೇ ಮರಣಗ್ರಸ್ತರಾಗಿರುವುದನ್ನು ಕಾಣದಿರಬಹುದು. ಹಿಂದೆ ಪುರೂರವರಾಜನು ಜರೆಯಿಂದ (ಮುಪ್ಪಿನಿಂದ) ಗ್ರಸ್ತನಾಗಿದ್ದುದನ್ನು ಸೂಕ್ಷ್ಮದೃಷ್ಟಿಯ ಅಶ್ವಿನೀದೇವತೆಗಳು ಕಂಡು, ಅಭ್ಯಂಗಸ್ನಾನ, ವಸ್ತ್ರಾಲಂಕಾರಗಳಿಂದ ಹೃಷ್ಟಪುಷ್ಟನಾದ ತನ್ನನ್ನು ಸುಂದರನೆಂದು ಭಾವಿಸಿ, ತಮ್ಮನ್ನು ಕಾಣಲು ಬಂದ ರಾಜನನ್ನು ಅಪಹಾಸಮಾಡಲಿಲ್ಲವೇ ? ನೀನಿತ್ತ ದಿವ್ಯದೃಷ್ಟಿಯಿಂದ ಈ ಮಹಾವೀರರೆಲ್ಲ ಮೃತ್ಯುಗ್ರಸ್ತರಾಗಿರುವುದನ್ನು ಕಂಡ ನಾನು, ಸತ್ಯವನ್ನೇ ನೋಡುತ್ತಿರುವೆನೆಂದು ಮನಗಂಡಿರುವೆನು. (೨೭) ನದೀಪ್ರವಾಹಗಳು ಸಮುದ್ರಾಭಿ-ಮುಖವಾಗಿ ವೇಗದಿಂದ ಓಡುವಂತೆ ಮನುಷ್ಯಲೋಕದ ಈ ವೀರರೆಲ್ಲರೂ, ಪ್ರಜ್ವಲಿಸುತ್ತಿರುವ ನಿನ್ನ ಮುಖದತ್ತ ಧಾವಿಸುತ್ತಿರುವರು. ಯದ್ಯಪಿ ಈ ವೀರರು ಈ ವ್ಯಾಪಾರವುಳ್ಳವರಲ್ಲ. ನೀನೇ ನಿನ್ನ ಅನೇಕ ಮುಖಗಳಿಂದ ಉಭಯ ಸೇನೆಗಳ ಯೋಧರನ್ನು ಗ್ರಾಸಮಾಡುತ್ತಿರುವಿ. ಹೀಗೆ ಅವರು ನಿನ್ನ ಮುಖವನ್ನೇ ಸೇರುವುದರಿಂದ, ಪ್ರವೇಶಿಸುತ್ತಿರುವರೆಂಬ ನನ್ನ ಮಾತು ಔಪಚಾರಿಕವೇಸರಿ. ಇದೇ ಅರ್ಥದಲ್ಲಿಯೇ ನಾನು ಕಾಣುತ್ತಿರುವ ಇತರ ವಿಷಯುಗಳನ್ನೂ ವಿಜ್ಞಾಪಿಸಿಕೊಳ್ಳುತ್ತಿರುವೆನು. ದೇವ! (೨೮) ಉರಿಯುತ್ತಿರುವ ಬೆಂಕಿಯನ್ನು, ತಮ್ಮ ನಾಶಕ್ಕಾಗಿಯೇ ಪ್ರವೇಶಿಸುವ ಪತಂಗಗಳಂತೆ ಈ ಸೈನಿಕರು ನಿನ್ನ ಮುಖವನ್ನು ತಮ್ಮ ದೇಹನಾಶಕ್ಕಾಗಿಯೇ ಪ್ರವೇಶಿಸುತ್ತಿರುವರು. (೨೯) ನೀನಾದರೋ ಈ ಎಲ್ಲರನ್ನೂ ಜ್ವಾಲೆಗಳಿಂದ ಕೂಡಿದ ನಿನ್ನ ಮುಖಗಳಿಂದ, ಎಲ್ಲಕಡೆಯಿಂದ ಗ್ರಾಸಮಾಡಿ ಚಪ್ಪರಿಸುತ್ತಿರುವಿ. ಹೇ ವಿಷ್ಣೋ! ನಿನ್ನ ತೀಕ್ಷ್ಣವಾದ ಪ್ರಭೆಯು, ಸಮಸ್ತ ಜಗತ್ತನ್ನು, ತನ್ನ ಪ್ರಕಾಶನಶಕ್ತಿಗಳಿಂದ ತುಂಬಿ ದಹಿಸುತ್ತಲಿದೆ. (೩೦) ನನಗೆ ತಿಳಿಯದ ನಿನ್ನ ಗುಣಕರ್ಮಗಳ ವಿಶೇಷಜ್ಞಾನಾರ್ಥವಾಗಿ ಕೇಳುವೆನು, ಹೇ ದೇವೋತ್ತಮ! ನೀನೇಕೆ ಈ ಬಗೆಯ ಉಗ್ರರೂಪವುಳ್ಳವ

ಗಿರುವಿ, ಈ ರೂಪದ ಗುಣಶಕ್ತಿಗಳೇನು ? ಜಗತ್ತಿನ ಜನ್ಮಾದಿ ಸಕಲಕ್ಕೂ ಮೂಲಕಾರಣನಾದ ನಿನ್ನ ಈಗಿನ ಉದ್ಯಮದ ಉದ್ದೇಶವನ್ನು ತಿಳಿಯಲಾರೆನು, ನಿನ್ನಿಂದಲೇ ತಿಳಿಯಲಿಚ್ಛಿಸುವೆನು, ಅನುಗ್ರಹಿಸು. (೩೧)

ಶ್ರೀಕೃಷ್ಣ—ಅರ್ಜುನ! ನಾನು ಕಾಲನಾಮಕನು. ಷಡ್ಗುಣಪೂರ್ಣನಾದ್ದರಿಂದಲೂ, ಜಗತ್ತಿನ ಬಂಧ, ಸಂಹಾರ, ಬೋಧ, ವಿದ್ರಾವಣಾದಿ ಕರ್ಮಯುಕ್ತನಾದ್ದರಿಂದಲೂ ಕಾಲನೆನಿಸುವೆನು. ಈ ಉಗ್ರರೂಪವೇಕೆಂದು ಕೇಳಿದೆಯಲ್ಲವೇ? ಅನಾದಿನಿತ್ಯನಾದ ನಾನು, ದುಷ್ಟಸಂಹಾರದಿಂದ, ಭೂಭಾರ ಪರಿಹಾರ ಕಾರ್ಯವನ್ನು ಕೈಗೊಂಡಿರುವೆನು. ಯುದ್ಧ-ಭೂಮಿಯಲ್ಲಿ ನೆರೆದಿರುವ ಈ ಜನರನ್ನು ಪ್ರತ್ಯಕ್ಷವಾಗಿ ಸಂಹರಿಸಲು ಪ್ರವೃತ್ತನಾಗಿರುವೆನು. ಪರಸ್ಪರ ಸ್ಪರ್ಧೆಯಿಂದ ನಿಂತಿರುವ ಈ ಉಭಯ ಸೈನ್ಯಗಳಲ್ಲಿ ಧರ್ಮರಾಜನೇ ಮೊದಲಾದ ನಿಮ್ಮೈವರ, ಹಾಗೂ ಅಶ್ವ-ತ್ಥಾಮ, ಕೃತವರ್ಮ, ಕೃಪಾಚಾರ್ಯರವಿನಾ ಸಕಲರೂ ಮರಣ ಹೊಂದುವರು. (೩೨) ಈ ಯುದ್ಧದಲ್ಲಿ ಜಯವು ಆರಿಗೆಂದು ತಿಳಿಯೆನೆಂದು ಶಂಕಿಸಿ, ಈ ಮೊದಲು ನನ್ನನ್ನು ಪ್ರಶ್ನಿಸಿದಾಗ, 'ಗೆದ್ದರೆ ರಾಜ್ಯ, ಸತ್ತರೆ ಸ್ವರ್ಗ; ಉಭಯಪಕ್ಷಗಳೂ ಫಲವುಳ್ಳವಾದ್ದರಿಂದ ಯುದ್ಧಮಾಡು' ಎಂದೆನು, ಅಲ್ಲವೇ! ಈಗ ಅದರ ನಿಶ್ಚಯವನ್ನು ಹೇಳುತ್ತಿರುವೆನು, ನಿನಗೆ ಪರಾಜಯವಿಲ್ಲ, ಅದರ ಶಂಕೆಗೂ ಅವಕಾಶವಿಲ್ಲ; ಜಯ ನಿನ್ನದು. ಶತ್ರು-ಜಯದಲ್ಲಿ ಬಲಗೈಯಂತೆ ಎಡಗೈಯನ್ನೂ ದಕ್ಷತೆಯಿಂದ ಉಪಯೋಗಿಸಬಲ್ಲ ವೀರನೇ! ಹೇ ಸವ್ಯಸಾಚಿ! ಶತ್ರುಗಳನ್ನು ಕೊಲ್ಲು, ಕೀರ್ತಿಯನ್ನು ಗಳಿಸು, ಸಮೃದ್ಧವಾದ ರಾಜ್ಯವನ್ನು ಭೋಗಿಸು. ಈ ನಿನ್ನ ಶತ್ರುಗಳು ನೀನು ಯುದ್ಧಮಾಡುವ ಮೊದಲೇ ಹತಪ್ರಾಯರೆಂಬುದನ್ನು ಕಂಡೆಯಾ! ಕೊಲ್ಲುತ್ತಿರುವವನು ನಾನೇ, ಪ್ರತ್ಯಕ್ಷ ಸಂಹಾರದಲ್ಲಿ ನೀನು ನಿಮಿತ್ತಮಾತ್ರನು. ಅಲ್ಲಿಯೂ ನಾನೇ ನಿನ್ನಲ್ಲಿ ನಿಂತು ಕೊಲ್ಲುವೆನು, ಯೋಚಿಸಬೇಡ, ಯುದ್ಧ ಮಾಡಲು ಸಿದ್ಧನಾಗು. (೩೩) ದ್ರೋಣನು ಧನುರ್ವಿದ್ಯೋಪದೇಶಕನು; ಭೀಷ್ಮನು ಇಚ್ಛಾಮರಣಿಯು; ಜಯದ್ರಥನು, ಈತನ ತಲೆಯನ್ನು ಕೆಡವಿದಾತನ ತಲೆಯು ತಕ್ಷಣದಲ್ಲಿ ಹೋಳಾಗಲೆಂಬ ವರವನ್ನು ತಂದೆಯಿಂದ

ಪಡೆದಿರುವ ಬಲಿಷ್ಠನು; ಕರ್ಣನು, ಇಂದ್ರನ ಶಕ್ತ್ಯಾಯುಧದಿಂದ ಪ್ರಬಲನು; ಈ ಮುಂತಾದ ಅನೇಕ ಪರಾಕ್ರಮಿಗಳನ್ನು ಹೇಗೆ ಎದುರಿಸಲೆಂಬ ಚಿಂತೆಯನ್ನು ಬಿಡು. ನನ್ನಿಂದ ಸಂಹರಿಸಲ್ಪಟ್ಟಿರುವ ಈ ಎಲ್ಲರನ್ನೂ ನೀನು ಸಂಹರಿಸು. ಯುದ್ಧಮಾಡು, ಅರ್ಜುನ! ಎಲ್ಲರನ್ನೂ ನಿಶ್ಚಯವಾಗಿ ಜಯಿಸುವಿ. (೩೪)

ಸಂಜಯ—ಹೇ ಧೃತರಾಷ್ಟ್ರ! ಬ್ರಹ್ಮರುದ್ರಪ್ರೇರಕನಾದ ಕೇಶವನ ಈ ಮಾತನ್ನು ಕೇಳಿ, ಅಂಜಲಿಬದ್ಧನಾದ ಅರ್ಜುನನು, ಭಯದಿಂದ ಕಂಪಿಸಿ, ಸಾಷ್ಟಾಂಗವೆರಗಿ, ಗದ್ಗದಕಂಠದಿಂದ ಶ್ರೀಕೃಷ್ಣನನ್ನು ಕುರಿತು ಪುನಃ ಮಾತನಾಡಿದನು. (೩೫)

ಅರ್ಜುನ—ಹೇ ಹೃಷೀಕೇಶ! ನಿನ್ನ ಕೀರ್ತಿಶ್ರವಣದಿಂದ ಸಜ್ಜನ-ಲೋಕವು ಸಂತೋಷಿಸುತ್ತದೆ ಮತ್ತು ಭಕ್ತ್ಯುದ್ರೇಕವನ್ನು ಹೊಂದುತ್ತದೆ. ರಾಕ್ಷಸರು ಭಯಗೊಂಡು ದಿಕ್ಕುದಿಕ್ಕುಗಳಿಗೆ ಓಡುತ್ತಾರೆ; ಸಕಲಸಿದ್ಧ-ಸಮೂಹವು ನಮಸ್ಕರಿಸುತ್ತದೆ. ಇದು ನಿತ್ಯವೂ ಯುಕ್ತವೂ ಆದುದೇ! (೩೬) ಹೇ ಮಹಾನುಭಾವ! ಆಪ್ತಿ, ಆದಾನ, ವಿಷಯಾನುಭವ, ನಿತ್ಯ-ಸತ್ತ್ವಾದಿ ಗುಣಪೂರ್ಣನಾಗಿ, ಚತುರ್ಮುಖಬ್ರಹ್ಮನಿಗೂ ಜನ್ಮಾದಿ ಕಾರಣನಾಗಿ ಗುರುತಮನಾದ ನಿನ್ನನ್ನು ಏಕೆ ನಮಸ್ಕರಿಸದಿದ್ದಾರು? ಹೇ ಅನಂತ ದೇವೇಶ! ಜಗದಾಶ್ರಯ! ಭಾವಾಭಾವಾತ್ಮಕ ಜಗತ್ತಿನಿಂದ ಭಿನ್ನನೂ ಉತ್ತಮನೂ ಆದ ನೀನೇ ಪರಮಾಕ್ಷರನು. (೩೭) ಜಗ-ತ್ಕಾರಣನಾದ ಸ್ವಾಮಿಯು ನೀನೇ. ಪೂರ್ಣಷಡ್ಗುಣನೂ, ಸರ್ವಾಂತ-ರ್ಯಾಮಿಯೂ ಪರಮಾಶ್ರಯನೂ ಆಗಿರುವಿ. ನೀನೇ ಸರ್ವವನ್ನು ತಿಳಿದವನು; ಸರ್ವರಿಂದ ತಿಳಿಯಲ್ಪಡಬೇಕಾದ ಮುಖ್ಯವಸ್ತುವು. ಹೇ ಅನಂತರೂಪ! ಉತ್ಕೃಷ್ಟಪ್ರಕಾಶರೂಪನಾದ ನಿನ್ನಿಂದ ಈ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿರುವುದು. ದೇಶ, ಕಾಲಗುಣಗಳಿಂದ ನೀನು ಅನಂತ ನೆಂಬುದನ್ನು ತಿಳಿದೆನು. (೩೮) ಒಲಜ್ಞಾನಗಳಿಂದ ಪೂರ್ಣನಾದುದರಿಂದ ನೀನು ವಾಯುನಾಮಕನು; ದೋಷರಹಿತನಾದುದರಿಂದ ಯಮನು;

ಗಮನಶಕ್ತಿರಹಿತವಾದ ಜಗತ್ತಿನ ನೇತಾರನು—ಅತ ಏವ **ಅಗ್ನಿ**ಮುಖನು; ಭಕ್ತರನ್ನು ಸ್ವೀಕರಿಸುವವನಾದುದರಿಂದ **ವರುಣ**ನು; ಸುಖರೂಪನಾದುದರಿಂದ **ಶಶಾಂಕ**ನು; ಪ್ರಜಾರಕ್ಷಕನಾದುದರಿಂದ **ಪ್ರಜಾಪತಿ**ಯು; ಮೂಲಪುರುಷನಾದುದರಿಂದ ಸರ್ವರ **ಪ್ರಪಿತಾಮಹ**ನು; ನಿನಗೋಸ್ಕರ ಅನಂತ ನಮಸ್ಕಾರಗಳು, ಪುನಃಪುನಃ ನಿನ್ನನ್ನೇ ನಮಸ್ಕರಿಸುವೆನು. (೩೯) ಹೇ ಸರ್ವ! ಪರಿಪೂರ್ಣ! ಹಿಂದೆ, ಮುಂದೆ, ಎಡಬಲಗಳಿಂದ ನಿನಗೆ ನಮಸ್ಕಾರವು. ಹೇ ಅನಂತವೀರ್ಯ! ಅಮಿತವಿಕ್ರಮನು! 'ಸರ್ವಂ ಖಲ್ವಿದಂ ಬ್ರಹ್ಮ' ಇತ್ಯಾದಿ ಶ್ರುತಿಪ್ರತಿಪಾದ್ಯನಾದ ನೀನು ಜಗತ್ತಿನಿಂದ ಅಭಿನ್ನನಲ್ಲ. ಪರಂತು ಜಗನ್ನಿಯಾಮಕನು. ಈ ಜಗತ್ತು ಬ್ರಹ್ಮಶಬ್ದವಾಚ್ಯನಾದ ನಿನ್ನಿಂದ ಚೆನ್ನಾಗಿ ವ್ಯಾಪಿಸಲ್ಪಟ್ಟಿರುವುದರಿಂದಲೇ **ಸರ್ವ**ನೆನಿಸುವಿ. (೪೦) ಈ ಪರಿಯಾದ ನಿನ್ನ ಮಹಾಮಹಿಮೆಯನ್ನು ಮರೆತು, ಮನೋವ್ಯಗ್ರತೆಯಿಂದ, ಅಥವಾ ಸ್ನೇಹದಿಂದ ನಾನು, ಹೇ ಕೃಷ್ಣ! ಹೇ ಯಾದವ, ಹೇ ಸಖ ಎಂಬುದಾಗಿ ಬಹುಮಾನಪೂರ್ವಕವಲ್ಲದ ಶಬ್ದಗಳಿಂದ (ಅಗೌರವದಿಂದ) ಸಂಬೋಧಿಸಿರುವೆನು. ಹೇ ಅಚ್ಯುತ! ಆಡುವಾಗ, ಉಣುವಾಗ, ಮಲಗುವಾಗ, ಕೂಡುವಾಗ, ಪರಿಹಾಸದಿಂದ ಸರ್ವೋತ್ತಮನಾದ ನಿನ್ನನ್ನು ತಿರಸ್ಕಾರಕರವಾದ ಶಬ್ದಗಳಿಂದ ಅನೇಕ ವೇಳೆ ಕರೆದುದುಂಟು. ಹೇ ಅನಂತಮಹಿಮ! ಈ ಎಲ್ಲ ಅಪರಾಧಗಳನ್ನು ಕ್ಷಮಿಸೆಂದು ನಿನ್ನೆದುರಿನಲ್ಲಿ ಬೇಡುತ್ತಿರುವೆನು. (೪೨) ಹೇ ಅನುಪಮೈಶ್ವರ್ಯ! ಈ ವಿಧವಾದ ಅಸತ್ಕಾರಕ್ಕೆ ನೀನು ಸರ್ವಥಾ ಅರ್ಹನಲ್ಲ. ಪ್ರತ್ಯುತ, ಬಹುಮಾನಪೂರ್ವಕ ಪೂಜಿಸಲ್ಪಡಬೇಕಾದ ಮಹಾಮಹಿಮನು. ಚರಾಚರಜಗತ್ತಿನ ಜನಕನೂ ಗುರುವೂ ಆಗಿರುವಿ. ಹದಿನಾಲ್ಕುಲೋಕಗಳಲ್ಲಿ ನಿನ್ನ ಸಮರು ಯಾರೂ ಇಲ್ಲ—ಉತ್ತಮನೂ ಎಲ್ಲಿಯೂ ಇಲ್ಲ. (೪೩) ಆದುದರಿಂದ, ಹೇ ಮಹಾಸ್ವಾಮಿ! ದೇಹವನ್ನು ಭೂಮಿಯಲ್ಲಿ ಕೆಡಹಿ (ದಿಂಡುರುಳಿ) ನಮಸ್ಕರಿಸಿ, ಸರ್ವಸ್ತುತ್ಯನಾದ ನಿನ್ನನ್ನು ಕ್ಷಮಿಸೆಂದು ಯಾಚಿಸುವೆನು. ಹೇ ದೇವೋತ್ತಮ! ಮಗನ ಅಪರಾಧವನ್ನು ತಂದೆಯೂ, ಸ್ನೇಹಿತನ ಅಪರಾಧವನ್ನು ಸ್ನೇಹಿತನೂ, ಪತ್ನಿಯ ತಪ್ಪು

ಗಳನ್ನು ಪತಿಯೂ ಸಹಿಸುವಂತೆ, ನನ್ನ ಎಲ್ಲ ಅಪರಾಧಗಳನ್ನು ಸಹಿಸು. (೪೪) ಹೇ ದೇವೇಶ! ಹಿಂದೆ ಎಂದೂ ಕಾಣದ ಈ ನಿನ್ನ ರೂಪವನ್ನು ಕಂಡು, ಆಶ್ಚರ್ಯಚಕಿತನಾಗಿರುವೆನು. ನನ್ನ ಮನಸ್ಸು ಭಯದಿಂದ ವ್ಯಥೆಗೊಂಡಿದೆ. ಹೇ ಜಗನ್ನಿವಾಸ! ಪ್ರಸನ್ನನಾಗು, ನಿನ್ನ ಮೊದಲಿನ ರೂಪವನ್ನೇ ತೋರು. (೪೫) ಹೇ ಸಹಸ್ರಬಾಹೋ! ಗದಾಚಕ್ರಗಳನ್ನು ಧರಿಸಿದ ನಾಲ್ಕೇ ಹಸ್ತಗಳುಳ್ಳ, ಕಿರೀಟಧಾರಿಯಾದ ನಿನ್ನ ಸೌಮ್ಯರೂಪವನ್ನೇ ನೋಡಲಿಚ್ಛಿಸುವೆನು. ಹೇ ವಿಶ್ವಮೂರ್ತೇ! ಅದನ್ನೇ ತೋರಗೊಡು. (೪೬)

ಶ್ರೀಕೃಷ್ಣ—ಹೇ ಅರ್ಜುನ! ತೇಜಃಪ್ರಚುರವಾದ, ದೇಶಕಾಲಗಳಿಂದ ಅಪರಿಚ್ಛಿನ್ನವಾದ ಈ ವಿಶ್ವರೂಪವು, ಪ್ರಸನ್ನನಾದ ನನ್ನಿಂದ ನಿನಗೋಸ್ಕರ ಪ್ರದರ್ಶಿತವಾಯಿತು. ನನ್ನ ಯೋಗಸಾಮರ್ಥ್ಯದಿಂದ ತೋರಿಸಲ್ಪಟ್ಟ ಸರ್ವಕಾರಣವಾದ ಈ ನನ್ನ ರೂಪವನ್ನು ಅನ್ಯರು ಎಂದೂ ಕಾಣರು. ದುರ್ಲಭವಾದ ಈ ಭಾಗ್ಯವನ್ನು ಪಡೆದ ನೀನು, ನನ್ನಲ್ಲಿ ಅತಿಶಯವಾದ ಭಕ್ತಿಯನ್ನು ಪಡೆಯುವಿ.

ಅರ್ಜುನ—ಅನ್ಯರು ಕಾಣದ ರೂಪವೆಂದರೇನು? ಈವರೆಗೆ ಯಾರೂ ನಿನ್ನ ಈ ರೂಪವನ್ನು ಕಂಡಿಲ್ಲವೇ?

ಶ್ರೀಕೃಷ್ಣ—ನಿನಗಿಂತ ಕೀಳಾದವರು ನಿನ್ನಂತೆ ಈ ರೂಪವನ್ನು ಕಂಡಿಲ್ಲ. ತಮ್ಮ ಯೋಗ್ಯತೆಗೆ ತಕ್ಕಂತೆ ನನ್ನ ವಿಶ್ವರೂಪವನ್ನು ಕಂಡಿರುವರು. ನಿನಗಿಂತ ಉತ್ತಮರು ವಿಶೇಷವಾಗಿ ಕಂಡಿದ್ದಾರೆ. ನಿನ್ನಿಂದ ಅನ್ಯರು ಕಂಡಿಲ್ಲವೆಂದು ಹೇಳಿದೆನಲ್ಲವೇ? ಇದರಿಂದ ನೀನೇ ಈ ಹಿಂದೆ ನೋಡಿರುವೆಯೆಂದು ಹೇಳಿದಂತಲ್ಲವೇ? ಇಂದ್ರನಾಗಿ ನನ್ನ ಈ ರೂಪವನ್ನು ಮೊದಲು ಕಂಡಿರುವಿ, ಅರ್ಜುನ! (೪೭)

ಅರ್ಜುನ—ನನಗಿಂತ ಕೆಳಗಿನ ಭಕ್ತರು ಸ್ವತಃ ಈ ರೂಪವನ್ನು ನನ್ನಂತೆ ಕಾಣಲಾಗದಿದ್ದರೂ, ವೇದಾಧ್ಯಯನ, ಯಜ್ಞಾದಿ ವಿಶೇಷ ಸಾಧನಗಳಿಂದ ಕಾಣಲಾರರೇ?

ಶ್ರೀಕೃಷ್ಣ—ಹೇ ಕುರುಶ್ರೇಷ್ಠ! ವೇದ, ಯಜ್ಞ, ಅಧ್ಯಯನ

ವಿವಿಧವಾದ ಯಾಗಗಳಿಂದಲೂ, ಅಗ್ನಿಹೋತ್ರಾದಿ ಕರ್ಮಗಳಿಂದಲೂ, ಕೃಚ್ಛ್ರ, ಚಾಂದ್ರಾಯಣಾದಿ ವ್ರತಗಳಿಂದಲೂ, ಮನುಷ್ಯಲೋಕದಲ್ಲಿ ಯಾರೂ ಹೀಗೆ ನಿನ್ನಂತೆ ನನ್ನನ್ನು ನೋಡಲಾರರು. ಭಯಾನಕವಾದುದಲ್ಲವನ್ನು ತುಂಬಿಕೊಂಡಿರುವ ಈ ಘೋರರೂಪವನ್ನು ನೋಡಿ ವ್ಯಥೆಪಡಬೇಡ; ಭಯವನ್ನು ಬಿಡು, ಪ್ರಸನ್ನಚಿತ್ತನಾಗು, ಸಂತೋಷದಿಂದ ಇಗೋ! ನನ್ನ ಮೊದಲಿನ ರೂಪವನ್ನು ನೋಡು (೪೯)

ಸಂಜಯ—ಧೃತರಾಷ್ಟ್ರ! ಅರ್ಜುನನಿಗೆ ಹೀಗೆ ಹೇಳಿ, ಶ್ರೀಕೃಷ್ಣನು ಮೊದಲಿನ ರೂಪವನ್ನು ಮತ್ತೆ ತೋರಿದನು. ಭೀತನಾದ ಅರ್ಜುನನನ್ನು ಸಂತೈಸಿದನು. ವಾಸುದೇವನ ಭಕ್ತವಾತ್ಸಲ್ಯವನ್ನು ಅರಿಯಿರಿ, ರಾಜಾ! (೫೦)

ಅರ್ಜುನ—ಹೇ ಜನಾರ್ದನ! ಮನುಷ್ಯನಂತೆ ಸೌಮ್ಯವಾದ ನಿನ್ನ ಈ ಕೃಷ್ಣರೂಪವನ್ನು ನೋಡಿದ್ದರಿಂದ ಬದುಕಿದೆ. ಮನಸ್ಸು ಸ್ವಸ್ಥವಾಯಿತು; ಇಂದ್ರಿಯವ್ಯಾಪಾರಗಳು ಸ್ವಾಭಾವಿಕವಾದುವು. ಮೊದಲಿನಂತೆ ಸ್ವಸ್ಥನಾದೆನು (೫೧)

ಶ್ರೀಕೃಷ್ಣ— ಪಾರ್ಥ! ಈ ದುರ್ದರ್ಶವಾದ ರೂಪವನ್ನು ತೋರಿಸಿದ ಕಾರಣವನ್ನು ಹೇಳುವೆನು, ಕೇಳು. ನಿನ್ನಂತೆ ನೋಡುವುದಕ್ಕೆ ಈ ವಿಶ್ವರೂಪವನ್ನು ನೋಡಲು ದೇವತೆಗಳು ಸಹ ಬಯಸುವರು. ಕೇವಲ ಭಕ್ತನಾಗಿ ನೋಡಬಲ್ಲರು. ಮತ್ತೆ ಕೇವಲ ನೋಡಿ ಪ್ರಸನ್ನಗೊಳ್ಳುವರು. ನಮ್ಮ ಅವರವರ ಯೋಗ್ಯತೆಯನ್ನು ಅವಲಂಬಿಸಿರುವುದು. ಆದ್ದರಿಂದಲೇ ನಾನು ನಿಮಿತ್ತಮಾತ್ರನೆಂಬುದನ್ನು ನಿನಗೆ ಪ್ರತ್ಯಕ್ಷವಾಗುವುದಕ್ಕಾಗಿ ಈ ರೂಪವನ್ನು ತೋರಿಸಿದೆನೆಂದು ತಿಳಿ. (೫೨) ಈ ರೂಪವು ನಿನ್ನಂತೆ ಅನ್ಯರಿಗೆ ನೋಡಲು ಸಾಧ್ಯವಲ್ಲ. ಯಜ್ಞ, ಅಧ್ಯಯನಾದಿಗಳಿಂದಲೂ, ಅಧ್ಯಾಪನಾದಿ ಕ್ರಿಯೆಗಳಿಂದಲೂ, ದಾನಾದಿಗಳಿಂದಲೂ, ಯೋಗದಿಂದಲೂ, ಯಾರೂ ನನ್ನ ಈ ರೂಪವನ್ನು ಕಾಣಲಾರರು (೫೩) ಹೇ ಅರ್ಜುನ! ಅನನ್ಯವಾದ ಭಕ್ತಿಯಿಂದಲೇ ಈ ವಿಧವಾದ (ವಿಶ್ವರೂಪವಾದ) ನನ್ನನ್ನು ಯಥಾರ್ಥ

ವಾಗಿ ತಿಳಿಯಬಹುದು; ಪ್ರತ್ಯಕ್ಷನೋಡಬಹುದು ಮತ್ತು ಪ್ರವೇಶವಾಡ ಬಹುದು. (ಸಾಯುಜ್ಯ ಮುಕ್ತಿಯೋಗ್ಯರು ಪ್ರವೇಶಿಸಿ ಆನಂದಿಸುವರು.) (೫೪)

ಅರ್ಜುನ—ನೀನು ಅನನ್ಯಭಕ್ತಿಯಿಂದಲೇ ಹೀಗೆ ಲಭ್ಯನಾದರೆ, ಜ್ಞಾನಾದಿ ಇತರ ಸಾಧನಗಳೇಕೆ?

ಶ್ರೀಕೃಷ್ಣ—ಹೇ ಪಾಂಡವ! ಯದ್ಯಪಿ ಜ್ಞಾನಪೂರ್ವಕವಾದ ಪ್ರೇಮವೇ ಭಕ್ತಿಯು, ಆದರೂ ಭಕ್ತಿಯ ಪ್ರಭಾವವನ್ನೂ, ಆದರ ಸ್ಥಾನವನ್ನೂ ನಿರೂಪಿಸಿರುವೆನು; ಕೇಳು. ನಾನೇ ಸರ್ವೋತ್ತಮನೆಂಬ ಜ್ಞಾನನಿಶ್ಚಯ ಬೇಕು; ನನ್ನ ಪ್ರೀತ್ಯರ್ಥವಾಗಿಯೇ (ಯಾವ ಫಲವನ್ನೂ ಇಚ್ಛಿಸದೆ) ಸಕಲ ವಿಹಿತಕರ್ಮಗಳನ್ನು ಆಚರಿಸಬೇಕು; ಸಜ್ಜನರಲ್ಲಿ ವಿರೋಧವನ್ನು ಸರ್ವಪ್ರಕಾರದಿಂದ ಪರಿತ್ಯಾಗಮಾಡಬೇಕು; ಈ ಎಲ್ಲ ಸಾಧನಗಳೂ ಭಕ್ತಿಸಹಿತವಾಗಿರಬೇಕು. ಅಧ್ಯಯನ, ಕರ್ಮಾನುಷ್ಠಾನ, ವಿರಕ್ತಿ, ಅರ್ಪಣಭಾವ, ಇವುಗಳು ಸಹ ಭಕ್ತಿರಹಿತವಾದರೆ ವ್ಯರ್ಥ ವಾಗುವುವು. ನನ್ನ ಪ್ರಾಪ್ತಿಗೆ ಈ ಎಲ್ಲ ಸಾಧನಗಳ ಮಧ್ಯದಲ್ಲಿ ಭಕ್ತಿಯೇ ಪ್ರಧಾನವೆಂದು ತಿಳಿ.

ಹನ್ನೊಂದನೆಯ ಅಧ್ಯಾಯವು ಮುಗಿದುದು

ಅಧ್ಯಾಯ ೧೨.

[ದೇವ ದೇವೀ (ಪರಮಾತ್ಮ ಮತ್ತು ಲಕ್ಷ್ಮೀದೇವಿ) ಇವರುಗಳ ಉಪಾಸನೆಗಳ ಮಧ್ಯೆ, ದೇವೋಪಾಸನೆಯ ಶ್ರೇಷ್ಠತ್ವವನ್ನು ಸಾಧಿಸಲು ಈ ಅಧ್ಯಾಯವು ಪ್ರವೃತ್ತವಾಗುತ್ತದೆ. ಆದ್ದರಿಂದ, ಭಗವನ್ಮಾಹಾತ್ಮ್ಯೆಯನ್ನು ವಿಸ್ತಾರವಾಗಿ ನಿರೂಪಿಸುವ ದ್ವಿತೀಯಷಟ್ಕದಲ್ಲಿ, ಈ ಅಧ್ಯಾಯಕ್ಕೆ ಅಂತರ್ಭಾವವು ಯೋಗ್ಯವಾಗುತ್ತದೆ.]

ಅರ್ಜುನ—ಹೇ ಸ್ವಾಮಿ! ಬ್ರಹ್ಮಾದಿದೇವತೆಗಳಿಗಿಂತ ವಿಲಕ್ಷಣಳೂ, ಉತ್ತಮಳೂ, ಅವ್ಯಕ್ತನಾಮವುಳ್ಳವಳೂ ಆದ ಶ್ರೀದೇವಿಯನ್ನು ಶ್ರದ್ಧಾ-ಭಕ್ತಿಗಳಿಂದ ಉಪಾಸಿಸಿ, ಮೋಕ್ಷವನ್ನು ಪಡೆಯುವ ಭಕ್ತರಿರುವರೆಂದು ಕೇಳಿರುವೆನು. ಈಗ ನನ್ನಿಂದ ಕೇಳಿ, ನೋಡಲ್ಪಟ್ಟ ವಿಚಿತ್ರಮಹಿಮೋಪೇತನಾದ ನಿನ್ನನ್ನು, ಭಕ್ತಿಸಹಿತವಾದ ಕರ್ಮಾನುಷ್ಠಾನಾದಿಸಾಧನ-ಪೂರ್ವಕ ಉಪಾಸಿಸುವವರೂ ನಿನ್ನ ಪ್ರಾಪ್ತಿರೂಪವಾದ ಮೋಕ್ಷವನ್ನು ಹೊಂದುವರೆಂದು ದೃಢವಾಗಿ ತಿಳಿದೆನು. ಈ ಉಭಯಭಕ್ತವರ್ಗದಲ್ಲಿ ಉತ್ತಮರು ಯಾರು?

ಶ್ರೀಕೃಷ್ಣ—ಅರ್ಜುನ! ನಿನ್ನ ಪ್ರಶ್ನೆಯನ್ನು ವಿಶದಪಡಿಸುವೆಯಾ?

ಅರ್ಜುನ—'ತಮೇವಂ ವಿದ್ವಾನ್ ಅಮೃತ ಇಹ ಭವತಿ' ಎಂಬ ಶ್ರುತಿಯು ಭಗವಂತನ ಉಪಾಸನೆಯಿಂದ ಮುಕ್ತಿಯೆಂದೂ, 'ಶ್ರೀಯಂ ವಸಾನಾ ಅಮೃತತ್ವಮಾಯನ್' ಎಂಬ ಶ್ರುತಿಯು, ಶ್ರೀದೇವಿಯ ಉಪಾ-ಸನೆಯಿಂದ ಮುಕ್ತಿಯೆಂದೂ ಹೇಳುವುದರಿಂದ, ಭಕ್ತಿಯಿಂದ ನಿನ್ನನ್ನೇ ಉಪಾಸಿಸಬೇಕೆಂಬ ನಿನ್ನ ಉಪದೇಶದ ವೈಶಿಷ್ಟ್ಯವನ್ನು ತಿಳಿಯಲಿಚ್ಛಿಸು-ವೆನು. 'ಆಯಾ ದೇವತೋಪಾಸಕರು ಆಯಾ ದೇವತೆಗಳನ್ನು ಹೊಂದುವ-ರೆಂದೂ, ನಿನ್ನ ಭಜಕರು ನಿನ್ನನ್ನು ಹೊಂದುವರೆಂದೂ ಹೇಳಿರುವೆನಲ್ಲವೇ' ಎನ್ನಬೇಡ. ಬ್ರಹ್ಮಾದಿದೇವತೆಗಳು ಜನನಮರಣವುಳ್ಳವರು. ಆದ್ದರಿಂದ ಅವರ ಉಪಾಸನೆಯಿಂದ ನಶ್ವರಫಲ ದೊರೆಯುತ್ತದೆನ್ನಬಹುದು. ಶ್ರೀದೇವಿಯು ಹಾಗಲ್ಲ; ನಿತ್ಯಯೌವನ, ಪೂರ್ಣಜ್ಞಾನ, ದೇವಪೂಜ್ಯತ್ವಾದಿ

ಮಹಾಮಹಿಮೆಗಳುಳ್ಳ ನಿತ್ಯಮುಕ್ತಳು. ಆಕೆಯ ಉಪಾಸನೆಯಿಂದ ನಿತ್ಯವಾದ ಫಲ ದೊರೆಯುವುದರಲ್ಲಿ ಸಂಶಯವಿರಲಾರದಷ್ಟೆ! (೧)

ಶ್ರೀಕೃಷ್ಣ—ನಿರಂತರ ನನ್ನಲ್ಲಿಯೇ ಮನಸ್ಸಿಟ್ಟು, ಕರ್ಮಯೋಗ, ಧ್ಯಾನಯೋಗಗಳಲ್ಲಿ ಯಥಾಯೋಗ್ಯವಾಗಿ ತೊಡಗಿ, ಉತ್ತಮಶ್ರದ್ಧೆಯಿಂದ ನನ್ನನ್ನೇ ಉಪಾಸಿಸುವವರು, ಮೋಕ್ಷೋಪಾಯವುಳ್ಳವರಲ್ಲಿ ಶ್ರೇಷ್ಠರು. ತಿಳಿಯಿತೇ; ಅರ್ಜುನ? (೨)

ಅರ್ಜುನ—ಅದೇಕೆ ಅವರೇ ಉತ್ತಮರು? ಶ್ರೀದೇವಿಯ ಉಪಾಸಕರಿಗೆ ಮೋಕ್ಷವು ದೊರೆಯುವುದಿಲ್ಲವೆಂದೇ? ಹಾಗೆಂದರೆ, 'ಶ್ರಿಯಂ ವಸಾನಾ ಅಮೃತತ್ವಮಾಯನ್' ಎಂಬ ಶ್ರುತಿವಿರೋಧವು. ಮೋಕ್ಷವುಂಟೆಂದರೆ, ಸಮಾನಫಲವಿದ್ದಪ್ರಯುಕ್ತ, ನಿನ್ನ ಉಪಾಸಕರಿಗೆ ಶ್ರೇಷ್ಠತ್ವವು ಕೂಡುವುದಿಲ್ಲ.

ಶ್ರೀಕೃಷ್ಣ—ಹಾಗಲ್ಲವಪ್ಪ! ಅರ್ಜುನ! ಲಕ್ಷ್ಮ್ಯುಪಾಸಕರಿಗೂ ನನ್ನ ಪ್ರಾಪ್ತಿರೂಪವಾದ ಮೋಕ್ಷವಿದೆ. ಆದರೂ ಆಕೆಯ ಉಪಾಸನೆಯು ಬಹು ಕಷ್ಟಸಾಧ್ಯವು. ಶ್ರೀದೇವಿಯು, ನಿತ್ಯಳೂ ಸೂಕ್ಷ್ಮಳೂ ಆಗಿದ್ದು **ಅಕ್ಷರ**-ಳೆನಿಸುವಳು. ಜೀವರಿಂದ ಸಾಕಲ್ಯೇನ (ಪೂರ್ಣವಾಗಿ) ನಿರ್ವಚನ ಮಾಡಲು ಬಾರದ ಮಹಾಮಹಿಮಳಾದ್ದರಿಂದ **ಅನಿರ್ದೇಶ್ಯಳು**. ನನ್ನಂತೆ ದೇಶತಃ ವ್ಯಾಪ್ತಳು; ಗುಣಬಾಹುಳ್ಯದಿಂದ **ಅಚಿಂತ್ಯಳು**. ಅವ್ಯಾಕೃತ ಆಕಾಶದ ಅಭಿಮಾನಿಯು, ತನ್ನ ಸ್ಥಾನದಿಂದ ಎಂದೂ ಚ್ಯುತಿಯಿಲ್ಲದವಳು, **ಕೂಟಸ್ಥಳು** (ನಿರ್ವಿಕಾರಳು). ಜಗದುಪಾದಾನಕಾರಣವಾದ ಪ್ರಕೃತಿಯ ಅಭಿಮಾನಿಯು. ಈ **ಅವ್ಯಕ್ತ**ನಾಮಕ ಶ್ರೀತತ್ವವನ್ನು (೩) ಉಪಾಸಿಸಲು ಇಂದ್ರಿಯಸಮುದಾಯವನ್ನು ವಿಷಯಗಳಿಂದ ಚೆನ್ನಾಗಿ ಸೆಳೆದು ಹಿಡಿಯಬೇಕು; ಸುಖದುಃಖಾದಿ ದ್ವಂದ್ವಗಳಲ್ಲಿ ಸಮಬುದ್ಧಿಯನ್ನು ಹೊಂದಬೇಕು; ಸರ್ವಭೂತಹಿತರತನಾಗಬೇಕು. ನನ್ನಲ್ಲಿ ಸರ್ವೋತ್ತಮತ್ವಜ್ಞಾನವಿರಬೇಕು; ನನ್ನಲ್ಲಿ ಭಕ್ತಿಯಿರಬೇಕು. ನನ್ನ ಉಪಾಸನೆಯ ಸಹಿತವಾಗಿ ಶ್ರೀತತ್ವದ ಉಪಾಸನೆಮಾಡಬೇಕು. ಆಗ ಮಾತ್ರ ನನ್ನ ಪ್ರಾಪ್ತಿರೂಪವಾದ

ಮೋಕ್ಷವು ಲಭಿಸುವುದು (೪). ಹೀಗೆ, ನನ್ನ ಜ್ಞಾನ ಭಕ್ತಿ ಇವುಗಳ ಸಹಿತವಾಗಿ ಉಪಾಸಿಸಿದರೂ, ಶ್ರೀದೇವಿಯೇ ಪ್ರಧಾನೋಪಾಸ್ಯತತ್ತ್ವವಾದುದರಿಂದ, ನನ್ನ ಪ್ರಾಪ್ತಿಮಾರ್ಗವು ಬಹುಕಷ್ಟದಿಂದ ಲಭ್ಯವಾಗುವುದು. ಫಲಸಾಮ್ಯವಿದ್ದರೂ ಮಾರ್ಗವು ಕಷ್ಟತರವಾದುದರಿಂದ ನನ್ನ ಉಪಾಸಕರೇ ಉತ್ತಮ ಉಪಾಯವುಳ್ಳವರು. (೫) ನನ್ನ ಉಪಾಸನೆಯಲ್ಲಿ ಈ ವಿಧ ಕ್ಲೇಶಗಳಿಲ್ಲ. ಸ್ವತಂತ್ರನಾದ ನಾನು, ತನ್ನಲ್ಲಿದ್ದು ಎಲ್ಲ ಕರ್ಮಗಳನ್ನು ಅಧೀನಕರ್ತನಾದ ತನ್ನಿಂದ ಮಾಡಿಸುವೆನೆಂಬ ಅನುಸಂಧಾನವುಳ್ಳವನಾಗಿ ಸಕಲಕರ್ಮಗಳನ್ನು ನನ್ನಲ್ಲಿ ಅರ್ಪಿಸಿ, ನನ್ನ ಸರ್ವೋತ್ತಮತ್ವಜ್ಞಾನ-ನಿಷ್ಠೆಯವುಳ್ಳವನಾದರೆ, ಕೇವಲ ನನ್ನನ್ನೇ ಉಪಾಸಿಸಿದರೂ, ಮೋಕ್ಷವನ್ನು ಪಡೆಯುವನು. ಅತಿಶಯವಾದ ಉಪಾಸನೆ, ಅತಿಶಯವಾದಇಂದ್ರಿಯನಿಗ್ರಹ ಅತ್ಯಂತ ಎಚ್ಚರಿಕೆಯಿಂದ ಆಚರಿಸಲ್ಪಡುವ ಕರ್ಮಾನುಷ್ಠಾನಗಳು, ನನ್ನ ಪ್ರಸಾದಲಾಭಕ್ಕೆ ಅವಶ್ಯಕವಲ್ಲ. ಇಂದ್ರಿಯನಿಗ್ರಹಾದಿಗಳಲ್ಲಿರಬಹುದಾದ ಕೊರತೆಯನ್ನು (ನ್ಯೂನತೆಯನ್ನು) ನಾನು ಪರಿಹರಿಸುವೆನು. ನನ್ನ ಭಕ್ತನ ಯತ್ನವಿಲ್ಲದೇ ಆ ಸಾಧನಗಳನ್ನು ನಾನೇ ಪೂರ್ಣಗೊಳಿಸಿ ಅನುಗ್ರಹಿಸುವೆನು. ಅರ್ಜುನ! ಈ ಸೌಕರ್ಯವು ಅವ್ಯಕ್ತೋಪಾಸನೆಯಲ್ಲಿಲ್ಲ. (೬) ಲಕ್ಷ್ಮೀ-ಬ್ರಹ್ಮಾದಿ ಅನ್ಯದೇವತೆಗಳು ಅಸ್ವತಂತ್ರರೆಂದೂ ನನ್ನ ಪರಿವಾರದವರೆಂದೂ ತಿಳಿದರೆ ಸಾಕು. ಹೀಗೆ ತಿಳಿದು ನನ್ನಲ್ಲಿ ಸ್ಥಿರವಾಗಿ ಮನಸ್ಸಿಟ್ಟವರನ್ನು, ಮೃತ್ಯುರೂಪವಾದ ಸಂಸಾರಬಂಧದಿಂದ ಶೀಘ್ರವಾಗಿ ಉದ್ಧರಿಸುವೆನು. ಶ್ರೀತತ್ತ್ವವನ್ನೇ ಪ್ರಾಧಾನ್ಯವಾಗಿ ಉಪಾಸನೆಮಾಡುವವರಾದರೂ, ಮೊದಲು ನನ್ನ ಉಪಾಸನೆಯನ್ನು ಕೆಲಮಟ್ಟಿಗೆ ಮಾಡಲೇಬೇಕಾಗುವುದು. ನಂತರ ಬಹುಕಾಲ ಪ್ರತ್ಯೇಕವಾಗಿ ಶ್ರೀದೇವಿಯನ್ನುಪಾಸಿಸಿ, ಪುನಃ ಶ್ರೀಸಹಿತ-ನಾದ ನನ್ನನ್ನು ನಿರಂತರವಾಗಿ ಉಪಾಸಿಸಬೇಕು. ಹೀಗೆ ಅವರಿಗೆ ಮುಕ್ತಿಯು ಬಹುಕಾಲದ ನಂತರ ಲಭಿಸುವುದು. ಈ ದೃಷ್ಟಿಯಿಂದಲೂ ನನ್ನ ಉಪಾಸಕರೇ ಉತ್ತಮರಲ್ಲವೇ? (೭)

ಅರ್ಜುನ—ನಿನ್ನ ನಿರಂತರೋಪಾಸನೆಯಲ್ಲಿ ಅಶಕ್ತರಾದವರಿಗೆ ನಿನ್ನ ಪ್ರಾಪ್ತಿಗೆ ಅನ್ಯೋಪಾಯಗಳಿರುವುವೇ?

ಶ್ರೀಕೃಷ್ಣ—ಇದೆ. ಹೇಳುವೆನು ಕೇಳು. ಸದಾ ನನ್ನಲ್ಲಿ ಮನಸ್ಸನ್ನು ಇಡಬೇಕು. ಆದಾಗದಿದ್ದರೆ, ತನ್ನ ಬುದ್ಧಿಯನ್ನುಪಯೋಗಿಸಿ ನನ್ನ ವಿಷಯಕವಾದ ಜ್ಞಾನವನ್ನು ಸಂಪಾದಿಸಬೇಕು. ನನ್ನ ಮಹಿಮೆಗಳ ಜ್ಞಾನ-ನಿಶ್ಚಯವು ದೊರೆತರೆ ಮಾರ್ಗವು ಸುಗಮವಾಗಿ, ನಿರ್ದುಃಖಾನಂದಸ್ಥಿತಿಯು ಲಭಿಸುವುದರಲ್ಲಿ ಸಂಶಯವಿಲ್ಲ. (೮) ಒಂದು ಪಕ್ಷ, ಹಾಗೆ ಚಿತ್ತವನ್ನು ನನ್ನಲ್ಲಿ ಸ್ಥಿರಗೊಳಿಸಲುಸಾಧ್ಯವಾಗದಿದ್ದರೆ, ಅದಕ್ಕಾಗಿ ಪ್ರತ್ಯಾಹಾರದಿಂದ ಅಭ್ಯಾಸಮಾಡಬೇಕು. ಮನಸ್ಸನ್ನು ಅನ್ಯವಿಷಯಗಳಿಂದ ಹಿಂದೆ ಸೆಳೆದು ಕೊಳ್ಳುವುದೇ ಪ್ರತ್ಯಾಹಾರವು. (೯) ಈ ವಿಧವಾದ ಅಭ್ಯಾಸದಲ್ಲಿ ಸಹ ಅಶಕ್ತನಾದರೆ, ನನ್ನ ಪ್ರೀತಿಜನಕವಾದ ಉತ್ತಮ ಕರ್ಮಾನುಷ್ಠಾನದಲ್ಲಿ ತೊಡಗಬೇಕು. ನನ್ನಪ್ರೀತ್ಯರ್ಥವಾಗಿ ಕರ್ಮಗಳನ್ನು ಮಾಡಿದರೂ ಜ್ಞಾನ ದ್ವಾರಾ ಮುಕ್ತನಾಗುವನು. (೧೦) ಕೇವಲ ನನ್ನ ಪ್ರೀತಿಗಾಗಿಯೇ ಜಪ, ಅರ್ಚನಾದಿ ಕರ್ಮಗಳನ್ನು ಮಾಡುವುದಕ್ಕೂ ಅಶಕ್ತನಾದರೆ, ಅನ್ಯದೇವತೆ ಗಳನ್ನುದ್ದೇಶಿಸಿಯಾದರೂ ಕರ್ಮಗಳನ್ನಾಚರಿಸಿ, ಕಡೆಗೆ 'ಕೃಷ್ಣಾರ್ಪಣ' ವೆಂದು ನನಗರ್ಪಿಸುವ ಉಪಾಯವನ್ನಾದರೂ ಆಶ್ರಯಿಸಿ, ನಿಯತವಾದ ಮನಸ್ಸಿನಿಂದ ಈ ಎಲ್ಲ ಕರ್ಮಗಳ ಫಲತ್ಯಾಗಕ್ಕಾಗಿ ಯತ್ನಿಸಬೇಕು. (೧೧) ಹೀಗೆ ಅಜ್ಞಾನಪೂರ್ವಕ ಅಭ್ಯಾಸಕ್ಕಿಂತ, ತತ್ವಜ್ಞಾನವು ಶ್ರೇಷ್ಠವು; ಜ್ಞಾನ-ಕ್ಕಿಂತ ಜ್ಞಾನಪೂರ್ವಕಧ್ಯಾನವು ಶ್ರೇಷ್ಠವು. ಜ್ಞಾನಪೂರ್ವಕವಾದ ಸಕಾಮಧ್ಯಾನಕ್ಕಿಂತ, ಕರ್ಮಫಲತ್ಯಾಗಪೂರ್ವಕವಾದ ನಿಷ್ಕಾಮಧ್ಯಾನವು ಶ್ರೇಷ್ಠವು. ಇದಕ್ಕಿಂತ ಅಪರೋಕ್ಷಜ್ಞಾನವೂ ಅದಕ್ಕಿಂತ ಮೋಕ್ಷವೂ ಉತ್ತಮವೆನಿಸುವುವು. (೧೨)

ಅರ್ಜುನ—ಪ್ರಭೋ! ಕ್ಲೇಶಕರವಾದ ಅವ್ಯಕ್ತೋಪಾಸನೆಯನ್ನು ಬಿಟ್ಟು ನಿನ್ನನ್ನೇ ಉಪಾಸಿಸುವ ಭಕ್ತರ ಲಕ್ಷಣಗಳಾವುವು? ಸಕಲಕರ್ಮ ಗಳನ್ನು ನಿನ್ನಲ್ಲಿ ಸಮರ್ಪಿಸುವ ಭಾವವನ್ನು ಪಡೆಯಲು ಇತರ ಸಾಧನ ಗಳಾವುವು?

ಶ್ರೀಕೃಷ್ಣ—ಸಕಲ ಕರ್ಮಗಳನ್ನು ನನಗರ್ಪಿಸೆಂದು ಹೇಳಿದುದರಿಂದ ಸೂಚಿತವಾದ ಧರ್ಮಾಂತರಗಳನ್ನು ವಿವರಿಸುವೆನು. ಅವುಗಳು ಸರ್ವಾರ್ಪಣ-

ಯನ್ನು ದೊರಕಿಸುವ ಸಾಧನಗಳೂ ಆಗುವುವು. ಯಾವ ಪ್ರಾಣಿಗೂ ಅಪ್ರಿಯವಾದುದನ್ನು ಮಾಡಬಾರದು; ಮಾತ್ರವಲ್ಲ, ಕ್ಲೇಶಸ್ಥಾನವನ್ನು ಸು, ಅದರಿಂದ ರಕ್ಷಿಸಬೇಕು—ಕೃಪೆಯುಳ್ಳವನಾಗಬೇಕು. ತನ್ನದೆಂಬ ಸ್ವಾತಂತ್ರ್ಯಬುದ್ಧಿಯನ್ನು ಯಾವ ವಸ್ತುವಿನಲ್ಲಿಯೂ ತಾಳಬಾರದು. ತನ್ನಲ್ಲಿ ವ ಗುಣಗಳಲ್ಲಿ ಅಭಿಮಾನ ಮೋಹಗಳನ್ನು ಬಿಡಬೇಕು. ವಿಷಯಸುಖವು ಹೇಯವಾದುದರಿಂದ ದುಃಖಸಮವೆಂದು ಭಾವಿಸಬೇಕು. ಸಹನಶೀಲನಾಗಬೇಕು. (೧೩) ವಿಹಿತಕರ್ಮಾನುಷ್ಠಾನ ಮತ್ತು ಧ್ಯಾನಗಳೆಂಬ ಜ್ಞಾನೋಪಾಯವುಳ್ಳವನಾಗಬೇಕು. ಚಿತ್ತವನ್ನು ವಿಷಯಗಳಿಂದ ಹಿಂದೆಳೆದುಕೊಳ್ಳಬೇಕು. ಅಪ್ರಾಮಾಣಿಕವಾದ ಸಂಶಯಗಳಿಗೆ ಎಡೆಗೊಡದ ತತ್ವನಿಶ್ಚಯವುಳ್ಳವನಾಗಬೇಕು. ಮನಸ್ಸು ಮತ್ತು ಬುದ್ಧಿಗಳನ್ನು ನನ್ನಲ್ಲಿ ಅರ್ಪಿಸಬೇಕು—ನನ್ನನ್ನೇ ಆಶ್ರಯಿಸುವಂತೆ ಯೋಜನೆಮಾಡಬೇಕು. ಈ ಲಕ್ಷಣಗಳುಳ್ಳ ಭಕ್ತನು ನನಗೆ ಪ್ರಿಯನು. (೧೪) ಲೋಕಭಯಂಕರನಾಗಿ ಇರಬಾರದು—ಲೋಕಕ್ಕೆ ತಾನು ಭಯಕಾರಣನಾಗಬಾರದು. ಸರ್ವವೂ ಈಶಾಧೀನವೆಂದು ತಿಳಿದು ಲೋಕದಿಂದ ತಾನೂ ಹೆದರಬಾರದು. ಹರ್ಷಾಮರ್ಷಗಳಿಂದ ದೂರನಾಗಬೇಕು, ಎಂದರೆ, ಮನಮುದಿಸಿ ಅಧರ್ಮದಲ್ಲಿ ಹರ್ಷಗೊಳ್ಳದಿರಬೇಕು ಮತ್ತು ರೋಷವನ್ನು ಬಿಡಬೇಕು. ಭಯದಿಂದ ಮನಸ್ಸು ಕಂಪಿಸಬಾರದು—ಸ್ವಸ್ಥಚಿತ್ತನಾಗಿರಬೇಕು. ಹೀಗಿರುವ ಭಕ್ತನು ನನಗೆ ಪ್ರಿಯನು. (೧೫) ಭಗವಂತನ ಪ್ರೀತಿಯೊಂದನ್ನಲ್ಲದೇ ಅನ್ಯವನ್ನು ಅಪೇಕ್ಷಿಸಬಾರದು. ಬಾಹ್ಯಾಂತರಶುದ್ಧಿಯುಳ್ಳವನಾಗಬೇಕು. ವಿಹಿತಕರ್ಮಾಚರಣೆಯಲ್ಲಿ ಪಟುವಾಗಿರಬೇಕು. ಉದಾಸೀನನಾಗಿರಬೇಕು; ಎಂದರೆ ಕರ್ತವ್ಯವಾದ ಉಪಕಾರ, ಅಪಕಾರಗಳ ವಿಷಯದಲ್ಲಿ ತಾನು ಸ್ವತಂತ್ರನೆಂಬ ಬುದ್ಧಿಯನ್ನು ಬಿಡಬೇಕು. ಪರರಿಂದ ತನಗಾಗಬಹುದಾದ ಅಪಕಾರಗಳಿಂದ ಮನಃಕ್ಲೇಶವನ್ನು ಹೊಂದಬಾರದು. ಎಲ್ಲಕ್ಕೂ ಮೇಲಾಗಿ ಸರ್ವಾರಂಭಪರಿತ್ಯಾಗಿಯಾಗಬೇಕು.

ಅರ್ಜುನ—ಸರ್ವಾರಂಭಪರಿತ್ಯಾಗವೆಂದರೇನು? ವಿವರಿಸು, ದೇವ!

ಶ್ರೀಕೃಷ್ಣ—ನನ್ನ ಪ್ರೀತಿಸಂಪಾದಕವಲ್ಲದ ಯಾವ ಕರ್ಮವನ್ನೂ

ಆರಂಭಿಸದಿರುವುದು; ತಾನು ಕರ್ಮಮಾಡುವವನೆಂಬ ಸ್ವಾತಂತ್ರ್ಯಾಭಿಮಾನವನ್ನು ಬಿಡುವುದು; ಕರ್ಮಫಲಾಪೇಕ್ಷೆಯಿಲ್ಲದಿರುವುದು ಮತ್ತು ಸರ್ವಕರ್ಮಗಳ ಫಲವನ್ನು ನನ್ನಲ್ಲಿ ಅರ್ಪಿಸುವುದು. ಈ ಎಲ್ಲವನ್ನೂ ಉಳ್ಳವನು ಸರ್ವಾರಂಭಪರಿತ್ಯಾಗಿಯು. ಹೀಗೆ ಸರ್ವಾರಂಭಪರಿತ್ಯಾಗಿಯಾದ ಭಕ್ತನು ನನಗೆ ಪ್ರಿಯನು. (೧೬)

ಅರ್ಜುನ—ಹರ್ಷ, ಅಮರ್ಷ (ರೋಷ), ಭಯ, ಉದ್ವೇಗಗಳಿಲ್ಲದವನು ನಿನ್ನ ಪ್ರಿಯಭಕ್ತನೆಂದು ಹೇಳಿದೆಯಲ್ಲವೇ? 'ಈ ದೋಷಗಳಿಂದ ಬಿಡಲ್ಪಟ್ಟವನು' ಎಂಬುದರಿಂದ, ಮೊದಲು, ಅವು ಅವನಲ್ಲಿದ್ದುವೆಂದು ಸಿದ್ಧವಾಗುತ್ತದೆ. ಕಾಲಾಂತರದಲ್ಲಿ ಈ ಹರ್ಷಾದಿದೋಷಗಳು ಪುನಃ ಸಂಭವಿಸಿದರೆ ಹೇಗೆ?

ಶ್ರೀಕೃಷ್ಣ—ಯಾವ ಕಾಲಕ್ಕೂ ಹರ್ಷ, ದ್ವೇಷ, ಶೋಕ, ಆಶೆಗಳು ತಲೆದೋರದಂತಹ ಪಕ್ವಸ್ಥಿತಿಯನ್ನು ಹೊಂದಿದವನೇ ನನಗೆ ಪ್ರಿಯನು. ಅತ್ಯರ್ಥಪ್ರೀತಿಯನ್ನು ಹೊಂದಿದ ನಂತರ ಅವನಲ್ಲಿ ಯಾವ ದೋಷಗಳೂ ಎಡೆಹೊಂದುವುದಿಲ್ಲ.

ಅರ್ಜುನ—ಈ ಸರ್ವಾರಂಭಪರಿತ್ಯಾಗದ ಲಕ್ಷಣವನ್ನು ಹೆಚ್ಚು ಸ್ಪಷ್ಟಗೊಳಿಸುವೆಯಾ, ಪ್ರಭೋ!

ಶ್ರೀಕೃಷ್ಣ— ಆರಂಭವೆಂದರೆ ಕರ್ಮ. ಪರಿತ್ಯಾಗವೆಂಬುದು, ಈ ಮೊದಲು ಹೇಳಿದಂತೆ, ನಾಲ್ಕು ಪ್ರಕಾರವಾದುದು. ಹೇ ಅರ್ಜುನ! ಮುಖ್ಯವಾದ ಕರ್ಮಗಳು ಶುಭಾಶುಭಗಳೆಂದು ಎರಡು ಪ್ರಕಾರ. ಅವುಗಳಿಂದ ಉದಯಿಸುವ ಫಲಗಳೂ ಎರಡು ವಿಧ. ತಾನು ಸ್ವತಂತ್ರನೆಂಬ ಅಭಿಮಾನವನ್ನು ಬಿಟ್ಟು, ಅಧೀನಕರ್ತನೆಂಬ ಜ್ಞಾನಪೂರ್ವಕ ಉಭಯವಿಧವಾದ ಕರ್ಮಗಳನ್ನೂ ಆಚರಿಸಬೇಕು. ಉಭಯಫಲಾಪೇಕ್ಷೆಯನ್ನು ಬಿಟ್ಟು ನನ್ನಲ್ಲಿ ಅರ್ಪಿಸಬೇಕು. ಶುಭಕರ್ಮಗಳ ಫಲವನ್ನು ಬಿಡುವುದೆಂದರೆ, ಜ್ಞಾನ, ಭಕ್ತಿ, ವೈರಾಗ್ಯರೂಪವಾದ ಫಲಗಳನ್ನೂ ನಿರಾಕರಿಸುವುದೆಂದು ತಿಳಿಯಬೇಡ; ಇಹಪರಸುಖಸಾಧಕಫಲವನ್ನು ಬಿಡುವುದೆಂದು ತಿಳಿ. (೧೭) ಅಶುಭಕರ್ಮಗಳನ್ನು ಯತ್ನಪೂರ್ವಕವಾಗಿ ಬಿಡಬೇಕು. ಹಾಗೂ ಸಂಭವಿ

[illegible] ತನ್ನ ಅಧೀನಕರ್ತೃತ್ವವನ್ನು ಚಿಂತಿಸಿ, ಕರ್ಮಾನುಸಾರವಾಗಿ ...ಹೋಮುದಕ್ಕೆ ಪಶ್ಚಾತ್ತಾಪಗೊಂಡು, ಮತ್ತೆ ಘಟಿಸದಂತೆ ಸ್ವಾಮಿಯಲ್ಲಿ ...ಸಿಸಿಕೊಳ್ಳುವುದೇ ಅರ್ಪಣವು. ಉಭಯಕರ್ಮಗಳ ಫಲರೂಪಗಳಾದ ...ಮಿತ್ರ, ಮಾನಾಪಮಾನ, ಶೀತೋಷ್ಣಾದಿಸುಖದುಃಖಗಳನ್ನು ಸಮ ...ನು ತಿಳಿಯಬೇಕು. ಸುಖದುಃಖಗಳಿಂದ ಹಿಗ್ಗಿಕುಗ್ಗಬಾರದು. ದೃಢ-ವಾದ ವೈರಾಗ್ಯವುಳ್ಳವನಾಗಬೇಕು.(೧೮) ನಿಂದಾಸ್ತುತಿಗಳನ್ನು ಸಮವೆಂದು ...ಳಿಯಬೇಕು. ವ್ಯರ್ಥವಾಕ್ಯಗಳನ್ನಾಡಬಾರದು— ಮನನಶೀಲನಾಗಿರಬೇಕು. ಶ್ರೀಹರಿದತ್ತವಾದುದು ಅಲ್ಪವಾದರೂ ಅದರಿಂದ ಸಂತುಷ್ಟನಾಗಬೇಕು. ಸದಾ ಭಗವಂತನನ್ನೇ ಆಶ್ರಯಿಸಿರಬೇಕು. ಕುತರ್ಕಗಳಿಂದ ...ಚಂಚಲಿಸದ ಸ್ಥಿರಜ್ಞಾನವುಳ್ಳವನಾಗಬೇಕು. ಈ ಲಕ್ಷಣಗಳುಳ್ಳ ಭಕ್ತನು ನನಗೆ ಪ್ರಿಯನು. (೧೯)

ಅರ್ಜುನ—ಉಕ್ತಧರ್ಮಗಳು ಪ್ರತ್ಯೇಕವಾಗಿ ಒಂದೊಂದೂ ನಿನ್ನ ಪ್ರೀತಿಸಾಧಕವಾದವುಗಳಲ್ಲವೇ? ಹಾಗಿದ್ದರೆ ಬಹುಧರ್ಮಗಳ ಈ ನಿರೂಪಣೆಯೇಕೆ?

ಶ್ರೀಕೃಷ್ಣ— ಅಹುದು, ಪಾರ್ಥ! ಒಂದೊಂದೂ ನನ್ನ ಪ್ರೀತಿಸಾಧಕವೇ. ಅವುಗಳಲ್ಲಿ ಒಂದೊಂದನ್ನು ಸಾಧಿಸಿಕೊಂಡವನೂ ನನಗೆ ಪ್ರಿಯನು. ಆದರೆ ಆ ಎಲ್ಲ ಲಕ್ಷಣಗಳುಳ್ಳ ಭಕ್ತನು ನನಗೆ ಅತ್ಯಂತ ಪ್ರಿಯನು. ಆತನೇ ಭಕ್ತಶ್ರೇಷ್ಠನು. ಸರ್ವಾಧಾರನಾದ ನಾನು 'ಧರ್ಮ'ನೆಂದು ಕರೆಯಲ್ಪಡುವೆನು. ಎಲ್ಲ ಧರ್ಮಗಳ ಸಾರಸ್ವರೂಪನಾಗಿರುವೆನು. ಅವೆಲ್ಲವೂ ನನ್ನಲ್ಲಿ ಅಪರಿಮಿತವಾಗಿರುವುವು. ನನ್ನ ಸಂಬಂಧವಾದ ಧ್ಯಾನೋಪಾಸನೆಗೆ ಅಂಗಭೂತಗಳಾದ, ಅತಏವ ಮುಕ್ತಿಸಾಧನಗಳಾದ ಪೂರ್ವೋಕ್ತಧರ್ಮಗಳೆಲ್ಲವನ್ನು, ನನ್ನ ಸರ್ವೋತ್ತಮತ್ವಜ್ಞಾನಸಹಿತರಾಗಿ ಯಾವಭಕ್ತರು, ಯಥಾಯೋಗ್ಯವಾಗಿ ಸಾಧಿಸಿಕೊಳ್ಳಲು ಅವಕಾಶವಾಗುವ ಕರ್ಮಗಳನ್ನು, ಉಕ್ತಪ್ರಕಾರದಿಂದ ಶ್ರದ್ಧೆಯಿಂದ ಆಚರಿಸುವರೋ ಅವರು ನನಗೆ ಅತ್ಯಂತ ಪ್ರೀತಿವಿಷಯರು—ಪ್ರಿಯತಮರೆನಿಸುವರು. (೨೦)

ಹನ್ನೆರಡನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೩.

[ಈ ಮೂರನೆಯ ಷಟ್ಕವು, ಹಿಂದಿನ ಎರಡೂ ಷಟ್ಕಗಳ ವಿಸ್ತಾರಪರ ನಾದುದೆಂದು ಗ್ರಂಥಾರಂಭದಲ್ಲಿ ಹೇಳಲ್ಪಟ್ಟಿದೆಯಷ್ಟೆ. ಎರಡನೆಯ ಅಧ್ಯಾಯದಲ್ಲಿ ನಿರೂಪಿತವಾದ ಜೀವಸ್ವರೂಪ, ಎರಡನೆಯ ಷಟ್ಕದಲ್ಲಿ ಪ್ರತಿಪಾದಿತವಾದ ಮಹಾಮಹಿಮೋಪೇತಭಗವತ್ಸ್ವರೂಪ, ಏಳನೆಯ ಅಧ್ಯಾಯದಲ್ಲಿ, ಭೂವ್ಯಾದಿ ಅಷ್ಟವಿಧಪ್ರಕೃತಿಗಳು ಭಗವಂತನ ಅಧೀನ ವೆಂದು ಹೇಳಿದ್ದರಿಂದ ಸೂಚಿತವಾದ ಕ್ಷೇತ್ರ, ಮತ್ತು ಅಲ್ಲಲ್ಲಿ ವಿಕ್ಷಿಪ್ತವಾಗಿ ಹೇಳಲ್ಪಟ್ಟ ಅರ್ಥವಿಶೇಷಗಳು, ಮೂರನೆಯ ಷಟ್ಕದ ಮೊದಲನೆಯ ಈ ಅಧ್ಯಾಯದಲ್ಲಿ, ಅರ್ಜುನನ ಪ್ರಶ್ನಪೂರ್ವಕವಾಗಿ, ಸಂಕ್ಷೇಪದಿಂದ ಬುದ್ಧ್ಯಾ- ರೂಢವಾಗುವಂತೆ ಪ್ರದರ್ಶಿಸಲ್ಪಡುತ್ತವೆ.]

ಅರ್ಜುನ—ಪ್ರಕೃತಿ, ಜೀವ, ಕ್ಷೇತ್ರ ಕ್ಷೇತ್ರಜ್ಞ, ಜ್ಞಾನಸಾಧನೆ, ಜ್ಞಾನವಿಷಯಗಳನ್ನು (ಪುನಃ ಸಂಗ್ರಹವಾಗಿ ಕೇಳಿ) ತಿಳಿಯಲಿಚ್ಛಿಸುವೆನು, ಕೇಶವ! (೧)

ಶ್ರೀಕೃಷ್ಣ— ಹೇ ಪಾರ್ಥ! ಯೋಗ್ಯಪ್ರಶ್ನೆಯನ್ನು ಮಾಡಿರುವೆ. ಭಗವತ್ಸ್ವರೂಪಜ್ಞಾನವು ಮುಕ್ತಿಸಾಧನಗಳಲ್ಲಿ ಮುಖ್ಯವಾದುದರಿಂದ ಈ ಮೊದಲು ಅದನ್ನು ನಿರೂಪಿಸಿದ್ದರೂ, ವಿಶದಗೊಳಿಸಿ ಮತ್ತೆ ಹೇಳಬೇಕಾ ದುದು ಅವಶ್ಯಕವೇ ಸರಿ. ಸರ್ವಕ್ಷೇತ್ರಗಳನ್ನು ಬಲ್ಲ **ಕ್ಷೇತ್ರಜ್ಞನೆಂಬ** ಮಹಿಮಾಜ್ಞಾನಸಹಿತವಾದ ಭಗವತ್ಸ್ವರೂಪದ ಅರಿವೇ ಮುಕ್ತಿಸಾಧನ ವಾಗುವುದು. ಆದುದರಿಂದ ಕ್ಷೇತ್ರಸ್ವರೂಪವನ್ನು ತಿಳಿಸಿ, ಭಗವಂತನ ಕ್ಷೇತ್ರಜ್ಞತ್ವವನ್ನು ಸಾಧಿಸಿಕೊಡುವೆನು, ಶ್ರದ್ಧೆಯಿಂದ ಕೇಳು. ಹೇ ಕೌಂತೇಯ! ಅವ್ಯಕ್ತತತ್ವ, ಮಹತ್ತತ್ವ, ಅಹಂಕಾರತತ್ವ ಮೊದಲಾದವು ಗಳು 'ಶರೀರ'ವೆಂದು ಕರೆಯಲ್ಪಡುತ್ತವೆ. ಶರೀರವೇ ಕ್ಷೇತ್ರವು. ಈ ತತ್ವ ಗಳು, ತಮ್ಮ ಪರಿಣಾಮಗಳಾದ ದೇಹೇಂದ್ರಿಯಾದಿಗಳ ವಿಯೋಗದಿಂದ ಜೀವನಿಗೆ ಹಿಂಸಾದಿಗಳನ್ನುಂಟುಮಾಡುತ್ತವೆ. (ಶೄ-ಹಿಂಸಾಯಾಂ) ಆದ್ದ ರಿಂದ 'ಶರ್' ಎಂತಲೂ, ಭಗವಂತನ ಪ್ರೇರಣೆಗೆ ಒಳಪಟ್ಟವುಗಳಾದ್ದರಿಂದ,

...ಕ್ಷೇತ್ರಜ್ಞ) ಈತ ಎಂತಲೂ, ಈ. ಎರಡೂ ಲಕ್ಷಣಗಳಿಂದ 'ಶರೀರ' ...ವು, ಈ ತತ್ತ್ವಸಮೂಹವು ಕರೆಯಲ್ಪಡುವುದು. ಭಗವಂತನ ಆವಾಸ ಸ್ಥಾನವಾದ್ದರಿಂದ 'ಕ್ಷೇತ್ರ' ಎಂದೂ ವ್ಯವಹರಿಸಲ್ಪಡುವುದು. ಈ ತತ್ತ್ವ ಸಮೂಹವು ಎಲ್ಲ ಪ್ರಾಣಿದೇಹಗಳಲ್ಲಿ ಏಕಾಂಶದಿಂದ ಇರುವುದರಿಂದ, ಕ್ಷೇತ್ರವಿಕಾರಗಳಲ್ಲಿ ಏಕದೇಶವಾದ ಈ ಶರೀರಕ್ಕೆ ವಿಸ್ತಾರಾರ್ಥಕಕ್ಷೇತ್ರ-ಶಬ್ದಪ್ರಯೋಗವು, ಯುಕ್ತವೆನಿಸುವುದು. ಜ್ಞಾನಿಗಳು, ಕ್ಷೇತ್ರವನ್ನು ಬಲ್ಲವನನ್ನು ಕ್ಷೇತ್ರಜ್ಞನೆಂದು, ಹೇಳುವರು. (೨)

ಅರ್ಜುನ—ಜೀವನೂ ಸಹ ಯತ್ಕಿಂಚಿತ್ ತನ್ನ ಶರೀರವನ್ನು ತಿಳಿಯುತ್ತಿರುವುದರಿಂದ ಕ್ಷೇತ್ರಜ್ಞನೆನಿಸಲಾರನೇ?

ಶ್ರೀಕೃಷ್ಣ—ಅಲ್ಲ; ಜೀವನು ಕ್ಷೇತ್ರಜ್ಞನಲ್ಲ, ನಾನೇ ಕ್ಷೇತ್ರಜ್ಞನು. ಅವ್ಯಕ್ತಾದಿ ಎಲ್ಲಕ್ಷೇತ್ರಗಳಲ್ಲಿ ನನ್ನನ್ನೇ ಕ್ಷೇತ್ರಜ್ಞನೆಂದು ತಿಳಿ. ಹೇ ಭಾರತ; ಈ ವಿಧವಾದ ಕ್ಷೇತ್ರ, ಕ್ಷೇತ್ರಜ್ಞ ಜ್ಞಾನವೇ ನನಗೆ ಸಮ್ಮತವಾದ ಸಮೀಚೀನ ಜ್ಞಾನವು. (೩) ಕ್ಷೇತ್ರಸ್ವರೂಪವನ್ನು ವಿಸ್ತರಿಸುವೆನು, ಕೇಳು. ಭಗವದಾವಾಸಸ್ಥಾನವಾದ್ದರಿಂದ ಕ್ಷೇತ್ರವೆಂದು ಕರೆಯಲ್ಪಡುವ ಶರೀರಪದದಿಂದ ವಿವಕ್ಷಿತವಾದ ಅವ್ಯಕ್ತಾದಿತತ್ತ್ವಸಮೂಹದ ಸ್ವರೂಪವನ್ನೂ, ಅದರ ಪ್ರಕಾರಗಳನ್ನೂ, ಯಾವ ವಿಕಾರದಿಂದ ಯುಕ್ತವೆಂಬುದನ್ನೂ, ಯಾವ ಪುರುಷನಿಂದ ಮತ್ತು ಹೇಗೆ ಪ್ರವರ್ತಿಸುವುದೆಂಬುದನ್ನೂ, ಆ ಪ್ರವರ್ತಕನು ಕ್ಷೇತ್ರಪ್ರವರ್ತಕಧರ್ಮವಲ್ಲದೇ ಬೇರಾವ ಸಾಮರ್ಥ್ಯಾತಿಶಯಗಳುಳ್ಳವನೆಂಬುದನ್ನೂ ಸಂಕ್ಷೇಪವಾಗಿ ನನ್ನಿಂದ ಕೇಳಿ ತಿಳಿಯುವವನಾಗು. (೪) ಕ್ಷೇತ್ರಸ್ವರೂಪವು ಋಷಿಗಳಿಂದ ಬಹುವಿಧವಾಗಿ ನಿರೂಪಿತವಾಗಿ, ವಿವಿಧ ವೇದಗಳಿಂದ ಪ್ರತ್ಯೇಕವಾಗಿ ಹೇಳಲ್ಪಟ್ಟು, ನ್ಯಾಯಬದ್ಧವಾದ ಬ್ರಹ್ಮಸೂತ್ರ ಪದಗಳಿಂದ ವಿಶೇಷವಾಗಿ ನಿಶ್ಚಯಿಸಲ್ಪಟ್ಟಿದೆ—ನಿರ್ಣೀತವಾಗಿದೆ. ಹೇ ಅರ್ಜುನ! ಹೀಗೆ ಪ್ರಮಾಣಗಳಿಂದ ಸಿದ್ಧವಾದುದನ್ನೇ ಹೇಳುವೆನು; ಕೇಳಿ ಅದರಲ್ಲಿ ವಿಶ್ವಾಸವನ್ನು ಹೊಂದು. (೫) ಭೂ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚ ಮಹಾಭೂತಗಳು; ಮಹತ್ತತ್ತ್ವ ಮತ್ತು ಅಹಂಕಾರತತ್ತ್ವಗಳು; ಬುದ್ಧಿ, ಸತ್ತ್ವರಜಸ್ತಮೋಗುಣಗಳಿಂದ ಕೂಡಿದ

ಪ್ರಕೃತಿ, ಹನ್ನೊಂದು ಇಂದ್ರಿಯಗಳು (ಶ್ರೋತ್ರ, ಚಕ್ಷು, ತ್ವಕ್ ರಸನ ಮತ್ತು ಘ್ರಾಣಗಳೆಂಬ ಐದು ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಗುದ, ಗುಹ್ಯಗಳೆಂಬ ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು); ಜ್ಞಾನೇಂದ್ರಿಯಗಳ ವಿಷಯಗಳಾದ, ಶಬ್ದ, ರೂಪ, ಸ್ಪರ್ಶ, ರಸ, ಗಂಧಗಳು; ಇವೆಲ್ಲವೂ ಕ್ಷೇತ್ರಗಳು. (೬) ಕ್ಷೇತ್ರವಿಕಾರಗಳನ್ನು ಹೇಳುವೆನು, ಕೇಳು. ಇಚ್ಛಾ, ದ್ವೇಷ (ಇತರರಿಗೆ ಅಸಮ್ಮತವಾದುದನ್ನು ಮಾಡುವುದು); ಸುಖ, ದುಃಖ; ದೇಹ, ಸ್ಮರಣಶಕ್ತಿ, ಧೈರ್ಯ; ಇವೆಲ್ಲ ಕ್ಷೇತ್ರವಿಕಾರಗಳು. ಈ ವಿಕಾರಗಳಿಂದ ಸಹಿತವಾದ ಕ್ಷೇತ್ರಗಳ ಇಡೀ ಸಮುದಾಯವು ಸಂಕ್ಷೇಪವಾಗಿ ಕ್ಷೇತ್ರವೆಂದು ಉದಾಹರಿಸಲ್ಪಡುತ್ತದೆ. ಅರ್ಜುನ! ಕ್ಷೇತ್ರ ಮತ್ತು ತದ್ವಿಕಾರಗಳ ಅಭಿಮಾನಿಗಳನ್ನೂ ತಿಳಿಯಬೇಕು. ಅವರಲ್ಲಿಸಹ ನಾನೇ ಅಂತರ್ಯಾಮಿಯಾಗಿದ್ದು ಪ್ರೇರಕನಾಗಿರುವುದರಿಂದ, ಅವರಿಗೂ ಕ್ಷೇತ್ರತ್ವವು ಯುಕ್ತವಾಗುವುದು. ಭೂಮಿಗೆ **ಧರಾದೇವಿಯೂ**, ಜಲಕ್ಕೆ **ವರುಣನೂ**, ಅಗ್ನಿಗೆ ವಹ್ನಿಯೂ, ವಾಯುವಿಗೆ **ಮುಖ್ಯವಾಯುಪುತ್ರಮರೀಚಿಯೂ**, ಆಕಾಶಕ್ಕೆ ವಿಘ್ನೇಶನೂ ಅಭಿಮಾನಿಗಳು. ಮಹತ್ತತ್ವಕ್ಕೆ **ಚತುರ್ಮುಖನೂ**, ಅಹಂಕಾರತತ್ವಕ್ಕೆ **ರುದ್ರನೂ**, ಬುದ್ಧಿಗೆ **ಉಮಾದೇವಿಯೂ**, ಅವ್ಯಕ್ತನಾಮಕತ್ರಿಗುಣಾತ್ಮಕಪ್ರಕೃತಿಗೆ **ಶ್ರೀದೇವಿಯೂ** ಅಭಿಮಾನಿಗಳು. ಶ್ರೋತ್ರಕ್ಕೆ **ಚಂದ್ರನೂ**, ಚಕ್ಷುಸ್ಸಿಗೆ **ಸೂರ್ಯನೂ**, ತ್ವಗಿಂದ್ರಿಯಕ್ಕೆ ವಾಯುಪುತ್ರಮರುತ್ತನೂ, ರಸಕ್ಕೆ (ರೂಪಾಂತರದಿಂದ) **ವರುಣನೂ**, ಘ್ರಾಣಕ್ಕೆ **ಅಶ್ವಿನೀದೇವತೆಗಳೂ**, ವಾಗಿಂದ್ರಿಯಕ್ಕೆ **ಅಗ್ನಿಯೂ**, ಪಾಣಿ (ಹಸ್ತ)ಗಳಿಗೆ ವಾಯುಪುತ್ರರಾದ ಬೇರಿಬ್ಬರು **ಮರುತ್ತರೂ**, ಪಾದಗಳಿಗೆ, ವಿಷ್ಣುವಿನ ಆವೇಶಯುಕ್ತರಾದ ಶಚೀದೇವಿಯ ಮಕ್ಕಳಾದ **ಯಜ್ಞ** ಮತ್ತು **ಶಂಭು** ಎಂಬೀರ್ವರೂ, ಗುದಕ್ಕೆ **ಯಮನೂ**, ಗುಹ್ಯಕ್ಕೆ **ದಕ್ಷ** ಮತ್ತು **ಮನುಗಳೂ**, ಶಬ್ದಾದಿ ವಿಷಯಗಳಿಗೆ **ಐವರು ಶಿವಪುತ್ರರೂ**, ಇಚ್ಛೆಗೆ **ಶ್ರೀ** ಮತ್ತು **ಭಾರತೀ** ದೇವಿಯರೂ, ದ್ವೇಷಕ್ಕೆ **ಕಲಿಯೂ**, ದುಃಖಕ್ಕೆ **ದ್ವಾಪರನೂ** (ದ್ವಾಪರನೆಂಬ ದೈತ್ಯನೂ), ಸುಖಕ್ಕೆ **ಮುಖ್ಯವಾಯುವೂ**, ಧೃತಿಗೆ **ಸರಸ್ವತೀ**

ದೇವಿಯರೂ, ದೇಹಕ್ಕೆ ಆಯಾ ದೇಹಗತ ಜೀವಚೇತನರೂ, ತ್ರಗೆ ಶ್ರೀದೇವಿಯೂ ಅಭಿಮಾನಿಗಳು. (೭)

ಅರ್ಜುನ—ಪ್ರಭೋ! ಕ್ಷೇತ್ರ, ಕ್ಷೇತ್ರಪ್ರಕಾರ ಮತ್ತು ವಿಕಾರಗಳನ್ನು ನು ಯಾರಿಂದ ಹೇಗೆ ಪ್ರವರ್ತಿಸುವುವೆಂಬುದನ್ನೂ, ಆ ಪ್ರವರ್ತಕನ ಪವನ್ನೂ ಆತನ ಮಹಿಮಾತಿಶಯಗಳನ್ನೂ ನಿರೂಪಿಸು.

ಶ್ರೀಕೃಷ್ಣ—ಪ್ರವರ್ತಕನ ಸ್ವರೂಪವನ್ನೂ, ಆತನ ಮಹಿಮಾತಿಶಯ ನ್ನೂ ಮೊದಲು ಹೇಳಿ, ನಂತರ ಯಾರಿಂದ ಹೇಗೆ ಪ್ರವರ್ತಿಸುವುವೆಂಬು ನ್ನು ಹೇಳುವೆನು. ಆದರೆ ಈ ಉಭಯವಿಷಯಕಜ್ಞಾನವು, ಸಾಧನ ತವಾದ ಯಾವುದೊಂದು ಪ್ರಕಾರದ ಶ್ರವಣಮಾತ್ರದಿಂದ ಅನುಭವಕ್ಕೆ ರೂಢವಾಗುವುದಿಲ್ಲ. ಆದ್ದರಿಂದ ಈ ಜ್ಞಾನಲಾಭಕ್ಕೆ ಅವಶ್ಯಕವಾದ ಸಾಧನೆಗಳನ್ನು ಮೊದಲು ನಿರೂಪಿಸುವೆನು. 1 ಆತ್ಮಸ್ತುತಿರಹಿತನಾಗಬೇಕು. 2 ಸ್ವಾನುಭವಸಿದ್ಧವಾದ ತನ್ನ ಅಲ್ಪತೆಯನ್ನು ತಿಳಿದೂ ಮಹತ್ವಪ್ರದರ್ಶನ ಲ್ಲಿ ತೊಡಗುವ ದಂಭದಿಂದ ದೂರನಾಗಿರಬೇಕು. 3 ಅಹಿಂಸಾಪರನಾಗ ಬೇಕು; ಸಹನಶೀಲನಾಗಬೇಕು. 4 ಸನ್ಮಾರ್ಗದಲ್ಲಿ ಮನೋವಾಕ್ಕರ್ಮಗಳು ಋಜುವಾಗಿರಬೇಕು, (ಏಕಪ್ರಕಾರದಿಂದಿರಬೇಕು); 5 ಜ್ಞಾನಿಗಳನ್ನು ಸೇವಿಸಬೇಕು. 6 ಜಲಮೃತ್ತಿಕಾದಿಗಳಿಂದ ಬಾಹ್ಯಶೌಚವನ್ನೂ, 7 ಭಾವ ಶುದ್ಧಿಯಿಂದ ಅಂತಶ್ಶೌಚವನ್ನೂ, ಹೊಂದಿರಬೇಕು. 8 ಸ್ಥೈರ್ಯವಿರಬೇಕು, (ಸ್ಥೈರ್ಯವೆಂದರೆ ಭಯಾದಿಗಳಿಂದ ಸ್ವಧರ್ಮಪರಿತ್ಯಾಗಮಾಡದಿರುವುದು). 9 ಮನಸ್ಸನ್ನು ವಿಶೇಷವಾಗಿ ನಿಗ್ರಹಿಸಿ, ತನ್ನ ವಶದಲ್ಲಿಟ್ಟುಕೊಂಡಿರಬೇಕು. (೮) 10 ಶಬ್ದಾದಿವಿಷಯಗಳಲ್ಲಿ (ಭೋಗ್ಯವಸ್ತುಗಳಲ್ಲಿ) ಸ್ನೇಹವನ್ನು ಪರಿತ್ಯಾಗ ಮಾಡಬೇಕು; 11 ತನ್ನಲ್ಲಿಲ್ಲದ ಗುಣಗಳನ್ನು ಆರೋಪಿಸಿಕೊಳ್ಳುವ ಮೋಹಬಿಡಬೇಕು; 12 ಜನನ, ಮರಣ, ಮುಪ್ಪು, ರೋಗಗಳಿಂದಾಗುವ ದುಃಖಾನುಭವವು ತನಗುಂಟೆಂಬುದನ್ನು ಪ್ರತಿಕ್ಷಣದಲ್ಲಿ ಸ್ಮರಿಸುತ್ತಿರಬೇಕು (೯). 13 ಮಕ್ಕಳು, ಹೆಂಡಿರು, ಗೃಹ ಮೊದಲಾದವುಗಳಲ್ಲಿ ಸ್ನೇಹವಿಲ್ಲದಿರಬೇಕು; 14 ಈ ಸ್ನೇಹತ್ಯಾಗವು ಅತಿಪಕ್ವವಾಗಬೇಕು; 15 ಇಷ್ಟಲಾಭದಲ್ಲಿ

[illegible] (೧೦) [illegible] (೧೧) [illegible] (೧೨) [illegible] ಸತ್ ಎಂದರೆ [illegible] ಅಸತ್ ಎಂದರೆ [illegible] (೧೩)

ಅರ್ಜುನ—ಪ್ರಭೋ! ಸದಸದಾತ್ಮಕ (ಕಾರ್ಯಕಾರಣರೂಪ) ...ನಿಂದ ಪರಬ್ರಹ್ಮನು ವಿಲಕ್ಷಣನೆಂಬ ಪ್ರಮೇಯವು ಬುದ್ಧ್ಯಾರೂಢ ...ಲು ಆ ವೈಲಕ್ಷಣ್ಯವನ್ನು ವಿಸ್ತರಿಸಬೇಕಾದುದು ಅವಶ್ಯಕವು. ಅದನ್ನು ...ಳ್ಳುವೆನು.

ಶ್ರೀಕೃಷ್ಣ—ಪರಬ್ರಹ್ಮನ ಪ್ರತಿ ಅವಯವವೂ, ಹಸ್ತಪಾದಾದಿ-...ವಯವಗಳ, ಸಾಮರ್ಥ್ಯವುಳ್ಳದ್ದು. ಯಾವುದೊಂದು ಅವಯವವೂ ...ವ್ಯಾಪಾರಗಳನ್ನು ನಿರ್ವಹಿಸುವ ಶಕ್ತಿಯುಳ್ಳದ್ದು. ಉದಾಹರಣೆಗಾಗಿ, ...ರಾಮ ಮತ್ತು ನಾನು ಪರಬ್ರಹ್ಮನ ಶುಕ್ಲ, ಕೃಷ್ಣ ಕೇಶಗಳ ಅವತಾರ-...ತರು. (ಬಲರಾಮನಲ್ಲಿ ಶುಕ್ಲಕೇಶದ ಆವೇಶ ಮಾತ್ರವೆಂದು ತಿಳಿಯ...). ನಾವು ಎಲ್ಲವಿಧ ವ್ಯಾಪಾರಗಳಲ್ಲಿ ಸಮರ್ಥರಲ್ಲವೇ! ಪರಮಾತ್ಮನು ...ಎಲ್ಲ ಅವಯವಗಳಿಂದ, ಕೇಳಬಲ್ಲನು, ನೋಡಬಲ್ಲನು, ತಿಳಿಯಬಲ್ಲನು. ...ೇಂದ್ರಿಯ ವಿಷಯಗಳನ್ನೂ, ಸರ್ವೇಂದ್ರಿಯ ಕರ್ಮಗಳನ್ನೂ ಎಲ್ಲ ...ದ್ರಿಯಗಳಿಂದಲೂ ತಿಳಿಯುತ್ತಾನೆ ಮತ್ತು ಮಾಡುತ್ತಾನೆ. ಪರಬ್ರಹ್ಮನು ...ವನ್ನೇ ವ್ಯಾಪಿಸಿಕೊಂಡಿರುವವನು. (೧೪) ಸಕಲೇಂದ್ರಿಯಗಳನ್ನೂ, ...ದಿಸಕಲಗುಣಗಳನ್ನೂ ಪರಬ್ರಹ್ಮನು ತಿಳಿದವನು ಮತ್ತು ಸರ್ವರಿಗೂ ...ಸಿಕೊಡುವವನು. ಪರಬ್ರಹ್ಮನು ತನ್ನ ಅವಯವಗಳಿಂದ—ಇಂದ್ರಿಯ ...ಿಂದ, ಭಿನ್ನನಲ್ಲ, ಮತ್ತು ಪ್ರಾಕೃತ ದೇಹೇಂದ್ರಿಯಾದಿಗಳುಳ್ಳವನಲ್ಲ. ...ತನು ಸರ್ವಸಾರಭೋಕ್ತನು; ಆದರೂ ನಿರ್ಲಿಪ್ತನು; ಸರ್ವಭೋಕ್ತನೂ ...ಕುದು—ಸರ್ವಸಂಹಾರಕನಾದುದರಿಂದ. ಪ್ರಾಕೃತಗುಣರಹಿತನಾದರೂ ...ಗುಣಭೋಕ್ತನು. (೧೫) ಸರ್ವಪ್ರಾಣಿಗಳ ಒಳಗೂ ಹೊರಗೂ ...ರುವನು. ಯಾವವ್ಯತ್ಯಾಸವೂ ಇಲ್ಲದೇ ಏಕಪ್ರಕಾರನಾಗಿರುವುದರಿಂದ, ...ರಬ್ರಹ್ಮನು ಅಚರನೆಂದೂ, ಸರ್ವತ್ರ ಸಂಚಾರವುಳ್ಳವನಾದುದರಿಂದ ಚರನೆಂದೂ ಕರೆಯಲ್ಪಡುವನು. ಅತಿಸೂಕ್ಷ್ಮನಾದುದರಿಂದ ಇಂದ್ರಿಯ ...ಗಳಿಂದ ಗ್ರಹಿಸಲಾಗದವನು. ಸರ್ವಗತನಾದುದರಿಂದ, ಅತಿಸಮೀಪ ...ದಲ್ಲಿಯೂ, ಅತಿದೂರದಲ್ಲಿಯೂ ಇರುವವನು. (೧೬) ವಿಭಿನ್ನರಾದ ಪ್ರಾಣಿಗಳಲ್ಲಿ, ಪರಬ್ರಹ್ಮನು ತಾನು ಅಭಿನ್ನನಾಗಿರುವನು. ಆದರೂ ಅಜ್ಞಾನಿ

ಗಳಿಗೆ ಭಿನ್ನನಂತೆ ತೋರುವನು. ಆತನು ಸಕಲಪ್ರಾಣಿಗಳ ಧಾರಣ ಪೋಷಣಕರ್ತನು, ಭಕ್ಷಕನು ಮತ್ತು ಉತ್ಪಾದಕನು. (೧೭) ಜೀವಸ್ವರೂಪ-ಪ್ರಕಾಶವೂ ಆತನ ಅಧೀನವು; ಸೂರ್ಯಾದಿಗಳ ಪ್ರಕಾಶವೂ ಆತನಿಂದಲೇ ದತ್ತವಾದುದು. ಪರಬ್ರಹ್ಮನಾದರೋ ಸ್ವಪ್ರಕಾಶನು! ಅನನ್ಯಾಧೀನನು. ಮೂಲಪ್ರಕೃತಿ, ಮೃತ್ಯು ಮತ್ತು ಅಜ್ಞಾನಗಳನ್ನು ಅತಿಕ್ರಮಿಸಿದವನು. ಇವುಗಳಿಂದ ಆತನು ಅತ್ಯಂತ ಭಿನ್ನನು. ಇವು ಯಾವುವೂ ಆತನ ಸ್ವರೂಪದಲ್ಲಿಲ್ಲ. ಇವುಗಳ ಸ್ಪರ್ಶಲೇಶವೂ ಆತನಿಗಿಲ್ಲ. ಮುಕ್ತಿಯಲ್ಲಿ ಪ್ರಾಪ್ಯನು; ಆದರೂ ಪ್ರಾಣಿಗಳ ಹೃದಯದಲ್ಲಿ ವಿಶೇಷವಾಗಿ ಸನ್ನಿಹಿತನಾಗಿರುವನು (೧೮). ಹೇ ಅರ್ಜುನ! ಹೀಗೆ, ಕ್ಷೇತ್ರ, ಕ್ಷೇತ್ರ-ವಿಕಾರ; ಜ್ಞಾನ, ಜ್ಞಾನಸಾಧನ, ಜ್ಞಾನವಿಷಯ (ಜ್ಞೇಯ)ನಾದ ಪರಬ್ರಹ್ಮ; ಇವುಗಳನ್ನು ಸಂಕ್ಷೇಪವಾಗಿ ನಿರೂಪಿಸಿರುವೆನು. ನನ್ನ ಭಕ್ತನು ಇದನ್ನು ತಿಳಿದು, ನನ್ನಲ್ಲಿ ನಿತ್ಯಸ್ಥಿತನಾಗಲು ಅರ್ಹನಾಗುವನು. ಎಂದರೆ ಮೋಕ್ಷಸುಖಾನುಭವಕ್ಕೆ ಸಿದ್ಧನಾಗುವನು—ಯೋಗ್ಯತೆಯುನ್ನು ಪಡೆಯುವನು. (೧೯)

ಅರ್ಜುನ—ಪ್ರವರ್ತಕನಾದ ಪರಬ್ರಹ್ಮನಿಂದ ಪ್ರೇರ್ಯವಾದ ಕ್ಷೇತ್ರವು ಹೇಗೆ ಪ್ರವರ್ತಿಸುವುದೆಂಬುದನ್ನು ನಂತರ ಹೇಳುವೆನೆಂದು ನುಡಿದೆಯಲ್ಲವೇ? ಇನ್ನು ಈ ಸಂಬಂಧವಾದ ನನ್ನ ಪ್ರಶ್ನೆಯನ್ನು ಉತ್ತರಿಸು, ದೇವ!

ಶ್ರೀಕೃಷ್ಣ—ಭಗವಂತನಿಂದ ಪ್ರೇರಣೀಯವಾದ ಪ್ರಕೃತಿಪುರುಷಾದಿ-ರೂಪಕ್ಷೇತ್ರವನ್ನು ಸಪ್ರಕಾರವಾಗಿ ನೆನಪಿನಲ್ಲಿಡಬೇಕು. ಆಗ ಮಾತ್ರ, ಪ್ರೇರಕಶಕ್ತಿಯು ಹೇಗೆ ಕೆಲಸಮಾಡುವುದೆಂಬುದನ್ನೂ ಮತ್ತು ಪ್ರೇರ್ಯವಸ್ತುಗಳು ಹೇಗೆ ಪ್ರವರ್ತಿಸುವುವೆಂಬುದನ್ನೂ ಸುಲಭವಾಗಿ ಗ್ರಹಿಸಬಹುದು. ಪಂಚಭೂತಗಳು, ಶಬ್ದಾದಿ ಪಂಚವಿಷಯುಗಳು ಪಂಚ ಜ್ಞಾನೇಂದ್ರಿಯಗಳು, ಮಹತ್ತತ್ವ, ಅಹಂಕಾರತತ್ವ, ಮನಸ್ಸು, ಬುದ್ಧಿ ಮತ್ತು ಅವ್ಯಕ್ತವೆಂಬ ತ್ರಿಗುಣಾತ್ಮಕಪ್ರಕೃತಿ, ಹೀಗೆ ಈ ಇಪ್ಪತ್ತೈದು ತತ್ವಗಳ ಸಮೂಹವು ಪ್ರಕೃತಿಯೆಂದು ಕರೆಯಲ್ಪಡುತ್ತದೆ. ಜೀವನು

ಪುರುಷನೆನಿಸುವನು. ಇವೆರಡೂ (ಪ್ರಕೃತಿ, ಪುರುಷ) ಉತ್ಪತ್ತಿಯಿಲ್ಲದವುಗಳು. ಕ್ಷೇತ್ರವಿಕಾರಗಳೆಂದೂ ಈ ಮೊದಲು ನಾನು ನಿರೂಪಿಸಿದ, ಇಚ್ಛಾದ್ವೇಷಾದಿಗಳಿಗೂ, ಸತ್ವಾದಿಗುಣಗಳಿಗೂ, ಪ್ರಕೃತಿಯೇ ಉಪಾದಾನ-ಕಾರಣವು.

ಅರ್ಜುನ—ಪ್ರಕೃತಿಯೇ ತ್ರಿಗುಣಾತ್ಮಕವಾಗಿರುವಾಗ, ಸತ್ವಾದಿ-ಗುಣಗಳಿಗೆ ಪ್ರಕೃತಿಯು ಉಪಾದಾನಕಾರಣವೆಂದರೇನು ?

ಶ್ರೀಕೃಷ್ಣ—ಯದ್ಯಪಿ ಪ್ರಕೃತಿಯು ಗುಣತ್ರಯಾತ್ಮಕವೆಂದು ಸಾಮಾನ್ಯವಾಗಿ ಹೇಳಲ್ಪಡುತ್ತದೆ. ಸತ್ವಾದಿಗುಣತ್ರಯಗಳನ್ನು ಮೂಲಪ್ರಕೃತಿಯ ವಿಕಾರಗಳೆಂದು ಹೇಳುವುದೂ, ಸತ್ವಾದಿಗುಣಗಳಿಗೆ ಪ್ರಕೃತಿಯು ಉಪಾ-ದಾನಕಾರಣವೆಂದು ನಿರೂಪಿಸುವುದೂ, ಅತ್ಯಲ್ಪವಿಕಾರವಿವಕ್ಷೆಯಿಂದ. ಇಚ್ಛಾದ್ವೇಷಾದಿಗಳಾದರೋ ವಿಕಾರಬಾಹುಳ್ಯವುಳ್ಳವುಗಳು. ವಿಕಾರವು ಎಷ್ಟೇ ಅಲ್ಪವಾದರೂ, ಗುಣತ್ರಯಗಳು ಮೂಲಪ್ರಕೃತಿಯ ವಿಕಾರಗಳೆಂದು ನಿರೂಪಿಸುವುದರಲ್ಲಿ ತಥ್ಯಾಂಶವಿದೆ. ತಿಳಿದೆಯಾ, ಅರ್ಜುನ?

ಅರ್ಜುನ—ಹೇ ಸ್ವಾಮಿ! ಇಚ್ಛಾದಿಗಳು ಪ್ರಕೃತಿಯ ವಿಕಾರಗಳೆಂದರೇನು ಮತ್ತು ಪ್ರಕೃತಿಯು ಅವುಗಳಿಗೆ ಉಪಾದಾನಕಾರಣವೆಂಬುದನ್ನು ಹೇಗೆ ಗ್ರಹಿಸಬಹುದು ?

ಶ್ರೀಕೃಷ್ಣ—ಜೀವಸ್ವರೂಪದ ಇಚ್ಛಾದಿಗಳು ಇಲ್ಲಿ ಪ್ರಸಕ್ತವಾದುವುಗಳಲ್ಲ. ಇಚ್ಛಾ, ದ್ವೇಷ, ಸುಖ, ದುಃಖ, ಸ್ಮರಣಶಕ್ತಿ ಮೊದಲಾದ ಪ್ರಾಕೃತ ವೃತ್ತಿಗಳುಂಟು. ಈ ವಿವಕ್ಷೆಯಿಂದ ಇವೆಲ್ಲವೂ ಪ್ರಕೃತಿವಿಕಾರಗಳೇ ಸರಿ. ಮನಸ್ಸು, ಬುದ್ಧಿ ಮೊದಲಾದವುಗಳಿಂದ (ಅಂತಃಕರಣಗಳಿಂದ) ಸಂಕಲ್ಪಾದಿ ವ್ಯಾಪಾರಗಳು ಸಂಭವಿಸುವುದಿಲ್ಲವೇ? ಅಷ್ಟುಮಾತ್ರಕ್ಕೆ, ಅಂತಃಕರಣಕ್ಕೆ ಸ್ವತಃಪ್ರವೃತ್ತಿಯಿರುವುದೆಂದಾಗಲಿ, ಅದು ಪ್ರಾಕೃತವಲ್ಲವೆಂದಾಗಲಿ ತಿಳಿಯುವುದು ಸರಿಯಲ್ಲ. ಸೂಕ್ಷ್ಮಪ್ರಾಕೃತತತ್ವಗಳು, ಪ್ರೇರಕಶಕ್ತಿಯ ಪ್ರಭಾವದಿಂದ ಈ ವಿಧವಾದ ವ್ಯಾಪಾರಗಳುಳ್ಳದ್ದಾಗುತ್ತವೆ. ಪ್ರಾಕೃತ

ಇಚ್ಛಾದಿಗಳು ಸ್ವರೂಪೇಚ್ಛಾದಿಗಳನ್ನು ನಿರ್ಬಂಧಿಸುತ್ತವೆ. ಈ ಬಂಧನ ದಿಂದ ಮುಕ್ತನಾಗುವುದೇ ಚೇತನನ ಗುರಿಯು. (೨೦)

ಅರ್ಜುನ— ಪ್ರಕೃತಿವಿಕಾರಗಳಿಗೆ, ಪ್ರಕೃತಿಯು ಉಪಾದಾನಕಾರಣ ವೆಂಬುದನ್ನು ಗ್ರಹಿಸಿದೆನು. ಆದರೆ ಪ್ರಕೃತಿವಿಕಾರಗಳಾದ ದೇಹೇಂದ್ರಿಯಾದಿ ಗಳಿಗೆ ಪ್ರೇರಕಶಕ್ತಿ ಪ್ರಭಾವದಿಂದ ಉಂಟಾಗುವ ಕರ್ತೃತ್ವ (ಕಾರ್ಯಶಕ್ತಿ) ವಿಷಯದಲ್ಲಿ ಸಂಶಯವು ಬಾಧಿಸುತ್ತದೆ. ದೇಹೇಂದ್ರಿಯಾದಿಗಳಿಂದ ವ್ಯಾಪಾರಮಾಡುವವನೂ, ಸುಖದುಃಖಾದಿಗಳನ್ನು ಅನುಭವಿಸುವವನೂ ಜೀವನಷ್ಟೆ! ಇಚ್ಛಾದಿಗಳಿಗೆ ಪ್ರಕೃತಿಯು ಹೇಗೆ ಕಾರಣವೆಂಬುದನ್ನು ಸ್ಪಷ್ಟಗೊಳಿಸಿ, ಅನುಗ್ರಹಿಸು.

ಶ್ರೀಕೃಷ್ಣ—ಅರ್ಜುನ! ಬಹುಗಹನವಾದ ವಿಷಯವನ್ನು ಕುರಿತು ಪ್ರಶ್ನಿಸಿರುವೆ. ದೇಹೇಂದ್ರಿಯಾದಿಗಳು ಪರಿಣಾಮಕಾರ್ಯಗಳು. ಪರಿ-ಣಾಮಕಾರ್ಯದಲ್ಲಿ ಮೂಲಜಡಪ್ರಕೃತಿಯು ಕಾರಣವು. ಸುಖದುಃಖಗಳ ಅನುಭವವಿಷಯದಲ್ಲಿ ಜೀವನು ಕರ್ತನು. ದೇಹೇಂದ್ರಿಯಾದಿಗಳ ಕರ್ತೃತ್ವ (ಕಾರ್ಯಶಕ್ತಿ) ವಿಷಯದಲ್ಲಿ, ಚೇತನಪ್ರಕೃತಿಯು (ರಮಾ-ದೇವಿಯು) ಕಾರಣಳು. ಪ್ರಕೃತಿವಿಕಾರಗಳಾದ ಸುಖದುಃಖಗಳು, ಜೀವ ನಿಗೆ ಸ್ವೀಯತಯಾ (ತನ್ನವೇ ಎಂದು) ಅನುಭವಕ್ಕೆ ಬರುವುದೆಂಬ ಭೋಗ ವಿಷಯದಲ್ಲಿ ಪರಮಾತ್ಮನೇ ಕಾರಣನು.

ಅರ್ಜುನ—ಸರ್ವಕಾರಣನಾದ ಪರಬ್ರಹ್ಮನು ದೇಹೇಂದ್ರಿಯಾದಿಗಳ ಕರ್ತೃತ್ವವಿಷಯದಲ್ಲಿ ಕಾರಣನಲ್ಲವೇನು ? ಮತ್ತು ಸುಖದುಃಖಭೋಗ-ದಾನದಲ್ಲಿ ದೇವಿಯು ಕಾರಣಳಲ್ಲವೆಂದು ತಿಳಿಯಲೇ ?

ಶ್ರೀಕೃಷ್ಣ—ಹಾಗಲ್ಲ, ಅರ್ಜುನ! ದೇವಿಗೆ ಭೋಗದಾನದಲ್ಲಿ ಅಲ್ಪ ಪ್ರವೃತ್ತಿಯು; ದೇಹೇಂದ್ರಿಯಕರ್ತೃತ್ವವಿಷಯದಲ್ಲಿ ಭೋಗದಾನಕ್ಕಿಂತ ಅಧಿಕಪ್ರವೃತ್ತಿಯು. ಆದ್ದರಿಂದ ದೇಹೇಂದ್ರಿಯ ಕರ್ತೃತ್ವವಿಷಯದಲ್ಲಿ ದೇವಿಯು ಕಾರಣಳೆಂದೂ, ಉಭಯಕ್ಕೂ ಮುಖ್ಯಕಾರಣನಾದ ಪರ-ಮಾತ್ಮನು ಭೋಗದಾನದಲ್ಲಿ ವಿಶೇಷಕಾರಣನೆಂದೂ ಹೇಳಲ್ಪಡುವರು. (೨೧)

ಗೆ ಸುಖದುಃಖಭೋಗದಾನದಲ್ಲಿ ದೇವದೇವಿಯರಿಬ್ಬರೂ, ಕಾರಣರಾ ರೂ ನೀನು ಹೇಳಿದಂತೆ ಸುಖದುಃಖಗಳನ್ನು ಭೋಗಿಸುವವನು ಜೀವನೇ. ಪ್ರಕೃತಿಕಾರ್ಯಗಳಾದ (ವಿಕಾರಗಳಾದ) ದೇಹಾದಿಗಳಲ್ಲಿದ್ದು ಜೀವನು ಪ್ರಾಕೃತಸುಖದುಃಖಾದಿಗಳನ್ನು ಅನುಭವಿಸುತ್ತಾನೆ.

ಅರ್ಜುನ—ಹೇ ಕೃಷ್ಣ! ಸ್ವಾಭಾವಿಕವಾಗಿ ಶುದ್ಧನಾದ ಜೀವನಿಗೆ ಈ ದೇಹಾದಿಗಳ ಸಂಬಂಧವು ನಿಜಕ್ಕೂ ಇಲ್ಲವೆಂದೇಕೆ ತಿಳಿಯಬಾರದು?

ಶ್ರೀಕೃಷ್ಣ—ಇದೇನು! ಮಿಥ್ಯಾವಾದಿಗಳಂತೆ ಪ್ರಶ್ನಿಸುತ್ತಿರುವಿ? ದೇಹೇಂದ್ರಿಯಾದಿಗಳ ಸಂಬಂಧದಿಂದ ಸುಖದುಃಖಾದಿಗಳ ಅನುಭವವು ನಿರ್ಬಾಧವಾಗಿ ಸಿದ್ಧವಾಗಿರಲು, ದೇಹಾದಿಗಳ ಸಂಬಂಧವು ಮಿಥ್ಯೆಯಾಗ ಬಲ್ಲದೇ? ಎಂದಿಗೂ ಇಲ್ಲ.

ಅರ್ಜುನ—ಹಾಗಾದರೆ ಶುದ್ಧಸ್ವರೂಪನಾದ ಜೀವನು ಪ್ರಾಕೃತದೇಹ ಗಳಲ್ಲಿ ಸುತ್ತಲು ಕಾರಣವೇನು?

ಶ್ರೀಕೃಷ್ಣ—ಸತ್ವಾದಿಗುಣಮಯವಾದ ದೇಹಾದಿಗಳಲ್ಲಿ, ನನ್ನವೆಂಬ ಮಮತಾಸಂಬಂಧವು, ಜೀವನು ನೀಚೋಚ್ಚದೇಹಗಳನ್ನು ಹೊಂದಲಿಕ್ಕೆ (ಹುಟ್ಟು ಸಾವುಗಳಿಗೆ) ಕಾರಣವಾಗುತ್ತದೆ. ಗುಣಸಂಗರೂಪವಾದ ಈ ಮಮತೆಯು, ಸಂಸಾರದಲ್ಲಿ ಸುತ್ತಲು ನಿಮಿತ್ತಕಾರಣವು; ಭಗವಂತನು ಸ್ವತಂತ್ರಕಾರಣನು. (೨೨) ದೇಹದಲ್ಲಿ ಜೀವನೊಂದಿಗೆ ಷಡ್ಗುಣಪೂರ್ಣ ನಾದ ಪರಮಪುರುಷನೂ ಇರುವನು. ಈತನು ಸರ್ವೋತ್ತಮನು; ಸರ್ವ ವನ್ನೂ ನೋಡುವವನು. ಈತನೇ ಸ್ವೇಚ್ಛೆಯಿಂದ ಪ್ರೇರಿಸುತ್ತಾನೆ: ಸರ್ವ ಕರ್ಮಫಲಸಾರವನ್ನು ಸ್ವೀಕರಿಸಿ ರಕ್ಷಿಸುತ್ತಾನೆ; ಸರ್ವಶಕ್ತನಾದುದರಿಂದ ಮಹೇಶ್ವರನೆಂದೂ ಪರಮಾತ್ಮನೆಂದೂ ಕರೆಯಲ್ಪಡುತ್ತಾನೆ. ಹೀಗೆ ಸರ್ವ ದ್ರಷ್ಟನೂ, ಸರ್ವಸಾರಭೋಕ್ತನೂ, ಸರ್ವಶಕ್ತನೂ, ಇಚ್ಛಾನುಸಾರ (ಸ್ವತಂತ್ರ) ಪ್ರೇರಕನೂ ಆದ ಪರಮಾತ್ಮನೇ ಸ್ವತಂತ್ರಕಾರಣನೆಂದು ತಿಳಿ. ದೇಹಪುರುಷಾದಿಗಳು ಯಾರಿಂದ ಪ್ರವರ್ತಿಸುವುವೆಂಬುದನ್ನು ಗ್ರಹಿಸಿ ? (೨೩)

ಅರ್ಜುನ—ಪ್ರಕೃತಿ ಪುರುಷರ ವಿಚಾರವನ್ನು ವಿಶೇಷವಾಗಿ ಕೇಳ ಬೇಕೆನಿಸಿದೆ. ಈ ಪ್ರಮೇಯಜ್ಞಾನಕ್ಕೆ ಫಲವೇನು, ಪ್ರಭೋ !

ಶ್ರೀಕೃಷ್ಣ—'ಪ್ರಕೃತಿ' ಪದದಿಂದ ಜಡ ಮತ್ತು ಚಿತ್‌ಪ್ರಕೃತಿ (ರಮಾದೇವಿ) ಯನ್ನು ತಿಳಿಯಬೇಕು. 'ಪುರುಷ' ಪದದಿಂದ, ಜೀವ ಪರಮಾತ್ಮರೆಂಬ ಉಭಯ ಪುರುಷರನ್ನು ಗ್ರಹಿಸಬೇಕು. ಉಭಯವಿಧ ಪ್ರಕೃತಿಪುರುಷರನ್ನೂ ಅವರ ಗುಣವಿಶೇಷಗಳೊಂದಿಗೆ, ಯಾವನು, ಗುರು-ದ್ವಾರಾಶ್ರವಣಾದಿಗಳಿಂದ ಪರೋಕ್ಷವಾಗಿಯೂ, ಅಪರೋಕ್ಷದಿಂದ ಸಾಕ್ಷಾತ್ತಾಗಿಯೂ ಅರಿಯುವನೋ, ಆತನು, ಪ್ರಮಾದದಿಂದ ಅನ್ಯಾಯವನ್ನಾಚರಿಸಿದರೂ, ಪುನರ್ಜನ್ಮವನ್ನು ಹೊಂದದೇ ಮುಕ್ತನಾಗುವನು. (೨೪)

ಅರ್ಜುನ—ಈ ಪ್ರಕಾರವಾದ ಪ್ರಕೃತಿಪುರುಷರ ಸಾಕ್ಷಾತ್ಕಾರಕ್ಕೆ ಸಾಧನವಾವುದು ?

ಶ್ರೀಕೃಷ್ಣ—ಶ್ರವಣ, ಮನನ ಧ್ಯಾನಗಳೇ ಸಾಕ್ಷಾತ್ಕಾರಕ್ಕೆ ಮುಖ್ಯ-ಸಾಧನಗಳು. ಆತ್ಮದರ್ಶಿಯು ಜೀವ ಪರಮಾತ್ಮರೆಂಬ ಉಭಯವಿಧ-ಪುರುಷಸಾಕ್ಷಾತ್ಕಾರವುಳ್ಳವನು. ಪರಮಾತ್ಮನ ಸಾಕ್ಷಾದ್ದರ್ಶನದಿಂದ ಪ್ರಕೃತ್ಯಾದಿಗಳ ಸಾಕ್ಷಾತ್ಕಾರವು ಒಂದಿಗೇ ಆಗುವುದು. ಶ್ರವಣಮನನಯುಕ್ತರಾದ ಕೆಲವರು, ಬುದ್ಧಿಯಿಂದ ಗ್ರಹಿಸಿ, ಭಗವಂತನನ್ನು ಧ್ಯಾನದಿಂದ ಸ್ವ-ದೇಹದಲ್ಲಿಯೇ ಕಾಣುತ್ತಾರೆ. ಮತ್ತೆ ಕೆಲವರು ವೇದೋಕ್ತಭಗವತ್ಸ್ವರೂಪದ ಪರೋಕ್ಷಜ್ಞಾನವುಳ್ಳವರಾಗಿ ಧ್ಯಾನದಿಂದ ಸಾಕ್ಷಾದ್ದರ್ಶನವನ್ನು ಪಡೆಯುವರು. ಶ್ರವಣಾದಿಸಾಧನರಹಿತರಾದ ಕೆಲವರು ಕರ್ಮಾನುಷ್ಠಾನದಿಂದ ಜ್ಞಾನವನ್ನು ಹೊಂದಿ, ಕ್ರಮೇಣ ಧ್ಯಾನದಿಂದ ಕಾಣುತ್ತಾರೆ. ಇವರು ಸತ್ಕರ್ಮಾನುಷ್ಠಾನಲಭ್ಯವಾದ ಭಗವತ್ಪ್ರಸಾದದಿಂದ ಶ್ರವಣ, ಮನನ, ಧ್ಯಾನಗಳಲ್ಲಿ ಶಕ್ತರಾಗುವರು. ನೇರವಾಗಿ ಧ್ಯಾನದಲ್ಲಿ ತೊಡಗಲು ಅಶಕ್ತರಾದವರು, ಮೊದಲು ಜ್ಞಾನವನ್ನು ಸಂಪಾದಿಸಿ ನಂತರ ಧ್ಯಾನದಿಂದ ಯತ್ನಿಸುವರು. ಜ್ಞಾನಸಂಪಾದನೆಯಲ್ಲಿಯೂ ಅಸಮರ್ಥರಾದವರು ಕರ್ಮದಿಂದ ಶ್ರವಣಾದಿಶಕ್ತಿಯನ್ನು ಹೊಂದಿ, ಆತ್ಮದರ್ಶನವನ್ನು ಪಡೆಯುವರು. ಹೀಗೆ

ಸಾಧನಾವಸ್ಥಾಭೇದದಿಂದ ಸಾಧನ ಪ್ರಕಾರಗಳು ಭಿನ್ನವೆಂದು ಕಂಡರೂ, ಶ್ರವಣ ಮನನಧ್ಯಾನಗಳೇ ಅಪರೋಕ್ಷಕ್ಕೆ ಮುಖ್ಯಸಾಧನಗಳೆಂದು ತಿಳಿ.

ಅರ್ಜುನ—ಜೀವಸ್ವರೂಪಪ್ರತಿಭೆಯು (ಯೋಗ್ಯತೆಯು) ಈ ವಿಷಯದಲ್ಲಿ ಎಷ್ಟರಮಟ್ಟಿಗೆ ಕಾರಣವಾಗುವುದು ಮತ್ತು ಸ್ವದೇಹದಲ್ಲಿ ಮಾತ್ರವಲ್ಲದೇ ಅನ್ಯತ್ರ ಸಾಕ್ಷಾದ್ದರ್ಶನವೆಂಬುದಿಲ್ಲವೇ?

ಶ್ರೀಕೃಷ್ಣ—ಹೇ ಪಾರ್ಥ! ಅಧಿಕಾರಿಗಳ ಸ್ವರೂಪಯೋಗ್ಯತೆಯು ಕಾರಣವಾಗದಿರಬಹುದೇ? ಸ್ವರೂಪಪ್ರತಿಭೆಯು ಸಾಧನವೈವಿಧ್ಯಕ್ಕೂ ಭಗವದ್ದರ್ಶನವೈಚಿತ್ರ್ಯಕ್ಕೂ ಸಹಜವಾದ ಕಾರಣವು. ಕೆಲವುಮಂದಿ ಋಷಿಗಳು ಅನ್ಯರಿಂದ ಶ್ರವಣಮಾಡುವ ಮಾತ್ರದಿಂದ, ಭಗವಂತನನ್ನು ಮನಸ್ಸಿನಲ್ಲಿ ನಿಲ್ಲಿಸಿ ನೋಡುವರು. ನಾರದಾದಿ ದೇವರ್ಷಿಗಳಾದರೋ (ಬಹಿಃ) ಹೊರಗೂ ಸಹ ಕಾಣುವರು.

ಅರ್ಜುನ—ಋಷಿಗಳು ಅಂತಃಪ್ರಕಾಶವುಳ್ಳವರೆಂದು ಕೇಳಿರುವೆನು. ಬಹಿರ್ದರ್ಶನವು ಅವರಿಗೆ ಹೇಗೆ ಲಭ್ಯ?

ಶ್ರೀಕೃಷ್ಣ—ನಿಜ. ನಾರದಾದಿ ಕೆಲವರನ್ನುಳಿದು ಇತರರ ವಿವಕ್ಷೆಯಿಂದ ಹೇಳುವ ಮಾತಿದು, ತಿಳಿಯಿತೇ? ದೇವತೆಗಳು ಸ್ವಪ್ರತಿಭಾಬಲವಿಶೇಷದಿಂದ, ವಿಷ್ಣುಪ್ರಸಾದಲಬ್ಧವಾದ ವಿಜ್ಞಾನವುಳ್ಳವರು. ವಿಶೇಷಧ್ಯಾನದ ಅವಶ್ಯಕತೆಯೂ ಇಲ್ಲದೆ ಒಳಗೂ ಹೊರಗೂ ಪರಮಾತ್ಮನನ್ನು ನೋಡುವರು. ಕೆಲವು ಕ್ಷತ್ರಿಯೋತ್ತಮರಾಜರು (ಕ್ಷಿತಿಪರು) ಅಶ್ವಮೇಧಾದಿ ಯಜ್ಞಾಚರಣೆಯೆಂಬ ಕರ್ಮದಿಂದ ಪರಮಾತ್ಮನನ್ನು ಕಾಣುವರು. ಇವರು ಶ್ರವಣ ಮತ್ತು ಸ್ವರೂಪಪ್ರತಿಭೆಗಳ ಸಹಾಯವಿಲ್ಲದೇ ಕಾಣುವರೆಂದು ತಿಳಿಯಬೇಡ. ಕರ್ಮಕ್ಕಿಂತ ಶ್ರವಣಾದಿಗಳು ಅಲ್ಪವಾದುದರಿಂದ, ಪ್ರಧಾನವಾದ ಕರ್ಮವೇ ಭಗವದ್ದರ್ಶನಕ್ಕೆ ಕಾರಣವೆಂದು (ಸಾಧನವೆಂದು) ಹೇಳಲ್ಪಡುವುದು. (೨೫) ಮನುಷ್ಯರು ಸ್ವಪ್ರತಿಭಾಬಲರಹಿತರು. ಅನ್ಯರಿಂದ ಶ್ರವಣಮಾಡಿ, (ತಿಳಿದು ಮನನಮಾಡಿ) ಧ್ಯಾನಿಸುತ್ತಾರೆ. ಇವರು ಅಲ್ಪತರಪ್ರತಿಭಾವಂತರಾದರೂ ಬಹುಶ್ರವಣದಿಂದ ಭಗವದುಪಾಸನೆಯಲ್ಲಿ

ಅರ್ಹತೆಯನ್ನು ಪಡೆದು ಪರಮಾತ್ಮನನ್ನು ಕಂಡು ಸಂಸಾರವನ್ನು ದಾಟುತ್ತಾರೆ. ಹೀಗೆ ಜೀವಸ್ವರೂಪಪ್ರತಿಭೆಯು, ಶ್ರವಣಮನನಧ್ಯಾನಗಳ ಅಲ್ಪತ್ವಬಹುತ್ವರೂಪವೈಶಿಷ್ಟ್ಯಕ್ಕೂ ಒಳಗೆ ಹೊರಗೆಂಬ ದರ್ಶನ-ವೈಚಿತ್ರ್ಯಕ್ಕೂ ಕಾರಣವಾಗುವುದು. (೨೬)

ಅರ್ಜುನ—ಜೀವನು, ನೀಚೋಚ್ಚದೇಹಯುಕ್ತನಾಗಿ ಜನಿಸಲು, ಪರಮಪುರುಷನೇ ಸ್ವತಂತ್ರಕಾರಣನೆಂದು ಹೇಳಿದೆಯಲ್ಲವೆ? ಈ ವಿಷಯದಲ್ಲಿ ಚಿತ್ಪ್ರಕೃತಿಯ (ರಮಾದೇವಿಯ) ಸ್ಥಾನವೇನು?

ಶ್ರೀಕೃಷ್ಣ—ಸ್ಥಾವರಜಂಗಮಾತ್ಮಕಪ್ರಪಂಚದಲ್ಲಿರುವ ಸಕಲ ಜೀವ-ಸಮೂಹವು, ಕ್ಷೇತ್ರ, ಕ್ಷೇತ್ರಜ್ಞರ ಎಂದರೆ ರಮಾದೇವಿ ಹಾಗೂ ಪರಮಾತ್ಮನ ಸಂಯೋಗದಿಂದಲೇ ಉದಯಿಸುತ್ತದೆ. ಹೇ ಭರತಕುಲಶ್ರೇಷ್ಠ! ಕಾರ್ಯರೂಪದೇಹಾದಿಗಳಿಗೆ ಉಪಾದಾನಕಾರಣವಾದ ಜಡಪ್ರಕೃತಿಯನ್ನು ಪರಿಣಾಮಗೊಳಿಸಿ ಯೋಜಿಸುವುದರಲ್ಲಿ ರಮಾದೇವಿಯು, ಈ ದೇಹಾದಿಗಳ ಸಂಬಂಧವನ್ನು ಜೀವರಿಗೆ ಉಂಟುಮಾಡುವುದರಲ್ಲಿ ಪರಮಾತ್ಮನೂ ಮುಖ್ಯಕಾರಣರು. ಉಭಯರೂ ಸಮಾನವಾದ ಸರ್ವತ್ರ ಸ್ಥಿತಿರೂಪ-ಧರ್ಮವುಳ್ಳವರು. (೨೭)

ಅರ್ಜುನ—ಸರ್ವದೇಹಸ್ಥಿತನಾದ ಪರಮಾತ್ಮನಿಗೆ ಅಧಿಷ್ಠಾನ ತಾರತಮ್ಯದಿಂದ ತಾರತಮ್ಯವೂ ದುಃಖಿಗಳಾದ ಜೀವರ ಸಹವಾಸದಿಂದ ದುಃಖವೂ ಉಂಟಾಗಬಹುದೇ?

ಶ್ರೀಕೃಷ್ಣ—ಸುಖದುಃಖ, ಜನನಮರಣಾದಿದೋಷಗಳುಳ್ಳ ತಾರ-ತಮ್ಯೋಪೇತರಾದ ಪ್ರಾಣಿಗಳೊಂದಿಗಿದ್ದರೂ, ಅಚಿಂತ್ಯಶಕ್ತಿಯುತನಾದ ಪರಮಾತ್ಮನನ್ನು ನ್ಯೂನಾಧಿಕರಹಿತನೆಂದೂ, ಸರ್ವತ್ರ ಸಕಲಸದ್ಗುಣ-ಪೂರ್ಣನೆಂದೂ, ದೋಷದೂರನೆಂದೂ, ಯಾವನು ತಿಳಿಯುವನೋ ಅವನೇ ಯಥಾರ್ಥಜ್ಞಾನವುಳ್ಳವನು. (೨೮) ಹೀಗೆ ಏಕಪ್ರಕಾರನಾಗಿ ಸರ್ವಾಂತರ್ಯಾಮಿಯಾಗಿರುವನೆಂದು ತಿಳಿದವನು ತನ್ನನ್ನು ನರಕಾದಿ

ಕಿಸರ್ಗಗಳಿಗೆ ಎಂದೂ ಗುರಿಮಾಡಿಕೊಳ್ಳುವುದಿಲ್ಲ. ಯಥಾರ್ಥಜ್ಞಾನದ ಫಲವಾಗಿ ಮುಕ್ತಿಯನ್ನೇ ಹೊಂದುವನು. (೨೯)

ಅರ್ಜುನ—ಜೀವರು, ನೀಚೋಚ್ಚಜನ್ಮಗಳನ್ನು ಹೊಂದುವ ವಿಷಯ ದಲ್ಲಿ ಕಾರಣನಾದ ಈಶ್ವರನು, ಜೀವಕರ್ಮಾನುಸಾರವಾಗಿ ಕಾರಣ ನಾಗುವನೋ ಅಥವಾ ಸ್ವೇಚ್ಛೆಯಿಂದಲೋ? ಸ್ವೇಚ್ಛಾನುಸಾರವಾಗಿ ಕಾರಣ ನೆಂದರೆ, ಕೆಲವರಿಗೆ ನೀಚಯೋನಿಗಳನ್ನೂ ಮತ್ತೆ ಕೆಲವರಿಗೆ ಉತ್ತಮ ಯೋನಿಗಳನ್ನೂ ಹೊಂದಿಸುವುದರಿಂದ, ಪರಮಾತ್ಮನಲ್ಲಿ ವೈಷಮ್ಯಾದಿ ಗಳುಂಟೆಂದು ಹೇಳಬೇಕಾಗುವುದು. ಕರ್ಮಾನುಸಾರವಾಗಿ ಕಾರಣ ನಾಗುವನೆಂದರೆ, ಆತನ ಸ್ವಾತಂತ್ರ್ಯಕ್ಕೆ ಹಾನಿಬರುವುದು. ಇದಕ್ಕೇನು ಹೇಳುವಿ, ಕೃಷ್ಣ!

ಶ್ರೀಕೃಷ್ಣ—ಈಶ್ವರನು, ಜೀವನ ಪೂರ್ವಕರ್ಮಗಳನ್ನು ಉದ್ಬೋಧಿಸಿ ಅವುಗಳನ್ನು ನಿಮಿತ್ತೀಕರಿಸಿ, ಜೀವನಿಂದ ಕರ್ಮಗಳನ್ನು ಮಾಡಿಸುವನು; ತದನುಸಾರವಾದ ದೇಹಗಳನ್ನೂ ಫಲಗಳನ್ನೂ ಕೊಡುವನು. ಈಶ್ವರ ಪ್ರೇರಣೆಯಿಲ್ಲದೆ ಜೀವನಿಂದ ಯಾವುದೊಂದು ಕರ್ಮವೂ ಘಟಿಸದು. ಜೀವನು, ಈಶಾಧೀನವಾದ ಕರ್ತೃತ್ವವುಳ್ಳವನು. ಈಶ್ವರನಾದರೋ ಅನ್ಯ- ಪ್ರೇರಣೆಯಿಲ್ಲದೆ ಪ್ರವರ್ತಿಸುವ ಸ್ವತಂತ್ರಕರ್ತನು. ಹೀಗಿರಲು ಈಶ್ವರನಲ್ಲಿ ವೈಷಮ್ಯಾದಿಗಳೂ ಇಲ್ಲ; ಆತನ ಸ್ವಾತಂತ್ರ್ಯಕ್ಕೆ ಹಾನಿಯೂ ಇಲ್ಲ. ಹೀಗೆ ಜೀವಸ್ವಭಾವವನ್ನೂ ಅವನ ಅನಾದಿಕರ್ಮವನ್ನೂ ಅನುಲಕ್ಷಿಸಿ, ಸಹಕಾರಿ ಯಾದ ಪ್ರಕೃತಿಯಿಂದ ಜೀವಸಂಬಂಧಿಕರ್ಮಗಳನ್ನು ಮಾಡಿಸುವನೆಂದೂ, ತಾನು ಅಸ್ವತಂತ್ರನೆಂದೂ ಯಾರು ತಿಳಿಯುವನೋ, ಆತನೇ ಪರಮಾತ್ಮ ನನ್ನು ಹೊಂದುವನು. (೩೦) ಪರಮಾತ್ಮನು ಸರ್ವಪ್ರೇರಕನು ಮಾತ್ರ ನಲ್ಲ, ಸರ್ವಾಧಾರನೂ ಆಗಿರುವನೆಂದು ತಿಳಿಯಬೇಕು. ಜೀವರು, ಪರಸ್ಪರ ಮತ್ತು ಪರಮಾತ್ಮನಿಂದ ಸಹ, ಅತ್ಯಂತಭಿನ್ನರು. ಸಕಲಜೀವರೂ ಒಬ್ಬ ಪರಮಾತ್ಮನನ್ನು ಆಶ್ರಯಿಸಿ ಆತನಲ್ಲಿರುವರು; ಆತನಿಂದಲೇ ತಾರ- ತಮ್ಯಾನುಸಾರವಾಗಿ ಉತ್ಪತ್ತಿಯನ್ನೂ ಪಡೆಯುವರು. ಹೀಗೆಂಬ ನಿಶ್ಚಯವುಳ್ಳವರೇ ಪರಮಾತ್ಮನನ್ನು ಹೊಂದುತ್ತಾರೆ. (೩೧)

ಅರ್ಜುನ—ಪ್ರಾಣಿದೇಹಗಳಲ್ಲಿದ್ದರೂ, ಪರಮಾತ್ಮನಿಗೆ ದುಃಖಲೇಶ, ನಾಶ ಮೊದಲಾದವುಗಳಿಲ್ಲವೆಂದು ಹೇಗೆ ಗ್ರಹಿಸಬಹುದು?

ಶ್ರೀಕೃಷ್ಣ—ಹೇ ಕೌಂತೇಯ! ಪರಮಾತ್ಮನು ಅನಾದಿಯಾದ ನಿತ್ಯ-ಪ್ರಕಾಶರೂಪನು; ಸತ್ವಾದಿಗುಣಸಂಬಂಧರಹಿತನು. ಆದುದರಿಂದ ನಾಶಾದಿದೋಷರಹಿತನೆಂದು ತಿಳಿಯಬೇಕು. ಪ್ರಾಕೃತಶರೀರಗಳಲ್ಲಿದ್ದರೂ, ಚಿಂತಾಸಂತಾಪಾದಿಗಳ ಸಂಬಂಧವುಳ್ಳವನಲ್ಲ. ಲೌಕಿಕಗಳಾದ ಕ್ರಿಯೆಗಳಿಂದ (ಪ್ರಕೃತಿಯ ಪ್ರಭಾವಕ್ಕೊಳಪಟ್ಟ ಕ್ರಿಯೆಗಳಿಂದ) ವಿಲಕ್ಷಣವಾದ ಅಪ್ರಾಕೃತಕ್ರಿಯಾವಿಶಿಷ್ಟನಾದುದರಿಂದ, ಈಶ್ವರನು ಜೀವನಂತೆ ಕರ್ಮ ಮಾಡುವವನಲ್ಲ. ಜೀವನಾದರೋ ಶರೀರಾಭಿಮಾನಿಯು; ಸುಖದುಃಖ-ಭೋಕ್ತನು, ಆ ಕಾರಣದಿಂದಲೇ ಪರಮಾತ್ಮನಿಂದ ಅತ್ಯಂತಭಿನ್ನನು. ಜಡಾತ್ಮಕದೇಹವು, ಜೀವಪರಮಾತ್ಮರೆಂಬ ಉಭಯರಿಂದ ಭಿನ್ನವೆಂದು ಹೇಳಬೇಕೇ? ಪರಮಾತ್ಮನು ಈವಿಧಮಹಿಮೋಪೇತನೆಂಬಲ್ಲಿ ಅನಾದಿತ್ವ ಮತ್ತು ನಿರ್ಗುಣತ್ವ (ಸತ್ವಾದಿಗುಣರಾಹಿತ್ಯ)ಗಳು ಪ್ರಬಲಹೇತುಗಳು. ಜೀವನು ಅಧೀನಕರ್ತನು; ಗುಣಬಂಧವುಳ್ಳವನು. ಆ ಕಾರಣದಿಂದ ಫಲ-ಭಾಗಿಯೂ, ಫಲಭೋಕ್ತನೂ ಆಗಿರುವನು. (೩೨) ಇದೇ ಪ್ರಮೇಯವನ್ನು ಸದೃಷ್ಟಾಂತವಾಗಿ ನಿರೂಪಿಸುವೆನು, ಕೇಳು. ಧೂಳು, ಕೆಸರು ಮೊದಲಾದವುಗಳಿರುವ ಸ್ಥಳಗಳನ್ನು ಸಹ ವ್ಯಾಪಿಸಿರುವ ಆಕಾಶವು, ಅತಿ ಸೂಕ್ಷ್ಮವಾದುದರಿಂದ, ಎಂದರೆ ಮುಟ್ಟಲು ನೋಡಲು ಬಾರದ **ಅಪ್ರತಿಘ-ದ್ರವ್ಯ**ವಾದ್ದರಿಂದ, ಹೇಗೆ ಆ ವಸ್ತುಗಳ ಗುಣದೋಷಗಳ ಸಂಬಂಧವನ್ನು ಹೊಂದುವುದಿಲ್ಲವೋ, ಹಾಗೆ ಪರಮಾತ್ಮನು ನೀಚೋಚ್ಚಸರ್ವದೇಹಗಳಲ್ಲಿದ್ದರೂ ಗುಣದೋಷಗಳ ಲೇಪವುಳ್ಳವನಾಗುವುದಿಲ್ಲ. (೩೩) ಒಬ್ಬ ಸೂರ್ಯನು ಸಮಸ್ತಲೋಕವನ್ನೂ ಪ್ರಕಾಶಗೊಳಿಸುವಂತೆ ಸರ್ವಕ್ಷೇತ್ರ-ವಾಸಿಯಾದ ಪರಮಾತ್ಮನು, ಚೇತನಾಚೇತನರೂಪವಾದ ಸಮಸ್ತಕ್ಷೇತ್ರವನ್ನೂ ಪ್ರಕಾಶಗೊಳಿಸುತ್ತಾನೆ. ಎಲ್ಲ ಕ್ಷೇತ್ರವನ್ನು ತಾನು ತಿಳಿದು ಅನ್ಯರಿಗೆ ಯಥಾಯೋಗ್ಯವಾಗಿ ತಿಳಿಸಿಕೊಡುತ್ತಾನೆ. (೩೪) ಹೇ ಅರ್ಜುನ! ಕ್ಷೇತ್ರ-ಕ್ಷೇತ್ರಜ್ಞರ ಈ ಪರಿಭೇದವನ್ನೂ ಮತ್ತು ಜೀವರಿಗೆ ಪ್ರಕೃತಿಯಿಂದಾದ-

ಬಂಧವು ಕ್ಷೇತ್ರಜ್ಞನಾದ ಪರಮಾತ್ಮನಿಂದಲೇ ಎಂಬುದನ್ನೂ ಜ್ಞಾನದೃಷ್ಟಿ ಯಿಂದ ಅರಿತವರು ಮುಕ್ತರಾಗುವರೆಂಬಲ್ಲಿ ಸಂಶಯವಿಲ್ಲ. (೩೫)

ಹದಿಮೂರನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೪.

[ಕಾಮಾದಿವರ್ಜನರೂಪಸನ್ಯಾಸವೂ ಈಶ್ವರಾರ್ಪಣಬುದ್ಧಿಯಿಂದ ಆಚರಿಸಲ್ಪಡುವ ವಿಹಿತಕರ್ಮಾನುಷ್ಠಾನರೂಪಯೋಗವೂ ಮತ್ತು ಧ್ಯಾನವೂ, ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನಗಳೆಂದು ಪ್ರಥಮಷಟ್ಕ ದಲ್ಲಿ ಹೇಳಲ್ಪಟ್ಟವು. ಈ ಅಧ್ಯಾಯದಿಂದ ಆರಂಭವಾಗುವ ಮುಂದಿನ ಐದು ಅಧ್ಯಾಯಗಳಲ್ಲಿ ಇತಿಕರ್ತವ್ಯತಾಂಶವನ್ನು (ಪೂರ್ವೋಕ್ತಜ್ಞಾನ ಸಾಧನೆಗಳನ್ನು ಹೇಗೆ ಆಚರಿಸಬೇಕೆಂಬುದನ್ನು) ಶ್ರೀಕೃಷ್ಣನು ವಿವರಿಸು ತ್ತಾನೆ. ಬಂಧನ ಪ್ರಕಾರವು ತಿಳಿದರೆ ಅದರ ಬಿಡುಗಡೆಗಾಗಿ ಕೈಗೊಳ್ಳ ಬೇಕಾದ ಸಾಧನೆಗಳ ಅನುಷ್ಠಾನ ಪ್ರಕಾರವೂ ತಿಳಿಯುವುದು. ಸತ್ವಾದಿ-ಗುಣಸಂಬಂಧವೇ ಜೀವರು ನೀಚೋಚ್ಚದೇಹಗಳನ್ನು ಹೊಂದಲು ಕಾರಣ ವೆಂದು ಹಿಂದಿನ ಅಧ್ಯಾಯದಲ್ಲಿ ಹೇಳಲಾಯಿತು. ಕ್ಷೇತ್ರಕ್ಷೇತ್ರಜ್ಞ-ಸಂಯೋಗವು, ಗುಣಸಂಬಂಧರೂಪವಾದ ಪ್ರಾಣಿಗಳ ಜನನಕ್ಕೆ ಕಾರಣ ವೆಂದು ಅಧ್ಯಾಯದ ಅಂತ್ಯಭಾಗದಲ್ಲಿ ಹೇಳಿದುದನ್ನು ವಿವರಿಸಿ, ತ್ರಿಗುಣ ಗಳ ವಿಕಾರಸ್ಥಿತಿಯನ್ನೂ ಅವುಗಳನ್ನು ದಾಟುವ ಉಪಾಯವನ್ನೂ ಈ ಅಧ್ಯಾಯದಿಂದ ನಿರೂಪಿಸಲಾಗುತ್ತದೆ. ಹೇಳುವ ವಿಷಯದಲ್ಲಿ ಆದರವನ್ನು ಹುಟ್ಟಿಸುವುದಕ್ಕಾಗಿ ಶ್ರೀಕೃಷ್ಣನು ವಿಷಯದ ಮಹತ್ವವನ್ನು ಮೊದಲಿಗೆ ಸ್ತುತಿಸುತ್ತಾನೆ.]

ಶ್ರೀಕೃಷ್ಣ—ಹೇ ಅರ್ಜುನ! ಜ್ಞಾತವ್ಯಾಂಶಗಳಲ್ಲಿ ಉತ್ತಮವಾದು ದನ್ನು ಪುನಃ ಹೇಳುವೆನು. ಅದನ್ನು ತಿಳಿದು ಮನನಮಾಡುವ ಸರ್ವರೂ ಸಂಸಾರವನ್ನು ನೀಗಿ ಮುಕ್ತರಾಗುವರು. (೧) ಈ ಜ್ಞಾನವನ್ನು ಹೊಂದಿ ದವರು ಸೃಷ್ಟಿಕಾಲದಲ್ಲಿ ಮತ್ತೆ ಹುಟ್ಟುವುದಿಲ್ಲ; ಪ್ರಳಯಕಾಲದಲ್ಲಿ ವ್ಯಥೆ ಪಡುವುದಿಲ್ಲ. ಸಾರೂಪ್ಯವೇ ಮೊದಲಾದ ವಿವಿಧಮುಕ್ತಿಯನ್ನು ಸ್ವಯೋಗ್ಯತಾನುಗುಣವಾಗಿ ಪಡೆಯುವರು. (೨) ಮಹಾಮಹಿಮಳಾದ ರಮಾದೇವಿಯು ನನ್ನ ಭಾರ್ಯೆ. ಮಹದಾದಿ ಇಪ್ಪತ್ತನಾಲ್ಕು ತತ್ವಗಳ ಅಂಶಸಹಿತರಾದ ಜೀವರು ನನ್ನ ಉದರದಲ್ಲಿರುವರು. ಅವರನ್ನು ನಾನು, ರೇತೋರೂಪದಿಂದ ಹೊರಗೆ ಹಾಕಿ, ಚಿತ್ಪ್ರಕೃತಿಯ ಉದರದಲ್ಲಿಡುತ್ತೇನೆ. ಆಗ ಆ ಜೀವರಿಗೆ ದೇಹಯೋಗವೆಂಬ ಉತ್ಪತ್ತಿಯುಂಟಾಗುತ್ತದೆ. (೩)

ಅರ್ಜುನ—ಹೇ ಯೋಗೇಶ್ವರ! ಜೀವರು ಮೊದಲು ಸೃಷ್ಟಿಯಲ್ಲಿ ಪರಬ್ರಹ್ಮಸ್ವರೂಪಿಯಾದ ನೀನೂ, ಜಗನ್ಮಾತೆಯಾದ ಲಕ್ಷ್ಮೀದೇವಿಯೂ ಕಾರಣರಿರಬಹುದು. ಆದರೆ ಆ ಮುಂದೆ ಅವರಿಗೆ ಅನೇಕ ದೇಹಗಳ ಸಂಬಂಧವು, (ಪ್ರಸಿದ್ಧ) ಅವರ ಮಾತಾಪಿತೃಗಳಿಂದ ಉಂಟಾಗುವುದಲ್ಲವೇ?

ಶ್ರೀಕೃಷ್ಣ—ಹಾಗಲ್ಲ, ಅರ್ಜುನ! ದೇವ, ಮನುಷ್ಯ, ಪಶು ಮೊದ ಲಾದ ಯೋನಿಗಳಲ್ಲಿ ಉಂಟಾಗುವ ಎಲ್ಲ ದೇಹಗಳಿಗೂ, ಎಲ್ಲ ಕಾಲಗಳಲ್ಲಿ ಲಕ್ಷ್ಮೀದೇವಿಯೇ ಕ್ಷೇತ್ರರೂಪದ ಕಾರಣಳು. ಗರ್ಭಾಧಾನಕರ್ತನಾದ ತಂದೆಯೂ ನಾನೇ—ಬೀಜಪ್ರದನೂ ಮೂಲಕಾರಣನೂ ನಾನೇ. (೪)

ಅರ್ಜುನ—ನಿಮಿತ್ತಕಾರಣರಾದ ನಿಮ್ಮಿಬ್ಬರಿಂದಾಗುವ ಸತ್ವಾದಿಗುಣ-ಕೃತಬಂಧಪ್ರಕಾರವನ್ನು ತಿಳಿದರೆ ಮಾತ್ರ, ಬಂಧನಿವೃತ್ತಿಸಾಧನವನ್ನು ಜಿಜ್ಞಾಸೆಯಿಂದ ತಿಳಿದು ಅನುಷ್ಠಾನಮಾಡಲು ಸಾಧ್ಯವಾಗುವುದು. ಆದ್ದ ರಿಂದ, ಹೇ ದೇವ! ಆ ಬಂಧಪ್ರಕಾರವನ್ನು ವಿಸ್ತರಿಸು.

ಶ್ರೀಕೃಷ್ಣ—ಸಾವಧಾನಮನಸ್ಕನಾಗಿ ಕೇಳು, ಅರ್ಜುನ! ಮೂಲ-ಜಡಪ್ರಕೃತಿಯ ಅತ್ಯಲ್ಪವಿಕಾರದಿಂದ ಹುಟ್ಟುವ ಸತ್ವ, ರಜ, ತಮಗಳೆಂಬ ಮೂರುಗುಣಗಳೂ, ಚೇತನಪ್ರಕೃತಿಯಿಂದ (ಲಕ್ಷ್ಮೀದೇವಿಯಿಂದ) ಅಭಿ-

ಕ್ತನಾಗುವ ಶ್ರೀ, ಭೂ, ದುರ್ಗಾರೂಪಗಳೂ, ನಾಶರಹಿತವಾದ ಸ್ವರೂಪ ಜೀವಚೇತನನನ್ನು ಈ ದೇಹದಲ್ಲಿ ಬಂಧಿಸುವುವು. (ಎಲ್ಲ ಜೀವರನ್ನು ನರನರ ದೇಹದಲ್ಲಿ ಬಂಧಿಸುವುವು.) ಸದ್ಗುಣಯುಕ್ತಳಾದುದರಿಂದ ತ್ವನಾಮಕಳು ಶ್ರೀ; ಸೃಷ್ಟ್ಯಾದಿರಂಜನವ್ಯಾಪಾರವುಳ್ಳಪ್ರಯುಕ್ತ ರಜೋ-ನಾಮಕಳು ಭೂ; ಜೀವರಿಗೆ ಗ್ಲಾನಿ (ವ್ಯಥೆ)ಯನ್ನು ಹೊಂದಿಸುವಳಾದುದ ರಿಂದ ತಮೋನಾಮಕಳು ದುರ್ಗಾ. ರಮಾದೇವಿಯ ಈ ಮೂರು ರೂಪಗಳು, ಕ್ರಮದಿಂದ, ಸತ್ವ, ರಜ, ತಮಗಳೆಂಬ ಗುಣಗಳಿಗೆ ಅಭಿಮಾನಿ ಗಳೆನಿಸುವುವು. ಎಲ್ಲ ಜೀವರನ್ನು ಬಂಧಿಸುವ ಶಕ್ತಿಯು ಪ್ರತಿಯೊಂದು ರೂಪಕ್ಕೂ ಇರುವುದು. ಆದರೂ ಶ್ರೀದೇವಿಯು ದೇವತೆಗಳಿಗೂ, ಭೂ-ದೇವಿಯು ಮನುಷ್ಯರಿಗೂ, ದುರ್ಗಾದೇವಿಯು ದೈತ್ಯರಿಗೂ ಬಂಧಕಳು. ಈ ವಿಷಯವನ್ನು ನೆನಪಿಡುವುದು ಅವಶ್ಯಕ. (೫) ಈ ಗುಣಗಳಲ್ಲಿ ಮತ್ತು ದೇವೀರೂಪಗಳಲ್ಲಿ, ಸತ್ವಗುಣವೂ ಗುಣಾಭಿಮಾನಿ ಶ್ರೀರೂಪವೂ, ದುಃಖ ಅಜ್ಞಾನಾದಿಗಳ ಪರಿಹಾರಕವಾದುದರಿಂದಲೂ, ರೋಗಾದಿ ಉಪದ್ರವ-ನಾಶಕವಾದುದರಿಂದಲೂ ಉತ್ತಮಜೀವರಿಗೆ **(ದೇವತೆಗಳಿಗೆ)** ತತ್ವ-ಜ್ಞಾನೋತ್ಪಾದಕವಾಗಿ, ಸುಖಜ್ಞಾನಗಳ ಸ್ನೇಹವನ್ನುಂಟುಮಾಡುತ್ತಾ ಬಂಧಕವಾಗುತ್ತವೆ. (೬) ರಜೋಗುಣವೂ, ಭೂರೂಪವೂ ರಾಗಾತ್ಮಕವಾಗಿ ಎಂದರೆ ಸೃಷ್ಟ್ಯಾದಿರಂಜನವ್ಯಾಪಾರಕ್ಕೆ ಕಾರಣಗಳಾಗಿ, ಇದು ನನಗೆ ಬೇಕೆಂಬ ಆಶೆಯನ್ನೂ, ವಸ್ತುಗಳಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತಾ, (ಮನುಷ್ಯ) ಮಧ್ಯಮಜೀವಸಮೂಹವನ್ನು ಕರ್ಮಸಂಗದಿಂದ ಬಂಧಿಸು ತ್ತವೆ. (೭) ತಮೋಗುಣವೂ ದುರ್ಗಾರೂಪವೂ, ಅಜ್ಞಾನಮಿಥ್ಯಾಜ್ಞಾನ ಗಳಿಗೆ ಕಾರಣಗಳೆಂದು ತಿಳಿ. ಇವು, ಹೇ ಅರ್ಜುನ! ಪ್ರಮಾದ, ಆಲಸ್ಯ ಮತ್ತು ನಿದ್ರೆಗಳಿಂದ ಅಧಮ (ದೈತ್ಯ) ಜೀವಸಮೂಹವನ್ನು ಬಂಧಿಸು ತ್ತವೆ. (೮)

ಅರ್ಜುನ—ಸತ್ವಾದಿಗುಣಗಳಿಗೆ, ಸುಖಾದಿಗಳ ಸಂಬಂಧವನ್ನುಂಟು ಮಾಡುವುದರಿಂದಲೇ ಬಂಧಕತ್ವವೆಂಬ ನಿಯಮವುಂಟೇ ?

ಶ್ರೀಕೃಷ್ಣ—ಹಾಗೆಯೇ ಸರಿ. ಸತ್ವಗುಣವೂ ಶ್ರೀದೇವಿಯೂ ಸುಖ-ವಿಷಯದಲ್ಲಿ ಪ್ರವರ್ತಕರು. ರಜೋಗುಣವೂ ಭೂದೇವಿಯೂ ಕರ್ಮ ವಿಷಯದಲ್ಲಿ ಪ್ರವರ್ತಕರು. ತಮೋಗುಣವೂ ದುರ್ಗಾದೇವಿಯೂ ತತ್ವ-ಜ್ಞಾನಶಕ್ತಿಯನ್ನು ಪ್ರತಿಬಂಧಿಸಿ, ಅಧರ್ಮಬುದ್ಧಿ ಮತ್ತು ಆಲಸ್ಯಾದಿ ಗಳನ್ನುಂಟುಮಾಡುವ ವಿಷಯದಲ್ಲಿ ಪ್ರವರ್ತಿಸುವರು. (೯)

ಅರ್ಜುನ—ಈ ಮೂರು ಗುಣಗಳಿಗೂ ಮೂರು ದೇವೀರೂಪಗಳಿಗೂ ಸರ್ವರನ್ನು ಬಂಧಿಸುವ ಸಮಾನಶಕ್ತಿಯಿರುವುದಲ್ಲವೇ ?

ಶ್ರೀಕೃಷ್ಣ—ಸಮಾನಶಕ್ತಿಯುಂಟು. ಯಾವ ಸಂಶಯವೂ ಇಲ್ಲ.

ಅರ್ಜುನ—ಹಾಗಾದರೆ, ಒಂದೊಂದು ಗುಣವು ಒಂದೊಂದು ಕಾರ್ಯದಲ್ಲಿ ಮಾತ್ರ ಪ್ರವರ್ತಕವೆಂದು ಹೇಳುವುದರ ಮರ್ಮವೇನು ?

ಶ್ರೀಕೃಷ್ಣ—ಒಂದೊಂದು ಗುಣವೂ ಪೂರ್ವೋಕ್ತರೀತಿಯಲ್ಲಿ ಜೀವ-ಸಮುದಾಯವನ್ನು ಪ್ರವರ್ತಿಸುವಂತೆ ಮಾಡುತ್ತದೆ. ಪ್ರತ್ಯೇಕವಾಗಿ, ದೇವ, ಮಾನುಷ್ಯ ಮತ್ತು ದೈತ್ಯಜೀವಸಮುದಾಯವನ್ನು ಬಂಧಿಸುವುದರಲ್ಲಿ ಈ ಗುಣಗಳು ಸಾಮಾನ್ಯವಾಗಿ ಪ್ರವರ್ತಿಸುವುವಾದರೂ, ಎಲ್ಲಾಜೀವರನ್ನು, ಎಲ್ಲಾಗುಣಗಳೂ ಬಂಧಿಸಿ, ತಂತಮ್ಮ ಕಾರ್ಯಗಳಲ್ಲಿ ಪ್ರತಿಯೊಬ್ಬನಿಗೂ ಪ್ರವರ್ತಕಗಳಾಗುತ್ತವೆ. ಭಗವದಿಚ್ಛೆಯಿಂದ ಸತ್ವಗುಣವು ಉತ್ಕಟವಾಗಲು ರಜಸ್ತಮೋಗುಣಗಳ ಕಾರ್ಯಶಕ್ತಿಯನ್ನು ಉಡುಗಿಸಿ, ಸ್ವಕಾರ್ಯದಲ್ಲಿ ಸಮರ್ಥವಾಗುತ್ತದೆ. ಹಾಗೆಯೇ ರಜೋಗುಣವು ಉತ್ಕಟವಾದಾಗ, ಸತ್ವ, ರಜೋಗುಣಗಳು ಅಸಮರ್ಥಗಳಾಗುತ್ತವೆ.

ಅರ್ಜುನ—ಸತ್ವಾದಿಗುಣಗಳು ತಮತಮಗೆ ಸಹಜವಾದ ಆ ಕಾರ್ಯ ಗಳಲ್ಲಿಮಾತ್ರ ಸಮರ್ಥವಾಗಬಹುದು ಮತ್ತು ಈಶ್ವರೇಚ್ಛೆಯಿಂದ ಸ್ವಕಾರ್ಯ ದಲ್ಲಿ ಅಸಮರ್ಥವೂ ಆಗಬಹುದು. ಆದರೆ ಎಲ್ಲಕಾರ್ಯಗಳಲ್ಲಿ ಸಹಜ-ಶಕ್ತಿಯುಳ್ಳ ದೇವೀರೂಪಗಳಿಗೆ ಅಭಿಭವವು (ಅಸಮರ್ಥತೆಯು) ಹೇಗೆ ಕೂಡುತ್ತದೆ ?

ಶ್ರೀಕೃಷ್ಣ— ಮೇಲೆಹೇಳಿದ ಕಾರ್ಯಶಕ್ತಿಪ್ರತಿಬಂಧವು ಗುಣಗಳಿಗೆ

*

...ಶ್ರ. ದೇವೀರೂಪಗಳಲ್ಲಿ ಒಂದು ಪ್ರವರ್ತಕವಾದಾಗ ಉಳಿದ ಎರಡು ...ಪಗಳು ಉದಾಸೀನವಾಗಿರುತ್ತವೆಂದು ತಿಳಿ. ಈಶ್ವರೇಚ್ಛೆಯಿಂದ ...ಯಾರೂಪಗಳು ಆಯಾಗುಣಗಳ ಸಹಜಶಕ್ತಿಯನ್ನು ಅಭಿವ್ಯಕ್ತಗೊಳಿಸು ...ನರಲ್ಲಿ ಪ್ರವರ್ತಿಸುತ್ತವೆ. (೧೦)

ಅರ್ಜುನ—ಸತ್ವಾದಿಗುಣಗಳ ವೃದ್ಧಿಯನ್ನು ಯಾವ ಲಕ್ಷಣಗಳಿಂದ ...ಳಿಯಬಹುದು ?

ಶ್ರೀಕೃಷ್ಣ—ದೇಹಗತವಾದ ಶ್ರೋತ್ರಾದಿ ಇಂದ್ರಿಯಗಳಲ್ಲಿ ತತ್ವಜ್ಞಾನೋತ್ಪಾದಕಶಬ್ದಾದಿಜ್ಞಾನರೂಪಪ್ರಕಾಶವೂ, ಸುಖವೂ ಉಂಟಾ...ದಾಗ ಸತ್ವಗುಣವು ವೃದ್ಧಿಹೊಂದಿದೆ ಎಂದು ತಿಳಿಯಬೇಕು. (೧೧) ...ಲೋಭವೂ (ಧನಾದಿವಸ್ತುಗಳನ್ನು ಪರಾರ್ಥವಾಗಿ ತ್ಯಾಗ ಮಾಡಬಾರದೆಂಬ ಇಚ್ಛೆ), ವ್ಯರ್ಥವಾದ ಉದ್ಯೋಗದಲ್ಲಿ ಪ್ರವೃತ್ತಿಯೂ, ಕಾಮ್ಯಕರ್ಮಗಳ ಆರಂಭವೂ, ಮನಶ್ಶಾಂತಿ ಇಲ್ಲದಿರುವಿಕೆಯೂ, ದೊರೆಯದಿರುವ ವಸ್ತುಗಳನ್ನು ಹೊಂದಬೇಕೆಂಬ ಹಂಬಲವೂ, ರಜೋಗುಣವು ಅಭಿವೃದ್ಧವಾದಾಗ ಉಂಟಾಗುವುವು. (೧೨) ಇಂದ್ರಿಯಗಳಲ್ಲಿ ಜ್ಞಾನಾಭಾವವೂ, ಪ್ರಯತ್ನವಿಲ್ಲದೇ ತಟಸ್ಥನಾಗುವ ಇಚ್ಛೆಯೂ, ಮನಶ್ಚಾಂಚಲ್ಯವೂ, ಮಿಥ್ಯಾಜ್ಞಾನವೂ (ವಸ್ತುವನ್ನು ಇದ್ದಂತೆ ತಿಳಿಯದೇ ತದ್ವಿರುದ್ಧವಾಗಿ ಗ್ರಹಿಸುವುದು) ತಮೋಗುಣದ ಅಭಿವೃದ್ಧಿಯಿಂದಾಗುವುವು. ಈ ಮೊದಲಾದ ಸದೃಶ ಲಕ್ಷಣಗಳಿಂದ ಆಯಾಗುಣಗಳ ಅಭಿವೃದ್ಧಿಯನ್ನು ತಿಳಿಯಬೇಕು. (೧೩)

ಅರ್ಜುನ—ಸತ್ವಾದಿಗುಣಗಳ ವೃದ್ಧಿಯಿಂದ ಉದ್ಭವಿಸುವ ಫಲಭೇದಗಳನ್ನು ತಿಳಿಯಲಾಶಿಸುವೆನು.

ಶ್ರೀಕೃಷ್ಣ—ಪಾರ್ಥ! ಸಾಕ್ಷಾತ್ಫಲಗಳನ್ನೂ ಪರಂಪರೆಯಿಂದ ಲಭಿಸುವ ಫಲಗಳನ್ನೂ ಪ್ರತ್ಯೇಕವಾಗಿ ಹೇಳುವೆನು, ಕೇಳು. ಸತ್ವವೃದ್ಧಿಯಕಾಲದಲ್ಲಿ ಮರಣಹೊಂದಿದವನು ಜ್ಞಾನಿಗಳ ಕುಲದಲ್ಲಿ ಪರಿಶುದ್ಧದೇಹವನ್ನು ಪಡೆಯುವನು—ಸಾತ್ವಿಕಕುಲದಲ್ಲಿ ಜನ್ಮತಾಳುವನು. (೧೪) ...ೋಗುಣದ ವೃದ್ಧಿಕಾಲದಲ್ಲಿ ಮೃತನಾದವನು ಕಾಮ್ಯಕರ್ಮಿಗಳ ಕುಲ

ದಲ್ಲಿ ಹುಟ್ಟುವನು; ತಮೋಗುಣ ಪ್ರಚುರವಾದಾಗ ದೇಹಬಿಟ್ಟವನು ಅಜ್ಞಾನಿಗಳ ಕುಲದಲ್ಲಿ ದೈತ್ಯಯೋನಿಯಲ್ಲಿ ಜನಿಸುವನು. (೧೫) ಜ್ಞಾನಿಗಳ ಕುಲದಲ್ಲಿ ಹುಟ್ಟಿದವನ ಸುಕೃತಗಳಿಗೆ ದುಃಖಸಂಬಂಧವಿಲ್ಲದ (ಸಾತ್ವಿಕ) ಸುಖವು ಫಲವು; ಕಾಮ್ಯಕರ್ಮಿಗಳಲ್ಲಿ ಹುಟ್ಟಿ, ಕರ್ಮಾಸಕ್ತನಾದವನಿಗೆ ದುಃಖಮಿಶ್ರವಾದ ಅಲ್ಪಸುಖ ಪ್ರಾಪ್ತಿಯು; ತಾಮಸಯೋನಿಯಲ್ಲಿ ಹುಟ್ಟಿ ತಾಮಸಕರ್ಮವನ್ನೆಸಗಿದರೆ ಅಜ್ಞಾನಜನ್ಯವಾದ ದುಃಖವೇ ಫಲವು. (೧೬) ಹೀಗೆ ವಿವಿಧಫಲಪ್ರಾಪ್ತಿವಿಷಯದಲ್ಲಿ ಸಹ ಸತ್ವಾದಿಗುಣಗಳೇ ಕಾರಣಗಳೆನಿಸುವುವು. ಸತ್ವಗುಣದಿಂದ ಪರಾಪರತತ್ವವಿಷಯಕಜ್ಞಾನವೂ, ರಜೋಗುಣದಿಂದ ಸ್ವರ್ಗಾದಿವೈಷಯಿಕ ಸುಖೇಚ್ಛೆಯೂ, ತಮೋಗುಣದಿಂದ ಅಜ್ಞಾನವೂ, ಅಧರ್ಮಪ್ರವೃತ್ತಿಯೂ, ಮಿಥ್ಯಾಜ್ಞಾನವೂ ಉಂಟಾಗುತ್ತವೆ. (೧೭) ತಲ್ಲಭ್ಯಫಲಗಳೂ ವಿವಿಧವಾಗಿರುವುವು. ಸಾತ್ವಿಕರು, ಜ್ಞಾನದಿಂದ ಜನೋಲೋಕ, ತಪೋಲೋಕ ಮೊದಲಾದ ಉತ್ತಮಲೋಕಗಳನ್ನು ಹೊಂದುವರು; ರಾಜಸರು ಮಧ್ಯಭಾಗದ ಸ್ವರ್ಗಾದಿಗಳಲ್ಲಿ ನಿಲ್ಲುವರು. ತಾಮಸರು ನರಕಾದಿ ಅಧೋಲೋಕಗಳನ್ನು ಹೊಂದುವರು. (೧೮)

ಅರ್ಜುನ—ತ್ರಿಗುಣಗಳಿಗೇ ಬಂಧಕಶಕ್ತಿಯನ್ನೂ, ಅವುಗಳಿಂದಲೇ ಸಾಕ್ಷಾತ್ ಮತ್ತು ಪರಂಪರಾಫಲಗಳೆಂದೂ, ಅವುಗಳ ವಶನಾಗಿಯೇ ಜೀವನು ಕರ್ಮಮಾಡುವನೆಂದೂ ಹೇಳಿದರೆ, ಗುಣಗಳೇ ಸರ್ವಕಾರಣವೆಂದೂ ಅನ್ಯಸರ್ವೋತ್ತಮ ವಸ್ತುವಿಲ್ಲವೆಂದೂ ಪ್ರಾಪ್ತವಾಗುವುದಿಲ್ಲವೇ ?

ಶ್ರೀಕೃಷ್ಣ—ಅರ್ಜುನ ! ಹಾಗೆಂದೂ ಏರ್ಪಡುವುದಿಲ್ಲ. ಕಾರಣಜನ್ಯ (ಪರಿಣಾಮಿಕಾರಣದಿಂದ ಹುಟ್ಟುವ) ಕರ್ತೃತ್ವವಿಷಯದಲ್ಲಿ ಗುಣಗಳು ಪ್ರಧಾನಕಾರಣವೆಂದು ತಿಳಿಯಬೇಕು. ಪರಮಾತ್ಮಾಧೀನವಾದ ಸ್ವತಃಕರ್ತೃತ್ವವು ಜೀವನ ಸಹಜಶಕ್ತಿಯು; ಅದು ಜೀವಸ್ವರೂಪಾತ್ಮಕವಾದುದು. ಗುಣಗಳಿಂದ ಭಿನ್ನನೂ, ವಿಲಕ್ಷಣನೂ, ಸ್ವತಂತ್ರನೂ ಆದ ನನ್ನನ್ನು ಮುಖ್ಯಕರ್ತನೆಂದು ತಿಳಿದವನೇ ನನ್ನನ್ನು ಹೊಂದುತ್ತಾನೆ.

ಪ್ರಾಪ್ತಿ ರೂಪವಾದ ಮೋಕ್ಷವು, ಸರ್ವೋತ್ತಮನಾದ ನನ್ನನ್ನೇ ಸರ್ವ-ನೆಂದು ತಿಳಿಯುವುದರಿಂದಲೇ ಜೀವರಿಗೆ ದೊರೆಯಬಲ್ಲದು. (೧೯)

ಅರ್ಜುನ—ಸುಖದುಃಖಾದಿ ರೂಪವಾದ ಈ ಬಂಧವು ಗುಣತ್ರಯ-ಬಂಧನವಾದುದರಿಂದ (ಗುಣತ್ರಯಗಳಿಂದ ಉಂಟಾಗುವುದರಿಂದ), ಗುಣಗಳನ್ನು ದಾಟದ ವಿನಾ ಮುಕ್ತಿಯೇ ಇಲ್ಲವೆಂದು ಹೇಳಿದಂತಾಯಿತು; ಅಲ್ಲವೇ ? ಕೃಷ್ಣ !

ಶ್ರೀಕೃಷ್ಣ—ಹಾಗೆಯೇ ಸರಿ. ಗುಣಪರಿಣಾಮಿದೇಹಗಳಲ್ಲಿ ಪ್ರಕಟವಾಗುವ ಈ ಮೂರು ಗುಣಗಳನ್ನು ಮೀರಿಹೋದವನು ಮಾತ್ರ, ಜನನ, ಮರಣ, ಮುಪ್ಪು ದುಃಖಗಳಿಂದ ಬಿಡಲ್ಪಟ್ಟು ಪರಬ್ರಹ್ಮನನ್ನು ಹೊಂದುವನು. (೨೦)

ಅರ್ಜುನ—ಸರ್ವಬಂಧಕವಾದ ಈ ಗುಣತ್ರಯವನ್ನು ಮೀರಿದವನು ಯಾವ ಲಕ್ಷಣಗಳುಳ್ಳವನಾಗಿರುವನು? ಯಾವ ಪ್ರಕಾರದ ಆಚಾರವುಳ್ಳವನಾಗಿರುವನು? ಯಾವ ಉಪಾಯದಿಂದ ಗುಣಬಂಧವನ್ನು ದಾಟುವನೆಂಬುದನ್ನೂ ವಿಶದವಾಗಿ ವಿವರಿಸು, ಪ್ರಭೋ! (೨೧)

ಶ್ರೀಕೃಷ್ಣ—ಸತ್ವಗುಣವು ಪ್ರಕಾಶಕ್ಕೂ (ಜ್ಞಾನಕ್ಕೂ), ರಜೋಗುಣವು ಪ್ರವೃತ್ತಿಗೂ, ತಮೋಗುಣವು ಮೋಹಕ್ಕೂ ಕಾರಣವಾಗುತ್ತವೆ. ಗುಣಗಳು ಸ್ಥೂಲ ಮತ್ತು ಸೂಕ್ಷ್ಮವೆಂದು ಎರಡು ಪ್ರಕಾರವು. ಸ್ಥೂಲಸತ್ವಗುಣವು ಜಗದ್ವಸ್ತುಗಳ ಯಥಾರ್ಥಜ್ಞಾನಕ್ಕೆ ಕಾರಣವು. ಸ್ಥೂಲರಜೋಗುಣದಿಂದ ಲೌಕಿಕವಿಷಯಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ. ಸ್ಥೂಲತಮೋಗುಣವು ಜಗದ್ವಸ್ತುವಿಷಯಕವಾದ ಅಜ್ಞಾನಕ್ಕೆ ಕಾರಣವು. ಸೂಕ್ಷ್ಮಸತ್ವಗುಣದಿಂದ ಪರಮಾತ್ಮವಿಷಯಕತತ್ವಜ್ಞಾನವಾಗುತ್ತದೆ. ಸೂಕ್ಷ್ಮರಜೋಗುಣದಿಂದ ಆ ಜ್ಞಾನಸಾಧನಗಳಾದ ಭಕ್ತಿವಿರಕ್ತಿಉಪಾಸನಾದಿಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ. ಸೂಕ್ಷ್ಮತಮೋಗುಣದಿಂದ ಪರಮಾತ್ಮವಿಷಯಕವಾದ ಮೋಹ, ಎಂದರೆ ಅಜ್ಞಾನಗಳು, ಉಂಟಾಗುತ್ತವೆ. ಗುಣಾತೀತನು (ತ್ರಿಗುಣಗಳನ್ನು ದಾಟಿದವನು) ಸ್ಥೂಲಸತ್ವಾದಿಗುಣಗಳಿಂದ, ಕ್ರಮವಾಗಿ, ಉಂಟಾಗುವ

ಪ್ರಕಾಶ, ಪ್ರವೃತ್ತಿ, ಮೋಹಗಳನ್ನು ಪ್ರಾಯಃ ದ್ವೇಷಿಸುವುದಿಲ್ಲ. ಹೇ ಪಾಂಡುನಂದನ! ಕಳೆದುಹೋದ ಈ ಪ್ರಕಾಶಾದಿಗಳನ್ನು ಅಪೇಕ್ಷಿಸುವುದಿಲ್ಲ; ಸ್ಥೂಲಸತ್ವಾದಿಗುಣಕಾರ್ಯಗಳಲ್ಲಿ ರಾಗದ್ವೇಷಗಳನ್ನುಳ್ಳವನಾಗುವುದಿಲ್ಲ. ಆದರೆ ಸೂಕ್ಷ್ಮಗುಣತ್ರಯಗಳ ಮಧ್ಯದಲ್ಲಿ, ಸೂಕ್ಷ್ಮಸತ್ವ ಮತ್ತು ಸೂಕ್ಷ್ಮರಜೋಗುಣಗಳಿಂದಾಗುವ ಪ್ರಕಾಶ ಮತ್ತು ಪ್ರವೃತ್ತಿಗಳನ್ನು ಅಪೇಕ್ಷಿಸುತ್ತಾನೆ; ಸೂಕ್ಷ್ಮತಮೋಗುಣಕಾರ್ಯವಾದ ಭಗವದ್ವಿಷಯಕಮೋಹವನ್ನು ದ್ವೇಷಿಸುತ್ತಾನೆ. ಗುಣಾತೀತನು ಇತರರಲ್ಲಿರುವ ಪ್ರಕಾಶ ಮತ್ತು ಪ್ರವೃತ್ತಿ-ರೂಪವಾದ ಸದ್ಧರ್ಮಸಮುದಾಯವನ್ನು ದ್ವೇಷಿಸುವುದಿಲ್ಲ ಮತ್ತು ಇಲ್ಲದಿರುವ ಮೋಹಾದಿ ಅಧರ್ಮಸಮುದಾಯವನ್ನು (ಪ್ರಾಪ್ತವಾಗಲೆಂದು ಎಂದೂ) ಕೋರುವುದಿಲ್ಲ. (೨೨) ಗುಣಾತೀತನ ಲಕ್ಷಣಗಳನ್ನು ಹೇಳಿದೆನು. ಇನ್ನು ಅವನ ಆಚಾರಪ್ರಕಾರವನ್ನು ವಿವರಿಸುವೆನು, ಕೇಳು. ಗುಣಾತೀತನು ಸತ್ವಾದಿಗುಣಗಳಿಂದ ವಿಕಾರಹೊಂದುವುದಿಲ್ಲ. ಪರಮಾತ್ಮನ ಇಚ್ಛೆಯಿಂದಲೇ ಗುಣಗಳು ಪ್ರವರ್ತಿಸುವುವೆಂದು ದೃಢವಾಗಿ ನಂಬಿ, ಕೇವಲ ವಿಷ್ಣು-ಪ್ರೀತ್ಯರ್ಥವಾದ ಕರ್ಮಗಳಲ್ಲಿ ತೊಡಗುತ್ತಾನೆ. ತದ್ವಿರುದ್ಧವಾದ ಕರ್ಮಗಳಲ್ಲಿ ಎಂದೂ ಪ್ರವರ್ತಿಸುವುದಿಲ್ಲ—ಉದಾಸೀನನಂತಿರುವನು. ಉದಾ-ಸೀನನು ಹೇಗೆ ಯಾವ ಫಲವನ್ನೂ ಇಚ್ಛಿಸದೆ ಇರುವನೋ ಹಾಗೆ ಗುಣಾ-ತೀತನು, ವಿಹಿತಕರ್ಮವನ್ನಾಚರಿಸಿದರೂ ಯಾವಫಲವನ್ನೂ ಅಪೇಕ್ಷಿಸುವುದಿಲ್ಲ. (೨೩) ವೈಷಯಿಕಸುಖವನ್ನು ದುಃಖಸಮವೆಂದು ತಿಳಿಯುವನು—ದುಃಖದಂತೆ ಪರಾಧೀನವೂ, ಅನಿತ್ಯವೂ, ಹೇಯವೂ ಆದುದೆಂದು ತಿಳಿಯುವನು. ಸುಖದುಃಖಗಳಿಂದ ಹಿಗ್ಗುಕುಗ್ಗುಗಳೆಂಬ ಮನೋವಿಕಾರವನ್ನು ಹೊಂದುವುದಿಲ್ಲ. ಮಣ್ಣುಕಲ್ಲುಗಳಂತೆ ಭಂಗಾರವೂ ಆತನಿಗೆ ಹೇಯವೇ ಆಗಿರುವುದು. ಹಾಗೆಯೇ ಪ್ರಿಯವನ್ನು ಅಪ್ರಿಯಸಮವೆಂದೂ ಸ್ತುತಿಯನ್ನು ನಿಂದೆಗೆ ಸಮವೆಂದೂ ಭಾವಿಸುವನು. ಆತನ ಈ ದಾರ್ಢ್ಯವು ತತ್ವಜ್ಞಾನದ ಫಲವು. ವಿಹಿತಕರ್ಮಾನುಷ್ಠಾನರೂಪವಾದ ವಿಷ್ಣುಪೂಜೆಯನ್ನು ದುಃಖ ಬಂದಾಗಲೂ ಬಿಡುವುದಿಲ್ಲ. ಸುಖಿಯಾಗಿರುವಾಗ ಹೇಗೋ ಹಾಗೆ ಏಕಪ್ರಕಾರವಾಗಿ ಮಾಡುವನು. ಪ್ರಾಪ್ತವಾಗ

..ವಾದ ಉಚ್ಚ ನೀಚ ಫಲಗಳಿಂದ ವಿಷ್ಣುಪೂಜೆಯನ್ನು ಬಿಡುವುದಿಲ್ಲ. ..ಕಿಕಹಾನಿಯನ್ನು ಗಮನಿಸದೆ ಪೂಜಾರತನಾಗಿರುವನು; ತನ್ನನ್ನು ..ನರು ಸ್ತುತಿಸಿದರೂ, ಅನೇಕರು ನಿಂದಿಸಿದರೂ ಗಮನಿಸುವುದಿಲ್ಲ; ..ಷ್ಣುಭಕ್ತಿಯನ್ನು ಬಿಡುವುದಿಲ್ಲ. ಗುಣಾತೀತನ ಈ ಸ್ಥೈರ್ಯಕ್ಕೆ ಆತನ ..ಷ್ಣುಮಾಹಾತ್ಮ್ಯಜ್ಞಾನವೇ ಕಾರಣವು. (೨೪) ಮಾನಾಪಮಾನಗಳು ..ತನ ವಿಷ್ಣುಭಕ್ತ್ಯಾದಿಗಳಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡುವು ..ಲ್ಲ. ಶತ್ರುಪಕ್ಷದಲ್ಲಿರಲಿ, ಮಿತ್ರಪಕ್ಷದಲ್ಲಿರಲಿ, ಭಗವದ್ಭಕ್ತಿ ಮೊದಲಾದವು ..ಳನ್ನು ಬಿಡದೆ ಮಾಡುವನು. ವಿಶೇಷವಾದ ಲೌಕಿಕಪ್ರಯೋಜನವು ..ರೆಯುವಂತಿದ್ದರೂ ಅನ್ಯದೇವತೆಗಳನ್ನುದ್ದೇಶಿಸಿ ಪೂಜಾದಿಗಳನ್ನು ..ಗೊಳ್ಳುವುದಿಲ್ಲ. ಗುಣಾತೀತನ ಮಹಿಮೆಯನ್ನರಿತೆಯಾ? ಅರ್ಜುನ! (೨೫) ಇನ್ನು ಗುಣಾತೀತನಾಗುವ ಉಪಾಯವನ್ನು ಹೇಳುವೆನು. ನನ್ನಲ್ಲಿ ಮಾಡುವ ನಿತ್ಯಭಕ್ತಿಯೊಂದೇ ಅದಕ್ಕೆ ಉಪಾಯವು. ಶ್ರೀಭೂದುರ್ಗಾ-ರೂಪಳಾದ ಲಕ್ಷ್ಮಿಯು ನನ್ನ ಇಚ್ಛೆಯಂತೆ ಜೀವರನ್ನು ಬಂಧಿಸಿರುವಳು. ಭಕ್ತಿಯಿಂದ ನಾನು ಪ್ರಸನ್ನನಾದರೆ, ಗುಣಬಂಧವು ಕಳಚಿಹೋಗುವುದು. ಆಗ ನನ್ನ ಭಕ್ತನು ಮಹಾಲಕ್ಷ್ಮಿಯಂತೆ ನನಗೆ ಪ್ರಿಯನಾಗುತ್ತಾನೆ; ಜಗನ್ಮಾತೆ ಮಹಾಲಕ್ಷ್ಮಿಯನ್ನು ಹೊಂದಲು ಸಮರ್ಥನಾಗುತ್ತಾನೆ. ಮಹಾಲಕ್ಷ್ಮಿಯು ಹೇಗೆ ಪ್ರಿಯಳೋ—ನಿತ್ಯಪ್ರಿಯಳೋ, ಹಾಗೆ ಗುಣಾ-ತೀತಭಕ್ತನೂ ನಿತ್ಯಪ್ರಿಯನಾಗುವನು; ಲಕ್ಷ್ಮೀದೇವಿಯಷ್ಟೇ ಪರಮಾತ್ಮನಿಗೆ ಪ್ರಿಯನಾಗುವನೆಂದಲ್ಲ. (೨೬)

ಅರ್ಜುನ—ಗುಣಾತೀತನಿಗೆ ನಿನ್ನ ಈ ಪ್ರಾಪ್ತಿಯೇ ಫಲವಲ್ಲವೆ? ಲಕ್ಷ್ಮಿಯನ್ನು ಹೊಂದಲು ಅರ್ಹನಾಗುವನೆಂದೇಕೆ ಹೇಳುವಿ?

ಶ್ರೀಕೃಷ್ಣ—ಆ ದೇವಿಯು ನನ್ನಲ್ಲಿರುವಳು. ದೇವಿಯ ಪ್ರಾಪ್ತಿ ಯಾದರೆ ನನ್ನ ಪ್ರಾಪ್ತಿಯೇ ಅಲ್ಲವೇ? ನಿತ್ಯವಾದ ಮುಕ್ತವರ್ಗಕ್ಕೂ, ಮಹಾಲಕ್ಷ್ಮಿಗೂ ನಾನೇ ಆಶ್ರಯನು. ನಿಷ್ಕಾಮಧರ್ಮಕ್ಕೂ ಅಕ್ಷಯ-ಫಲಕ್ಕೂ, (ಅದಕ್ಕಿಂತ ಇದು ಅಧಿಕವೆಂದು ಗಣನೆಮಾಡುತ್ತಹೋದಾಗ, ...ತ ಹೆಚ್ಚಿನದಿಲ್ಲವೆಂದು ಕಡೆಗೆ ನಿಲ್ಲುವ ಶ್ರೇಷ್ಠವಾದ (ದುಃಖ-

ಸ್ಪರ್ಶವೇ ಇಲ್ಲದ) ಮೋಕ್ಷಸುಖಕ್ಕೂ, ಪ್ರತಿಷ್ಠಾಪಕನು (ಆಧಾರನು) ನಾನೇ. ಗುಣಾತೀತನು ಲಕ್ಷ್ಮೀಸಾಮೀಪ್ಯವನ್ನು ಹೊಂದಿ, ಆಕೆಯ ಅನುಗ್ರಹದಿಂದ ನನ್ನನ್ನೇ ಹೊಂದುವನು. ಆದುದರಿಂದ ಗುಣಾತೀತನಾಗಲು ನನ್ನಲ್ಲಿ ಮಾಡುವ ಭಕ್ತಿಯೇ ಮುಖ್ಯಸಾಧನವು. (೨೭)

ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೫

ಸಂಸಾರಕಾರಣವಾದ ಪ್ರಕೃತಿಮಹದಹಂಕಾರಾದಿತತ್ವಸಮೂಹವನ್ನು ಕ್ಷೇತ್ರವೆಂದು ಸಂಗ್ರಹವಾಗಿ ನಿರ್ದೇಶಿಸಿ, ಅದರ ಸ್ವರೂಪವನ್ನೂ, ಅದು ಜೀವಸಮೂಹವನ್ನು ಬಂಧಿಸುವ ಪ್ರಕಾರವನ್ನೂ ಅದರ ತಾರಣೋಪಾಯವನ್ನೂ ಈ ಹಿಂದೆ ನಿರೂಪಿಸಿ, ಪುನಃ ಈ ಅಧ್ಯಾಯದಿಂದ ಶ್ರೀಕೃಷ್ಣನು ಜಗತ್ಸ್ವರೂಪವನ್ನು ಸಮಗ್ರವಾಗಿ ಪ್ರದರ್ಶನಮಾಡುತ್ತಾನೆ. ಇದರಿಂದ ಸಂಸಾರವನ್ನು ದಾಟುವ ಇಚ್ಛೆಯು ಉತ್ಕಟಗೊಳ್ಳುವುದು. ಈ ವಿಧವಾದ ಔತ್ಕಂಠ್ಯವುಳ್ಳ ಅಧಿಕಾರಿಯು ದಾಟುವ ಸಾಧನಗಳನ್ನು ಹೆಚ್ಚು ವಿಸ್ತಾರವಾಗಿ ತಿಳಿಯಲಿಚ್ಛಿಸುತ್ತಾನೆ. ಅದಕ್ಕಾಗಿ ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ಆ ಸಾಧನಗಳನ್ನು ವಿಸ್ತಾರಗೊಳಿಸಿ ಪ್ರಸಂಗಪ್ರಸ್ತಾಪವಾದ ಭಗವನ್ಮಹಿಮೆಗಳನ್ನೂ ಉಪದೇಶಿಸುತ್ತಾನೆ. ಜಗತ್ಸ್ವರೂಪವನ್ನು ಮೊದಲು ವಿವರಿಸುತ್ತಾನೆ:—

ಶ್ರೀಕೃಷ್ಣ—ಹೇ ಪರಂತಪ! ಈ ಜಗತ್ತು ಅತಿವಿಲಕ್ಷಣವಾದ ಒಂದು ಮಹಾವೃಕ್ಷವೆಂದು ತಿಳಿ. ಅದರ ಬೇರುಗಳು ಮೇಲ್ಭಾಗದಲ್ಲಿವೆ; ಶಾಖೆಗಳು ಕೆಳಗಿವೆ; ವೇದಗಳೇ ಅದರ ಎಲೆ(ಪರ್ಣ)ಗಳು. ಅದು ಅನಾದಿನಿತ್ಯವಾದುದು; ಆದರೂ ಇಂದಿನಂತೆ ನಾಳೆ ಇರತಕ್ಕದ್ದಲ್ಲ. ಈ ಜಗದ್ವೃಕ್ಷದ ನಿಜವನ್ನರಿತವನೇ ವೇದಾರ್ಥಜ್ಞಾನಿಯು.

ಅರ್ಜುನ—ಒಗಟಿನಂತಿದೆ, ಈ ಮಾತು. ಅದರ ವಿವೇಕವನ್ನು ಬಿಚ್ಚಿ ಹೇಳು, ಪ್ರಭೋ !

ಶ್ರೀಕೃಷ್ಣ— ಈ ಜಗತ್ತು ಸದಾ ಏಕರೀತಿಯಿಂದ ಇರತಕ್ಕದ್ದಲ್ಲ; ಅಶ್ವದಂತೆ ಚಂಚಲವಾದುದು. ಆದುದರಿಂದ ಇದನ್ನು ಅಶ್ವತ್ಥವೆನ್ನುವರು. ಚಂಚಲವಾದರೂ ಪ್ರವಾಹದಂತೆ ನಿತ್ಯವಾದುದು—ಅವ್ಯಯವು. ಪ್ರಸಿದ್ಧ-ವೃಕ್ಷಕ್ಕೆ ಬೇರು ಅದರ ಕೆಳಗಿರುವ ಭೂಮಿ ಮತ್ತು ಭೂದೇವಿ, ಇವು ಆಧಾರಗಳಲ್ಲವೇ ? ಬೇರು ಮೃತ್ಪರಿಣಾಮಿಯು. ಅದರಂತೆ ತ್ರಿಗುಣಾತ್ಮಕ-ಜಡಪ್ರಕೃತಿಯು ಜಗದ್ವೃಕ್ಷಕ್ಕೆ ಆಧಾರವಾಗಿರುವುದು. ಚಿತ್ಪ್ರಕೃತಿಯು (ರಮಾದೇವಿಯು) ಕೆಳಭಾಗದ ಭೂಮಿಯಂತೆ ಆಧಾರಳು. ಸರ್ವೋ-ತ್ತಮನಾದ ವಿಷ್ಣುವು, ಭೂದೇವಿಯಂತೆ ಜಗದ್ವೃಕ್ಷಕ್ಕೆ ಮೂಲಾಶ್ರಯನು. ಅಚೇತನವಸ್ತುಗಳಲ್ಲಿ ಮೂಲಜಡಪ್ರಕೃತಿಯೂ, ಪರತಂತ್ರರಾದ ಚೇತನ ಸಮುದಾಯದಲ್ಲಿ ರಮಾದೇವಿಯೂ ಉತ್ಕೃಷ್ಟರು. ವಿಷ್ಣುವು ಸ್ವತಂತ್ರನು ಮತ್ತು ಸರ್ವೋತ್ಕೃಷ್ಟನು. ಈ ಮೂರು ಉತ್ಕೃಷ್ಟವಸ್ತುಗಳು ಜಗದ್ವೃಕ್ಷಕ್ಕೆ ಮೂಲಾಧಾರಗಳಾಗಿವೆ. ಇವುಗಳಿಂದ ಕೀಳೆನಿಸುವ (ಕೆಳಭಾಗದ—ಉತ್ಕೃಷ್ಟವೆನಿಸದ) ಪೃಥ್ವಿ-ಮೊದಲಾದವುಗಳೂ ಅವುಗಳ ಅಭಿಮಾನಿ ದೇವತೆಗಳೂ, (ಕೆಳಗಿನವರು) ವೃಕ್ಷದ ಶಾಖೆಗಳಂತಿರುವರು. ವೃಕ್ಷದ ಶಾಖೆಗಳು ಬಿದ್ದುಹೋಗುತ್ತವೆ; ಮತ್ತೆ ಹುಟ್ಟುತ್ತವೆ. ಬೇರು ಭದ್ರವಾಗಿರುವವರೆಗೂ ವೃಕ್ಷಕ್ಕೆ ನಾಶವಿಲ್ಲ. ಜಗದ್ವೃಕ್ಷ ಮೂಲಾಧಾರಗಳಾದ, ವಿಷ್ಣು ಮತ್ತು ಚೇತನಾಚೇತನ ಪ್ರಕೃತಿಗಳಿಗೆ ನಾಶವಿಲ್ಲ. ಆದುದರಿಂದ ಜಗದ್ವೃಕ್ಷವು ಎಂದೂ ನಾಶಹೊಂದತಕ್ಕದ್ದಲ್ಲ. ಪೂರ್ವಕಲ್ಪದಂತೆ ಈ ಕಲ್ಪದಲ್ಲಿಯೂ, ಕಲ್ಪಾಂತರಗಳಲ್ಲಿಯೂ ಇರುವುದಾದ್ದರಿಂದ, ಜಗತ್ತು, ಪ್ರವಾಹದಂತೆ ನಿತ್ಯವಾದುದು. ವೃಕ್ಷದಲ್ಲಿ ಎಲೆಗಳು ಹುಟ್ಟಿದನಂತರವೇ ಫಲೋತ್ಪತ್ತಿಯಾಗುವುದಲ್ಲವೇ ? ಎಲೆಗಳಂತಿರುವ ವೇದಗಳ ಅರ್ಥ ಜ್ಞಾನವಾದನಂತರವೇ (ಎಲೆಗಳು ಹುಟ್ಟಿದನಂತರವೇ) ಪುರುಷಾರ್ಥರೂಪವಾದ ಫಲಪ್ರಾಪ್ತಿಯಾಗುವುದು. ಮೋಕ್ಷಾದಿ ಪುರುಷಾರ್ಥರೂಪವಾದ ಫಲಗಳು ಈ ಜಗದ್ವೃಕ್ಷದಿಂದಲೇ ಲಭಿಸಬೇಕು, ಅನ್ಯಮಾರ್ಗ

ವಿಲ್ಲ. (೧) ಶಾಖೆಗಳಂತಿರುವ ಪಂಚಭೂತಾದಿಪದಾರ್ಥಗಳು (ಅಷ್ಟವಿಧ ಪ್ರಕೃತಿಗಳು) ಮತ್ತು ಅವುಗಳ ಅಭಿಮಾನಿಗಳು, ತಮ್ಮಿಂದ ಉತ್ಕೃಷ್ಟ ವಾದ ಮತ್ತು ತಮಗೆ ಕಾರಣವಾದ ಅವ್ಯಕ್ತತತ್ವದಲ್ಲಿಯೂ (ಮೂಲ ಚಿದಚಿತ್ಪ್ರಕೃತಿಗಳಲ್ಲಿಯೂ); ತಮ್ಮಿಂದ ಅಧಮ (ಅಪಕೃಷ್ಟ) ಗಳಾದ ಕಾರ್ಯವಸ್ತುಗಳಲ್ಲಿಯೂ (ಉತ್ಪನ್ನವಾದ ಪ್ರಾಣಿ ಶರೀರಗಳಲ್ಲಿಯೂ); ಸೂಕ್ಷ್ಮರೂಪದಿಂದ ವ್ಯಾಪಿಸಿರುವುವು. ಇವು ಸತ್ವಾದಿಗುಣಗಳಿಂದ ಅಭಿವೃದ್ಧವಾಗಿ ಶಬ್ದಾದಿವಿಷಯಗಳೆಂಬ ಪಲ್ಲವ(ಚಿಗುರು)ಗಳುಳ್ಳವು. ಶಬ್ದಾದಿ ವಿಷಯಗಳು ತಾತ್ಕಾಲಿಕವಾಗಿ (ಕ್ಷಣಿಕವಾದ) ಸುಖಕ್ಕೆ ಕಾರಣಗಳಾದ್ದರಿಂದ ಪಲ್ಲವಗಳಂತೆ ಅಲ್ಪಕಾಲಾವಧಿಯ ಕೋಮಲತ್ವವುಳ್ಳವು. ಇನ್ನು ಉತ್ಕೃಷ್ಟವಾದ ತ್ರಿಮೂಲಗಳೂ ಸಹ ಕೆಳಭಾಗದಶಾಖೆಗಳಲ್ಲಿಯೂ (ಪಂಚಭೂತ-ತದಭಿಮಾನಿಗಳಲ್ಲಿಸಹ) ವ್ಯಾಪಿಸಿವೆ. ಇವು ಮನುಷ್ಯದೇಹವುಳ್ಳ ಪ್ರಾಣಿವರ್ಗದಲ್ಲಿ ಅವರವರ ಕರ್ಮಾನುಸಾರವಾಗಿ ಫಲಕೊಡುತ್ತವೆ. (೨) ಜಗದ್ವೃಕ್ಷಸ್ವರೂಪವನ್ನು ಇದ್ದಂತೆ ತಿಳಿಯುವುದು ಸಾಧ್ಯವಲ್ಲ. ಹಾಗೆಯೇ ಅದರ ಆದಿಯೂ, ಅಂತನೂ (ಸಂಹಾರಕನೂ), ಅದರಲ್ಲಿ ಪ್ರವಿಷ್ಟನೂ ಆದ ವಿಷ್ಣುವೂ ಕಾಣಲ್ಪಡುವುದಿಲ್ಲ. ಪ್ರಬಲವಾದ ಆಶ್ರಯವುಳ್ಳ (ರೂಢ ಮೂಲವುಳ್ಳ ಅಶ್ವತ್ಥವೆಂಬ ಈ ಜಗದ್ವೃಕ್ಷವನ್ನು ವೈರಾಗ್ಯದಿಂದ ಸಾಣೆ ಹಿಡಿದ (ಮಸೆದ) ಜ್ಞಾನವೆಂಬ ತೀಕ್ಷ್ಣ ಖಡ್ಗದಿಂದ ಛೇದಿಸಬೇಕು. ಕತ್ತರಿಸುವುದೆಂದರೆ, ಸರ್ವಮೂಲನಾದ ವಿಷ್ಣುವು ಪ್ರಕೃತ್ಯಾದಿ ಜಗತ್ತಿನಿಂದ ವಿಲಕ್ಷಣನೆಂದೂ, ವಿವಿಧವಾದ ಅವಾಂತರಭೇದಗಳಿಂದ ಕೂಡಿದ ಜಗತ್ತು ಪರತಂತ್ರವೂ, ಪ್ರವಾಹತಃ ನಿತ್ಯವೂ ಆದುದೆಂದು ವಿವೇಚಿಸಿ ತಿಳಿಯುವುದು. (೩) ಇದನ್ನೇ ಪರಾಪರತತ್ವವಿವೇಕವೆನ್ನುವರು. ಈ ವಿವೇಕವನ್ನು ಹೊಂದಿ ಪರಬ್ರಹ್ಮನಾದವಿಷ್ಣುವನ್ನು ಅರಸಿ ತಿಳಿಯಬೇಕು; ಶ್ರವಣಮನನಾದಿಸಾಧನಗಳಿಂದ ವಿಷಯೀಕರಿಸಬೇಕು. ವಿವೇಕವಿಲ್ಲದೇ ಆತನ ನಿಜ ಸ್ವರೂಪವನ್ನುಕಾಣಲು ಶಕ್ಯವಲ್ಲ. ಪರಬ್ರಹ್ಮನನ್ನು ಪ್ರವೇಶಿಸಿದವರು ಯಾರೂ, ತಿರುಗಿ, ಗರ್ಭವಾಸಾದಿಯಾತನೆಗಳನ್ನು ಹೊಂದುವುದಿಲ್ಲ— ಜನನಮರಣರೂಪವಾದ ಸಂಸಾರದಲ್ಲಿ ಬೀಳುವುದಿಲ್ಲ. ಸಂಸಾರವು

ಪುರಾತನವಾದುದು; ಅದರ ಪ್ರವರ್ತಕನು ಆದಿಪುರುಷನಾದ ವಿಷ್ಣುವು. ಆತನನ್ನೇ ಶರಣುಹೊಂದಿದರೆಮಾತ್ರ ಅದರಿಂದ ಬಿಡುಗಡೆಹೊಂದಬಹುದು; ಅನ್ಯಮಾರ್ಗವಿಲ್ಲ. ಜಗದ್ವೃಕ್ಷವನ್ನು ಛೇದಿಸಲು ವಿವೇಕವೆಂಬ ಖಡ್ಗ ಬೇಕು; ವಿವೇಕಜ್ಞಾನವೂ ಸಹ ವಿಷ್ಣುಪ್ರಸಾದದಿಂದಲೇ ಲಭ್ಯವು. ಆದುದರಿಂದ ವಿಷ್ಣುಶರಣಾಗತಿಯೇ ಮುಖ್ಯ ಸಾಧನವೆಂದು ತಿಳಿ. (೪)

ಅರ್ಜುನ—ತತ್ವವಿವೇಕಜ್ಞಾನವನ್ನು ಪಡೆಯಲು ಅನ್ಯಸಾಧನಗಳು ಅವಶ್ಯಕವೇ? ಹಾಗಿದ್ದರೆ ಅವುಗಳನ್ನೂ ಸಂಗ್ರಹವಾಗಿ ನಿರೂಪಿಸು, ದೇವ!

ಶ್ರೀಕೃಷ್ಣ—ವಿಷ್ಣುಪ್ರಸಾದವೇ ಮುಖ್ಯ ಸಾಧನವಾದರೂ, ಅದಕ್ಕಾಗಿ ಆತನನ್ನೇ ಶರಣುಹೊಂದಿದ ಭಕ್ತನು, ಅನ್ಯೋಪಾಯಗಳನ್ನೂ ಕೈಗೊಳ್ಳಬೇಕು. ಯತ್ನಶೀಲನಿಗೇ ಆತನ ಪ್ರಸನ್ನತೆಯು ಲಭಿಸುವುದು. ಮಾನ ಮೋಹ (ಅಹಂಕಾರ ಮಿಥ್ಯಾಜ್ಞಾನ)ಗಳಿಂದ ರಹಿತನಾಗಬೇಕು. ವಿಷಯಾಸಕ್ತಿಯನ್ನು ಬಿಟ್ಟು ತಜ್ಜನ್ಯದೋಷಗಳನ್ನು ಜಯಿಸಬೇಕು. ಅಧ್ಯಾತ್ಮಜ್ಞಾನ ನಿರತನಾಗಬೇಕು—ಭಗವನ್ಮಹಿಮೆಗಳ ಶ್ರವಣಾದಿಗಳಲ್ಲಿ ನಿರಂತರ ತೊಡಗಬೇಕು. ವಿಷಯಾಶೆಗಳಿಂದ ವಿಶೇಷವಾಗಿ ನಿವೃತ್ತನಾಗಬೇಕು. ಸುಖದುಃಖ, ಲಾಭಾಲಾಭಾದಿ ದ್ವಂದ್ವಗಳಿಂದ ವಿಮುಕ್ತನಾಗಬೇಕು. ಹೀಗಿರುವ ಸಾತ್ವಿಕಸ್ವಭಾವದ ಅಧಿಕಾರಿಗಳು (ಅಮೂಢರು) ಅವ್ಯಯವಾದ ಭಗವತ್ಸ್ವರೂಪವನ್ನು ಕಾಣುವರು. (೫) ಅಗ್ನಿ, ಚಂದ್ರಸೂರ್ಯಾದಿಗಳು ಯಾರೂ ಆ ಭಗವತ್ಸ್ವರೂಪವನ್ನು ಪ್ರಕಾಶಗೊಳಿಸರು. ಆ ನನ್ನ ಪರಮಧಾಮ (ಸರ್ವೋತ್ಕೃಷ್ಟಸ್ವರೂಪ) ವನ್ನು ಹೊಂದಿದವರು ಸಂಸಾರಕ್ಕೆ ಎಂದೂ ಹಿಂತಿರುಗರು. (೬)

ಅರ್ಜುನ—ಬ್ರಹ್ಮಾದಿದೇವತೆಗಳನ್ನು ಹೊಂದುವುದರಿಂದಲೇ ಜಗದ್ವೃಕ್ಷದ ಛೇದವು ಸಾಧಿಸಲಾರದೇ? ಭಗವತ್ಪ್ರಾಪ್ತಿಯಿಂದೇನು?

ಶ್ರೀಕೃಷ್ಣ— ಸಾಧಿಸುವುದಿಲ್ಲ, ಪಾರ್ಥ! ಬ್ರಹ್ಮಾದಿಜೀವಶರೀರದಲ್ಲಿ ಅನಾದಿನಿತ್ಯನಾಗಿ, ಜೀವರೂಪದಿಂದ ನನ್ನ ಭಿನ್ನಾಂಶವು ಸ್ಥಿತವಾಗಿರುವುದು. ಮತ್ಸ್ಯ, ಕೂರ್ಮ, ರಾಮ, ಕೃಷ್ಣಾದಿಗಳಂತೆ ಅದು ನನ್ನ ಸ್ವರೂಪಾಂಶವಲ್ಲ.

ಜೀವನು ನನ್ನಿಂದ ಅತ್ಯಂತಭಿನ್ನನು; ಆದರೂ, ಖದ್ಯೋತವು(ಮಿಂಚು-ಹುಳವು) ಪ್ರಕಾಶವುಳ್ಳದ್ದೆಂಬ ಕಾರಣದಿಂದ, ಪ್ರಕಾಶರೂಪನಾದ ಸೂರ್ಯನಿಗೆ ಸದೃಶವೆಂದು ಹೇಳಬಹುದಾದಂತೆ, ಚೇತನತ್ವಾದಿ ಅಲ್ಪಗುಣಗಳಿಂದ ಕಿಂಚಿತ್ಸದೃಶನಾದ್ದರಿಂದ ನನ್ನ ಅಂಶನೆಂದು ಹೇಳಲ್ಪಡುತ್ತಾನೆ. ಬಿಂಬಸದೃಶವಾಗಿದ್ದು ಬಿಂಬಾಧೀನವಾದ ವ್ಯಾಪಾರವುಳ್ಳ ವಸ್ತುವು ಪ್ರತಿ-ಬಿಂಬವು. ಹೀಗೆ ಬ್ರಹ್ಮಾದಿಸಕಲಜೀವರು ನನ್ನ ಪ್ರತಿಬಿಂಬರು. ಅವರ ಸ್ವತಂತ್ರವಾದ ಯಾವಶಕ್ತಿಯೂ ಇಲ್ಲ. ಆದುದರಿಂದ ಅವರ ಪ್ರಾಪ್ತಿಯು ಕಿಂಚಿತ್ಕರವು; ಸ್ವತಂತ್ರನಾದ ನನ್ನನ್ನೇ ಹೊಂದಬೇಕು.

ಅರ್ಜುನ—ಜೀವರು ನಿನ್ನ ಭಿನ್ನಾಂಶದ ಪ್ರತಿಬಿಂಬರಾದರೆ ಅವರು ಯಾವ ಕಾರ್ಯವನ್ನು ಮಾಡಲೂ ಅಸಮರ್ಥರೆಂದು ಏರ್ಪಡುವುದಿಲ್ಲವೆ?

ಶ್ರೀಕೃಷ್ಣ—ಅಸಮರ್ಥರೆಂಬುದು ನಿಜ. ಜೀವರು ಚೇತನರಾದ್ದರಿಂದ ಕ್ರಿಯಾಶಕ್ತಿಯುಳ್ಳವರೆಂಬುದೂ ನಿಜ. ಆದರೆ ಅವರ ಆ ಕ್ರಿಯಾಶಕ್ತಿಯೂ ನನ್ನ ಅಧೀನವಾದುದು—ಸ್ವತಂತ್ರವಲ್ಲ. ಅವರಲ್ಲಿರುವ ನನ್ನ ಅಂಶವೇ ಅವರಿಂದ ಕಾರ್ಯಗಳನ್ನು ಮಾಡಿಸುವುದು; ಅವರ ಪ್ರಾಕೃತಶರೀರ, ತದ್ಗತವಾದ ಮನಸ್ಸು ಮತ್ತು ಶ್ರೋತ್ರಾದಿಜ್ಞಾನೇಂದ್ರಿಯಗಳನ್ನು ಕರ್ಷಣಮಾಡುತ್ತದೆ. ಜೀವರು ಪ್ರಾಕೃತಶರೀರವನ್ನು ಹೊಂದುವಕಾಲದಲ್ಲಿ ಮೂಲಕಾರಣದಿಂದ ಮನ ಮೊದಲಾದ ಇಂದ್ರಿಯಗಳನ್ನು ಸೆಳೆದು ದೇಹದಲ್ಲಿ ಸ್ಥಾಪಿಸುವುದು, ಸ್ಥಿತಿಕಾಲದಲ್ಲಿ ಅವುಗಳನ್ನು ವಿಷಯಗಳಕಡೆಗೆ ಸೆಳೆಯುವುದು, ಮರಣ-ಕಾಲದಲ್ಲಿ ದೇಹದಿಂದ ಸೆಳೆದುಕೊಂಡುಹೋಗುವುದೆಂಬ ಈ ಎಲ್ಲ ವ್ಯಾಪಾರಗಳೂ ನನ್ನ ಅಂಶದಿಂದಲೇ ನಡೆಯುವುವೆಂದು ತಿಳಿ. (೭)

ಅರ್ಜುನ—ಹಾಗಾದರೆ, ಜೀವನು ತನ್ನ ಇಂದ್ರಿಯಗಳನ್ನು ವಿಷಯಗಳನ್ನು ಕುರಿತು ಪ್ರಯೋಗಿಸುವುದೇ ಇಲ್ಲವೇ?

ಶ್ರೀಕೃಷ್ಣ—ಪ್ರಯೋಗಿಸುವನು; ಆದರೆ ಸ್ವಸಾಮರ್ಥ್ಯದಿಂದಲ್ಲ. ಸರ್ವಶಕ್ತನಾದ ಈಶ್ವರನು ಜೀವನೊಂದಿಗೆ ಯಾವಾಗ ಶರೀರವನ್ನು ಪ್ರವೇಶಿಸುವನೋ ಆಗ, ಜೀವನು ಈಶ್ವರಪ್ರೇರಣೆಯಿಂದಲೇ ಇಂದ್ರಿಯ

ಗಳಿಂದ ವ್ಯಾಪಾರಮಾಡುವನು, ಹಾಗೆಯೇ ಈಶ್ವರನು ಯಾವಾಗ ಜೀವನನ್ನು ತೆಗೆದುಕೊಂಡು ದೇಹದಿಂದ ಹೊರಡುವನೋ ಆಗ, ಪುಷ್ಪ-ಗಳುಳ್ಳ ಉಪವನಾದಿ (ಹೂವಿನತೋಟ ಮೊದಲಾದ) ಸ್ಥಳದಿಂದ ಪುಷ್ಪ-ಗಂಧದ ಸೂಕ್ಷ್ಮಾಂಶಗಳನ್ನು ಕೊಂಡೊಯ್ಯುವ ಗಾಳಿಯಂತೆ, ಇಂದ್ರಿಯಗಳ ಸೂಕ್ಷ್ಮಾಂಶಗಳನ್ನು ಜೊತೆಯಲ್ಲಿ ಸಂಗ್ರಹಿಸಿಕೊಂಡೇ ಲೋಕಾಂತರಗಳನ್ನು ಹೊಂದಿಸುವನು. ಪುನಃ ಶರೀರವನ್ನು ಹೊಂದಿಸುವಾಗ ಇವುಗಳೊಂದಿಗೇ ಜೀವನನ್ನು ದೇಹದಲ್ಲಿ ಪ್ರವೇಶಗೊಳಿಸುವನು. ಇಂದ್ರಿಯಕರ್ಷಣ ವ್ಯಾಪಾರವು ಹೀಗೆ, ಈಶ್ವರನಾದ ನನ್ನ ಶಕ್ತಿಯಿಂದಲೇ ಆಗುವುದೆಂದು ತಿಳಿ. (೮)

ಅರ್ಜುನ—ಇಂದ್ರಿಯಪ್ರವರ್ತಕನಾಗಿ ಇಂದ್ರಿಯಗಳಲ್ಲಿರುವ ನಿನಗೆ ಇಂದ್ರಿಯಗಳದ್ವಾರಾ ವಿಷಯಭೋಗವುಂಟೇ?

ಶ್ರೀಕೃಷ್ಣ—ಶ್ರೋತ್ರ, ಚಕ್ಷು, ಸ್ಪರ್ಶ, ರಸನ ಮತ್ತು ಘ್ರಾಣಗಳೆಂಬ ಪಂಚೇಂದ್ರಿಯಗಳನ್ನೂ ಮನಸ್ಸನ್ನೂ ಪ್ರವೇಶಮಾಡಿ, ಪ್ರವರ್ತಕನಾಗಿಯೇ ಶಬ್ದಾದಿ ವಿಷಯಗಳನ್ನು ಭೋಗಿಸುತ್ತೇನೆ. (೯)

ಅರ್ಜುನ—ಜೀವನಂತೆ ಅಶುಭವಿಷಯಗಳ ಭೋಗವೂ ನಿನಗುಂಟೇ?

ಶ್ರೀಕೃಷ್ಣ—ಹೇ ಪಾರ್ಥ! ಸ್ವತಂತ್ರನಾದ ನನಗೆ ಅಶುಭಭೋಗವು ಸರ್ವಥಾ ಇಲ್ಲ. ಕೇವಲ ಶುಭವಿಷಯಗಳನ್ನೇ ಭೋಗಿಸುವೆನು. ದುಃಖವನ್ನು ನಿವಾರಿಸಲು ಸ್ವತಂತ್ರನಾದವನು ಎಂದಾದರೂ ದುಃಖವನ್ನು ಭೋಗಿಸುವನೇ!

ಅರ್ಜುನ— ಸರ್ವಜೀವದೇಹಗಳಲ್ಲಿ ಹೀಗೆ ಶುಭವಿಷಯಭೋಕ್ತನಾಗಿ ನೆಲೆಸಿದ್ದರೂ ಅದೇಕೆ ನೀನು ಕಾಣಲ್ಪಡುವುದಿಲ್ಲ?

ಶ್ರೀಕೃಷ್ಣ—ಜೀವಶರೀರದಲ್ಲಿರುವೆನು; ಇಂದ್ರಿಯಗಳದ್ವಾರಾ ಶುಭ-ವಿಷಯಗಳನ್ನು ಭೋಗಿಸುವೆನು ಮತ್ತು ಜೀವನೊಂದಿಗೆ ದೇಹವನ್ನು ಬಿಟ್ಟು ಹೊರಟು ಲೋಕಾಂತರಗಳಿಗೆ ಪ್ರಯಾಣಮಾಡುವೆನು. ಆದರೂ ವಿಮೂಢರು ನನ್ನನ್ನು ಕಾಣುವುದಿಲ್ಲ; ಜ್ಞಾನದೃಷ್ಟಿಯುಳ್ಳ ಅಧಿಕಾರಿಗಳು ನನ್ನನ್ನು ನೋಡುತ್ತಾರೆ. (೧೦)

ಅರ್ಜುನ—ಯತ್ನದಿಂದ ಎಲ್ಲರೂ ನಿನ್ನನ್ನು ಕಾಣಬಹುದಲ್ಲವೇ?

ಶ್ರೀಕೃಷ್ಣ—ಇಲ್ಲ; ಯತ್ನಿಸುವವರೆಲ್ಲ ನನ್ನನ್ನು ಕಾಣುವರೆಂಬ ನಿಯಮವಿಲ್ಲ.

ಅರ್ಜುನ—ಯತ್ನಿಸಿದರೂ ಕಾಣದಿರಲು ಕಾರಣವೇನು?

ಶ್ರೀಕೃಷ್ಣ—ಅಶುದ್ಧಸ್ವಭಾವದ ಅವಿವೇಕಿಗಳು ಯತ್ನಿಸಿದರೂ ಕಾಣುವುದಿಲ್ಲ. ಜ್ಞಾನೋಪಾಯವನ್ನು ಅನುಷ್ಠಾನಮಾಡುವ ಜನರು (ಯೋಗಿಗಳು) ಯತ್ನದಿಂದ ನನ್ನ ಮಹಿಮಾಜ್ಞಾನವನ್ನು ಸಾಧಿಸಿ-ಕೊಂಡು ತಮ್ಮ ದೇಹದಲ್ಲಿ ನಿಯಾಮಕನಾಗಿ ವಾಸಮಾಡುವ ನನ್ನನ್ನು ಕಾಣುತ್ತಾರೆ. (೧೧)

ಅರ್ಜುನ— ನಿನ್ನ ಸರ್ವಾಂತರ್ಯಾಮಿತ್ವರೂಪಮಹಿಮಾವಿಶೇಷವನ್ನೂ ನಿನ್ನ ಸರ್ವೋತ್ತಮತ್ವವನ್ನೂ ಸವಿಸ್ತಾರವಾಗಿ ಕೇಳಲಿಚ್ಛಿಸುವೆನು.

ಶ್ರೀಕೃಷ್ಣ—ಈ ಮೊದಲು ವಿಸ್ತಾರವಾಗಿ ಹೇಳಿರುವೆನಲ್ಲವೇ? ಆದರೂ ಪ್ರಸಂಗಪ್ರಾಪ್ತವಾಗಿರುವುದರಿಂದ ಪುನಃ ಹೇಳುವೆನು, ಕೇಳು. ಜಗತ್ತನ್ನು ಬೆಳಗುವ ಸೂರ್ಯನಲ್ಲಿರುವ ಪ್ರಕಾಶಕಶಕ್ತಿಯೂ, ಚಂದ್ರ, ಅಗ್ನಿ ಮೊದಲಾದವರಲ್ಲಿರುವ ತೇಜಸ್ಸೂ ನನ್ನ ಅಧೀನವೆಂದು ತಿಳಿ. ನನ್ನಶಕ್ತಿಯೇ ಸೂರ್ಯಾದಿಗಳ ದ್ವಾರಾ ಕೆಲಸಮಾಡುತ್ತದೆ. (೧೨) ಭೂಮಿಯಲ್ಲಿದ್ದು ಸಕಲಪ್ರಾಣಿಗಳನ್ನು ಸ್ವಶಕ್ತಿಯಿಂದ ನಾನು ಧರಿಸುತ್ತೇನೆ. ಅಮೃತರಸ-ಸ್ವರೂಪನಾದ ನಾನು ಸೌಮ್ಯನಾದುದರಿಂದ **ಸೋಮ**ನೆಂದು ಕರೆಯಲ್ಪಡುವೆನು. ಸೋಮನಾಮಕನಾಗಿ ಚಂದ್ರನಲ್ಲಿದ್ದು ಸಕಲ ಸಸ್ಯಾದಿಗಳನ್ನು ವೃದ್ಧಿಗೊಳಿಸುತ್ತೇನೆ. (೧೩) ವಿಶ್ವನರಸಂಬಂಧಿಯಾದುದರಿಂದ ನಾನು **ವೈಶ್ವಾನರ**ನೆಂದು ಕರೆಯಲ್ಪಡುವೆನು. ಸಕಲಪ್ರಾಣಿಗಳ ದೇಹಗತ ಜಾಠರಾಗ್ನಿಯಲ್ಲಿ ವೈಶ್ವಾನರನಾಮಕನಾಗಿ ನಾನೇ ಇದ್ದು, ಪ್ರಾಣ, ಅಪರೆಂಬ ಮುಖ್ಯಪ್ರಾಣರೂಪಗಳಿಂದ ಸಹಿತನಾಗಿ ಭಕ್ಷ್ಯ, ಭೋಜ್ಯ ಲೇಹ್ಯ ಪೇಯಗಳೆಂಬ ನಾಲ್ಕುವಿಧ ಆಹಾರವನ್ನು ಪಚನ (ಜೀರ್ಣ) ಮಾಡುತ್ತೇನೆ. (೧೪) ಸಕಲಪ್ರಾಣಿಗಳ ಹೃದಯದಲ್ಲಿರುವೆನು.

ಅಪಾನ

ನನ್ನಿಂದಲೇ ಸರ್ವಪ್ರಾಣಿಗಳಿಗೆ, ಸ್ಮರಣೆ, ಅನುಭವರೂಪದ ಜ್ಞಾನ, ಮತ್ತು ವಿಪರೀತಜ್ಞಾನಗಳು ಉಂಟಾಗುವುವು. ಸಕಲವೇದಗಳಿಂದ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗುವವನು ನಾನೇ. ವೇದಾರ್ಥ-ಗಳನ್ನು ನಿರ್ಣೈಸಿ, ವೇದವ್ಯಾಸರೂಪದಿಂದ ಬ್ರಹ್ಮಸೂತ್ರಗಳನ್ನು ರಚಿಸಿದವನೂ ನಾನೇ; ವೇದರಹಸ್ಯಗಳನ್ನೆಲ್ಲ ಬಲ್ಲವನೂ ನಾನೇ. (೧೫) ಸರ್ವಾಂತರ್ಯಾಮಿಯಾದ ನನ್ನ ಮಹಿಮೆಗಳನ್ನು ತಿಳಿದೆಯಾ, ಅರ್ಜುನ? ನನ್ನ ಸರ್ವೋತ್ತಮತ್ವವನ್ನು ವಿವರಿಸುವೆನು ಕೇಳು. ಈಶನಾದ ನನ್ನಿಂದ ನಿಯಮ್ಯವಾದ ಈಶಿತವ್ಯವರ್ಗದಲ್ಲಿ ಪ್ರಮಾಣಪ್ರಮಿತರಾದ, ಕ್ಷರ ಮತ್ತು ಅಕ್ಷರವೆಂಬ ಎರಡು ವಿಧ ಪುರುಷರು (ಚೇತನರು) ಇರುವರು, ಬ್ರಹ್ಮಾದಿಜೀವಸಮೂಹವು, 'ಕ್ಷರ ಪುರುಷ'ವೆಂದು ಕರೆಯಲ್ಪಡುವುದು. ನಾಶಹೊಂದುವ (ಕ್ಷರ) ಪ್ರಾಕೃತದೇಹಸಂಬಂಧವುಳ್ಳ ಚೇತನಸಮುದಾಯ ನಾದುದರಿಂದ ಹೀಗೆ ವ್ಯವಹರಿಸಲ್ಪಡುತ್ತದೆ. ಅಕ್ಷರದೇಹವುಳ್ಳ ಆಕಾಶದಂತೆ ನಿರ್ವಿಕಾರವಾದ ಶ್ರೀತತ್ತ್ವವು 'ಅಕ್ಷರಪುರುಷ'ವೆಂದು ಕರೆಯಲ್ಪಡುವುದು. (೧೬)

ಅರ್ಜುನ—ಈ ಪುರುಷದ್ವಯ ನಿರೂಪಣೆಯು ಏತಕ್ಕಾಗಿ?

ಶ್ರೀಕೃಷ್ಣ— ಕ್ಷರಾಕ್ಷರ ಪುರುಷರದೆಶೆಯಿಂದ ಅನ್ಯನಾದ ಉತ್ತಮ-ಪುರುಷನೊಬ್ಬನಿರುವನೆಂದೂ ತಿಳಿಸುವುದೇ ಉದ್ದೇಶವು. ಆ ಪುರುಷೋ-ತ್ತಮನೇ ಪರಮಾತ್ಮನೆಂದು ಉದಾಹರಿಸಲ್ಪಡುವನು. ಕ್ಷರಾಕ್ಷರ ಪುರುಷರು ಚೇತನಮಾತ್ರರು; ಪುರುಷೋತ್ತಮನು ಪರಮಚೇತನನು. ಉಭಯ ಪುರುಷರಿಂದಲೂ ಅತ್ಯಂತ ಭಿನ್ನನು ಮತ್ತು ವಿಲಕ್ಷಣನು. ಆತನೇ ಭೂಃ, ಭುವಃ, ಸ್ವಃ, ಎಂಬ ಮೂರುಲೋಕಗಳನ್ನೂ (ಉಪಲಕ್ಷಣಯಾ ಸಕಲಜಗತ್ತನ್ನೂ) ಪ್ರವೇಶಿಸಿ ಧಾರಣಮಾಡುತ್ತಾನೆ. ಧಾರಣಪೋಷಣ-ಕರ್ತನಾದುದರಿಂದಲೇ ಅವುಗಳಿಂದ ಉತ್ತಮನೂ ಅನ್ಯನೂ ಎಂದು ತಿಳಿ. ಜಗತ್ತುನಷ್ಟವಾದರೂ, ಪ್ರವಿಷ್ಟನಾದ ಆತನಿಗೆ ನಾಶವಿಲ್ಲ; ಆತನು ಅವ್ಯಯನು, ನಷ್ಟವಾಗದಿರಲು ಹೇಗೆ ಸಾಧ್ಯವೆಂದು ಶಂಕಿಸಬೇಡ. ಆತನು ಅಚಿಂತ್ಯಶಕ್ತಿಯುಳ್ಳವನು—ಈಶ್ವರನು. (೧೭)

ಅರ್ಜುನ—ಈತನಾರು ? ನಿನ್ನಿಂದ ಅನ್ಯನೇ ?

ಶ್ರೀಕೃಷ್ಣ—ಆ ಪುರುಷೋತ್ತಮನಾದ ಈಶ್ವರನು ನಾನೇ. ಕ್ಷರಪುರುಷ ಸಮೂಹವನ್ನು ಮೀರಿದವನು—ಅತ್ಯಂತ ಉತ್ತಮನು; ಅಕ್ಷರಕ್ಕಿಂತಲೂ ಉತ್ತಮನು. ಆದುದರಿಂದಲೇ ಅಪೌರುಷೇಯವಾದ ವೇದಗಳಲ್ಲಿಯೂ, ಪೌರುಷೇಯಗ್ರಂಥರಾಶಿಯಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವೆನು. (೧೮) ಹೇ ಭಾರತ! ಹೀಗೆ ಕ್ಷರಾಕ್ಷರ ಪುರುಷರದೆಶೆಯಿಂದ ಉತ್ತಮನೆಂದು ಯಾರು ನನ್ನನ್ನು ತಿಳಿದು ನಾನೇ ಸರ್ವೋತ್ತಮನೆಂಬ ಜ್ಞಾನನಿಶ್ಚಯವುಳ್ಳವನಾಗುವನೋ, ಅವನೇ ಸರ್ವಶಾಸ್ತ್ರವನ್ನು ತಿಳಿದವನು. ಸರ್ವೋತ್ತಮತ್ವವು, ವ್ಯಾವಹಾರಿಕವಾದ ಮಿಥ್ಯಾಪ್ರತಿಪಾದನೆಯೆಂಬ ಮೋಹದಿಂದ ದೂರನಾಗಿ, ನನ್ನ ಸರ್ವೋತ್ತಮತ್ವವನ್ನು ಸ್ಥಾಪಿಸುವುದೇ ಸಕಲಶಾಸ್ತ್ರಗಳ ಮುಖ್ಯತಾತ್ಪರ್ಯವೆಂಬುದನ್ನು ಮನಗಂಡು ಸರ್ವಪ್ರಕಾರದಿಂದ ನನ್ನನ್ನೇ ಸೇವಿಸುವನು. (೧೯) ನಾನೇ ಜಗದ್ವೃಕ್ಷಮೂಲನೂ, ಸರ್ವಾಂತರ್ಯಾಮಿಯೂ, ಸರ್ವೋತ್ತಮನೂ ಎಂಬ ಪ್ರಮೇಯವು ಶಿಕ್ಷಣೀಯವಾದುದು ಮತ್ತು ಅತಿಗೋಪ್ಯವಾದುದು; ಕಂಡಕಂಡವರಿಗೆ ಹೇಳಲ್ಪಡತಕ್ಕದ್ದಲ್ಲ. ಹೇ ಭಾರತ! ಹೇ ಅನಘ! (ದುರ್ವ್ಯಸನರಹಿತನಾದ ಭರತಕುಲಶೇಖರ!) ಯೋಗ್ಯಾಧಿಕಾರಿಯಾದ ನಿನಗೋಸ್ಕರ ಈ ರಹಸ್ಯವನ್ನು ಉಪದೇಶಿಸಿರುವೆನು. ನನ್ನನ್ನು ಹೀಗೆ ತಿಳಿದವನು ಅಪರೋಕ್ಷಜ್ಞಾನಿಯಾಗುತ್ತಾನೆ; ನಂತರ ಮೋಕ್ಷವನ್ನೂ ಹೊಂದುತ್ತಾನೆ.

ಹದಿನೈದನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೬.

[ಪುರುಷಾರ್ಥಗಳಾದ ಜ್ಞಾನ, ಮೋಕ್ಷಗಳ ಪ್ರಾಪ್ತಿಗೆ, ಮಾನ, ಮೋಹ-ಗಳ ಪರಿತ್ಯಾಗವೇಮೊದಲಾದ ಸಾಧನೆಗಳು, ಸಂಕ್ಷೇಪವಾಗಿ ಹಿಂದಿನ ಅಧ್ಯಾಯದಲ್ಲಿ ಹೇಳಲ್ಪಟ್ಟವು. ಪುರುಷಾರ್ಥಸಾಧನಗಳೂ ತದ್ವಿರೋಧಿಗಳೂ ಕ್ರಮಶಃ ದೇವಾಸುರಲಕ್ಷಣಗಳೇ ಆಗಿರುವುದರಿಂದ, ಅವು ಈ ಅಧ್ಯಾಯದಲ್ಲಿ ವಿಸ್ತರಿಸಲ್ಪಡುತ್ತವೆ. ಪುರುಷಾರ್ಥಗಳನ್ನು ಸಾಧಿಸುವುದರಲ್ಲಿ ತೊಡಗಿದವನು ತದ್ವಿರೋಧಿಗಳಾದ ದೋಷಗಳನ್ನು ಯತ್ನಪೂರ್ವಕವಾಗಿ ಪರಿತ್ಯಾಗಮಾಡ ಬೇಕಾದುದು ಅತ್ಯವಶ್ಯಕವಾದುದರಿಂದ ಸಹ ಆಸುರೀಲಕ್ಷಣಗಳ ನಿರೂಪಣೆಯು ಯುಕ್ತವಾಗುತ್ತದೆ. ಮುಖ್ಯವಾದ ದೇವಲಕ್ಷಣಗಳನ್ನು ಮೊದಲಿಗೆ ಶ್ರೀಕೃಷ್ಣನು ಹೇಳುತ್ತಾನೆ.]

ಶ್ರೀಕೃಷ್ಣ—ಹೇ ಭಾರತ! ದೇವಸ್ವಭಾವದವರ ಲಕ್ಷಣಗಳನ್ನು ನಿರೂಪಿಸುವೆನು, ಕೇಳು. **ಅಭಯ**—ತನಗೆ ಇತರರೂ, ಇತರರಿಗೆ ತಾನೂ ಭಯಕಾರಣರಲ್ಲವೆಂದೂ ಭಯಾಭಯಗಳಿಗೆ ಮುಖ್ಯಕಾರಣನು ನಾನೇ (ಶ್ರೀಕೃಷ್ಣನೇ) ಎಂದೂ ತಿಳಿದು ನಿರ್ಭಯನಾಗಿರುವುದು; **ಸತ್ವ-ಸಂಶುದ್ಧಿ**—ಮನಃಪ್ರಸನ್ನತೆ; **ಜ್ಞಾನೋಪಾಯನಿಷ್ಠೆ**; ಪಾತ್ರದಲ್ಲಿ **ದಾನ**; **ದಮ**—ಇಂದ್ರಿಯಜಯ; **ಯಜ್ಞ**-ಯಜ್ಞಾದಿಗಳ (ಜ್ಯೋತಿಷ್ಟೋಮ, ದೇವಯಜ್ಞ ಪಿತೃಯಜ್ಞ ಇತ್ಯಾದಿಗಳ) ಆಚರಣೆ; **ಸ್ವಾಧ್ಯಾಯ**—ವೇದಾಧ್ಯಯನ; **ತಪಸ್ಸು**—ಬ್ರಹ್ಮಚರ್ಯಾದಿಗಳು; **ಆರ್ಜವ**—ಮನೋವಾಕ್ಕರ್ಮಗಳಲ್ಲಿ ಏಕತ್ವ; **ಅಹಿಂಸಾ**—ಪರಪ್ರಾಣವಿಯೋಗ ಪಡಿಸದಿರುವುದು; **ಸತ್ಯ**—ಯಥಾರ್ಥಭಾಷಣ, **ಅಕ್ರೋಧ**—ಪರ ಪೀಡೆಗೆ ಕಾರಣವಾಗುವ ಚಿತ್ತವಿಕಾರವಿಲ್ಲದಿರುವುದು; **ತ್ಯಾಗ**—ಔದಾರ್ಯ; **ಶಾಂತಿ**—ಭಗವನ್ನಿಷ್ಠೆ; **ಅಪೈಶುನ**—ಪರೋಪದ್ರವ ಕಾರಣಗಳಾದ (ಚಾಡಿ) ಮಾತುಗಳನ್ನು ರಾಜಾದಿ ಅಧಿಕಾರಿಗಳಲ್ಲಿ ಹೇಳದಿರುವುದು; **ದಯಾ**—ಪ್ರಾಣಿಗಳಲ್ಲಿ ದಯೆ; **ಅಲೋಲುತ್ವ**—ವಿಷಯ ರಾಗರಾಹಿತ್ಯ; **ಮಾರ್ದವ**—ತನ್ನನ್ನು ಹಿಂಸಿಸುವರಲ್ಲಿಸಹ ವಿರೋಧ ಭಾವವನ್ನು ಹೊಂದದಿರುವುದು; ಹ್ರೀ—ಅಕಾರ್ಯವನ್ನು ಮಾಡುವುದರಲ್ಲಿ

ಲಜ್ಜೆ ; **ಅಚಾಪಲ**—ಸ್ಥೈರ್ಯ ; **ತೇಜಸ್ಸು**—ಪರಾಭವವಿಲ್ಲದಿರುವುದು; **ಕ್ಷಮಾ**—ಕ್ರೋಧವಿಲ್ಲದಂತೆ ಇರುವುದರಿಂದಸಹ ಅಪಕಾರಿಗಳಿಗೆ ಪ್ರತ್ಯಪಕಾರಮಾಡದಿರುವುದು ; **ಧೃತಿ**—ಆತಂಕವಿಲ್ಲದಿರುವಿಕೆ ; **ಶೌಚ**—ಮೃತ್ತಿಕಾದಿಗಳಿಂದ ಬಾಹ್ಯಶುದ್ಧಿ ಮತ್ತು ಭಗವತ್ಸ್ಮರಣರೂಪವಾದ ಅಂತಃಶುದ್ಧಿಗಳೆಂಬ ಉಭಯವಿಧ ಶುದ್ಧಿಯುಳ್ಳವನಾಗುವುದು ; **ಅದ್ರೋಹ**—ಪರರವೃತ್ತಿಗಳನ್ನು ವಿರೋಧಿಸಿ ತೊಂದರೆಕೊಡದಿರುವುದು ; **ನಾತಿಮಾನಿತಾ**—ಅಹಂಕಾರವಿಲ್ಲದಿರುವುದು ; ಈ ಸದ್ಗುಣಗಳು ದೇವ ಸ್ವಭಾವದ ಜೀವರ ಸಹಜಗುಣಗಳು. ಅವು ಅವರ ಸಂಪತ್ತು. ಮೋಕ್ಷಾಪೇಕ್ಷಿಗಳು ಈ ಲಕ್ಷಣಗಳನ್ನು ಅವಶ್ಯಕವಾಗಿ ಸಂಪಾದಿಸಬೇಕು. (೧-೨-೩). ತದ್ವಿರೋಧಿಗಳಾದ ಅಸುರಸ್ವಭಾವಲಕ್ಷಣಗಳನ್ನು ಹೇಳುವೆನು, ಕೇಳು. ಮೋಕ್ಷಾಪೇಕ್ಷಿಯು, ಇವುಗಳನ್ನು ಯತ್ನಪೂರ್ವಕವಾಗಿ ತ್ಯಾಗಮಾಡಬೇಕು. ತನ್ನ ಅಲ್ಪತೆಯನ್ನು ತಿಳಿದೂಸಹ ಮಹತ್ವಪ್ರದರ್ಶನಮಾಡುವುದು (ದಂಭ) ; ಭಯಕಾರಣವಿದ್ದರೂ, ಮದದಿಂದ ಭಯವಿಲ್ಲವೆಂದು ತಿಳಿಯುವುದು (ದರ್ಪ) ; ಪ್ರಮಾಣವನ್ನು ಅತಿಕ್ರಮಿಸುವುದು (ಅಭಿಮಾನ) ; ಪರಪೀಡೆಗೆ ಕಾರಣವಾದ ಚಿತ್ತವಿಕಾರವುಳ್ಳವನಾಗುವುದು (ಕ್ರೋಧ) ; ನಿಷ್ಠುರತನ (ಪಾರುಷ್ಯ) ; ತತ್ವಜ್ಞಾನಶೂನ್ಯನಾಗಿ ವಿಪರೀತಜ್ಞಾನವುಳ್ಳವನಾಗಿರುವುದು (ಅಜ್ಞಾನ) ; ಇವು ಅಸುರಸ್ವಭಾವದ ಜೀವರ ಸಂಪತ್ತು. ಈ ದೋಷಗಳನ್ನು ಮೋಕ್ಷಾರ್ಥಿಯು ದೂರದಲ್ಲಿಡಬೇಕು. (೪)

ಅರ್ಜುನ—ಈ ದೈವಾಸುರ ಸಂಪತ್ತುಗಳ ಫಲವೇನು ? ನನ್ನ ಸ್ವಭಾವ ಸಂಪತ್ತು ಎಂಥದು ?

ಶ್ರೀಕೃಷ್ಣ—ದೈವೀಸಂಪತ್ತು (ದೇವಸ್ವಭಾವದ ಶುಭಗುಣಗಳು) ಮುಕ್ತಿಗೆ ಕಾರಣವೆಂದೂ, ಆಸುರೀಸಂಪತ್ತು (ಅಸುರಸ್ವಭಾವದ ದುಷ್ಟಗುಣಗಳು-ದೋಷಗಳು) ನೀಚವಾದ ತಮಸ್ಸಿನಲ್ಲಿ ನಿತ್ಯವಾಸಕ್ಕೆ ಕಾರಣವೆಂದೂ ಸಮ್ಮತವಾಗಿವೆ. ಹೇ ಪಾಂಡವ; ನೀನಾದರೋ ದೇವಸ್ವಭಾವದವನು. ದೈವೀಸಂಪದ್ಯುಕ್ತನಾಗಿಯೇ ಹುಟ್ಟಿರುವಿ; ದುಃಖಕ್ಕೆ ಕಾರಣವೇ ಇಲ್ಲ, ಶೋಕಿಸದಿರು. (೫)

*

ಅರ್ಜುನ—ದೇವ, ಅಸುರ, ರಾಕ್ಷಸ, ಪಿಶಾಚ, ಮನುಷ್ಯಾದಿಭೇದ ದಿಂದ ಪ್ರಾಣಿಸರ್ಗವು ಬಹುಪ್ರಕಾರವಾಗಿರಲು, ದೇವಾಸುರಸ್ವಭಾವ ಲಕ್ಷಣ ಗಳನ್ನು ಮಾತ್ರ ನಿರೂಪಿಸಲು ಕಾರಣವೇನು?

ಶ್ರೀಕೃಷ್ಣ—ಅಧಿಕವಾಗಿಹೊಂದುವ ಶುಭಾಶುಭ ಫಲವಿವಕ್ಷೆಯಿಂದ ಪ್ರಾಣಿಸ್ವಭಾವವು ದ್ವಿವಿಧವೆಂದು ಹೇಳಿದೆನು. ಶುಭಫಲಾಧಿಕಾರಿಗಳಲ್ಲಿ ದೇವತೆಗಳು ಉತ್ತಮರು; ಅಶುಭಫಲಗಳನ್ನು ಹೊಂದುವವರಲ್ಲಿ ಅಸುರರು ಅಧಿಕರು. ಇತರರು, ಗುಣದೋಷಗಳ ಪ್ರಾಚುರ್ಯ, ಅಪ್ರಾಚುರ್ಯ ವಿವಕ್ಷೆಯಿಂದ ಈ ಎರಡರಲ್ಲಿ ಯಾವುದಾದರೊಂದುವರ್ಗದಲ್ಲಿ ಸಮಾವೇಶ ಗೊಳ್ಳುವರು. ಮಿಶ್ರಸ್ವಭಾವದ ಮಧ್ಯಮವರ್ಗವೂ ಒಂದಿದೆ. ಇವು ಗಳನ್ನು ಕ್ರಮೇಣ ವಿವರಿಸುವೆನು. ಹೇ ಪಾರ್ಥ! ಪ್ರಕೃತವನ್ನನುಸರಿಸು. ಈ ಜಗತ್ತಿನಲ್ಲಿ ದೇವ ಮತ್ತು ಅಸುರಗಳೆಂಬ ಮುಖ್ಯವಾದ ಎರಡೇ ಪ್ರಾಣಿ ಸ್ವಭಾವಗಳಿರುವುವು—ಪ್ರಾಣಿಸೃಷ್ಟಿಯೂ ಎರಡು ಪ್ರಕಾರವಾಗಿರುವುದು. ದೇವಸ್ವಭಾವಲಕ್ಷಣಗಳನ್ನು ಹೇಳಿದೆನಷ್ಟೆ. ಅಸುರಸ್ವಭಾವಲಕ್ಷಣಗಳನ್ನು ವಿಸ್ತರಿಸುವೆನು, ಕೇಳು. (೭) ಅಸುರಸ್ವಭಾವದ ಜನರು, ವಿಹಿತಾಚರಣೆ ಯಲ್ಲಿ ಪ್ರವೃತ್ತಿಯನ್ನೂ ನಿಷಿದ್ಧಾಚರಣೆಯಲ್ಲಿ ನಿವೃತ್ತಿಯನ್ನೂ (ಕರ್ತವ್ಯ ವನ್ನು ಆಚರಿಸುವುದು, ನಿಷಿದ್ಧವನ್ನು ಬಿಡುವುದು, ಎಂಬ ವ್ಯವಸ್ಥೆಯನ್ನೇ ತಿಳಿಯರು. ಮಾನಿಸುವುದಿಲ್ಲ— ಸ್ವೇಚ್ಛಾಪ್ರವೃತ್ತಿಯುಳ್ಳವರಾಗಿರುವರು) ಅವರಲ್ಲಿ ಶೌಚ, ಆಚಾರ ಮತ್ತು ಸತ್ಯಗಳಿಗೆ ಸ್ಥಾನವಿಲ್ಲ; (೮) ಈ ಜಗತ್ತನ್ನು ಅಸತ್ಯವೆಂದೂ, ಸ್ಥಿತಿರಹಿತವೆಂದೂ, ನಿಯಾಮಕ (ಈಶ್ವರ) ರಹಿತವಾದುದೆಂದೂ ಹೇಳುವರು. ಲಯಕರ್ತನಾದುದರಿಂದ ಸತ್ಯಶಬ್ದ-ವಾಚ್ಯನಾದ ವಿಷ್ಣುವಿನಿಂದ ವಿಹೀನವಾದುದೆಂದೂ, ಸ್ಥಿತಿಕರ್ತನಾದುದರಿಂದ ಪ್ರತಿಷ್ಠನೆಂದು ಕರೆಯಲ್ಪಡುವ ವಿಷ್ಣುವಿನಿಂದ ಹೀನವೆಂದೂ, ನಿಯಾಮಕ ನಾದುದರಿಂದ ಈಶ್ವರನೆಂದು ಕರೆಯಲ್ಪಡುವ ವಿಷ್ಣುವಿನಿಂದ ರಹಿತ ವಾದುದೆಂದೂ ಹೇಳುವರು ಎಂದರೆ, ಈಜಗತ್ತಿಗೆ ಸ್ಥಿತಿ, ಲಯ, ನಿಯಮ ನಾದಿಗಳು ವಿಷ್ಣುವಿನಿಂದ ಸಂಭವಿಸುವುವೆಂದು ಒಪ್ಪುವುದಿಲ್ಲ. ಯಾರು ಜಗತ್ತಿನ ಸೃಷ್ಟಿಸ್ಥಿತಿಲಯಾದಿಗಳು ಸ್ವತಂತ್ರನಾದ ವಿಷ್ಣುನಾಮಕಕರ್ತ

ನಿಂದ ಆಗುವುವೆಂದು ಸರ್ವಥಾ ಒಪ್ಪುವುದಿಲ್ಲವೋ ಅವರೇ ಆಸುರಸ್ವಭಾವದವರೆಂದು ತಿಳಿ.

ಅರ್ಜುನ—ಅನ್ನದಿಂದ ಪ್ರಾಣಿಗಳೂ, ಪರ್ಜನ್ಯದಿಂದ ಅನ್ನವೂ ಇತ್ಯಾದಿ ಜಗಚ್ಚಕ್ರವನ್ನು ಈ ಹಿಂದೆ ನಿರೂಪಿಸಿದೆಯಲ್ಲವೇ ? ಹಾಗೆ ಈ ಜಗತ್ತು (ಪರಸ್ಪರ) ಒಂದರಿಂದೊಂದು ಉತ್ಪತ್ತಿಯುಳ್ಳದ್ದೆಂದು, ಆಸುರ-ಸ್ವಭಾವದವರು ತಿಳಿಯುವರೇ ?

ಶ್ರೀಕೃಷ್ಣ—ಇಲ್ಲ. ಜಗತ್ತನ್ನು ಪರಸ್ಪರಸಂಭೂತವೆಂದೂ ತಿಳಿಯುವುದಿಲ್ಲ.

ಅರ್ಜುನ—ಹಾಗಾದರೆ ಜಗತ್ತನ್ನು ಅವರು ಹೇಗೆ ತಿಳಿಯುವರು ಮತ್ತು ಹೇಗೆ ಉಂಟಾದುದೆಂದು ನಿರೂಪಿಸುವರು ?

ಶ್ರೀಕೃಷ್ಣ—ಹಗ್ಗವನ್ನು ಕಂಡು ಸರ್ಪವೆಂದೂ, ಸಿಂಪನ್ನು ನೋಡಿ ಬೆಳ್ಳಿಯೆಂದೂ ಭ್ರಮಿಸುವಂತೆ, ಈ ಜಗತ್ತು ಕೇವಲ ಭ್ರಮಾತ್ಮಕವೆಂದು ತಿಳಿಯುತ್ತಾರೆ; ಉತ್ತರಕ್ಷಣದಲ್ಲಿ (ಸಮೀಪಕ್ಕೆ ಹೋಗಿ ನೋಡಿದ ಕೂಡಲೆ) ಸರ್ಪವಾಗಲಿ ಬೆಳ್ಳಿಯಾಗಲಿ ಇರಲೇಇಲ್ಲವೆಂಬ ಬಾಧಜ್ಞಾನದಿಂದ ಸರ್ಪಬೆಳ್ಳಿಗಳು ಇಲ್ಲದವಸ್ತುಗಳೆಂದು ತಿಳಿದುಬರುವಂತೆ, ಅಪ್ರತಿಷ್ಠವಾದುದೆಂದು ಹೇಳುತ್ತಾರೆ. ಹೀಗೆ ಇಲ್ಲದುದು ಇದ್ದಂತೆ ತೋರುವುದರಿಂದ, ಜಗತ್ತು, ಕಾಮಹೇತುವಾದ ಅವಿದ್ಯಾಪರಿಣಾಮರೂಪವಾದ, ಸದಸದ್ವಿ-ಲಕ್ಷಣವಸ್ತುವೆಂದು, ಜಗತ್ಸ್ವರೂಪವನ್ನು ನಿರೂಪಿಸುತ್ತಾರೆ. (೮) ಈಪರಿಯಾದ ವಿಪರೀತದೃಷ್ಟಿಯುಳ್ಳವರಾಗಿ, ಅಜ್ಞಾನಿಗಳಾದ ಈ ದುಷ್ಟಾತ್ಮರು ಘೋರಕರ್ಮಗಳಲ್ಲಿ ನಿರತರಾಗಿ ಜಗತ್ತಿನ ಶತ್ರುಗಳಾಗಿರುವರು ; ಲೋಕಕ್ಷಯಕ್ಕಾಗಿ (ವಿಶೇಷವಾಗಿ ಕಲಿಯುಗದ ಆದಿಯಲ್ಲಿ) ಹುಟ್ಟುತ್ತಾರೆ. (೯) ಎಂದೂ ಪೂರ್ಣಗೊಳಿಸಲಾಗದ ದುಷ್ಟಕಾಮವನ್ನಾಶ್ರಯಿಸಿ, ದಂಭಾಹಂ-ಕಾರ ಮದಗಳಿಂದ ಯುಕ್ತರಾಗಿ, ದುಶ್ಶಾಸ್ತ್ರಗಳನ್ನು ಅಭ್ಯಸಿಸಿ, ಸ್ವಾಭಾವಿಕವಾದ ಮಿಥ್ಯಾಜ್ಞಾನಬಲದಿಂದ ವಿಪರೀತ (ವಿರುದ್ಧ) ನಿರ್ಣಯಗಳನ್ನು ಗ್ರಹಿಸಿ, ಅಶುದ್ಧವಾದ ಆಚರಣೆಗಳಿಂದ ಕ್ಷುದ್ರಭೋಗಗಳಿಗಾಗಿಯೇ ಪ್ರವರ್ತಿಸುತ್ತಾರೆ. (೧೦) ಮರಣಪರ್ಯಂತವೂ ಅಪರಿಮಿತಚಿಂತೆಗೆ

ಳಗಾಗಿ ವಿಷಯಭೋಗದಲ್ಲಿಯೇ ಆಸಕ್ತರಾಗುತ್ತಾರೆ; ಐಹಿಕಫಲ ವಲ್ಲದ ಬೇರೆ (ಆಮುಷ್ಮಿಕ) ಯಾವಫಲವೂ ಇಲ್ಲವೆಂಬ ನಿಶ್ಚಯವುಳ್ಳವ ರಾಗುತ್ತಾರೆ. (೧೧) ಆಶಾಪಾಶಶತಗಳಿಂದ ಬದ್ಧರಾಗಿ, ಕಾಮಕ್ರೋಧ ಗಳ ವಶರಾಗಿ, ಇಚ್ಛೆಬಂದ ವಿಷಯಗಳನ್ನು ಭೋಗಿಸಲಿಕ್ಕಾಗಿ, ಚೌರ್ಯಾದಿ ಅನ್ಯಾಯಮಾರ್ಗಗಳಿಂದ ದ್ರವ್ಯರಾಶಿಯನ್ನು ಗಳಿಸಲು ಅಪೇಕ್ಷಿಸು ತ್ತಾರೆ. (೧೨)

ಅರ್ಜುನ— ಈ ಜನರ ಅಪರಿಮಿತ ಚಿಂತಾಪ್ರಕಾರವಾವುದು? ಆ ವಿಧ ಚಿಂತೆಗಳನ್ನು ಮನಸ್ಸಿನಿಂದ ದೂರೀಕರಿಸಲು, ಅವುಗಳನ್ನಾದರೂ ಕೇಳಲಿಚ್ಛೈಸುವೆನು.

ಶ್ರೀಕೃಷ್ಣ—ಅವರ ಮಿತಿಮೀರಿದ ಚಿಂತೆಗಳನ್ನು ಎಷ್ಟೆಂದು ವರ್ಣಿ ಸುವುದು! ಉದಾಹರಣೆಗಾಗಿ ಕೆಲವನ್ನು ನಿರೂಪಿಸುವೆನು; ಎಲ್ಲ ಆಲೋಚನೆಗಳೂ ಅವೇಸ್ವಭಾವದವುಗಳೆಂದು ತಿಳಿ. "ಈ ಧನವು ಈಗ ಲಭಿಸಿತು; ಇದರಿಂದ ಈ ಮನೋರಥವನ್ನು ಹೊಂದುವೆನು. ಈ ಧನ ವಿದೆ, ಮತ್ತಷ್ಟು ದೊರೆಯುತ್ತದೆ. (೧೩) ಈ ನನ್ನ ಶತ್ರುವನ್ನು ಕೊನೆ ಗಾಣಿಸಿದೆನು; ಇತರರನ್ನೂ ನಿರ್ನಾಮಗೊಳಿಸುವೆನು. ನನಗಾರು ಸರಿ; ನಾನೇ ಈಶ್ವರನು, ಭೋಗಿಯು, ಕೃತಕೃತ್ಯನು, ಸುಖಿಯು ಮತ್ತು ಸಮರ್ಥನು. (೧೪) ನಾನೇ ಆಢ್ಯನು, ಕುಲೀನನು, ನನ್ನ ಸಮಾನನಿಲ್ಲ, ಯಥೇಷ್ಟವಾಗಿ ಯಜ್ಞಗಳನ್ನು ಮಾಡಿ, ಅನ್ನದಾನಮಾಡುತ್ತೇನೆ; ಭೂರಿ ದಕ್ಷಿಣೆ ದಾನಾದಿಗಳನ್ನು ಕೊಡುತ್ತೇನೆ; ಸಂತೋಷದಿಂದ ಬಾಳುತ್ತೇನೆ" ಎಂದು ಮುಂತಾಗಿ ಅಜ್ಞಾನದಿಂದ ವಿಮೋಹಿತರಾಗಿ ಹಿಗ್ಗುತ್ತಾರೆ. (೧೫) ಇನಂತ ಚಿಂತೆಗಳಿಂದ ಭ್ರಾಂತರಾಗಿ, ಪುತ್ರಮಿತ್ರಾದಿವಿಷಯಕವಾದ ಮೋಹ ಜಾಲಕ್ಕೆ ಸಿಕ್ಕಿ, ವಿಷಯಭೋಗಗಳಲ್ಲಿ ಅತ್ಯಂತ ಆಸಕ್ತರಾಗಿ ಹೊಲಸು ನರಕದಲ್ಲಿ ಬೀಳುವರು. (೧೬)

ಅರ್ಜುನ—ಯಜ್ಞಯಾಗಾದಿಗಳನ್ನು ಮಾಡುವ ಈ ಜನರಿಗೆ ನರಕ- ಪ್ರಾಪ್ತಿಯು ಹೇಗೆ ಕೂಡುತ್ತದೆ? ಆಮುಷ್ಮಿಕವಾದ ಯಾವ ಫಲವೂ

ಇಲ್ಲವೇ ಇಲ್ಲವೆಂಬ ನಿಶ್ಚಯವುಳ್ಳ ಇವರು, ಯಜ್ಞಾದಿಧರ್ಮಗಳನ್ನೇಕೆ ಅನುಷ್ಠಾನಮಾಡುವರು ?

ಶ್ರೀಕೃಷ್ಣ—ಆತ್ಮಸಂಭಾವಿತರಾದ (ತಾವೇ ಪೂಜ್ಯರೆಂದು ತಿಳಿದು ಹೆಮ್ಮೆಪಡುವ) ಈ ಜನರು ಅನ್ಯಾಯಾರ್ಜಿತವಾದ ಧನದಿಂದುಂಟಾದ ಗರ್ವ ದರ್ಪಗಳಿಂದ ಕೂಡಿ, ಶಾಸ್ತ್ರವಿಧಿಗಳನ್ನು ಲೆಕ್ಕಿಸದೇ, ದಂಭದಿಂದ ಸ್ವ-ಮಹಿಮಾಪ್ರದರ್ಶನಾರ್ಥವಾಗಿಯೇ ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡುತ್ತಾರಲ್ಲದೇ ನನ್ನ ಪ್ರೀತ್ಯರ್ಥವಾಗಿ ಅಲ್ಲ; ಮತ್ತು ಸ್ವರ್ಗಾದಿ ಆಮುಷ್ಮಿಕಫಲಗಳನ್ನು ಪಡೆಯಬೇಕೆಂದೂ ಅಲ್ಲ. ಆದುದರಿಂದ ಅವರಿಗೆ ನರಕವಲ್ಲದೇ ಮತ್ತಾವಗತಿಯು ಲಭಿಸಬಹುದು ? (೧೭)

ಅರ್ಜುನ—ಸರ್ವಕರ್ಮಗಳನ್ನು ಮಾಡಿಸುವ, ಸರ್ವಾಂತರ್ಯಾಮಿಯಾದ ನಿನ್ನನ್ನು ಈ ಜನರು ಏಕೆ ಪೂಜಿಸುವುದಿಲ್ಲ ?

ಶ್ರೀಕೃಷ್ಣ—ನನ್ನ ದ್ವೇಷಿಗಳು ನನ್ನನ್ನು ಪೂಜಿಸುವರೇ ! ಅಹಂಕಾರ, ಬಲ, ದರ್ಪ, ಕಾಮ, ಕ್ರೋಧಾದಿಗಳನ್ನು ಸದಾ ಆಶ್ರಯಿಸಿರುವ ಈ ಜನರು, ತಮ್ಮ ದೇಹಗಳಲ್ಲಿಯೂ, ಇತರ ಸರ್ವರ ದೇಹಗಳಲ್ಲಿಯೂ ನಿಯಾಮಕನಾಗಿ ಸ್ಥಿತನಾದ ನನ್ನನ್ನು ಅತ್ಯಂತವಾಗಿ ದ್ವೇಷಿಸುತ್ತಾರೆ ಮತ್ತು ನನ್ನಲ್ಲಿ ವಿಶೇಷವಾದ ಅಸೂಯೆಪಡುತ್ತಾರೆ. ದ್ವೇಷಾಸೂಯೆಗಳಿಂದ ಯುಕ್ತರಾಗಿಯೇ ಯಾಗಾದಿಗಳನ್ನು ಮಾಡುತ್ತಾರೆ.

ಅರ್ಜುನ—ಲೌಕಿಕವ್ಯಕ್ತಿಗಳಲ್ಲಿ ಮಾಡುವಂತೆ ನಿನ್ನಲ್ಲಿ ದ್ವೇಷಾಸೂಯೆಗಳನ್ನು ಪಡುವುದು ಕಂಡುಬರುವುದಿಲ್ಲ. ನಿನ್ನಲ್ಲಿ ಅವರ ದ್ವೇಷಾ-ಸೂಯೆಗಳು ಯಾವ ಪ್ರಕಾರವಾಗಿರುವುವು ?

ಶ್ರೀಕೃಷ್ಣ—"ಈಶ್ವರನೇ ಎಲ್ಲರಿಂದ ಎಲ್ಲವನ್ನೂ ಮಾಡಿಸುವವನಾದರೆ ನಾನು ಏನನ್ನೂ ಮಾಡದೇ ಕೂಡುತ್ತೇನೆ, ನನ್ನಿಂದ ಮಾಡಿಸಲಿ, ಅಥವಾ ಮಾಡುವ ನನ್ನನ್ನು ತಡೆದು ನಿಲ್ಲಿಸಲಿ. ಈ ಯಾವುದೂ ಆಗುವುದಿಲ್ಲ; ಆದುದರಿಂದ ಈಶ್ವರನು ಸರ್ವನಿಯಾಮಕನಲ್ಲ" ಎಂದು ಮುಂತಾಗಿ ಸ್ವತಂತ್ರಕರ್ತನಾದ ನನ್ನ ವಿಷಯದಲ್ಲಿ ಅಪಲಾಪಮಾಡುತ್ತಾರೆ. ಹೀಗೆ

ನನ್ನನ್ನು ತಿರಸ್ಕರಿಸಿ, ತಾವೇ ಸ್ವತಂತ್ರರೆಂದು ತಿಳಿಯುವುದಕ್ಕಿಂತ ಹೆಚ್ಚಿನ ದ್ವೇಷವಾವುದು ! ನಿರ್ದೋಷಿಯಲ್ಲಿ ದೋಷಗಳನ್ನು ಹೇಳುವುದು ಮತ್ತು ಗುಣಪೂರ್ಣನಲ್ಲಿ ಗುಣಹೀನತ್ವವನ್ನು ಆರೋಪಿಸುವುದು ಅಸೂಯೆಯ ಪರಮಾವಧಿಯು. ಈ ಜನರು ನನ್ನ ವಿಷಯದಲ್ಲಿ ಈ ಎರಡನ್ನೂ ಮಾಡುತ್ತಾರೆ. (೧೮)

ಅರ್ಜುನ—ಹೀಗೆ ನಿನ್ನಲ್ಲಿ ದ್ವೇಷಾಸೂಯೆಗಳನ್ನು ಮಾಡುವ ಈ ಜನರಿಗೆ ನರಕಾನುಭವಮಾತ್ರವು ಯೋಗ್ಯಫಲವೆನಿಸಬಹುದೇ ?

ಶ್ರೀಕೃಷ್ಣ—ನಿಜ, ಪಾರ್ಥ ! ನರಕಪ್ರಾಪ್ತಿಯು (ಅನಿತ್ಯನರಕ) ಮಾತ್ರ ಅವರಿಗೆ ದೊರೆಯುವ ಮುಖ್ಯಫಲವಲ್ಲ. ಕೆಲಕಾಲ ಸಂಸಾರವನ್ನು ಮತ್ತೆಮತ್ತೆ ನರಕವಾಸವನ್ನೂ ಅನುಭವಿಸಿ, ಕೊನೆಗೆ ನನ್ನಿಂದಲೇ ನಿತ್ಯ ನರಕವನ್ನುಹೊಂದುವರು. ನನ್ನಲ್ಲಿ ವಿದ್ವೇಷವುಳ್ಳ, ಕ್ರೂರರಾದ ಅಮಂಗಳ-ಸ್ವಭಾವದ ಈ ನರಾಧಮರನ್ನು ಪದೇಪದೇ ಆಸುರೀಯೋನಿಗಳಲ್ಲಿ ಹುಟ್ಟಿಸಿ ಸಂಸಾರದಲ್ಲಿ ಸುತ್ತಿಸುತ್ತೇನೆ. (೧೯) ಮೂಢರಾದ ಈ ತಾಮಸಿಗಳು ಅನೇಕ ಜನ್ಮಗಳಲ್ಲಿ ಆಸುರೀಯೋನಿಗಳನ್ನು ಹೊಂದಿ, ಎಂದೆಂದಿಗೂ ನನ್ನನ್ನು ಹೊಂದದೇ ನಿತ್ಯನರಕಲಕ್ಷಣವಾದ ಅಧೋಗತಿಯನ್ನೇ ಹೊಂದುವರು. ಹೇ ಕೌಂತೇಯ ! ಇದೇ ಅವರಿಗೆ ಯೋಗ್ಯವಾದ ಫಲವು. (೨೦) ಕಾಮ, ಕ್ರೋಧ ಮತ್ತು ಲೋಭಗಳು ಆಸುರೀಸ್ವಭಾವದವರ ಮೂರು ಪ್ರಧಾನ ದೋಷಗಳು—ನರಕಸಾಧನಗಳು. ಆತ್ಮನಾಶಕ್ಕೇ ಕಾರಣಗಳಾದ ಈ ಮೂರನ್ನು ಶ್ರೇಯೋಭಿಲಾಷಿಯು ಸರ್ವಥಾ ಪರಿತ್ಯಾಗಮಾಡಬೇಕು. (೨೧) ಈ ಕಾಮಾದಿಗಳ ತ್ಯಾಗದಿಂದ ನರಕವು ತಪ್ಪುವುದೆಂದುಮಾತ್ರವಲ್ಲ ; ಹೇ ಅರ್ಜುನ! ನರಕದ್ವಾರಗಳಾದ ಈ ದೋಷಗಳನ್ನು ಬಿಟ್ಟವನು ಆತ್ಮ-ಶ್ರೇಯಸ್ಸನ್ನು ಸಾಧಿಸಿಕೊಂಡು ಮೋಕ್ಷವನ್ನೇ ಹೊಂದುತ್ತಾನೆ. (೨೨).

ಅರ್ಜುನ—ಪುರುಷಾರ್ಥಪ್ರಾಪ್ತಿಗೆ ಕೈಗೊಳ್ಳಬೇಕಾದ ಸಾಧನಾನು-ಷ್ಠಾನವಿಷಯದಲ್ಲಿ, ಕಾಮಾದಿಗಳ ತ್ಯಾಗವಲ್ಲದೇ ಬೇರೆ ಅಂಗವಿರುವುದೇ ? ಇರುವುದಾದರೆ ಅದಾವುದು ? ಮತ್ತು ಅದನ್ನು ಗಮನಿಸದಿದ್ದರೆ ಆಗುವ ಬಾಧಕವೇನು ?

ಶ್ರೀಕೃಷ್ಣ—ಶಾಸ್ತ್ರವಿಧಾನವನ್ನು ತಪ್ಪದೇ ಅನುಸರಿಸುವುದು, ಶ್ರೇಯಸ್ಸಾಧನೆಯ ಮುಖ್ಯಾಂಗವು. ಸ್ವಬುದ್ಧಿಬಲದಿಂದ ತರ್ಕಿಸಿ ಮಾರ್ಗವನ್ನು ನಿರ್ಣಯಿಸಿಕೊಳ್ಳುವುದು ಅನರ್ಥಕ್ಕೆ ಕಾರಣವಾಗುವುದು. ಶ್ರೇಯೋ-ಮಾರ್ಗವನ್ನು ಯುಕ್ತಿಯಿಂದ ಸಾಧಿಸಲಾಗುವುದಿಲ್ಲ. ಧರ್ಮಾಧರ್ಮಗಳು ವೇದಾದಿಶಾಸ್ತ್ರಗಳಿಂದಲೇ ಸಿದ್ಧಿಸುವುವು; ತರ್ಕವು ಕಾಮಚಾರಿಯು. ಅದರಿಂದ ಮನಬಂದ ಯಾವನಿರ್ಣಯವನ್ನಾದರೂ ಸಾಧಿಸಬಹುದು. ಶಾಸ್ತ್ರವಿಧಿಯನ್ನು ಬಿಟ್ಟು ಸ್ವೇಚ್ಛಾಪ್ರವೃತ್ತಿಯುಳ್ಳವನು ಪುರುಷಾರ್ಥದ ಉಪಾಯವನ್ನು ಎಂದಿಗೂ ತಿಳಿಯನು; ಐಹಿಕಸುಖವನ್ನಾಗಲಿ ಉತ್ತಮ ಗತಿಯನ್ನಾಗಲಿ ಹೊಂದುವುದಿಲ್ಲ. (೨೩) ಆದುದರಿಂದ ಕಾರ್ಯಾಕಾರ್ಯಗಳನ್ನು (ಯಾವುದು ಕಾರ್ಯ, ಯಾವುದು ಅಕಾರ್ಯ ಎಂಬುದನ್ನು) ನಿರ್ಣಯಿಸಿಕೊಳ್ಳಲು ನಿನಗೆ (ವಿವೇಕಿಗಳಿಗೆ) ಶಾಸ್ತ್ರವೇ ಪ್ರಮಾಣವಾಗಿರಲಿ. ಶಾಸ್ತ್ರವನ್ನು ಅತಿಕ್ರಮಿಸುವುದು ಮಹಾದೋಷವು. ಶಾಸ್ತ್ರವಿಧಿಯನ್ನು ತಿಳಿದು ಉಕ್ತಕರ್ಮಗಳಲ್ಲಿ ತೊಡಗು; ಅದೇ ಅತ್ಯಂತಯೋಗ್ಯವಾದುದು. (೨೪)

ಹದಿನಾರನೆಯ ಅಧ್ಯಾಯವು ಮುಗಿದುದು.

ಅಧ್ಯಾಯ ೧೭.

[ಎಲ್ಲಕಾರ್ಯಗಳು ಸತ್ವಾದಿಗುಣಪರಿಣಾಮಗಳೆಂದು ಸಾಮಾನ್ಯವಾಗಿ ಸಂಗ್ರಹಿಸಿ* ಹದಿನಾಲ್ಕನೇ ಅಧ್ಯಾಯದಲ್ಲಿ ಹೇಳಲ್ಪಟ್ಟಿತು. ಈ ಅಧ್ಯಾಯದಿಂದ ಶ್ರೀಕೃಷ್ಣನು ಸತ್ವಾದಿಗುಣಕೃತಶ್ರದ್ಧೆ, ಯಜ್ಞ, ದಾನ, ತಪಸ್ಸು ಮೊದಲಾದವುಗಳ ಪ್ರಭೇದಗಳನ್ನೂ, ಸಾತ್ವಿಕಾದಿ ಜೀವಸ್ವರೂಪ ವಿವೇಕವನ್ನೂ ವಿಸ್ತಾರವಾಗಿ ನಿರೂಪಿಸಿ, ಉಪದೇಶಿಸುತ್ತಾನೆ.]

---

*೧೪ನೇ ಅಧ್ಯಾಯದಿಂದ ೧೦ ಮತ್ತು ೧೯ನೇ ಶ್ಲೋಕ ಭಾಗಗಳನ್ನು ಇಲ್ಲಿ ನೋಡಿಕೊಳ್ಳಬಹುದು.

ಹಿಂದಿನ ಅಧ್ಯಾಯಾಂತ್ಯದಲ್ಲಿ ಶಾಸ್ತ್ರವಿಧಾನವನ್ನು ತಿಳಿದು ಕರ್ಮಗಳಲ್ಲಿ ತೊಡಗಬೇಕೆಂದು ಉಪದೇಶಿಸಿದ ಸಂದರ್ಭದಿಂದ ದೊರೆತ ಅವಕಾಶವುಳ್ಳವನಾಗಿ ಅರ್ಜುನನು ಪ್ರಶ್ನಿಸುತ್ತಾನೆ:—

ಅರ್ಜುನ—ಶಾಸ್ತ್ರವಿಧಿಯನ್ನು ಬಿಟ್ಟು (ತಿಳಿಯದೇ ಅಥವಾ ಅನುಸರಿಸದೇ) ಕೇವಲ ಆಸ್ತಿಕ್ಯಬುದ್ಧಿಯಿಂದ (ಶ್ರದ್ಧೆಯಿಂದ) ಕರ್ಮಗಳನ್ನಾಚರಿಸುವವರ ನಿಷ್ಠೆಯು ಎಂತಹದು? ಹೇ ಕೃಷ್ಣ! ಸಾತ್ವಿಕವೋ ರಾಜಸವೋ ಅಥವಾ ತಾಮಸವೋ? (೧)

ಶ್ರೀಕೃಷ್ಣ—ಹೇ ಪಾರ್ಥ! ಈ ಹಿಂದೆ ಯಜ್ಞಕರ್ತನಲ್ಲಿ ಅವಶ್ಯಕವಾಗಿರಬೇಕಾದ ಯಜ್ಞಾಂಗಭೂತವಾದ ಶ್ರದ್ಧಾವಿಷಯವನ್ನು ನಿರೂಪಿಸಿ, ಶ್ರದ್ಧೆಯಿಲ್ಲದವನಿಗೆ ಉಂಟಾಗುವ ಅನರ್ಥವನ್ನೂ *ಹೇಳಿರುವೆನಷ್ಟೆ. ಈಗ, ಶ್ರದ್ಧೆಯನ್ನು ವಿಭಾಗಮಾಡಿ, ಅದರ ಸಾತ್ವಿಕಾದಿಪ್ರಕಾರಗಳನ್ನು ಹೇಳುವೆನು, ಕೇಳು. ಶ್ರದ್ಧೆಯು, ಗುಣಕೃತವೆಂದೂ, ಸ್ವರೂಪಾತ್ಮಕವೆಂದೂ ಎರಡು ವಿಧವು. ಜನರು, ಸಾಮಾನ್ಯವಾಗಿ, ಸ್ವರೂಪಶ್ರದ್ಧೆಗೆ ಅನುಗುಣವಾದ ಗುಣಕೃತಶ್ರದ್ಧೆಯುಳ್ಳವರಾಗುವರು. ಆದುದರಿಂದ ಗುಣಕೃತ ಸಾತ್ವಿಕಾದಿಶ್ರದ್ಧೆಗಳ ನಿರೂಪಣೆಯು, ಅವುಗಳಿಗೆ ಆಶ್ರಯರಾದ ಜೀವರ ಸ್ವರೂಪನಿರ್ಣಾಯಕವೂ ಆಗುವುದು. ಮನೋವೃತ್ತಿರೂಪವಾದುದು ಗುಣಕೃತಶ್ರದ್ಧೆಯು. ಗುಣಕೃತಸಾತ್ವಿಕಶ್ರದ್ಧೆಯಿಂದ ಆಸ್ತಿಕ್ಯನಿಷ್ಠೆಯುಂಟಾಗುವುದಿಲ್ಲ. ಅದು ಸ್ವಭಾವದಿಂದಲೇ (ಜೀವಸ್ವಭಾವ—ಸ್ವರೂಪದಿಂದಲೇ) ಹುಟ್ಟುವುದು. ಸ್ವರೂಪಶ್ರದ್ಧೆಯು ಸಾತ್ವಿಕ, ರಾಜಸ, ತಾಮಸವೆಂದು ಮೂರು ವಿಧವು. (೨) ಎಲ್ಲ ಪ್ರಾಣಿಗಳ ಶ್ರದ್ಧೆಯು ಜೀವಸ್ವರೂಪಾನುಗುಣವಾಗಿರುವುದು. ಈ ಜೀವನು ಶ್ರದ್ಧಾಮಯನು; ಶ್ರದ್ಧೆಯು ಅವನ ಸ್ವರೂಪವು. ಆದುದರಿಂದ ಯಾರು ಯಾವ ಶ್ರದ್ಧೆಯುಳ್ಳವನೋ ಅವನು ಅದೇ ಸ್ವರೂಪದವನೆಂದು ತಿಳಿ. ಸಾತ್ವಿಕ ಶ್ರದ್ಧೆಯುಳ್ಳವನು ಸಾತ್ವಿಕನು;

---

*೪ನೇ ಅಧ್ಯಾಯದ ೩೯-೪೦ನೇ ಶ್ಲೋಕ ಭಾಗಗಳನ್ನು ಇಲ್ಲಿ ಓದಿಕೊಳ್ಳಬಹುದು.

ರಾಜಸಶ್ರದ್ಧೆಯುಳ್ಳವನು ರಾಜಸನು; ಹಾಗೆಯೇ ತಾಮಸಶ್ರದ್ಧೆಯುಳ್ಳವನು ತಾಮಸಿಯೇ. (೩)

ಅರ್ಜುನ—ಸಾತ್ವಿಕಾದಿಶ್ರದ್ಧೆಯುಳ್ಳವರು ಯಾವಪ್ರಕಾರದ ಕರ್ಮಗಳನ್ನು ಮಾಡುವರು? ಕರ್ಮಭೇದದಿಂದ ವಿವಿಧ ಶ್ರದ್ಧೆಗಳನ್ನು ತಿಳಿಯಲು ಸಾಧ್ಯವೇ?

ಶ್ರೀಕೃಷ್ಣ—ಶಾಸ್ತ್ರವಿಧಾನವನ್ನು ತಿಳಿಯದಿದ್ದರೂ (ಸಾತ್ವಿಕ) ಶ್ರದ್ಧೆಯುಳ್ಳವರು ದೇವತೆಗಳನ್ನು ಪೂಜಿಸುವರು; ಅವರ ಆರಾಧನರೂಪಕರ್ಮಗಳಲ್ಲಿ ಆಸಕ್ತರಾಗುವರು. ರಾಜಸಶ್ರದ್ಧೆಯುಳ್ಳವರು ಯಕ್ಷರಾಕ್ಷಸರ ಪೂಜೆಯಲ್ಲಿಯೂ, ತಾಮಸಶ್ರದ್ಧಾವಂತರು ಭೂತ, ಪ್ರೇತಾದಿಗಳ ಅರ್ಚನೆಯಲ್ಲಿಯೂ ತೊಡಗುವರು.

ಅರ್ಜುನ—ಯಜ್ಞಾದಿ ಕರ್ಮಗಳಲ್ಲಿ ತೊಡಗಿ, ವೇದೋಕ್ತಮಂತ್ರಗಳನ್ನೇ ಉಚ್ಚರಿಸಿ, ಇಂದ್ರಾದಿದೇವತೆಗಳಿಗೆ ಹವಿಸ್ಸನ್ನರ್ಪಿಸುವವರೆಲ್ಲರೂ ಸಾತ್ವಿಕಶ್ರದ್ಧೆಯುಳ್ಳವರೆಂದು ತಿಳಿಯಬಹುದೇ? ರಾಜಸರೇ ಮೊದಲಾದವರೂ ಈ ಕರ್ಮಗಳನ್ನು ಮಾಡುವರಾದರೆ, ಅವರು ದೇವತೆಗಳನ್ನು ಪೂಜಿಸುವುದಿಲ್ಲವೆಂಬುದು ಹೇಗೆ ಕೂಡುತ್ತದೆ?

ಶ್ರೀಕೃಷ್ಣ—ಕರ್ಮಗಳ ಬಾಹ್ಯಸ್ವರೂಪದಿಂದಲೇ ಕರ್ಮಕರ್ತನ (ಸಾತ್ವಿಕಾದಿ) ಶ್ರದ್ಧೆಯನ್ನು ನಿರ್ಣಯಿಸಲು ಬರುವುದಿಲ್ಲ. ಸಾತ್ವಿಕಾದಿಗುಣಕೃತಶ್ರದ್ಧೆಯು ಆಯಾಸ್ವರೂಪ ಶ್ರದ್ಧೆಯುಳ್ಳವರನ್ನೇ ಸಾಮಾನ್ಯವಾಗಿ ಆಶ್ರಯಿಸುವುದಾದರೂ, ಪ್ರಬಲಕಾರಣಗಳಿಂದ ಕೆಲವು ವೇಳೆ ಸ್ವರೂಪಶ್ರದ್ಧೆಗೆ ಭಿನ್ನವಾದ ಪ್ರಾಕೃತಶ್ರದ್ಧೆಯೂ ಉಂಟಾಗಬಹುದು. ಆಗ ರಾಜಸ, ತಾಮಸ, ಸ್ವಭಾವದವರೂ ಸಾತ್ವಿಕಕರ್ಮಗಳನ್ನು ಮಾಡಬಹುದು. ಆದರೆ ಆ ಕರ್ಮಗಳು ಕದಾಚಿತ್ ಸಂಭವಿಸುವುವು ಮತ್ತು ವಿಷ್ಣುಭಕ್ತಿ, ವಿಷ್ಣ್ವರ್ಪಣಬುದ್ಧಿಗಳಿಂದ ರಹಿತವಾಗಿರುವುವು. ಅಂತಹ ಯಜ್ಞಾದಿಕರ್ಮಗಳಲ್ಲಿ ಅರ್ಪಿಸಲ್ಪಡುವ ಹವಿಸ್ಸು, ಯಕ್ಷ ರಾಕ್ಷಸಾದಿಗಳಿಗೇ ಮುಟ್ಟುವುದು. ಬ್ರಹ್ಮ ಇಂದ್ರಾದಿ ನಾಮಗಳನ್ನುಚ್ಚರಿಸಿ ಹೋಮಮಾಡಲ್ಪಡುವ ಹವಿರ್ಭಾಗಗಳು

ಅನ್ಯರು ಹೇಗೆ ಸ್ವೀಕರಿಸುವರೆಂದು ಶಂಕಿಸಬೇಡ. ಬ್ರಹ್ಮ, ಇಂದ್ರಾದಿನಾಮಗಳುಳ್ಳ ಯಕ್ಷ, ದೈತ್ಯಾದಿಗಳಿರುವರು ; ಅವರು ಸ್ವೀಕರಿಸುವರು. ಬಾಹ್ಯ ದೃಷ್ಟಿಯಿಂದ ಸಾತ್ವಿಕವೆಂದು ತೋರುವ ಈ ರಾಜಸಾದಿಗಳ ಯಜ್ಞಾದಿಗಳಿಂದ ಅವರಿಗೆ ದೊರೆಯುವ ಫಲವನ್ನೂ ಹೇಳುವೆನು ಕೇಳು. ರಾಜಸರಿಗೆ ಸ್ವರ್ಗ ಪ್ರತಿನಿಧಿಯಾಗಿ ಸಾಂಕಲ್ಪಿಕಸ್ವರ್ಗವೂ, ತಾಮಸರಿಗೆ ರುದ್ರಪರಿವಾರವಾದ ಭೂತಾದಿತ್ವವೂ (ಭೂತಗಣದಲ್ಲಿ ಸ್ಥಾನವೂ) ದೊರೆಯುವುವು. ನಿಷ್ಣುಭಕ್ತ್ಯಾದಿಗಳುಳ್ಳ ಸಾತ್ವಿಕರಿಗಾದರೋ ಮೋಕ್ಷವೇ ದೊರಕುವುದು (೪) ತಾಮಸರಿಗೆ ಭೂತಾದಿತ್ವಮಾತ್ರವೇ ಫಲವೆಂದು ತಿಳಿಯಬೇಡ ; ಅಂತ್ಯಕ್ಕೆ ನಿತ್ಯನರಕವನ್ನೂ ಹೊಂದುವರು. ಈ ಜನರು, ದುಶ್ಶಾಸ್ತ್ರಗಳನ್ನು ನಂಬಿ, ಅವುಗಳಲ್ಲಿ ವಿಧಿಸಲ್ಪಡುವ, ಅತಿ ಕಷ್ಟರೂಪವಾದ (ಘೋರ) ಕರ್ಮಗಳನ್ನು ದಂಭಾಹಂಕಾರಗಳಿಂದ, ಕಾಮರಾಗರೂಪವಾದ ಇಚ್ಛಾಸಕ್ತಿಗಳೆಂಬ ದುರಾಗ್ರಹಯುಕ್ತರಾಗಿ, ಆಚರಿಸುತ್ತಾರೆ; ಅದೇ ಅವರ ತಪಸ್ಸು. (೫) ತಮ್ಮ ದೇಹೇಂದ್ರಿಯುಗಳಲ್ಲಿರುವ ಲಕ್ಷ್ಮೀದೇವಿಯೇ ಮೊದಲಾದ ತತ್ವಾಭಿಮಾನಿ-ದೇವತಾಸಮೂಹವನ್ನೂ, ಸರ್ವನಿಯಾಮಕನಾಗಿ ಅಂತಃಸ್ಥಿತನಾದ ನನ್ನನ್ನೂ ದುರ್ಲಕ್ಷಿಸುವರು; ಗುಣಹೀನರನ್ನಾಗಿ ಭಾವಿಸಿ, ಸರ್ವಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಆರೋಪಿಸಿಕೊಳ್ಳುವರು. ಈ ಪ್ರಕಾರದ ಅಸುರ-ಯೋಗ್ಯವಾದ ನಿಶ್ಚಯವುಳ್ಳವರೇ ದೈತ್ಯರು, ರಾಕ್ಷಸರು, ಪಿಶಾಚಾದಿ ತಮೋಯೋಗ್ಯ ಜೀವರೆಂದು ತಿಳಿ. (೬)

ಅರ್ಜುನ—ಸಾತ್ವಿಕಾದಿ ಶ್ರದ್ಧಾಭೇದದಿಂದಲೂ, ಈ ಜನರ ಸದ-ಸತ್ಕರ್ಮಗಳ ವಿವೇಚನೆಯಿಂದಲೂ, ಅವರ ಸ್ವರೂಪವನ್ನು ವಿವೇಕಿಸಿ ತಿಳಿಯಬೇಕೆಂಬುದು ಯುಕ್ತವಾಗಬಹುದು. ಈ ವಿಧವಾದ ವಿವೇಕವನ್ನು ಪಡೆಯಲು ಅನ್ಯಸಾಧನಗಳಿರುವುವೋ ಹೇಗೆ?

ಶ್ರೀಕೃಷ್ಣ—ಇರುವುವು, ಪಾರ್ಥ! ಸ್ವರೂಪನಿಶ್ಚಾಯಕಲಕ್ಷಣಗಳನ್ನು ಈವರೆಗೆ ಹೇಳಿದೆನು. ಅವರ ಆಹಾರಾದಿಭೇದದಿಂದಲೂ ಅವರ ಸಾತ್ವಿಕಾದಿ ಸ್ವಭಾವಗಳನ್ನು ವಿವೇಕಿಸಿ ತಿಳಿಯಬಹುದು. ಸಾತ್ವಿಕ, ರಾಜಸ, ತಾಮಸಗಳೆಂಬ ತ್ರಿವಿಧ ಜನಸಮುದಾಯಕ್ಕೆ ಪ್ರಿಯವಾದ ಆಹಾರ, ಯಜ್ಞ,

ತಪಸ್ಸು ಮತ್ತು ದಾನಗಳುಸಹ ಪ್ರತ್ಯೇಕವಾಗಿ ತ್ರಿವಿಧವಾಗಿರುವುವು. ಇವುಗಳನ್ನು ವಿವರವಾಗಿ ಹೇಳುವೆನು ಕೇಳು. (೭) ಜೀವಿತಕಾಲ (ಆಯುಷ್ಯ) (ಸಾತ್ವಿಕವಸ್ತು ಸೇವನೆಯಿಂದ ಚಿತ್ತಶುದ್ಧಿ ದ್ವಾರಾ ದೊರೆಯುವ) ಸಾಧುತ್ವ ಶಕ್ತಿ, ಆರೋಗ್ಯ,(ಒಂದಾವರ್ತಿ ಭೋಗಿಸಿದರೂ ಬಹುಕಾಲನಿಲ್ಲುವ) ಸುಖ, (ಭೋಗಕಾಲದ ಸುಖ) ಪ್ರೀತಿ, ಇವುಗಳನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸುವ, ರಸಯುಕ್ತವಾದ, ಸ್ನೇಹಯುಕ್ತವಾದ, (ಬಹುಕಾಲ ಗುಣಕೊಡುವ ತುಪ್ಪ ಮೊದಲಾದ) ಸ್ಥಿರವೂ, (ಅನುಭವಿಸಿದಮೇಲೂ ಮತ್ತೆ ಬೇಕೆನಿಸುವ) ಮನೋಹರವೂ ಆದ ಆಹಾರಪದಾರ್ಥಗಳು ಸಾತ್ವಿಕರಿಗೆ ಪ್ರಿಯವಾಗಿರುವುವು. ಆಯುರಾರೋಗ್ಯಗಳನ್ನು ವೃದ್ಧಿಗೊಳಿಸದ ವಸ್ತುಗಳು ರಸಭರಿತವಾದರೂ ರಾಜಸವೆಂದು ತಿಳಿಯಬೇಕು. (೮) ಅತಿಯಾದ ಕಟು (ಮೆಣಸು ಮೊದಲಾದ ಖಾರಪದಾರ್ಥಗಳು) ಹುಳಿ, ಉಪ್ಪು, ಬಿಸಿ, ತೀಕ್ಷ್ಣ (ಸಾಸಿವೆ ಮೊದಲಾದವು), ನೀರಸಗಳೂ, ವಿಶೇಷತಃ ಸಂತಾಪವನ್ನುಂಟುಮಾಡುವುವೂ, ದುಃಖ, ದುರ್ಮನಸ್ಸು (ಶೋಕ), ರೋಗಗಳಿಗೆ ಕಾರಣಗಳೂ ಆದ ಆಹಾರವಸ್ತುಗಳು ರಾಜಸವೆನಿಸುವುವು ಮತ್ತು ರಾಜಸಜೀವರಿಗೆ ಇಷ್ಟವಾಗಿರುವುವು. (ಹುಳಿ, ಖಾರ, ಉಪ್ಪು ಮೊದಲಾದವುಗಳು ಅತಿಯಾಗಿರದೇ ದುಃಖ ಶೋಕಾದಿಗಳಿಗೆ ಅವಕಾಶವಾಗದಂತಿದ್ದರೆ ಸಾತ್ವಿಕಗಳೆಂದೇ ತಿಳಿಯಬೇಕು.) (೯) ಯಾತಯಾಮ (ಪಕ್ವವಾದಮೇಲೆ ಒಂದು ಯಾಮಕಾಲ ಮೀರಿದುದು), ಗತರಸ(ಮೊದಲು ರುಚಿಯಾಗಿದ್ದು ನಂತರ ಬೇರೆಯಾಗಿತೋರುವುದು), ಪೂತಿ (ದುರ್ಗಂಧವುಳ್ಳದ್ದು), ಪರ್ಯುಷಿತ (ತಂಗಳು—ಎಂದರೆ ಹಿಂದಿನ ದಿನ ಪಕ್ವವಾದುದು) ಉಚ್ಛಿಷ್ಟ (ಎಂಜಲು), ಅಮೇಧ್ಯ (ಅಪವಿತ್ರವಾದುದು), ಈ ವಿಧವಾದ ಆಹಾರಗಳು ತಾಮಸರಿಗೆ ಭೋಜನಪ್ರಿಯಗಳಾಗಿರುವುವು.* (೧೦)

***ಸೂಚನೆ:**— ಒಬ್ಬನಿಗೆ ರುಚಿಕರವಾದುದು ಮತ್ತೊಬ್ಬನಿಗೆ ರುಚಿಯೆನಿಸದಿರಬಹುದು. ಪದಾರ್ಥಗಳ ರುಚಿಕರತ್ವವು ಪುರುಷಭೇದದಿಂದ ವ್ಯವಸ್ಥಿತವಾಗತಕ್ಕದ್ದಾದರೂ ಶುದ್ಧಭಾಗವತಸ್ವಭಾವದವರ ದೃಷ್ಟಿಯಿಂದ ರುಚಿಕರತ್ವಾದಿಗಳನ್ನು ನಿಶ್ಚಯಿಸಿ ಗ್ರಹಿಸಬೇಕು. ಇತರನಿಶ್ಚಾಯಕಲಕ್ಷಣಗಳಿಂದ ಭಗವದ್ಭಕ್ತರೆಂದು—

ಯಜ್ಞ ಪ್ರಭೇದಗಳನ್ನು ಹೇಳುವೆನು ಕೇಳು. ಅವಶ್ಯಕರ್ತವ್ಯವೆಂಬ ಜ್ಞಾನ-ಯುತವಾಗಿ ಫಲಾಪೇಕ್ಷೆಯಿಲ್ಲದೇ, ಚಿತ್ತಶಾಂತಿಯನ್ನು ದೊರಕಿಸಿಕೊಂಡು, ವಿಜ್ಞಾನಪೂರ್ವಕ ಅನುಷ್ಠಾನಮಾಡಲ್ಪಡುವ ಭಗವತ್ಪೂಜಾತ್ಮಕ-ಕರ್ಮವು ಯಜ್ಞವೆನಿಸುವುದು. (೧೧) ಫಲಾಪೇಕ್ಷೆಯಿಂದಲೂ, ಮಹತ್ವ ಪ್ರದರ್ಶನಕ್ಕಾಗಿಯೂ, ಆಚರಿಸಲ್ಪಡುವ ಯಜ್ಞವನ್ನು, ಹೇ ಭರತಶ್ರೇಷ್ಠ ! ರಾಜಸವೆಂದು ತಿಳಿ. (೧೨) ಶಾಸ್ತ್ರವಿಧಿಯನ್ನು ಅನುಸರಿಸದ, ಅನ್ನದಾನ ರಹಿತವಾದ, ಮಂತ್ರಗಳಿಲ್ಲದ, ದಕ್ಷಿಣೆಯಿಲ್ಲದ ಆಸ್ತಿಕ್ಯಬುದ್ಧಿಶೂನ್ಯವಾದ ಯಜ್ಞವನ್ನು ತಾಮಸವೆಂದು ಹೇಳುವರು. (೧೩) ಶಾರೀರಕ, ವಾಚನಿಕ ಮತ್ತು ಮಾನಸಿಕವೆಂದು ತಪಸ್ಸು ಮೂರು ಪ್ರಕಾರವು. ದೇವಬ್ರಾಹ್ಮಣರನ್ನೂ, ಗುರುಗಳನ್ನೂ ಯಥಾಯೋಗ್ಯವಾಗಿ ಪೂಜಿಸುವುದೂ, ಅಂತ-ರ್ಬಾಹ್ಯಶೌಚವೂ, ಬ್ರಹ್ಮಚರ್ಯವೂ (ಗುಹ್ಯೇಂದ್ರಿಯ ನಿಯಮನ — ಊರ್ಧ್ವರೇತಸ್ಕನಾಗಿರುವಿಕೆಯೂ), ಮನ, ವಚನಗಳಿಗೆ ಅನುವಾದ ಆಚರಣೆಯೂ(ಆರ್ಜವವೂ), ಅಹಿಂಸೆಯೂ, (ಪ್ರಾಣಿಹಿಂಸೆಮಾಡದಿರೋಣವು), ಶರೀರಸಂಬಂಧವಾದ (ಶಾರೀರಕ) ತಪಸ್ಸೆಂದು ಹೇಳಲ್ಪಡುತ್ತದೆ. (೧೪) ಪರರನ್ನು ಉದ್ವೇಗಗೊಳಿಸದಿರುವುದೂ, ಯಥಾರ್ಥವೂ, ಪ್ರಿಯವೂ (ಶ್ರವಣ ಸಮಯದಲ್ಲಿ ಮತ್ತೆ ಮತ್ತೆ ಕೇಳಬೇಕೆನಿಸುವುದೂ), ಹಿತವೂ (ಕಾಲಾಂತರದಲ್ಲಿ ಸುಖಕರವೂ) ಆದ ನುಡಿ ವೇದಾಧ್ಯಯನ (ಗುರೂಪ-ದೇಶದಂತೆ ವೇದಗಳನ್ನು ಆವೃತ್ತಿಮಾಡುತ್ತಾ ಅಭ್ಯಾಸಮಾವುದು.) ಇದೆಲ್ಲ ವಾಗ್ರೂಪವಾದ ತಪಸ್ಸು. (೧೫) ಮನಃಪ್ರಸಾದವೂ (ಮನಸ್ಸು ಪ್ರಯಾಸವಿಲ್ಲದೇ ವಿಷಯುಗಳಲ್ಲಿ ಪ್ರವರ್ತಿಸದಿರುವುದೂ), ಸೌಮ್ಯತ್ವವೂ (ಕ್ರೂರತನವಿಲ್ಲದಿರುವಿಕೆಯೂ), ಮೌನವೂ, (ಮನನ ಶೀಲತೆಯೂ), ಆತ್ಮವಿನಿಗ್ರಹವೂ (ಮನಸ್ಸನ್ನು ಬೇರ್ಪಡಿಸಿ, ಪರಮಾತ್ಮನಲ್ಲಿ ವಿಶೇಷವಾಗಿ

ಸಾತ್ವಿಕರೆಂದು ಸಿದ್ಧರಾದವರ ದೃಷ್ಟಿಯಿಂದ ವ್ಯವಸ್ಥೆಮಾಡಿಕೊಳ್ಳಬೇಕು. ದುರ್ಗಂಧವನ್ನೇ ಸುಗಂಧವೆಂದು ಭ್ರಮಿಸುವ ಜನರೂ ಇರುವರು. ಆದರೂ ದುರ್ಗಂಧತ್ವ, ದುಃಖಪ್ರದತ್ವ, ರೋಗಪ್ರದತ್ವಾದಿಗಳನ್ನು ಹೆಚ್ಚು ಸುಲಭವಾಗಿ ಗುರ್ತಿಸಬಹುದು.

ಸ್ಥಾಪಿಸುವುದು, ಎಂದರೆ ಇತರ ವ್ಯಾಪಾರಗಳಲ್ಲಿ ತೊಡಗಿದರೂ ಮನಸ್ಸಿನ ಒಂದು ಭಾಗವು ತಪ್ಪದೇ ಪರಮಾತ್ಮನಲ್ಲಿರುವಂತೆ ನೋಡಿಕೊಳ್ಳುವುದೂ) ಭಾವಸಂಶುದ್ಧಿಯೂ, (ಚಿತ್ತದಲ್ಲಿ ನಾನಾಕಾಮಗಳಿಲ್ಲದಿರುವುದೂ), ಇದೆಲ್ಲ ಮಾನಸಿಕ ತಪಸ್ಸೆನಿಸುವುದು. (೧೬) ಅಲ್ಲದೇ ಸಾತ್ವಿಕಾದಿ ಭೇದದಿಂದ ತಪಸ್ಸು ಪುನಃ ಮೂರು ಪ್ರಕಾರವಾಗಿರುವುದು. ಫಲಾಪೇಕ್ಷೆಯಿಲ್ಲದೇ ಈಶ್ವರಾರ್ಪಣ ಬುದ್ಧಿಯಿಂದ ಆಚರಿಸಲ್ಪಟ್ಟ ತಪಸ್ಸನ್ನು ಉತ್ಕೃಷ್ಟವಾದ ಸಾತ್ವಿಕಶ್ರದ್ಧೆಯಿಂದಾದುದೆಂದು ತಿಳಿ. (೧೭) ಸತ್ಕಾರ (ಆದರಬುದ್ಧಿ), ಮಾನ (ಮಾತುಗಳಿಂದ ಪ್ರಶಂಸಿಸುವುದು), ಪೂಜೆ (ನಮಸ್ಕಾರಾದಿಗಳಿಂದ ಗೌರವಿಸುವುದು), ಇವುಗಳನ್ನು ಇತರರಿಂದ ಹೊಂದುವುದಕ್ಕಾಗಿ, ದಂಭದಿಂದ (ತನ್ನ ಮಹತ್ವಪ್ರದರ್ಶನಕ್ಕಾಗಿ) ಮಾಡಲ್ಪಟ್ಟ ತಪಸ್ಸು ರಾಜಸವೆನಿಸುವುದು. ಇದು ಸ್ಥಿರವಲ್ಲ ಮತ್ತು ಅನರ್ಥಕರವೂ ಅಹುದು. (೧೮) ವಿವೇಕವಿಲ್ಲದ ದುರಾಗ್ರಹದಿಂದ, ತನ್ನನ್ನೂ ಹಿಂಸಿಸಿಕೊಂಡು, ಪರರ (ತನ್ನ ದ್ವೇಷಿಗಳೆಂಬುವರ ನಾಶಕ್ಕಾಗಿ ಆಚರಿಸಲ್ಪಡುವ ತಪಸ್ಸು ತಾಮಸವೆಂದು ಹೇಳಲ್ಪಡುವುದು. (೧೯) ಸಾತ್ವಿಕಾದಿಭೇದದಿಂದ ದಾನವೂ ಮೂರುಪ್ರಕಾರವು. ಕರ್ತವ್ಯವೆಂಬ ತಿಳುವಳಿಕೆಯಿಂದ ಸಹಿತವಾದ ಶ್ರದ್ಧೆಯಿಂದ ಪುಣ್ಯದೇಶದಲ್ಲಿ ಪುಣ್ಯಕಾಲದಲ್ಲಿ ಸತ್ಪಾತ್ರನಲ್ಲಿ ಪ್ರತ್ಯುಪಕಾರದ ಆಶೆಯಿಲ್ಲದೇ ಕೊಡಲ್ಪಡುವ ದಾನವು ಸಾತ್ವಿಕದಾನವೆಂದು ನಿಶ್ಚಿತವಾಗಿದೆ. (೨೦) ಪ್ರತ್ಯುಪಕಾರನಿರೀ-ಕ್ಷಣೆಯಿಂದಾಗಲಿ, ಪತ್ನಿ, ಪುತ್ರ, ಸ್ವರ್ಗಾದಿ ಅನಿತ್ಯಫಲಗಳ ಅಪೇಕ್ಷೆಯಿಂದಾಗಲಿ, ಅನ್ಯಾಯಾರ್ಜಿತವಾದ ಪದಾರ್ಥವನ್ನು ಕೊಡುವುದು ರಾಜಸದಾನವೆಂದು ಹೇಳಲ್ಪಡುತ್ತದೆ. (೨೧) ದೇಶ ಕಾಲಗಳನ್ನು ಗಮನಿಸದೇ (ಅಪವಿತ್ರವಾದ ದೇಶದಲ್ಲಿ ಅಶುದ್ಧಕಾಲಗಳಲ್ಲಿ, ಆ ದ ರ, ನಮಸ್ಕಾರಾದಿ ಸತ್ಕಾರವಿಲ್ಲದೇ ತಿರಸ್ಕಾರಯುಕ್ತವಾಗಿ, ಅಪಾತ್ರನಿಗೆ (ದುರಾತ್ಮನಿಗೆ) ಕೊಡಲ್ಪಡುವ ದಾನವು, ತಾಮಸವೆಂದು ಕರೆಯಲ್ಪಡುತ್ತದೆ. (೨೨) ಯಜ್ಞ ತಪಸ್ಸು ದಾನಗಳಲ್ಲಿರುವ ಸಾತ್ವಿಕಾದಿಭೇದದಿಂದ, ಅವುಗಳನ್ನಾಚರಿಸುವ ಜೀವರ ಸ್ವರೂಪಭೇದಗಳನ್ನೂ ಸಾಧಿಸಬಹುದು.

ಅರ್ಜುನ—ಸಾತ್ವಿಕಜೀವರು ರಾಜಸ ತಾಮಸ ಕರ್ಮಗಳನ್ನು ಆಚರಿ

ಸುವುದೇ ಇಲ್ಲವೇ? ಆಚರಿಸುವರಾದರೆ ಸಾತ್ವಿಕಾದಿಕರ್ಮಗಳು ಸ್ವರೂಪ ನಿರ್ಣಾಯಕವಾಗಲಾರದು ಅಲ್ಲವೇ?

ಶ್ರೀಕೃಷ್ಣ—ಯದ್ಯಪಿ, ಸಾತ್ವಿಕರು, ರಾಜಸ ತಾಮಸ ಕರ್ಮಗಳನ್ನೂ ತಾಮಸರು ಸಾತ್ವಿಕ ರಾಜಸಕರ್ಮಗಳನ್ನೂ ಮಾಡುವರು. ಆದರೆ ಕೆಲವು ವೇಳೆ ಮಾತ್ರ. ಮುಖ್ಯವಾಗಿ ಸ್ವಾಭಾವಿಕ (ಸ್ವರೂಪಸಹಜವಾದ) ಕರ್ಮಗಳನ್ನೇ ಮಾಡುವರೆಂಬುದೇ ಸಾಮಾನ್ಯನಿಯಮವು. ಸ್ವಾಭಾವಿಕ ಅಸ್ವಾಭಾವಿಕ ಕರ್ಮಗಳನ್ನು ವಿವೇಚಿಸಿ, ಪ್ರತ್ಯೇಕವಾಗಿ ತಿಳಿಯುವುದರಿಂದ ಅವು ಸ್ವರೂಪನಿರ್ಣಾಯಕಗಳಾಗುವುವು. ಕರ್ಮಗಳಲ್ಲಿ ಸಾತ್ವಿಕತ್ವಾದಿಗಳ ಆಧಿಕ್ಯವು (ಹೆಚ್ಚಾಗಿರುವುದು) ಅವುಗಳ ಸ್ವಾಭಾವಿಕತ್ವವು ದ್ಯೋತಕವು. ಅಧಿಕವಾಗಿದ್ದರೆ ಸ್ವಾಭಾವಿಕವೆಂದೂ, ಅಲ್ಪವಾಗಿದ್ದರೆ ಅಸ್ವಾಭಾವಿಕವೆಂದೂ ತಿಳಿಯಬೇಕು. ಸ್ವಾಭಾವಿಕಕರ್ಮಗಳಿಗೆ ಮಹತ್ಫಲವುಂಟು; ಅಲ್ಪವಾದ ಅಸ್ವಾಭಾವಿಕಕರ್ಮಗಳಿಗೆ ಫಲವೂ ಅಲ್ಪವೇ. ಸಾತ್ವಿಕನೊಬ್ಬನು ರಾಜಸ, ತಾಮಸಕರ್ಮವನ್ನು ಮಾಡಿದರೂ, ಅದು ಸ್ವಾಭಾವಿಕಕರ್ಮದಿಂದ ತಿರಸ್ಕೃತವಾಗುವುದು. ಇತರರ ವಿಷಯದಲ್ಲಿಯೂ ಸಹ ಹೀಗೆಯೇ ಯಥಾಯೋಗ್ಯವಾಗಿ ಅನ್ವಯಿಸಿಕೊಳ್ಳಬೇಕು.

ಅರ್ಜುನ—ಯಜ್ಞ, ತಪಸ್ಸು, ದಾನ ಮೊದಲಾದುವುಗಳ ಸಾತ್ವಿಕಾದಿ ಭೇದಗಳಿಗೆ ಫಲೇಚ್ಛೆಯಿಲ್ಲದಿರುವಿಕೆಯೇ ಮೊದಲಾದ ಹಲವು ಅಸಾಧಾರಣ ಧರ್ಮಗಳನ್ನು ಹೇಳಿರುವಿ. ಸಾತ್ವಿಕತ್ವಾದಿಗಳನ್ನು ನಿರ್ಣಯಿಸಿಕೊಳ್ಳಲು ಸಹಾಯಕವಾದ ಸಾಧಾರಣ ಧರ್ಮಗಳೂ ಇದ್ದಲ್ಲಿ ಅವುಗಳನ್ನೂ ತಿಳಿಯಲು ಅಪೇಕ್ಷಿಸುವೆನು.

ಶ್ರೀಕೃಷ್ಣ—ಇವೆ. ವಿವರವಾಗಿ ನಿರೂಪಿಸುವೆನು ಕೇಳು. ಸತ್ ಮತ್ತು ಅಸತ್ ಎಂದು ಕರ್ಮವು ಎರಡು ಪ್ರಕಾರವು. ಸಾತ್ವಿಕಕರ್ಮವು ಸತ್ ಎಂದೂ ಸತ್ಕರ್ಮವೆಂದೂ ವ್ಯವಹರಿಸಲ್ಪಡುವುದು. ಇತರವೆಲ್ಲವೂ ಅಸತ್ ಅಥವಾ ಅಸತ್ಕರ್ಮವೆನಿಸುವುದು. ರಾಜಸಕರ್ಮವು ಅಸತ್ಕರ್ಮದಲ್ಲಿ ಸೇರಿರುತ್ತದೆ; ತಾಮಸಕರ್ಮ ಮಾತ್ರವಲ್ಲ. ಏಕೆಂದರೆ, ರಾಜಸ-ಕರ್ಮವೂ ವಿಷ್ಣು ಶ್ರದ್ಧಾ ರಹಿತವಾದುದೇ. ವಿಷ್ಣ್ವರ್ಪಣಬುದ್ಧಿಯು ಯಜ್ಞ,

ತಪಸ್ಸು, ದಾನ ಮೊದಲಾದ ಎಲ್ಲ ಕರ್ಮಗಳಿಗೂ ಅವಶ್ಯಕವಾದುದು. ಅದಿಲ್ಲದ ಎಲ್ಲ ಕರ್ಮವೂ ಅಸತ್ಕರ್ಮವೆನಿಸುವುದು. ಈ ಅರ್ಪಣಬುದ್ಧಿ ಮತ್ತು ಅದರ ಅಭಾವವೇ ಸತ್ಕರ್ಮ, ಅಸತ್ಕರ್ಮಗಳ ಸ್ವರೂಪವನ್ನು ನಿಶ್ಚಯಿಸುವ ಸರ್ವಸಾಧಾರಣಧರ್ಮ (ಲಕ್ಷಣ) ವಾಗಿದೆ. ಪೂರ್ವಜರಾದ ಜ್ಞಾನಿಗಳ ಆಚಾರವೂ (ಪುರಾಕಲ್ಪರೂಪವಾದ ಅರ್ಥವಾದವೂ) ಇದನ್ನು ಸಾಧಿಸಿ ಕೊಡುತ್ತದೆ. ಇದರ ವಿಸ್ತಾರವನ್ನು ಕೇಳು. ಪರಬ್ರಹ್ಮನಿಗೆ **ಓಂ, ತತ್, ಸತ್** ಎಂಬುದಾಗಿ ಮೂರು ನಾಮಗಳುಂಟು. ಜಗದಂತರ್ಯಾಮಿಯಾಗಿದ್ದು ಜಗದಾಧಾರನಾಗಿರುವುದರಿಂದ ಪರಮಾತ್ಮನು 'ಓಂ' ಎಂದೂ ಪ್ರತ್ಯಕ್ಷಕ್ಕೆ ಗೋಚರಿಸದವನೂ, ವೇದೈಕವೇದ್ಯನೂ, ಜ್ಞಾನಾದಿಗುಣಗಳಿಂದ ವ್ಯಾಪ್ತನೂ ಆದುದರಿಂದ 'ತತ್' ಎಂದೂ; ದೋಷಸಂಪರ್ಕವಿಲ್ಲದ ಸರ್ವಶುಭಗುಣಪೂರ್ಣನಾದುದರಿಂದ 'ಸತ್' ಎಂದೂ ಕರೆಯಲ್ಪಡುವನು. ಸೃಷ್ಟ್ಯಾರಂಭದಲ್ಲಿ (ಪುರಾ) ಆ ಪರಬಹ್ಮನಿಂದಲೇ ಬ್ರಾಹ್ಮಣರೂ, ವೇದಗಳೂ ಸೃಷ್ಟಿಸಲ್ಪಟ್ಟರು. (ಅನಾದಿಯಾದ ವೇದಗಳಿಗೆ ಅಭಿವ್ಯಕ್ತಿಯೇ ಸೃಷ್ಟಿ ಎಂದು ತಿಳಿಯಬೇಕು. (೨೩) ಈ ಕಾರಣದಿಂದಲೇ ಬ್ರಹ್ಮಜ್ಞಾನಿಗಳ ಸತತವಾದ ವಿಧ್ಯುಕ್ತಯಜ್ಞ, ದಾನ, ಸಂಧ್ಯಾದಿ ಕ್ರಿಯೆಗಳು ಓಂಕಾರದ ಉಚ್ಚಾರ-ಪೂರ್ವಕವೇ ನಡೆಯಿಸಲ್ಪಡುತ್ತವೆ. ಅರ್ಥಜ್ಞಾನಪೂರ್ವಕವಾಗಿ ಓಂಕಾರವನ್ನು ಉಚ್ಚರಿಸಿ, ಸಕಲಕರ್ಮಗಳನ್ನಾಚರಿಸುವುದು ಕರ್ಮಗಳ ಸಾತ್ವಿಕತೆಗೆ ಕಾರಣವೆಂದು ಇದರಿಂದ ಸಿದ್ಧವಾಗುತ್ತದೆ. (೨೪) ಪರೋಕ್ಷಗಳಾದ (ಸ್ವರೂಪಸುಖಭಿನ್ನವಾದ) ಸ್ವರ್ಗಾದಿಸುಖಭೋಗಗಳನ್ನು ಅಪೇಕ್ಷಿಸದೆ ವೇದೈಕಗಮ್ಯವಾದ ಪರಬ್ರಹ್ಮನನ್ನೇ ಉದ್ದೇಶಿಸಿ, ಅಗ್ನಿಹೋತ್ರಾದಿ ಕ್ರಿಯೆಗಳನ್ನೂ, ತ್ರಿವಿಧತಪಸ್ಸುಗಳನ್ನೂ ದಾನದಿಂದ ವಿವಿಧರೂಪ ಸಕಲಕರ್ಮಗಳನ್ನೂ ಮೋಕ್ಷಾಕಾಂಕ್ಷಿಗಳು ಆಚರಿಸುತ್ತಾರೆ. ಇದರಿಂದ 'ತತ್' ಪದವಾಚ್ಯನಾದ ಬ್ರಹ್ಮನನ್ನೇ ಉದ್ದೇಶಿಸಿ, ಇತರ ಫಲವನ್ನು ಇಚ್ಛಿಸದೇ ಮಾಡುವುದೆಂಬುದೂಸಹ ಯಜ್ಞಾದಿಗಳ ಸಾತ್ವಿಕತೆಗೆ ಕಾರಣವೆಂದು ಸಿದ್ಧವಾಗುತ್ತದೆ. (೨೫) 'ಸತ್' ಶಬ್ದಾರ್ಥಭೂತನಾದ ಪರಮಾತ್ಮನು ಶುಭ-ಗುಣಭರಿತನೆಂಬ ಜ್ಞಾನಪೂರ್ವಕವಾಗಿ ಯಜ್ಞಾದಿಗಳನ್ನು ಮಾಡುವುದು

ಸಹ, ಸಾತ್ವಿಕತೆಗೆ ಕಾರಣವು. ಸತ್ ಶಬ್ದವು ಅಸ್ವತಂತ್ರವಸ್ತುಸಮುದಾಯಕ್ಕೆ ಜನನವನ್ನುಂಟುಮಾಡುವುದೆಂಬ ಅರ್ಥದಲ್ಲಿಯೂ, ಪ್ರಶಸ್ತ (ಶುಭ) ಕರ್ಮವೆಂಬ ಅರ್ಥದಲ್ಲಿಯೂ ಪ್ರಯೋಗಿಸಲ್ಪಡುತ್ತದೆ. (೨೬) ಹೇ ಪಾರ್ಥ! ಯಜ್ಞ, ದಾನ, ತಪಸ್ಸುಗಳಲ್ಲಿ ನಿಷ್ಠೆಯೂ (ಇವುಗಳಿಗೆ ಭಗವಂತನು ಅವಶ್ಯಕವಾಗಿ ಪ್ರಸನ್ನನಾಗುವನೆಂಬ ಸ್ಥಿರಬುದ್ಧಿಯೂ), ಭಗವಂತನ ಪ್ರೀತಿಯನ್ನು ಮಾತ್ರ ಉದ್ದೇಶಿಸಿ ಮಾಡಲ್ಪಡುವ ಕರ್ಮಾನುಷ್ಠಾನವೂ 'ಸತ್' ಎಂದೇ ಕರೆಯಲ್ಪಡುತ್ತದೆ. ಈ ಕಾರಣದಿಂದ ಭಗವನ್ನಿಷ್ಠೆಯಿಂದ ಆಚರಿಸುವುದೆಂಬ ಲಕ್ಷಣವೂ ಸಾತ್ವಿಕತ್ವ ನಿಶ್ಚಾಯಕವೆಂದು ತಿಳಿ. (೨೭) ಶಾಸ್ತ್ರ ವಿಧಾನವನ್ನನುಸರಿಸಿ ಆಚರಿಸಲ್ಪಟ್ಟರೂ, ಯಜ್ಞ ದಾನಾದಿ ಸಕಲ ಕರ್ಮಗಳು ಶ್ರದ್ಧಾರಹಿತವಾದರೆ ಅಸತ್ಕರ್ಮಗಳೇ ಆಗುವುವು. ಅಸತ್ಕರ್ಮದಿಂದ ಇಹಪರವಾದ ಯಾವಪುರುಷಾರ್ಥವೂ ದೊರೆಯುವುದಿಲ್ಲ. ಆದ್ದರಿಂದ ಶ್ರದ್ಧೆಯುಳ್ಳವನಾಗಿ, ವಿಧಿಜ್ಞಾನಪೂರ್ವಕ ವಿಧ್ಯುಕ್ತಕ್ರಮದಿಂದ ಯಜ್ಞಾದಿ ಕರ್ಮಗಳನ್ನು ಆಚರಿಸಬೇಕು. ಅವುಗಳೇ ಸತ್ಕರ್ಮಗಳು. ಅವುಗಳಿಂದಲೇ ಇಹಪರಗಳಲ್ಲಿ ಸುಖಪ್ರಾಪ್ತಿಯು. ಈ ಫಲಪ್ರಾಪ್ತಿಗಳನ್ನು ಕೋರದಿದ್ದರೂ ಅಪ್ರಯತ್ನವಾಗಿ ದೊರೆಯುವುವು. ಫಲಪ್ರಾಪ್ತಿವಿಷಯದಲ್ಲಿ ಶ್ರದ್ಧೆಯೇ ಪ್ರಯೋಜಕವು. ಅದು ಈ ಮೊದಲು ಹೇಳಿದಂತೆ ಮೂರು ವಿಧವಾದುದು.

ಅರ್ಜುನ—ಶ್ರದ್ಧೆಯೇ ಪ್ರಯೋಜಕವೆಂದು ಹೇಳಿದಮೇಲೆ, ಶಾಸ್ತ್ರ ವಿಧಾನವನ್ನನುಸರಿಸುವುದು ಅವಶ್ಯಕವಲ್ಲವೆಂದೇ ಹೇಳಿದಂತಾಗುವುದಿಲ್ಲವೇ? ಶಾಸ್ತ್ರವಿಧಿಯನ್ನು ಬಿಟ್ಟು ಶ್ರದ್ಧೆಯಿಂದ ಆಚರಿಸಲ್ಪಡುವ ಕರ್ಮವೂ ಸಾತ್ವಿಕವೆಂದು ತಿಳಿಯಲೇ?

ಶ್ರೀಕೃಷ್ಣ— ಶಾಸ್ತ್ರವಿಧಿಯನ್ನು ತಿಳಿದು, ವಿಧ್ಯುಕ್ತರೀತಿಯಿಂದಲೇ ಕರ್ಮಗಳನ್ನಾಚರಿಸುವುದು ಅವಶ್ಯಕವೆಂದು ಹೇಳುತ್ತಿರುವೆನಲ್ಲವೇ! ಶ್ರದ್ಧೆಯು ಫಲದಲ್ಲಿ ಮುಖ್ಯಕಾರಣವೆಂದು ಹೇಳಿದೆನಲ್ಲದೆ, ಶಾಸ್ತ್ರವಿಧಿಯನ್ನೂ, ಅನುಷ್ಠಾನಕ್ರಮವನ್ನೂ ಪರಿತ್ಯಾಗಮಾಡಿದರೆ ಸಹ ಫಲವುಂಟೆಂದು ಹೇಳಲಿಲ್ಲವೆಂಬುದನ್ನು ಗಮನಿಸು. ವಸ್ತುತಃ ಶ್ರದ್ಧಾವಿರಹಿತಕರ್ಮಕ್ಕೆ ಶಾಸ್ತ್ರ-

ನುಸಾಂತ್ವನೇ ಇಲ್ಲವೆಂದು ತಿಳಿ. ಶಾಸ್ತ್ರವು ಕರ್ಮಾಚರಣೆಗೆ ವಿಧಿಸುವ ವಿಧಾನಗಳಲ್ಲಿ ಶ್ರದ್ಧೆಯೇ ಮುಖ್ಯವಾದುದು ; ಅದಿಲ್ಲದ ಯಾವ ಕರ್ಮವೂ ವಿಧ್ಯುಕ್ತವೆನಿಸುವುದಿಲ್ಲ. (೨೮)

ಹದಿನೇಳನೆಯ ಅಧ್ಯಾಯವು ಮುಗಿದುದು

ಅಧ್ಯಾಯ ೧೮.

[ಪುರುಷಾರ್ಥ (ಮೋಕ್ಷ) ಹೇತುವಾದ ಜ್ಞಾನಸಾಧನವು ಪೂರ್ವಾ-ಧ್ಯಾಯಗಳಲ್ಲಿ, ಪ್ರಸಂಗಪ್ರಾಪ್ತವಾದಂತೆ, ವಿವರಿಸಲ್ಪಟ್ಟಿತು. ಅದೇ ಜ್ಞಾನ-ಸಾಧನವು ಮಂದಜನರ ಬುದ್ಧ್ಯಾರೂಢವಾಗುವಂತೆ, ಸಂಕ್ಷೇಪವಾಗಿ ಏಕತ್ರ ಸಂಗ್ರಹಿಸಲ್ಪಟ್ಟು, ಈ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ. ಗುಣತ್ರಯ-ಕಾರ್ಯವೂ, ಜ್ಞಾನಸಾಧನಗಳೆಂದು ಈ ಹಿಂದೆ ಹೇಳಲಾದ ಸನ್ಯಾಸ ಮತ್ತು ತ್ಯಾಗಗಳ ಸ್ವರೂಪವೂ, ವಿವರಿಸಲ್ಪಡುತ್ತವೆ.]

ಅರ್ಜುನ—ಹೇ ಮಹಾಬಾಹೋ! ಹೇ ಕೇಶಿನಿಷೂದನ! (ಅಸುರ ಮರ್ದನ), ಹೇ ಹೃಷೀಕೇಶ! (ಸರ್ವೇಂದ್ರಿಯನಿಯಾಮಕ), ಸನ್ಯಾಸ ಮತ್ತು ತ್ಯಾಗಗಳ ಸ್ವರೂಪವನ್ನು ಪ್ರತ್ಯೇಕವಾಗಿ ತಿಳಿಯಲಿಚ್ಛಿಸುತ್ತೇನೆ. ಅಮಿತಪರಾಕ್ರಮಿಯೂ, ಅಜ್ಞಾನನಾಶಕನೂ ಆದ ನೀನಲ್ಲದೇ ಅನ್ಯರು ಹೇಳಲರ್ಹರೇ! ಇಂದ್ರಿಯನಿಯಾಮಕನಲ್ಲದವನು ಬುದ್ಧ್ಯಾರೂಢಮಾಡಿ ಕೊಡಲು ಶಕ್ತನಾಗುವನೆ! ಸನ್ಯಾಸ ಮತ್ತು ತ್ಯಾಗಗಳು ಏಕಾರ್ಥಪರವೆಂದೇ ತೋರುತ್ತವೆ; ಅವುಗಳಲ್ಲಿ ಯಾವ ಭೇದವೂ ತೋರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಿರ್ಣಯವನ್ನು ತಿಳಿಸಿಕೊಡು. (೧)

ಶ್ರೀಕೃಷ್ಣ—ಅಹುದು, ಹಾಗೆ ತೋರುವುದುಂಟು. ಆದರೆ ವಿವಕ್ಷಾ-ಭೇದದಿಂದ ಅವುಗಳಲ್ಲಿ ಸ್ಪಷ್ಟವಾದ ಭೇದವಿರುವುದೆಂದು ಈ ಹಿಂದಿನ ನನ್ನ ನಿರೂಪಣೆಗಳಿಂದ ನೀನು ಗಮನಿಸಿರುವಿ. ಅದನ್ನೇ ಸ್ಪಷ್ಟಗೊಳಿಸುವೆನು,

ಕೇಳು. ಕರ್ಮವು ಕಾಮ್ಯವೆಂದೂ ಅಕಾಮ್ಯವೆಂದೂ ಎರಡು ವಿಧ. ವೈಕಲ್ಪಿಕಕಾಮ್ಯ ಮತ್ತು ನಿಯತಕಾಮ್ಯವೆಂದು ಕಾಮ್ಯಕರ್ಮವು ಎರಡು ಪ್ರಕಾರವಾದುದು. ಜ್ಯೋತಿಷ್ಟೋಮಾದಿಯಾಗಗಳಿಗೆ ಫಲವನ್ನು ಅಪೇಕ್ಷಿಸಿದರೆ, ಸ್ವರ್ಗಾದಿಫಲಗಳು ದೊರೆಯುತ್ತವೆ. ಹಾಗಲ್ಲದೇ ಜ್ಞಾನಾಂಗವಾದ ಚಿತ್ತಶುದ್ಧಿಗಾಗಿ ಮಾತ್ರ ಆಚರಿಸಿದರೆ, ಅದೇ ಯಾಗಗಳಿಂದ ಕೇವಲ ಜ್ಞಾನದ್ವಾರಾ ಮುಕ್ತಿಯೂ ಲಭಿಸುವುದು. ಕರ್ಮವನ್ನಾಚರಿಸುವವನ ಸಂಕಲ್ಪಭೇದದಿಂದ ಒಂದೇ ಕರ್ಮವು ಕಾಮ್ಯವೂ ಅಕಾಮ್ಯವೂ ಆಗುವುದಾದರೆ ಆ ಕರ್ಮವು ವೈಕಲ್ಪಿಕಕಾಮ್ಯವೆಂದು ಕರೆಯಲ್ಪಡುವುದು. ನಿರ್ದಿಷ್ಟವಾದ ಯಾವುದಾದರೊಂದು ಫಲವನ್ನು ಹೊಂದಲಿಕ್ಕಾಗಿಯೇ ಆಚರಿಸಲ್ಪಡುವ ಕರ್ಮಗಳೂ ಇವೆ. ಮಳೆ(ವೃಷ್ಟಿ)ಗಾಗಿ ಮಾಡುವ ಕಾರೀರ್ಯಾದಿಯಾಗಗಳು ಈ ಗುಂಪಿಗೆ ಸೇರಿದವು. ಇವು ನಿಯತಕಾಮ್ಯಗಳೆಂದು ಕರೆಯಲ್ಪಡುವುವು. ವೈಕಲ್ಪಿಕಕಾಮ್ಯಕರ್ಮಗಳಿಗೆ ಸ್ವರ್ಗಾದಿ-ಫಲಗಳನ್ನು ಇಚ್ಛಿಸದಿರುವುದೂ, ನಿಯತಕಾಮ್ಯಕರ್ಮಗಳ ಆಚರಣೆಯನ್ನೇ ಪರಿತ್ಯಾಗಮಾಡುವುದೂ ಸನ್ಯಾಸವೆಂದು ಜ್ಞಾನಿಗಳು ತಿಳಿಯುತ್ತಾರೆ. ಸಕಲ ಕರ್ಮಗಳಿಗೆ ಭಗವತ್ಪ್ರೀತಿಯನ್ನುಳಿದು ಅನ್ಯಫಲಗಳನ್ನೆಲ್ಲ ಪರಿತ್ಯಾಗ ಮಾಡುವುದು ತ್ಯಾಗವೆಂದು ವಿಚಕ್ಷಣರು ತಿಳಿಯುವರು. (೨)

ಅರ್ಜುನ—ಎಲ್ಲ ಕರ್ಮವೂ ದೋಷಯುಕ್ತವಾದುದರಿಂದ, ಕರ್ಮವನ್ನೇ ಪರಿತ್ಯಾಗಮಾಡಬೇಕೆಂದು ಕೆಲವು ಜ್ಞಾನಿಗಳು ಹೇಳುತ್ತಾರೆ. ಮತ್ತೆ ಕೆಲವು ಜ್ಞಾನಿಗಳು ಯಜ್ಞ, ದಾನ, ತಪಸ್ಸುಗಳನ್ನು ಯಾವಕಾರಣದಿಂದಲೂ ಬಿಡಕೂಡದೆಂದು ಹೇಳುತ್ತಾರೆ. ಪರಸ್ಪರ ವಿರುದ್ಧವಾಗಿ ತೋರುವ ಈ ಅಭಿಪ್ರಾಯಗಳ ತಾತ್ಪರ್ಯವೇನು?

ಶ್ರೀಕೃಷ್ಣ—ಹೇ ಪಾರ್ಥ! ಈ ಅಭಿಪ್ರಾಯಗಳಲ್ಲಿ ಪರಸ್ಪರ ವಿರೋಧವಿದ್ದಂತೆ ತೋರಿದರೂ, ಎರಡೂ ವಿದ್ವನ್ಮತಗಳೇ ಆಗಿವೆ. ಆದರೆ ಅವುಗಳ ಹೃದಯವನ್ನು ಎಚ್ಚರಿಕೆಯಿಂದ ಗ್ರಹಿಸಬೇಕು. ಕಾಮ್ಯಕರ್ಮವೆಲ್ಲವೂ, ಬಂಧಕವಾದುದರಿಂದ ದೋಷಯುಕ್ತವೆಂದೂ, ಪರಿತ್ಯಾಗಮಾಡಬೇಕೆಂದೂ

ಕರ್ಮವನ್ನೇ ಬಿಡಬೇಕೆಂದು ಹೇಳುವವರ ತಾತ್ಪರ್ಯವು. ಯಜ್ಞವೂ ತದಂಗಗಳಾದ ದಾನ, ತಪಸ್ಸುಗಳೂ ಮತ್ತು ಇತರ ನಿತ್ಯನೈಮಿತ್ತಿಕ ಕರ್ಮಗಳೂ ಅವಶ್ಯಕರ್ತವ್ಯಗಳೆಂದು ಹೇಳುವವರ ಅಭಿಪ್ರಾಯವಾದರೋ, ಅವುಗಳನ್ನು ಭಗವತ್ಪ್ರೀತ್ಯರ್ಥವಾಗಿ ಆಚರಿಸಬೇಕೆಂಬುದೇ ಆಗಿದೆ; ಭಗವ-ತ್ಪ್ರಸನ್ನತೆಯೊಂದಲ್ಲದೆ ಅನ್ಯವಾದ ಯಾವಫಲವನ್ನೂ ಇಚ್ಛಿಸಕೂಡ ದೆಂಬುದೇ ಅವರ ತಾತ್ಪರ್ಯವು. (೩)

ಅರ್ಜುನ—ಈ ಉಭಯವಿಧ ವಿದ್ವದಭಿಪ್ರಾಯಗಳಲ್ಲಿ ಅವಿರೋಧ ವನ್ನು ನಿಶ್ಚಯಮಾಡಿಕೊಳ್ಳುವ ಪ್ರಕಾರವನ್ನು ಇನ್ನೂ ವಿಸ್ತಾರವಾಗಿ ನಿರೂಪಿಸು, ದೇವ!

ಶ್ರೀಕೃಷ್ಣ—ಹೇ ಭರತರ್ಷಭ! ತ್ಯಾಗದ ಸ್ವರೂಪವನ್ನು ವಿವರಿಸಿದರೆ ಈ ಎರಡು ಮತಗಳಲ್ಲಿ ವಿರೋಧವಿಲ್ಲೆಂಬ ನಿರ್ಣಯದ ನಿಶ್ಚಯವನ್ನು ಹೊಂದುವಿ. ನಾನು ಹೇಳುವುದನ್ನು ಸಾವಧಾನದಿಂದ ಕೇಳು; ಕೇಳಿ ನಿಷ್ಠೆಯನ್ನು ಹೊಂದು. ತ್ಯಾಗವೆಂದರೆ ಕರ್ಮಫಲತ್ಯಾಗವು ಮತ್ತು ಕರ್ಮ-ಸಂಗತ್ಯಾಗವು. ತ್ಯಾಗವು ತ್ರಿವಿಧಭಾವನಾಯುಕ್ತವಾಗಿರಬೇಕು. ನನ್ನ ದೆಂಬ ಮಮತೆಯನ್ನು ಬಿಡುವುದು, ಭಗವಂತನೇ ಸರ್ವಕರ್ಮಕರ್ತನೆಂದು ತಿಳಿಯುವುದು ಮತ್ತು ಸ್ವತಂತ್ರಕರ್ತೃತ್ವವು ತನಗೆ ಲೇಶವಿಲ್ಲೆಂದು ತಿಳಿ ಯುವುದು (ಕರ್ತೃತ್ವಾಭಿಮಾನವನ್ನು ತೊರೆಯುವುದು), ಎಂಬ ಈ ಮೂರು ಪ್ರಕಾರದ ಬುದ್ಧಿಪೂರ್ವಕವಾದುದು ತ್ಯಾಗವು. ಆದುದರಿಂದ ಯಜ್ಞಾದಿಕರ್ಮಗಳನ್ನು, ಕರ್ತೃತ್ವಾಭಿಮಾನವೆಂಬ ಸಂಗವನ್ನೂ, ಫಲಾ ಪೇಕ್ಷೆಯನ್ನೂ ಬಿಟ್ಟು ಆಚರಿಸಬೇಕೆಂಬುದು ಕರ್ಮವನ್ನು ಬಿಡಬೇಕೆಂದು ಹೇಳುವ ಜ್ಞಾನಿಗಳ ಅಭಿಪ್ರಾಯವು; ಕರ್ಮಾಚರಣೆಯನ್ನೇ ತೊರೆಯ ಬೇಕೆಂದಲ್ಲ. ಹೇ ಪಾರ್ಥ! ಇದೇ ನನ್ನ ನಿಶ್ಚಯಾಭಿಪ್ರಾಯವೆಂದೂ ತಿಳಿ. (೪) ಯಜ್ಞ, ದಾನ, ತಪಸ್ಸುಗಳು ಅತ್ಯಂತಪವಿತ್ರವಾದವುಗಳು. ಅವುಗಳನ್ನೂ ವರ್ಣಾಶ್ರಮೋಚಿತಕರ್ಮಗಳನ್ನೂ, ಎಲ್ಲರೂ, ತ್ರಿವಿಧತ್ಯಾಗ-ಬುದ್ಧಿಯಿಂದ, ಆಚರಿಸಬೇಕು. ಮುಕ್ತಿಯಲ್ಲಿ ಆನಂದಾತಿಶಯಕ್ಕೆ ಕಾರಣ ವಾಗುವುದರಿಂದ, ಇವು ಜ್ಞಾನಿಗಳಿಗೂ ಅವಶ್ಯಕವು. (೫) ವರ್ಣಾಶ್ರ-

ನೋಚಿತಕರ್ಮತ್ಯಾಗವು (ಆಚರಣೆಯನ್ನೇ ಬಿಡುವುದು) ಸರ್ವಥಾ ಅಯುಕ್ತವು. ಸಂಗ, ಫಲಗಳತ್ಯಾಗಪೂರ್ವಕವಾಗಿ ಯಜ್ಞಾದಿವಿಹಿತಕರ್ಮಗಳನ್ನು ಆಚರಿಸಲೇಬೇಕು. ಇದೇ ಜ್ಞಾನಿಗಳ ಉತ್ತಮಾಭಿಪ್ರಾಯವೆಂದು ತಿಳಿ. (೬) ಕರ್ಮತ್ಯಾಗವನ್ನೇ ತ್ಯಾಗವೆಂದು ಮೋಹಿಸಿ, ನಿಯತಕರ್ಮಗಳನ್ನು ಪರಿತ್ಯಾಗಮಾಡುವುದು ಮಹಾದೋಷಕರವು. ಅಂತಹ ತ್ಯಾಗವು ತಾಮಸತ್ಯಾಗವೆಂದು ಕರೆಯಲ್ಪಡುವುದು. (೭) ಕರ್ಮಸಂಗ ಮತ್ತು ಫಲತ್ಯಾಗಗಳೇ ನಿಜವಾದ ತ್ಯಾಗವೆಂದು ತಿಳಿದೂ ಸಹ, ದುಃಖಕರವೆಂದೂ, ದೇಹಕ್ಲೇಶಕ್ಕೆ ಕಾರಣವೆಂದೂ ಭಾವಿಸಿ ಕರ್ಮವನ್ನು ಪರಿತ್ಯಾಗಮಾಡುವವರು ತ್ಯಾಗದ ಫಲವನ್ನು ಎಂದೂ ಹೊಂದಲಾರರು. ಈ ಪ್ರಕಾರದ ಕರ್ಮತ್ಯಾಗವು ರಾಜಸತ್ಯಾಗವು. (೮) ತ್ಯಾಗವೆಂದರೆ ಕರ್ಮವನ್ನೇ ಬಿಡುವುದೆಂಬ ಮಿಥ್ಯಾಜ್ಞಾನರಹಿತರಾಗಿ ಕ್ಲೇಶಕರವೆಂಬ ಭಯದಿಂದಲೂ ಕರ್ಮವನ್ನು ಬಿಡದೆ, ನಿಯತಕರ್ಮವು ಅವಶ್ಯಕರ್ತವ್ಯವೆಂದೂ, ಬಿಡುವುದರಿಂದ ಪ್ರತ್ಯವಾಯವು ಉಂಟೆಂದೂ ತಿಳಿದು, ಕರ್ಮದಲ್ಲಿ ಮಮತ್ವ ಮತ್ತು ಕರ್ತೃತ್ವಾಭಿಸಂಧಿಗಳನ್ನು, ಹಾಗೂ ಸ್ವರ್ಗಾದಿಫಲಾಪೇಕ್ಷೆಯನ್ನು ಬಿಟ್ಟು, ಕರ್ಮಾನುಷ್ಠಾನದಲ್ಲಿ ತೊಡಗುವುದು ಸಾತ್ವಿಕತ್ಯಾಗವು. (೯)

ಅರ್ಜುನ—ಸಾತ್ವಿಕತ್ಯಾಗವುಳ್ಳವನ ಮುಖ್ಯಲಕ್ಷಣಗಳಾವುವು?

ಶ್ರೀಕೃಷ್ಣ—ತಾತ್ಕಾಲಿಕಸುಖವನ್ನು ದೊರಕಿಸುವುದಿಲ್ಲವೆಂದಾಗಲಿ ಅಥವಾ ದೇಹಕ್ಲೇಶದಿಂದ ದುಃಖವನ್ನುಂಟುಮಾಡುವುದೆಂಬ ಕಾರಣದಿಂದಾಗಲಿ ನಿಯತಕರ್ಮವನ್ನು ದ್ವೇಷಿಸದಿರುವುದು; ಪೂರ್ವಾರ್ಜಿತ ಪುಣ್ಯಫಲವನ್ನು (ಐಹಿಕಸುಖಕ್ಕಾಗಿ) ಇಚ್ಛಿಸದಿರುವುದು; ಸತ್ವಗುಣದಿಂದ ಆವೃತನಾಗಿರುವುದು; ಭಗವತ್ತತ್ವಜ್ಞಾನವುಳ್ಳವನಾಗಿ, ಪರಾಪರತತ್ವ ವಿಷಯದಲ್ಲಿಯೂ ಧರ್ಮಾನುಷ್ಠಾನದಲ್ಲಿಯೂ ಸಂದೇಹರಹಿತನಾಗಿರುವುದು; ಎಂಬೀ ಮುಖ್ಯಲಕ್ಷಣಗಳನ್ನು ಭಗವಂತನಲ್ಲಿ ಸರ್ವಕರ್ಮಗಳನ್ನು ಸಮರ್ಪಣೆಮಾಡುವ ಸಾತ್ವಿಕತ್ಯಾಗಿಯಲ್ಲಿ ಕಾಣಬಹುದು. (೧೦)

ಅರ್ಜುನ—ಕರ್ತೃತ್ವಾಭಿಮಾನ ಮತ್ತು ಫಲಾಸಕ್ತಿಗಳ ತ್ಯಾಗವೇ ನಿಜವಾದ ತ್ಯಾಗಸ್ವರೂಪವೆಂದು ತಿಳಿದೆನು. ಆದರೆ, ಕರ್ಮವು ದೋಷ-

ಯುಕ್ತವಾದುದರಿಂದ ಬಿಡಬೇಕೆಂದು ಹೇಳುವ ಜ್ಞಾನಿಗಳ ತಾತ್ಪರ್ಯವು, ಕರ್ಮಗಳನ್ನು ಬಿಡುವುದಲ್ಲ, ಕಾಮ್ಯಕರ್ಮಗಳನ್ನು ಮಾತ್ರ ಬಿಡುವುದೆಂದು, ತಿಳಿಯುವಲ್ಲಿ ಯುಕ್ತಿಗಳಿರುವುವೇ ? ಅವು ಯಾವುವು ?

ಶ್ರೀಕೃಷ್ಣ—ಎಲ್ಲ ಕರ್ಮಗಳ ಆಚರಣೆಯನ್ನು ಬಿಡಬೇಕೆಂಬುದು ಯಾವ ಜ್ಞಾನಿಗಳ ತಾತ್ಪರ್ಯವೂ ಆಗಲಾರದು. ಏಕೆಂದರೆ ಅದು ಸರ್ವಥಾ ಯುಕ್ತಿಸಮ್ಮತವಾಗುವುದಿಲ್ಲ. ಸರ್ವಕರ್ಮಪರಿತ್ಯಾಗವಾಗಲಿ, ವಿಹಿತಕರ್ಮತ್ಯಾಗವಾಗಲಿ ತ್ಯಾಗಶಬ್ದದ ಅರ್ಥವಾಗಲಾರದು. ನೋಡು! ದೇಹಧಾರಿಯಾದ ಯಾವನೂ ಎಲ್ಲಕರ್ಮಗಳನ್ನು ಸುತರಾಂ ಬಿಡುವುದು ಸಾಧ್ಯವೇ ಇಲ್ಲ. ಕರ್ಮಮಾಡದೆ ಒಂದು ಕ್ಷಣವಾದರೂ ಯಾರೂ ಇರಲು ಶಕ್ಯವಿಲ್ಲ. ವಿಹಿತಕರ್ಮತ್ಯಾಗದಿಂದ ಪ್ರತ್ಯವಾಯುವೂ ಉಂಟು. ಆದುದರಿಂದ ಫಲಾಸಕ್ತಿಯಿಲ್ಲದವನೇ ತ್ಯಾಗಿಯು. ಕರ್ಮವು ತ್ಯಾಜ್ಯವೆಂದು ಹೇಳುವವರ ಅಭಿಪ್ರಾಯುವಾದರೂ ಇದೇ ಆಗಿರಬೇಕು. ಅಲ್ಲದಿದ್ದರೆ ಅವರು ಜ್ಞಾನಿಗಳೇ ಅಲ್ಲವೆಂದು ಪ್ರಾಪ್ತವಾಗುವುದು. (೧೧) ಆದುದರಿಂದ ನಿಜವಾದ ತ್ಯಾಗಿಯು ಸ್ತೋತ್ರಾರ್ಹನು; ಅದಲ್ಲದವನು (ಅತ್ಯಾಗಿಯು) ನಿಂದಾರ್ಹನು.

ಅರ್ಜುನ—ಹಾಗಾದರೆ ಈ ಉಭಯರಿಗೆ ದೊರೆಯುವ ಫಲದಲ್ಲಿ ವೈಷಮ್ಯ (ವ್ಯತ್ಯಾಸ) ವಿರಬೇಕಲ್ಲವೇ? ಅದನ್ನಷ್ಟು ನಿರೂಪಿಸು.

ಶ್ರೀಕೃಷ್ಣ—ನಿಶ್ಚಯವಾಗಿಯೂ ಇರುವುದು. ಕರ್ಮದ ಫಲವು ಸಾಮಾನ್ಯವಾಗಿ ಮೂರು ವಿಧವಾಗಿರುವುದು. ನರಕಾದಿಪ್ರಾಪ್ತಿರೂಪವಾದ **ಅನಿಷ್ಟ**ಫಲ; ಕಾಮ್ಯಕರ್ಮಗಳಿಂದ ಅಪೇಕ್ಷಿತವಾದ ಸ್ವರ್ಗಾದಿಗಳ ಪ್ರಾಪ್ತಿರೂಪದ **ಇಷ್ಟ**ಫಲ ಮತ್ತು ಇಷ್ಟಾನಿಷ್ಟಗಳ ಮೇಳನವುಳ್ಳ ಮಾನುಷ್ಯದೇಹ (ಲೋಕ) ಪ್ರಾಪ್ತಿರೂಪವಾದ **ಮಿಶ್ರ**ಫಲ; ಎಂಬುವವೇ ಆ ತ್ರಿವಿಧಫಲಗಳು. ಈ ಫಲಗಳು, ದೇಹವನ್ನು ಬಿಟ್ಟನಂತರ ಯಥಾಯೋಗ್ಯವಾಗಿ ಅತ್ಯಾಗಿಗಳಿಗೆ ದೊರೆಯುವುವು, ಸನ್ಯಾಸಿಗಳಿಗಲ್ಲ.

ಅರ್ಜುನ—ತ್ಯಾಗಿಗಳಿಗಲ್ಲವೆಂದು ಹೇಳದೇ ಸನ್ಯಾಸಿಗಳಿಗಲ್ಲವೆಂದು ಹೇಳುವುದರಲ್ಲಿ ತಾತ್ಪರ್ಯವೇನು ?

ಶ್ರೀಕೃಷ್ಣ—ತ್ಯಾಗಿಯು, ಪರಪ್ರಯೋಜನಕ್ಕಾಗಿ ಕಾರೀರ್ಯಾದಿನಿಯತ ಕಾಮ್ಯಕರ್ಮಗಳನ್ನು ಕೆಲವುವೇಳೆ ಆಚರಿಸುವುದುಂಟು. ಸನ್ಯಾಸಿಗಳು ಯಾರ ಉದ್ದೇಶವಾಗಿಯೂ ಫಲವನ್ನಪೇಕ್ಷಿಸಿ ಯಾವ ಕರ್ಮವನ್ನೂ ಮಾಡುವುದಿಲ್ಲ. ಸನ್ಯಾಸಿಗೆ ತ್ಯಾಗಿಗಳ ದೆಶೆಯಿಂದ ಈ ವಿಶೇಷವಿದೆ. ಸರ್ವಥಾ ಫಲೇಚ್ಛಾರಹಿತರಾದ್ದರಿಂದ ಸನ್ಯಾಸಿಗಳಲ್ಲಿ ತ್ಯಾಗಿತ್ವವೂ ಇದೆ.

ಅರ್ಜುನ—ಇಷ್ಟಾನಿಷ್ಟ ಮತ್ತು ಮಿಶ್ರಫಲಗಳು ಅತ್ಯಾಗಿಗಳಿಗೆ ದೊರೆಯುವುದಾದರೆ, ತ್ಯಾಗಿಗಳಿಗೆ ದೊರೆಯುವ ಫಲವಾವುದು?

ಶ್ರೀಕೃಷ್ಣ—ಜ್ಞಾನಭಕ್ತ್ಯಾದಿಗಳದ್ವಾರಾ ಭಗವದಪರೋಕ್ಷವೂ, ಮುಕ್ತಿಯಲ್ಲಿ ಆನಂದಾತಿಶಯವೂ ತ್ಯಾಗಿಗಳಿಗೆ ದೊರೆಯುವ ಮಹಾಫಲಗಳು. (೧೨)

ಅರ್ಜುನ—ವೈಕಲ್ಪಿಕಕಾಮ್ಯಕರ್ಮಗಳ ಫಲತ್ಯಾಗ, ನಿಯತಕಾಮ್ಯ-ಕರ್ಮಗಳ ಸ್ವರೂಪತ್ಯಾಗ (ಆಚರಿಸದಿರುವುದು), ಮತ್ತು ಪರೋಪಕಾರಾರ್ಥವಾಗಿಸಹ ನಿಯತಕಾಮ್ಯಕರ್ಮಗಳನ್ನು ಕೈಗೊಳ್ಳದಿರುವುದು, ಎಂಬಿವೇ ಸನ್ಯಾಸ ಲಕ್ಷಣಗಳೆಂದು ತಿಳಿಯಲೇ?

ಶ್ರೀಕೃಷ್ಣ—ಸನ್ಯಾಸಶಬ್ದಾರ್ಥವು ಅಷ್ಟುಮಾತ್ರವಲ್ಲ. ಕರ್ಮಾ-ಚರಣೆಯಲ್ಲಿ ಕರ್ತೃತ್ವಾಭಿಮಾನವನ್ನು ಬಿಡುವುದೂ ಅದರಲ್ಲಿ ಸೇರಿದೆ. ತ್ಯಾಗದ ಸ್ವರೂಪವು ಮೂರುಪ್ರಕಾರವಾದುದೆಂದು ಈ ಮೊದಲು ನಿರೂಪಿಸಿದೆನಲ್ಲವೇ? ಕರ್ಮಕಾರಣಗಳನ್ನು ವಿವರಿಸುವುದರಮೂಲಕ ಕರ್ತೃ-ತ್ವಾಭಿಮಾನತ್ಯಾಗವನ್ನು ವಿಶದಗೊಳಿಸುವೆನು. ಹೇ ಮಹಾಬಾಹೋ! ನೀನು ಪರಾಕ್ರಮಿಯೇ ಸರಿ. ಆದರೆ ನಿನ್ನ ಕರ್ತೃತ್ವಸ್ಥಿತಿಯನ್ನು ನನ್ನ ಉಪದೇಶದಿಂದ ಚೆನ್ನಾಗಿ ಅರಿತುಕೋ. ಹೇಳುವೆನು, ಕೇಳು. ಯಾವು-ದೊಂದು ಕರ್ಮಕ್ಕೆ (ಕರ್ಮದ ಘಟನೆಗೆ) ಐದು ಕಾರಣಗಳುಂಟು. ಹೀಗೆಂಬುದು ಸಾಂಖ್ಯಶಾಸ್ತ್ರದ ಸಿದ್ಧಾಂತವೂ ಆಗಿದೆ. ಕಪಿಲರೂಪದಿಂದ ಅವತರಿಸಿ ಸಾಂಖ್ಯಶಾಸ್ತ್ರವನ್ನು ರಚಿಸಿದವನೂ ನಾನೇ. (೧೩) ಅವುಗಳನ್ನು ವಿವರಿಸುವೆನು, ಕೇಳು. ದೇಹ, ಭೂಮಿ ಮೊದಲಾದ ಆಶ್ರಯಸ್ಥಾನ (ಅಧಿಷ್ಠಾನ), ಪರಾಧೀನಕರ್ತನಾದ ಜೀವ (ಕರ್ತಾ) ಇಂದ್ರಿಯಗಳು

ಮತ್ತು ಇತರ ಕರ್ಮಸಾಧನವಸ್ತುಗಳು (ಕರಣ), ಹಸ್ತಪಾದಾದಿಗಳ ನಾನಾಪ್ರಕಾರವಾದ ಕ್ರಿಯೆಗಳು ಮತ್ತು ಮನಸ್ಸಿನ ಧ್ಯಾನಾದಿಕ್ರಿಯೆಗಳು, ಎಂಬ ಪ್ರಯತ್ನ (ಚೇಷ್ಟಾ), ಮತ್ತು ಜೀವಯೋಗ್ಯತೆಯನ್ನೂ ಪೂರ್ವ ಕರ್ಮವನ್ನೂ ಅನುಲಕ್ಷಿಸಿ ಕರ್ಮಗಳನ್ನು ಮಾಡಿಸುವ ಸ್ವತಂತ್ರಕರ್ತನಾದ ವಿಷ್ಣು (ದೈವ); ಇವೇ ಆ ಐದು ಕಾರಣಗಳು. (೧೫) ಶರೀರ, ವಾಕ್, ಮತ್ತು ಮನಸ್ಸುಗಳಿಂದ ಸಂಭವಿಸಬಹುದಾದ ಯಾವುದೇ ಕರ್ಮವನ್ನು ಮನುಷ್ಯನು ಆರಂಭಿಸಲಿ—ಅದು ನ್ಯಾಯವಾದುದಾಗಲಿ, ಅನ್ಯಾಯ ವಾದುದಾಗಲಿ, ಎಂದರೆ ಸತ್ಕರ್ಮ ದುಷ್ಕರ್ಮಗಳೆಲ್ಲಕ್ಕೂ—ಇವೇ ಐದು ಕಾರಣಗಳು. (೧೬) ಹೀಗೆ ವಿಷ್ಣು ಮೊದಲಾದ ಐದು ಕಾರಣಗಳಿರು ತ್ತಿರಲು, ಪರಪ್ರೇರಣೆಯಿಲ್ಲದೇ ತಾನೇ ಸ್ವತಂತ್ರನಾಗಿ ಕರ್ಮಗಳನ್ನು ಮಾಡುವವನೆಂದು ತಿಳಿಯುವ ಮೂಢನು, ಶಾಸ್ತ್ರಶ್ರವಣಾದಿಗಳಿಂದ ಸಂಸ್ಕೃತವಾಗದ ಬುದ್ಧಿಯುಳ್ಳವನಾದುದರಿಂದ, ದುರ್ಬುದ್ಧಿಯೇ ಸರಿ. ಆತನು ಎಂದೂ ತತ್ವಜ್ಞಾನವನ್ನು ಪಡೆಯಲಾರನು. (೧೭) ಆದುದರಿಂದ, ಯಾರು ತನ್ನಿಂದ ಸಾಧಿಸಲ್ಪಟ್ಟಿತೆಂಬ ಅಹಂಭಾವ ವಿಲ್ಲದಿರುವನೋ (ತಾನೇ ಸ್ವತಂತ್ರಕರ್ತನೆಂಬ ಅಭಿಮಾನವನ್ನು ಬಿಟ್ಟವನೋ), ಮತ್ತು ಯಾರ ಬುದ್ಧಿಯು ಕರ್ಮಫಲದಲ್ಲಿ ಆಸಕ್ತ ವಲ್ಲವೋ, ಆತನು ಈ ಲೋಕಗಳನ್ನೇ ಸಂಹಾರಮಾಡಿದರೂ ದೋಷಿ ಯಾಗುವುದಿಲ್ಲ; ಫಲಭಾಗಿಯಾಗುವುದಿಲ್ಲ.

ಅರ್ಜುನ—ಹೀಗೆ ಕರ್ತೃತ್ವಾಭಿಮಾನವನ್ನು ಬಿಟ್ಟವರೆಲ್ಲರೂ, ಯಾರನ್ನಾದರೂ ಕೊಲ್ಲಬಹುದೆಂದೂ, ಪಾಪಕ್ಕೆ ಗುರಿಯಾಗುವುದಿಲ್ಲ ವೆಂದೂ ತಿಳಿಯಲೇ ?

ಶ್ರೀಕೃಷ್ಣ—ಅಹಂಕರ್ತೃತ್ವಭಾವರಹಿತರಿಗೆ ಫಲಲೇಪವಿಲ್ಲೆಂಬುದು ಸಾಮಾನ್ಯನಿಯಮವು. ಅಂತಹ ಜ್ಞಾನಿಗಳು ನಿರ್ನಿಮಿತ್ತವಾಗಿ ಯಾರ ನ್ನಾದರೂ ಕೊಲ್ಲುವುದಿಲ್ಲ. ಆದರೆ, ಲೋಕಸಂಹಾರಕ್ಕಾಗಿಯೇ ಸೃಷ್ಟರಾದ, ಈಶ್ವರನ ಸರ್ವಜ್ಞತ್ವಸ್ವಾತಂತ್ರ್ಯಾದಿಗಳನ್ನು ಚೆನ್ನಾಗಿ ಅರಿತ, ಯಮ, ರುದ್ರ ಮೊದಲಾದವರು, ಲೋಕಗಳನ್ನೇ ಸಂಹರಿಸಿದರೂ, ನಿರ್ಲಿಪ್ತರಾಗಿರುವರು.

ಇತರರಿಗೆ, ಅಪರೋಕ್ಷಜ್ಞಾನಿಗಳಾದರೂ, ಪ್ರಾಣಿವಧೆ ಮೊದಲಾದ ದುಷ್ಕರ್ಮಫಲಲೇಪವಾಗುವುದು; ಅವರಿಗೆ ಮುಕ್ತಿಯಲ್ಲಿ ಆನಂದಹ್ರಾಸವಾಗುವುದು. ವೃತ್ರಾಸುರನ ವಧೆಯಿಂದ ದೇವೇಂದ್ರನಿಗೆ ಸಹ ಈಷದ್ಬಂಧವು (ಅಲ್ಪವಾದಕರ್ಮಲೇಪವು) ಪ್ರಾರಬ್ಧಸೂಚಕರೂಪದಿಂದಾದರೂ ಕಂಡುಬಂದಿದೆ. ಕೆಲವರಿಗೆ ನಿಯತವಾದ ಮೋಕ್ಷಾನಂದವು ಯಾವಕಾರಣದಿಂದಲೂ ಕಡಿಮೆಯಾಗದಿದ್ದರೂ, ಪ್ರಾಪ್ತವಾಗಬಹುದಾದ ಆನಂದಾತಿಶಯಕ್ಕೆ ಕೊರತೆಯಾಗುವುದುಂಟು. ಇದಾದರೂ ಅತ್ಯಲ್ಪವಾದ ಅಹಂಭಾವಕೃತವಾದುದೆಂದೇ ತಿಳಿ.

ಕರ್ತೃತ್ವಾಭಿಮಾನವನ್ನು ಪೂರ್ಣಬಿಟ್ಟವನೆಂದರೆ ಚತುರ್ಮುಖ ಬ್ರಹ್ಮನು. ಜಗನ್ನಿರ್ಮಾಣಕರ್ಮದಲ್ಲಿ ತೊಡಗಿದ್ದರೂ ಬಂಧನರಹಿತನಾಗಿರುವನು. ಕರ್ತೃತ್ವಾಭಿಮಾನತ್ಯಾಗದ ಮಟ್ಟಕ್ಕನುಗುಣವಾದ ಬಂಧರಾಹಿತ್ಯವನ್ನು ತಿಳಿಯಬೇಕು. (೧೭)

ಅರ್ಜುನ—ಜೀವನಿಗೆ ಸ್ವತಃ ಕರ್ತೃತ್ವವೇ ಇಲ್ಲದಿದ್ದರೆ, 'ಇದು ಮಾಡು, ಅದನ್ನು ಬಿಡು' ಇತ್ಯಾದಿ ವಿಧಿನಿಷೇಧಗಳು ಯಾರಿಗಾಗಿ ಹೇಳಲ್ಪಡುತ್ತವೆ? ವಿಧಿನಿಷೇಧಗಳಿಗೆ ಅಧಿಕಾರಿಗಳೇ ಇಲ್ಲದಂತಾಗುವುದು. ಜಡ, ಈಶ್ವರ ಮತ್ತು ಮುಕ್ತಜೀವರು ವಿಧಿನಿಷೇಧಗಳಿಗೆ ವಿಷಯರಲ್ಲ. ಜಡಕ್ಕೆ ಕರ್ತೃತ್ವಶಕ್ತಿಯೇ ಇಲ್ಲ, ಈಶ್ವರನು ಸ್ವತಂತ್ರನು; ಮುಕ್ತರಿಗೆ ವಿಧಿನಿಷೇಧಗಳ ಪಾಲನೆಯಿಂದ ಆಗಬೇಕಾದುದೇನೂ ಇಲ್ಲ. ಪ್ರಯೋಜನ ರಹಿತವಾದರೆ ವಿಧಿನಿಷೇಧಗಳೆಂಬ ವ್ಯವಸ್ಥೆಯೇ ಕೂಡುವುದಿಲ್ಲ. ಇದಕ್ಕೇನು ಹೇಳುವಿ, ಕೃಷ್ಣ!

ಶ್ರೀಕೃಷ್ಣ—ಅರ್ಜುನ! ಪ್ರಶ್ನೆಯು ಯುಕ್ತಿಯುಕ್ತವೆಂಬಂತೆ ತೋರುತ್ತದೆ. ಬಹುಚೆನ್ನಾಗಿದೆ ಮತ್ತು ಅರಿಯದವರನ್ನು ಮರುಳುಗೊಳಿಸುವಂತಿದೆ. ಆದರೆ ಸ್ವಲ್ಪ ಯೋಚಿಸಿನೋಡು. ಜೀವರಿಗೆ ಸ್ವತಂತ್ರ-ಕರ್ತೃತ್ವವಿಲ್ಲೆಂದು ಹೇಳಿದೆನಲ್ಲದೇ ಕರ್ತೃತ್ವಶಕ್ತಿಯೇ ಇಲ್ಲವೆಂದು ಹೇಳಿದೆನೇ? ಜಡಕ್ಕೆ ಕರ್ತೃತ್ವಶಕ್ತಿಯಿಲ್ಲವೆಂದು ನೀನೇ ಒಪ್ಪಿರುವಿ. ಜಡ-ವಿಲಕ್ಷಣನೂ ಭಿನ್ನನೂ ಆದ ಜೀವನಿಗೆ ಕರ್ತೃತ್ವಶಕ್ತಿಯಿದೆ. ಅದು ಅವನ

ಸ್ವರೂಪಸಿದ್ಧವಾದುದು. ಕರ್ತೃತ್ವವು ಜೀವಸ್ವರೂಪಭೂತವಾದರೂ, ಜೀವನು ಸ್ವತಂತ್ರವಾಗಿ ಏನನ್ನೂ ಮಾಡಲಾರನು. ಅವನು—ಅವನ ಕರ್ತೃತ್ವವು—ಸಂಪೂರ್ಣವಾಗಿ ಈಶ್ವರಾಧೀನ. ಪರಾಧೀನಕರ್ತನಿಗಲ್ಲದೇ ಸ್ವತಂತ್ರಕರ್ತನಿಗೆ ವಿಧಿನಿಷೇಧಗಳು ಅನ್ವಯಿಸುವುವೇ ? ರಾಜನು, ತನ್ನ ವಶರಾದ ಅಧಿಕಾರಿಗಳಿಗೂ, ಪ್ರಜೆಗಳಿಗೂ ತನ್ನ ಇಚ್ಛೆಯಂತೆ ನಿಯಮ ಗಳನ್ನು ವಿಧಿಸುತ್ತಾನೆ; ತಾನು ಸ್ವೇಚ್ಛೆಯಿಂದ ವರ್ತಿಸುತ್ತಾನೆ. ಅನ್ಯ-ನಿಯಾಮಕರಹಿತನಾದ, ಸರ್ವೋತ್ತಮನಾದ, ಸ್ವತಂತ್ರನಾದ ಈಶ್ವರನು ತನ್ನ ಅಧೀನರಾದ ಜೀವರಿಗಾಗಿ ವಿಧಿನಿಷೇಧರೂಪವಾದ ನಿಯಮಗಳನ್ನು ರಚಿಸಿರುವನು. ಅವುಗಳನ್ನು ಪಾಲಿಸುವುದು ಜೀವರ ಕರ್ತವ್ಯವು. ಆದುದರಿಂದ ಭಗವಂತನ ಆಜ್ಞಾರೂಪವಾದ ವಿಧಿನಿಷೇಧಾತ್ಮಕಶಾಸ್ತ್ರ ಗಳಿಗೆ ವೈಯರ್ಥ್ಯವಿಲ್ಲ. (ಅಧಿಕಾರಿಗಳಿಲ್ಲದಪ್ರಯುಕ್ತ ವ್ಯರ್ಥವೆಂಬ ಆರೋಪಕ್ಕೆ ಅವಕಾಶವಿಲ್ಲ).

ಅರ್ಜುನ—ಸ್ವತಂತ್ರವಾಗಿ ಏನನ್ನೂ ಮಾಡಲಾರದವನನ್ನು ಕುರಿತು, ಹೀಗೆಮಾಡೆಂದು ವಿಧಿಸುವುದು ಸಹ ಕೂಡುವುದಿಲ್ಲ. ಮಾಡೆಂದು ವಿಧಿಸು ವವನೇ ಮಾಡಿಸುವವನೂ ಆದ್ದರಿಂದ, ಮಾಡಿಸಿಬಿಟ್ಟರಾಯಿತು, ವಿಧಿಸುವು ದೇಕೆ ?

ಶ್ರೀಕೃಷ್ಣ—ಅರ್ಜುನ! 'ವಿಧಿ' ಎಂಬುದರ ಅರ್ಥವನ್ನು ವಿವರಿಸಿದರೆ ನಿನ್ನ ಸಂಶಯವು ದೂರವಾಗುವುದು ; ಹೇಳುವೆನು, ಕೇಳು. ವಿಧಿ, ಚೋದನೆ, ಪ್ರೇರಣೆ ಇವು ಪರ್ಯಾಯಪದಗಳು—ಏಕಾರ್ಥಬೋಧಕಗಳು. ಕರ್ಮವನ್ನು ವಿಧಿಸುವುದೆಂದರೆ ಅದರಲ್ಲಿ ಜೀವನನ್ನು ಪ್ರೇರಿಸುವುದೆಂದೂ ಅರ್ಥ. ವಿಧಿ ಅಥವಾ ಕರ್ಮಚೋದನೆಯು ಜ್ಞಾನ, ಜ್ಞೇಯ ಮತ್ತು ಪರಿಜ್ಞಾತ ಎಂಬುದಾಗಿ ಮೂರು ಪ್ರಕಾರವಾದದು. ವಿಧಿವಿಷಯಕವಾದ ಅರಿವು ಜ್ಞಾನವೆನಿಸುತ್ತದೆ. ಇಚ್ಛೆ, ಪ್ರಯತ್ನ ಮತ್ತು ಪುರುಷಾರ್ಥ (ಫಲ) ಇವು ಜ್ಞೇಯವು. ದೇಹಭೂಮ್ಯಾದಿಆಶ್ರಯವೂ, ಸರ್ವಜ್ಞನೂ ಸರ್ವ-ಪ್ರೇರಕನೂ ಆದ ಈಶ್ವರನ ಸನ್ನಿಧಾನವುಳ್ಳ (ನಿತ್ಯಸಂಬಂಧವುಳ್ಳ) ಜೀವ-ಸಮೂಹವು 'ಪರಿಜ್ಞಾತಾ' ಎನಿಸುವುದು. ಈ ಮೂರು ಕರ್ಮಚೋದನೆ

ಯಲ್ಲಿ ನಿಮಿತ್ತಗಳು. ಹೀಗೆ ವಿಧಿನಿಮಿತ್ತಗಳು ತ್ರಿವಿಧವಾದರೂ, (ಅಭೇದ ವ್ಯವಹಾರಬಲದಿಂದ) ಕರ್ಮವಿಧಿಯೇ ತ್ರಿವಿಧವೆಂದು ಹೇಳಲಾಗುತ್ತದೆ. ಶ್ರುತಿ, ಸ್ಮೃತಿರೂಪವಿಧಿವಾಕ್ಯಗಳಿಂದ ಜೀವನಿಗೆ ತನ್ನ ಕರ್ತವ್ಯವೇನೆಂಬುದರ ಜ್ಞಾನವಾಗುತ್ತದೆ. ನಂತರ ಸನ್ನಿಹಿತನಾದ ಈಶ್ವರಪ್ರೇರಣೆಯಿಂದ ಇಚ್ಛೆಯೂ ತದನುಸಾರವಾದ ಪ್ರಯೋಜನವನ್ನು ಹೊಂದುವ ಪ್ರವೃತ್ತಿಯೂ (ಪ್ರಯತ್ನವು) ಹುಟ್ಟುತ್ತದೆ. ಆದ್ದರಿಂದ ವಿಧಿಜ್ಞಾನಾದಿಗಳೂ, ಕರ್ಮವಿಧಿಗೂ ನಿಮಿತ್ತನಿಮಿತ್ತೀಭಾವವುಂಟೆಂಬುದು ಸ್ಪಷ್ಟವಲ್ಲವೇ? ಇಚ್ಛಾ, ಜ್ಞಾನ, ಪ್ರಯತ್ನಗಳು ಜೀವಸ್ವರೂಪಧರ್ಮಗಳು. ಕರ್ಮಚೋದಕನು ಈಶ್ವರನು; ಜೀವನು ಈಶ್ವರಾಧೀನನು. ಈಶ್ವರನು, ವಸ್ತು-ಸ್ವಭಾವಗಳನ್ನು ಅತಿಕ್ರಮಿಸದಂತೆ, ಅವುಗಳ ಸ್ವಭಾವ (ಸ್ವರೂಪಯೋಗ್ಯತೆ ಅಥವಾ ಸ್ವರೂಪಧರ್ಮ) ಗಳಿಗೆ ಅನುಗುಣವಾಗಿ ನಡೆಸಿಕೊಳ್ಳುವ ಸತ್ಯ-ಸಂಕಲ್ಪವುಳ್ಳವನು. ಸರ್ವಶಕ್ತನಾದರೂ ಜಡವಸ್ತುಗಳಿಗೆ ಜ್ಞಾನೇಚ್ಛಾ-ಪ್ರಯತ್ನಗಳನ್ನುಂಟುಮಾಡುವುದಿಲ್ಲ. ಚೇತನಾಚೇತನವಸ್ತುಗಳ ಅನಾದಿ-ನಿತ್ಯಸ್ವಭಾವಗಳ ಪರಿರಕ್ಷಕನಾಗಿದ್ದಾನೆ. ಹೀಗಿರಲು, ಅಸ್ವತಂತ್ರನಾದರೂ ಕರ್ತೃತ್ವಶಕ್ತಿಯುಳ್ಳ ಜೀವನಲ್ಲದೆ, ಬೇರಾವುದು ಕರ್ಮವಿಧಿಗೆ ಅರ್ಹವಾಗಬಲ್ಲದು! ಹೀಗೆ ಕರ್ಮಚೋದನೆಯು ತ್ರಿವಿಧವಾದರೆ, ಕರ್ಮಕಾರಣವನ್ನೂ ಸಂಕ್ಷೇಪದಿಂದ ತ್ರಿವಿಧವೆಂದು ನಿರೂಪಿಸಬಹುದು. ಅದೃಷ್ಟ (ಪೂರ್ವಕರ್ಮ) ಮತ್ತು ದೇಹೇಂದ್ರಿಯಾದಿ ಉಪಕರಣಸಾಮಗ್ರಿಗಳು **ಕರಣವು**. ಹಸ್ತಪಾದಾದಿಮನಃಪರ್ಯಂತದ ಚೇಷ್ಟಾರೂಪವಾದ ಪ್ರಯತ್ನವು **ಕರ್ಮವು** (ಕ್ರಿಯೆ). ಜೀವ ಮತ್ತು ಈಶ್ವರ ಇಬ್ಬರೂ ಸೇರಿ **ಕರ್ತಾ**. ಕರಣ ಕರ್ಮ ಕರ್ತರು, ತ್ರಿವಿಧಕರ್ಮಕಾರಣಗಳು. (೧೮)

ಅರ್ಜುನ—ಜೀವನು, ತನ್ನ ಕರ್ತೃತ್ವವನ್ನು ಈ ಪ್ರಕಾರವೆಂದು ತಿಳಿದು, ಸ್ವಾತಂತ್ರ್ಯಾಭಿಮಾನವನ್ನು ತೊರೆದು, ಕರ್ಮಗಳಲ್ಲಿ ಉದ್ಯುಕ್ತನಾಗಬೇಕಲ್ಲವೇ? ಆದರೆ ಎಲ್ಲರೂ ಹೀಗೆ ಮಾಡುವುದಿಲ್ಲ. ಯಾರು ಯಾವ ಕರ್ಮವನ್ನು, ಹೇಗೆ ತಿಳಿದು ಆಚರಿಸುವರು, ಎಂಬುದರಲ್ಲಿರುವ ಮುಖ್ಯಪ್ರಭೇದಗಳನ್ನು ತಿಳಿಯಲಪೇಕ್ಷಿಸುವೆನು.

ಶ್ರೀಕೃಷ್ಣ—ಕರ್ತಾ, ಕರ್ಮ, ಜ್ಞಾನಗಳ ಪ್ರಭೇದಗಳನ್ನು ಕೇಳುವೆಯಲ್ಲವೇ? ಇವು, ಸಾತ್ವಿಕ, ರಾಜಸ, ತಾಮಸಗುಣಭೇದದಿಂದ, ಪ್ರತಿಯೊಂದೂ ಮೂರುಪ್ರಕಾರವಾಗಿರುವುವು. ವೇದಸಮ್ಮತವಾದ ಸಾಂಖ್ಯ-ಶಾಸ್ತ್ರದಲ್ಲಿಯೂ ಹೀಗೆಂದು ಹೇಳಲಾಗಿದೆ. ಅದನ್ನೇ ಯಥಾಸ್ಥಿತವಾಗಿ ವಿವರಿಸುವೆನು. ಕೇಳಿ ಶ್ರದ್ಧೆಯನ್ನು ಹೊಂದು. (೧೯) ಮೊದಲಿಗೆ ಜ್ಞಾನತ್ರೈವಿಧ್ಯವನ್ನು ಹೇಳುವೆನು. ಪರಸ್ಪರಭಿನ್ನಗಳಾದ, ತಾರತಮ್ಯದಿಂದಕೂಡಿರುವ, ಚೇತನಾಚೇತನಸಕಲವಸ್ತುಗಳಲ್ಲಿ ಸರ್ವಾಧಾರಕನಾಗಿ ಸದಾ ನೆಲೆಸಿರುವ ವಿಷ್ಣುವನ್ನು, ಸರ್ವೋತ್ತಮನನ್ನಾಗಿಯೂ ವಸ್ತು-ಭೇದನಿಮಿತ್ತಕವಾದ ಯಾವ ಭೇದವೂ ಇಲ್ಲದೇ ಸರ್ವತ್ರ ಸರ್ವದೋಷ-ಲೇಶಸಂಪರ್ಕವಿಲ್ಲದ ಅಶೇಷಗುಣಪೂರ್ಣನನ್ನಾಗಿಯೂ ಅಧಿಷ್ಠಾನಗಳಾದ ವಸ್ತುಗಳು ನಷ್ಟಹೊಂದಿದರೂ ನಾಶರಹಿತವಾದ ನಿತ್ಯಸ್ವರೂಪವುಳ್ಳವನೆಂದೂ, ಯಾವಜ್ಞಾನವು ವಿಷಯೀಕರಿಸುವುದೋ ಅದನ್ನು ಸಾತ್ವಿಕಜ್ಞಾನ-ವೆಂದು ತಿಳಿ. (೨೦) ನೀಚೋಚ್ಚಭಾವದಿಂದ ಪರಸ್ಪರಭಿನ್ನಗಳಾದ ನಾನಾ ಪ್ರಕಾರದ ಜೀವಜಡಾತ್ಮಕವಸ್ತುಗಳನ್ನು ಭಿನ್ನಪದಾರ್ಥಗಳೆಂದು ಯಥಾರ್ಥವಾಗಿ ಗ್ರಹಿಸಿದರೂ, ಅಂತಃಸ್ಥಿತನಾದ ವಿಷ್ಣುವನ್ನು ವಿಭಿನ್ನನೆಂದು ಶಂಕಿಸಿ, ಅಭಿನ್ನನೂ ಸರ್ವೋತ್ತಮನೂ ಆದ ಒಬ್ಬನೆಂದು ಗ್ರಹಿಸದೇ ಸಂಶಯಯುಕ್ತವಾಗಿದ್ದರೆ, ಆ ಜ್ಞಾನವು ರಾಜಸಜ್ಞಾನವೆನಿಸುವುದು. (೨೧) ಯಾವ ಜ್ಞಾನವು (ಬ್ರಹ್ಮನು ತನ್ನನ್ನು ತಾನು ಬ್ರಹ್ಮನೆಂದು ತಿಳಿಯುವಂತೆ) ಜೀವನೇ ಬ್ರಹ್ಮನೆಂದಾಗಲಿ, (ಇದು ಪ್ರಪಂಚವು ಎಂದು ತಿಳಿಯುವಹಾಗೆ) ಜೀವನನ್ನು ಜಗದಾತ್ಮಕನೆಂದಾಗಲಿ, ಅಥವಾ ಜಗತ್ತು ಏಕಜೀವಕಲ್ಪಿತವಾದುದೆಂದಾಗಲಿ ಗ್ರಹಿಸುವುದೋ, ಆ ಜ್ಞಾನವು ಯುಕ್ತಿಶೂನ್ಯವೂ, (ಜಗತ್ತು ಸದಸದ್ವಿಲಕ್ಷಣವೆಂದು ಮುಂತಾಗಿ ಇಲ್ಲದ ಕುಕಲ್ಪನೆಗಳಿಂದಾದ) ಅಸತ್ಯವಿಷಯಕವೂ, ಅಜ್ಞಾನಬಾಹುಳ್ಯದಿಂದ ತುಚ್ಛವೂ ಆದುದರಿಂದ ತಾಮಸಜ್ಞಾನವೆನಿಸುವುದು*. (೨೨) ಗುಣಕೃತವಾದ

*ಸೂ :—ಮುಕ್ತನಾಗಿಸಲ್ಪಡುವವನೆಂಬ ವಿವಕ್ಷೆಯಿಂದ ಜೀವನು 'ಕಾರ್ಯ'ನೆನಿಸುವನು. ಕೃತ್ಸ್ನಪದವು ಬ್ರಹ್ಮ ಮತ್ತು ಜಗತ್ತೆಂಬ ಉಭಯಾರ್ಥಪರವಾದುದು. 'ಕೃತ್ಸ್ನವತ್' ಎಂದರೆ ಬ್ರಹ್ಮನಂತೆ, ಜಗತ್ತಿನಂತೆ ಎಂದರ್ಥ.

ಕರ್ಮತ್ರೈವಿಧ್ಯವನ್ನು ನಿರೂಪಿಸುವೆನು, ಕೇಳು. ನನ್ನದೆಂಬ (ಸ್ವತಂತ್ರ-ಕರ್ತೃತ್ವ) ಸ್ನೇಹದಿಂದ ರಹಿತವಾಗಿಯೂ, ರಾಗದ್ವೇಷಗಳಿಲ್ಲದೆಯೂ (ಪ್ರಾಪ್ತವಾಗಬಹುದಾದ ಕೀರ್ತಿ ಮೊದಲಾದವುಗಳಲ್ಲಿ ರಾಗವೂ, ಅಕೀರ್ತಿ ಮೊದಲಾದವುಗಳಲ್ಲಿ ದ್ವೇಷವೂ ಇಲ್ಲದೇ) ಫಲಾಶೆಯಿಲ್ಲದೆಯೂ ಆಚರಿಸಲ್ಪಡುವ ನಿಯತಕರ್ಮವು ಸಾತ್ವಿಕಕರ್ಮವೆನಿಸುವುದು. ಶ್ರೀಹರಿಯ ಸರ್ವೋತ್ತಮತ್ವಜ್ಞಾನಪೂರ್ವಕವಾದ ಭಕ್ತಿಯಿಂದ, ಭಗವದರ್ಪಣಬುದ್ಧಿಯಿಂದ ಆಚರಿಸಲ್ಪಡುವ ವರ್ಣಾಶ್ರಮೋಚಿತಕರ್ಮವೇ ನಿಯತಕರ್ಮವೆಂದೂ, ಯಾವುದನ್ನು ಆಚರಿಸುವುದರಿಂದ ಮೋಕ್ಷರೂಪವಾದ ಮಹಾಫಲವುಂಟೋ ಮತ್ತು ಪರಿತ್ಯಾಗದಿಂದ ಪ್ರತ್ಯವಾಯವುಂಟೋ ಅದೇ ನಿಯತಕರ್ಮವೆನಿಸುವುದೆಂದೂ, ಈ ಹಿಂದೆ ವಿಸ್ತಾರವಾಗಿ ನಿರೂಪಿಸಿದುದನ್ನು ಮರೆತಿಲ್ಲವಷ್ಟೇ. (೨೩) ಸ್ವತಂತ್ರಕರ್ತೃತ್ವಾಭಿಮಾನದಿಂದಲೂ ಫಲೇಚ್ಛೆಯಿಂದಲೂ ಬಹು ಆಯಾಸಪಟ್ಟುಕೊಂಡು ಆಚರಿಸಲ್ಪಡುವ ಕರ್ಮವು ರಾಜಸಕರ್ಮವು. (೨೪) ಕರ್ಮಾಂತರಕ್ಕೆ ಕಾರಣವಾಗಿ ತನ್ಮೂಲಕ ಬಂಧಕವಾದುದೂ; ನಾಶ, ಪರಪೀಡೆಗಳನ್ನುಂಟುಮಾಡುವುದೂ; ಸ್ವಸಾಮರ್ಥ್ಯದ ವಿಮರ್ಶೆಯಿಲ್ಲದೇ ತಾನೇ ಸ್ವತಂತ್ರಕರ್ತನೆಂಬ ಮಿಥ್ಯಾಜ್ಞಾನದಿಂದ (ಮೋಹದಿಂದ) ಆರಂಭಿಸಲ್ಪಡುವುದೂ, ಈ ಲಕ್ಷಣಗಳುಳ್ಳ ಕರ್ಮವು ತಾಮಸಕರ್ಮವೆಂದು ಕರೆಯಲ್ಪಡುವುದು. (೨೫) ಇನ್ನು ಗುಣಕೃತಕರ್ತೃತ್ರೈವಿಧ್ಯವನ್ನು ವಿವರಿಸುವೆನು, ಕೇಳು. ಫಲಾಸಕ್ತಿಯಿಲ್ಲದವನೂ, ಸರ್ವವೂ ಭಗವದಧೀನವೆಂಬ ನಿಶ್ಚಯದಿಂದ ಸ್ವತಂತ್ರಕರ್ತೃತ್ವಾಭಿಮಾನವನ್ನು ಬಿಟ್ಟವನೂ, ಕರ್ಮಾಚರಣೆಯಲ್ಲಿ ಅವಶ್ಯವಾಗಿ ಸಂಭವಿಸುವ ದುಃಖವನ್ನು ಸಹಿಸುವವನೂ, ಕರ್ಮಮಾಡುವುದರಲ್ಲಿ ಉತ್ಸಾಹಿಯೂ, ಫಲವು ದೊರೆಯಲಿ ಅಥವಾ ದೊರೆಯದಿರಲಿ, ತನ್ನಿಮಿತ್ತಕ ಹರ್ಷವಿಷಾದಗಳಿಲ್ಲದವನೂ ಸಾತ್ವಿಕಕರ್ತನೆನಿಸುವನು. (೨೬) ಕೀರ್ತಿಕಾಮನೂ, ಫಲಾಸಕ್ತನೂ, ಕರ್ಮಪೂರ್ತಿಗಾಗಿ ಅವಶ್ಯವಾಗುವ ದ್ರವ್ಯವನ್ನು ವ್ಯಯಮಾಡದ ಲೋಭಿಯೂ, ಪರಹಿಂಸಾಪರಾಯಣನೂ, ಅಪವಿತ್ರ (ಅನ್ಯಾಯಾರ್ಜಿತ) ದ್ರವ್ಯವುಳ್ಳವನೂ, ಸಿದ್ಧಿ, ಅಸಿದ್ಧಿಗಳಿಂದ

ಹರ್ಷಶೋಕಗಳನ್ನು ಹೊಂದುವವನೂ ರಾಜಸಕರ್ತನೆನಿಸುವನು. (೨೭) ಭಗವದರ್ಪಣರೂಪಯೋಗವಿಲ್ಲದವನೂ, ಭಗವದ್ಭಕ್ತಿಯೆಂಬ ಶಕ್ತಿರಹಿತವಾದ ಕರ್ಮವುಳ್ಳವನೂ, ಪ್ರಾಕೃತನೂ (ಪ್ರಕೃಷ್ಟವಾದ ಎಂದರೆ ಚೆನ್ನಾಗಿ ಆಚರಿಸಲ್ಪಡದ ಕರ್ಮವುಳ್ಳವನೂ), ಅಹಂಭಾವದಿಂದ ಯಾರಲ್ಲಿಯೂ ನಮ್ರತೆಯಿಲ್ಲದವನೂ, ಗೂಢದ್ವೇಷದಿಂದ ಕರ್ಮಗಳಲ್ಲಿ ತೊಡಗುವವನೂ, ನೀಚಕರ್ಮಗಳಲ್ಲಿ ಆಸಕ್ತನೂ, ಪ್ರಾಪ್ತಕಾಲದಲ್ಲಿ ಕರ್ಮಗಳನ್ನು ಮಾಡದೇ ಉದಾಸೀನನಾಗಿರುವವನೂ ಯಾವ ಕೆಲಸವನ್ನೂ ಮಾಡದಿರಲು ಕಾರಣವಾಗುವ ದುರ್ಬಲಮನಸ್ಸುಳ್ಳವನೂ, ಇತರರಕರ್ಮದೋಷಗಳನ್ನು ಬಹುಕಾಲದನಂತರವೂ ಅಪ್ರಾಸಂಗಿಕವಾಗಿ ಎತ್ತಿನುಡಿಯುವವನೂ, ತಾಮಸ-ಕರ್ತನೆಂದು ಹೇಳಲ್ಪಡುವನು. (೨೮)

ಅರ್ಜುನ—ಕರ್ತೃಗಳಿಂದ ಮಾಡಲ್ಪಡುವ ಕರ್ಮಗಳಿಗೆ ಪೂರ್ವೋಕ್ತ ಸಾತ್ವಿಕಾದಿ ಜ್ಞಾನಗಳು ಮಾತ್ರ ಕಾರಣವೇ ?

ಶ್ರೀಕೃಷ್ಣ—ಸಾತ್ವಿಕಾದಿಜ್ಞಾನಗಳು ಮುಖ್ಯಕಾರಣಗಳು. ಅವರ ಬುದ್ಧಿ, ಧೃತಿಗಳೂ ಕಾರಣಗಳಾಗುತ್ತವೆ. ಇವುಗಳೂ ಸತ್ವಾದಿಗುಣಭೇದದಿಂದ ಮೂರುಪ್ರಕಾರವಾಗಿರುವುವು. ಅವುಗಳನ್ನು ವಿವರಿಸುವೆನು; ಚೆನ್ನಾಗಿ ಲಾಲಿಸು. (೨೯) ಸಂಸಾರಕ್ಕೆ (ಬಂಧಕ್ಕೆ) ಕಾರಣವಾಗುವ ಧರ್ಮವನ್ನೂ, ಮೋಕ್ಷಕ್ಕೆ ಕಾರಣವಾಗುವ ಧರ್ಮವನ್ನೂ, ಕರ್ತವ್ಯ, ಅಕರ್ತವ್ಯಕರ್ಮಗಳನ್ನೂ, ಅದರಿಂದ ಲಭ್ಯವಾಗುವ ಭಯಾಭಯ ಬಂಧಮೋಕ್ಷಗಳ ಸ್ವರೂಪವನ್ನೂ ಗ್ರಹಿಸುವ ಬುದ್ಧಿಯು ಸಾತ್ವಿಕ-ಬುದ್ಧಿಯು. (೩೦) ಧರ್ಮಾಧರ್ಮ, ಕರ್ತವ್ಯಾಕರ್ತವ್ಯಗಳನ್ನು ಸದಾ ಯಥಾವತ್ತಾಗಿ ಗ್ರಹಿಸದೇ, ಕೆಲವುವೇಳೆ ಇದ್ದಂತೆಯೂ ಮತ್ತು ಕೆಲವುವೇಳೆ ವಸ್ತುಸ್ಥಿತಿಗೆ ವ್ಯತ್ಯಸ್ತವಾಗಿಯೂ ಗ್ರಹಿಸುವ ಬುದ್ಧಿಯು ರಾಜಸ ಬುದ್ಧಿಯು. (೩೧) ಹೇ ಪಾರ್ಥ! ಹೀಗಲ್ಲದೇ ಅಧರ್ಮವನ್ನೇ ಧರ್ಮವೆಂದೂ, ಸಕಲಪದಾರ್ಥಗಳನ್ನು ವಸ್ತುಸ್ಥಿತಿಗೆ ವಿರುದ್ಧವಾಗಿಯೂ (ಜಗದ್ವಸ್ತುಗಳನ್ನು ಅಸತ್ಯ, ಅನೀಶ್ವರ, ಸ್ವತಂತ್ರ, ಕ್ಷಣಿಕ ಇತ್ಯಾದಿವಿಪರೀತವಾಗಿ) ಗ್ರಹಿಸುವ ಅಜ್ಞಾನದಿಂದ ಆವೃತವಾದ ಬುದ್ಧಿಯು ತಾಮಸ

ಬುದ್ಧಿಯು. (೩೨) ತ್ರಿವಿಧವಾದ ಧೃತಿಗಳನ್ನು ನಿರೂಪಿಸುವೆನು ಕೇಳು. ವಿಹಿತವಿಷಯದಿಂದ ಚಲಿಸದ ಭಗವದ್ಭಕ್ತಿಯುತವಾದ ಧೃತಿಯಿಂದ, ಮನಸ್ಸು, ಪ್ರಾಣ ಮತ್ತು ಇತರ ಇಂದ್ರಿಯಗಳ ವ್ಯಾಪಾರಗಳು (ಕ್ರಿಯೆಗಳು) ಧರಿಸಲ್ಪಡುವುವೋ ಅದು ಸಾತ್ವಿಕಧೃತಿಯು. (೩೩) ಹೇ ಅರ್ಜುನ! ಯಾವಧೃತಿಯಿಂದ, ಕರ್ಮದಲ್ಲಿ ನನ್ನದೆಂಬ ಸ್ನೇಹಯುಕ್ತನಾಗಿ, ಫಲಾಪೇಕ್ಷೆಯಿಂದ ಧರ್ಮಾರ್ಥಕಾಮಗಳನ್ನು ಧರಿಸುವನೋ (ಎದೆಗುಂದದೇ ಅವುಗಳಿಗಾಗಿ ಯತ್ನಿಸುವನೋ) ಅದು ರಾಜಸಧೃತಿಯು. (೩೪) ದುಷ್ಟಬುದ್ಧಿಯುಳ್ಳ ಯಾವಪುರುಷನು, ಅತಿನಿದ್ರೆ, ಭಯ, ಶೋಕ ಮತ್ತು ಮನೋದೌರ್ಬಲ್ಯಗಳನ್ನೂ ಹಾಗೂ ಅಧರ್ಮದಲ್ಲಿ ಹರ್ಷ (ಮದ) ವನ್ನೂ ಬಿಡುವುದಿಲ್ಲವೋ ಮತ್ತು ಭಗವದ್ವೇಷಾದಿಸರ್ವನಿಷಿದ್ಧವ್ಯಾಪಾರಗಳನ್ನು ಬಿಡುವುದಿಲ್ಲವೋ ಅವನ ಧೃತಿಯು ತಾಮಸಧೃತಿಯೆಂದು ಹೇಳಲ್ಪಡುತ್ತದೆ. (೩೫) ಈಗ ತ್ರಿವಿಧ ಸುಖಲಕ್ಷಣಗಳನ್ನು ಹೇಳುವೆನು. ಹೇ ಭರತಕುಲಮಣಿ! ಯಾವುದರ ಅನುಭವದಿಂದ ದುಃಖವು ಸರ್ವಥಾ ನಾಶ ಹೊಂದುವುದೋ ಮತ್ತು ಯಾವುದರ ಭೋಗದಲ್ಲಿ ಪುರುಷನು ಪುನಃಪುನಃ ಆಸಕ್ತನಾಗುವನೋ ಅದನ್ನೇ ಸುಖವೆಂದು ಎಲ್ಲರೂ ಭಾವಿಸುವರಷ್ಟೇ (ಪ್ರಸಿದ್ಧವು). ಶ್ರಮಸಾಧ್ಯವಾದುದರಿಂದ ಮೊದಲಿಗೆ ವಿಷದಂತೆ ತೋರಿ, ಪರಿಣಾಮದಲ್ಲಿ ಅಮೃತಸದೃಶವಾಗಿರುವ ಸುಖವು ಸಾತ್ವಿಕಸುಖವೆಂದು ಹೇಳಲಾಗುತ್ತದೆ. ಅದು ಆತ್ಮಪ್ರಸಾದದಿಂದಲೂ, ಬುದ್ಧಿಪ್ರಸನ್ನತೆಯಿಂದಲೂ ಹುಟ್ಟುವುದು. ಆತ್ಮಪ್ರಸಾದವೆಂದರೆ ವಿಷ್ಣುಪ್ರಸಾದವು; ಬುದ್ಧಿಪ್ರಸನ್ನತೆಯೆಂದರೆ ಸ್ವತಃ ವಿಷಯಗಳಲ್ಲಿ ಪ್ರವರ್ತಿಸದಿರುವ (ಪ್ರಯತ್ನಪೂರ್ವಕವಲ್ಲದ) ಸಹಜವಾದ ಮನಃಪ್ರಸನ್ನತೆ. ಕಾಮಿಸಿ ಯತ್ನಪೂರ್ವಕವಾಗಿ ಪಡೆದ ವಿಷಯಾನುಭವಜನ್ಯಸುಖವು ಸಾತ್ವಿಕಸುಖವಲ್ಲ. (೩೬-೩೭) ಶಬ್ದಾದಿ ವಿಷಯಗಳ ಮತ್ತು ಶ್ರೋತ್ರಾದಿ ಇಂದ್ರಿಯಗಳ ಸಂಬಂಧದಿಂದ ಹುಟ್ಟುವ ಸುಖವು ರಾಜಸಸುಖವೆನಿಸುವುದು. ಇದು ಮೊದಲಿಗೆ ಅಮೃತಸದೃಶವಾಗಿ ತೋರಿ ಪರಿಣಾಮದಲ್ಲಿ ದುಃಖವನ್ನುಂಟುಮಾಡುವುದು. (೩೮) ಯಾವುದು ಮೊದಲಿಗೂ ಮತ್ತು ನಂತರವೂ

ಜೀವನನ್ನು ಮೋಹಪರವಶನನ್ನಾಗಿ ಮಾಡುವುದೋ, ಅದು ತಾಮಸವು. ನಿದ್ರೆ, ಆಲಸ್ಯ (ಶರೀರಮಾಂದ್ಯ), ಪ್ರಮಾದ (ಅಧರ್ಮಬುದ್ಧಿ), ಇವುಗಳಿಂದಾದುದು ತಾಮಸಸುಖವು. (೩೯).

ಅರ್ಜುನ—ಸತ್ವಾದಿಗುಣಗಳು ಜೀವರನ್ನು ಬಂಧಿಸಿರುವುವೆಂದು ಹೇಳಿದೆಯಲ್ಲವೇ? ಒಂದೊಂದು ಗುಣವು ಒಂದೊಂದು ಸ್ವಭಾವದ ಜೀವರನ್ನು ಬಂಧಿಸುವುದೋ ಅಥವಾ ಪ್ರತಿಜೀವನನ್ನೂ ಮೂರುಗುಣಗಳೂ ಬಂಧಿಸುವುವೋ? ಪ್ರತಿ ಜೀವನೂ ತ್ರಿಗುಣಗಳಿಂದಲೂ ಬದ್ಧನಾಗಿರುವುದಾದರೆ, ಉಕ್ತಲಕ್ಷಣಗಳಿಂದ ಜೀವಸ್ವರೂಪವಿವೇಕವು ಹೇಗೆ ಸಾಧ್ಯವಾಗುವುದು?

ಶ್ರೀಕೃಷ್ಣ— ಪ್ರಾಕೃತಸತ್ವಾದಿತ್ರಿಗುಣಬಂಧರಹಿತವಾದ ಜೀವ-ಜಾತವು, ಭೂಮಿಯಲ್ಲಾಗಲಿ, ಸ್ವರ್ಗದಲ್ಲಿಯಾಗಲಿ, ಮನುಷ್ಯರಲ್ಲಾಗಲಿ, ದೇವತೆಗಳಲ್ಲಾಗಲಿ, ಇಲ್ಲವೇ ಇಲ್ಲ. ಹೆಚ್ಚೇನು! ಎಲ್ಲ ಜೀವರೂ ಮೂರು ಗುಣಗಳಿಂದಲೂ ಬದ್ಧರು. ಬಾಹ್ಯದೇಹಗತವಾದ ಇಂದ್ರಿಯ, ಮನಸ್ಸು ಮೊದಲಾದವುಗಳೂ ತ್ರಿಗುಣವಿಕಾರಗಳು. ತ್ರಿಗುಣಗಳು, ಆಯಾ ಜೀವರ ಸ್ವರೂಪಯೋಗ್ಯತಾನುಗುಣವಾಗಿ, ತಾರತಮ್ಯದಿಂದ (ಹೆಚ್ಚುಕಡಿಮೆ ಪ್ರಮಾಣದಿಂದ) ಜೀವಸ್ವರೂಪವನ್ನು ಸಂಬಂಧಿಸಿಕೊಂಡಿರುತ್ತವೆ. ಸಾತ್ವಿಕ, ರಾಜಸ, ತಾಮಸಭೇದದಿಂದ ಜೀವರು ತ್ರಿವಿಧರಾಗಿರುವರು. ಅವರವರ ಶ್ರದ್ಧಾದಿಭೇದಗಳಿಂದ ಈ ತ್ರೈವಿಧ್ಯವನ್ನು ತಿಳಿಯಬಹುದೆಂದು ಈ ಮೊದಲು ನಿರೂಪಿಸಿದ ಅಂಶಗಳು ನಿನ್ನ ಸ್ಮರಣೆಯಲ್ಲಿರುವವಷ್ಟೆ. ಸಾಮಾನ್ಯವಾಗಿ ಹೀಗೆ ಜೀವರು ತ್ರಿವಿಧರೆಂದು ಹೇಳಿದರೂ, ವಿಭಾಗ ಪ್ರಕಾರದಲ್ಲಿ ಹೇರಳವಾದ ವಿಶೇಷಗಳಿವೆ. ಅವುಗಳಿಂದ ಅನೇಕವಾದ ವಿಶಿಷ್ಟ ಜೀವಸಮುದಾಯಗಳು ಏರ್ಪಡುತ್ತವೆ. ಅವುಗಳ ವಿವರವನ್ನೂ ಹೇಳುವೆನು ಕೇಳು. ಸಾತ್ವಿಕಾದಿಜೀವರು ಪ್ರತ್ಯೇಕವಾಗಿ ತ್ರಿವಿಧರಾಗಿರುವರು. ಪಿತೃ, ಗಂಧರ್ವಾದಿಗಳು ಸಾತ್ವಿಕತಾಮಸರು; ಋಷಿಗಳು ಸಾತ್ವಿಕರಾಜಸರು; ದೇವತೆಗಳು ಸಾತ್ವಿಕಸಾತ್ವಿಕರು. ಸಾತ್ವಿಕಸಾತ್ವಿಕರಲ್ಲಿ ಸಹ ಬೃಹಸ್ಪತ್ಯಾದಿಗಳು ಸಾತ್ವಿಕಸಾತ್ವಿಕತಾಮಸರು; ದೇವೇಂದ್ರನು ಸಾತ್ವಿಕಸಾತ್ವಿಕ-

ರಾಜಸನು ; ಚತುರ್ಮುಖನಿಂದ ಆರಂಭಿಸಿ ರುದ್ರನೇ ಅಂತ್ಯವಾಗಿ ಉಳ್ಳ ಜೀವಸಮೂಹವು ಸಾತ್ವಿಕಸಾತ್ವಿಕಸಾತ್ವಿಕವು ; ಇವರಲ್ಲಿ ರುದ್ರನು ಸಾತ್ವಿಕ ಸಾತ್ವಿಕಸಾತ್ವಿಕತಾಮಸನು ; ಸರಸ್ವತೀಭಾರತಿಯರು ಸಾತ್ವಿಕಸಾತ್ವಿಕ ಸಾತ್ವಿಕರಾಜಸರು ; ಬ್ರಹ್ಮವಾಯುಗಳು ಸಾತ್ವಿಕಸಾತ್ವಿಕಸಾತ್ವಿಕ ಸಾತ್ವಿಕರು. ಮಧ್ಯಮ ಮತ್ತು ಉತ್ತಮ ಮನುಷ್ಯರು ರಾಜಸರು. ಇವರೂ ಪ್ರತ್ಯೇಕವಾಗಿ ಮೂರುವಿಧರು. ಬ್ರಾಹ್ಮಣಾದಿಸರ್ವಭಗವದ್ಭಕ್ತರು ರಾಜಸ ಸಾತ್ವಿಕರು. ಈ ರಾಜಸಸಾತ್ವಿಕರಲ್ಲಿ ಸಹ ವಿಪ್ರರು ರಾಜಸ ಸಾತ್ವಿಕಸಾತ್ವಿಕರು ; ಕ್ಷತ್ರಿಯರು ಅಲ್ಪರಜೋಗುಣದಿಂದ ಕೂಡಿದ ರಾಜಸ ರಾಜಸ ಸಾತ್ವಿಕರು ; ವೈಶ್ಯರು ಸಮವಾದ ಸತ್ವರಜೋಗುಣಗಳಿಂದ ಕೂಡಿದ ರಾಜಸರಾಜಸಸಾತ್ವಿಕರು ; ಶೂದ್ರರು ಅಲ್ಪವಾದ ತಮೋಗುಣ ದಿಂದಲೂ ಅದಕ್ಕಿಂತ ಹೆಚ್ಚಾದ ರಜೋಗುಣದಿಂದಲೂ ಕೂಡಿದ ತಾಮಸ ರಾಜಸಸಾತ್ವಿಕರು. ಇನ್ನು, ರಾಜಸಸಾತ್ವಿಕಸಾತ್ವಿಕರಾದ ವಿಪ್ರರಲ್ಲಿ ಶಿಖಾ ಯಜ್ಞೋಪವೀತಹೀನರಾದ ಪರಮಹಂಸರು ಶುದ್ಧಸತ್ವಾತ್ಮಕರು ; ಯಜ್ಞೋಪವೀತವಿದ್ದು ಶಿಖಾಮಾತ್ರರಹಿತರಾದ ಏಕದಂಡಿಗಳೆಂಬ ಹಂಸರು (ಯತಿಗಳು) ಸ್ವಲ್ಪರಜೋಗುಣಯುಕ್ತವಾದ ಸತ್ವವಂತರು ; ಇವರಿಗಿಂತ ಸ್ವಲ್ಪ ಅಧಿಕವಾದ ರಜೋಗುಣಯುಕ್ತ ಸತ್ವವಂತರು ತ್ರಿದಂಡಿಸನ್ಯಾಸಿಗಳು —ಇವರೇ ಶಿಖಾಯಜ್ಞೋಪವೀತಗಳುಳ್ಳ ಗ್ರಾಮೈಕರಾತ್ರಿಸಂಚಾರಿಗಳಾದ ಬಹೂದಕರೆಂಬುವರು ; ಇವರಿಗಿಂತ ಸ್ವಲ್ಪಹೆಚ್ಚಾದ ರಜೋಗುಣಯುಕ್ತ ವಾದ ಸತ್ವವಂತರು ಕುಟೀಚಕರೆಂಬ ತ್ರಿದಂಡಿಗಳು ; ಇವರು ಶಿಖಾ ಯಜ್ಞೋಪವೀತಗಳುಳ್ಳವರಾಗಿ ಯಾವಜ್ಜೀವವೂ ಸ್ವಪುತ್ರದತ್ತಅಶನದಿಂದ ಜೀವಿಸುವರು. ತಾಮಸರೂ ಸಹ ಸಾತ್ವಿಕಾದಿಭೇದದಿಂದ ತ್ರಿವಿಧರು. ಅವರಲ್ಲಿ ನರಾಧಮರು ಸಾತ್ವಿಕತಾಮಸರು (ಅತ್ಯಲ್ಪವಾದಸತ್ವಗುಣ ಸಂಬಂಧವುಳ್ಳವರು) ; ದೈತ್ಯಭೃತ್ಯರು ರಾಜಸತಾಮಸರು ; ಮಹಾದೈತ್ಯರು ತಾಮಸತಾಮಸರು. ಹೀಗೆ ತಾರತಮ್ಯಾನುಸಾರವಾಗಿ ತ್ರಿಗುಣಗಳು ಜೀವ-ಸ್ವರೂಪವನ್ನು ಸಂಬಂಧಿಸಿಕೊಂಡಿದ್ದು ಬಂಧಕಗಳಾಗುವುವು. ಅಲ್ಲದೆ ಜೀವ-ಸ್ವರೂಪವನ್ನು ವಿವೇಕಿಸಿಕೊಳ್ಳಲುಸಹ ಸಹಾಯಕವಾಗುತ್ತವೆ. (೪೦)

ಅರ್ಜುನ—ಬ್ರಾಹ್ಮಣಾದಿಅಧಿಕಾರಿಗಳ ಗುಣಕೃತವಾದ ಕರ್ಮಗಳೂ ಭಿನ್ನ ಭಿನ್ನಗಳಾಗಿರುವುವೇ ?

ಶ್ರೀಕೃಷ್ಣ—ಅಹುದು, ಅರ್ಜುನ! ಬ್ರಾಹ್ಮಣತ್ವಾದಿ ಆಯಾಸ್ವಭಾವಾನುಬಂಧಿಗಳಾದ (ಸ್ವಭಾವಾನುಗುಣವಾಗಿ ಸಂಬಂಧಿಸಿಕೊಂಡಿರುವ) ಸತ್ವಾದಿಗುಣಗಳಿಂದ ಬ್ರಾಹ್ಮಣಾದಿಗಳ ಕರ್ಮಗಳೂ ಪ್ರತ್ಯೇಕವಾಗಿ ಭಿನ್ನಗಳಾಗಿರುವುವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು, ವೇದಾಧಿಕಾರವುಳ್ಳವರು; ಶೂದ್ರರು ಅನಧಿಕಾರಿಗಳು. ಇವರ ಗುಣಕೃತಕರ್ಮಗಳೂ ಪ್ರತ್ಯೇಕವಾಗಿ ಭಿನ್ನಗಳಾಗಿರುವುದೂ ಸಹಜವಲ್ಲವೇ ? ಅವುಗಳನ್ನು ವಿವರಿಸುವೆನು, ಕೇಳು. (೪೧). ಶಮ (ಭಗವನ್ನಿಷ್ಠಬುದ್ಧಿ), ದಮ (ಇಂದ್ರಿಯನಿಗ್ರಹ), ತಪಸ್ಸು (ಬ್ರಹ್ಮಚರ್ಯಾದಿಗಳು), ಶೌಚ (ಬಾಹ್ಯಾಭ್ಯಂತರ ಶುದ್ಧಿ), ಕ್ಷಾಂತಿ (ಕ್ರೋಧಹುಟ್ಟದಿರುವಿಕೆ), ಆರ್ಜವ (ಋಜುತ್ವ ಅಥವಾ ಏಕತ್ವ) ಮನೋವಾಕ್ಕಾಯಕರ್ಮಗಳಲ್ಲಿ ವೈಪರೀತ್ಯವಿಲ್ಲದಿರುವಿಕೆ), ಜ್ಞಾನ—(ಸಾಮಾನ್ಯಜ್ಞಾನ), ವಿಜ್ಞಾನ (ವಿಶೇಷಜ್ಞಾನ), ಮತ್ತು ಆಸ್ತಿಕ್ಯ (ಧರ್ಮಾದಿಗಳುಂಟು ಮತ್ತು ಅವುಗಳಿಂದ ಪ್ರಯೋಜನವುಂಟೆಂಬಭಾವನೆ), ಇವು ಬಾಹ್ಮಣಸಹಜವಾದ ಧರ್ಮಗಳು* (೪೨). ಶೌರ್ಯ (ಭಯರಹಿತನಾಗಿರುವುದು), ತೇಜಸ್ಸು (ಶರೀರಗತವಾದ ವಿಶೇಷ ವರ್ಚಸ್ಸು), ಧೃತಿ (ಧೈರ್ಯ), ದಕ್ಷತೆ (ಪಾಟವ, ಯುದ್ಧದಲ್ಲಿ ಹಿಮ್ಮೆಟ್ಟಿ ಓಡದಿರುವುದು), ದಾನ (ಗೋ ಭೂ ಹಿರಣ್ಯಾದಿಗಳನ್ನು ಸತ್ಪಾತ್ರರಲ್ಲಿ ಅರ್ಪಿಸುವುದು), ಮತ್ತು ಈಶ್ವರಭಾವ (ದಂಡನಾದಿ ಕರ್ತೃತ್ವ—ದುಷ್ಟರನ್ನು ಶಿಕ್ಷಿಸುವುದರಲ್ಲಿ ಸಾಮರ್ಥ್ಯ), ಇವು ಕ್ಷತ್ರಿಯ ಸಹಜವಾದ ಕರ್ಮಗಳು.

ಅರ್ಜುನ—ಬ್ರಾಹ್ಮಣಧರ್ಮಗಳೆಂದು ಹೇಳಲಾದ ಶಮದಮಾದಿಗಳು ಕ್ಷತ್ರಿಯಧರ್ಮಗಳಲ್ಲವೆಂದು ತಿಳಿಯಲೇ ? ಇವು ಕ್ಷತ್ರಿಯರಲ್ಲಿರುವುದಿಲ್ಲವೆಂದೋ ಅಥವಾ ಇರಕೂಡದೆಂದೋ ?

---

*ಸೂಚನೆ:— ಶ್ರೇಯಃಕಾರಣಗಳಾದ ಕರ್ಮಗಳು ಧರ್ಮಗಳೆಂದು ಕರೆಯಲ್ಪಡುತ್ತವೆ. ಉಕ್ತಧರ್ಮಗಳು ಮನೋವಾಕ್ಕಾಯರೂಪಗಳೆಂಬ ಮೂರರಲ್ಲಿ ಒಂದು ಗುಂಪಿಗೆ ಸೇರುತ್ತವೆ.

ಶ್ರೀಕೃಷ್ಣ—ಹಾಗಲ್ಲ ಪಾರ್ಥ! ಶಮದಮಾದಿಗಳು ಕ್ಷತ್ರಿಯರಿಗೂ ಆವಶ್ಯಕ. ಅವು ಅವರಲ್ಲಿಯೂ ಇರುವುವು; ಇರಕೂಡದೆಂಬುದು ಸರ್ವಥಾ ಅಯುಕ್ತವು. ಆದರೆ ಶಮಾದಿಧರ್ಮಗಳು ಕ್ಷತ್ರಿಯಧರ್ಮಗಳಲ್ಲಿ ಕಡಿಮೆಯಾಗಿದ್ದು ಉಕ್ತವಾದ ಕ್ಷಾತ್ರಧರ್ಮಗಳು ಅಧಿಕವಾಗಿರುತ್ತವೆ. ಬ್ರಾಹ್ಮಣರಲ್ಲಿ ಶಮಾದಿಗಳು ಅಧಿಕವಾಗಿರುತ್ತವೆ; ಆದ್ದರಿಂದ ಅವು ಬ್ರಾಹ್ಮಣಧರ್ಮಗಳೆಂದು ಹೇಳಲ್ಪಡುತ್ತವೆ. ಮನುಷ್ಯೋತ್ತಮರ ದೆಶೆಯಿಂದ ಉತ್ತಮರಾದ ಚಕ್ರವರ್ತಿಗಳಲ್ಲಿ (ಚಕ್ರವರ್ತಿನಾಮದ ಒಂದು ವಿಶಿಷ್ಟ ಜೀವಸಮುದಾಯ) ಬ್ರಾಹ್ಮಣರಿಗಿಂತ ಅಧಿಕವಾದ ಶಮಾದಿಗಳು ಇರುತ್ತವೆ. ಆದರೆ ಅವರು ಇಲ್ಲಿ ವಿವಕ್ಷಿತರಲ್ಲ. ಕ್ಷತ್ರಿಯಸಾಮಾನ್ಯಧರ್ಮಗಳನ್ನು ನಿರೂಪಿಸುತ್ತಿರುವೆನು.

ಅರ್ಜುನ—ಕ್ಷತ್ರಿಯಧರ್ಮಗಳು ಬ್ರಾಹ್ಮಣರಲ್ಲಿರುವುವೋ, ಹೇಗೆ?

ಶ್ರೀಕೃಷ್ಣ—ಬ್ರಾಹ್ಮಣರಲ್ಲಿ ಕ್ಷತ್ರಿಯಧರ್ಮಗಳು ಶಮಾದಿಗಳಿಗಿಂತ ಕಡಿಮೆಪ್ರಮಾಣದಲ್ಲಿರುವುವು. ಕೆಲವು ಕ್ಷತ್ರಿಯಧರ್ಮಗಳು ಬ್ರಾಹ್ಮಣರಿಗೆ ನಿಷೇಧಿಸಲ್ಪಡುತ್ತವೆ.* (೪೩). ಕೃಷಿ (ಭೂವ್ಯವಸಾಯದಿಂದ ಜೀವಿಸುವುದು), ಗೋರಕ್ಷಣೆ, ವಾಣಿಜ್ಯ (ವ್ಯಾಪಾರ), ಇವು ವೈಶ್ಯಸಹಜವಾದ ಧರ್ಮಗಳು. ವೈಶ್ಯರು ಕ್ಷತ್ರಿಯರಿಗಿಂತ ಊನವಾದ (ಕಡಿಮೆ ಪ್ರಮಾಣದ) ಶಮಾದಿಗಳುಳ್ಳವರೆಂದು ತಿಳಿ. ಪರಿಚರ್ಯವು (ಇತರ ಮೂರುವರ್ಣದವರ ಸೇವಾರೂಪವಾದ ಕರ್ಮವು) ಶೂದ್ರಸಹಜವಾದ ಧರ್ಮವು. ಇವರಲ್ಲಿ ವೈಶ್ಯರಿಗಿಂತ ಕಡಿಮೆಯಾದ ಶಮಾದಿಗಳಿರುವುವು. (೪೪)

ಅರ್ಜುನ— ಬ್ರಾಹ್ಮಣಾದಿವರ್ಣಗಳೂ ಅವುಗಳ ಕರ್ಮಗಳೂ ಪ್ರತ್ಯೇಕವಾಗಿರಲಿ, ಅದರಿಂದೇನು?

ಶ್ರೀಕೃಷ್ಣ—ಬ್ರಾಹ್ಮಣಾದಿವರ್ಣಗಳನ್ನು ಹಾಗೂ ಅವುಗಳ ಪ್ರತ್ಯೇಕವಾದ ಕರ್ಮಗಳನ್ನೂ ನಿಷ್ಪ್ರಯೋಜನವಾಗಿ ವಿವರಿಸುತ್ತಿರುವೆನೆಂದು

ಸೂಚನೆ:—'ಪ್ರಸಹ್ಯ ವಿತ್ತಾಹರಣಂ ಶಾರೀರೋ ದಂಡ ಏವ ಚ। ಅಶಿಷ್ಟಾನಾಂ ಶಾಸನಂ ಚ ತಥೈವಾರ್ಥವಿನಾಶನಂ। ಏಷ ಈಶ್ವರಭಾವಸ್ತ್ವನ್ನ ಕಾರ್ಯಃ ಕ್ಷತ್ರಿಯೇತರೈಃ॥' ಎಂಬ ಸ್ಮೃತಿಯು ದುಷ್ಟಶಾಸನರೂಪವಾದ ಈ ಕರ್ಮಗಳನ್ನು ಕ್ಷತ್ರಿಯರಲ್ಲದವರು ಮಾಡಲಾಗದೆಂದು ನಿಷೇಧಿಸುತ್ತದೆ.

ತಿಳಿಯಬೇಡ. ಆಯಾ ವರ್ಣದವರು ಆಯಾ ವರ್ಣಕ್ಕೆ ಯೋಗ್ಯವಾದ ಕರ್ಮಗಳಲ್ಲಿ ತೊಡಗಿದರೆ, ಜ್ಞಾನದ್ವಾರಾ ಮುಕ್ತಿಯನ್ನು ಹೊಂದುವರು. ಅದು ಹೇಗೆಂಬ ಪ್ರಕಾರವನ್ನೂ ವಿವರಿಸುವೆನು, ಕೇಳು. (೪೫) ಸಕಲ ಪ್ರಾಣಿಗಳಿಗೆ ಸರ್ವವಿಧವಾದ ಪ್ರವೃತ್ತಿಗಳೂ (ಚೇಷ್ಟೆಯೂ), ಚರಾಚರಾತ್ಮಕವಾದ ಸರ್ವಜಗತ್ತನ್ನು ವ್ಯಾಪಿಸಿರುವ ಪರಮಾತ್ಮನಿಂದಲೇ ಉಂಟಾಗುವುವು. ಶಮದಮಾದಿಪೂರ್ವಕ ಸ್ವಯೋಗ್ಯಕರ್ಮಗಳಿಂದ ಆ ಭಗವಂತನನ್ನು ಪೂಜಿಸಿ (ತಾನು ಮಾಡುವ ಸಕಲ ಕರ್ಮಗಳೂ ಭಗವಂತನ ಆರಾಧನೆಯೆಂಬ ಭಾವನೆಯಿಂದ ಆತನಿಗರ್ಪಿಸಿ) ಬ್ರಾಹ್ಮಣಾದಿ ಮಾನವರು ಮೋಕ್ಷವನ್ನು ಪಡೆಯುತ್ತಾರೆ. (೪೬)

ಅರ್ಜುನ—ಸ್ವಕರ್ಮಗಳನ್ನೇ ಆಚರಿಸಬೇಕೆಂಬುದೇಕೆ? ಬ್ರಾಹ್ಮಣನು ಬ್ರಾಹ್ಮಣವರ್ಣದ ಕರ್ಮಗಳನ್ನು ಚೆನ್ನಾಗಿ ಆಚರಿಸಲು ಶಕ್ತನಲ್ಲದಿದ್ದರೆ, ಚೆನ್ನಾಗಿ ಆಚರಿಸಲು ಬರುವಂತಹ ಅನ್ಯವರ್ಣದವುಗಳೆಂದು ಹೇಳಲಾಗುವ ಬೇರೆ ಕರ್ಮಗಳಿಂದ ಭಗವಂತನನ್ನು ಪೂಜಿಸಲಾಗದೇ?

ಶ್ರೀಕೃಷ್ಣ— ಇಲ್ಲ, ಹಾಗಾಗದು. ಸ್ವಧರ್ಮದಲ್ಲಿಯೇ ನಿರತನಾಗಬೇಕಾದುದು ಅತ್ಯವಶ್ಯಕವು. ಜೀವಸ್ವಭಾವವು ತಾರತಮ್ಯಯುಕ್ತವಾದುದೆಂದೂ, ಸ್ವಭಾವಾನುಗುಣವಾಗಿ ಸತ್ವಾದಿಗುಣಗಳು ಸಂಬಂಧಿಸಿಕೊಂಡಿರುವುವೆಂದೂ ಹೇಳಿದೆನಲ್ಲವೇ? ಗುಣಕೃತಕರ್ಮಗಳು ಗುಣಾನುಸಾರವಾಗಿರುವುದರಿಂದಲೇ ಅವು ಜೀವಸ್ವಭಾವಾನುಗುಣವೂ ಎಂದು ಸಿದ್ಧವಾಗುತ್ತವೆ. ಸ್ವಭಾವಾನುಗುಣವಾದ ಕರ್ಮಗಳನ್ನು ಬಿಟ್ಟು, ಅಸ್ವಾಭಾವಿಕಕರ್ಮಗಳಲ್ಲಿ ತೊಡಗಿದರೆ ಸ್ವಭಾವದ ಪರಿಪೂರ್ಣತೆಯನ್ನು (ಸ್ವರೂಪಾವಿರ್ಭಾವವನ್ನು) ಹೊಂದಬಹುದೇ? ಹಾಗೆಂದೂ ಆಗದು. ಆದ್ದರಿಂದ ಸ್ವೋಚಿತಕರ್ಮಗಳನ್ನೇ ಆಚರಿಸಬೇಕು. ಚೆನ್ನಾಗಿ ಆಚರಿಸಲ್ಪಡುವ ಪರಧರ್ಮಕ್ಕಿಂತಲೂ ವಿಗುಣವಾದ (ನ್ಯೂನವಾದ ಅಥವಾ ದೋಷಯುಕ್ತವಾದ) ಸ್ವಧರ್ಮವೇ ಪುರುಷಾರ್ಥಸಾಧನವೆಂದು ತಿಳಿ.

ಅರ್ಜುನ— ವಿಗುಣವಾದುದು ಶ್ರೇಯಃಕಾರಣವಾಗುವುದೆಂತು?

ಶ್ರೀಕೃಷ್ಣ— ಸ್ವಭಾವನಿಯತವಾದ (ಸ್ವವಿಹಿತವಾದ) ಕರ್ಮವನ್ನು ಮಾಡುವವನು ತ್ರೈಗುಣ್ಯನಿಮಿತ್ತವಾದ ದೋಷವನ್ನು ಹೊಂದುವುದಿಲ್ಲ. (೪೭)

ಅರ್ಜುನ—ಅದೇಕೆ? ದೋಷಯುಕ್ತವಾದ ಕರ್ಮದಿಂದ ದುಷ್ಟಫಲ ವುಂಟಾಗುವುದಿಲ್ಲವೇ? ದೋಷವಿಲ್ಲದಂತೆ ಆಚರಿಸಲು ಬರುವ ಕರ್ಮ ಗಳನ್ನೇ ಮಾಡಿ ಭಗವಂತನಿಗೆ ಅರ್ಪಿಸಬಹುದಲ್ಲವೇ?

ಶ್ರೀಕೃಷ್ಣ— ಹೇ ಕೌಂತೇಯ! ಹೊಗೆಯಿಂದ ಆವರಿಸಲ್ಪಟ್ಟ ಅಗ್ನಿಯಂತೆ ಸರ್ವಕರ್ಮಗಳೂ (ಅಂಗವೈಕಲ್ಯಾದಿ) ದೋಷದಿಂದ ಕೂಡಿಯೇ ಇರುವುವು. ಯಾವ ನ್ಯೂನತೆಯೂ ಇಲ್ಲದ ಕರ್ಮವೆಂಬುದು ಇದೆಯೇ? ವಿಚಾರಮಾಡು. ಆದುದರಿಂದ ಸಹಜಕರ್ಮವನ್ನು (ಸ್ವಧರ್ಮ ವನ್ನು) ಸದೋಷವಾದರೂ ಬಿಡಕೂಡದು; ಅದಷ್ಟು ನಿರ್ದುಷ್ಟವಾಗು ವಂತೆ ಯತ್ನಿಸಬೇಕು; ತಿಳಿದೆಯಾ? (೪೮).

ಅರ್ಜುನ— ಸ್ವಕರ್ಮಗಳನ್ನಾಚರಿಸುವಮಾತ್ರದಿಂದ ಮೋಕ್ಷವು ದೊರೆಯುವುದೆಂತು? ಅವು ಮೋಕ್ಷಪ್ರಾಪಕವಾಗುವ ಪ್ರಕಾರವನ್ನು ವಿವರಿಸುವೆನೆಂದು ಹೇಳಿದೆಯಲ್ಲವೇ? ಅದನ್ನೂ ವಿವರಿಸು. ಸ್ವಕರ್ಮವು ಬೇರಾವ ಲಕ್ಷಣಯುಕ್ತವಾಗಿರಬೇಕು ಮತ್ತು ಹೇಗೆ ಆಚರಿಸಲ್ಪಡ ಬೇಕೆಂಬುದನ್ನು ತಿಳಿಯಲಿಚ್ಛಿಸುವೆನು.

ಶ್ರೀಕೃಷ್ಣ— ಸ್ವಕರ್ಮನಿರತನು ವಿರಕ್ತನಾಗಿರಬೇಕು; ಶಬ್ದಾದಿ ವಿಷಯಗಳಲ್ಲಿ ಆಸಕ್ತನಾಗಬಾರದು. ಮನಸ್ಸನ್ನು ತನ್ನ ವಶದಲ್ಲಿಟ್ಟು ಕೊಂಡವನಿಗೆ ಮಾತ್ರ ಇದು ಸಾಧ್ಯವಾಗುವುದು. ವೈಷಯಿಕಸುಖದ ಹಂಬಲವನ್ನೂ, ಅಲ್ಪಗಳಾದ ಸ್ವರ್ಗಾದಿಆಮುಷ್ಮಿಕಸುಖಗಳ ಆಶೆಯನ್ನೂ ಪರಿತ್ಯಾಗಮಾಡಿದವನೇ ನಿಜವಾದ ವಿರಕ್ತನು. ಕಾಮ್ಯಕರ್ಮಗಳ ತ್ಯಾಗ ದಿಂದಲೂ ಸಕಲಕರ್ಮಗಳನ್ನು ಭಗವಂತನಲ್ಲಿ ಅರ್ಪಿಸುವುದರಿಂದಲೂ (ಸನ್ಯಾಸದಿಂದಲೂ) ಮೋಕ್ಷೋಪಾಯದ ಸಿದ್ಧಿಯನ್ನು ಹೊಂದುವನು. ಪ್ರಾರಬ್ಧಕರ್ಮದಿಂದ ಹೊರತಾದ ಸಕಲ ಅನಿಷ್ಟಕರ್ಮಗಳೂ ನಾಶ

ಹೊಂದುವುವು. ಪ್ರಾರಬ್ಧಕರ್ಮವನ್ನು ಭೋಗಿಸಿದನಂತರ ಮುಕ್ತನಾಗುವನು. (೪೯)

ಅರ್ಜುನ— ಮೋಕ್ಷೋಪಾಯದ ಸಿದ್ಧಿಯೆಂದರೇನು?

ಶ್ರೀಕೃಷ್ಣ— ಕೇಳು, ಕೌಂತೇಯ! ಶ್ರೇಷ್ಠವಾದ ತತ್ತ್ವಜ್ಞಾನವೇ ಮೋಕ್ಷೋಪಾಯವು. ಅದರ ಸಿದ್ಧಿಯೆಂದರೆ ಅಪರೋಕ್ಷಜ್ಞಾನವು. ಅದನ್ನು ಹೊಂದಿದವನು ಮೊದಲು ಬ್ರಹ್ಮಶಬ್ದವಾಚ್ಯಳಾದ ಲಕ್ಷ್ಮಿಯನ್ನು ಹೊಂದುವನು. ಲಕ್ಷ್ಮಿಯನ್ನು ಹೊಂದುವುದೆಂದರೇನು ಮತ್ತು ಹೇಗೆ ಎಂಬುದನ್ನು ಸಂಕ್ಷೇಪವಾಗಿ ಹೇಳುವೆನು, ಕೇಳು. (೫೦) ವಿಷಯಾಸಕ್ತವಾಗದ (ವಿಶುದ್ಧವಾದ) ಬುದ್ಧಿಯುಕ್ತನಾಗಿ, ಧೃತಿಯಿಂದ (ಧೈರ್ಯದಿಂದ ಸ್ತಂಭನಶಕ್ತಿಯಿಂದ) ಮನಸ್ಸನ್ನು ನಿಗ್ರಹಿಸಿ (ವಿಷಯಗಳಿಂದ ನಿವರ್ತಿಸಿ) ಶಬ್ದಾದಿವಿಷಯಗಳ ಅನುಭವೇಚ್ಛೆಯನ್ನು ಬಿಟ್ಟು, ಅನಿವಾರ್ಯವಾಗಿ ಸಂಭವಿಸುವ ವಿಷಯಸಂಗದಲ್ಲಿ ರಾಗದ್ವೇಷಗಳನ್ನು ಪರಿತ್ಯಾಗಮಾಡಿ, (೫೧) ಜನಸಂಮರ್ದವಿಲ್ಲದ ದೇಶದಲ್ಲಿ ವಾಸಿಸುತ್ತಾ, ಲಘುವಾದ ಆಹಾರವನ್ನು ಸೇವಿಸುವವನೂ, ಸದ್ವಿಷಯಗಳಲ್ಲಿಯೇ ನಿಯಮಿತವಾದ ವಾಕ್, ದೇಹ, ಮನಸ್ಸುಗಳುಳ್ಳವನೂ (ಶರೀರ, ಮನಸ್ಸು ಮತ್ತು ವಾಗ್ವ್ಯಾಪಾರಗಳನ್ನು ದುಷ್ಟವಿಷಯಗಳ ಸಂಬಂಧವಿಲ್ಲದಂತೆ ಎಚ್ಚರಿಕೆಯಿಂದಿರುವವನೂ) ಭಗವದ್ಧ್ಯಾನರೂಪವಾದ ಉಪಾಯವನ್ನಾಶ್ರಯಿಸಿದವನೂ, ವೈರಾಗ್ಯವನ್ನಾಶ್ರಯಿಸಿ, (೫೨) ಅಹಂಕಾರ (ಸ್ವಕರ್ತೃತ್ವಾಭಿಮಾನ), ಬಲ (ಸ್ವಸಾಮರ್ಥ್ಯದ ಅಭಿಮಾನ), ದರ್ಪ (ಭಯಕಾರಣವನ್ನು ದುರ್ಲಕ್ಷಿಸುವುದು), ಕಾಮ (ವಿಷಯಾಭಿಲಾಷೆ), ಕ್ರೋಧ (ಕೋಪ), ಮತ್ತು ಪರಿಗ್ರಹ (ದುಷ್ಟವಸ್ತುಸಂಗ್ರಹ)ಗಳನ್ನು ಬಿಟ್ಟವನಾಗಬೇಕು. ಕರ್ಮಗಳಲ್ಲಿ ಮದೀಯತ್ವಬುದ್ಧಿ (ನನ್ನದೆಂಬ ಅಭಿಮಾನ) ರಹಿತನಾಗಿರಬೇಕು; ಶಾಂತನಾಗಿರಬೇಕು (ಕೋಪಕಾರಣವಿದ್ದರೂ ಕೋಪವು ಹುಟ್ಟದಿರಬೇಕು). ಆತನೇ ಪರಬ್ರಹ್ಮನಲ್ಲಿ ಸರ್ವದಾ ಮನಸ್ಸನ್ನು ಸ್ಥಾಪಿಸಲು ಶಕ್ತನಾಗುತ್ತಾನೆ. (೫೩) ಈತನು ಮೊದಲಿಗೆ ಮಹಾಲಕ್ಷ್ಮಿಯನ್ನು ಪಡೆಯುತ್ತಾನೆ (ಆಕೆಯ ಅನುಗ್ರಹವನ್ನು ಪಡೆಯುತ್ತಾನೆ). ತ್ರಿಗುಣಾಭಿಮಾನಿಯೂ

ಗುಣಬಂಧಕಳೂ ಆದ ಮಹಾಲಕ್ಷ್ಮಿಯು ಪ್ರಸನ್ನಳಾದರೆ ಮನಸ್ಸು ಯತ್ನವಿಲ್ಲದೇ (ಅನಾಯಾಸವಾಗಿ) ವಿಷಯಗಳಲ್ಲಿ ಪ್ರವರ್ತಿಸದ ಸ್ಥಿತಿಯನ್ನು ಹೊಂದುತ್ತದೆ. ಮನಃಪ್ರಸನ್ನತೆಯುಳ್ಳವನು ವಿಷಯಗಳನ್ನು ಇಚ್ಛಿಸುವುದಿಲ್ಲ; ಶೋಕಿಸುವುದಿಲ್ಲ; ಸರ್ವಪ್ರಾಣಿಗಳಲ್ಲಿ ಸಮನಾಗುವನು. (ರಾಗದ್ವೇಷರಹಿತನಾಗುವನು). ನನ್ನಲ್ಲಿ ಶ್ರೇಷ್ಠತಮವಾದ ಭಕ್ತಿಯನ್ನು ಪಡೆಯುತ್ತಾನೆ. (೫೪) ನಾನು ದೇಶಕಾಲಗುಣಗಳಿಂದ ವ್ಯಾಪ್ತನೆಂಬುದನ್ನೂ, ಅನಂತನಾಮರೂಪಗಳುಳ್ಳವನೆಂಬುದನ್ನೂ ಸ್ವಯೋಗ್ಯತಾನುಸಾರವಾಗಿ ಯಥಾರ್ಥವಾಗಿ ತಿಳಿಯುತ್ತಾನೆ. ಭಕ್ತಿಬಲದಿಂದ ಹೀಗೆ ನನ್ನನ್ನು ತಿಳಿದು ನಂತರ ನನ್ನನ್ನೇ ಪ್ರವೇಶಿಸುತ್ತಾನೆ (ಮುಕ್ತನಾಗುತ್ತಾನೆ). (೫೫)

ಅರ್ಜುನ— ನಿನ್ನ ಪ್ರಾಪ್ತಿಗೆ ಕಾರಣವಾದ ಅಂತರಂಗಸಾಧನಗಳನ್ನು ವಿಸ್ತಾರದಿಂದ ಶ್ರವಣಮಾಡಿದೆನು. ಮುಖ್ಯಾಂಶಗಳು ಬುದ್ಧಿಯಲ್ಲಿ ಸ್ಥಿರವಾಗಿ ನಿಲ್ಲಲು ಅನುಕೂಲಿಸುವಂತೆ ಸಂಗ್ರಹಿಸಿ ಪುನಃ ಹೇಳುವವನಾಗು ಪ್ರಭೋ! ಸ್ವೋಚಿತಕರ್ಮಗಳಿಂದ ಭಗವಂತನನ್ನು ಅರ್ಚಿಸಬೇಕೆಂದು ಹೇಳಿದೆಯಲ್ಲವೇ? ಕರ್ಮಕರಣದ ವೈಶಿಷ್ಟ್ಯವನ್ನೂ, ಫಲವನ್ನೂ ಮತ್ತೆ ಕೇಳಲಿಚ್ಛಿಸುವೆನು.

ಶ್ರೀಕೃಷ್ಣ—ನನ್ನನ್ನೇ ಆಶ್ರಯಿಸಿ (ನನ್ನಲ್ಲಿಯೇ ಅರ್ಪಿಸುವವನಾಗಿ) ಸಕಲವಿಹಿತಕರ್ಮಗಳನ್ನು ಸದಾ ಮಾಡುವವನು, ನನ್ನ ಪ್ರಸಾದದಿಂದ, ಆದ್ಯಂತರಹಿತನೂ ನಿತ್ಯನಿರ್ವಿಕಾರನೂ ಆದ ನನ್ನನ್ನೇ ಹೊಂದುತ್ತಾನೆ. (ಸ್ವಯೋಗ್ಯತಾನುಗುಣವಾಗಿ, ನನ್ನ ವೈಕುಂಠಾದಿಸ್ಥಾನವಿಶೇಷವನ್ನೋ, ಸಮಾನಸ್ವರೂಪವನ್ನೋ ಅಥವಾ ನನ್ನಲ್ಲಿ ಪ್ರವೇಶರೂಪವಾದ ಸಾಯುಜ್ಯವನ್ನೋ ಹೊಂದುತ್ತಾನೆ). ಆದುದರಿಂದ ನನಗರ್ಪಿಸಲ್ಪಡದ ಯಾವುದೊಂದು ಕರ್ಮವನ್ನೂ ಮಾಡತಕ್ಕದ್ದಲ್ಲ. (೫೬) ಮತ್ಪರನಾಗಿ (ನಾನೇ ಸರ್ವೋತ್ತಮನೆಂಬ ನಿಶ್ಚಯವುಳ್ಳವನಾಗಿ), ಸರ್ವಕರ್ಮಗಳನ್ನು ನನಗರ್ಪಿಸಿ, ಪ್ರತ್ಯಾಹಾರಾದಿರೂಪ (ಮನಸ್ಸನ್ನು ವಿಷಯಗಳಿಂದ ಸೆಳೆದುಕೊಳ್ಳುವುದೆಂಬ) ಬುದ್ಧಿಯೋಗವನ್ನಾಶ್ರಯಿಸಿ, ಸದಾ ಮಚ್ಚಿತ್ತನಾಗು

(ಚಿತ್ತವನ್ನು ನನ್ನಲ್ಲಿ ಸ್ಥಾಪಿಸು). ತ್ರೈವಿದ್ಯರೂ ವೇದೋಕ್ತ ಕರ್ಮಗಳ ನ್ನಾಚರಿಸಿ ಅಂತ್ಯದಲ್ಲಿ ನನಗರ್ಪಿಸುವರಾದ್ದರಿಂದ ಅವರಿಗೂ ಇದೇ ಫಲವು ದೊರೆಯುಬಹುದೆಂದು ಶಂಕಿಸದಿರು. ಅವರ ಕರ್ಮಕರಣವು ಮಚ್ಚಿತ್ತತ್ವ ಮತ್ತು ಮತ್ಪರತ್ವಗಳೆಂಬ ವಿಶೇಷಗಳಿಂದ ರಹಿತವಾದುದು. (೫೭) ಹೀಗೆ ನನ್ನಲ್ಲಿಯೇ ಬಂಧಿಸಲ್ಪಟ್ಟ ಮನಸ್ಸುಳ್ಳವನು, ನನ್ನ ಪ್ರಸಾದದಿಂದ ದುಸ್ತರವಾದ ಸಕಲ ಕಷ್ಟಗಳನ್ನು ದಾಟುವನು. ಆದುದರಿಂದ, ಪಾರ್ಥ! ಸ್ವವಿಹಿತಕರ್ಮಗಳಿಂದ ಭಗವಂತನನ್ನು ಆರಾಧಿಸುವುದೇ ಪರಮ-ಧರ್ಮವು. ಕ್ಷತ್ರಿಯನಾದ ನಿನಗೆ ಯುದ್ಧವು ಸ್ವವಿಹಿತ ಕರ್ಮವು. ಅದನ್ನು, ಭಗವತ್ಪ್ರೀತ್ಯರ್ಥವಾಗಿ ಅವಶ್ಯವಾಗಿ ಆಚರಿಸಬೇಕು. ಹಾಗೆ ಮಾಡದಿದ್ದರೆ ಪ್ರಾಪ್ತವಾಗುವ ಅನಿಷ್ಟವನ್ನೂ ಗಮನಿಸು. 'ನಾನು ಯುದ್ಧಮಾಡುವುದಿಲ್ಲ' ಎಂಬ ಅಹಂಕಾರದಿಂದ ಯುಕ್ತನಾಗಿ ನನ್ನ ಮಾತುಗಳನ್ನು ದುರ್ಲಕ್ಷಿಸಿದರೆ ಪುರುಷಾರ್ಥವನ್ನೇ ಕಳೆದುಕೊಳ್ಳುವಿ. (೫೮) ಅಲ್ಲದೇ ಯುದ್ಧಮಾಡಲಿಕ್ಕೂ ಬಿಡಲಿಕ್ಕೂ ನೀನು ಸ್ವತಂತ್ರನಲ್ಲ ವಾದುದರಿಂದ ಯುದ್ಧಮಾಡದಿರುವುದೂ ನಿನಗೆ ಶಕ್ಯವಿಲ್ಲ. ಸ್ವತಂತ್ರ-ಕರ್ತೃತ್ವವನ್ನಾರೋಪಿಸಿಕೊಂಡು ಯುದ್ಧಮಾಡುವುದಿಲ್ಲವೆಂದು ಭಾವಿಸು ವುದು ವ್ಯರ್ಥವಾದ ಮನೋನಿಶ್ಚಯವು; ಈಶ್ವರೇಚ್ಛೆಯು ನಿನ್ನನ್ನು ಪ್ರೇರಿಸಿ ಯುದ್ಧಮಾಡಿಸುವುದು. (೫೯)

ಅರ್ಜುನ—ಈಶ್ವರೇಚ್ಛೆಯು ಅಷ್ಟು ಪ್ರಬಲವಾದುದೇ?

ಶ್ರೀಕೃಷ್ಣ—ಹೇ ಕೌಂತೇಯ! ಸಂಸ್ಕಾರಜನ್ಯವಾದ ಸ್ವಕರ್ಮದಿಂದ ನಿಬದ್ಧನಾದ ನೀನು, ಬಂಧುಸ್ನೇಹಮೋಹದಿಂದ ಯುದ್ಧರೂಪವಾದ ಯಾವ ಕರ್ಮವನ್ನು ಮಾಡಲಪೇಕ್ಷಿಸದಿರುವೆಯೋ, ಅದನ್ನು ಭಗವ-ದಿಚ್ಛಾಧೀನನಾಗಿಯಾದರೂ ಮಾಡುವಿ. ಜೀವರನ್ನು ನಿಯಮಿಸುವುದರಲ್ಲಿ ಈಶ್ವರೇಚ್ಛೆಯು ಪ್ರಬಲನಿಮಿತ್ತವು. (೬೦)

ಅರ್ಜುನ—ಈಶ್ವರೇಚ್ಛೆಯು ಹೀಗೆ ಪ್ರವರ್ತಕವೆಂದು ತಿಳಿಯಲು ಈಶ್ವರನೇ ಸರ್ವಪ್ರವರ್ತಕನೆಂದು ಮೊದಲಿಗೆ ನಿಶ್ಚಯವಾಗಬೇಕಲ್ಲವೇ?

ಈಶ್ವರನು ಸರ್ವಪ್ರವರ್ತಕನೆಂಬಲ್ಲಿ ಸಂತತಸ್ಮರಣೆಯಲ್ಲಿಡಬೇಕಾದ ಅಂಶ ವನ್ನು ಸಂಗ್ರಹಿಸಿ ಮತ್ತೊಮ್ಮೆ ನಿರೂಪಿಸು.

ಶ್ರೀಕೃಷ್ಣ—ಈಶ್ವರಸ್ವರೂಪವನ್ನು ಸದಾ ಹೀಗೆ ಚಿಂತಿಸಬೇಕು. ಆತನು ಸಕಲಪ್ರಾಣಿಗಳ ಹೃದಯದಲ್ಲಿರುವನು ; ಶರೀರಗಳೆಂಬ ಯಂತ್ರಗಳನ್ನು ಏರಿ ಕುಳಿತಿರುವ (ದೇಹಾಭಿಮಾನಿಗಳಾಗಿ ದೇಹಗಳಲ್ಲಿರುವ) ಸಕಲಜೀವರನ್ನು ತನ್ನ ಇಚ್ಛಾನುಸಾರವಾಗಿ ನಾನಾಕರ್ಮಗಳಲ್ಲಿ ಪ್ರವರ್ತಿಸಿ, ಸಂಸಾರದಲ್ಲಿ ಸುತ್ತಿಸುವನು. (೬೧) ಈಶ್ವರನು ಸ್ವತಂತ್ರನು, ಜೀವರೆಲ್ಲರೂ ಆತನ ಅಧೀನರು. ಆದುದರಿಂದ ಅಹಂಕರ್ತೃತ್ವಾಭಿಮಾನವನ್ನು ಬಿಟ್ಟು ಈಶ್ವರ ನನ್ನು ಸರ್ವಪ್ರಕಾರದಿಂದ ಶರಣುಹೊಂದು.

ಅರ್ಜುನ—ನಿನ್ನನ್ನೇ ಶರಣುಹೊಂದೆಂದು ಹೇಳದೇ ಈಶ್ವರನನ್ನು ಶರಣುಹೊಂದೆಂದು ಅದೇಕೆ ಹೇಳುತ್ತಿರುವಿ ?

ಶ್ರೀಕೃಷ್ಣ—ಹೇಭಾರತ ! ಈವಿಧವಾದ ಪರೋಕ್ಷನಿರ್ದೇಶವು ಕೃಷ್ಣ-ರೂಪಿಯಾದ ನಾನೇ ಈಶ್ವರನೆಂಬ ನಿಶ್ಚಯಾರ್ಥವನ್ನು ತಿಳಿಸಿಕೊಡುವ ಅಭಿಪ್ರಾಯದಿಂದಲೇ ಆಗಿದೆ. ಈಶ್ವರಾಭಿನ್ನನಾದ ನಾನೇ ಸಕಲರ ಹೃದಯದಲ್ಲಿರುವೆನು. ನನ್ನ ಪ್ರಸಾದದಿಂದ ಉತ್ಕೃಷ್ಟವಾದ ಭಗವನ್ನಿಷ್ಠೆ ಯನ್ನೂ ವೈಕುಂಠಾದಿಶಾಶ್ವತಲೋಕವನ್ನೂ ಹೊಂದುವಿ. (೬೨) ಅತಿ ಗೋಪ್ಯವೂ ಅವಶ್ಯತಿಳಿಯಬೇಕಾದುದೂ ಆದ ಸಕಲವಿಷಯಕಜ್ಞಾನ ವನ್ನೂ ಪೂರ್ವೋಕ್ತಪ್ರಕಾರದಿಂದ ನಿನಗೆ ಉಪದೇಶಿಸಿರುವೆನು. ಏಕೆ, ಅರ್ಜುನ ! ಸುಮ್ಮನಿರುವಿ, ಯುದ್ಧಮಾಡಲೊಲ್ಲೆಯಾ ? ನನ್ನ ಉಪದೇಶ ವನ್ನು ಚೆನ್ನಾಗಿ ವಿಚಾರಮಾಡು ; ನಿನ್ನ ಇಚ್ಛೆಬಂದಂತೆ ಮಾಡು. (೬೩) ನಿಜವಾಗಿಯೂ ನೀನು ನನಗೆ ಅತ್ಯಂತಪ್ರಿಯನು. ಆದುದರಿಂದ ಸಕಲ ಸಾಧನೆಗಳಲ್ಲಿ ಗೋಪ್ಯತಮವಾದ, ನಿನ್ನ ಹಿತಸಾಧಕವಾದ, ಸಾಧನಸಾರ ವನ್ನು ಉಪಸಂಹಾರರೂಪದಿಂದ ಮತ್ತೆ ಹೇಳುವೆನು, ಕೇಳು. (೬೪) ನನ್ನಲ್ಲಿಯೇ ಮನಸ್ಸನ್ನು ಸ್ಥಾಪಿಸು ; ನನ್ನ ಮಹಿಮೆಗಳ ಜ್ಞಾನಪೂರ್ವಕ-ವಾದ ಪ್ರೇಮಧಾರೆಯು ಅವಿಚ್ಛಿನ್ನವಾಗಿರಲಿ; ನಿನ್ನ ಸಕಲಕರ್ಮಗಳೂ ನನ್ನ

ಪೂಜಾರೂಪವಾಗಿರಲಿ; ನನ್ನನ್ನೇ ನಮಸ್ಕರಿಸು. ಸಾರಭೂತವಾದ ಈ ನಾಲ್ಕು ಸಾಧನಗಳಿಂದ, ನನಗೆ ಪ್ರಿಯನಾದುದರಿಂದ, ಅವಶ್ಯವಾಗಿ ನೀನು ನನ್ನನ್ನು ಹೊಂದುವಿ. ಇದು ಸತ್ಯವು; ಪ್ರತಿಜ್ಞೆಮಾಡುವೆನು—ಸಂಶಯ ಪಡದಿರು. (೬೫)

ಅರ್ಜುನ—ಈವಿಧಸಾಧನಸಾರವು ಯಾವಪ್ರಕಾರವಾದುದು ಮತ್ತು ಹೇಗೆ ಲಭ್ಯವೆಂಬುದನ್ನು ಸಂಗ್ರಹಿಸಿ ಮತ್ತೊಮ್ಮೆ ಹೇಳು ಪ್ರಭೋ!

ಶ್ರೀಕೃಷ್ಣ—ಸರ್ವಧರ್ಮಗಳನ್ನು ಪರಿತ್ಯಾಗಮಾಡಿ ನನ್ನನ್ನೇ ಶರಣು ಹೊಂದು. ಉಕ್ತವಾದ ಮನ್ಮನಸ್ಕತೆ, ಮದ್ಭಕ್ತತ್ವ, ಮದ್ಯಾಜಿತ್ವ ಮತ್ತು ನಮಸ್ಕಾರಗಳು ನನ್ನ ಶರಣಾಗತಿರೂಪವಾದವುಗಳೇ. ಶರಣಾಗತಿಯ ಮುಖ್ಯಲಕ್ಷಣಗಳನ್ನು ನಿರೂಪಿಸುವೆನು, ಕೇಳು. ಸರ್ವೋತ್ತಮತ್ವವಿಜ್ಞಾನ-ಪೂರ್ವಕವಾಗಿ ಶ್ರೀವಿಷ್ಣುವಿನಲ್ಲಿ ಸದಾ ಮನಸ್ಸನ್ನು ಸ್ಥಾಪಿಸುವುದು; ವಿಷ್ಣುವಿನಲ್ಲಿ ಸರ್ವಾಧಿಕಪ್ರೇಮಯುಕ್ತನಾಗಿರುವುದು; ಸರ್ವವಿಹಿತಕರ್ಮಗಳನ್ನು ಆತನಲ್ಲಿ ಅರ್ಪಿಸುವುದು; ಸಹಜವಾದ ಭಗವದ್ಭಕ್ತಿಯಿಂದಕೂಡಿದ (ಶರೀರ, ವಾಕ್, ಮನಸ್ಸುಗಳಿಂದ ಆಚರಿಸಲ್ಪಡುವ) ತ್ರಿವಿಧಪೂಜೆ. ರಕ್ಷಿಸುವನೆಂಬ ವಿಶ್ವಾಸ (ದೃಢವಾದ ನಂಬಿಕೆ); ಮತ್ತು ವಿಷ್ಣುವಿನ ನಿತ್ಯದಾಸನೆಂಬ ನಿತ್ಯಸ್ಮರಣೆ, ಇವುಗಳ ಸಮಾಹಾರವು ಪುರುಷಾರ್ಥಪ್ರದವಾದ ಶರಣಾಗತಿಯೆನಿಸುವುದು.

ಅರ್ಜುನ—ಸರ್ವಧರ್ಮಗಳ ಪರಿತ್ಯಾಗವೆಂದರೇನು?

ಶ್ರೀಕೃಷ್ಣ—ನನ್ನಿಂದ ಈವರೆಗೆ ಉಪದೇಶಿಸಲ್ಪಡದ ಅನ್ಯಸರ್ವಧರ್ಮಗಳನ್ನು ಬಿಡಬೇಕು. ಧರ್ಮವೆಂಬ ಲೋಕಪ್ರತೀತಿಯನ್ನು ಪಡೆದಿರುವ, ವಿಷ್ಣುಪ್ರೀತಿಜನಕವಲ್ಲದ, ಎಲ್ಲ ಅನ್ಯಧರ್ಮಗಳನ್ನು ಸರ್ವಥಾ ಪರಿತ್ಯಾಗ ಮಾಡಬೇಕು, ಮತ್ತು ನನ್ನಿಂದ ಉಪದಿಷ್ಟವಾದ ಧರ್ಮಗಳನ್ನು ಆಚರಿಸಿ ಅವುಗಳಲ್ಲಿ ಫಲಾಸಕ್ತಿಯನ್ನು ಬಿಡಬೇಕು. ಇದನ್ನೇ ಸರ್ವಧರ್ಮ-ಪರಿತ್ಯಾಗವೆಂದು ಹೇಳಿದುದು, ತಿಳಿದೆಯಾ?

ಅರ್ಜುನ—ಈ ಮೊದಲಿನ ಅನಂತಜನ್ಮಗಳಲ್ಲಿ ಮಾಡಿರುವ ಕರ್ಮ

ಳಿಂದಾದ ಬಂಧವಿರುತ್ತಿರಲು, ಈಗ ಮತ್ತು ಮುಂದೆ ಸರ್ವಧರ್ಮಪರಿ-
ತ್ಯಾಗಮಾಡುವುದರಿಂದ ನಿನ್ನ ಪ್ರಾಪ್ತಿರೂಪವಾದ ಫಲವು ಲಭಿಸುವು
ೆಂಬುದು ಹೇಗೆ ಯುಕ್ತವಾಗುವುದು?

ಶ್ರೀಕೃಷ್ಣ—ಅರ್ಜುನ! ಹಾಗೆಂದೂ ಶಂಕಿಸಬೇಡ. ಬಂಧಕನಾದ
ನೇ ಮೋಚಕನೂ ಆಗಿರುವೆನು. ಅನಾದಿಜನ್ಮಕೃತಸಕಲಪಾಪಗಳಿಂದ
ಮುಕ್ತನನ್ನಾಗಿ ಮಾಡುವೆನು. ಸಂಸಾರಭಯದಿಂದ ಶೋಕಿಸದಿರು.
೬).

ಅರ್ಜುನ—ಸಕಲಸಂಶಯಗಳನ್ನು ನೀಗಿದೆನು; ಸಂತುಷ್ಟನಾದೆನು.
ಪ್ರಭೋ! ನಿನ್ನ ಈ ಉಪದೇಶಾಮೃತಕ್ಕೆ (ಗೀತೋಪದೇಶಕ್ಕೆ) ಅಧಿ-
ರಿಗಳಾರು?

ಶ್ರೀಕೃಷ್ಣ—ಅನಧಿಕಾರಿಗಳನ್ನು ನಿರೂಪಿಸುವೆನು. ಅದರಿಂದ ಅಧಿ-
ರಿಗಳು ಸೂಚಿತರಾಗುವರು, ಕೇಳು. ನನ್ನಿಂದ ಶ್ರವಣಮಾಡಿದ ಉಪ-
ಶವನ್ನು (ಗೀತಾಶಾಸ್ತ್ರವನ್ನು) ತಪೋಹೀನರಿಗೆ ಹೇಳದಿರು; ಸೇವಾ-
ೀನರಿಗಂತೂ ಹೇಳಲೇಕೂಡದು. ತಪೋಹೀನನಿಗೆ ಹೇಳುವುದಕ್ಕಿಂತ
ವಾಪರನಲ್ಲದವನಿಗೆ ಹೇಳುವುದು ಮಹಾದೋಷಕರವು. ಅಭಕ್ತನಿ
ತೂ ಎಂದೆಂದಿಗೂ ಉಸಿರಲಾಗದು. ಅಲ್ಪಮಾತ್ರವಾದ ತಪಸ್ಸು
ತ್ತು ಸೇವೆಗಳುಳ್ಳ ಭಕ್ತನಿಗೆ ಉಪದೇಶಮಾಡಿದರೂ ಮಾಡಬಹುದು;
ಿವಿಹೀನನಿಗೆ ಉಪದೇಶಿಸುವುದು ಮಹಾದೋಷವೆನಿಸುವುದು. ನನ್ನ
ಷಿಗೆ ಇದನ್ನು ಹೇಳುವುದಕ್ಕಿಂತ ಅಧಿಕವಾದ ದೋಷವಿಲ್ಲ. ತಪಸ್ಸು,
ಶ್ರೂಷೆ, ಭಕ್ತಿ ಮೊದಲಾದ ಸಹಜಗುಣಗಳೇ ಅಧಿಕಾರಿಯ ಲಕ್ಷಣಗಳೆಂದು
. (೬೭) ಯಾವ ಅಧಿಕಾರಿಯು ಗೋಪ್ಯವಾದ ಈ ಗೀತಾಶಾಸ್ತ್ರವನ್ನು
ಭಕ್ತನಿಗೆ ಉಪದೇಶಿಸುವನೋ ಆತನು ನಿಶ್ಚಯವಾಗಿ ನನ್ನಲ್ಲಿ ಉತ್ತಮ
ಿಯನ್ನು ಮಾಡಿ ನನ್ನನ್ನೇ ಹೊಂದುವನು. (೬೮) ಅಧಿಕಾರಿಗಳನ್ನು
ಿತು ಗೀತಾಶಾಸ್ತ್ರವನ್ನು ವ್ಯಾಖ್ಯಾನಮಾಡುವ ನನ್ನ ಭಕ್ತನು ನನಗೆ
ತ್ಯಂತಪ್ರಿಯಕರವಾದ ಕರ್ಮವುಳ್ಳವನೆಂದು ತಿಳಿ. ಈ ಭೂಮಂಡಲದಲ್ಲಿ

ಆತನಿಗಿಂತ ನನಗೆ ಹೆಚ್ಚು ಪ್ರಿಯನಾದ ಮತ್ತೊಬ್ಬ ಮನುಷ್ಯನಿಲ್ಲ; ಹಿಂದೆ ಇರಲಿಲ್ಲ ಮತ್ತು ಮುಂದಾಗುವುದೂ ಇಲ್ಲ. ಯೋಗ್ಯ ಅಧಿಕಾರಿಗಳಿಗೆ ಗೀತೋಪದೇಶಮಾಡುವ ದೇವತೆಗಳು ಅಧಿಕವಾದ ಫಲಹೊಂದುವರೆಂದು ಹೇಳಬೇಕೇನು? (೬೯). ಸರ್ವಾಶ್ರಯನೂ, ಸರ್ವರಕ್ಷಕನೂ ಅತ ಏವ ಧರ್ಮಶಬ್ದವಾಚ್ಯನೂ ಆದ ಭಗವಂತನನ್ನೇ ಪ್ರತಿಪಾದಿಸುವ ಮತ್ತು ಧರ್ಮಸಾಧನವಾದ ನಮ್ಮಿಬ್ಬರ ಸಂವಾದರೂಪವಾದ ಈ ಗೀತಾಶಾಸ್ತ್ರವನ್ನು ಯಾವನು (ಶಿಷ್ಯಾದಿ) ಅನ್ಯ ಅಧಿಕಾರಿಗಳಿಂದ ಅಧ್ಯಯನಮಾಡಿಸುವನೋ (ಪಠನಮಾಡಿಸುವನೋ), ಆತನು ಜ್ಞಾನಯಜ್ಞದಿಂದ ನನ್ನನ್ನು ಅರ್ಚಿಸಿದವನೆಂದು ತಿಳಿಯುವೆನು. (೭೦)

ಅರ್ಜುನ—ಗೀತೋಪದೇಶವನ್ನು ಶ್ರವಣಮಾಡಿದವರಿಗೂ ಮಹಾ-ಫಲವಿರಬೇಕೆಂದು ತೋರುವುದು. ಶ್ರವಣಫಲವನ್ನೂ ನಿನ್ನ ಮುಖದಿಂದಲೇ ಕೇಳಲಾಶಿಸುವೆನು.

ಶ್ರೀಕೃಷ್ಣ—ಅಹುದು, ಫಲವುಂಟು, ಅರ್ಜುನ! ಬಹುಜ್ಞನಾದ ನೀನು ನನ್ನ ಉಪದೇಶದ ಮಹತ್ವವನ್ನು ಚೆನ್ನಾಗಿ ಅರಿತುಕೊಂಡಿರುವಿ. ಶ್ರವಣ-ಫಲವನ್ನು ಹೇಳುವೆನು ಕೇಳು. ನಮ್ಮೀರ್ವರ ಈ ಸಂವಾದವನ್ನು ಯಾವ ನರನು, ಆಸ್ತಿಕ್ಯಬುದ್ಧಿಯಿಂದ, ಅಸೂಯಾದಿದೋಷರಹಿತನಾಗಿ ಶ್ರವಣ ಮಾಡುವನೋ, ಆತನೂ ಸಹ ಸರ್ವಪಾಪವಿಮುಕ್ತನಾಗಿ ಪುಣ್ಯಕರ್ಮಿಗಳಿಗೆ ದೊರೆಯುವ ಉತ್ತಮಲೋಕಗಳನ್ನು ಹೊಂದುವನು. ಶ್ರವಣಮಾಡುವವನಿಗೆ ಈ ವಿಧವಾದ ಫಲವು ದೊರೆಯುವುದೆಂಬುದರಿಂದ ಅಧ್ಯಯನ ಮಾಡುವವನಿಗೆ ಅಧಿಕಸುಖವು ಲಭಿಸುವುದೆಂದೂ, ವ್ಯಾಖ್ಯಾನಕರ್ತನಿಗೆ ಅದಕ್ಕಿಂತ ಹೆಚ್ಚು ಸುಖವೂ, ಉತ್ತಮಾಧಿಕಾರಿಗಳಾದ ದೇವತೆಗಳಿಗೆ ಇನ್ನೂ ಅಧಿಕವಾದ ಸುಖಪ್ರಾಪ್ತಿಯೆಂದೂ, ಸ್ವತ ಏವ ಸಿದ್ಧವಾಗುವುದಷ್ಟೇ. (೭೧) ಹೇ ಧನಂಜಯ! ಈವರೆಗಿನ ನನ್ನ ಉಪದೇಶವು ಅರಣ್ಯರೋದನದಂತೆ ವ್ಯರ್ಥವಾಗಲಿಲ್ಲವಷ್ಟೇ. ಏಕಾಗ್ರವಾದ ಮನಸ್ಸಿನಿಂದ ನಾನು ಹೇಳಿದ ಪ್ರಮೇಯಗಳನ್ನು ಕೇಳಿದೆಯಾ? ಅಜ್ಞಾನಜನ್ಯವಾದ ನಿನ್ನ ಸಂಮೋಹವು ನಷ್ಟವಾಯಿತೇ? (೭೨)

ಅರ್ಜುನ—ಇನ್ನೆಲ್ಲಿಯ ಮೋಹವು! ದೇವ! ಬಂಧುಹನನರೂಪವಾದ ಈ ಯುದ್ಧವು ಪಾಪಕರವೆಂಬ ಮಿಥ್ಯಾಜ್ಞಾನವು ನಷ್ಟಗೊಂಡಿತು. ನಾರಾಯಣದ್ವೇಷಿಗಳನ್ನೂ ಅವರ ಅನುಬಂಧಿಗಳನ್ನೂ ನಿಗ್ರಹಿಸುವುದು ಪರಮಧರ್ಮವೆಂದೂ, ಅವಶ್ಯಕರ್ತವ್ಯವೆಂದೂ ತಿಳಿಸುವ ನನ್ನ ಸಹಜ-ಜ್ಞಾನವು ನಿನ್ನ ಪ್ರಸಾದದಿಂದ ನನಗೆ ಮತ್ತೆ ಲಭಿಸಿತು. ಹೇ ಅಚ್ಯುತ! ಎಲ್ಲಸಂಶಯಗಳ ಪರಿಹಾರವು ಆಯಿತು. ಯುದ್ಧಮಾಡಲು ಸಿದ್ಧನಿರುವೆನು. 'ವಿಚಾರಮಾಡಿ ಮನಬಂದಂತೆ ಮಾಡು' ಎಂದು ಹೇಳಿದೆಯಲ್ಲವೇ? ವಿಚಾರಕ್ಕೆ ಎಡೆಯಿಲ್ಲ. ನಿಶ್ಚಯವಾಗಿ ನಿನ್ನ ಆಜ್ಞೆಯನ್ನೇ ಪಾಲಿಸುವೆನು. (೭೩)

ಧೃತರಾಷ್ಟ್ರ—ಹೇ ಸಂಜಯ! ಕೃಷ್ಣಾರ್ಜುನರ ಮಧ್ಯೆ, ಯುದ್ಧ-ಭೂಮಿಯಲ್ಲಿ ಏಕಾಂತದಲ್ಲಿ ನಡೆದ ಈ ಸಂವಾದವನ್ನು ಇಷ್ಟು ವಿವರವಾಗಿ ವರ್ಣಿಸಲು ಹೇಗೆ ತಿಳಿದೆಯೋ?

ಸಂಜಯ—ಅದ್ಭುತವಾದ ಮತ್ತು ರೋಮಾಂಚಕರವಾದ, ಹಿಂದೆಲ್ಲಿಯೂ ಕೇಳದ ಈ ಸಂವಾದವನ್ನು ನಾನು ಕೇಳಿದೆನು. ಮಹಾತ್ಮನಾದ ವಾಸುದೇವ ಮತ್ತು ಅರ್ಜುನರ ಮಧ್ಯೆ ನಡೆದ ಈಸಂವಾದವನ್ನು ನಾನು ಕೇಳಿದಂತೆ ನಿನಗೆ ವಿವರಿಸಿ ಹೇಳಿರುವೆನು. (೭೪)

ಧೃತರಾಷ್ಟ್ರ—ಇಲ್ಲಿಯೇ ನನ್ನಬಳಿ ಇರುವ ನೀನು ಅದೆಂತು ಕೇಳಿದೆ? ಸಂಜಯ!

ಸಂಜಯ—ಕುರುಕ್ಷೇತ್ರದಲ್ಲಿ ಯುದ್ಧಸಮಾಪ್ತಿಪರ್ಯಂತನಡೆಯುವ ಸರ್ವವನ್ನೂ ನೋಡುವ ಮತ್ತು ಕೇಳುವ ದಿವ್ಯಜ್ಞಾನಶಕ್ತಿಯನ್ನು ವೇದ-ವ್ಯಾಸರು ನನಗೆ ಅನುಗ್ರಹಿಸಿದರು. ಅವರ ಪ್ರಸಾದದಿಂದಲೇ, ಯೋಗೇ-ಶ್ವರನಾದ ಶ್ರೀಕೃಷ್ಣನು ಸ್ವಯಂ ನಿರೂಪಿಸಿದ ಈ ದಿವ್ಯೋಪದೇಶವನ್ನು ನಾನು ಸಾಕ್ಷಾತ್ತಾಗಿ ಕೇಳಿದೆನು. (ಎದುರಿದ್ದು, ಕೇಳಿದವನಂತೆಯೇ ಶ್ರವಣ ಮಾಡಿ ನಿನಗೆ ಹೇಳಿರುವೆನು). (೭೫) ಹೇ ಧೃತರಾಷ್ಟ್ರ! ಈ ಪುಣ್ಯಕರವಾದ (ಪಾರತ್ರಿಕಸುಖಹೇತುವಾದ ಅದೃಷ್ಟವನ್ನು ಉಂಟುಮಾಡುವ)

ಕೇಶವಾರ್ಜುನರ ಸಂವಾದವನ್ನು ಪುನಃಪುನಃ ಸ್ಮರಿಸಿಕೊಂಡು ಹರ್ಷಿಸುತ್ತಿರುವೆನು. (೭೬) ಪರಮಾಶ್ಚರ್ಯಕರವಾದ ಪರಮಾತ್ಮನ ಆ ವಿಶ್ವ-ರೂಪವನ್ನು ಬಾರಿಬಾರಿಗೂ ನೆನೆದು ವಿಸ್ಮಯಗೊಂಡು ಧನ್ಯಬುದ್ಧಿಯಿಂದ ಹರ್ಷಿಸುತ್ತಿರುವೆನು. (೭೭)

ಧೃತರಾಷ್ಟ್ರ—ಸಂಜಯ! ಪಾರ್ಥನು ಯುದ್ಧಮಾಡಲು ನಿಶ್ಚಯಿಸಿದನೆಂದಮೇಲೆ ಯಾವ ಪಕ್ಷದವರಿಗೆ ಜಯಾದಿಗಳು ಲಭಿಸುವುವೆಂಬಲ್ಲಿ ಸಂದೇಹಕ್ಕೆಡೆಯಿದೆಯೇ? ದುರ್ಯೋಧನಾದಿನನ್ನ ಪುತ್ರರು ಜಯಿಸಬಹುದೇ?

ಸಂಜಯ—ಯಾವ ಸೈನ್ಯದಲ್ಲಿ ಯೋಗೀಶ್ವರನಾದ ಶ್ರೀಕೃಷ್ಣನಿರುವನೋ ಮತ್ತು ಯಾವ ಪಕ್ಷದಲ್ಲಿ ಗಾಂಡೀವಿಯಾದ (ಧನುರ್ಧಾರಿಯಾದ) ಪಾರ್ಥನೂ, ಅಧನುರ್ಧಾರಿಯಾದ (ಪೃಥುಪುತ್ರ) ಭೀಮಸೇನನೂ ಇರುವರೋ (ಭೀಮಾರ್ಜುನರಿಬ್ಬರೂ ರಕ್ಷಕರಾಗಿರುವರೋ), ಆ ಪಕ್ಷದಲ್ಲಿಯೇ ಜಯವೂ, ರಾಜ್ಯಲಕ್ಷ್ಮಿಯೂ, ಸಂಪತ್ತೂ, ನ್ಯಾಯವೂ ನಿಶ್ಚಲವಾಗಿರುವುದೆಂದು ನನ್ನ ಮತವು.

॥ ಶ್ರೀಕೃಷ್ಣಾರ್ಪಣಮಸ್ತು ॥

"ಅಶೇಷಗುಣಪೂರ್ಣಾಯ ದೋಷದೂರಾಯ ವಿಷ್ಣವೇ।
ನಮಶ್ಶ್ರೀಪ್ರಾಣನಾಥಾಯ ಭಕ್ತಾಭೀಷ್ಟಪ್ರದಾಯಿನೇ ॥"
"ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ"

ಓಂ ತತ್ಸತ್